॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೯

ದ್ರೋಣಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ದ್ರೋಣಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ದ್ರೋಣಪರ್ವ - ಭಾಗ ೧೯

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-76-7

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	X + 472 = 482
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಪ್ರಹ್ಲಾದ ದೇಶಪಾಂಡೆ ಹಾಗೂ ಎಂ. ಶರತ್ ಚಂದ್ರ
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು.
ಮುದ್ರಕರು	-	**ಪವನ್ ಪ್ರಿಂಟರ್ಸ್**, ಬೆಂಗಳೂರು-18 **ಮೊಬೈಲ್** : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್

ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್

ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನುನೀನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೯

ದ್ರೋಣಪರ್ವ

ಪುಟ ಸಂ.

148. ಸಾತ್ಯಕಿಯಿಂದ ಸೋಮದತ್ತನ ವಧೆ ಮತ್ತು ದ್ರೋಣರ ಪರಾಕ್ರಮ 1

149. ಎರಡು ಸೈನ್ಯಗಳಲ್ಲಿ ದೀಪಗಳ ವ್ಯವಸ್ಥೆ ಮತ್ತು ಸಂಕುಲ ಯುದ್ಧ 12

150. ಸಂಕುಲಯುದ್ಧ 21

151. ಕೃತವರ್ಮನಿಂದ ಯುಧಿಷ್ಠಿರನ ಪರಾಜಯ. 28

152. ಸಾತ್ಯಕಿಯಿಂದ ಭೂರಿಯ ವಧೆ. ಅಶ್ವತ್ಥಾಮರಿಂದ ಘಟೋತ್ಕಚನ ಮತ್ತು ಭೀಮಸೇನನಿಂದ ದುರ್ಯೋಧನನ ಪರಾಜಯ 36

153. ಕರ್ಣನಿಂದ ಸಹದೇವನ ಪರಾಜಯ ಮತ್ತು ಅವಹೇಳನ. ಶಲ್ಯನಿಂದ ವಿರಾಟನ ಪರಾಜಯ. ಅರ್ಜುನನಿಂದ ಅಲಾಯುಧನ ಪರಾಜಯ 49

154. ಶತಾನೀಕ-ಚಿತ್ರಸೇನರ, ದ್ರುಪದ-ವೃಷಸೇನರ, ಪ್ರತಿವಿಂಧ-ದುಶ್ಶಾಸನರ ಸಂಕುಲಯುದ್ಧ 58

155. ನಕುಲ-ಕೃಪಾಚಾರ್ಯರಿಂದ ಶಕುನಿ ಮತ್ತು ಶಿಖಂಡಿಗಳ ಪರಾಜಯ 76

156. ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ಮಧ್ಯೆ ಸಾತ್ಯಕಿಯ ಪ್ರವೇಶ. ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಶಕುನಿಯ ಪ್ರಯಾಣ 85

157. ಸಾತ್ಯಕಿಯಿಂದ ದುರ್ಯೋಧನನ, ಅರ್ಜುನನಿಂದ ಶಕುನಿಯ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರ ಪರಾಜಯ 98

158. ದ್ರೋಣ-ಕರ್ಣರನ್ನು ಕುರಿತು ದುರ್ಯೋಧನನ ನಿಂದಾವಾಕ್ಯಗಳು. ಅನಂತರದಲ್ಲಿ ಘೋರವಾದ ಸಂಗ್ರಾಮ 108

159. ಕರ್ಣನ ಪ್ರತಾಪ. ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನನ್ನು ನಿಷೇಧಿಸಿ, ಘಟೋತ್ಕಚನ ಪ್ರೇಷಣ 116

160. ಘಟೋತ್ಕಚನಿಂದ ಅಲಂಬಲನ ವಧೆ. ಅವನ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆಯುವುದು 129

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೯

ದ್ರೋಣಪರ್ವ

ಪುಟ ಸಂ.

148. ಸಾತ್ಯಕಿಯಿಂದ ಸೋಮದತ್ತನ ವಧೆ ಮತ್ತು ದ್ರೋಣನ ಪರಾಕ್ರಮ 1

149. ಎರಡು ಸೈನ್ಯಗಳಲ್ಲಿ ದೀಪಗಳ ವ್ಯವಸ್ಥೆ ಮತ್ತು ಸಂಕುಲ ಯುದ್ಧ 12

150. ಸಂಕುಲಯುದ್ಧ 21

151. ಕೃತವರ್ಮನಿಂದ ಯುಧಿಷ್ಠಿರನ ಪರಾಜಯ. 28

152. ಸಾತ್ಯಕಿಯಿಂದ ಭೂರಿಯ ವಧೆ. ಅಶ್ವತ್ಥಾಮರಿಂದ ಘಟೋತ್ಕಚನ ಮತ್ತು ಭೀಮಸೇನನಿಂದ ದುರ್ಯೋಧನನ ಪರಾಜಯ 36

153. ಕರ್ಣನಿಂದ ಸಹದೇವನ ಪರಾಜಯ ಮತ್ತು ಅವಹೇಳನ. ಶಲ್ಯನಿಂದ ವಿರಾಟನ ಪರಾಜಯ. ಅರ್ಜುನನಿಂದ ಅಲಾಯುಧನ ಪರಾಜಯ 49

154. ಶತಾನೀಕ-ಚಿತ್ರಸೇನರ, ದ್ರುಪದ-ವೃಷಸೇನರ, ಪ್ರತಿವಿಂಧ-ದುಶ್ಶಾಸನರ ಸಂಕುಲಯುದ್ಧ 58

155. ನಕುಲ-ಕೃಪಾಚಾರ್ಯರಿಂದ ಶಕುನಿ ಮತ್ತು ಶಿಖಂಡಿಗಳ ಪರಾಜಯ 76

156. ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ಮಧ್ಯೆ ಸಾತ್ಯಕಿಯ ಪ್ರವೇಶ. ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಶಕುನಿಯ ಪ್ರಯಾಣ 85

157. ಸಾತ್ಯಕಿಯಿಂದ ದುರ್ಯೋಧನನ, ಅರ್ಜುನನಿಂದ ಶಕುನಿಯ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರ ಪರಾಜಯ 98

158. ದ್ರೋಣ-ಕರ್ಣರನ್ನು ಕುರಿತು ದುರ್ಯೋಧನನ ನಿಂದಾವಾಕ್ಯಗಳು. ಅನಂತರದಲ್ಲಿ ಘೋರವಾದ ಸಂಗ್ರಾಮ 108

159. ಕರ್ಣನ ಪ್ರತಾಪ. ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನನ್ನು ನಿಷೇಧಿಸಿ, ಘಟೋತ್ಕಚನ ಪ್ರೇಷಣ 116

160. ಘಟೋತ್ಕಚನಿಂದ ಅಲಂಬಲನ ವಧೆ. ಅವನ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆಯುವುದು 129

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೯

ದ್ರೋಣಪರ್ವ

ಪುಟ ಸಂ.

148. ಸಾತ್ಯಕಿಯಿಂದ ಸೋಮದತ್ತನ ವಧೆ ಮತ್ತು ದ್ರೋಣರ ಪರಾಕ್ರಮ 1

149. ಎರಡು ಸೈನ್ಯಗಳಲ್ಲಿ ದೀಪಗಳ ವ್ಯವಸ್ಥೆ ಮತ್ತು ಸಂಕುಲ ಯುದ್ಧ 12

150. ಸಂಕುಲಯುದ್ಧ 21

151. ಕೃತವರ್ಮನಿಂದ ಯುಧಿಷ್ಠಿರನ ಪರಾಜಯ. 28

152. ಸಾತ್ಯಕಿಯಿಂದ ಭೂರಿಯ ವಧೆ. ಅಶ್ವತ್ಥಾಮರಿಂದ ಘಟೋತ್ಕಚನ ಮತ್ತು ಭೀಮಸೇನನಿಂದ ದುರ್ಯೋಧನನ ಪರಾಜಯ 36

153. ಕರ್ಣನಿಂದ ಸಹದೇವನ ಪರಾಜಯ ಮತ್ತು ಅವಹೇಳನ. ಶಲ್ಯನಿಂದ ವಿರಾಟನ ಪರಾಜಯ. ಅರ್ಜುನನಿಂದ ಅಲಾಯುಧನ ಪರಾಜಯ 49

154. ಶತಾನೀಕ-ಚಿತ್ರಸೇನರ, ದ್ರುಪದ-ವೃಷಸೇನರ, ಪ್ರತಿವಿಂಧ-ದುಶ್ಶಾಸನರ ಸಂಕುಲಯುದ್ಧ 58

155. ನಕುಲ-ಕೃಪಾಚಾರ್ಯರಿಂದ ಶಕುನಿ ಮತ್ತು ಶಿಖಂಡಿಗಳ ಪರಾಜಯ 76

156. ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ಮಧ್ಯೆ ಸಾತ್ಯಕಿಯ ಪ್ರವೇಶ. ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಶಕುನಿಯ ಪ್ರಯಾಣ 85

157. ಸಾತ್ಯಕಿಯಿಂದ ದುರ್ಯೋಧನನ, ಅರ್ಜುನನಿಂದ ಶಕುನಿಯ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರ ಪರಾಜಯ 98

158. ದ್ರೋಣ-ಕರ್ಣರನ್ನು ಕುರಿತು ದುರ್ಯೋಧನನ ನಿಂದಾವಾಕ್ಯಗಳು. ಅನಂತರದಲ್ಲಿ ಘೋರವಾದ ಸಂಗ್ರಾಮ 108

159. ಕರ್ಣನ ಪ್ರತಾಪ. ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನನ್ನು ನಿಷೇಧಿಸಿ, ಘಟೋತ್ಕಚನ ಪ್ರೇಷಣ 116

160. ಘಟೋತ್ಕಚನಿಂದ ಅಲಂಬಲನ ವಧೆ. ಅವನ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆಯುವುದು 129

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೯

ದ್ರೋಣಪರ್ವ

ಪುಟ ಸಂ.

148. ಸಾತ್ಯಕಿಯಿಂದ ಸೋಮದತ್ತನ ವಧೆ ಮತ್ತು ದ್ರೋಣರ ಪರಾಕ್ರಮ 1

149. ಎರಡು ಸೈನ್ಯಗಳಲ್ಲಿ ದೀಪಗಳ ವ್ಯವಸ್ಥೆ ಮತ್ತು ಸಂಕುಲ ಯುದ್ಧ 12

150. ಸಂಕುಲಯುದ್ಧ 21

151. ಕೃತವರ್ಮನಿಂದ ಯುಧಿಷ್ಠಿರನ ಪರಾಜಯ. 28

152. ಸಾತ್ಯಕಿಯಿಂದ ಭೂರಿಯ ವಧೆ. ಅಶ್ವತ್ಥಾಮರಿಂದ ಘಟೋತ್ಕಚನ ಮತ್ತು ಭೀಮಸೇನನಿಂದ ದುರ್ಯೋಧನನ ಪರಾಜಯ 36

153. ಕರ್ಣನಿಂದ ಸಹದೇವನ ಪರಾಜಯ ಮತ್ತು ಅವಹೇಳನ. ಶಲ್ಯನಿಂದ ವಿರಾಟನ ಪರಾಜಯ. ಅರ್ಜುನನಿಂದ ಅಲಾಯುಧನ ಪರಾಜಯ 49

154. ಶತಾನೀಕ-ಚಿತ್ರಸೇನರ, ದ್ರುಪದ-ವೃಷಸೇನರ, ಪ್ರತಿವಿಂಧ-ದುಶ್ಶಾಸನರ ಸಂಕುಲಯುದ್ಧ 58

155. ನಕುಲ-ಕೃಪಾಚಾರ್ಯರಿಂದ ಶಕುನಿ ಮತ್ತು ಶಿಖಂಡಿಗಳ ಪರಾಜಯ 76

156. ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ಮಧ್ಯೆ ಸಾತ್ಯಕಿಯ ಪ್ರವೇಶ. ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಶಕುನಿಯ ಪ್ರಯಾಣ 85

157. ಸಾತ್ಯಕಿಯಿಂದ ದುರ್ಯೋಧನನ, ಅರ್ಜುನನಿಂದ ಶಕುನಿಯ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರ ಪರಾಜಯ 98

158. ದ್ರೋಣ-ಕರ್ಣರನ್ನು ಕುರಿತು ದುರ್ಯೋಧನನ ನಿಂದಾವಾಕ್ಯಗಳು. ಅನಂತರದಲ್ಲಿ ಘೋರವಾದ ಸಂಗ್ರಾಮ 108

159. ಕರ್ಣನ ಪ್ರತಾಪ. ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನನ್ನು ನಿಷೇಧಿಸಿ, ಘಟೋತ್ಕಚನ ಪ್ರೇಷಣ 116

160. ಘಟೋತ್ಕಚನಿಂದ ಅಲಂಬಲನ ವಧೆ. ಅವನ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆಯುವುದು 129

161. ಕರ್ಣ-ಘಟೋತ್ಕಚರ ಯುದ್ಧದ ವಿಸ್ತೃತ ಕಥನ 137

162. ದುರ್ಯೋಧನನ ಅನುಜ್ಞೆಯನ್ನು ಪಡೆದು ಅಲಾಯುಧನಿಂದ ಘಟೋತ್ಕಚನ ಜೊತೆಯಲ್ಲಿ ಯುದ್ಧಕ್ಕೆ ಗಮನ 159

163. ಭೀಮ ಮತ್ತು ಅಲಾಯುಧರ ಯುದ್ಧ 164

164. ಘಟೋತ್ಕಚನಿಂದ ಅಲಾಯುಧನ ವಧೆ 173

165. ಕರ್ಣನಿಂದ ಘಟೋತ್ಕಚನ ವಧೆ 181

೭. ದ್ರೋಣವಧಪರ್ವ

166. ಘಟೋತ್ಕಚನಿಧನದಿಂದ ಪಾಂಡವರು ಶೋಕಪಡುತ್ತಿರುವಾಗ ಕೃಷ್ಣನ ಹರ್ಷ. ಅರ್ಜುನನಿಗೆ ಅದರ ಕಾರಣನಿರೂಪಣೆ 200

167. ಪಾಂಡವರ ಹಿತಕ್ಕಾಗಿ ಕೃಷ್ಣನಿಂದ ತಾನು ಒಳ್ಳೆಯ ಉಪಾಯದಿಂದ ಮಾಡಿಸಿದ ಜರಾಸಂಧಾದಿ ವಧೆಗಳ ಕಥನ 208

168. ಅರ್ಜುನನ ಮೇಲೆ ಶಕ್ತಿಯನ್ನು ಪ್ರಯೋಗಿಸದಿರಲು ಕಾರಣ ನಿರೂಪಣೆ. ಶಕ್ತಿಯ ವೈಫಲ್ಯದಿಂದ ಧೃತರಾಷ್ಟ್ರನ ಶೋಕ 215

169. ಕರ್ಣನ ಶಕ್ತಿಯ ವೈಫಲ್ಯವನ್ನು ನೋಡಿ ಧೃತರಾಷ್ಟ್ರನ ಶೋಕ. ವ್ಯಾಸರಿಂದ ಯುಧಿಷ್ಠಿರನಿಗೆ ಸಮಾಧಾನದ ವಚನಗಳು ಮತ್ತು ವ್ಯಾಸರ ಅಂತರ್ಧಾನ 225

170. ಅರ್ಜುನನ ಆದೇಶದಂತೆ ನಿದ್ರಿಸಿ ಎದ್ದ ಯೋಧರಿಂದ ಚಂದ್ರೋದಯವಾದ ಮೇಲೆ ಪುನಃ ಯುದ್ಧ 238

171. ದುರ್ಯೋಧನನಿಂದ ದ್ರೋಣರ ನಿಂದೆ. ಅರ್ಜುನನನ್ನು ಪ್ರಶಂಸಿಸಿ ದುರ್ಯೋಧನನನ್ನು ಕುರಿತು ದ್ರೋಣರ ಉಗ್ರವಚನಗಳು 248

172. ದ್ರೋಣರಿಂದ ದ್ರುಪದ-ವಿರಾಟಾದಿಗಳ ವಧೆ. ಭೀಮನಿಂದ ಧೃಷ್ಟದ್ಯುಮ್ನನನ್ನು ಕುರಿತು ಉಗ್ರವಚನಗಳು. ಹದಿನಾಲ್ಕನೆಯ ದಿವಸದಲ್ಲಿ ರಾತ್ರಿಯುದ್ಧದ ಸಮಾಪ್ತಿ 256

173. ಹದಿನೈದನೆಯ ದಿವಸದ ಯುದ್ಧದ ಪ್ರಾರಂಭ. ಸಂಕುಲ ಯುದ್ಧದಲ್ಲಿ ನಕುಲನಿಂದ ದುರ್ಯೋಧನನ ಪರಾಜಯ 267

174. ದ್ರೋಣಾರ್ಜುನಾದಿಗಳ ಸಂಕುಲಯುದ್ಧ 278

175. ಸಾತ್ಯಕಿ-ದುರ್ಯೋಧನಾದಿಗಳ ಯುದ್ಧ. ಕೃಷ್ಣನ ಪ್ರೇರಣೆಯಂತೆ
ಯುಧಿಷ್ಠಿರನಿಂದ 'ಅಶ್ವತ್ಥಾಮಾ ಹತಃ' ಎಂಬ ವಚನ.
ಋಷಿಗಳಿಂದ ದ್ರೋಣರ ಆಹ್ವಾನ. ದ್ರೋಣರಿಗೆ ದಿವ್ಯಾಸ್ತ್ರಗಳ ವಿಸ್ಮರಣೆ.
ದ್ರೋಣರಥಕ್ಕೆ ಬಂದ ಧೃಷ್ಟದ್ಯುಮ್ನನ ಪರಾಕ್ರಮ 288

176. ದ್ರೋಣರ ಪ್ರಯಾಣ. ಧೃಷ್ಟದ್ಯುಮ್ನನಿಂದ ಅವರ ಶಿರಶ್ಛೇದ 319

೮. ನಾರಾಯಣಾಸ್ತ್ರಪರ್ವ

177. ಕೃಪರಿಂದ ಅಶ್ವತ್ಥಾಮರನ್ನು ಕುರಿತು ದ್ರೋಣರ ವಧೆಯ
ಪ್ರಕಾರದ ಕಥನ. ನಾರಾಯಣಾಸ್ತ್ರದಿಂದ ಪಾಂಡವರ ವಧೆಯನ್ನು
ಮಾಡಲು ಅಶ್ವತ್ಥಾಮರ ಪ್ರತಿಜ್ಞೆ 335

178. ಕೌರವಸೇನೆಯ ದೊಡ್ಡ ಶಬ್ದವನ್ನು ಕೇಳಿ ಯುಧಿಷ್ಠಿರನ ಪ್ರಶ್ನೆ.
ಅರ್ಜುನನಿಂದ ಕಾರಣನಿರೂಪಣೆ ಮತ್ತು ದ್ರೋಣರ
ವಧೆಯನ್ನು ಉಪೇಕ್ಷಿಸುದುದಕ್ಕೆ ಆತ್ಮನಿಂದೆ 359

179. ಭೀಮಸೇನನಿಂದ ಅರ್ಜುನನನ್ನು ನಿಂದಿಸಿ ಧರ್ಮರಾಜನ
ಸಮಾಶ್ವಾಸನೆ. ಧೃಷ್ಟದ್ಯುಮ್ನನಿಂದ ತನ್ನ ಸಮರ್ಥನೆ 369

180. ಅರ್ಜುನ-ಧೃಷ್ಟದ್ಯುಮ್ನರ ಎರಸ. ಕೃಷ್ಣ ಪ್ರೇರಣೆಯಂತೆ
ಭೀಮನಿಂದ ಸಮಾಧಾನ ಪುನಃ ಯುದ್ಧಸನ್ನಾಹ 377

181. ಅಶ್ವತ್ಥಾಮರಿಂದ ನಾರಾಯಣಾಸ್ತ್ರ ಪ್ರಯೋಗ. ಕೃಷ್ಣನ ವಚನದಂತೆ
ಯೋಧರ ಆತ್ಮರಕ್ಷಣೆ. ಭೀಮಸೇನನ ಶಿರಸ್ಸಿನಲ್ಲಿ ಅಸ್ತ್ರದ ಪ್ರಜ್ವಲನ 390

182. ಕೃಷ್ಣಾರ್ಜುನರು ಭೀಮನ ಶಿರಸ್ಸಿನಿಂದ ಅಸ್ತ್ರವನ್ನು ಕಿತ್ತು, ಅವನನ್ನು
ಕೆಳಗಿಳಿಸಿದ ಮೇಲೆ ಅಸ್ತ್ರದ ಪ್ರಶಮನ. ಅನಂತರ ಪುನಃ ಯುದ್ಧ 402

183. ಭೀಮ ಮತ್ತು ಅಶ್ವತ್ಥಾಮರ ಯುದ್ಧ. ಅಶ್ವತ್ಥಾಮರಿಂದ
ಪಾಂಡವಸೇನೆಯ ಪರಾಜಯ 417

184. ಅಶ್ವತ್ಥಾಮರಿಂದ ಆಗ್ನೇಯಾಸ್ತ್ರಪ್ರಯೋಗ. ಅದರ ನಿಷ್ಫಲತೆ. ವ್ಯಾಸರಲ್ಲಿ
ಕಾರಣಪ್ರಶ್ನೆ. ವ್ಯಾಸರಿಂದ ಉತ್ತರದಾನ. ಅಶ್ವತ್ಥಾಮರಿಂದ ಸೈನ್ಯಾವಹಾರ 426

185. ಇತರರಿಗೆ ಕಾಣದಂತೆ ತನ್ನ ಮುಂದೆ ತನಗೆ ಅನುಕೂಲವಾಗಿ ಯುದ್ಧವನ್ನು
ಮಾಡುವ ಶೂಲಪಾಣಿಯನ್ನು ನೋಡಿ ಅರ್ಜುನನ ಪ್ರಶ್ನೆ. ವ್ಯಾಸರು
ಅವನು ಶಿವನೆಂದು ಉತ್ತರವನ್ನು ಹೇಳಿ, ಶತರುದ್ರೀಯ ಉಪದೇಶ 448

★ ★ ★ ★ ★

ಮಹಾಭಾರತ

ದ್ರೋಣಪರ್ವ

ನೂರ ನಲವತ್ತೆಂಟನೆಯ ಅಧ್ಯಾಯ

ಸಾತ್ಯಕಿಯಿಂದ ಸೋಮದತ್ತನ ವಧೆ ಮತ್ತು ದ್ರೋಣರ ಪರಾಕ್ರಮ.

ಸಂಜಯಃ

ಸೋಮದತ್ತಂ ತು ಸಂಪ್ರೇಕ್ಷ್ಯ ವಿಧುನ್ವಾನಂ ಮಹದ್ಧನುಃ ।
ಸಾತ್ಯಕಿಃ ಪ್ರಾಹ ಯಂತಾರಂ ಸೋಮದತ್ತಾಯ ಮಾಂ ವಹ ॥ ೧ ॥

ನ ಹ್ಯಹತ್ವಾ ರಣೇ ಶತ್ರುಂ ಬಾಹ್ಲೀಕಂ ಕೌರವಾಧಮಮ್ ।
ನಿವರ್ತಿಷ್ಯೇ ರಣಾತ್ ಸೂತ ಸತ್ಯಮೇತದ್ ವಚೋ ಮಮ ॥ ೨ ॥

ಸಂಜಯ– ಸೋಮದತ್ತನು ತನ್ನ ದೊಡ್ಡ ಧನುಸ್ಸನ್ನು ತೂಗಾಡಿಸುತ್ತಿರುವುದನ್ನು ನೋಡಿದ ಸಾತ್ಯಕಿಯು ತನ್ನ ಸಾರಥಿಯನ್ನು ಕುರಿತು- ಎಲೈ ಸಾರಥಿಯೇ, ನನ್ನನ್ನು ಸೋಮದತ್ತನ ಕಡೆಗೆ ಕರೆದುಕೊಂಡು ಹೋಗು. ಕೌರವಾಧಮನೂ, ಬಾಹ್ಲೀಕ ಪುತ್ರನೂ ಆದ ಶತ್ರುವಾದ ಸೋಮದತ್ತನನ್ನು ಕೊಲ್ಲದೆ ನಾನು ರಣರಂಗದಿಂದ ಹಿಂದಿರುಗುವುದಿಲ್ಲ. ಎಲೈ ಸೂತನೇ, ಈ ನನ್ನ ಮಾತು ಸತ್ಯವಾದುದು ಎಂದು ಹೇಳಿದನು.

ತತಃ ಸಂಪ್ರೇಷಯದ್ಯಂತಾ ಸೈಂಧವಾಂಸ್ತಾನ್ ಮಹಾಜವಾನ್ ।
ತುರಂಗಮಾನ್ ಶಂಖವರ್ಣಾನ್ ಸರ್ವಶಬ್ದಾತಿಗಾನ್ ರಣೇ ॥ ೩ ॥

ಆಗ ಅವನ ಸಾರಥಿಯು ಶಂಖವರ್ಣದ, ಮಹಾವೇಗಶಾಲಿಗಳಾದ, ಎಲ್ಲ ಶಬ್ದಗಳನ್ನೂ ಸಹಿಸುವ ಸೈಂಧವ ದೇಶದ ಅವನ ಕುದುರೆಗಳನ್ನು ಸೋಮದತ್ತನ ಕಡೆಗೆ ಪ್ರಚೋದಿಸಿದನು.

ತೇऽವಹನ್ ಯುಯುಧಾನಂ ತು ಮನೋಮಾರುತರಂಹಸಃ ।
ಯಥೇಂದ್ರಂ ಹರಯೋ ರಾಜನ್ ಪುರಾ ದೈತ್ಯವಧೋದ್ಯತಮ್ ॥ ೪ ॥

ಮನೋವಾಯುವೇಗವುಳ್ಳ ಆ ಅಶ್ವಗಳು ಎಲೈ ರಾಜನೇ, ದೈತ್ಯವಧೆಯಲ್ಲಿ ಉದ್ಯುಕ್ತನಾದ ಇಂದ್ರನನ್ನು ಹಿಂದೆ ಅಶ್ವಗಳು ಕರೆದುಕೊಂಡು ಹೋದಂತೆ ಯುಯುಧಾನನನ್ನು ಕರೆದುಕೊಂಡು ಹೋದವು.

ತಮಾಪತಂತಂ ಸಂಪ್ರೇಕ್ಷ್ಯ ಸಾತ್ವತಂ ರಭಸಂ ರಣೇ ।
ಸೋಮದತ್ತೋ ಮಹಾಬಾಹುರಸಂಭ್ರಾಂತೋऽಭ್ಯವರ್ತತ ॥ ೫ ॥

ರಣರಂಗದಲ್ಲಿ ತನ್ನ ಮೇಲೆ ಎರಗುತ್ತಿದ್ದ ವೇಗಶಾಲಿಯಾದ ಸಾತ್ವತಕುಲದ ಸಾತ್ಯಕಿಯನ್ನು ನೋಡಿ ಮಹಾಬಾಹುವಾದ ಸೋಮದತ್ತನು ಗಾಬರಿಗೊಳ್ಳದೆ ಅವನ ಕಡೆಗೆ ಸಾಗಿದನು.

ವಿಮುಂಚನ್ ಶರವರ್ಷಾಣಿ ಪರ್ಜನ್ಯ ಇವ ವೃಷ್ಟಿಮಾನ್ ।
ಛಾದಯಾಮಾಸ ಶೈನೇಯಂ ಜಲದೋ ಭಾಸ್ಕರಂ ಯಥಾ ॥ ೬ ॥

ಮಳೆಯನ್ನು ಸುರಿಸುವ ಪರ್ಜನ್ಯನಂತೆ ಅವನು ಸಾತ್ಯಕಿಯ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ಮೋಡವು ಸೂರ್ಯನನ್ನು ಮುಚ್ಚುವಂತೆ ತನ್ನ ಬಾಣಗಳಿಂದ ಸಾತ್ಯಕಿಯನ್ನು ಮುಚ್ಚಿದನು.

ಅಸಂಭ್ರಾಂತಶ್ಚ ಸಮರೇ ಸಾತ್ಯಕಿಃ ಕುರುಪುಂಗವಮ್ ।
ಛಾದಯಾಮಾಸ ಬಾಣೌಘೈಃ ಸಮಂತಾದ್ ಭರತರ್ಷಭ ॥ ೭ ॥

ಎಲೈ ಭರತರ್ಷಭನೇ, ಸಾತ್ಯಕಿಯೂ ಸಹ ಯುದ್ಧದಲ್ಲಿ ಗಾಬರಿಗೊಳ್ಳದೆ ಕುರುಪುಂಗವನಾದ ಸೋಮದತ್ತನನ್ನು ತನ್ನ ಬಾಣಗಳ ಸಮೂಹದಿಂದ ಆಚ್ಛಾದಿಸಿದನು.

ಸೋಮದತ್ತಸ್ತು ತಂ ಷಷ್ಟ್ಯಾ ವಿವ್ಯಾಧೋರಸಿ ಮಾಧವಮ್ ।
ಸಾತ್ಯಕಿಶ್ಚಾಪಿ ತಂ ರಾಜನ್ನವಿಧ್ಯತ್ ಸಾಯಕೈಃ ಶಿತೈಃ ॥ ೮ ॥

ಸೋಮದತ್ತನು ಮಧುಕುಲದಲ್ಲಿ ಉತ್ಪನ್ನನಾದ ಸಾತ್ಯಕಿಯನ್ನು ಅರವತ್ತು ಬಾಣಗಳಿಂದ ಎದೆಯಲ್ಲಿ ಹೊಡೆದನು. ಎಲೈ ರಾಜನೇ, ಸಾತ್ಯಕಿಯೂ ಸಹ ಅವನನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದನು.

ತಾವನ್ಯೋನ್ಯಂ ಶರೈಃ ಕೃತ್ತೌ ವ್ಯರಾಜೇತಾಂ ನರರ್ಷಭೌ ।
ಸುಪುಷ್ಪೌ ಪುಷ್ಪಸಮಯೇ ಪುಷ್ಪಿತಾವಿವ ಕಿಂಶುಕೌ ॥ ೯ ॥

ಪರಸ್ಪರರ ಬಾಣಗಳಿಂದ ಗಾಯಗೊಂಡ ಆ ಇಬ್ಬರು ನರಶ್ರೇಷ್ಠರು ಪುಷ್ಪ ಸಮಯದಲ್ಲಿ ಪುಷ್ಪಭರಿತವಾದ ಎರಡು ಮುತ್ತುಗದ ವೃಕ್ಷಗಳಂತೆ ಶೋಭಿಸಿದರು.

ರುಧಿರೋಕ್ಷಿತಸರ್ವಾಂಗೌ ಕುರುವೃಷ್ಣಿಯಶಸ್ಕರೌ ।
ಪರಸ್ಪರಮವೇಕ್ಷೇತಾಂ ದಹಂತಾವಿವ ಲೋಚನೈಃ ॥ ೧೦ ॥

ಕುರು-ವೃಷ್ಣಿಯಶಸ್ಕರರಾದ ಅವರಿಬ್ಬರೂ ರಕ್ತದಿಂದ ತೊಯ್ದು ಸರ್ವಾಯವಗಳುಳ್ಳವರಾಗಿ ತಮ್ಮ ಕಣ್ಣುಗಳಿಂದ ಸುಡುವಂತೆ ಪರಸ್ಪರವಾಗಿ ನೋಡಿದರು.

ರಥಮಂಡಲಮಾರ್ಗೇಷು ಚರಂತಾವರಿಮರ್ದನೌ ।
ಘೋರರೂಪೌ ಹಿ ತಾವಾಸ್ತಾಂ ವೃಷ್ಟಿಮಂತಾವಿವಾಂಬುದೌ ॥ ೧೧ ॥

ರಥಮಂಡಲಗಳಲ್ಲಿ ಮತ್ತು ಮಾರ್ಗಗಳಲ್ಲಿ ಸಂಚರಿಸುವ ಶತ್ರುಮರ್ದನರಾದ ಅವರಿಬ್ಬರೂ ವೃಷ್ಟಿಯನ್ನು ಹೊಂದಿದ ಮೋಡಗಳಂತೆ ಘೋರರೂಪವನ್ನು ಹೊಂದಿದವರಾದರು.

ಶರಸಂಭಿನ್ನಗಾತ್ರೌ ತೌ ಸರ್ವತಃ ಶಕಲೀಕೃತೌ ।
ಶ್ವಾವಿಧಾವಿವ ರಾಜೇಂದ್ರ ವ್ಯದೃಶ್ಯೇತಾಂ ಶರಕ್ಷತೌ ॥ ೧೨ ॥

ಎಲೈ ರಾಜೇಂದ್ರನೇ, ಬಾಣಗಳು ನಾಟಿದ ದೇಹವುಳ್ಳವರಾಗಿ ಸರ್ವತ್ರ ಗಾಯಗೊಂಡು ಅವರು ರಣರಂಗದಲ್ಲಿ ಮುಳ್ಳುಹಂದಿಗಳಂತೆ ಕಂಡುಬಂದರು.

ಸುವರ್ಣಪುಂಖೈರಿಷುಭಿರಾಚಿತೌ ತೌ ವ್ಯರೋಚತಾಮ್ ।
ಖದ್ಯೋತೈರಾವೃತೌ ರಾಜನ್ ಪ್ರಾವೃಷೀವ ವನಸ್ಪತೀ ॥ ೧೩ ॥

ಎಲೈ ರಾಜನೇ, ಸುವರ್ಣಪುಂಖಿಗಳುಳ್ಳ ಬಾಣಗಳು ತಮ್ಮ ಶರೀರಗಳಲ್ಲಿ ನಾಟಿ ಅವರು ಮಳೆಗಾಲದಲ್ಲಿ ಮಿಣುಕು ಹುಳುಗಳಿಂದ ಆವೃತವಾದ ಎರಡು ವೃಕ್ಷಗಳಂತೆ ಶೋಭಿಸಿದರು.

ಸಂಪ್ರದೀಪಿತಸರ್ವಾಂಗೌ ಸಾಯಕೈಸ್ತೌ ಮಹಾರಥೌ ।
ಅದೃಶ್ಯೇತಾಂ ರಣೇ ಕ್ರುದ್ಧವುಲ್ಕಾಭಿರಿವ ಕುಂಜರೌ ॥ ೧೪ ॥

ಮಹಾರಥರಾದ ಅವರಿಬ್ಬರೂ ಜ್ವಲಿಸುವ ಸರ್ವಾಂಗವುಳ್ಳವರಾಗಿ ರಣರಂಗದಲ್ಲಿ ಕ್ರುದ್ಧರಾಗಿ ಪಂಜುಗಳಿಂದ ಸಹಿತವಾದ ಗಜಗಳಂತೆ ಕಂಡುಬಂದರು.

ತತೋ ಯುಧಿ ಮಹಾರಾಜ ಸೋಮದತ್ತೋ ಮಹಾರಥಃ ।
ಅರ್ಧಚಂದ್ರೇಣ ಚಿಚ್ಛೇದ ಮಾಧವಸ್ಯ ಮಹದ್ಧನುಃ ॥ ೧೫ ॥

ಎಲೈ ಮಹಾರಾಜನೇ, ಆಗ ಮಹಾರಥನಾದ ಸೋಮದತ್ತನು ರಣರಂಗದಲ್ಲಿ ಅರ್ಧಚಂದ್ರದಿಂದ ಸಾತ್ಯಕಿಯ ದೊಡ್ಡ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಪಂಚವಿಂಶತ್ಯಾ ಸಾಯಕಾನಾಂ ಸಮಾರ್ಪಯತ್ ।
ತ್ವರಮಾಣಸ್ತ್ವರಾಕಾಲೇ ಪುನಶ್ಚ ದಶಭಿಃ ಶರೈಃ ॥ ೧೬ ॥

ಅನಂತರ ತ್ವರೆ ಮಾಡಬೇಕಾದ ಕಾಲದಲ್ಲಿ ಅವನು ತ್ವರೆಯಿಂದ ಇಪ್ಪತ್ತೈದು ಬಾಣಗಳನ್ನು ಹೊಡೆದು ಪುನಃ ಸಾತ್ಯಕಿಯ ಮೇಲೆ ಹತ್ತು ಬಾಣಗಳನ್ನು ಪ್ರಯೋಗಿಸಿದನು.

ಅಥಾನ್ಯದ್ ಧನುರಾದಾಯ ಸಾತ್ಯಕಿರ್ವೇಗವತ್ತರಮ್ ।
ಪಂಚಭಿಃ ಸಾಯಕೈಸ್ತೂರ್ಣಂ ಸೋಮದತ್ತಮವಿಧ್ಯತ ॥ ೧೭ ॥

ಆಗ ಸಾತ್ಯಕಿಯು ವೇಗಶಾಲಿಯಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಐದು ಬಾಣಗಳಿಂದ ಶೀಘ್ರವಾಗಿ ಸೋಮದತ್ತನನ್ನು ಹೊಡೆದನು.

ತತೋಽಪರೇಣ ಭಲ್ಲೇನ ಧ್ವಜಂ ಚಿಚ್ಛೇದ ಕಾಂಚನಮ್ ।
ಬಾಹ್ಲೀಕಸ್ಯ ರಣೇ ರಾಜನ್ ಸಾತ್ಯಕಿಃ ಪ್ರಹಸನ್ನಿವ ॥ ೧೮ ॥

ಎಲೈ ರಾಜನೇ, ಸಾತ್ಯಕಿಯು ಅನಂತರ ಇನ್ನೊಂದು ಭಲ್ಲದಿಂದ ಬಾಹ್ಲೀಕ ಪುತ್ರನಾದ ಸೋಮದತ್ತನ ಕಾಂಚನಮಯವಾದ ಧ್ವಜವನ್ನು ನಗುತ್ತಾ ಕತ್ತರಿಸಿದನು.

ಸೋಮದತ್ತಸ್ತ ಸಂಭ್ರಾಂತೋ ದೃಷ್ಟ್ವಾ ಕೇತುಂ ನಿಪಾತಿತಮ್ ।
ಶೈನೇಯಂ ಪಂಚವಿಂಶತ್ಯಾ ಸಾಯಕಾನಾಂ ಸಮಾಚಿನೋತ್ ॥ ೧೯ ॥

ತನ್ನ ಧ್ವಜವು ಕೆಳಗೆ ಬಿದ್ದುದನ್ನು ನೋಡಿ ಸೋಮದತ್ತನು ಗಾಬರಿಗೊಳ್ಳದೆ ಇಪ್ಪತ್ತೈದು ಬಾಣಗಳನ್ನು ಸಾತ್ಯಕಿಯ ಶರೀರದಲ್ಲಿ ನಾಟಿಸಿದನು.

ಸಾತ್ವತೋಽಪಿ ರಣೇ ಕ್ರುದ್ಧಃ ಸೋಮದತ್ತಸ್ಯ ಧನ್ವಿನಃ ।
ಧನುಶ್ಚಿಚ್ಛೇದ ಸಮರೇ ಕ್ಷುರಪ್ರೇಣ ಶಿತೇನ ಹ ॥ ೨೦ ॥

ರಣರಂಗದಲ್ಲಿ ಕ್ರುದ್ಧನಾದ ಸಾತ್ಯಕಿಯೂ ಸಹ ನಿಶಿತವಾದ ಕ್ಷುರಪ್ರದಿಂದ ಧನುರ್ಧಾರಿಯಾದ ಸೋಮದತ್ತನ ಧನುಸ್ಸನ್ನು ಕತ್ತರಿಸಿದನು.

ಅಥೈನಂ ರುಗ್ಣಪುಂಖಾನಾಂ ಶತೇನ ನತಪರ್ವಣಾಮ್ ।
ಆಚಿನೋದ್ ಬಹುಧಾ ರಾಜನ್ ಭಗ್ನದಂಷ್ಟ್ರಮಿವ ದ್ವಿಪಮ್ ॥ ೨೧ ॥

ಎಲೈ ರಾಜನೇ, ಅನಂತರ ರುಗ್ಣಪುಂಖವನ್ನು ಹೊಂದಿದ ಬಾಗಿದ ತುದಿಯುಳ್ಳ ನೂರು ಬಾಣಗಳಿಂದ ದಂತವು ಮುರಿದ ಗಜವನ್ನು ಹೊಡೆದಂತೆ ಅವನನ್ನು ಹೊಡೆದು ಬಾಣಗಳನ್ನು ನಾಟಿಸಿದನು.

ಅಥಾನ್ಯದ್ ಧನುರಾದಾಯ ಸೋಮದತ್ತೋ ಮಹಾರಥಃ ।
ಸಾತ್ಯಕಿಂ ಛಾದಯಾಮಾಸ ಶರವೃಷ್ಟ್ಯಾ ಮಹಾಬಲಃ ॥ ೨೨ ॥

ಆಗ ಮಹಾರಥನೂ, ಮಹಾಬಲನೂ ಆದ ಸೋಮದತ್ತನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಬಾಣಗಳ ಮಳೆಯಿಂದ ಸಾತ್ಯಕಿಯನ್ನು ಆಚ್ಛಾದಿಸಿದನು.

ಸೋಮದತ್ತಂ ತು ಸಂಕ್ರುದ್ಧೋ ರಣೇ ವಿವ್ಯಾಧ ಸಾತ್ಯಕಿಃ ।
ಸಾತ್ಯಕಿಂ ಚೇಷುಜಾಲೇನ ಸೋಮದತ್ತೋ ಅಪೀಡಯತ್ ॥ ೨೩ ॥

ಬಹಳ ಕೋಪಗೊಂಡ ಸಾತ್ಯಕಿಯು ಸೋಮದತ್ತನ ಮೇಲೆ ರಣರಂಗದಲ್ಲಿ ಬಾಣಗಳನ್ನು ಪ್ರಯೋಗಿಸಿದನು. ಸಾತ್ಯಕಿಯೂ ಸಹ ಬಾಣಗಳ ಸಮೂಹದಿಂದ ಸೋಮದತ್ತನನ್ನು ಪೀಡಿಸಿದನು.

ದಶಭಿಃ ಸಾತ್ವತಸ್ಯಾರ್ಥೇ ಭೀಮೋಽಹನ್ ಬಾಹ್ಲಿಕಾತ್ಮಜಮ್ ।
ಸೋಮದತ್ತೋಪ್ಯಸಂಭ್ರಾಂತಃ ಶೈನೇಯಮವಧೀಚ್ಛರೈಃ ॥ ೨೪ ॥

ಭೀಮಸೇನನು ಸಾತ್ಯಕಿಯ ಪರವಾಗಿ ಬಾಹ್ಲೀಕ ಪುತ್ರನಾದ ಸೋಮದತ್ತನನ್ನು ಹತ್ತು ಬಾಣಗಳಿಂದ ಹೊಡೆದನು. ಸೋಮದತ್ತನೂ ಗಾಬರಿಗೊಳ್ಳದೆ ಸಾತ್ಯಕಿಯನ್ನು ಬಾಣಗಳಿಂದ ಹೊಡೆದನು.

ತತಸ್ತು ಸಾತ್ವತಸ್ಯಾರ್ಥೇ ಭೈಮಸೇನಿರ್ನವಂ ದೃಢಮ್ ।
ಮುಮೋಚ ಪರಿಘಂ ಘೋರಂ ಸೋಮದತ್ತಸ್ಯ ವಕ್ಷಸಿ ॥ ೨೫ ॥

ಆಗ ಭೀಮಸೇನನ ಪುತ್ರನಾದ ಘಟೋತ್ಕಚನು ಸಾತ್ಯಕಿಯ ಸಲುವಾಗಿ ಹೊಸದಾದ ಮತ್ತು ದೃಢವಾದ ಒಂದು ಘೋರವಾದ ಪರಿಘವನ್ನು ತೆಗೆದುಕೊಂಡು ಅದನ್ನು ಸೋಮದತ್ತನ ಎದೆಯಲ್ಲಿ ಎಸೆದನು.

ತಮಾಪತಂತಂ ವೇಗೇನ ಪರಿಘಂ ಘೋರದರ್ಶನಮ್ ।
ದ್ವಿಧಾ ಚಿಚ್ಛೇದ ಸಮರೇ ಪ್ರಹಸನ್ನಿವ ಕೌರವಃ ॥ ೨೬ ॥

ಕೌರವನಾದ ಸೋಮದತ್ತನು ತನ್ನ ಕಡೆಗೆ ವೇಗದಿಂದ ಬರುತ್ತಿದ್ದ ಘೋರವಾಗಿ ಕಾಣುತ್ತಿದ್ದ ಆ ಪರಿಘವನ್ನು ನಗುತ್ತಾ ಎರಡು ಭಾಗಗಳಾಗಿ ಕತ್ತರಿಸಿದನು.

ಸ ಪಪಾತ ದ್ವಿಧಾ ಛಿನ್ನ ಆಯಸಃ ಪರಿಘೋ ಮಹಾನ್ ।
ಮಹೀಧರಸ್ಯೇವ ಮಹಚ್ಛಿಖರಂ ವಜ್ರದಾರಿತಮ್ ॥ ೨೭ ॥

ಕಬ್ಬಿಣದಿಂದ ಮಾಡಿದ ಆ ದೊಡ್ಡ ಪರಿಘವು ವಜ್ರದಿಂದ ಸೀಳಲ್ಪಟ್ಟ ಪರ್ವತದ ದೊಡ್ಡ ಶಿಖರದಂತೆ ಎರಡು ಭಾಗವಾಗಿ ಕತ್ತರಿಸಲ್ಪಟ್ಟು ಕೆಳಗೆ ಬಿದ್ದಿತು.

ತತಸ್ತು ಸಾತ್ಯಕೀ ರಾಜನ್ ಸೋಮದತ್ತಸ್ಯ ಸಂಯುಗೇ ।
ಧನುಶ್ಚಿಚ್ಛೇದ ಭಲ್ಲೇನ ಹಸ್ತಾವಾಪಂ ಚ ಪಂಚಭಿಃ ॥ ೨೮ ॥

ಎಲೈ ರಾಜನೇ, ಅನಂತರ ಸಾತ್ಯಕಿಯು ರಣರಂಗದಲ್ಲಿ ಭಲ್ಲದಿಂದ ಸೋಮದತ್ತನ ಧನುಸ್ಸನ್ನೂ ಐದು ಬಾಣಗಳಿಂದ ಅವನ ಬತ್ತಳಿಕೆಯನ್ನೂ ಕತ್ತರಿಸಿದನು.

ಚತುರ್ಭಿಸ್ತು ಶರೈಸ್ತೂರ್ಣಂ ಚತುರಸ್ತುರಗೋತ್ತಮಾನ್ ।
ಸಮೀಪಂ ಪ್ರೇಷಯಾಮಾಸ ಪ್ರೇತರಾಜಸ್ಯ ಭಾರತ ॥ ೨೯ ॥

ಎಲೈ ಭಾರತನೇ, ನಾಲ್ಕು ಬಾಣಗಳಿಂದ ಅವನ ರಥದ ನಾಲ್ಕು ಶ್ರೇಷ್ಠವಾದ ಅಶ್ವಗಳನ್ನು ಕೊಂದು ಶೀಘ್ರವಾಗಿ ಯಮನ ಸಮೀಪಕ್ಕೆ ಕಳುಹಿಸಿದನು.

ಸಾರಥೇಶ್ಚ ಶಿರಃ ಕಾಯಾದ್ ಭಲ್ಲೇನ ನತಪರ್ವಣಾ ।
ಜಹಾರ ರಥಶಾರ್ದೂಲಃ ಪ್ರಹಸನ್ ಶಿನಿಪುಂಗವಃ ॥ ೩೦ ॥

ಶಿನಿಪುಂಗವನೂ, ರಥಶಾರ್ದೂಲನೂ ಆದ ಸಾತ್ಯಕಿಯು ಬಾಗಿದ ತುದಿಯುಳ್ಳ ಭಲ್ಲದಿಂದ ನಗುತ್ತಾ ಅವನ ಸಾರಥಿಯ ಶಿರಸ್ಸನ್ನು ದೇಹದಿಂದ ಕತ್ತರಿಸಿದನು.

ತತಃ ಶರಂ ಮಹಾಘೋರಂ ಜ್ವಲಂತಮಿವ ಪಾವಕಮ್ ।
ಮುಮೋಚ ಸಾತ್ವತೋ ರಾಜನ್ ಸ್ವರ್ಣಪುಂಖಂ ಶಿಲಾಶಿತಮ್ ॥೩೧॥

ಎಲೈ ರಾಜನೇ, ಅನಂತರ ಮಹಾಘೋರವಾಗಿದ್ದ ಜ್ವಲಿಸುವ ಅಗ್ನಿಯಂತಿದ್ದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಒಂದು ಬಾಣವನ್ನು ಸಾತ್ಯಕಿಯು ಸೋಮದತ್ತನ ಎದೆಯ ಮೇಲೆ ಪ್ರಯೋಗಿಸಿದನು.

ಸ ವಿಮುಕ್ತೋ ಬಲವತಾ ಶೈನೇಯೇನ ಶರೋತ್ತಮಃ ।
ಘೋರಸ್ತಸ್ಯೋರಸಿ ವಿಭೋ ನಿಪಪಾತಾಶು ಭಾರತ ॥ ೩೨ ॥

ಬಲಿಷ್ಠನಾದ ಸಾತ್ಯಕಿಯಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಎಲೈ ಭಾರತನೇ, ವಿಭುವೇ, ಶೀಘ್ರವಾಗಿ ನಿನ್ನ ತಂದೆಯ ಎದೆಯಲ್ಲಿ ಬಿದ್ದಿತು.

ಪ್ರತೀಪ ಪುತ್ರರಾದ ಶಂತನು ಮತ್ತು ಬಾಹ್ಲೀಕರಲ್ಲಿ ಬಾಹ್ಲೀಕನು ದೊಡ್ಡವನು ಮತ್ತು ಶಂತನು ಚಿಕ್ಕವನು. ಬಾಹ್ಲೀಕ ಪುತ್ರರಾದ ಸೋಮದತ್ತ ಮತ್ತು ವಿಚಿತ್ರವೀರ್ಯರಲ್ಲಿ ಸೋಮದತ್ತನು ಹಿರಿಯನು, ವಿಚಿತ್ರವೀರ್ಯನು ಚಿಕ್ಕವನು. ಧೃತರಾಷ್ಟ್ರನು ವಿಚಿತ್ರವೀರ್ಯನ ಪುತ್ರ. ಆದ್ದರಿಂದ ಸೋಮದತ್ತನನ್ನು ನಿನ್ನ ತಂದೆ ಎಂದು ಹೇಳಿದ್ದಾರೆ- **ಲಕ್ಷ್ಮಲಂಕಾರ**).

ಸೋಽತಿವಿದ್ಧೋ ಬಲವತಾ ಸಾತ್ವತೇನ ಮಹಾರಥಃ ।
ಸೋಮದತ್ತೋ ಮಹಾಬಾಹುರ್ನಿಪಪಾತ ಮಮಾರ ಚ ॥ ೩೩ ॥

ಬಲಿಷ್ಠನಾದ ಸಾತ್ಯಕಿಯಿಂದ ಗಾಢವಾಗಿ ಹೊಡೆಯಲ್ಪಟ್ಟ ಮಹಾರಥನೂ, ಮಹಾಬಾಹುವೂ ಆದ ಸೋಮದತ್ತನು ಕೆಳಗೆ ಬಿದ್ದು ಮೃತನಾದನು.

ತಂ ದೃಷ್ಟ್ವಾ ನಿಹತಂ ತತ್ರ ಸೋಮದತ್ತಂ ಮಹಾರಥಾಃ ।
ಮಹತಾ ಶರವರ್ಷೇಣ ಯುಯುಧಾನಮುಪಾದ್ರವನ್ ॥ ೩೪ ॥

ಸೋಮದತ್ತನು ಹತನಾದುದನ್ನು ನೋಡಿ ಮಹಾರಥರು ದೊಡ್ಡ ಶರವರ್ಷವನ್ನು ಸುರಿಸುತ್ತಾ ಯುಯುಧಾನನ ಕಡೆಗೆ ಧಾವಿಸಿದರು.

ಛಾದ್ಯಮಾನಂ ಶರೈರ್ದೃಷ್ಟ್ವಾ ಯುಯುಧಾನಂ ಯುಧಿಷ್ಠಿರಃ ।
ಮಹತ್ಯಾ ಸೇನಯಾ ಸಾರ್ಧಂ ದ್ರೋಣಾನೀಕಮುಪಾದ್ರವತ್ ॥ ೩೫ ॥

ಯುಯುಧಾನನು ಬಾಣಗಳಿಂದ ಆಚ್ಛಾದಿಸಲ್ಪಡುವುದನ್ನು ನೋಡಿದ ಯುಧಿಷ್ಠಿರನು ದೊಡ್ಡ ಸೈನ್ಯದ ಜೊತೆಯಲ್ಲಿ ದ್ರೋಣರ ಸೈನ್ಯದ ಮೇಲೆ ಎರಗಿದನು.

ತತೋ ಯುಧಿಷ್ಠಿರಃ ಕ್ರುದ್ಧಸ್ತಾವಕಾನಾಂ ಮಹಾಬಲಮ್ ।
ಶರೈರ್ವಿದ್ರಾವಯಾಮಾಸ ಭಾರದ್ವಾಜಸ್ಯ ಪಶ್ಯತಃ ॥ ೩೬ ॥

ಆಗ ಕೋಪಗೊಂಡ ಯುಧಿಷ್ಠಿರನು ದ್ರೋಣರು ನೋಡುತ್ತಿರುವಂತೆಯೇ ನಿನ್ನ ದೊಡ್ಡ ಸೈನ್ಯವನ್ನು ತನ್ನ ಬಾಣಗಳಿಂದ ಚದುರಿಸಿದನು.

ಸೈನ್ಯಾನಿ ದ್ರಾವಯಂತಂ ತು ದ್ರೋಣೋ ದೃಷ್ಟ್ವಾ ಯುಧಿಷ್ಠಿರಮ್ ।
ಅಭಿದುದ್ರಾವ ವೇಗೇನ ಕ್ರೋಧಸಂರಕ್ತಲೋಚನಃ ॥ ೩೭ ॥

ತಮ್ಮ ಸೈನ್ಯವನ್ನು ಓಡಿಸುತ್ತಿದ್ದ ಯುಧಿಷ್ಠಿರನನ್ನು ನೋಡಿ ಕ್ರೋಧದಿಂದ ಕೆಂಪಾದ ಕಣ್ಣುಳ್ಳವರಾಗಿ ದ್ರೋಣರು ವೇಗದಿಂದ ಅವನ ಕಡೆಗೆ ಸಾಗಿಬಂದರು.

ತತಃ ಸುನಿಶಿತೈರ್ಬಾಣೈಃ ಪಾರ್ಥಂ ವಿವ್ಯಾಧ ಸಪ್ತಭಿಃ ।
ಸೋತಿವಿದ್ಧೋ ಮಹಾಬಾಹುಃ ಸೃಕ್ಕಿಣೇ ಪರಿಸಂಲ್ಲಿಹನ್ ।
ಯುಧಿಷ್ಠಿರಸ್ಯ ಚಿಚ್ಛೇದ ಧ್ವಜಂ ಕಾರ್ಮುಕಮೇವ ಚ ॥ ೩೮ ॥

ಆಗ ಯುಧಿಷ್ಠಿರನು ಅತ್ಯಂತ ತೀಕ್ಷ್ಣವಾದ ಏಳು ಬಾಣಗಳಿಂದ ಅವರನ್ನು ಹೊಡೆದನು. ಮಹಾಬಾಹುಗಳಾದ ದ್ರೋಣರು ಯುಧಿಷ್ಠಿರನಿಂದ ಗಾಢವಾಗಿ ಹೊಡೆಯಲ್ಪಟ್ಟು ತಮ್ಮ ಕಟಬಾಯಿಯನ್ನು ಸವರಿಕೊಳ್ಳುತ್ತಾ ಯುಧಿಷ್ಠಿರನ ಧ್ವಜವನ್ನೂ ಮತ್ತು ಧನುಸ್ಸನ್ನೂ ಕತ್ತರಿಸಿದರು.

ಸ ಛಿನ್ನಧನ್ವಾ ತ್ವರಿತಸ್ತ್ವರಾಕಾಲೇ ನೃಪೋತ್ತಮಃ ।
ಅನ್ಯದಾದತ್ತ ವೇಗೇನ ಕಾರ್ಮುಕಂ ಸಮರೇ ದೃಢಮ್ ॥ ೩೯ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟ ನೃಪಶ್ರೇಷ್ಠನಾದ ಯುಧಿಷ್ಠಿರನು ತ್ವರೆ ಮಾಡಬೇಕಾದ ಆ ಕಾಲದಲ್ಲಿ ವೇಗವಾಗಿ ಇನ್ನೊಂದು ದೃಢವಾದ ಧನುಸ್ಸನ್ನು ತೆಗೆದುಕೊಂಡನು.

ತತಃ ಶರಸಹಸ್ರೇಣ ದ್ರೋಣಂ ವಿವ್ಯಾಧ ಪಾರ್ಥಿವಃ ।
ಸಾಶ್ವಸೂತಧ್ವಜರಥಂ ತದದ್ಭುತಮಿವಾಭವತ್ ॥ ೪೦ ॥

ಅನಂತರ ರಾಜನಾದ ಅವನು ಸಾವಿರ ಬಾಣಗಳಿಂದ ದ್ರೋಣರನ್ನೂ, ಅವರ ಅಶ್ವ-ಸೂತ-ಧ್ವಜ-ರಥವನ್ನೂ ಹೊಡೆದನು. ಅದು ಅದ್ಭುತವಾಗಿದ್ದಿತು.

ತತೋ ಮುಹೂರ್ತಂ ವ್ಯಥಿತಃ ಶರಘಾತಪ್ರಪೀಡಿತಃ ।
ನಿಷಸಾದ ರಥೋಪಸ್ಥೇ ದ್ರೋಣೋ ಭರತಸತ್ತಮ ॥ ೪೧ ॥

ಎಲೈ ಭರತಸತ್ತಮನೇ, ಆಗ ಬಾಣಗಳ ಹೊಡೆತದಿಂದ ಬಹಳ ಪೀಡಿತರಾದ ದ್ರೋಣರು ಬಹಳ ವ್ಯಥೆಯಿಂದ ಕೂಡಿ ರಥಪೀಠದಲ್ಲಿ ಒಂದು ಮುಹೂರ್ತದ ಕಾಲ ಕುಳಿತರು.

ಪ್ರತಿಲಭ್ಯ ತತಃ ಸಂಜ್ಞಾಂ ಮುಹೂರ್ತಾದ್ ದ್ವಿಜಸತ್ತಮಃ ।
ಕ್ರೋಧೇನ ಮಹತಾವಿಷ್ಟೋ ವಾಯವ್ಯಾಸ್ತ್ರಮವಾಸೃಜತ್ ॥ ೪೨ ॥

ದ್ವಿಜಶ್ರೇಷ್ಠರಾದ ಅವರು ಒಂದು ಮುಹೂರ್ತವು ಕಳೆದ ಮೇಲೆ ಪುನಃ ಪ್ರಜ್ಞೆಯನ್ನು ಪಡೆದು ಬಹಳ ಕ್ರೋಧದಿಂದ ಕೂಡಿದವರಾಗಿ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದರು.

ಅಸಂಭ್ರಾಂತಸ್ತತಃ ಪಾರ್ಥೋ ಧನುರಾಕೃಷ್ಯ ವೀರ್ಯವಾನ್ ।
ತದಸ್ತ್ರಮಸ್ತ್ರೇಣ ರಣೇ ಸ್ತಂಭಯಾಮಾಸ ಭಾರತ ॥ ೪೩ ॥

ಪರಾಕ್ರಮಶಾಲಿಯಾದ ಯುಧಿಷ್ಠಿರನು ಗಾಬರಿಗೊಳ್ಳದೆ ಎಲೈ ಭಾರತನೇ, ಅವರ ಅಸ್ತ್ರವನ್ನು ರಣರಂಗದಲ್ಲಿ ತನ್ನ ಪ್ರತ್ಯಸ್ತ್ರದಿಂದ ಸ್ತಂಭಿಸಿದನು.

ತತೋಽಬ್ರವೀದ್ ವಾಸುದೇವಃ ಕುಂತೀಪುತ್ರಂ ಯುಧಿಷ್ಠಿರಮ್ ।
ಯುಧಿಷ್ಠಿರ ಮಹಾಬಾಹೋ ಯತ್ತ್ವಾ ವಕ್ಷ್ಯಾಮಿ ತಚ್ಛೃಣು ॥ ೪೪ ॥

ಉಪಾರಮಸ್ವ ಯುದ್ಧಾಯ ದ್ರೋಣಾದ್ ಭರತಸತ್ತಮ ।
ಗೃಧ್ಯತೇ ಹಿ ಸದಾ ದ್ರೋಣೋ ಗ್ರಹಣೇ ತವ ಸಂಯುಗೇ ॥ ೪೫ ॥

ನಾನುರೂಪಮಹಂ ಮನ್ಯೇ ಯುದ್ಧಮಸ್ಯ ತ್ವಯಾ ಸಹ ।
ಯೋಸ್ಯ ಸೃಷ್ಟೋ ವಿನಾಶಾಯ ಸ ಏನಂ ಶ್ವೋ ಹನಿಷ್ಯತಿ ॥ ೪೬ ॥

ಪರಿವರ್ಜ್ಯ ಗುರುಂ ಯಾಹಿ ಯತ್ರ ರಾಜಾ ಸುಯೋಧನಃ ।
ಭೀಮಶ್ಚ ರಥಶಾರ್ದೂಲೋ ಯುದ್ಧ್ಯತೇ ಕೌರವೈಃ ಸಹ ॥ ೪೭ ॥

ಆಗ ವಾಸುದೇವನು ಕುಂತೀಪುತ್ರನಾದ ಯುಧಿಷ್ಠಿರನನ್ನು ಕುರಿತು- ಎಲೈ ಮಹಾಬಾಹುವೇ, ಯುಧಿಷ್ಠಿರನೇ, ನಾನು ನಿನಗೆ ಹೇಳುವ ಮಾತುಗಳನ್ನು ಕೇಳು. ಎಲೈ ಭರತಶ್ರೇಷ್ಠನೇ, ದ್ರೋಣರ ಜೊತೆಯಲ್ಲಿ ಯುದ್ಧ ಮಾಡುವುದನ್ನು ನಿಲ್ಲಿಸು. ದ್ರೋಣರು ಯಾವಾಗಲೂ ರಣರಂಗದಲ್ಲಿ ನಿನ್ನನ್ನು ಸೆರೆಹಿಡಿಯಲು ಬಯಸುತ್ತಿದ್ದಾರೆ. ನೀನು ಅವರ ಜೊತೆಯಲ್ಲಿ ಯುದ್ಧವನ್ನು ಮಾಡುವುದು ಉಚಿತವಲ್ಲ ಎಂಬುದು ನನ್ನ ಭಾವನೆ. ಅವರ ವಿನಾಶಕ್ಕಾಗಿ ಸೃಷ್ಟನಾದ ಧೃಷ್ಟದ್ಯುಮ್ನನು ನಾಳೆ ಅವರನ್ನು ಕೊಲ್ಲುವನು. ರಥಶಾರ್ದೂಲನಾದ ಅವನು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ. ನೀನು ಗುರುಗಳಾದ ದ್ರೋಣರನ್ನು ಬಿಟ್ಟು ರಾಜನಾದ ಸುಯೋಧನನು ಇರುವಲ್ಲಿಗೆ ಹೋಗು ಎಂದು ಹೇಳಿದನು.

ವಾಸುದೇವವಚಃ ಶ್ರುತ್ವಾ ಧರ್ಮರಾಜೋ ಯುಧಿಷ್ಠಿರಃ ।
ಮುಹೂರ್ತಂ ಚಿಂತಯಿತ್ವಾ ತು ತತೋ ದಾರುಣಮಾಹವಮ್ ॥೪೮॥

ಪ್ರಾಯಾದ್ ದ್ರುತಮಮಿತ್ರಘ್ನೋ ಯತ್ರ ಭೀಮೋ ವ್ಯವಸ್ಥಿತಃ ।
ವಿನಿಘ್ನಂಸ್ತಾವಕಾನ್ ಯೋಧಾನ್ ವ್ಯಾದಿತಾಸ್ಯ ಇವಾಂತಕಃ ॥ ೪೯॥

ಕೃಷ್ಣನ ಮಾತುಗಳನ್ನು ಕೇಳಿದ ಧರ್ಮರಾಜನಾದ ಯುಧಿಷ್ಠಿರನು ಒಂದು ಮುಹೂರ್ತದವರೆಗೆ ಚಿಂತಿಸಿ, ಅನಂತರ ಶತ್ರುಸಂಹಾರಕನಾದ ಭೀಮನು ಬಾಯ್ತೆರೆದ ಮೃತ್ಯುವಿನಂತೆ ನಿನ್ನ ಸೈನಿಕರನ್ನು ಕೊಲ್ಲುತ್ತಿರುವ ರಣರಂಗದ ಕಡೆಗೆ ಶೀಘ್ರವಾಗಿ ಹೊರಟನು.

ರಥಘೋಷೇಣ ಮಹತಾ ನಾದಯನ್ ವಸುಧಾತಳಮ್ ।
ಪರ್ಜನ್ಯ ಇವ ಘರ್ಮಾಂತೇ ನಾದಯನ್ ವೈ ದಿಶೋ ದಶ ।
ಭೀಮಸ್ಯ ನಿಘ್ನತಃ ಶತ್ರೂನ್ ಪಾರ್ಷ್ಣಿಂ ಜಗ್ರಾಹ ಪಾಂಡವಃ ॥ ೫೦ ॥

ತನ್ನ ದೊಡ್ಡ ರಥಘೋಷದಿಂದ ಭೂಮಿಯನ್ನು ಪ್ರತಿಧ್ವನಿಸುತ್ತಾ ಮಳೆಗಾಲದಲ್ಲಿ ಪರ್ಜನ್ಯನು ಹತ್ತುದಿಕ್ಕುಗಳನ್ನು ನಾದದಿಂದ ತುಂಬುವಂತೆ ತುಂಬುತ್ತಾ ಶತ್ರುಗಳನ್ನು ಸಂಹರಿಸುತ್ತಿದ್ದ ಭೀಮನ ಪಾರ್ಶ್ವವನ್ನು ಹೊಂದಿದನು.

ದ್ರೋಣೋಽಪಿ ಪಾಂಡುಪಾಂಚಾಲಾನ್ ವ್ಯಧಮದ್ ರಜನೀಮುಖೇ ।
ನಾದಯಂಸ್ತಳಘೋಷೇಣ ತವ ಸೈನ್ಯಾನಿ ಮಾರಿಷ ॥ ೫೧ ॥

ಎಲೈ ಪೂಜ್ಯನೇ, ದ್ರೋಣರೂ ಸಹ ಆ ರಾತ್ರಿಮುಖದಲ್ಲಿ ತಮ್ಮ ಧನುಸ್ಸಿನ ಜ್ಯಾತಳ ಘೋಷದಿಂದ ದೊಡ್ಡ ನಾದವನ್ನುಂಟು ಮಾಡುತ್ತಾ ಪಾಂಡುಪಾಂಚಾಲರ ಸೇನೆಯನ್ನು ನಾಶಗೊಳಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಚತ್ವಾರಿಂಶದಧಿಕಶತತಮೋಽಧ್ಯಾಯಃ ॥
॥ ಘಟೋತ್ಕಚವಧಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂಬತ್ತನೆಯ ಅಧ್ಯಾಯ

ಎರಡು ಸೈನ್ಯಗಳಲ್ಲಿ ದೀಪಗಳ ವ್ಯವಸ್ಥೆ ಮತ್ತು ಸಂಕುಲ ಯುದ್ಧ.

ಸಂಜಯಃ

ವರ್ತಮಾನೇ ತಥಾ ಯುದ್ಧೇ ಘೋರರೂಪೇ ಭಯಾವಹೇ ।
ತಮಸಾ ಸಂವೃತೇ ಲೋಕೇ ರಜಸಾ ಚ ಮಹೀಪತೇ ।
ನಾಪಶ್ಯಂತ ರಣೇ ಯೋಧಾಃ ಪರಸ್ಪರಮವಸ್ಥಿತಾಃ ॥ ೧ ॥

ಸಂಜಯ– ಘೋರರೂಪವಾದ, ಭಯಂಕರವಾದ ಅಂತಹ ಯುದ್ಧವು ನಡೆಯುತ್ತಿರಲು ಎಲೈ ರಾಜನೇ, ಲೋಕವು ಕತ್ತಲೆಯಿಂದಲೂ ಮತ್ತು ಸೈನ್ಯದ ಧೂಳಿನಿಂದಲೂ ಆವೃತವಾಗಿರಲು ರಣರಂಗದಲ್ಲಿನಿಂತ ಯೋಧರು ಪರಸ್ಪರವಾಗಿ ಕಾಣಲಿಲ್ಲ.

ಅನುಮಾನೇನ ಸಂಜ್ಞಾಭಿರ್ಯುದ್ಧಂ ತದ್ ವವೃತೇ ಮಹತ್ ।
ನರನಾಗಾಶ್ವಮಥನಂ ಪರಮಂ ಲೋಮಹರ್ಷಣಮ್ ॥ ೨ ॥

ಗಜಾಶ್ವ-ಯೋಧರನ್ನು ವಿನಾಶಗೊಳಿಸುವ ರೋಮಾಂಚಕಾರಿಯಾದ ಆ ದೊಡ್ಡ ಯುದ್ಧವು ಕೇವಲ ಊಹೆಗಳಿಂದ ಮತ್ತು ಕರೆಯುವ ಹೆಸರುಗಳಿಂದ ನಡೆಯಿತು.

ದ್ರೋಣಕರ್ಣಕೃಪಾ ವೀರಾ ಭೀಮಪಾರ್ಷತಸಾತ್ಯಕಾಃ ।
ಅನ್ಯೋನ್ಯಂ ಕ್ಷೋಭಯಾಮಾಸುಃ ಸೈನ್ಯಾನಿ ನೃಪಸತ್ತಮ ॥ ೩ ॥

ಎಲೈ ರಾಜಶ್ರೇಷ್ಠನೇ, ವೀರರಾದ ದ್ರೋಣ-ಕರ್ಣ-ಕೃಪರು, ಭೀಮ-ಧೃಷ್ಟದ್ಯುಮ್ನ-ಸಾತ್ಯಕಿಯರು ಪರಸ್ಪರರ ಸೈನ್ಯಗಳನ್ನು ಕ್ಷೋಭೆಗೊಳಿಸಿದರು.

ವಧ್ಯಮಾನಾನಿ ಸೈನ್ಯಾನಿ ಸಮಂತಾತ್ ತೈರ್ಮಹಾರಥೈಃ ।
ತಮಸಾ ರಜಸಾ ಚೈವ ಸಮಂತಾದ್ ವಿಪ್ರದುದ್ರುವುಃ ॥ ೪ ॥

ಆ ಮಹಾರಥರಿಂದ ಪ್ರಹಾರಕ್ಕೆ ಒಳಗಾಗುತ್ತಿದ್ದ ಸೈನ್ಯಗಳು ಕತ್ತಲೆಯಿಂದಲೂ ಮತ್ತು ಸೈನ್ಯದಿಂದ ಎದ್ದ ಧೂಳಿನಿಂದಲೂ ಎಲ್ಲ ಕಡೆಗಳಲ್ಲಿಯೂ ಓಡಿಹೋದವು.

ತೇ ಸರ್ವತೋ ವಿದ್ರವಂತೋ ಯೋಧಾ ವಿತ್ರಸ್ತಚೇತಸಃ ।
ಅಹನ್ಯಂತ ಮಹಾರಾಜ ಧಾವಮಾನಾಶ್ಚ ಸಂಯುಗೇ ॥ ೫ ॥

ಎಲೈ ಮಹಾರಾಜನೇ, ಹೆದರಿದ ಮನಸ್ಸುಳ್ಳವರಾಗಿ ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಓಡುವ ಅವರು ತಮ್ಮವರನ್ನೇ ತುಳಿದುಕೊಂಡು ಹೋಗುವುದರಿಂದ ಅನೇಕ ಯೋಧರು ಮೃತರಾದರು.

ಮಹಾರಥಸಹಸ್ರಾಣಿ ಜಘ್ನುರನ್ಯೋನ್ಯಮಾಹವೇ ।
ಅಂಧೇ ತಮಸಿ ಮೂಢಾನಿ ಪುತ್ರಸ್ಯ ತವ ಮಂತ್ರಿತೇ ॥ ೬ ॥

ನಿನ್ನ ಪುತ್ರನ ದುರ್ಮಂತ್ರಣದ ಫಲವಾಗಿ ಕತ್ತಲಿನಲ್ಲಿ ಮುಳುಗಿದ ಸಹಸ್ರಾರು ಮಹಾರಥರು ಪರಸ್ಪರವಾಗಿ ಹಾಗೆಯೇ ಹೊಡೆದಾಡಿದರು.

ತತಃ ಸರ್ವಾಣಿ ಸೈನ್ಯಾನಿ ಸೇನಾಗೋಪಾಶ್ಚ ಭಾರತ ।
ವ್ಯಮುಹ್ಯಂತ ರಣೇ ತತ್ರ ತಮಸಾ ಸಂವೃತೇ ಸತಿ ॥ ೭ ॥

ಎಲೈ ಭಾರತನೇ, ಆಗ ಕತ್ತಲೆಯು ಪೂರ್ಣವಾಗಿ ಆವರಿಸುತ್ತಿರಲು ಎಲ್ಲ ಸೈನ್ಯಗಳೂ ಮತ್ತು ಸೈನ್ಯ ರಕ್ಷಕರೂ ಏನು ಮಾಡಬೇಕೆಂದು ತಿಳಿಯದಾದರು.

ಧೃತರಾಷ್ಟ್ರಃ

ತೇಷಾಂ ಸಲ್ಲೋಡ್ಯಮಾನಾನಾಂ ಪಾಂಡವೈರ್ನಿಹತೌಜಸಾಮ್ ।
ಅಂಧೇ ತಮಸಿ ಮಗ್ನಾನಾಮಾಸೀತ್ ಕಾ ವೋ ಮತಿಸ್ತದಾ ॥ ೮ ॥

ಧೃತರಾಷ್ಟ್ರ- ಪಾಂಡವರಿಂದ ನಿಮ್ಮ ಸಾಮರ್ಥ್ಯವು ನಾಶಗೊಳಿಸಲ್ಪಟ್ಟು ನಿಮ್ಮ ಸೈನ್ಯವು ಕತ್ತಲಿನಲ್ಲಿ ಮುಳುಗಿ ಪಾಂಡವರಿಂದ ಕ್ಷೋಭೆಗೆ ಒಳಗಾದಾಗ ನಿಮ್ಮ ಮನಸ್ಸು ಹೇಗಿದ್ದಿತು?

ಕಥಂ ಪ್ರಕಾಶಸ್ತೇಷಾಂ ವಾ ಮಮ ಸೈನ್ಯೇಷು ವಾ ಪುನಃ ।
ಬಭೂವ ಲೋಕೇ ತಮಸಾ ತಥಾ ಸಂಜಯ ಸಂವೃತೇ ॥ ೯ ॥

ಎಲೈ ಸಂಜಯನೇ, ಎಲ್ಲ ಲೋಕವೂ ಕತ್ತಲೆಯಿಂದ ಆವೃತವಾಗಿದ್ದಾಗ ಅವರ ಸೈನ್ಯಕ್ಕಾಗಲೀ ಅಥವಾ ನಿಮ್ಮ ಸೈನ್ಯಕ್ಕಾಗಲೀ ಪುನಃ ಪ್ರಕಾಶವು ಹೇಗೆ ಉಂಟಾಯಿತು?

ಸಂಜಯಃ

ತತಃ ಸರ್ವಾಣಿ ಸೈನ್ಯಾನಿ ಹತಶಿಷ್ಟಾನಿ ಯಾನಿ ವೈ ।
ಸೇನಾಗೋಪ್ತೃನಥಾದಿಶ್ಯ ಪುನರ್ವ್ಯೂಹಮಕಲ್ಪಯನ್ ॥ ೧೦ ॥

ಸಂಜಯ– ಆಗ ಉಳಿದುಳಿದ ಸೈನ್ಯಗಳೆಲ್ಲವೂ ಸೇನಾರಕ್ಷಕರಿಗೆ ಆದೇಶವನ್ನು ನೀಡಿ ಪುನಃ ವ್ಯೂಹವನ್ನು ರಚಿಸಿದವು.

ದ್ರೋಣಃ ಪುರಸ್ತಾಜ್ಜಘನೇ ತು ಶಲ್ಯಃ
ತಥಾ ದ್ರೌಣಿಃ ಪಾರ್ಶ್ವತಃ ಸೌಬಲಶ್ಚ ।
ಸ್ವಯಂ ತು ಸರ್ವಾಣಿ ಬಲಾನಿ ರಾಜನ್
ರಾಜಾಭ್ಯಯಾದ್ ಗೋಪಯನ್ ವೈ ನಿಶಾಯಾಮ್ ॥ ೧೧ ॥

ಮುಂಭಾಗದಲ್ಲಿ ದ್ರೋಣರು, ಹಿಂಭಾಗದಲ್ಲಿ ಶಲ್ಯ , ಎರಡು ಪಾರ್ಶ್ವಗಳಲ್ಲಿ ಅಶ್ವತ್ಥಾಮರು ಮತ್ತು ಶಕುನಿ, ಎಲೈ ರಾಜನೇ, ಮತ್ತು ರಾಜನಾದ ದುರ್ಯೋಧನನು ಸ್ವತಃ ಆ ರಾತ್ರಿಯಲ್ಲಿ ಸೈನ್ಯಗಳನ್ನು ರಕ್ಷಣೆ ಮಾಡುತ್ತಾ ತಾನೇ ಮುನ್ನುಗ್ಗಿದನು.

ಉವಾಚ ಸರ್ವಾಂಶ್ಚ ಪದಾತಿಸಂಘಾನ್
ದುರ್ಯೋಧನಃ ಪಾರ್ಥಿವ ಸಾಂತ್ವಪೂರ್ವಮ್ ।
ಉತ್ಸೃಜ್ಯ ಸರ್ವೇ ಪರಮಾಯುಧಾನಿ
ಗೃಹ್ಣೀತ ಹಸ್ತೈರ್ಜ್ವಲಿತಾನ್ ಪ್ರದೀಪಾನ್ ॥ ೧೨ ॥

ಎಲೈ ರಾಜನೇ, ದುರ್ಯೋಧನನು ಆಗ ಎಲ್ಲ ಪದಾತಿ ಸಮೂಹಗಳನ್ನು ಕುರಿತು ಶಾಂತವಾದ ಮಾತಿನಿಂದ, ಎಲ್ಲರೂ ನಿಮ್ಮ ಶ್ರೇಷ್ಠವಾದ ಆಯುಧವನ್ನು ಬಿಟ್ಟು ಹಸ್ತಗಳಲ್ಲಿ ಜ್ವಲಿಸುವ ದೀಪಗಳನ್ನು ಹಿಡಿಯಿರಿ ಎಂದು ಹೇಳಿದನು.

ತೇ ಚೋದಿತಾಃ ಪಾರ್ಥಿವಸತ್ತಮೇನ
ತತಃ ಪ್ರಹೃಷ್ಟಾ ಜಗೃಹುಃ ಪ್ರದೀಪಾನ್ ।
ಸಾ ಭೂಯ ಏವ ಧ್ವಜಿನೀ ವಿಭಕ್ತಾ
ವ್ಯರೋಚತಾಗ್ನಿಪ್ರಭಯಾ ನಿಶಾಯಾಮ್ ॥ ೧೩ ॥

ರಾಜಶ್ರೇಷ್ಠನಾದ ಅವನಿಂದ ಹೀಗೆ ಪ್ರೇರಿಸಲ್ಪಟ್ಟ ಯೋಧರು ಸಂತೋಷಗೊಂಡು ಕೈಗಳಲ್ಲಿ ದೀಪವನ್ನು ಹಿಡಿದರು. ವಿಭಕ್ತವಾಗಿದ್ದ ಆ ಸೈನ್ಯವು ರಾತ್ರಿಯಲ್ಲಿ ದೀಪಗಳ ಕಾಂತಿಯಿಂದ ಪುನಃ ಪ್ರಕಾಶವನ್ನು ಹೊಂದಿತು.

ಮಹಾಧನೈರಾಭರಣೈಶ್ಚ ದಿವ್ಯೈಃ
ಶಸ್ತ್ರೈಃ ಪ್ರದೀಪ್ತೈರಭಸಂಪತದ್ಭಿಃ ।
ಕ್ಷಣೇನ ಸರ್ವೇ ವಿಹಿತಾಃ ಪ್ರದೀಪಾ
ವ್ಯದೀಪಯಂಶ್ಚ ಧ್ವಜಿನೀಂ ತದಾಶು ॥ ೧೪ ॥

ಬಹಳ ಬೆಲೆಬಾಳುವ ದಿವ್ಯವಾದ ಆಭರಣಗಳಿಂದಲೂ, ಚಲಿಸುವ ಪ್ರದೀಪ್ತವಾದ ಶಸ್ತ್ರಗಳಿಂದಲೂ ಮತ್ತು ದೀಪಗಳಿಂದಲೂ ಒಂದು ಕ್ಷಣದಲ್ಲಿ ಆ ಸೈನ್ಯವು ಪ್ರಕಾಶಗೊಂಡಿತು.

ಸರ್ವಾಸ್ತು ಸೇನಾ ವ್ಯತಿಸೇವ್ಯಮಾನಾಃ
ಪದಾತಿಭಿಃ ಪಾವಕತೈಲಹಸ್ತೈಃ ।
ಪ್ರಕಾಶ್ಯಮಾನಾ ದದೃಶುರ್ನಿಶಾಯಾಂ
ಯಥಾಂತರಿಕ್ಷೇ ಜಲದಾಸ್ತಡಿದ್ಭಿಃ ॥ ೧೫ ॥

ಕೈಯಲ್ಲಿ ಅಗ್ನಿ ಮತ್ತು ತೈಲವನ್ನು ಹಿಡಿದ ಪದಾತಿಗಳಿಂದ ಪ್ರಕಾಶಿಸಲ್ಪಟ್ಟ ಆ ಸೈನ್ಯವು ರಾತ್ರಿಯ ಕಾಲದಲ್ಲಿ ಅಂತರಿಕ್ಷದಲ್ಲಿ ಮಿಂಚುಗಳಿಂದ ಕೂಡಿದ ಮೋಡಗಳಂತೆ ಇರುವುದನ್ನು ಎಲ್ಲರೂ ನೋಡಿದರು.

ಪ್ರಕಾಶಿತಾಯಾಂ ತು ತಥಾ ಧ್ವಜಿನ್ಯಾಂ
ದ್ರೋಣೋऽಗ್ನಿಕಲ್ಪಃ ಪ್ರತಪನ್ ಸಮಂತಾತ್ ।
ರರಾಜ ರಾಜೇಂದ್ರ ಸುವರ್ಣವರ್ಮಾ
ಮಧ್ಯಂ ಗತಃ ಸೂರ್ಯ ಇವಾಂಶುಮಾಲೀ ॥ ೧೬ ॥

ಎಲೈ ರಾಜೇಂದ್ರನೇ, ಸೈನ್ಯವು ದೀಪಗಳ ಬೆಳಕಿನಲ್ಲಿ ಪ್ರಕಾಶವನ್ನು ಹೊಂದುತ್ತಿರಲು ಅಗ್ನಿಸದೃಶರಾದ ದ್ರೋಣರು ಶತ್ರುಸೈನ್ಯಕ್ಕೆ ಎಲ್ಲ ಕಡೆಗಳಿಂದಲೂ ತಾಪವನ್ನುಂಟು ಮಾಡುತ್ತಾ ಸುವರ್ಣಮಯವಾದ ಕವಚವನ್ನು ಧರಿಸಿ ಸೈನ್ಯದ ಮಧ್ಯದಲ್ಲಿ ಕಿರಣಗಳಿಂದ ಕೂಡಿದ ಸೂರ್ಯನಂತೆ ಶೋಭಿಸಿದರು.

ಜಾಂಬೂನದೇಷ್ವಾಭರಣೇಷು ಚೈವ
ನಿಷ್ಕೇಷು ಶುದ್ಧೇಷು ಶರಾವರೇಷು ।
ಪೀತೇಷು ಶಸ್ತ್ರೇಷು ಚ ಪಾವಕಸ್ಯ
ಪ್ರತಿಪ್ರಭಾಸ್ತತ್ರ ತತೋ ಬಭೂವುಃ ॥ ೧೭ ॥

ಆಗ ಸುವರ್ಣಮಯವಾದ ಆಭರಣಗಳಲ್ಲಿಯೂ, ಸುವರ್ಣಮಯವಾದ ಹಾರಗಳಲ್ಲಿಯೂ, ಶುದ್ಧವಾದ ಗುರಾಣಿಗಳಲ್ಲಿಯೂ, ಜಲ-ತೈಲಾದಿಗಳನ್ನು ಕುಡಿಸಿ ತೀಕ್ಷ್ಣಗೊಳಿಸಿದ ಶಸ್ತ್ರಗಳಲ್ಲಿಯೂ, ಉರಿಯುವ ದೀಪಗಳ ಪ್ರತಿಪ್ರಭೆಗಳು ಉಂಟಾದವು.

ಗದಾಶ್ಚ ಶೈಕ್ಯಾಃ ಪರಿಘಾಶ್ಚ ಶುಭ್ರಾ
ರಥೇಷುಶಕ್ತ್ಯಶ್ಚ ವಿವರ್ತಮಾನಾಃ ।
ಪ್ರತಿಪ್ರಭಾ ರಶ್ಮಿಭಿರಾಜಮೀಢ
ಪುನಃ ಪುನಃ ಸಂಜನಯಂತಿ ದೀಪ್ತಾಃ ॥ ೧೮ ॥

ಎಲೈ ಆಜಮೀಢನೇ, ನೆಲುವಿನಲ್ಲಿಟ್ಟು ರಣರಂಗಕ್ಕೆ ತಂದ ಗದೆಗಳು, ಶುಭ್ರವಾದ ಪರಿಘಗಳು, ಚಲಿಸುವ ರಥ-ಬಾಣ ಮತ್ತು ಶಕ್ತಿಗಳು, ದೀಪದ ಪ್ರಕಾಶವು ತಮ್ಮ ಮೇಲೆ ಬಿದ್ದು ಪ್ರತಿಫಲನವನ್ನುಂಟು ಮಾಡಿ ಪುನಃ ಪುನಃ ಪ್ರಭೆಯನ್ನು ಉಂಟು ಮಾಡಿದವು.

ಛತ್ರಾಣಿ ಬಾಲ(ಣ)ವ್ಯಜನಾನುಷಂಗಾ
ದೀಪ್ತಾ ಮಹೋಲ್ಕಾಶ್ಚ ತಥೈವ ರಾಜನ್ ।
ವ್ಯಾಘೂರ್ಣಮಾನಾಶ್ಚ ಸುವರ್ಣಮಾಲಾ
ವ್ಯಾಯಚ್ಛತಾಂ ತತ್ರ ತದಾ ವಿರೇಜುಃ ॥ ೧೯ ॥

ಎಲೈ ರಾಜನೇ, ಛತ್ರಗಳು, ಬಾಣ(ಲ)ವ್ಯಜನಗಳು, ಬತ್ತಳಿಕೆಗಳು, ಪ್ರಕಾಶಮಾನವಾದ ಮಹೋಲ್ಕೆಗಳು, ಯುದ್ಧವನ್ನು ಮಾಡುವ ಯೋಧರ ಚಲಿಸುವ ಕಂಠದ ಸುವರ್ಣಮಾಲೆಗಳು ಆಗ (ದೀಪದ ಬೆಳಕಿನಲ್ಲಿ) ಶೋಭಿಸಿದವು.

ಶಸ್ತ್ರಪ್ರಭಾಭಿಶ್ಚ ವಿರಾಜಮಾನಂ
ದೀಪಪ್ರಭಾಭಿಶ್ಚ ತದಾ ಬಲಂ ತತ್ ।

ಪ್ರಕಾಶಿತಂ ಚಾಭರಣಪ್ರಭಾಭಿ-
ರ್ಭೃಶಂ ಪ್ರಕಾಶಂ ನೃಪತೇ ಬಭೂವ ॥ ೨೦ ॥

ಎಲೈ ರಾಜನೇ, ಆಗ ಶಸ್ತ್ರಗಳ ಕಾಂತಿಯಿಂದಲೂ, ದೀಪಗಳ ಪ್ರಭೆಯಿಂದಲೂ, ಆಭರಣಗಳ ಪ್ರಭೆಯಿಂದಲೂ ವಿರಾಜಮಾನವಾದ ಆ ಸೈನ್ಯದಲ್ಲಿ ಒಳ್ಳೆಯ ಪ್ರಕಾಶವುಂಟಾಯಿತು.

ಪೀತಾನಿ ಶಸ್ತ್ರಾಣ್ಯಸೃಗುಕ್ಷಿತಾನಿ
ವೀರಾವಧೂತಾನಿ ತನುದ್ರುಹಾಣಿ ।
ದೀಪ್ತಾಂ ಪ್ರಭಾಂ ಪ್ರಾಜನಯಂತ ತತ್ರ
ತಪಾತ್ಯಯೇ ವಿದ್ಯುದಿವಾಂತರಿಕ್ಷೇ ॥ ೨೧ ॥

ವೀರರು ಎಸೆದ ಶರೀರಘಾತಕವಾದ, ರಕ್ತಸಿಕ್ತವಾದ ಪೀತ ಶಸ್ತ್ರಗಳು ಅಲ್ಲಿ ರಣರಂಗದಲ್ಲಿ, ಮಳೆಗಾಲದಲ್ಲಿ ಅಂತರಿಕ್ಷದಲ್ಲಿನ ಮಿಂಚುಗಳಂತೆ ದೀಪ್ತವಾದ ಪ್ರಭೆಯನ್ನುಂಟು ಮಾಡಿದವು.

ಪ್ರಕಂಪಿತಾನಾಮಭಿಘಾತವೇಗೈ-
ರಭಿಘ್ನತಾಂ ಚಾಪತತಾಂ ಜವೇನ ।
ವಕ್ತ್ರಾಣ್ಯಶೋಭಂತ ತದಾ ನರಾಣಾಂ
ವಾಯ್ವೀರಿತಾನೀವ ಮಹಾಂಬುಜಾನಿ ॥ ೨೨ ॥

ವೇಗದಿಂದ ಮುನ್ನುಗ್ಗಿ ಶತ್ರುಗಳನ್ನು ಹೊಡೆದು ಆ ಪ್ರಹಾರದ ವೇಗದಿಂದ ಚಲಿಸುವ ಯೋಧರ ಮುಖಗಳು ವಾಯುವೇಗದಿಂದ ಚಲಿಸುವ ದೊಡ್ಡ ಕಮಲಗಳಂತೆ ಶೋಭಿಸಿದವು.

ಮಹಾವನೇ ದಾವ ಇವ ಪ್ರದೀಪ್ತೇ
ಯಥಾ ಪ್ರಭಾ ಭಾಸ್ಕರಸ್ಯಾಪಿ ನಶ್ಯೇತ್ ।
ತಥಾ ತವಾಸೀದ್ ಧ್ವಜಿನೀ ಪ್ರದೀಪ್ತಾ
ಮಹಾಭಯೇ ಭಾರತ ಭೀಮರೂಪಾ ॥ ೨೩ ॥

ಎಲೈ ಭಾರತನೇ, ದೊಡ್ಡ ಕಾಡಿನಲ್ಲಿ ದಾವಾಗ್ನಿಯು ಜ್ವಲಿಸುವಾಗ ಹೇಗೆ ಸೂರ್ಯನ ಪ್ರಭೆಯು ನಾಶ ಹೊಂದುವುದೋ ಹಾಗೆ ಭಯಂಕರವಾದ ನಿನ್ನ ಸೈನ್ಯವು ಮಹಾಭಯವನ್ನುಂಟು ಮಾಡುವ ಆ ಯುದ್ಧದಲ್ಲಿ ಪ್ರಕಾಶವನ್ನು ಹೊಂದಿತು.

ತತ್ ಸಂಪ್ರದೀಪ್ತಂ ಬಲಮಸ್ಮದೀಯಂ
ನಿಶಾಮ್ಯ ಪಾರ್ಥಾಸ್ತ್ವರಿತಾಸ್ತಥೈವ ।
ಸರ್ವೇಷು ಸೈನ್ಯೇಷು ಪದಾತಿಸಂಘಾನ್
ಅಚೋದಯಂಸ್ತೇಥ ಚಕ್ರುಃ ಪ್ರದೀಪಾನ್ ॥ ೨೪ ॥

ನಮ್ಮ ಸೈನ್ಯವು ಹೀಗೆ ದೀಪಗಳ ಪ್ರಭೆಯಿಂದ ಕೂಡಿರುವುದನ್ನು ನೋಡಿ ಪಾಂಡವರು ಶೀಘ್ರವಾಗಿ ತಮ್ಮ ಸೈನ್ಯಗಳಲ್ಲಿ ಪದಾತಿ ಸಮೂಹವನ್ನು ಪ್ರಚೋದಿಸಿದರು. ಅನಂತರ ಪದಾತಿಗಳು ಅಲ್ಲಿಯೂ ದೀಪಗಳನ್ನು ಬೆಳಗಿಸಿದರು.

ಗಜೇ ಗಜೇ ಸಪ್ತ ಕೃತಾಃ ಪ್ರದೀಪಾ
ರಥೇ ರಥೇ ಚೈವ ದಶ ಪ್ರದೀಪಾಃ ।
ದ್ವಾವಶ್ವಪೃಷ್ಠೇ ಪರಿಪಾರ್ಶ್ವತೋಽನ್ಯೇ
ಧ್ವಜೇಷು ಚಾನ್ಯೇ ಜಘನೇಷು ಚಾನ್ಯೇ ॥ ೨೫ ॥

ಒಂದೊಂದು ಗಜಕ್ಕೂ ಏಳು ದೀಪಗಳು. ಒಂದೊಂದು ರಥಕ್ಕೂ ಹತ್ತು ದೀಪಗಳು. ಒಂದೊಂದು ಅಶ್ವದ ಪಕ್ಕದಲ್ಲಿಯೂ ಎರಡು ದೀಪಗಳು. ಧ್ವಜಗಳ ಬಳಿ ಬೇರೆ ದೀಪಗಳು. ಹಿಂಭಾಗದಲ್ಲಿ ಬೇರೆ ದೀಪಗಳು- ಹೀಗೆ ಇದ್ದವು.

ಸೇನಾಸು ಸರ್ವಾಸು ಚ ಪಾರ್ಶ್ವತೋಽನ್ಯೇ
ಪಶ್ಚಾತ್ ಪುರಸ್ತಾಚ್ಚ ಸಮಂತತಶ್ಚ ।
ಮಧ್ಯೇ ತಥಾನ್ಯೇ ಜ್ವಲಿತಾಗ್ನಿಹಸ್ತಾಃ
ಸೇನಾದ್ವಯೇಽಪಿ ಸ್ಮ ನರಾ ವಿಚೇರುಃ ॥ ೨೬ ॥

ಎಲ್ಲ ಸೈನ್ಯಗಳಲ್ಲಿಯೂ, ಸೈನ್ಯದ ಪಾರ್ಶ್ವದಲ್ಲಿಯೂ, ಮುಂಭಾಗದಲ್ಲಿಯೂ, ಹಿಂಭಾಗದಲ್ಲಿಯೂ, ಸುತ್ತಲೂ, ಮಧ್ಯದಲ್ಲಿಯೂ ಬೇರೆ ಬೇರೆ ಯೋಧರು ಎರಡು ಸೈನ್ಯಗಳಲ್ಲಿಯೂ ಜ್ವಲಿಸುವ ದೀಪಗಳನ್ನು ಹಿಡಿದು ಸಂಚರಿಸಿದರು.

ಸರ್ವೇಷು ಸೈನ್ಯೇಷು ಪದಾತಿಸಂಘಾ
ವ್ಯಾಮಿಶ್ರಿತಾ ಹಸ್ತಿರಥಾಶ್ವವೃಂದೈಃ ।
ಮಧ್ಯೇ ತಥಾನ್ಯೇ ಜ್ವಲಿತಾಗ್ನಿಹಸ್ತಾ
ವ್ಯದೀಪಯನ್ ಪಾಂಡುಸುತಸ್ಯ ಸೇನಾಮ್ ॥ ೨೭ ॥

ಎಲ್ಲಸೈನ್ಯಗಳಲ್ಲಿಯೂ ಪದಾತಿಗಳ ಸಮೂಹವು ಗಜಾಶ್ವ-ರಥಗಳ ಸಮೂಹದಿಂದ ಮಿಶ್ರಣವನ್ನು ಹೊಂದಿತು. ಇನ್ನು ಕೆಲವು ಪುರುಷರು ಕೈಯಲ್ಲಿ ದೀಪಗಳನ್ನು ಹಿಡಿದು ಪಾಂಡವರ ಸೈನ್ಯವನ್ನು ಮಧ್ಯದಲ್ಲಿ ಪ್ರಕಾಶಗೊಳಿಸಿದರು.

ತೇನ ಪ್ರದೀಪ್ತೇನ ತಥಾ ಪ್ರದೀಪ್ತಂ
ಬಲಂ ತದಾಸೀದ್ ಬಲವದ್ ಬಲೇನ ।
ಭಾಃ ಕುರ್ವತಾ ಭಾನುಮತಾ ಗ್ರಹೇಣ
ದಿವಾಕರೇಣಾಗ್ನಿರಿವಾಭಿತಪ್ತಃ ॥ ೨೮ ॥

ಜ್ವಲಿಸುವ ದೀಪಗಳಿಂದ ಪ್ರಕಾಶಿತವಾದ ಆ ಸೈನ್ಯವು ಪ್ರಕಾಶವನ್ನು ಕೊಡುವ ಕಿರಣಗಳಿಂದ ಕೂಡಿದ ಸೂರ್ಯಗ್ರಹವು ಅಗ್ನಿಯಿಂದ ರಕ್ಷಿತವಾದಂತೆ (ಅಗ್ನಿಯಿಂದ ಕೂಡಿದಂತೆ) ಆ ಸೈನ್ಯವು ಬಲಿಷ್ಠವಾಯಿತು.

ತಯೋಃ ಪ್ರಭಾಃ ಪೃಥಿವೀಮಂತರಿಕ್ಷಂ
ಸರ್ವಾ ವ್ಯತಿಕ್ರಮ್ಯ ದಿಶಶ್ಚ ವೃದ್ಧಾಃ ।
ತೇನ ಪ್ರಕಾಶೇನ ಭೃಶಂ ಪ್ರಕಾಶಂ
ಬಭೂವ ತೇಷಾಂ ತವ ಚೈವ ಸೈನ್ಯಮ್ ॥ ೨೯ ॥

ಆ ಪ್ರಕಾಶವು ಭೂಮಿಯನ್ನೂ, ಅಂತರಿಕ್ಷವನ್ನೂ ದಾಟಿ ಎಲ್ಲ ದಿಕ್ಕುಗಳಿಗೂ ಹಬ್ಬಿತು. ಆ ಪ್ರಕಾಶದಿಂದ ನಿನ್ನ ಸೈನ್ಯವೂ ಮತ್ತು ಪರರ ಸೈನ್ಯವೂ ಪ್ರಕಾಶವನ್ನು ಹೊಂದಿದವು.

ತೇನ ಪ್ರಕಾಶೇನ ದಿವಂಗಮೇನ
ಸಂಬೋಧಿತಾ ದೇವಗಣಾಶ್ಚ ರಾಜನ್ ।
ಗಂಧರ್ವಯಕ್ಷಾಸುರಸಿದ್ಧಸಂಘಾಃ
ಸಮಾಗಮನ್ನಪ್ಸರಸಶ್ಚ ಸರ್ವಾಃ ॥ ೩೦ ॥

ಎಲೈ ರಾಜನೇ, ಅಂತರಿಕ್ಷವನ್ನು ಮುಟ್ಟಿದ ಆ ಪ್ರಕಾಶದಿಂದದೇವಸಮೂಹಗಳು ಪ್ರಚೋದಿತವಾಗಿ ಗಂಧರ್ವ-ಯಕ್ಷ-ಉರಗ-ಸಿದ್ಧ ಸಮೂಹಗಳೂ, ಎಲ್ಲ ಅಪ್ಸರೆಯರೂ ಯುದ್ಧವನ್ನು ನೋಡಲು ಬಂದರು.

ತದ್ ದೇವಗಂಧರ್ವಸಮಾಕುಲಂ ಚ
ಯಕ್ಷಾಸುರೇಂದ್ರಾಪ್ಸರಸಾಂ ಗಣೈಶ್ಚ ।
ಹತೈಶ್ಚ ವೀರೈರ್ದಿವಮಾರುಹದ್ಭಿ-
ರಾಯೋಧನಂ ದಿವ್ಯಕಲ್ಪಂ ಬಭೂವ ॥ ೩೧ ॥

ದೇವತೆಗಳಿಂದಲೂ, ಗಂಧರ್ವರಿಂದಲೂ, ಯಕ್ಷರಿಂದಲೂ, ಅಸುರ ಶ್ರೇಷ್ಠರಿಂದಲೂ, ಅಪ್ಸರೆಯರ ಗಣಗಳಿಂದಲೂ, ಹತರಾಗಿ ಅಂತರಿಕ್ಷಮಾರ್ಗವಾಗಿ ಸ್ವರ್ಗಕ್ಕೆ ಹೋಗುವ ವೀರರಿಂದಲೂ ಕೂಡಿದ ಆ ರಣರಂಗವು (ರಣರಂಗದ ಮೇಲಿನ ಆಕಾಶವು ಸ್ವರ್ಗದಂತೆ ಇದ್ದಿತು).

ರಥಾಶ್ವನಾಗಾಕುಲದೀಪದೀಪ್ತಂ
ಸಂರಬ್ಧಯೋಧಾಹತವಿದ್ರುತಾಶ್ವಮ್ ।
ಮಹದ್ಬಲಂ ವ್ಯೂಢರಥಾಶ್ವನಾಗಂ
ಸುರಾಸುರವ್ಯೂಹಸಮಂ ಬಭೂವ ॥ ೩೨ ॥

ರಥಗಳು, ಅಶ್ವಗಳು, ಗಜಗಳು, ಚಲಿಸುವ ದೀಪಗಳಿಂದ ಪ್ರಕಾಶವನ್ನು ಹೊಂದಿದ, ರಥಾಶ್ವ-ಗಜಗಳಿಂದ ಕೂಡಿದ, ಕೋಪಗೊಂಡ ಯೋಧರಿಂದ ಪ್ರಹರಿಸಲ್ಪಟ್ಟು ಓಡುವ ಅಶ್ವಗಳಿಂದ ಕೂಡಿದ, ವೀರರಿಂದ ಏರಲ್ಪಟ್ಟ ರಥಾಶ್ವ-ಗಜಗಳಿಂದ ಕೂಡಿದ, ಆ ದೊಡ್ಡ ಸೈನ್ಯವು ದೇವಾಸುರ ಸೈನ್ಯ ಸಮೂಹಕ್ಕೆ ಸಮವಾಗಿದ್ದಿತು.

ತಚ್ಚಕ್ತಿಸಂಘಾಕುಲಚಂಡವಾತಂ
ಮಹಾರಥಾಭ್ರಂ ರಥವಾಜಿಘೋಷಮ್ ।
ಶಸ್ತ್ರೌಘವರ್ಷಂ ರುಧಿರಾಂಬುಧಾರಂ
ನಿಶಿ ಪ್ರವೃತ್ತಂ ನರದೇವ ಯುದ್ಧಮ್ ॥ ೩೩ ॥

ಎಲೌ ನರದೇವನೇ, ನಿಬಿಡವಾದ ಶಕ್ತಿಸಮೂಹಗಳೆಂಬ ಚಂಡಮಾರುತದಿಂದ ಕೂಡಿದ, ಮಹಾರಥರೆಂಬ ಮೋಡಗಳಿಂದ ಕೂಡಿದ, ರಥಾಶ್ವಗಳ ಘೋಷವೆಂಬ ಗುಡುಗುಗಳಿಂದ ಕೂಡಿದ, ಶಸ್ತ್ರಸಮೂಹವೆಂಬ ಮಳೆಯಿಂದ ಕೂಡಿದ, ರಕ್ತವೆಂಬ ಜಲಧಾರೆಯಿಂದ ಕೂಡಿದ ಯುದ್ಧವು ರಾತ್ರಿಯಲ್ಲಿ ಪ್ರವೃತ್ತವಾಯಿತು.

ತಸ್ಮಿನ್ ಮಹಾಗ್ನಿಪ್ರತಿಮೋ ಮಹಾತ್ಮಾ
ಸಂತಾಪಯನ್ ಪಾಂಡವಾನ್ ವಿಪ್ರಮುಖ್ಯಃ ।
ಗಭಸ್ತಿಭಿರ್ಮಧ್ಯಗತೋ ಯಥಾರ್ಕೋ
ವರ್ಷಾತ್ಯಯೇ ತದ್ವದಭೂನ್ನರೇಂದ್ರ ॥ ೩೪ ॥

ಎಲೈ ರಾಜೇಂದ್ರನೇ, ಆ ಯುದ್ಧದಲ್ಲಿ ಮಹಾಗ್ನಿಸದೃಶರೂ, ಮಹಾತ್ಮರೂ, ಬ್ರಾಹ್ಮಣಶ್ರೇಷ್ಠರೂ ಆದ ದ್ರೋಣರು ಪಾಂಡವರನ್ನು ಸಂತಾಪಗೊಳಿಸುತ್ತಾ ಬೇಸಿಗೆಯ ಕಾಲದಲ್ಲಿ ಮಧ್ಯಂದಿನದಲ್ಲಿ ಆಕಾಶ ಮಧ್ಯದಲ್ಲಿ ತನ್ನ ಕಿರಣಗಳಿಂದ ಕೂಡಿದ ಸೂರ್ಯನಂತೆ ಶೋಭಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕೋನಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ನಲವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತನೆಯ ಅಧ್ಯಾಯ

ಸಂಕುಲಯುದ್ಧ.

ಸಂಜಯಃ

ಪ್ರಕಾಶಿತೇ ತಥಾ ಲೋಕೇ ರಜಸಾ ಚ ತಮೋವೃತೇ ।
ಸಮಾಜಗ್ಮುರಥೋ ವೀರಾಃ ಪರಸ್ಪರವಧೈಷಿಣಃ ॥ ೧ ॥

ಸಂಜಯ– ಆ ರೀತಿಯಲ್ಲಿ ಲೋಕಗಳು ಪ್ರಕಾಶವಾಗಿ ಸೈನ್ಯದ ಧೂಳಿನಿಂದ ಆವರಿಸಲ್ಪಟ್ಟಿರಲು ಪರಸ್ಪರ ವಧೆಯನ್ನು ಬಯಸುವ ವೀರರು ರಣರಂಗದಲ್ಲಿ ಸೇರಿದರು.

ತೇ ಸಮೇತ್ಯ ರಣೇ ರಾಜನ್ ಶಸ್ತ್ರಪ್ರಾಸಾಸಿಧಾರಿಣಃ ।
ಪರಸ್ಪರಮುದೈಕ್ಷಂತ ಪರಸ್ಪರಕೃತಾಗಸಃ ॥ ೨ ॥

ಎಲೈ ರಾಜನೇ, ಪರಸ್ಪರವಾಗಿ ಅಪಚಾರವನ್ನು ಮಾಡಿದ ಶಸ್ತ್ರ- ಪ್ರಾಸ- ಖಡ್ಗಧಾರಿಗಳಾದ ಅವರು ರಣರಂಗದಲ್ಲಿ ಪರಸ್ಪರವಾಗಿ ನೋಡಿದರು.

ಪ್ರದೀಪಾನಾಂ ಸಹಸ್ರೈಶ್ಚ ದೀಪ್ಯಮಾನೈಃ ಸಮಂತತಃ ।
ವಿರರಾಜ ತದಾ ಭೂಮಿರ್ದ್ಯೌರ್ಗ್ರಹೈರಿವ ಭಾರತ ॥ ೩ ॥

ಎಲೈ ಭಾರತನೇ, ಸಹಸ್ರಾರು ಪ್ರದೀಪಗಳಿಂದ ಎಲ್ಲ ಕಡೆಯಲ್ಲಿಯೂ ಪ್ರಕಾಶಮಾನವಾದ ಭೂಮಿಯು ಗ್ರಹಗಳಿಂದ ಕೂಡಿದ ಅಂತರಿಕ್ಷದಂತೆ ಶೋಭಿಸಿತು.

ಉಲ್ಕಾಶತೈಃ ಪ್ರಜ್ವಲಿತೈ ರಣಭೂಮಿರ್ವ್ಯರಾಜತ ।
ದಹ್ಯಮಾನೇವ ಲೋಕಾನಾಮಭಾವೇ ವೈ ವಸುಂಧರಾ ॥ ೪ ॥

ಪಂಜುಗಳು ಪ್ರಜ್ವಲಿಸಲ್ಪಡುತ್ತಿರಲು ರಣಭೂಮಿಯು ಲೋಕಗಳ ನಾಶಕ್ಕಾಗಿ ಜ್ವಲಿಸುವ ಭೂಮಿಯಂತೆ ವಿರಾಜಿಸಿತು.

ಪ್ರಾದೀಪ್ಯಂತ ದಿಶಃ ಸರ್ವಾಃ ಪ್ರದೀಪೈಸ್ತೈಃ ಸಮಂತತಃ ।
ವರ್ಷಾಪ್ರದೋಷೇ ಖದ್ಯೋತೈರ್ವೃತಾ ವೃಕ್ಷಾ ಇವಾಬಭುಃ ॥ ೫ ॥

ಎಲ್ಲಕಡೆಗಳಲ್ಲಿಯೂ ಇರುವ ಆ ದೀಪಗಳಿಂದ ಎಲ್ಲ ದಿಕ್ಕುಗಳು ಮಳೆಗಾಲದಲ್ಲಿ ಮಿಣುಕುಹುಳುಗಳಿಂದ ತುಂಬಿದ ವೃಕ್ಷಗಳಂತೆ ಶೋಭಿಸಿದವು.

ಅಸಜ್ಜಂತ ತತೋ ವೀರಾ ವೀರೇಷ್ವೇವ ಪೃಥಕ್ ಪೃಥಕ್ ।
ನಾಗಾ ನಾಗೈಃ ಸಮಾಜಗ್ಮುಸ್ತುರಗಾಃ ಸಹ ವಾಜಿಭಿಃ ॥ ೬ ॥

ರಥಾ ರಥವರೈರೇವ ಸಮಾಜಗ್ಮುರ್ಮುದಾನ್ವಿತಾಃ ।
ತಸ್ಮಿನ್ ರಾತ್ರಿಮುಖೇ ಘೋರೇ ಪುತ್ರಸ್ಯ ತವ ಶಾಸನಾತ್ ॥ ೭ ॥

ಆಗ ವೀರರು ವೀರರೊಡನೆ ಯುದ್ಧದಲ್ಲಿ ಬೇರೆ ಬೇರೆಯಾಗಿ ಸಂಸಕ್ತರಾದರು. ಗಜಗಳು ಗಜಗಳ ಜೊತೆಯಲ್ಲಿಯೂ, ಅಶ್ವಗಳು ಅಶ್ವಗಳ ಜೊತೆಯಲ್ಲಿಯೂ, ರಥಗಳು ಶ್ರೇಷ್ಠ ರಥಗಳ ಜೊತೆಯಲ್ಲಿಯೂ ಕೂಡಿ, ಸಂತೋಷದಿಂದ ನಿನ್ನ ಪುತ್ರನ ಶಾಸನದಂತೆ ಆ ಘೋರವಾದ ರಾತ್ರಿಯ ಆರಂಭ ಕಾಲದಲ್ಲಿ ಪರಸ್ಪರವಾಗಿ ಎದುರಿಸಿದರು.

ತತೋಽರ್ಜುನೋ ಮಹಾರಾಜ ಕೌರವಾಣಾಮನೀಕಿನೀಮ್ ।
ವ್ಯಧಮತ್ ತ್ವರಯಾ ಯುಕ್ತಃ ಕ್ಷಪಯನ್ ಸರ್ವಪಾರ್ಥಿವಾನ್ ॥ ೮ ॥

ಎಲೈ ಮಹಾರಾಜನೇ, ಆಗ ಅರ್ಜುನನು ಎಲ್ಲ ರಾಜರನ್ನೂ ನಾಶಗೊಳಿಸುತ್ತಾ ತ್ವರೆಯಿಂದ ಕೂಡಿದವನಾಗಿ ಕೌರವರ ಸೇನೆಯನ್ನು ನಾಶಪಡಿಸಿದನು.

ಧೃತರಾಷ್ಟ್ರಃ

ತಸ್ಮಿನ್ ಪ್ರವಿಷ್ಟೇ ಸಂರಬ್ಧೇ ಮಮ ಪುತ್ರಸ್ಯ ವಾಹಿನೀಮ್ ।
ಅಮೃಷ್ಯಮಾಣೇ ದುರ್ಧರ್ಷೇ ಕಿಂ ವ ಆಸೀನ್ಮನಸ್ತದಾ ॥ ೯ ॥

ಧೃತರಾಷ್ಟ್ರ- ಸೋಲಿಸಲು ಅಸಾಧ್ಯನಾದ ನನ್ನ ಪುತ್ರರನ್ನು ಸಹಿಸದ ಅರ್ಜುನನು ಕೋಪಗೊಂಡು ನನ್ನ ಪುತ್ರನ ಸೈನ್ಯವನ್ನು ಪ್ರವೇಶಿಸಿದಾಗ ನಿಮ್ಮ ಮನಸ್ಸು ಹೇಗಿದ್ದಿತು?

ಕಿಮಮನ್ಯಂತ ಸೈನ್ಯಾನಿ ಪ್ರವಿಷ್ಟೇ ಶತ್ರುತಾಪನೇ ।
ದುರ್ಯೋಧನಶ್ಚ ಕಿಂ ಕೃತ್ಯಂ ಪ್ರಾಪ್ತಕಾಲಮಮನ್ಯತ ॥ ೧೦ ॥

ಶತ್ರುತಾಪನನಾದ ಅರ್ಜುನನು ಪ್ರವೇಶ ಮಾಡಿದಾಗ ಸೈನ್ಯಗಳು ಹೇಗೆ ಯೋಚಿಸಿದವು? ದುರ್ಯೋಧನನಾದರೂ ಆ ಕಾಲದಲ್ಲಿ ಏನನ್ನು ಮಾಡುವುದು ಯೋಗ್ಯವೆಂದು ಭಾವಿಸಿದನು?

ಕೇ ಚೈನಂ ಸಮರೇ ವೀರಂ ಪ್ರತ್ಯುದ್ಯಯುರರಿಂದಮಮ್ ।
ಕೇಽರಕ್ಷನ್ ದಕ್ಷಿಣಂ ಚಕ್ರಂ ಕೇ ಚ ದ್ರೋಣಸ್ಯ ಸವ್ಯತಃ ॥ ೧೧ ॥

ಕೇ ಪೃಷ್ಠತೋಽಸ್ಯ ಹ್ಯಭವನ್ ವೀರಾ ವೀರಸ್ಯ ಯುದ್ಧ್ಯತಃ ।
ಕೇ ಪುರಸ್ತಾದಗಚ್ಛಂತ ನಿಘ್ನತಃ ಶಾತ್ರವಾನ್ ರಣೇ ॥ ೧೨ ॥

ಅರಿಂದಮನಾದ ವೀರನಾದ ಅರ್ಜುನನನ್ನು ಎದುರಿಸಲು ಯಾರು ಮುಂದೆ ಸಾಗಿದರು? ದ್ರೋಣರ ಬಲಭಾಗದ ಸೈನ್ಯವನ್ನು ಮತ್ತು ಎಡಭಾಗದ ಸೈನ್ಯವನ್ನು

ಯಾರು ರಕ್ಷಿಸಿದರು? ಯುದ್ಧವನ್ನು ಮಾಡುವ ವೀರರಾದ ದ್ರೋಣರ ಹಿಂಭಾಗದಲ್ಲಿ ಯಾವ ವೀರರಿದ್ದರು? ರಣರಂಗದಲ್ಲಿ ಶತ್ರುಗಳನ್ನು ಸಂಹಾರ ಮಾಡುವ ಅವರ ಮುಂಭಾಗದಲ್ಲಿ ಯಾರು ನಡೆದರು?

ಯತ್ ಪ್ರಾವಿಶನ್ ಮಹೇಷ್ವಾಸಃ ಪಾಂಚಾಲಾನಪರಾಜಿತಃ ।
ನೃತ್ಯನ್ನಿವ ನರವ್ಯಾಘ್ರೋ ರಥಮಾರ್ಗೇಷು ವೀರ್ಯವಾನ್ ॥ ೧೩ ॥

ದದಾಹ ಚ ಶರೈರ್ದ್ರೋಣಃ ಪಾಂಚಾಲಾನಾಂ ರಥವ್ರಜಾನ್ ।
ಧೂಮಕೇತುರಿವ ಕ್ರುದ್ಧಃ ಸ ಕಥಂ ಮೃತ್ಯುಮೀಯಿವಾನ್ ॥ ೧೪ ॥

ಅಪರಾಜಿತರಾದ, ಮಹಾಧನುರ್ಧಾರಿಗಳಾದ, ಪರಾಕ್ರಮಶಾಲಿಗಳಾದ, ರಥಮಾರ್ಗಗಳಲ್ಲಿ ಗರ್ಜಿಸುವಂತೆ ನಡೆಯುವ, ನರವ್ಯಾಘ್ರರಾದ ದ್ರೋಣರು ಪಾಂಡವರ ಸೈನ್ಯವನ್ನು ಪ್ರವೇಶಿಸಿ, ಕೋಪಗೊಂಡ ಅಗ್ನಿಯಂತೆ ಪಾಂಚಾಲರ ರಥಸಮೂಹಗಳನ್ನು ತಮ್ಮ ಬಾಣಗಳಿಂದ ದಹಿಸುತ್ತಿದ್ದಾಗ ಅವರು ಹೇಗೆ ಮೃತ್ಯುವಶರಾದರು?

ಅವ್ಯಗ್ರಾನೇವ ಹಿ ಪರಾನ್ ಕಥಯಸ್ಯಪರಾಜಿತಾನ್ ।
ಹತಾಂಶ್ಚೈವ ವಿಷಣ್ಣಾಂಶ್ಚ ವಿಪ್ರಕೀರ್ಣಾಂಶ್ಚ ಶಂಸಸಿ ।
ರಥಿನೋ ವಿರಥಾಂಶ್ಚೈವ ಕೃತಾನ್ ಯುದ್ಧೇಷು ಮಾಮಕಾನ್ ॥ ೧೫ ॥

ಎಲೈ ಸಂಜಯನೇ, ನೀನು ಶತ್ರುಗಳಾದ ಪಾಂಡವರನ್ನು ಅಪರಾಜಿತರೆಂದೂ, ಯಾವ ಹಾನಿಯೂ ಇಲ್ಲದವರೆಂದೂ ಹೇಳುತ್ತಿದ್ದೀಯೆ. ನನ್ನ ಸೈನಿಕರು ಹತರಾದರೆಂದೂ, ವಿಷಾದದಿಂದ ಕೂಡಿದವರೆಂದೂ, ಚದುರಿಹೋದವರೆಂದೂ, ರಥಿಕರು ರಥಹೀನರಾಗಿ ಮಾಡಲ್ಪಟ್ಟವರೆಂದೂ ಹೇಳುತ್ತಿದ್ದೀಯೆ.

ಸಂಜಯಃ

ದ್ರೋಣಸ್ಯ ಮತಮಾಜ್ಞಾಯ ಯೋದ್ಧುಕಾಮಸ್ಯ ತಾಂ ನಿಶಾಮ್ ।
ದುರ್ಯೋಧನೋ ಮಹಾರಾಜ ವಶ್ಯಾನ್ ಭ್ರಾತೄನಭಾಷತ ॥ ೧೬ ॥

ವಿಕರ್ಣಂ ಚಿತ್ರಸೇನಂ ಚ ಮಹಾಬಾಹುಂ ಚ ಕೌರವಮ್ ।
ದುರ್ಧರ್ಷಂ ದೀರ್ಘಬಾಹುಂ ಚ ಯೇ ಚ ತೇಷಾಂ ಪದಾನುಗಾಃ ॥

ದ್ರೋಣಂ ಯತ್ತಾಃ ಪರಾಕ್ರಾಂತಾಃ ಸರ್ವೇ ರಕ್ಷತ ಪೃಷ್ಠತಃ ।
ಹಾರ್ದಿಕ್ಯೋ ದಕ್ಷಿಣಂ ಚಕ್ರಂ ಶಲ್ಯಶ್ಚೈವೋತ್ತರಂ ತಥಾ ॥ ೧೮ ॥

ಸಂಜಯ– ಆ ರಾತ್ರಿಯಲ್ಲಿ ಯುದ್ಧವನ್ನು ಮಾಡಬೇಕೆಂಬ ದ್ರೋಣರ ಅಭಿಪ್ರಾಯವನ್ನು ತಿಳಿದ ಮಹಾರಾಜನಾದ ದುರ್ಯೋಧನನು ತನ್ನ ವಶವರ್ತಿಗಳಾದ ತಮ್ಮಂದಿರನ್ನೂ, ವಿಕರ್ಣನನ್ನೂ (ಈ ವಿಕರ್ಣನು ದುರ್ಯೋಧನನ ತಮ್ಮನಲ್ಲ), ಕೌರವರಾದ ಚಿತ್ರಸೇನನನ್ನೂ, ಮಹಾಬಾಹುವನ್ನೂ, ದುರ್ಧರ್ಷನನ್ನೂ, ದೀರ್ಘಬಾಹುವನ್ನೂ ಮತ್ತು ಅವರ ಅನುಯಾಯಿಗಳನ್ನೂ ಕುರಿತು, ನೀವೆಲ್ಲರೂ ಎಚ್ಚರಿಕೆಯಿಂದಿದ್ದು ಪರಾಕ್ರಮವನ್ನು ತೋರಿಸಿ ದ್ರೋಣರನ್ನು ಹಿಂದಿನಿಂದ ರಕ್ಷಿಸಿ. ಹಾರ್ದಿಕ್ಯನಾದ ಕೃತವರ್ಮನು ದಕ್ಷಿಣ ಸೈನ್ಯವನ್ನೂ, ಶಲ್ಯನು ಉತ್ತರಭಾಗದ ಸೈನ್ಯವನ್ನೂ ರಕ್ಷಿಸಲಿ ಎಂದು ಹೇಳಿದನು.

ತ್ರಿಗರ್ತಾನಾಂ ಚ ಯೇ ಶೂರಾ ಹತಶಿಷ್ಟಾ ಮಹಾರಥಾಃ ।
ತಾಂಶ್ಚೈವ ಸರ್ವಾನ್ ಪುತ್ರಸ್ತೇ ಸಮಚೋದಯದಗ್ರತಃ ॥ ೧೯ ॥

ಆಚಾರ್ಯೋ ಹಿ ಸುಸಂಯತ್ತೋ ಭೃಶಂ ಯತ್ತಾಶ್ಚ ಪಾಂಡವಾಃ ।
ತಂ ರಕ್ಷತ ಸುಸಂಯತ್ತಾ ನಿಘ್ನಂತಂ ಶಾತ್ರವಾನ್ ರಣೇ ॥ ೨೦ ॥

ದ್ರೋಣೋ ಹಿ ಬಲವಾನ್ ಯುದ್ಧೇ ಕ್ಷಿಪ್ರಹಸ್ತಃ ಪರಾಕ್ರಮೀ ।
ನಿರ್ಜಯೇತ್ ತ್ರಿದಶಾನ್ ಯುದ್ಧೇ ಕಿಮು ಪಾರ್ಥಾನ್ ಸಸೋಮಕಾನ್ ॥

ಮೃತರಾಗಿ ಉಳಿದ ಶೂರರಾದ ತ್ರಿಗರ್ತರ ಮಹಾರಥರೆಲ್ಲರನ್ನೂ ಕುರಿತು ನಿನ್ನ ಪುತ್ರನಾದ ದುರ್ಯೋಧನನು ಮುಂಭಾಗದಲ್ಲಿರುವಂತೆ ಪ್ರಚೋದಿಸಿದನು. ಆಚಾರ್ಯರಾದ ದ್ರೋಣರು ಸನ್ನದ್ಧರಾಗಿದ್ದಾರೆ. ಪಾಂಡವರೂ ಬಹಳ ಪ್ರಯತ್ನಶೀಲರಾಗಿದ್ದಾರೆ. ಶತ್ರುಗಳನ್ನು ಸಂಹರಿಸುವ ದ್ರೋಣರನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಿ. ದ್ರೋಣರು ಯುದ್ಧದಲ್ಲಿ ಬಲಿಷ್ಠರಾದವರು, ಕ್ಷಿಪ್ರಹಸ್ತರಾದವರು ಮತ್ತು ಪರಾಕ್ರಮಶಾಲಿಗಳು. ಅವರು ಯುದ್ಧದಲ್ಲಿ ದೇವತೆಗಳನ್ನೂ ಗೆದ್ದಾರು. ಇನ್ನು ಸೋಮಕರಿಂದ ಸಹಿತರಾದ ಪಾಂಡವರನ್ನು ಗೆಲ್ಲುವುದು ಯಾವ ದೊಡ್ಡ ವಿಷಯ?

ತೇ ಯೂಯಂ ಸಹಿತಾಃ ಸರ್ವೇ ಭೃಶಂ ಯತ್ತಾ ಮಹಾರಥಾಃ ।
ದ್ರೋಣಂ ರಕ್ಷತ ಪಾಂಚಾಲ್ಯಾದ್ ಧೃಷ್ಟದ್ಯುಮ್ನಾನ್ಮಹಾರಥಾತ್ ॥ ೨೨ ॥

ಪಾಂಡವೇಯೇಷು ಸೈನ್ಯೇಷು ಯೋಧಂ ಪಶ್ಯಾಮ್ಯಹಂ ನ ತಮ್ ।
ಯೋ ಜಯೇತ ರಣೇ ದ್ರೋಣಂ ಧೃಷ್ಟದ್ಯುಮ್ನಾದೃತೇ ನೃಪಾಃ ॥ ೨೩ ॥

ತಸ್ಯ ಸರ್ವಾತ್ಮನಾ ಮನ್ಯೇ ಭಾರದ್ವಾಜಸ್ಯ ರಕ್ಷಣಮ್ ।
ಸ ಗುಪ್ತಃ ಸೋಮಕಾನ್ ಹನ್ಯಾತ್ ಸೃಂಜಯಾಂಶ್ಚ ಸರಾಜಕಾನ್ ॥೨೪॥

ಆದ್ದರಿಂದ ಎಲೈ ಮಹಾರಥರೇ, ನೀವೆಲ್ಲರೂ ಎಚ್ಚರಿಕೆಯಿಂದ ಒಟ್ಟುಗೂಡಿ ದ್ರೋಣರನ್ನು ಮಹಾರಥನಾದ ಪಾಂಚಾಲ ದೇಶದ ಧೃಷ್ಟದ್ಯುಮ್ನನಿಂದ ರಕ್ಷಿಸಿ. ಎಲೈ ರಾಜರೇ, ಪಾಂಡವರ ಸೈನ್ಯದಲ್ಲಿ ಧೃಷ್ಟದ್ಯುಮ್ನನನ್ನೊಬ್ಬನನ್ನು ಬಿಟ್ಟು ಯುದ್ಧದಲ್ಲಿ ದ್ರೋಣರನ್ನು ಗೆಲ್ಲುವ ಯಾವನನ್ನೂ ನಾನು ಕಾಣುವುದಿಲ್ಲ. ಆದ್ದರಿಂದ ಅಂತಹ ದ್ರೋಣರ ರಕ್ಷಣೆಯನ್ನು ಸರ್ವಪ್ರಕಾರದಿಂದಲೂ ಮಾಡಿ. ರಕ್ಷಿಸಲ್ಪಟ್ಟ ದ್ರೋಣರು ರಾಜರಿಂದ ಕೂಡಿದ ಸೋಮಕರನ್ನೂ, ಸೃಂಜಯರನ್ನೂ ಕೊಂದಾರು ಎಂದು ಹೇಳಿದನು.

ಸೃಂಜಯೇಷ್ವಥ ಸರ್ವೇಷು ನಿಹತೇಷು ಚಮೂಮುಖೇ ।
ಧೃಷ್ಟದ್ಯುಮ್ನಂ ರಣೇ ದ್ರೌಣಿರ್ನಾಶಯಿಷ್ಯತ್ಯಸಂಶಯಮ್ ॥ ೨೫ ॥

ತಥಾರ್ಜುನಂ ರಣೇ ಕರ್ಣೋ ವಿಜೇಷ್ಯತಿ ಮಹಾರಥಃ ।
ಭೀಮಸೇನಮಹಂ ಚಾಪಿ ಯುದ್ಧೇ ಜೇಷ್ಯಾಮಿ ದಂಸಿತಃ ॥ ೨೬ ॥

ಸೋಽಯಂ ಮಮ ಜಯೋ ವ್ಯಕ್ತಂ ದೀರ್ಘಕಾಲಂ ಭವಿಷ್ಯತಿ ।
ತಸ್ಮಾದ್ ರಕ್ಷತ ಸಂಗ್ರಾಮೇ ದ್ರೋಣಮೇವ ಮಹಾರಥಾಃ ॥ ೨೭ ॥

ಸೇನಾಮುಖದಲ್ಲಿ ಎಲ್ಲ ಸೃಂಜಯರೂ ಹತರಾದ ಮೇಲೆ ಅಶ್ವತ್ಥಾಮರು ಧೃಷ್ಟದ್ಯುಮ್ನನನ್ನು ಕೊಲ್ಲುವರು, ಇದರಲ್ಲಿ ಸಂಶಯವಿಲ್ಲ. ಹಾಗೆಯೇ ಮಹಾರಥನಾದ ಕರ್ಣನು ಯುದ್ಧದಲ್ಲಿ ಅರ್ಜುನನನ್ನು ಗೆಲ್ಲುವನು. ನಾನೂ ಯುದ್ಧದಲ್ಲಿ ಸನ್ನದ್ಧನಾಗಿ ಭೀಮಸೇನನನ್ನು ಗೆಲ್ಲುವೆನು. ಆಗ ನನಗೆ ಉಂಟಾಗುವ ಜಯವು ದೀರ್ಘಕಾಲದವರೆಗೆ ಸ್ಪಷ್ಟವಾಗಿ ಇರುವುದು. ಆದ್ದರಿಂದ ಎಲೈ ಮಹಾರಥರೇ, ನೀವೆಲ್ಲರೂ ಯುದ್ಧದಲ್ಲಿ ದ್ರೋಣರನ್ನು ರಕ್ಷಿಸಿ (ಎಂದು ಹೇಳಿದನು).

ಸಂಜಯಃ

ಇತ್ಯುಕ್ತ್ವಾ ಭರತಶ್ರೇಷ್ಠ ಪುತ್ರೋ ದುರ್ಯೋಧನಸ್ತವ ।
ವ್ಯಾದಿದೇಶ ತತಃ ಸೈನ್ಯಂ ತಸ್ಮಿಂಸ್ತಮಸಿ ದಾರುಣೇ ॥ ೨೮ ॥

ಸಂಜಯ– ಎಲೈ ಭರತಶ್ರೇಷ್ಠನೇ, ನಿನ್ನ ಪುತ್ರನಾದ ದುರ್ಯೋಧನನು ಹೀಗೆ ಹೇಳಿ ಅನಂತರ ತನ್ನ ಸೈನ್ಯಕ್ಕೆ ಆ ಕತ್ತಲೆಯಲ್ಲಿ ದಾರುಣವಾದ ಯುದ್ಧವನ್ನು ಮಾಡಲು ಆಜ್ಞಾಪಿಸಿದನು.

ತತಃ ಪ್ರವವೃತೇ ಯುದ್ಧಂ ರಾತ್ರೌ ತದ್ ಭರತರ್ಷಭ ।
ಉಭಯೋಃ ಸೇನಯೋರ್ಘೋರಂ ವಿಜಯಂ ಪ್ರತಿ ಕಾಂಕ್ಷಿಣೋಃ ॥

ಎಲೈ ಭರತಶ್ರೇಷ್ಠನೇ, ಆಗ ಆ ರಾತ್ರಿಯಲ್ಲಿ ಜಯವನ್ನು ಆಶಿಸುವ ಎರಡೂ ಸೈನ್ಯಗಳಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು.

ಅರ್ಜುನಃ ಕೌರವಂ ಸೈನ್ಯಮರ್ಜುನಂ ಚಾಪಿ ಕೌರವಾಃ ।
ನಾನಾಶಸ್ತ್ರಸಮಾವಾಪೈರನ್ಯೋನ್ಯಂ ಪರ್ಯಪೀಡಯನ್ ॥ ೩೦ ॥

ಅರ್ಜುನನು ಕೌರವರ ಸೈನ್ಯವನ್ನೂ ಮತ್ತು ಕೌರವರು ಅರ್ಜುನನನ್ನೂ ನಾನಾ ಶಸ್ತ್ರಗಳ ಪ್ರಹಾರದಿಂದ ಪರಸ್ಪರವಾಗಿ ಪೀಡಿಸಿದರು.

ದ್ರೌಣಿಃ ಪಾಂಚಾಲರಾಜಾನಂ ಭಾರದ್ವಾಜಶ್ಚ ಸೃಂಜಯಾನ್ ।
ಛಾದಯಾಮಾಸತುಃ ಸಂಖ್ಯೇ ಶರೈಃ ಸನ್ನತಪರ್ವಭಿಃ ॥ ೩೧ ॥

ಪಾಂಡುಪಾಂಚಾಲಸೇನಾನಾಂ ಕೌರವಾಣಾಂ ಚ ಮಾರಿಷ ।
ಆಸೀನ್ನಿಷ್ಪಾನಕೋ ಘೋರೋ ನಿಘ್ನತಾಮಿತರೇತರಮ್ ॥ ೩೨ ॥

ರಣರಂಗದಲ್ಲಿ ಅಶ್ವತ್ಥಾಮರು ಪಾಂಚಾಲರಾಜನಾದ ದ್ರುಪದನನ್ನೂ, ದ್ರೋಣರು ಸೃಂಜಯರನ್ನೂ ಬಾಗಿದ ತುದಿಯುಳ್ಳ ಬಾಣಗಳಿಂದ ಆಚ್ಛಾದಿಸಿದರು. ಎಲೈ ಪೂಜ್ಯನೇ, ಪರಸ್ಪರವಾಗಿ ಪ್ರಹಾರ ಮಾಡುವ ಪಾಂಡವರ ಮತ್ತು ಪಾಂಚಾಲರ ಸೈನ್ಯಗಳಲ್ಲಿಯೂ, ಕೌರವರ ಸೈನ್ಯಗಳಲ್ಲಿಯೂ ಘೋರವಾದ ನಾದವು ಕೇಳಿಬಂದಿತು.

ನೈವಾಸ್ಮಾಭಿರ್ನ ಪೂರ್ವೈರ್ನೋ ದೃಷ್ಟಪೂರ್ವಂ ತಥಾವಿಧಮ್ ।
ಯುದ್ಧಂ ಯಾದೃಶಮೇವಾಸೀತ್ ತಾಂ ರಾತ್ರಿಂ ಸುಮಹಾಭಯಮ್ ॥

ಆ ರಾತ್ರಿಯಲ್ಲಿ ಅವರಿಗೆ ಎಂತಹ ಭಯಂಕರವಾದ ಯುದ್ಧವು ನಡೆಯಿತೋ ಅಂತಹ ಯುದ್ಧವನ್ನು ನಾವಾಗಲೀ, ನಮ್ಮ ಪೂರ್ವಜರಾಗಲೀ ನೋಡಿರಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂದನೆಯ ಅಧ್ಯಾಯ

ಕೃತವರ್ಮನಿಂದ ಯುಧಿಷ್ಠಿರನ ಪರಾಜಯ.

ಸಂಜಯಃ

ವರ್ತಮಾನೇ ತಥಾ ರೌದ್ರೇ ರಾತ್ರಿಯುದ್ಧೇ ವಿಶಾಂಪತೇ ।
ಸರ್ವಭೂತಕ್ಷಯಕರೇ ಧರ್ಮಪುತ್ರೋ ಯುಧಿಷ್ಠಿರಃ ॥ ೧ ॥

ಅಬ್ರವೀತ್ ಪಾಂಡವಾಂಶ್ಚೈವ ಪಾಂಚಾಲಾಂಶ್ಚ ಸಸೋಮಕಾನ್ ।
ಅಭ್ಯದ್ರವತ ಗಚ್ಛಧ್ವಂ ದ್ರೋಣಮೇವ ಜಿಘಾಂಸಯಾ ॥ ೨ ॥

ಸಂಜಯ– ಎಲೈ ರಾಜನೇ, ಸರ್ವಭೂತಕ್ಷಯಕಾರಕವಾದ ಘೋರವಾದ ರಾತ್ರಿಯುದ್ಧವು ಹಾಗೆ ನಡೆಯುತ್ತಿರಲು ಧರ್ಮಪುತ್ರನಾದ ಯುಧಿಷ್ಠಿರನು ಪಾಂಚಾಲರಿಂದ ಮತ್ತು ಸೋಮಕರಿಂದ ಸಹಿತರಾದ ಪಾಂಡವರನ್ನು ಕುರಿತು, ದ್ರೋಣರನ್ನು ಕೊಲ್ಲುವ ಇಚ್ಛೆಯಿಂದ ದ್ರೋಣರ ಮೇಲೆಯೇ ಮುನ್ನುಗ್ಗಿ ಎಂದು ಹೇಳಿದನು.

ರಾಜ್ಞಸ್ತೇ ವಚನಾದ್ರಾಜನ್ ಪಾಂಚಾಲಾಃ ಸೋಮಕಾಸ್ತಥಾ ।
ದ್ರೋಣಮೇವಾಭ್ಯವರ್ತಂತ ನದಂತೋ ಭೈರವಾನ್ ರವಾನ್ ॥ ೩ ॥

ಎಲೈ ರಾಜನೇ, ರಾಜನ ಅಪ್ಪಣೆಯಂತೆ ಪಾಂಚಾಲರು ಮತ್ತು ಸೋಮಕರು ಭೈರವನಾದಗಳನ್ನು ಮಾಡುತ್ತಾ ದ್ರೋಣರ ಮೇಲೆಯೇ ಎರಗಿದರು.

ತಾನ್ ವಯಂ ಪ್ರತಿಗರ್ಜಂತಃ ಪ್ರತ್ಯುದ್ಯಾತಾಸ್ತ್ವಮರ್ಷಿತಾಃ ।
ಯಥಾಶಕ್ತಿ ಯಥೋತ್ಸಾಹಂ ಯಥಾಸತ್ತ್ವಂ ಚ ಸಂಯುಗೇ ॥ ೪ ॥

ನಾವು ಅವರಿಗೆ ಪ್ರತಿಯಾಗಿ ಗರ್ಜಿಸುತ್ತಾ ಕೋಪದಿಂದ ಕೂಡಿದವರಾಗಿ ನಮ್ಮ ಶಕ್ತಿಗೆ, ಉತ್ಸಾಹಕ್ಕೆ ಮತ್ತು ಬಲಕ್ಕೆ ಅನುಗುಣವಾಗಿ ರಣರಂಗದಲ್ಲಿ ಅವರ ಮೇಲೆ ಎರಗಿದೆವು.

ಕೃತವರ್ಮಾ ಚ ಹಾರ್ದಿಕ್ಯೋ ಯುಧಿಷ್ಠಿರಮುಪಾದ್ರವತ್ ।
ದ್ರೋಣಂ ಪ್ರತಿ ಜಿಘಾಂಸಂತಂ ಮತ್ತೋ ಮತ್ತಮಿವ ದ್ವಿಪಮ್ ॥ ೫ ॥

ದ್ರೋಣರನ್ನು ಕೊಲ್ಲಲು ಬಯಸಿ ಒಂದು ಮದಗಜವು ಇನ್ನೊಂದು ಮದಗಜದ ಮೇಲೆ ಎರಗಿದಂತೆ ಹೊರಟಿದ್ದ ಯುಧಿಷ್ಠಿರನ ಮೇಲೆ ಹಾರ್ದಿಕ್ಯನಾದ ಕೃತವರ್ಮನು ಎರಗಿದನು.

ಶೈನೇಯಂ ಶರವರ್ಷಾಣಿ ವಿಕಿರಂತಂ ಸಮಂತತಃ ।
ಅಭ್ಯಯಾತ್ ಕೌರವೋ ರಾಜನ್ ಭೂರಿಃ ಸಂಗ್ರಾಮಮೂರ್ಧನಿ ॥ ೬ ॥

ಎಲೈ ರಾಜನೇ, ಎಲ್ಲ ಕಡೆಗಳಲ್ಲಿಯೂ ಬಾಣದ ಮಳೆಯನ್ನು ಸುರಿಸುತ್ತಿದ್ದ ಸಾತ್ಯಕಿಯನ್ನು ರಣರಂಗದಲ್ಲಿ ಕೌರವನಾದ ಭೂರಿಯು ಎದುರಿಸಿದನು.

ಸಹದೇವಮಥಾಯಾಂತಂ ದ್ರೋಣಪ್ರೇಪ್ಸುಂ ಮಹಾರಥಮ್ ।
ಕರ್ಣೋ ವೈಕರ್ತನೋ ರಾಜನ್ ವಾರಯಾಮಾಸ ಪಾಂಡವಮ್ ॥೭॥

ಎಲೈ ರಾಜನೇ, ಮಹಾರಥರಾದ ದ್ರೋಣರನ್ನು ಸಮೀಪಿಸಲು ಬಯಸಿ ಬರುತ್ತಿದ್ದ ಪಾಂಡವನಾದ ಸಹದೇವನನ್ನು ವೈಕರ್ತನನಾದ ಕರ್ಣನು ತಡೆದನು.

ಭೀಮಸೇನಮಥಾಯಾಂತಂ ವ್ಯಾದಿತಾಸ್ಯಮಿವಾಂತಕಮ್ ।
ಸ್ವಯಂ ದುರ್ಯೋಧನೋ ಯುದ್ಧೇ ಪ್ರತೀಪಂ ಮೃತ್ಯುಮಾವ್ರಜತ್ ॥೮॥

ತನ್ನ ಮೃತ್ಯುವಾದ, ಬಾಯ್ತೆರೆದ ಮೃತ್ಯುವಿನಂತೆ ತನ್ನ ಕಡೆಗೆ ಬರುತ್ತಿದ್ದ ಭೀಮಸೇನನನ್ನು ರಣರಂಗದಲ್ಲಿ ಸ್ವತಃ ದುರ್ಯೋಧನನೇ ಎದುರಿಸಿದನು.

ನಕುಲಂ ಚ ಯುಧಾಂಶ್ರೇಷ್ಠಂ ಸರ್ವಯುದ್ಧವಿಶಾರದಮ್ ।
ಶಕುನಿಃ ಸೌಬಲೋ ರಾಜನ್ ವಾರಯಾಮಾಸ ಸತ್ವರಃ ॥ ೯ ॥

ಎಲೈ ರಾಜನೇ, ಎಲ್ಲ ಯುದ್ಧಗಳಲ್ಲಿ ವಿಶಾರದನಾದ, ಯೋಧರಲ್ಲಿ ಶ್ರೇಷ್ಠನಾದ ನಕುಲನನ್ನು ಸೌಬಲಪುತ್ರನಾದ ಶಕುನಿಯು ತ್ವರೆಯಿಂದ ತಡೆದನು.

ಶಿಖಂಡಿನಮಥಾಯಾಂತಂ ರಥೇನ ರಥಿನಾಂ ವರಮ್ ।
ಕೃಪೋ ಶಾರದ್ವತೋ ರಾಜನ್ ವಾರಯಾಮಾಸ ಸಂಯುಗೇ ॥ ೧೦ ॥

ಎಲೈ ರಾಜನೇ, ರಥದಲ್ಲಿ ಬರುತ್ತಿದ್ದ ರಥಿಶ್ರೇಷ್ಠನಾದ ಶಿಖಂಡಿಯನ್ನು ರಣರಂಗದಲ್ಲಿ ಶಾರದ್ವತರಾದ ಕೃಪರು ತಡೆದರು.

ಪ್ರತಿವಿಂಧ್ಯಮಥಾಯಾಂತಂ ಮಯೂರಸದೃಶೈರ್ಹಯೈಃ ।
ದುಃಶಾಸನೋ ಮಹಾರಾಜ ಯತ್ತೋ ಯತ್ತಮವಾರಯತ್ ॥ ೧೧ ॥

ನವಿಲಿನ ಬಣ್ಣದ ಕುದುರೆಗಳಿಂದ ಬರುತ್ತಿದ್ದ ಪ್ರತಿವಿಂಧ್ಯನನ್ನು, ಎಲೈ ಮಹಾರಾಜನೇ, ಸ್ವತಃ ದುಶ್ಶಾಸನನು ಪ್ರಯತ್ನಪೂರ್ವಕವಾಗಿ ತಡೆದನು.

ಭೈಮಸೇನಿಮಥಾಯಾಂತಂ ಮಾಯಾಶತವಿಶಾರದಮ್ ।
ಅಶ್ವತ್ಥಾಮಾ ಪಿತುರ್ಮಾನಂ ಕುರ್ವಾಣಃ ಪ್ರತ್ಯಷೇಧಯತ್ ॥ ೧೨ ॥

ನೂರು ವಿಧದ ಮಾಯೆಗಳಲ್ಲಿ ವಿಶಾರದನಾದ ಸಮೀಪದಲ್ಲಿ ಬರುತ್ತಿದ್ದ ಘಟೋತ್ಕಚನನ್ನು ತಂದೆಗೆ ಪ್ರಿಯವನ್ನು ಮಾಡುತ್ತಾ ಅಶ್ವತ್ಥಾಮರು ತಡೆದರು.

ದ್ರುಪದಂ ವೃಷಸೇನಸ್ತು ಸಸೈನ್ಯಂ ಸಪದಾನುಗಮ್ ।
ವಾರಯಾಮಾಸ ಸಮರೇ ದ್ರೋಣಪ್ರೇಪ್ಸುಂ ಮಹಾರಥಮ್ ॥ ೧೩ ॥

ದ್ರೋಣರನ್ನು ಸಮೀಪಿಸಲು ಬಯಸುತ್ತಿದ್ದ ಮಹಾರಥನಾದ ದ್ರುಪದನನ್ನು ಅವನ ಸೈನ್ಯ ಮತ್ತು ಅನುಯಾಯಿಗಳ ಜೊತೆಯಲ್ಲಿ ವೃಷಸೇನನು ತಡೆದನು.

ವಿರಾಟಂ ದ್ರುತಮಾಯಾಂತಂ ದ್ರೋಣಸ್ಯ ನಿಧನಂ ಪ್ರತಿ ।
ಮದ್ರರಾಜಃ ಸುಸಂಕ್ರುದ್ಧೋ ವಾರಯಾಮಾಸ ಭಾರತ ॥ ೧೪ ॥

ಎಲೈ ಭಾರತನೇ, ದ್ರೋಣರ ವಧೆಯನ್ನು ಮಾಡಲು ಬಯಸಿ ಶೀಘ್ರವಾಗಿ ಬರುತ್ತಿದ್ದ ವಿರಾಟನನ್ನು ಬಹಳ ಕೋಪಗೊಂಡ ಶಲ್ಯನು ತಡೆದನು.

ಶತಾನೀಕಮಥಾಯಾಂತಂ ನಾಕುಲಿಂ ರಭಸಂ ರಣೇ ।
ಚಿತ್ರಸೇನೋ ರುರೋಧಾಶು ಶರೈರ್ದ್ರೋಣವಧೇಪ್ಸಯಾ ॥ ೧೫ ॥

ದ್ರೋಣರ ವಧೆಯನ್ನು ಮಾಡಲು ಬಯಸಿ ಶೀಘ್ರವಾಗಿ ಬರುತ್ತಿದ್ದ ವೇಗಶಾಲಿಯಾದ ನಕುಲ ಪುತ್ರನಾದ ಶತಾನೀಕನನ್ನು ರಣರಂಗದಲ್ಲಿ ಚಿತ್ರಸೇನನು ಶೀಘ್ರವಾಗಿ ತಡೆದನು.

ಅರ್ಜುನಂ ಚ ಯುಧಾಂಶ್ರೇಷ್ಠಂ ಪ್ರಾದ್ರವಂತಂ ಮಹಾರಥಮ್ ।
ಅಲಂಬುಸೋ ಮಹಾರಾಜ ರಾಕ್ಷಸೇಂದ್ರೋ ನ್ಯವಾರಯತ್ ॥ ೧೬ ॥

ಎಲೈ ಮಹಾರಾಜನೇ, ಯೋಧರಲ್ಲಿ ಶ್ರೇಷ್ಠನಾದ ಮಹಾರಥನಾದ ಶೀಘ್ರವಾಗಿ ಬರುತ್ತಿದ್ದ ಅರ್ಜುನನನ್ನು ರಾಕ್ಷಸೇಂದ್ರನಾದ ಅಲಂಬುಸನು ತಡೆದನು.

ತಥಾ ದ್ರೋಣಂ ಮಹೇಷ್ವಾಸಂ ನಿಘ್ನಂತಂ ಶಾತ್ರವಾನ್ ರಣೇ ।
ಧೃಷ್ಟದ್ಯುಮ್ನೋಽಥ ಪಾಂಚಾಲ್ಯೋ ಹೃಷ್ಟರೂಪಮವಾರಯತ್ ॥ ೧೭ ॥

ಹಾಗೆಯೇ ರಣರಂಗದಲ್ಲಿ ಶತ್ರುಗಳನ್ನು ಕೊಲ್ಲುತ್ತಿದ್ದ ಸಂತೋಷಗೊಂಡಿದ್ದ ದ್ರೋಣರನ್ನು ಪಾಂಚಾಲ್ಯನಾದ ಧೃಷ್ಟದ್ಯುಮ್ನನು ತಡೆದನು.

ತಥಾನ್ಯಾನ್ ಪಾಂಡುಪುತ್ರಾಣಾಂ ಸಮಾಯಾತಾನ್ ಮಹಾರಥಾನ್ ।
ತಾವಕಾ ರಥಿನೋ ರಾಜನ್ ವಾರಯಾಮಾಸುರೋಜಸಾ ॥ ೧೮ ॥

ಎಲೈ ರಾಜನೇ, ಹಾಗೆ ಸಮೀಪಕ್ಕೆ ಬರುತ್ತಿದ್ದ ಪಾಂಡವ ಸೇನೆಯ ಉಳಿದ ಮಹಾರಥರನ್ನು ನಿನ್ನವರು ತಮ್ಮ ಸಾಮರ್ಥ್ಯದಿಂದ ತಡೆದರು.

ಗಜಾರೋಹಾ ಗಜೈಸ್ತೂರ್ಣಂ ಸನ್ನಿಪತ್ಯ ಮಹಾಮೃಧೇ ।
ಯೋಧಯಂತಃ ಸ್ಮ ದೃಶ್ಯಂತೇ ಶತಶೋಽಥ ಸಹಸ್ರಶಃ ॥ ೧೯ ॥

ಗಜಾರೋಹಿಗಳು ಗಜಾರೋಹಿಗಳ ಜೊತೆಯಲ್ಲಿ ಶೀಘ್ರವಾಗಿ ಸಂಸಕ್ತರಾಗಿ ದೊಡ್ಡ ಯುದ್ಧದಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವುದು ನೂರರ ಸಂಖ್ಯೆಯಲ್ಲಿ ಸಾವಿರದ ಸಂಖ್ಯೆಯಲ್ಲಿ ಕಂಡುಬಂದಿತು.

ನಿಶೀಥೇ ತುರಗಾ ರಾಜನ್ನಾದ್ರವಂತಃ ಪರಸ್ಪರಮ್ ।
ಸಮದೃಶ್ಯಂತ ವೇಗೇನ ಪಕ್ಷವಂತ ಇವಾದ್ರಯಃ ॥ ೨೦ ॥

ಎಲೈ ರಾಜನೇ, ರಾತ್ರಿಯಲ್ಲಿ ಪರಸ್ಪರವಾಗಿ ವೇಗದಿಂದ ಧಾವಿಸುತ್ತಿದ್ದ ಅಶ್ವಗಳು ರೆಕ್ಕೆಯನ್ನು ಹೊಂದಿದ ಪರ್ವತಗಳಂತೆ ಕಂಡುಬಂದವು.

ಸಾದಿನಃ ಸಾದಿಭಿಃ ಸಾರ್ಧಂ ಪ್ರಾಸಶಕ್ಯೃಷ್ಟಿಪಾಣಯಃ ।
ಸಮಾಗಚ್ಛನ್ ಮಹಾರಾಜ ವಿನದಂತಃ ಪೃಥಕ್ ಪೃಥಕ್ ॥ ೨೧ ॥

ಎಲೈ ಮಹಾರಾಜನೇ, ಅಶ್ವಾರೋಹಿಗಳು ತಮ್ಮ ಹಸ್ತಗಳಲ್ಲಿ ಪ್ರಾಸ-ಶಕ್ತಿ-ಋಷ್ಟಿಗಳನ್ನು ಹಿಡಿದು ಬೇರೆ ಬೇರೆಯಾಗಿ ಗರ್ಜನೆಯನ್ನು ಮಾಡುತ್ತಾ ಅಶ್ವಾರೋಹಿಗಳ ಜೊತೆಯಲ್ಲಿ ಯುದ್ಧಕ್ಕೆ ನಿಂತರು.

ನರಾಸ್ತು ಬಹವಸ್ತತ್ರ ಸಮಾಜಗ್ಮುಃ ಪರಸ್ಪರಮ್ ।
ಗದಾಭಿರ್ಮುಸಲೈಶ್ಚೈವ ನಾನಾಶಸ್ತ್ರೈಶ್ಚ ಸಂಘಶಃ ॥ ೨೨ ॥

ಅನೇಕ ಪದಾತಿಗಳು ಅಲ್ಲಿ ಗದೆಗಳನ್ನೂ, ಮುಸಲಗಳನ್ನೂ, ನಾನಾವಿಧವಾದ ಶಸ್ತ್ರಗಳನ್ನೂ ಹಿಡಿದು ಗುಂಪು ಗುಂಪುಗಳಲ್ಲಿ ಪರಸ್ಪರವಾಗಿ ಎದುರಿಸಿದರು.

ಕೃತವರ್ಮಾ ತು ಹಾರ್ದಿಕ್ಯೋ ಧರ್ಮಪುತ್ರಂ ಯುಧಿಷ್ಠಿರಮ್ ।
ವಾರಯಾಮಾಸ ಸಂಕ್ರುದ್ಧೋ ವೇಲೇವೋದ್ವೃತ್ತಮರ್ಣವಮ್ ॥ ೨೩ ॥

ಹಾರ್ದಿಕ್ಯನಾದ ಕೃತವರ್ಮನು ಕ್ಷೋಭೆಗೊಂಡ ಸಮುದ್ರವನ್ನು ತೀರವು ತಡೆದಂತೆ ಕೋಪಗೊಂಡು ಧರ್ಮಪುತ್ರನಾದ ಯುಧಿಷ್ಠಿರನನ್ನು ತಡೆದನು.

ಯುಧಿಷ್ಠಿರಸ್ತು ಹಾರ್ದಿಕ್ಯಂ ವಿದ್ವಾ ಪಂಚಭಿರಾಶುಗೈಃ ।
ಪುನರ್ವಿವ್ಯಾಧ ವಿಂಶತ್ಯಾ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೨೪ ॥

ಯುಧಿಷ್ಠಿರನಾದರೋ ಕೃತವರ್ಮನನ್ನು ಶೀಘ್ರಗಾಮಿಗಳಾದ ಐದು ಬಾಣಗಳಿಂದ ಹೊಡೆದು ಪುನಃ ಇಪ್ಪತ್ತು ಬಾಣಗಳಿಂದ ಹೊಡೆದು 'ನಿಲ್ಲು, ನಿಲ್ಲು' ಎಂದು ಹೇಳಿದನು.

ಕೃತವರ್ಮಾ ತು ಸಂಕ್ರುದ್ಧೋ ಧರ್ಮಪುತ್ರಸ್ಯ ಮಾರಿಷ ।
ಧನುಶ್ಚಿಚ್ಛೇದ ಭಲ್ಲೇನ ತಂ ಚ ವಿವ್ಯಾಧ ಸಪ್ತಭಿಃ ॥ ೨೫ ॥

ಎಲೈ ಶ್ರೇಷ್ಠನೇ, ಕೃತವರ್ಮನಾದರೋ ಬಹಳ ಕೋಪಗೊಂಡು ಏಳು ಭಲ್ಲಗಳನ್ನು ಪ್ರಯೋಗಿಸಿ ಯುಧಿಷ್ಠಿರನ ಧನುಸ್ಸನ್ನು ಕತ್ತರಿಸಿ, ಅವನನ್ನೂ ಹೊಡೆದನು.

ಅಥಾನ್ಯದ್ ಧನುರಾದಾಯ ಧರ್ಮಪುತ್ರೋ ಯುಧಿಷ್ಠಿರಃ ।
ಹಾರ್ದಿಕ್ಯಂ ದಶಭಿರ್ಬಾಣೈರ್ಬಾಹ್ವೋರುರಸಿ ಚಾರ್ಪಯತ್ ॥ ೨೬ ॥

ಆಗ ಧರ್ಮಪುತ್ರನಾದ ಯುಧಿಷ್ಠಿರನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹಾರ್ದಿಕ್ಯನಿಗೆ ಹತ್ತು ಬಾಣಗಳಿಂದ ಅವನ ಬಾಹುಗಳಲ್ಲಿಯೂ ಮತ್ತು ಎದೆಯಲ್ಲಿಯೂ ಹೊಡೆದನು.

ಮಾಧವಸ್ತು ರಣೇ ವಿದ್ಧೋ ಧರ್ಮಪುತ್ರೇಣ ಮಾರಿಷ ।
ಪ್ರಾಕಂಪತ ಚ ರೋಷೇಣ ಸಪ್ತಭಿಶ್ಚಾರ್ದಯಚ್ಛರೈಃ ॥ ೨೭ ॥

ಎಲೈ ಪೂಜ್ಯನೇ, ರಣರಂಗದಲ್ಲಿ ಧರ್ಮಪುತ್ರನಿಂದ ಹೊಡೆಯಲ್ಪಟ್ಟ ಮಾಧವನಾದ ಕೃತವರ್ಮನು ರೋಷದಿಂದ ನಡುಗಿ ಏಳು ಬಾಣಗಳಿಂದ ಧರ್ಮರಾಜನನ್ನು ಹಿಂಸಿಸಿದನು.

ತಸ್ಯ ಪಾರ್ಥೋ ಧನುಶ್ಚಿತ್ತ್ವಾ ಹಸ್ತಾವಾಪಂ ನಿಕೃತ್ಯ ಚ ।
ಪ್ರಾಹಿಣೋನ್ನಿಶಿತಾನ್ ಬಾಣಾನ್ ಪಂಚ ರಾಜನ್ ಶಿಲಾಶಿತಾನ್ ॥

ಕುಂತೀಪುತ್ರನಾದ ಯುಧಿಷ್ಠಿರನು ಅವನ ಧನುಸ್ಸನ್ನೂ, ಬತ್ತಳಿಕೆಯನ್ನೂ ಕತ್ತರಿಸಿ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಐದು ತೀಕ್ಷ್ಣವಾದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು.

ತೇ ತಸ್ಯ ಕವಚಂ ಭಿತ್ತ್ವಾ ಹೇಮಚಿತ್ರಂ ಮಹಾಧನಮ್ ।
ಪ್ರಾವಿಶನ್ ಧರಣೀಮುಗ್ರಾ ವಲ್ಮೀಕಮಿವ ಪನ್ನಗಾಃ ॥ ೨೯ ॥

ಆ ಬಾಣಗಳು ಕೃತವರ್ಮನ ಸುವರ್ಣಾಲಂಕೃತವಾದ ಬೆಲೆಬಾಳುವ ಕವಚವನ್ನು ಭೇದಿಸಿ, ಉಗ್ರವಾದ ಸರ್ಪಗಳು ಹುತ್ತದೊಳಗೆ ಹೋಗುವಂತೆ ಭೂಮಿಯನ್ನು ಪ್ರವೇಶಿಸಿದವು.

ಅಕ್ಷ್ಣೋರ್ನಿಮೇಷಮಾತ್ರೇಣ ಸೋಽನ್ಯದಾದಾಯ ಕಾರ್ಮುಕಮ್ ।
ವಿವ್ಯಾಧ ಪಾಂಡವಂ ಷಷ್ಟ್ಯಾ ಸೂತಂ ಚ ನವಭಿಃ ಶರೈಃ ॥ ೩೦ ॥

ಕಣ್ಣುಮುಚ್ಚಿಬಿಡುವಷ್ಟರಲ್ಲಿಕೃತವರ್ಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಧರ್ಮರಾಜನನ್ನು ಅರವತ್ತು ಬಾಣಗಳಿಂದಲೂ, ಅವನ ಸಾರಥಿಯನ್ನು ಒಂಬತ್ತು ಬಾಣಗಳಿಂದಲೂ ಹೊಡೆದನು.

ತಸ್ಯ ಶಕ್ತಿಮಮೇಯಾತ್ಮಾ ಪಾಂಡವೋ ಭುಜಗೋಪಮಾಮ್ ।
ಚಿಕ್ಷೇಪ ಭರತಶ್ರೇಷ್ಠ ರಥೇ ನ್ಯಸ್ಯ ಮಹದ್ಧನುಃ ॥ ೩೧ ॥

ಪಾಂಡವನೂ, ಅಚಿಂತ್ಯ ಸಾಮರ್ಥ್ಯವುಳ್ಳವನೂ ಆದ ಧರ್ಮರಾಜನು ಎಲೈ ಭರತಶ್ರೇಷ್ಠನೇ, ತನ್ನ ಧನುಸ್ಸನ್ನು ರಥದಲ್ಲಿ ಇಟ್ಟು ಸರ್ಪದಂತಿದ್ದ ಒಂದು ಶಕ್ತಿಯನ್ನು ಕೃತವರ್ಮನ ಮೇಲೆ ಎಸೆದನು.

ಸಾ ಹೇಮಚಿತ್ರಾ ಮಹತೀ ಪಾಂಡವೇನ ಪ್ರವೇರಿತಾ ।
ನಿರ್ಭಿದ್ಯ ದಕ್ಷಿಣಂ ಬಾಹುಂ ಪ್ರಾವಿಶದ್ ಧರಣೀತಲಮ್ ॥ ೩೨ ॥

ಪಾಂಡವನಾದ ಯುಧಿಷ್ಠಿರನಿಂದ ಪ್ರೇರಿತವಾದ ಸುವರ್ಣಚಿತ್ರಿತವಾದ ಆ ದೊಡ್ಡ ಶಕ್ತಿಯು ಕೃತವರ್ಮನ ಬಲಬಾಹುವನ್ನು ಭೇದಿಸಿ ಭೂತಳವನ್ನು ಪ್ರವೇಶಿಸಿತು.

ಏತಸ್ಮಿನ್ನೇವ ಕಾಲೇ ತು ಗೃಹ್ಯ ಪಾರ್ಥಃ ಪುನರ್ಧನುಃ ।
ಹಾರ್ದಿಕ್ಯಂ ಛಾದಯಾಮಾಸ ಶರೈಃ ಸನ್ನತಪರ್ವಭಿಃ ॥ ೩೩ ॥

ಅಷ್ಟರಲ್ಲಿಯೇ ಯುಧಿಷ್ಠಿರನು ಪುನಃ ಧನುಸ್ಸನ್ನು ತೆಗೆದುಕೊಂಡು ಬಾಗಿದ ತುದಿಯುಳ್ಳ ಬಾಣಗಳಿಂದ ಕೃತವರ್ಮನನ್ನು ಆಚ್ಛಾದಿಸಿದನು.

ತತಸ್ತು ಸಮರೇ ಶೂರೋ ವೃಷ್ಣೀನಾಂ ಪ್ರವರೋ ರಥೀ ।
ವ್ಯಶ್ವಸೂತರಥಂ ಚಕ್ರೇ ನಿಮೇಷಾರ್ಧಾದ್ ಯುಧಿಷ್ಠಿರಮ್ ॥ ೩೪ ॥

ಆಗ ಯುದ್ಧದಲ್ಲಿ ಶೂರನೂ, ವೃಷ್ಣಿಗಳಲ್ಲಿ ಶ್ರೇಷ್ಠನೂ, ಮಹಾರಥನೂ ಆದ ಕೃತವರ್ಮನು ಅರ್ಧನಿಮಿಷದಲ್ಲಿ ಯುಧಿಷ್ಠಿರನ ರಥದ ಸಾರಥಿಯನ್ನೂ ಮತ್ತು ಅಶ್ವಗಳನ್ನು ಕೊಂದನು.

ತತಸ್ತು ಪಾಂಡವೋ ಜ್ಯೇಷ್ಠಃ ಖಡ್ಗಚರ್ಮ ಸಮಾದದೇ ।
ತದಸ್ಯ ನಿಶಿತೈರ್ಬಾಣೈರ್ವ್ಯಧಮನ್ ಮಾಧವೋ ರಣೇ ॥ ೩೫ ॥

ಅನಂತರ ಪಾಂಡವರಲ್ಲಿ ಜ್ಯೇಷ್ಠನಾದ ಯುಧಿಷ್ಠಿರನು ಖಡ್ಗ ಮತ್ತು ಚರ್ಮಗಳನ್ನು ತೆಗೆದುಕೊಂಡನು. ಮಾಧವನಾದ ಕೃತವರ್ಮನು ರಣರಂಗದಲ್ಲಿ ತೀಕ್ಷ್ಣವಾದ ಬಾಣಗಳಿಂದ ಅವುಗಳನ್ನು ಹಾರಿಸಿದನು.

ತೋಮರಂ ತು ತತೋ ಗೃಹ್ಯ ಸ್ವರ್ಣದಂಡಂ ದುರಾಸದಮ್ ।
ಪ್ರೇಷಯತ್ ಸಮರೇ ತೂರ್ಣಂ ಹಾರ್ದಿಕ್ಯಸ್ಯ ಯುಧಿಷ್ಠಿರಃ ॥ ೩೬ ॥

ಅನಂತರ ಯುಧಿಷ್ಠಿರನು ಸಮೀಪಕ್ಕೆ ಸುಳಿಯಲು ಅಸಾಧ್ಯವಾದ, ಸ್ವರ್ಣದಂಡವುಳ್ಳ ತೋಮರವನ್ನು ತೆಗೆದುಕೊಂಡು ಅದನ್ನು ಶೀಘ್ರವಾಗಿ ಹಾರ್ದಿಕ್ಯನ ಮೇಲೆ ಎಸೆದನು.

ತಮಾಪತಂತಂ ಸಹಸಾ ಧರ್ಮರಾಜಭುಜಚ್ಯುತಮ್ ।
ದ್ವಿಧಾ ಚಿಚ್ಛೇದ ಹಾರ್ದಿಕ್ಯಃ ಕೃತಹಸ್ತಃ ಸ್ಥಯನ್ನಿವ ॥ ೩೭ ॥

ಕ್ಷಿಪ್ರಹಸ್ತನಾದ ಕೃತವರ್ಮನು ಧರ್ಮರಾಜನ ಭಾಜದಿಂದ ಹೊರತು ತನ್ನ ಕಡೆಗೆ ಬರುತ್ತಿದ್ದ ಆ ತೋಮರವನ್ನು ನಗುತ್ತಾ ಎರಡುಭಾಗವಾಗಿ ಕತ್ತರಿಸಿದನು.

ತತಃ ಶರಶತೇನಾಜೌ ಧರ್ಮಪುತ್ರಮವಾಕಿರತ್ ।
ಕವಚಂ ಚಾಸ್ಯ ಸಂಕ್ರುದ್ಧಃ ಶರೈಸ್ತೀಕ್ಷ್ಣೈರದಾರಯತ್ ॥ ೩೮ ॥

ಆಗ ಬಹಳ ಕೋಪಗೊಂಡ ಕೃತವರ್ಮನು ರಣರಂಗದಲ್ಲಿ ಯುಧಿಷ್ಠಿರನ ಮೇಲೆ ನೂರು ಬಾಣಗಳನ್ನು ಸುರಿಸಿ ತೀಕ್ಷ್ಣವಾದ ಬಾಣಗಳಿಂದ ಅವನ ಕವಚವನ್ನು ಸೀಳಿದನು.

ಹಾರ್ದಿಕ್ಯಶರಸಂಛಿನ್ನಂ ಕವಚಂ ತನ್ಮಹಾತ್ಮನಃ ।
ವ್ಯಶೀರ್ಯತ ರಣೇ ರಾಜಂಸ್ತಾರಾಜಾಲಮಿವಾಂಬರಾತ್ ॥ ೩೯ ॥

ಎಲೈ ರಾಜನೇ, ಕೃತವರ್ಮನ ಬಾಣಗಳಿಂದ ಕತ್ತರಿಸಲ್ಪಟ್ಟ ಮಹಾತ್ಮನಾದ ಧರ್ಮರಾಜನ ಕವಚವು ರಣರಂಗದಲ್ಲಿ ಆಕಾಶದಿಂದ ನಕ್ಷತ್ರಗಳ ಸಮೂಹವು ಬಿದ್ದಂತೆ ಬಿದ್ದು ನಾಶವನ್ನು ಹೊಂದಿತು.

ಸ ಛಿನ್ನಧನ್ವಾ ವಿರಥಃ ಶೀರ್ಣವರ್ಮಾ ಶರಾರ್ದಿತಃ ।
ಅಪಾಯಾಸೀದ್ ರಣಾತ್ ತೂರ್ಣಂ ಧರ್ಮಪುತ್ರೋ ಯುಧಿಷ್ಠಿರಃ ॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ರಥಹೀನನಾಗಿ, ಕವಚವು ನಾಶವನ್ನು ಹೊಂದಿ ಕೃತವರ್ಮನ ಬಾಣಗಳಿಂದ ಪೀಡಿತನಾದ ಧರ್ಮಪುತ್ರನಾದ ಯುಧಿಷ್ಠಿರನು ಶೀಘ್ರವಾಗಿ ರಣರಂಗದಿಂದ ಹೊರಟು ಹೋದನು.

ಕೃತವರ್ಮಾ ತು ನಿರ್ಜಿತ್ಯ ಧರ್ಮಪುತ್ರಂ ಯುಧಿಷ್ಠಿರಮ್ ।
ಪುನರ್ದ್ರೋಣಸ್ಯ ಜುಗುಪೇ ಚಕ್ರಮೇವ ಮಹಾಬಲಃ ॥ ೪೧ ॥

ಮಹಾಬಲನಾದ ಕೃತವರ್ಮನಾದರೋ ಧರ್ಮಪುತ್ರನಾದ ಯುಧಿಷ್ಠಿರನನ್ನು ಗೆದ್ದು ಪುನಃ ದ್ರೋಣರ ಸೈನ್ಯವನ್ನು ರಕ್ಷಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಅಷ್ಟಾದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆರಡನೆಯ ಅಧ್ಯಾಯ

ಸಾತ್ಯಕಿಯಿಂದ ಭೂರಿಯ ವಧೆ. ಅಶ್ವತ್ಥಾಮರಿಂದ ಘಟೋತ್ಕಚನ ಮತ್ತು ಭೀಮಸೇನನಿಂದ ದುರ್ಯೋಧನನ ಪರಾಜಯ.

ಸಂಜಯಃ

ಭೂರಿಸ್ತು ಸಮರೇ ರಾಜನ್ ಶೈನೇಯಂ ರಥಿನಾಂ ವರಮ್ ।
ಆಪತಂತಮವಾಸೇಧತ್ ಪ್ರವಣಾದಿವ ಕುಂಜರಮ್ ॥ ೧ ॥

ಸಂಜಯ– ಎಲೈ ರಾಜನೇ, ಭೂರಿಯಾದರೋ ತಮ್ಮ ಕಡೆಗೆ ಬರುತ್ತಿದ್ದ ರಥಿಶ್ರೇಷ್ಠನಾದ ಸಾತ್ಯಕಿಯನ್ನು ಹಳ್ಳದಿಂದ ಏಳುವ ಆನೆಯನ್ನು ತಡೆದಂತೆ ತಡೆದನು.

ಅಥೈನಂ ಸಾತ್ಯಕಿಃ ಕ್ರುದ್ಧಃ ಪಂಚಭಿರ್ನಿಶಿತೈಃ ಶರೈಃ ।
ವಿವ್ಯಾಧ ಹೃದಯೇ ತೂರ್ಣಂ ಪ್ರಾಸ್ರವತ್ ತಸ್ಯ ಶೋಣಿತಮ್ ॥ ೨ ॥

ಆಗ ಸಾತ್ಯಕಿಯು ಕೋಪಗೊಂಡು ಐದು ತೀಕ್ಷ್ಣವಾದ ಬಾಣಗಳಿಂದ ಭೂರಿಯನ್ನು ಶೀಘ್ರವಾಗಿ ಹೃದಯದಲ್ಲಿ ಹೊಡೆದನು. ಭೂರಿಯ ರಕ್ತವು ಸುರಿಯಿತು.

ತಥೈವ ಕೌರವೋ ಯುದ್ಧೇ ಶೈನೇಯಂ ಯುದ್ಧದುರ್ಮದಮ್ ।
ದಶಭಿರ್ನಿಶಿತೈಸ್ತೀಕ್ಷ್ಣೈರವಿಧ್ಯತ ಭುಜಾಂತರೇ ॥ ೩ ॥

ಹಾಗೆಯೇ ಕೌರವನಾದ ಭೂರಿಯೂ ಸಹ ರಣರಂಗದಲ್ಲಿ ಯುದ್ಧ ದುರ್ಮದನಾದ ಸಾತ್ಯಕಿಯನ್ನು ಹತ್ತು ತೀಕ್ಷ್ಣವಾದ ಬಾಣಗಳಿಂದ ಅವನ ಭುಜಗಳ ಮಧ್ಯದಲ್ಲಿ ಹೊಡೆದನು.

ತಾವನ್ಯೋನ್ಯಂ ಮಹಾರಾಜ ತತಕ್ಷತುಃ ಶರೈರ್ಭೃಶಮ್ ।
ಕ್ರೋಧಸಂರಕ್ತನಯನೌ ಕ್ರೋಧಾದ್ ವಿಸ್ಫಾರ್ಯ ಕಾರ್ಮುಕೇ ॥ ೪ ॥

ಎಲೈ ಮಹಾರಾಜನೇ, ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ಮತ್ತು ತಮ್ಮ ಧನುಸ್ಸುಗಳನ್ನು ಬಲವಾಗಿ ಎಳೆದು ಅವರು ಬಾಣಗಳಿಂದ ಪರಸ್ಪರವಾಗಿ ಗಾಯಗೊಳಿಸಿದರು.

ತಯೋರಾಸೀನ್ಮಹಾರಾಜ ಶಸ್ತ್ರವೃಷ್ಟಿಃ ಸುದಾರುಣಾ ।
ಕ್ರುದ್ಧಯೋಃ ಸಾಯಕಮುಚೋರ್ಯಮಾಂತಕನಿಕಾಶಯೋಃ ॥ ೫ ॥

ಎಲೈ ಮಹಾರಾಜನೇ, ಯಮ ಮತ್ತು ಮೃತ್ಯುವಿನಂತಿದ್ದ ಅವರಿಬ್ಬರೂ ಅತ್ಯಂತ ಘೋರವಾದ ಬಾಣಗಳನ್ನು ಪ್ರಯೋಗಿಸಿ ಪರಸ್ಪರವಾಗಿ ಬಾಣಗಳ ಮಳೆಯನ್ನು ಕರೆದರು.

ತಾವನ್ಯೋನ್ಯಂ ಶರೈ ರಾಜನ್ ಪ್ರಚ್ಛಾದ್ಯ ಸಮರೇ ಸ್ಥಿತೌ ।
ಮುಹೂರ್ತಂ ಚೈವ ತದ್ ಯುದ್ಧಂ ಸಮರೂಪಮಿವಾಭವತ್ ॥ ೬ ॥

ಎಲೈ ರಾಜನೇ, ಅವರು ರಣರಂಗದಲ್ಲಿ ತಮ್ಮ ಬಾಣಗಳಿಂದ ಪರಸ್ಪರವಾಗಿ ಮುಚ್ಚಿನಿಂತರು. ಒಂದು ಮುಹೂರ್ತದ ಕಾಲ ಆ ಯುದ್ಧವು ಸಮವಾಗಿ ನಡೆಯಿತು.

ತತಃ ಕ್ರುದ್ಧೋ ಮಹಾರಾಜ ಶೈನೇಯಃ ಪ್ರಹಸನ್ನಿವ ।
ಧನುಶ್ಚಿಚ್ಛೇದ ಸಮರೇ ಕೌರವ್ಯಸ್ಯ ಮಹಾತ್ಮನಃ ॥ ೭ ॥

ಎಲೈ ಮಹಾರಾಜನೇ, ಕೋಪಗೊಂಡ ಸಾತ್ಯಕಿಯು ರಣರಂಗದಲ್ಲಿ ನಗುತ್ತಾ ಮಹಾತ್ಮನಾದ ಕೌರವ್ಯನಾದ ಭೂರಿಯ ಧನುಸ್ಸನ್ನು ಕತ್ತರಿಸಿದನು.

ಅಥೈನಂ ಛಿನ್ನಧನ್ವಾನಂ ನವಭಿರ್ನಿಶಿತೈಃ ಶರೈಃ ।
ವಿವ್ಯಾಧ ಹೃದಯೇ ತೂರ್ಣಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೮ ॥

ಅನಂತರ ಅವನ ಧನುಸ್ಸು ಕತ್ತರಿಸಲ್ಪಡುತ್ತಿರಲು ತೀಕ್ಷ್ಣವಾದ ಒಂಬತ್ತು ಬಾಣಗಳಿಂದ ಅವನನ್ನು ಹೃದಯದಲ್ಲಿ ಗಾಢವಾಗಿ ಹೊಡೆದು 'ನಿಲ್ಲು, ನಿಲ್ಲು' ಎಂದು ಹೇಳಿದನು.

ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುತಾಪನಃ ।
ಧನುರನ್ಯತ್ ಸಮಾದಾಯ ಸಾತ್ವತಂ ಪ್ರತ್ಯವಿಧ್ಯತ ॥ ೯ ॥

ಬಲಿಷ್ಠನಾದ ಶತ್ರುವಿನಿಂದ ಗಾಢವಾಗಿ ಹೊಡೆಯಲ್ಪಟ್ಟ ಶತ್ರುತಾಪನನಾದ ಭೂರಿಯು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸಾತ್ಯಕಿಯನ್ನು ಪ್ರತಿಯಾಗಿ ಹೊಡೆದನು.

ಸ ವಿದ್ಧ್ವಾ ಸಾತ್ವತಂ ಬಾಣೈಸ್ತ್ರಿಭಿರೇವ ವಿಶಾಂಪತೇ ।
ಧನುಶ್ಚಿಚ್ಛೇದ ಭಲ್ಲೇನ ಸುತೀಕ್ಷ್ಣೇನ ಹಸನ್ನಿವ ॥ ೧೦ ॥

ಎಲೈ ರಾಜನೇ, ಅವನು ಸಾತ್ಯಕಿಯನ್ನು ಮೂರು ಬಾಣಗಳಿಂದ ಹೊಡೆದು, ತೀಕ್ಷ್ಣವಾದ ಭಲ್ಲದಿಂದ ನಗುವವನಂತೆ ಅವನ ಧನುಸ್ಸನ್ನು ಕತ್ತರಿಸಿದನು.

ಛಿನ್ನಧನ್ವಾ ಮಹಾರಾಜ ಸಾತ್ಯಕಿಃ ಕ್ರೋಧಮೂರ್ಚ್ಛಿತಃ ।
ಪ್ರಜಹಾರ ಮಹಾವೇಗಾಂ ಶಕ್ತಿಂ ತಸ್ಯ ಮಹೋರಸಿ ॥ ೧೧ ॥

ಎಲೈ ಮಹಾರಾಜನೇ, ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಕ್ರೋಧ ಮೂರ್ಛಿತನಾದ ಸಾತ್ಯಕಿಯು ಮಹಾವೇಗವುಳ್ಳ ಶಕ್ತಿಯನ್ನು ತೆಗೆದುಕೊಂಡು ಅದನ್ನು ಭೂರಿಯ ಎದೆಯ ಮೇಲೆ ಎಸೆದನು.

ಸ ತು ಶಕ್ತ್ಯಾ ವಿಭಿನ್ನಾಂಗೋ ನಿಪಪಾತ ರಥೋತ್ತಮಾತ್ ।
ಲೋಹಿತಾಂಗ ಇವಾಕಾಶಾದ್ ದೀಪ್ತರಶ್ಮಿರ್ಯದೃಚ್ಛಯಾ ॥ ೧೨ ॥

ಭೂರಿಯು ಶಕ್ತಿಯಿಂದ ಎದೆಯು ಬಿರಿದು, ದೀಪ್ತಕಿರಣವುಳ್ಳ ಕುಜನು ಯದೃಚ್ಛೆಯಿಂದ ಆಕಾಶದಿಂದ ಬಿದ್ದಂತೆ ತನ್ನ ಶ್ರೇಷ್ಠವಾದ ರಥದಿಂದ ಭೂಮಿಯ ಮೇಲೆ ಬಿದ್ದನು.

ತಂ ತು ದೃಷ್ಟ್ವಾ ಹತಂ ಶೂರಮಶ್ವತ್ಥಾಮಾ ಮಹಾರಥಃ ।
ಅಭ್ಯಧಾವತ ವೇಗೇನ ಶೈನೇಯಂ ಪ್ರತಿ ಸಂಯುಗೇ ।
ಅಭ್ಯವರ್ಷಚ್ಛರೌಘೇಣ ಮೇರುಂ ವೃಷ್ಟ್ಯಾ ಯಥಾಂಬುದಃ ॥ ೧೩ ॥

ಶೂರನಾದ ಭೂರಿಯು ಹತನಾದುದನ್ನು ನೋಡಿ ಮಹಾರಥರಾದ ಅಶ್ವತ್ಥಾಮರು ಮೋಡವು ಮೇರುಪರ್ವತದ ಮೇಲೆ ಮಳೆಯನ್ನು ಸುರಿಸುವಂತೆ ಸಾತ್ಯಕಿಯ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ರಣರಂಗದಲ್ಲಿ ಅವನ ಕಡೆಗೆ ನುಗ್ಗಿದರು.

ತಮಾಪತಂತಂ ಸಂರಬ್ಧಂ ಶೈನೇಯಸ್ಯ ರಥಂ ಪ್ರತಿ ।
ಘಟೋತ್ಕಚೋऽಬ್ರವೀದ್ ರಾಜನ್ ನಾದಂ ಮುಕ್ತ್ವಾ ಮಹಾರಥಃ ॥

ಎಲೈ ರಾಜನೇ, ಕೋಪಗೊಂಡು ಸಾತ್ಯಕಿಯ ರಥದ ಕಡೆಗೆ ವೇಗವಾಗಿ ಬರುತ್ತಿದ್ದ ಅಶ್ವತ್ಥಾಮರನ್ನು ಕುರಿತು ಮಹಾರಥನಾದ ಘಟೋತ್ಕಚನು ಸಿಂಹನಾದವನ್ನು ಮಾಡಿ ಹೇಳಿದನು.

ತಿಷ್ಠ ತಿಷ್ಠ ನ ಮೇ ಜೀವನ್ ದ್ರೋಣಪುತ್ರ ಗಮಿಷ್ಯಸಿ ।
ಏಷ ತ್ವಾದ್ಯ ಹನಿಷ್ಯಾಮಿ ಮಹಿಷಂ ಮೃಗರಾಡಿವ ।
ಯುದ್ಧಶ್ರದ್ಧಾಮಹಂ ತೇऽದ್ಯ ವಿನೇಷ್ಯಾಮಿ ರಣಾಜಿರೇ ॥ ೧೫ ॥

ದ್ರೋಣಪುತ್ರರೇ, ನಿಲ್ಲಿ, ನಿಲ್ಲಿ. ಜೀವಸಹಿತವಾಗಿ ನೀವು ಇಲ್ಲಿಂದ ಹೋಗುವುದಿಲ್ಲ. ಸ್ಕಂದರಾಜನು ಮಹಿಷಾಸುರನನ್ನು ಕೊಂದಂತೆ ನಾನು ನಿಮ್ಮನ್ನು ಈ

ದಿನ ಕೊಲ್ಲುವೆನು. ಈ ದಿನ ರಣರಂಗದಲ್ಲಿ ನಾನು ನಿಮ್ಮ ಯುದ್ಧದ ಆಸೆಯನ್ನು ಬಿಡಿಸುವೆನು.

(ಸ್ಕಂಧನಿಂದಲೂ ಒಬ್ಬ ಮಹಿಷಾಸುರನು ಹತನಾಗಿದ್ದಾನೆ - **ಲಕ್ಷಾಲಂಕಾರ**).

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ರಾಕ್ಷಸಃ ಪರವೀರಹಾ ।
ದ್ರೌಣಿಮಭ್ಯದ್ರವತ್ ಕ್ರುದ್ಧೋ ಗಜೇಂದ್ರಮಿವ ಕೇಸರೀ ॥ ೧೬ ॥

ಹೀಗೆ ಹೇಳಿ ಪರವೀರಘಾತಕನೂ, ಕೋಪದಿಂದ ಕೆಂಪಾದ ಕಣ್ಣುಳ್ಳವನೂ ಆದ ರಾಕ್ಷಸನು ಕೋಪಗೊಂಡು ಸಿಂಹವು ಗಜೇಂದ್ರನ ಮೇಲೆ ಎರಗುವಂತೆ ಅಶ್ವತ್ಥಾಮರ ಮೇಲೆ ಎರಗಿದನು.

ರಥಾಕ್ಷಮಾತ್ರೈರಿಷುಭಿರಭ್ಯವರ್ಷದ್ ಘಟೋತ್ಕಚಃ ।
ರಥಿನಾಮೃಷಭಂ ದ್ರೌಣಿಂ ಧಾರಾಭಿರಿವ ತೋಯದಃ ॥ ೧೭ ॥

ಮೋಡವು ಪರ್ವತದ ಮೇಲೆ ಜಲಧಾರೆಯನ್ನು ಸುರಿಸಿದಂತೆ ಘಟೋತ್ಕಚನು ರಥಿಶ್ರೇಷ್ಠರಾದ ಅಶ್ವತ್ಥಾಮರ ಮೇಲೆ ರಥದ ಅಕ್ಷದಷ್ಟು ಸ್ಥೂಲವಾದ ಬಾಣಗಳ ಮಳೆಯನ್ನು ಸುರಿಸಿದನು.

ಶರವೃಷ್ಟಿಂ ತು ತಾಂ ಪ್ರಾಪ್ತಾಂ ಶರೈರಾಶೀವಿಷೋಪಮೈಃ ।
ಶಾತಯಾಮಾಸ ಸಮರೇ ತರಸಾ ದ್ರೌಣಿರುತ್ಸ್ಮಯನ್ ॥ ೧೮ ॥

ಅಶ್ವತ್ಥಾಮರು ನಗುತ್ತಾ ಸರ್ಪದಂತಿದ್ದ ಆ ಬಾಣಗಳಿಂದ ಉಂಟಾದ ತಮ್ಮ ಕಡೆಗೆ ಬರುತ್ತಿದ್ದ ಆ ಬಾಣಗಳ ಮಳೆಯನ್ನು ಶೀಘ್ರವಾಗಿ ವಿನಾಶಗೊಳಿಸಿದರು.

ತತಃ ಶರಶತೈಸ್ತೀಕ್ಷ್ಣೈರ್ಮರ್ಮಭೇದಿಭಿರಾಶುಗೈಃ ।
ಸಮಾಚಿನೋದ್ ರಾಕ್ಷಸೇಂದ್ರಂ ಘಟೋತ್ಕಚಮರಿಂದಮ ॥ ೧೯ ॥

ಎಲೈ ಅರಿಂದಮನೇ, ಅನಂತರ ಮರ್ಮಭೇದಿಗಳಾದ, ಶೀಘ್ರಗಾಮಿಗಳಾದ ನೂರು ಬಾಣಗಳಿಂದ ರಾಕ್ಷಸೇಂದ್ರನಾದ ಘಟೋತ್ಕಚನ ಶರೀರವನ್ನು ತುಂಬಿದರು.

ಸ ಶರೈರಾಚಿತಸ್ತೇನ ರಾಕ್ಷಸೋ ರಣಮೂರ್ಧನಿ ।
ವ್ಯಕಾಶತ ಮಹಾರಾಜ ಶ್ವಾವಿಚ್ಚಲಲಿತೋ ಯಥಾ ॥ ೨೦ ॥

ಎಲೈ ಮಹಾರಾಜನೇ, ದ್ರೋಣರು ಪ್ರಯೋಗಿಸಿದ ಬಾಣಗಳು ತನ್ನ ಶರೀರದಲ್ಲಿ ನಾಟಿದ ರಾಕ್ಷಸನಾದ ಘಟೋತ್ಕಚನು ರಣರಂಗದಲ್ಲಿ ಮುಳ್ಳುಗಳಿಂದ ಕೂಡಿದ ಮುಳ್ಳು ಹಂದಿಯಂತೆ ಶೋಭಿಸಿದನು.

ತತಃ ಕ್ರೋಧಸಮಾವಿಷ್ಟೋ ಭೈಮಸೇನಿಃ ಪ್ರತಾಪವಾನ್ ।
ಶರೈರವಚಕರ್ತೋರ್ಗೈರ್ದ್ರೋಣಂ ವಜ್ರಾಶನಿಸ್ವನೈಃ ॥ ೨೧ ॥

ಕ್ಷುರಪ್ರೈರರ್ಧಚಂದ್ರೈಶ್ಚ ನಾರಾಚೈಃ ಸಶಿಲೀಮುಖೈಃ ।
ವರಾಹಕರ್ಣೈರ್ನಾಲೀಕೈಸ್ತೀಕ್ಷ್ಣೈಶ್ಚಾಪಿ ವಿಕರ್ಣಿಭಿಃ ॥ ೨೨ ॥

ಆಗ ಬಹಳ ಕೋಪಗೊಂಡ ಪ್ರತಾಪಶಾಲಿಯಾದ, ಭೀಮಸೇನ ಪುತ್ರನಾದ ಘಟೋತ್ಕಚನು ವಜ್ರದ ಘೋಷಕ್ಕೆ ಸಮವಾದ ಘೋಷವುಳ್ಳ ಉಗ್ರವಾದ ಕ್ಷುರಪ್ರಗಳಿಂದಲೂ, ಅರ್ಧಚಂದ್ರಗಳಿಂದಲೂ, ನಾರಾಚಗಳಿಂದಲೂ, ಶಿಲೀಮುಖಗಳಿಂದಲೂ, ವರಾಹಕರ್ಣಗಳಿಂದಲೂ, ತೀಕ್ಷ್ಣವಾದ ಆಯುಧಗಳಿಂದಲೂ, ವಿಕರ್ಣಿಗಳಿಂದಲೂ ಅಶ್ವತ್ಥಾಮರನ್ನು ಗಾಯಗೊಳಿಸಿದನು.

ತಾಂ ಶಸ್ತ್ರವೃಷ್ಟಿಮತುಲಾಂ ವಜ್ರಾಶನಿಸಮಸ್ವನಾಮ್ ।
ಪತಂತೀಮುಪರಿ ಕ್ರುದ್ಧೋ ದ್ರೌಣಿರವ್ಯಥಿತೇಂದ್ರಿಯಃ ॥ ೨೩ ॥

ಸುದುಃಸಹಾಂ ಶರೈಘೋರೈರ್ದಿವ್ಯಾಸ್ತ್ರಪ್ರತಿಮಂತ್ರಿತೈಃ ।
ವ್ಯಧಮತ್ ಸ ಮಹಾತೇಜಾ ಮಹಾಭ್ರಾಣೀವ ಮಾರುತಃ ॥ ೨೪ ॥

ಮಹಾತೇಜಸ್ವಿಗಳಾದ ಅಶ್ವತ್ಥಾಮರು ವಜ್ರಾಶನಿಗೆ ಸಮವಾದ ಘೋಷವುಳ್ಳ ಅಸದೃಶವಾದ ಆ ಶಸ್ತ್ರವೃಷ್ಟಿಯು ತಮ್ಮ ಮೇಲೆ ಬೀಳುತ್ತಿರುವುದನ್ನು ನೋಡಿ ವ್ಯಥೆಯನ್ನು ಪಡದೆ ದುಸ್ಸಹವಾದ ಆ ಶರವೃಷ್ಟಿಯನ್ನು ದಿವ್ಯಾಸ್ತ್ರಮಂತ್ರಿತವಾದ ಬಾಣಗಳಿಂದ ವಾಯುವು ಮಹಾಮೋಡಗಳನ್ನು ನಾಶಪಡಿಸಿದಂತೆ ನಾಶಪಡಿಸಿದರು.

ತತೋಽಂತರಿಕ್ಷೇ ಬಾಣಾನಾಂ ಸಂಗ್ರಾಮೋಽನ್ಯ ಇವಾಭವತ್ ।
ಘೋರರೂಪೋ ಮಹಾರಾಜ ಯೋಧಾನಾಂ ಹರ್ಷವರ್ಧನಃ ॥ ೨೫ ॥

ಆಗ ಎಲೈ ಮಹಾರಾಜನೇ, ಆಕಾಶದಲ್ಲಿ ಯೋಧರಿಗೆ ಹರ್ಷವನ್ನುಂಟು ಮಾಡುವ ಬಾಣಗಳ ಪರಸ್ಪರ ಘೋರರೂಪವಾದ ಇನ್ನೊಂದು ಸಂಗ್ರಾಮವು ಉಂಟಾಯಿತು.

ತತೋಸ್ತ್ರಸಂಘರ್ಷಕೃತೈರ್ವಿಸ್ಫುಲಿಂಗೈಃ ಸಮಂತತಃ ।
ಬಭೌ ನಿಶಾಮುಖೇ ವ್ಯೋಮ ಖದ್ಯೋತೈರಿವ ಸಂವೃತಮ್ ॥ ೨೬ ॥

ಆ ಅಸ್ತ್ರಗಳ ಸಂಘರ್ಷದಿಂದ ಉಂಟಾದ ಅಗ್ನಿಕಿಡಿಗಳಿಂದ ಆ ರಾತ್ರಿಯಲ್ಲಿ ಆಕಾಶವು ಮಿಣುಕು ಹುಳುಗಳಿಂದ ತುಂಬಿದಂತೆ ಶೋಭಿಸಿತು.

ಸ ಮಾರ್ಗಣಗಣೈರ್ದ್ರೋಣಿರ್ದಿಶಃ ಪ್ರಚ್ಛಾದ್ಯ ಸರ್ವತಃ ।
ಪ್ರಿಯಾರ್ಥಂ ತವ ಪುತ್ರಾಣಾಂ ರಾಕ್ಷಸಂ ಸಮವಾಕಿರತ್ ॥ ೨೭ ॥

ಅಶ್ವತ್ಥಾಮರು ನಿನ್ನ ಪುತ್ರನಿಗೆ ಪ್ರಿಯವನ್ನುಂಟು ಮಾಡುವುದಕ್ಕಾಗಿ ತಮ್ಮ ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ಆಚ್ಛಾದಿಸಿ ಘಟೋತ್ಕಚನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತತಃ ಪ್ರವವೃತೇ ಯುದ್ಧಂ ದ್ರೌಣಿರಾಕ್ಷಸಯೋರ್ಮಧೇ ।
ಏಗಾಢೇ ರಜನೀಮಧ್ಯೇ ಶಕ್ರಪ್ರಹ್ಲಾದಯೋರಿವ ॥ ೨೮ ॥

ಆಗ ಗಾಢವಾದ ರಾತ್ರಿ ಉಂಟಾಗುತ್ತಿರಲು ಆ ಕಾಲದಲ್ಲಿ ಅಶ್ವತ್ಥಾಮರಿಗೂ ಮತ್ತು ಘಟೋತ್ಕಚನಿಗೂ ಇಂದ್ರ-ಪ್ರಹ್ಲಾದರಿಗೆ ನಡೆದಂತೆ ಯುದ್ಧವು ನಡೆಯಿತು.

ತತೋ ಘಟೋತ್ಕಚೋ ಬಾಣೈರ್ದಶಭಿರ್ದ್ರೌಣಿಮಾಹವೇ ।
ಜಘಾನೋರಸಿ ಸಂಕ್ರುದ್ಧಃ ಕಾಲಜ್ವಲನಸನ್ನಿಭೈಃ ॥ ೨೯ ॥

ಆಗ ಬಹಳ ಕೋಪಗೊಂಡ ಘಟೋತ್ಕಚನು ರಣರಂಗದಲ್ಲಿ ಕಾಲಾಗ್ನಿಗೆ ಸಮವಾದ ಹತ್ತು ಬಾಣಗಳಿಂದ ಅಶ್ವತ್ಥಾಮರನ್ನು ಅವರ ಎದೆಯಲ್ಲಿ ಹೊಡೆದನು.

ಸ ತೈರಭ್ಯಾಯತೈರ್ವಿದ್ಧೋ ರಾಕ್ಷಸೇನ ಮಹಾಬಲಃ ।
ಚಚಾಲ ಸಮರೇ ದ್ರೌಣಿರ್ವಾತನುನ್ನ ಇವ ದ್ರುಮಃ ।
ಸ ಮೋಹಮನುಸಂಪ್ರಾಪ್ತೋ ಧ್ವಜಯಷ್ಟಿಂ ಸಮಾಶ್ರಿತಃ ॥ ೩೦ ॥

ರಾಕ್ಷಸನಾದ ಘಟೋತ್ಕಚನಿಂದ ವಿಸ್ತಾರವಾದ ಬಾಣಗಳಿಂದ ಹೊಡೆಯಲ್ಪಟ್ಟ ಮಹಾಬಲರಾದ ಅಶ್ವತ್ಥಾಮರು ರಣರಂಗದಲ್ಲಿ ಬಿರುಗಾಳಿಗೆ ಕಂಪಿಸುವ ಮರದಂತೆ ಕಂಪಿಸಿದರು. ಅವರು ಧ್ವಜದಂಡವನ್ನು ಹಿಡಿದು ಮೂರ್ಛೆಯನ್ನು ಹೊಂದಿದರು.

ತತೋ ಹಾಹಾಕೃತಂ ಸೈನ್ಯಂ ತವ ಸರ್ವಂ ಜನಾಧಿಪ ।
ಹತಂ ಸ್ಮ ಮೇನಿರೇ ಸರ್ವೇ ತಾವಕಾಸ್ತಂ ವಿಶಾಂಪತೇ ॥ ೩೧ ॥

ಎಲೈ ರಾಜನೇ, ಆಗ ನಿನ್ನ ಸೈನ್ಯದಲ್ಲಿ ಎಲ್ಲೆಡೆಯಲ್ಲಿಯೂ ಹಾಹಾಕಾರ ಉಂಟಾಯಿತು. ಎಲೈ ರಾಜನೇ, ನಿನ್ನವರೆಲ್ಲರೂ ಅಶ್ವತ್ಥಾಮರು ಹತರಾದರೆಂದು ತಿಳಿದರು.

ತಂ ತು ದೃಷ್ಟ್ವಾ ತಥಾವಸ್ಥಮಶ್ವತ್ಥಾಮಾನಮಾಹವೇ ।
ಪಾಂಚಾಲಾಃ ಸೃಂಜಯಾಶ್ಚೈವ ಸಿಂಹನಾದಂ ಪ್ರಚಕ್ರಿರೇ ॥ ೩೨ ॥

ರಣರಂಗದಲ್ಲಿ ಅಶ್ವತ್ಥಾಮರು ಅಂತಹ ಅವಸ್ಥೆಯನ್ನು ಹೊಂದಿದುದನ್ನು ನೋಡಿ ಪಾಂಚಾಲರು ಮತ್ತು ಸೃಂಜಯರು ಸಿಂಹನಾದವನ್ನು ಮಾಡಿದರು.

ಪ್ರತಿಲಭ್ಯ ತತಃ ಸಂಜ್ಞಾಮಶ್ವತ್ಥಾಮಾ ಮಹಾಬಲಃ ।
ಧನುಃ ಪ್ರಪೀಡ್ಯ ವಾಮೇನ ಕರೇಣಾಮಿತ್ರಕರ್ಶನಃ ॥ ೩೩ ॥

ಮುಮೋಚಾಕರ್ಣಪೂರ್ಣೇನ ಧನುಷಾ ಶರಮುತ್ತಮಮ್ ।
ಯಮದಂಡೋಪಮಂ ಘೋರಮುದ್ದಿಶ್ಯಾಶು ಘಟೋತ್ಕಚಮ್ ॥೩೪॥

ಅಷ್ಟರಲ್ಲಿ ಮಹಾಬಲರಾದ ಅಶ್ವತ್ಥಾಮರು ಪ್ರಜ್ಞೆಯನ್ನು ಪುನಃ ಪಡೆದು ಶತ್ರುಕರ್ಶನರಾದ ಅವರು ಎಡಗೈಯಿಂದ ಧನುಸ್ಸನ್ನು ಬಲವಾಗಿ ಎಳೆದು ಕಿವಿಯವರೆಗೂ ಹೆದೆಯನ್ನು ಎಳೆದು ಶ್ರೇಷ್ಠವಾದ, ಘೋರವಾದ, ಯಮದಂಡ ಸದೃಶವಾದ ಒಂದು ಬಾಣವನ್ನು ಘಟೋತ್ಕಚನ ಮೇಲೆ ಶೀಘ್ರವಾಗಿ ಪ್ರಯೋಗಿಸಿದರು.

ಸ ಭಿತ್ತ್ವಾ ಹೃದಯಂ ತಸ್ಯ ರಾಕ್ಷಸಸ್ಯ ಶರೋತ್ತಮಃ ।
ವಿವೇಶ ವಸುಧಾಮುಗ್ರಃ ಸುಪುಂಖಃ ಪೃಥಿವೀಪತೇ ॥ ೩೫ ॥

ಎಲೈ ರಾಜನೇ, ಆ ಶ್ರೇಷ್ಠವಾದ ಒಳ್ಳೆಯ ಪುಂಖವನ್ನು ಹೊಂದಿದ್ದ ಘೋರವಾದ ಬಾಣವು ರಾಕ್ಷಸನಾದ ಘಟೋತ್ಕಚನ ಹೃದಯವನ್ನು ಭೇದಿಸಿ ಭೂಮಿಯೊಳಗೆ ಇಳಿಯಿತು.

ಸೋಽತಿವಿದ್ಧೋ ಮಹಾರಾಜ ರಥೋಪಸ್ಥ ಉಪಾವಿಶತ್ ।
ರಾಕ್ಷಸೇಂದ್ರಃ ಸುಬಲವಾನ್ ದ್ರೌಣಿನಾ ರಣಮಾನಿನಾ ॥ ೩೬ ॥

ಎಲೈ ಮಹಾರಾಜನೇ, ಯುದ್ಧವನ್ನು ಗೌರವಿಸುವ ಅಶ್ವತ್ಥಾಮರಿಂದ ಅತ್ಯಂತ ಗಾಢವಾಗಿ ಹೀಗೆ ಹೊಡೆಯಲ್ಪಟ್ಟ ಬಲಿಷ್ಠನಾದ ರಾಕ್ಷಸಶ್ರೇಷ್ಠನಾದ ಘಟೋತ್ಕಚನು ರಥಪೀಠದಲ್ಲಿ(ಕುಸಿದು) ಕುಳಿತನು.

ದೃಷ್ಟ್ವಾ ವಿಮೂಢಂ ಹೈಡಿಂಬಂ ಸಾರಥಿಸ್ತಂ ರಣಾಜಿರಾತ್ ।
ದ್ರೌಣೇಃ ಸಕಾಶಾತ್ ಸಂಭ್ರಾಂತಸ್ತ್ವಪನಿನ್ಯೇ ತ್ವರಾನ್ವಿತಃ ॥೩೭ ॥

ಘಟೋತ್ಕಚನು ಮೂರ್ಛೆಹೊಂದಿದುದನ್ನು ನೋಡಿ ಅವನ ಸಾರಥಿಯು ಗಾಬರಿಗೊಂಡು ತ್ವರೆಯಿಂದ ಕೂಡಿ ಅವನನ್ನು ಅಶ್ವತ್ಥಾಮರಿಂದ ಬಿಡಿಸಿ ರಣರಂಗದಿಂದ ಹೊರಗೆ ಕರೆದುಕೊಂಡು ಹೋದನು.

ತಥಾ ತು ಸಮರೇ ವಿದ್ಧ್ವಾ ರಾಕ್ಷಸೇಂದ್ರಂ ಘಟೋತ್ಕಚಮ್ ।
ನನಾದ ಸುಮಹಾನಾದಂ ದ್ರೋಣಪುತ್ರೋ ಮಹಾಬಲಃ ॥ ೩೮ ॥

ದ್ರೋಣಪುತ್ರರೂ, ಮಹಾಬಲರೂ ಆದ ಅಶ್ವತ್ಥಾಮರು ರಾಕ್ಷಸೇಂದ್ರನಾದ ಘಟೋತ್ಕಚನನ್ನು ಆ ರೀತಿಯಲ್ಲಿ ಹೊಡೆದು ಮಹಾನಾದವನ್ನು ಮಾಡಿದರು.

ಪೂಜಿತಸ್ತವ ಪುತ್ರೈಶ್ಚ ಸರ್ವಯೋಧೈಶ್ಚ ಭಾರತ ।
ವಪುಷಾ ಪ್ರತಿಜಜ್ವಾಲ ಮಧ್ಯಾಹ್ನ ಇವ ಭಾಸ್ಕರಃ ॥ ೩೯ ॥

ಎಲೈ ಭಾರತನೇ, ನಿನ್ನ ಪುತ್ರರಿಂದಲೂ ಮತ್ತು ಸರ್ವಯೋಧರಿಂದಲೂ ಪೂಜಿತರಾದ ಅವರ ಶರೀರವು ಮಧ್ಯಾಹ್ನದ ಸೂರ್ಯನಂತೆ ಪ್ರಜ್ವಲಿಸಿತು.

ಭೀಮಸೇನಂ ತು ಯುದ್ಧ್ಯಂತಂ ಭಾರದ್ವಾಜರಥಂ ಪ್ರತಿ ।
ಸ್ವಯಂ ದುರ್ಯೋಧನೋ ರಾಜಾ ಪ್ರತ್ಯವಿದ್ಧ್ಯಚ್ಛಿತೈಃ ಶರೈಃ ॥ ೪೦ ॥

ದ್ರೋಣರ ರಥದ ಬಳಿ ಯುದ್ಧವನ್ನು ಮಾಡುತ್ತಿದ್ದ ಭೀಮಸೇನನ ಮೇಲೆ ರಾಜನಾದ ದುರ್ಯೋಧನನು ಸ್ವತಃ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ತಂ ಭೀಮಸೇನೋ ನವಭಿಃ ಶರೈರ್ವಿವ್ಯಾಧ ಮಾರಿಷ ।
ದುರ್ಯೋಧನೋಽಪಿ ವಿಂಶತ್ಯಾ ಶರಾಣಾಂ ಪ್ರತ್ಯವಿದ್ಧ್ಯತ ॥ ೪೧ ॥

ಎಲೈ ಶ್ರೇಷ್ಠನೇ, ಭೀಮಸೇನನು ಅವನ ಮೇಲೆ ಒಂಬತ್ತು ಬಾಣಗಳನ್ನು ಪ್ರಯೋಗಿಸಿದನು. ದುರ್ಯೋಧನನೂ ಸಹ ಭೀಮಸೇನನನ್ನು ಇಪ್ಪತ್ತು ಬಾಣಗಳಿಂದ ಹೊಡೆದನು.

ತೌ ಸಾಯಕೈರವಚ್ಛನ್ನಾವದೃಶ್ಯೇತಾಂ ರಣಾಜಿರೇ ।
ಮೇಘಜಾಲಸಮಾಚ್ಛನ್ನೌ ನಭಸೀವೇಂದುಭಾಸ್ಕರೌ ॥ ೪೨ ॥

ರಣರಂಗದಲ್ಲಿ ಬಾಣ ಸಮೂಹದಿಂದ ಆಚ್ಛಾದಿತರಾದ ಅವರಿಬ್ಬರೂ ಆಕಾಶದಲ್ಲಿ ಮೇಘಜಾಲದಿಂದ ಆವೃತರಾದ ಸೂರ್ಯ-ಚಂದ್ರರಂತೆ ಶೋಭಿಸಿದರು.

ಅಥ ದುರ್ಯೋಧನೋ ರಾಜಾ ಭೀಮಂ ವಿವ್ಯಾಧ ಪತ್ರಿಭಿಃ ।
ಪಂಚಭಿರ್ಭರತಶ್ರೇಷ್ಠ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೪೩ ॥

ಎಲೈ ಭರತಶ್ರೇಷ್ಠನೇ, ಅನಂತರ ರಾಜನಾದ ದುರ್ಯೋಧನನು ಭೀಮನನ್ನು ಐದು ಬಾಣಗಳಿಂದ ಹೊಡೆದು 'ನಿಲ್ಲು, ನಿಲ್ಲು' ಎಂದು ಹೇಳಿದನು.

ತಸ್ಯ ಭೀಮೋ ಧನುಶ್ಚಿತ್ತ್ವಾ ಧ್ವಜಂ ಚ ನವಭಿಃ ಶರೈಃ ।
ವಿವ್ಯಾಧ ಕೌರವಶ್ರೇಷ್ಠಂ ನವತ್ಯಾ ನತಪರ್ವಣಾಮ್ ॥ ೪೪ ॥

ಭೀಮನು ಒಂಬತ್ತು ಬಾಣಗಳಿಂದ ಅವನ ಧನುಸ್ಸನ್ನೂ ಮತ್ತು ಧ್ವಜವನ್ನೂ ಕತ್ತರಿಸಿ, ಬಾಗಿದ ತುದಿಯುಳ್ಳ ತೊಂಬತ್ತು ಬಾಣಗಳಿಂದ ಕೌರವಶ್ರೇಷ್ಠನಾದ ಅವನನ್ನು ಹೊಡೆದನು.

ತತೋ ದುರ್ಯೋಧನಃ ಕ್ರುದ್ಧೋ ಭೀಮಸೇನಸ್ಯ ಮಾರಿಷ ।
ಚಿಕ್ಷೇಪ ಸ ಶರಾನ್ ರಾಜನ್ ಪಶ್ಯತಾಂ ಸರ್ವಧನ್ವಿನಾಮ್ ॥ ೪೫ ॥

ಎಲೈ ಪೂಜ್ಯನೇ, ರಾಜನೇ, ಆಗ ದುರ್ಯೋಧನನು ಕೋಪಗೊಂಡು ಎಲ್ಲ ಧನುರ್ಧಾರಿಗಳೂ ನೋಡುತ್ತಿರುವಂತೆ ಅನೇಕ ಬಾಣಗಳನ್ನು ಪ್ರಯೋಗಿಸಿದನು.

ತಾನ್ನಿಹತ್ಯ ಶರಾನ್ ಭೀಮೋ ದುರ್ಯೋಧನಧನುಶ್ಚ್ಯುತಾನ್ ।
ಕೌರವಂ ಪಂಚವಿಂಶತ್ಯಾ ಕ್ಷುದ್ರಕಾಣಾಂ ಸಮಾರ್ಪಯತ್ ॥ ೪೬ ॥

ಭೀಮಸೇನನು ದುರ್ಯೋಧನನ ಧನುಸ್ಸಿನಿಂದ ಹೊರಹೊಮ್ಮಿದ ಆ ಬಾಣಗಳನ್ನು ನಾಶಪಡಿಸಿ ಇಪ್ಪತ್ತೈದು ಸಣ್ಣ ಬಾಣಗಳಿಂದ (ಕ್ಷುದ್ರಕಗಳಿಂದ) ಕೌರವನಾದ ಅವನನ್ನು ಹೊಡೆದನು.

ದುರ್ಯೋಧನಸ್ತು ಸಂಕ್ರುದ್ಧೋ ಭೀಮಸೇನಸ್ಯ ಮಾರಿಷ ।
ಕ್ಷುರಪ್ರೇಣ ಧನುಶ್ಛಿತ್ತ್ವಾ ದಶಭಿಃ ಪ್ರತ್ಯವಿದ್ಧ್ಯತ ॥ ೪೭ ॥

ಎಲೈ ಶ್ರೇಷ್ಠನೇ, ಕೋಪಗೊಂಡ ದುರ್ಯೋಧನನು ಕ್ಷುರಪ್ರದಿಂದ ಭೀಮಸೇನನ ಧನುಸ್ಸನ್ನು ಕತ್ತರಿಸಿ ಹತ್ತು ಬಾಣಗಳಿಂದ ಅವನನ್ನು ಹೊಡೆದನು.

ಅಥಾನ್ಯದ್ ಧನುರಾದಾಯ ಭೀಮಸೇನೋ ಮಹಾಬಲಃ ।
ವಿವ್ಯಾಧ ನೃಪತಿಂ ತೂರ್ಣಂ ಸಪ್ತಭಿರ್ನಿಶಿತೈಃ ಶರೈಃ ॥ ೪೮ ॥

ಆಗ ಮಹಾಬಲನಾದ ಭೀಮಸೇನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೀಕ್ಷ್ಣವಾದ ಏಳು ಬಾಣಗಳಿಂದ ದುರ್ಯೋಧನನನ್ನು ಹೊಡೆದನು.

ತದಪ್ಯಸ್ಯ ಧನುಃ ಕ್ಷಿಪ್ರಂ ಚಿಚ್ಛೇದ ಲಘುಹಸ್ತವತ್ ।
ದ್ವಿತೀಯಂ ಚ ತೃತೀಯಂ ಚ ಚತುರ್ಥಂ ಪಂಚಮಂ ತಥಾ ॥ ೪೯ ॥

ಆತ್ತಮಾತ್ತಂ ಮಹಾರಾಜ ಭೀಮಸ್ಯ ಧನುರಾಚ್ಚಿನತ್ ।
ತವ ಪುತ್ರೋ ಮಹಾರಾಜ ಜಿತಕಾಶೀ ಮದೋತ್ಕಟಃ ॥ ೫೦ ॥

ಎಲೈ ಮಹಾರಾಜನೇ, ಕ್ಷಿಪ್ರಹಸ್ತನಾದ ದುರ್ಯೋಧನನು ಆ ಧನುಸ್ಸನ್ನೂ ಶೀಘ್ರವಾಗಿ ಕತ್ತರಿಸಿದನು. ಎಲೈ ಮಹಾರಾಜನೇ, ಹೀಗೆ ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ, ನಂತರ ಭೀಮನು ತೆಗೆದುಕೊಂಡ ಧನುಸ್ಸೆಲ್ಲವನ್ನೂ ಮದೋತ್ಕಟನೂ, ಜಯವಂತನೂ ಆದ ನಿನ್ನ ಪುತ್ರನು ಕತ್ತರಿಸಿದನು.

ಸ ತದಾ ಛಿದ್ಯಮಾನೇಷು ಕಾರ್ಮುಕೇಷು ಪುನಃ ಪುನಃ ।
ಶಕ್ತಿಂ ಚಿಕ್ಷೇಪ ಸಮರೇ ಸರ್ವಪಾರಶವೀಂ ಶುಭಾಮ್ ॥ ೫೧ ॥

ಮೃತ್ಯೋರಿವ ಸ್ವಸಾರಂ ಹಿ ದೀಪ್ತಾಂ ಕೇತುಶಿಖಾಮಿವ ।
ಸೀಮಂತಮಿವ ಕುರ್ವಂತೀಂ ತಮಸೋಗ್ನಿಸಮಪ್ರಭಾಮ್ ॥

ತನ್ನ ಧನುಸ್ಸುಗಳು ಪುನಃ ಪುನಃ ಕತ್ತರಿಸಲ್ಪಡುತ್ತಿರಲು ಭೀಮಸೇನನು ಮೃತ್ಯುವಿನ ತಂಗಿಯಂತಿದ್ದ, ಜ್ವಲಿಸುವ ಅಗ್ನಿಜ್ವಾಲೆಯಂತಿದ್ದ, ಸರ್ವ ಅಯಸ್ಮಯವಾದ, ಶುಭವಾದ ಒಂದು ಶಕ್ತಿಯನ್ನು ದುರ್ಯೋಧನನ ಮೇಲೆ ಎಸೆದನು. ಅದು ಕತ್ತಲಿನಲ್ಲಿ ಕೆಂಪಾದ ಬೈತಲೆಯನ್ನು ಮಾಡುವಂತೆ ಅಗ್ನಿಸಮವಾದ ಕಾಂತಿಯುಳ್ಳದ್ದಾಗಿ ದುರ್ಯೋಧನನ ಬಳಿ ಬಂದಿತು.

ಅಪ್ರಾಪ್ತಾಮೇವ ತಾಂ ಶಕ್ತಿಂ ತ್ರಿಧಾ ಚಿಚ್ಛೇದ ಕೌರವಃ ।
ಪಶ್ಯತಃ ಸರ್ವಲೋಕಸ್ಯ ಭೀಮಸ್ಯ ಚ ಮಹಾತ್ಮನಃ ॥ ೫೨ ॥

ಆ ಶಕ್ತಿಯು ತನ್ನ ಬಳಿಗೆ ಬರುವುದಕ್ಕೆ ಮೊದಲೇ ಕೌರವನಾದ ದುರ್ಯೋಧನನು ಎಲ್ಲ ಯೋಧರೂ ಮತ್ತು ಮಹಾತ್ಮನಾದ ಭೀಮಸೇನನೂ ನೋಡುತ್ತಿರುವಂತೆಯೇ ಮೂರು ಭಾಗಗಳಾಗಿ ಕತ್ತರಿಸಿದನು.

ತತೋ ಭೀಮೋ ಮಹಾರಾಜ ಗದಾಂ ಗುರ್ವೀಂ ಮಹಾಪ್ರಭಾಮ್ ।
ಚಿಕ್ಷೇಪಾವಿದ್ಧ್ಯ ವೇಗೇನ ದುರ್ಯೋಧನರಥಂ ಪ್ರತಿ ॥ ೫೩ ॥

ಎಲೈ ಮಹಾರಾಜನೇ, ಆಗ ಭೀಮಸೇನನು ಭಾರವಾದ, ಮಹಾಕಾಂತಿಯನ್ನು ಹೊಂದಿದ ಒಂದು ಗದೆಯನ್ನು ತೆಗೆದುಕೊಂಡು ಅದನ್ನು ತಿರುಗಿಸಿ ವೇಗದಿಂದ ದುರ್ಯೋಧನನ ರಥದ ಮೇಲೆ ಎಸೆದನು.

ತತಃ ಸಾ ಸಹಸಾ ವಾಹಾಂಸ್ತವ ಪುತ್ರಸ್ಯ ಸಂಯುಗೇ ।
ಸಾರಥಿಂ ಚ ಗದಾ ಗುರ್ವೀ ಮಮರ್ದ ಭರತರ್ಷಭ ॥ ೫೪ ॥

ಎಲೈ ಭರತಶ್ರೇಷ್ಠನೇ, ಆ ಭಾರವಾದ ಗದೆಯು ಶೀಘ್ರವಾಗಿ ನಿನ್ನ ಪುತ್ರನ ರಥದ ಅಶ್ವಗಳನ್ನೂ ಮತ್ತು ಸಾರಥಿಯನ್ನೂ ನಾಶಗೊಳಿಸಿತು.

ಪುತ್ರಸ್ತು ತವ ರಾಜೇಂದ್ರ ರಥಾದ್ದೇಮಪರಿಷ್ಕೃತಾತ್ ।
ಆಪ್ಲುತಃ ಸಹಸಾ ಯಾನಂ ನಂದಕಸ್ಯ ಮಹಾತ್ಮನಃ ॥ ೫೫ ॥

ಎಲೈ ರಾಜೇಂದ್ರನೇ, ನಿನ್ನ ಪುತ್ರನಾದರೋ ಸುವರ್ಣಭೂಷಿತವಾದ ತನ್ನ ರಥದಿಂದ ಹಾರಿ ಶೀಘ್ರವಾಗಿ ಮಹಾತ್ಮನಾದ ನಂದಕನ ರಥವನ್ನು ಏರಿದನು.

ತತೋ ಭೀಮೋ ಹತಂ ಮತ್ವಾ ತವ ಪುತ್ರಂ ಮಹಾರಥಮ್ ।
ಸಿಂಹನಾದಂ ಮಹಚ್ಚಕ್ರೇ ತರ್ಜಯನ್ನಿವ ಕೌರವಾನ್ ॥ ೫೬ ॥

ಆಗ ಭೀಮನು ಮಹಾರಥನಾದ ನಿನ್ನ ಪುತ್ರನು ಹತನಾದನೆಂದು ತಿಳಿದು ಕೌರವರನ್ನು ಭಯಪಡಿಸುವವನಂತೆ ದೊಡ್ಡ ಸಿಂಹನಾದವನ್ನು ಮಾಡಿದನು.

ತಾವಕಾಃ ಸೈನಿಕಾಶ್ಚಾಪಿ ಮೇನಿರೇ ನಿಹತಂ ನೃಪಮ್ ।
ತತೋ ವಿಚುಕ್ರುಶುಃ ಸರ್ವೇ ಹಾ ಹೇತಿ ಚ ಸಮಂತತಃ ॥ ೫೭ ॥

ನಿನ್ನ ಸೈನಿಕರೂ ಸಹ ದುರ್ಯೋಧನನು ಮೃತನಾದನೆಂದೇ ತಿಳಿದರು. ಆಗ ಎಲ್ಲ ಕಡೆಗಳಲ್ಲಿಯೂ ಅವರು ಹಾಹಾಕಾರವನ್ನು ಮಾಡಿದರು.

ತೇಷಾಂ ತು ನಿನದಂ ಶ್ರುತ್ವಾ ತ್ರಸ್ತಾನಾಂ ಸರ್ವಯೋಧಿನಾಮ್ ।
ಭೀಮಸೇನಸ್ಯ ನಾದಂ ಚ ಶ್ರುತ್ವಾ ರಾಜನ್ ಮಹಾತ್ಮನಃ ॥ ೫೮ ॥

ತತೋ ಯುಧಿಷ್ಠಿರೋ ರಾಜಾ ಹತಂ ಮತ್ವಾ ಸುಯೋಧನಮ್ ।
ಅಭ್ಯವರ್ತತ ವೇಗೇನ ಯತ್ರ ಪಾರ್ಥೋ ವೃಕೋದರಃ ॥ ೫೯ ॥

ಎಲೈ ರಾಜನೇ, ಹೆದರಿದ ಎಲ್ಲ ಕೌರವ ಯೋಧರ ಆ ಹಾಹಾಕಾರ ನಾದವನ್ನು ಕೇಳಿ ಮತ್ತು ಮಹಾತ್ಮನಾದ ಭೀಮಸೇನನ ಗರ್ಜನೆಯನ್ನು ಕೇಳಿ ರಾಜನಾದ ಯುಧಿಷ್ಠಿರನು ಸುಯೋಧನನು ಹತನಾದನೆಂದು ತಿಳಿದು ಶೀಘ್ರವಾಗಿ ಕುಂತೀಪುತ್ರನಾದ ವೃಕೋದರನು ಇದ್ದಲ್ಲಿಗೆ ಬಂದನು.

ಪಾಂಚಾಲಾಃ ಕೇಕಯಾ ಮತ್ಸ್ಯಾಃ ಸೃಂಜಯಾಶ್ಚ ವಿಶಾಂಪತೇ ।
ಸರ್ವೋದ್ಯೋಗೇನಾಭಿಜಗ್ಮುರ್ದ್ರೋಣಮೇವ ಯುಯುತ್ಸಯಾ॥ ೬೦ ॥

ಎಲೈ ರಾಜನೇ, ಪಾಂಚಾಲರು, ಕೇಕಯರು, ಮತ್ಸ್ಯರು ಮತ್ತು ಸೃಂಜಯರು ಸರ್ವಪ್ರಯತ್ನದಿಂದ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿ ಮುಂದೆ ಬಂದರು.

ತತ್ರಾಸೀತ್ ಸುಮಹದ್ಯುದ್ಧಂ ದ್ರೋಣಸ್ಯಾಥ ಪರೈಃ ಸಹ ।
ಘೋರೇ ತಮಸಿ ಮಗ್ನಾನಾಂ ನಿಘ್ನತಾಮಿತರೇತರಮ್ ॥ ೬೧ ॥

ಆಗ ಘೋರವಾದ ಕತ್ತಲೆಯಲ್ಲಿ ಮುಳುಗಿ ಪರಸ್ಪರವಾಗಿ ಹೊಡೆದಾಡುವ ದ್ರೋಣರಿಗೂ ಮತ್ತು ಇತರರಿಗೂ ದೊಡ್ಡ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಪಂಚಾಶದಧಿಕಶತತಮೋऽಧ್ಯಾಯಃ ॥
॥ ಘಟೋತ್ಕಚವಧಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೂರನೆಯ ಅಧ್ಯಾಯ

ಕರ್ಣನಿಂದ ಸಹದೇವನ ಪರಾಜಯ ಮತ್ತು ಅವಹೇಳನ. ಶಲ್ಯನಿಂದ ವಿರಾಟನ ಪರಾಜಯ. ಅರ್ಜುನನಿಂದ ಅಲಾಯುಧನ ಪರಾಜಯ.

ಸಂಜಯಃ

ಸಹದೇವಮಥಾಯಾಂತಂ ದ್ರೋಣಪ್ರೇಪ್ಸುಂ ವಿಶಾಂಪತೇ ।
ಕರ್ಣೋ ವೈಕರ್ತನೋ ಯುದ್ಧೇ ವಾರಯಾಮಾಸ ಭಾರತ ॥ ೧ ॥

ಎಲೈ ರಾಜನೇ, ಭಾರತನೇ, ದ್ರೋಣರ ಸಮೀಪಕ್ಕೆ ಬರಲು ಯತ್ನಿಸುತ್ತಿದ್ದ ಸಹದೇವನನ್ನು ವೈಕರ್ತನನಾದ ಕರ್ಣನು ಯುದ್ಧದಲ್ಲಿ ತಡೆದನು.

ಸಹದೇವಸ್ತು ರಾಧೇಯಂ ವಿದ್ವಾ ನವಭಿರಾಶುಗೈಃ ।
ಪುನರ್ವಿವ್ಯಾಧ ದಶಭಿರ್ನಿಶಿತೈರ್ನತಪರ್ವಭಿಃ ॥ ೨ ॥

ಸಹದೇವನಾದರೋ ಕರ್ಣನನ್ನು ಶೀಘ್ರಗಾಮಿಗಳಾದ ಒಂಬತ್ತು ಬಾಣಗಳಿಂದ ಹೊಡೆದು, ಪುನಃ ಬಾಗಿದ ತುದಿಯುಳ್ಳ ತೀಕ್ಷ್ಣವಾದ ಹತ್ತು ಬಾಣಗಳಿಂದ ಹೊಡೆದನು.

ತಂ ಕರ್ಣಃ ಪ್ರತಿವಿವ್ಯಾಧ ಶತೇನ ನತಪರ್ವಣಾಮ್ ।
ಸಜ್ಯಂ ಚಾಸ್ಯ ಧನುಃ ಶೀಘ್ರಂ ಚಿಚ್ಛೇದ ಲಘುಹಸ್ತವತ್ ॥ ೩ ॥

ಕರ್ಣನು ಬಾಗಿದ ತುದಿಯುಳ್ಳ ಮೂರು ಬಾಣಗಳಿಂದ ಅವನನ್ನು ಹೊಡೆದು ಶೀಘ್ರಹಸ್ತವುಳ್ಳವನಾಗಿ ಅವನ ಧನುಸ್ಸನ್ನೂ ಮತ್ತು ಹೆದೆಯನ್ನೂ ಕತ್ತರಿಸಿದನು.

ತತೋಽನ್ಯದ್ ಧನುರಾದಾಯ ಮಾದ್ರೀಪುತ್ರಃ ಪ್ರತಾಪವಾನ್ ।
ಕರ್ಣಂ ವಿವ್ಯಾಧ ವಿಂಶತ್ಯಾ ತದದ್ಭುತಮಿವಾಭವತ್ ॥ ೪ ॥

ಆಗ ಪ್ರತಾಪಶಾಲಿಯಾದ, ಮಾದ್ರೀಪುತ್ರನಾದ ಸಹದೇವನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಇಪ್ಪತ್ತು ಬಾಣಗಳಿಂದ ಕರ್ಣನನ್ನು ಹೊಡೆದನು. ಅದು ಅದ್ಭುತವಾಗಿದ್ದಿತು.

ತಸ್ಯ ಕರ್ಣೋ ಹಯಾನ್ ಹತ್ವಾ ಶರೈಃ ಸನ್ನತಪರ್ವಭಿಃ ।
ಸಾರಥಿಂ ಚಾಸ್ಯ ಭಲ್ಲೇನ ದ್ರುತಂ ನಿನ್ಯೇ ಯಮಕ್ಷಯಮ್ ॥ ೫ ॥

ಕರ್ಣನು ಬಾಗಿದ ತುದಿಯುಳ್ಳ ಬಾಣಗಳಿಂದ ಅವನನ್ನು ಹೊಡೆದು ಅವನ ಸಾರಥಿಯನ್ನು ಭಲ್ಲದಿಂದ ಹೊಡೆದು ಶೀಘ್ರವಾಗಿ ಯಮಲೋಕಕ್ಕೆ ಕಳುಹಿಸಿದನು.

ವಿರಥಃ ಸಹದೇವಸ್ತು ಖಡ್ಗಂ ಚರ್ಮ ಸಮಾದದೇ ।
ತದಪ್ಯಸ್ಯ ಶರೈಃ ಕರ್ಣೋ ವ್ಯಧಮತ್ ಪ್ರಹಸನ್ನಿವ ॥ ೬ ॥

ರಥವನ್ನು ಕಳೆದುಕೊಂಡ ಸಹದೇವನು ಖಡ್ಗ ಮತ್ತು ಚರ್ಮವನ್ನು (ಗುರಾಣಿ) ತೆಗೆದುಕೊಂಡನು. ಕರ್ಣನು ನಗುತ್ತಲೇ ತನ್ನ ಬಾಣಗಳಿಂದ ಅವುಗಳನ್ನೂ ಹಾರಿಸಿದನು.

ತತೋ ಗುರ್ವೀಂ ಮಹಾಘೋರಾಂ ಹೇಮಚಿತ್ರಾಂ ಮಹಾಗದಾಮ್ ।
ಪ್ರೇಷಯಾಮಾಸ ಸಮರೇ ವೈಕರ್ತನರಥಂ ಪ್ರತಿ ॥ ೭ ॥

ಅನಂತರ ಸಹದೇವನು ಭಾರವಾದ, ಮಹಾಘೋರವಾದ, ಸುವರ್ಣಾಲಂಕೃತವಾದ ದೊಡ್ಡ ಗದೆಯನ್ನು ರಣರಂಗದಲ್ಲಿ ಕರ್ಣನ ರಥದ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ಸಹದೇವಪ್ರವೇರಿತಾಮ್ ।
ವ್ಯಷ್ಟಂಭಯಚ್ಛರೈಃ ಕರ್ಣೋ ಭೂಮೌ ಚೈನಾಮಪಾತಯತ್ ॥ ೮ ॥

ಕರ್ಣನು ಸಹದೇವನಿಂದ ಪ್ರಯೋಗಿಸಲ್ಪಟ್ಟು ವೇಗವಾಗಿ ತನ್ನ ಕಡೆಗೆ ಬರುತ್ತಿದ್ದ ಆ ಗದೆಯನ್ನು ತನ್ನ ಬಾಣಗಳಿಂದ ತಡೆದು ಭೂಮಿಯಲ್ಲಿ ಕೆಡವಿದನು.

ಗದಾಂ ವಿನಿಹತಾಂ ದೃಷ್ಟ್ವಾ ಸಹದೇವಸ್ತ್ವರಾನ್ವಿತಃ ।
ಶಕ್ತಿಂ ಚಿಕ್ಷೇಪ ಕರ್ಣಾಯ ತಾಮಪ್ಯಸ್ಯಾಚ್ಛಿನಚ್ಛರೈಃ ॥ ೯ ॥

ಗದೆಯು ವಿನಾಶಗೊಂಡುದನ್ನು ನೋಡಿ ಸಹದೇವನು ತ್ವರೆಯಿಂದ ಕೂಡಿ ಕರ್ಣನ ಮೇಲೆ ಒಂದು ಶಕ್ತಿಯನ್ನು ಎಸೆದನು. ಕರ್ಣನು ಅದನ್ನೂ ಬಾಣಗಳಿಂದ ಕತ್ತರಿಸಿದನು.

ಸಸಂಭ್ರಮಸ್ತತಸ್ತೂರ್ಣಮವಪ್ಲುತ್ಯ ರಥೋತ್ತಮಾತ್ ।
ಸಹದೇವೋ ಮಹಾರಾಜ ದೃಷ್ಟ್ವಾ ಕರ್ಣಂ ವ್ಯವಸ್ಥಿತಮ್ ।
ರಥಚಕ್ರಂ ತತೋ ಗೃಹ್ಯ ಮುಮೋಚಾಧಿರಥಿಂ ಪ್ರತಿ ॥ ೧೦ ॥

ಎಲೈ ಮಹಾರಾಜನೇ, ಸಹದೇವನು ಆಗ ತನ್ನ ಶ್ರೇಷ್ಠವಾದ ರಥದಿಂದ ಗಾಬರಿಗೊಂಡು ಕೆಳಗೆ ಹಾರಿ ಕರ್ಣನು ಹಾಗೆಯೇ ನಿಂತಿರುವುದನ್ನು ನೋಡಿ ರಥಚಕ್ರವನ್ನು ತೆಗೆದುಕೊಂಡು ಅದನ್ನು ಕರ್ಣನ ಮೇಲೆ ಎಸೆದನು.

ತಮಾಪತಂತಂ ಸಹಸಾ ಕಾಲಚಕ್ರಮಿವೋದ್ಯತಮ್ ।
ಶರೈರನೇಕಸಾಹಸ್ರೈರಚ್ಛಿನತ್ ಸೂತನಂದನಃ ॥ ೧೧ ॥

ಉದ್ಯತವಾದ ಕಾಲಚಕ್ರದಂತೆ ತನ್ನೆಡೆಗೆ ಶೀಘ್ರವಾಗಿ ಬರುತ್ತಿದ್ದ ಅದನ್ನೂ ಸಹ ಸೂತನಂದನನಾದ ಕರ್ಣನು ಅನೇಕ ಸಹಸ್ರ ಬಾಣಗಳಿಂದ ಕತ್ತರಿಸಿದನು.

ತಸ್ಮಿಂಸ್ತು ವಿತಥೇ ಚಕ್ರೇ ಕೃತೇ ತೇನ ಮಹಾತ್ಮನಾ ।
ವಾರ್ಯಮಾಣಶ್ಚ ವಿಶಿಖೈಃ ಸಹದೇವೋ ರಣಂ ಜಹೌ ॥ ೧೨ ॥

ಆ ಚಕ್ರವು ವ್ಯರ್ಥವಾಗುತ್ತಿರಲು ಮಹಾರಥನಾದ ಕರ್ಣನಿಂದ ಬಾಣಗಳಿಂದ ತಡೆಯಲ್ಪಡುತ್ತಿದ್ದ ಸಹದೇವನು ರಣರಂಗವನ್ನು ತ್ಯಜಿಸಿದನು.

ತಮಭಿದ್ರುತ್ಯ ರಾಧೇಯೋ ಮುಹೂರ್ತಾದ್ ಭರತರ್ಷಭ ।
ಅಬ್ರವೀತ್ ಪ್ರಹಸನ್ ವಾಕ್ಯಂ ಸಹದೇವಂ ವಿಶಾಂಪತೇ ॥ ೧೩ ॥

ಎಲೈ ರಾಜನೇ, ಭರತಶ್ರೇಷ್ಠನೇ, ಕರ್ಣನು ಒಂದು ಮುಹೂರ್ತದ ಕಾಲ ಸಹದೇವನನ್ನು ಹಿಂಬಾಲಿಸಿ ನಗುತ್ತಾ ಅವನನ್ನು ಕುರಿತು ಮಾತನಾಡಿದನು.

ಮಾ ಯುದ್ಧ್ಯಸ್ವ ರಣೇ ವೀರ ವಿಶಿಷ್ಟೈ ರಥಿಭಿಃ ಸಹ ।
ಸದೃಶೈರ್ಯುಧ್ಯ ಮಾದ್ರೇಯ ವಚೋ ಮೇ ಮಾ ವಿಶಂಕಿಥಾಃ ॥ ೧೪ ॥

ಎಲೈ ವೀರನೇ, ನಿನಗಿಂತ ಶ್ರೇಷ್ಠರಾದ ರಥಿಕರ ಜೊತೆಯಲ್ಲಿ ಯುದ್ಧವನ್ನು ಮಾಡಬೇಡ. ಮಾದ್ರೀಪುತ್ರನೇ, ನಿನಗೆ ಸದೃಶರಾದವರ ಜೊತೆಯಲ್ಲಿ ಯುದ್ಧವನ್ನು ಮಾಡು. ನನ್ನ ಮಾತನ್ನು ಶಂಕಿಸಬೇಡ ಎಂದು ಹೇಳಿದನು.

ಅಥೈನಂ ಧನುಷೋಽಗ್ರೇಣ ತುದನ್ ಭೂಯೋಽಬ್ರವೀದ್ ವಚಃ ।
ಏಷೋರ್ಜುನೋ ರಣೇ ಯತ್ತೋ ಯುದ್ಧ್ಯತೇ ಕುರುಭಿಃ ಸಹ ।
ತತ್ರ ಗಚ್ಛಸ್ವ ಮಾದ್ರೇಯ ಗೃಹಂ ವಾ ಯದಿ ಮನ್ಯಸೇ ॥ ೧೫ ॥

ಅನಂತರ ಕರ್ಣನು ಧನುಸ್ಸಿನ ತುದಿಯಿಂದ ಅವನನ್ನು ತಿವಿಯುತ್ತಾ ಪುನಃ ಅವನನ್ನು ಕುರಿತು 'ಎಲೈ ಮಾದ್ರೀಪುತ್ರನೇ, ಈ ಅರ್ಜುನನು ರಣರಂಗದಲ್ಲಿ ಪ್ರಯತ್ನಪಟ್ಟು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ. ಅಲ್ಲಿಗೆ ಹೋಗು ಅಥವಾ ಬೇಕಾದರೆ ಮನೆಗಾದರೂ ಹೋಗು' ಎಂದು ಹೇಳಿದನು.

ಏವಮುಕ್ತ್ವಾ ತು ತಂ ಕರ್ಣೋ ರಥೇನ ರಥಿನಾಂ ವರಃ ।
ಪ್ರಾಯಾತ್ ಪಾಂಚಾಲಪಾಂಡೂನಾಂ ಸೈನ್ಯಾನಿ ಪ್ರಹಸನ್ನಿವ ॥ ೧೬ ॥

ರಥಿಶ್ರೇಷ್ಠನಾದ ಕರ್ಣನು ಹೀಗೆ ಹೇಳಿ ನಗುತ್ತಾ ಪಾಂಚಾಲ-ಪಾಂಡವ ಸೇನೆ ಇದ್ದ ಕಡೆಗೆ ತನ್ನ ರಥದಿಂದ ಹೊರಟನು.

ವಧಪ್ರಾಪ್ತಂ ತು ಮಾದ್ರೇಯಂ ನಾವಧೀತ್ ಸಮರೇಽರಿಹಾ ।
ಕುಂತ್ಯಾಃ ಸ್ಮೃತ್ವಾ ವಚೋ ರಾಜನ್ ಸತ್ಯಸಂಧೋ ಮಹಾರಥಃ ॥ ೧೭ ॥

ಶತ್ರುಘಾತಕನಾದ ಕರ್ಣನು ಸಹದೇವನನ್ನು ವಧಿಸಲು ಪ್ರಾಪ್ತನಾಗಿದ್ದರೂ ಕುಂತಿಯ ಮಾತುಗಳನ್ನು ಸ್ಮರಿಸಿ, ಎಲೈ ರಾಜನೇ, ಸತ್ಯಸಂಧನೂ, ಮಹಾರಥನೂ ಆದ ಅವನು ಅವನನ್ನು ಕೊಲ್ಲಲಿಲ್ಲ.

ಸಹದೇವಸ್ತತೋ ರಾಜನ್ ವಿಮನಾಃ ಶರಪೀಡಿತಃ ।
ಕರ್ಣವಾಕ್‌ಶಲ್ಯತಪ್ತಶ್ಚ ಜೀವಿತಾನ್ನಿರವಿದ್ಯತ ॥ ೧೮ ॥

ಎಲೈ ರಾಜನೇ, ಆಗ ಸಹದೇವನು ಕರ್ಣನ ಬಾಣಗಳಿಂದ ಪೀಡಿತನಾಗಿ, ಕರ್ಣನ ವಾಗ್ಬಾಣಗಳಿಂದಲೂ ತಪ್ತನಾಗಿ ಬೇಸರಗೊಂಡು ತನ್ನ ಜೀವನದಲ್ಲಿಯೇ ನಿರಾಶೆಯನ್ನು ಹೊಂದಿದನು.

ಆರುರೋಹ ರಥಂ ಚಾಪಿ ಪಾಂಚಾಲ್ಯಸ್ಯ ಮಹಾತ್ಮನಃ ।
ಜನಮೇಜಯಸ್ಯ ಸಮರೇ ತ್ವರಾಯುಕ್ತೋ ಮಹಾರಥಃ ॥ ೧೯ ॥

ಮಹಾರಥನಾದ ಅವನು ತ್ವರೆಯಿಂದ ಕೂಡಿ ಪಾಂಚಾಲ ದೇಶದ ಮಹಾತ್ಮನಾದ ಜನಮೇಜಯನ ರಥವನ್ನು ಏರಿದನು.

ವಿರಾಟಂ ಸಹಸೇನಂ ತು ದ್ರೋಣಾರ್ಥೇ ದ್ರುತಮಾಗತಮ್ ।
ಮದ್ರರಾಜಃ ಶರೌಘೇಣ ಛಾದಯಾಮಾಸ ಧನ್ವಿನಮ್ ॥ ೨೦ ॥

ತನ್ನ ಸೈನ್ಯದ ಜೊತೆಯಲ್ಲಿ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬರುತ್ತಿದ್ದ ಧನುರ್ಧಾರಿಯಾದ ವಿರಾಟನನ್ನು ಮದ್ರರಾಜನಾದ ಶಲ್ಯನು ಬಾಣಗಳ ಸಮೂಹದಿಂದ ಆಚ್ಛಾದಿಸಿದನು.

ತಯೋಃ ಸಮಭವದ್ ಯುದ್ಧಂ ಸಮರೇ ದೃಢಧನ್ವಿನೋಃ ।
ಯಾದೃಶಂ ಹ್ಯಭವದ್ ರಾಜನ್ ಜಂಭವಾಸವಯೋಃ ಪುರಾ ॥ ೨೧ ॥

ಎಲೈ ರಾಜನೇ, ಹಿಂದೆ ಜಂಭಾಸುರನಿಗೂ ಇಂದ್ರನಿಗೂ ನಡೆದಂತಹ ಘೋರವಾದ ಯುದ್ಧಕ್ಕೆ ಸದೃಶವಾದ ಯುದ್ಧವು ದೃಢವಾದ ಧನುಸ್ಸುಳ್ಳ ಅವರಿಬ್ಬರಿಗೆ ನಡೆಯಿತು.

ಮದ್ರರಾಜೋ ಮಹಾರಾಜ ವಿರಾಟಂ ವಾಹಿನೀಪತಿಮ್ ।
ಆಜಘ್ನೇ ತ್ವರಿತಂ ತೀಕ್ಷ್ಣೈಃ ಶತೇನ ನತಪರ್ವಣಾಮ್ ॥ ೨೨ ॥

ಎಲೈ ಮಹಾರಾಜನೇ, ಮದ್ರರಾಜನಾದ ಶಲ್ಯನು ಸೇನಾಪತಿಯಾದ ವಿರಾಟನನ್ನು ಬಾಗಿದ ತುದಿಯುಳ್ಳ ನೂರು ತೀಕ್ಷ್ಣವಾದ ಬಾಣಗಳಿಂದ ಶೀಘ್ರವಾಗಿ ಹೊಡೆದನು.

ಪ್ರತಿವಿವ್ಯಾಧ ತಂ ರಾಜಾ ನವಭಿರ್ನಿಶಿತೈಃ ಶರೈಃ ।
ಪುನಶ್ಚೈವ ತ್ರಿಸಪ್ತತ್ಯಾ ಭೂಯಶ್ಚೈವ ಶತೇನ ಹ ॥ ೨೩ ॥

ವಿರಾಟರಾಜನು ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದು ಪುನಃ ಎಪ್ಪತ್ಮೂರು ಬಾಣಗಳಿಂದಲೂ, ಪುನಃ ನೂರು ಬಾಣಗಳಿಂದಲೂ ಹೊಡೆದನು.

ತಸ್ಯ ಮದ್ರಾಧಿಪೋ ಹತ್ವಾ ಚತುರೋ ರಥವಾಜಿನಃ ।
ಸೂತಂ ಧ್ವಜಂ ಚ ಸಮರೇ ರಥೋಪಸ್ಥಾದಪಾತಯತ್ ॥ ೨೪ ॥

ಮದ್ರರಾಜನಾದ ಶಲ್ಯನು ಅವನ ರಥದ ನಾಲ್ಕು ಅಶ್ವಗಳನ್ನು ಕೊಂದು ರಥದ ಸಾರಥಿಯನ್ನೂ ಮತ್ತು ಧ್ವಜವನ್ನೂ ರಣರಂಗದಲ್ಲಿ ರಥಪೀಠದಿಂದ ಕೆಡವಿದನು.

ಹತಾಶ್ವಾತ್ ತು ರಥಾತ್ತೂರ್ಣಮವಪ್ಲುತ್ಯ ಮಹಾರಥಃ ।
ತಸ್ಥೌ ವಿಸ್ಫಾರಯಂಶ್ಚಾಪಂ ವಿಮುಂಚಂಶ್ಚ ಶಿತಾನ್ ಶರಾನ್ ॥ ೨೫॥

ಮಹಾರಥನಾದ ಜನಮೇಜಯನು ಅಶ್ವಗಳು ಮೃತವಾದ ತನ್ನ ರಥದಿಂದ ಶೀಘ್ರವಾಗಿ ಕೆಳಗೆ ಹಾರಿ ತನ್ನ ಧನುಸ್ಸನ್ನು ಎಳೆದು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ನಿಂತನು.

ಶತಾನೀಕಸ್ತತೋ ದೃಷ್ಟ್ವಾ ಭ್ರಾತರಂ ಹತವಾಹನಮ್ ।
ರಥೇನಾಭ್ಯಪತತ್ ತೂರ್ಣಂ ಸರ್ವಲೋಕಸ್ಯ ಪಶ್ಯತಃ ॥ ೨೬ ॥

ಅವನ ತಮ್ಮನಾದ ಶತಾನೀಕನು ತನ್ನ ಸಹೋದರನು ವಾಹನವನ್ನು ಕಳೆದುಕೊಂಡುದನ್ನು ನೋಡಿ ಎಲ್ಲ ಲೋಕಗಳೂ ನೋಡುತ್ತಿರುವಂತೆ ಶೀಘ್ರವಾಗಿ ತನ್ನ ರಥದಿಂದ ಅವನ ಬಳಿಗೆ ಬಂದನು.

ಶತಾನೀಕಮಥಾಯಾಂತಂ ಮದ್ರರಾಜೋ ಮಹಾಮೃಧೇ ।
ವಿಶಿಖೈರ್ಬಹುಭಿರ್ವಿದ್ಧ್ವಾ ತತೋ ನಿನ್ಯೇ ಯಮಕ್ಷಯಮ್ ॥ ೨೭ ॥

ಮದ್ರರಾಜನಾದ ಶಲ್ಯನು ಆ ದೊಡ್ಡ ಯುದ್ಧದಲ್ಲಿ ತನ್ನ ಬಳಿಗೆ ಬರುತ್ತಿದ್ದ ಶತಾನೀಕನನ್ನು ನೋಡಿ ಅನೇಕ ಬಾಣಗಳಿಂದ ಅವನನ್ನು ಹೊಡೆದು ಯಮಲೋಕಕ್ಕೆ ಕಳುಹಿಸಿದನು.

ತಸ್ಮಿಂಸ್ತು ನಿಹತೇ ವೀರೇ ವಿರಾಟೋ ರಥಸತ್ತಮಃ ।
ಆರುರೋಹ ರಥಂ ತೂರ್ಣಂ ತಮೇವ ಧ್ವಜಮಾಲಿನಮ್ ॥ ೨೮ ॥

ವೀರನೂ, ರಥಶ್ರೇಷ್ಠನೂ ಆದ ಶತಾನೀಕನು ಹತನಾಗುತ್ತಿರಲು ವಿರಾಟನು ಧ್ವಜಮಾಲೆಗಳಿಂದ ಅಲಂಕರಿಸಿದ್ದ ಅದೇ ರಥವನ್ನು ಶೀಘ್ರವಾಗಿ ಏರಿದನು.

ತತೋ ವಿಸ್ಫಾರ್ಯ ನಯನೇ ಕ್ರೋಧಾದ್ ದ್ವಿಗುಣವಿಕ್ರಮಃ ।
ಮದ್ರರಾಜರಥಂ ತೂರ್ಣಂ ಛಾದಯಾಮಾಸ ಪತ್ರಿಭಿಃ ॥ ೨೯ ॥

ಅನಂತರ ಕಣ್ಣುಗಳನ್ನು ಅರಳಿಸಿ ಕ್ರೋಧದಿಂದ ಎರಡುಪಟ್ಟು ಪರಾಕ್ರಮ ಉಳ್ಳವನಾಗಿ ಶೀಘ್ರವಾಗಿ ಬಾಣಗಳಿಂದ ಶಲ್ಯನ ರಥವನ್ನು ಆಚ್ಛಾದಿಸಿದನು.

ತತೋ ಮದ್ರಾಧಿಪಃ ಕ್ರುದ್ಧಃ ಶತೇನ ನತಪರ್ವಣಾಮ್ ।
ಆಜಘಾನೋರಸಿ ದೃಢಂ ವಿರಾಟಂ ವಾಹಿನೀಪತಿಮ್ ॥ ೩೦ ॥

ಆಗ ಕೋಪಗೊಂಡ ಶಲ್ಯನು ಬಾಗಿದ ತುದಿಯುಳ್ಳ ನೂರು ಬಾಣಗಳಿಂದ ಸೇನಾಪತಿಯಾದ ವಿರಾಟನನ್ನು ಅವನ ಎದೆಯಲ್ಲಿ ದೃಢವಾಗಿ ಹೊಡೆದನು.

ಸೋಽತಿವಿದ್ಧೋ ಮಹಾರಾಜ ರಥೋಪಸ್ಥ ಉಪಾವಿಶತ್ ।
ಕಶ್ಮಲಂ ಚಾವಿಶತ್ ತೀವ್ರಂ ವಿರಾಟೋ ಭರತರ್ಷಭ ।
ಸಾರಥಿಸ್ತಮಪೋವಾಹ ಸಮರೇ ಶರವಿಕ್ಷತಮ್ ॥ ೩೧ ॥

ಎಲೈ ಮಹಾರಾಜನೇ, ಗಾಢವಾಗಿ ಹೊಡೆಯಲ್ಪಟ್ಟ ಆ ವಿರಾಟನು ರಥಪೀಠದಲ್ಲಿ ಕುಸಿದು ಮೂರ್ಛೆ ಹೋದನು. ಎಲೈ ಭರತಶ್ರೇಷ್ಠನೇ, ಬಾಣಗಳಿಂದ ಗಾಯಗೊಂಡ ಅವನನ್ನು ಅವನ ಸಾರಥಿಯು ಯುದ್ಧದಿಂದ ದೂರ ಕರೆದುಕೊಂಡು ಹೋದನು.

ತತಃ ಸಾ ಮಹತೀ ಸೇನಾ ಪ್ರಾದ್ರವನ್ನಿಶಿ ಭಾರತ ।
ವಧ್ಯಮಾನಾ ಶರಶತೈಃ ಶಲ್ಯೇನಾಹವಶೋಭಿನಾ ॥ ೩೨ ॥

ಆಗ ರಣಶೋಭಿಯಾದ ಶಲ್ಯನಿಂದ ನೂರಾರು ಬಾಣಗಳಿಂದ ಹೊಡೆಯಲ್ಪಟ್ಟ ಆ ದೊಡ್ಡ ಪಾಂಡವರ ಸೈನ್ಯವು ಎಲೈ ಭಾರತನೇ, ರಾತ್ರಿಯ ಸಮಯದಲ್ಲಿ ಓಡಿ ಹೋಯಿತು.

ತಾಂ ದೃಷ್ಟ್ವಾ ವಿದ್ರುತಾಂ ಸೇನಾಂ ವಾಸುದೇವಧನಂಜಯೌ ।
ಪ್ರಾಯಾತಾಂ ತತ್ರ ರಾಜೇಂದ್ರ ಯತ್ರ ಶಲ್ಯೋ ವ್ಯವಸ್ಥಿತಃ ॥ ೩೩ ॥

ಎಲೈ ರಾಜೇಂದ್ರನೇ, ಆ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ಕೃಷ್ಣಾರ್ಜುನರು ಶಲ್ಯನಿದ್ದ ಕಡೆಗೆ ಶೀಘ್ರವಾಗಿ ಬಂದರು.

ತೌ ತು ಪ್ರತ್ಯುದ್ಯಯೌ ರಾಜನ್ ರಾಕ್ಷಸೇಂದ್ರೋ ಹ್ಯಲಾಯುಧಃ ।
ಅಷ್ಟಚಕ್ರಸಮಾಯುಕ್ತಮಾಸ್ಥಾಯ ಪ್ರವರಂ ರಥಮ್ ॥ ೩೪ ॥

ಎಲೈ ರಾಜನೇ, ರಾಕ್ಷಸೇಂದ್ರನಾದ ಅಲಾಯುಧನು ಎಂಟುಚಕ್ರಗಳುಳ್ಳ ಶ್ರೇಷ್ಠವಾದ ರಥವನ್ನು ಏರಿ ಕೃಷ್ಣಾರ್ಜುನರನ್ನು ಎದುರಿಸಿದನು.

ತುರಂಗಮಮುಖೈರ್ಯುಕ್ತಂ ಪಿಶಾಚೈಘೋರದರ್ಶನೈಃ ।
ಲೋಹಿತಾರ್ದ್ರಪತಾಕಂ ತಂ ರಕ್ತಮಾಲ್ಯವಿಭೂಷಿತಮ್ ।
ಕಾರ್ಷ್ಣಾಯಸಮಯಂ ಘೋರಮೃಕ್ಷಚರ್ಮಾವೃತಂ ಮಹತ್ ॥ ೩೫ ॥

ರೌದ್ರೇಣ ಚಿತ್ರಪಕ್ಷೇಣ ವಿವೃತಾಕ್ಷೇಣ ಕೂಜತಾ ।
ಧ್ವಜೇನೋಚ್ಛ್ರಿತತುಂಡೇನ ಗೃಧ್ರರಾಜೇನ ರಾಜತಾ ॥ ೩೬ ॥

ಅಶ್ವಮುಖಗಳನ್ನು ಹೊಂದಿದ, ನೋಡಲು ಘೋರವಾದ ಪಿಶಾಚಿಗಳಿಂದ ಕೂಡಿದ, ರಕ್ತದಿಂದ ಒದ್ದೆಯಾದ ಪತಾಕೆಗಳುಳ್ಳ, ಕೆಂಪು ಹೂವಿನ ಮಾಲೆಗಳಿಂದ ಅಲಂಕೃತವಾದ, ಕಬ್ಬಿಣದಿಂದ ಮಾಡಿದ, ಕರಡಿಯ ಚರ್ಮದಿಂದ ಆವೃತವಾದ, ನೋಡಲು ಭಯಂಕರವಾದ, ವಿಚಿತ್ರವಾದ ಪಾರ್ಶ್ವವನ್ನು ಹೊಂದಿದ್ದ, ತೆರೆದ ಅಕ್ಷದಿಂದ ದೊಡ್ಡನಾದವನ್ನು ಮಾಡುತ್ತಿದ್ದ, ಬಾಯನ್ನು ಎತ್ತಿದ ಹದ್ದಿನ ಉನ್ನತವಾದ ಧ್ವಜದಿಂದ ವಿರಾಜಿಸುವ (ರಥದಿಂದ ಅಲ್ಲಿಗೆ ಬಂದನು).

ಸ ಬಭೌ ರಾಕ್ಷಸೋ ರಾಜನ್ ಭಿನ್ನಾಂಜನಚಯೋಪಮಃ ।
ರುರೋಧಾರ್ಜುನಮಾಯಾಂತಂ ಪ್ರಭಂಜನಮಿವಾದ್ರಿರಾಟ್ ।
ಕಿರನ್ ಬಾಣಗಣಾನ್ ರಾಜನ್ ಶತಶೋಽರ್ಜುನಮೂರ್ಧನಿ ॥ ೩೭ ॥

ಎಲೈ ರಾಜನೇ, ಕಾಡಿಗೆಯ ರಾಶಿಯಂತೆ ಶೋಭಿಸುತ್ತಿದ್ದ ಆ ರಾಕ್ಷಸನು ಪರ್ವತವು ವಾಯುವನ್ನು ತಡೆಯುವಂತೆ ಅರ್ಜುನನ ಶಿರಸ್ಸಿನಲ್ಲಿ ನೂರಾರು ಬಾಣಗಳ ಸಮೂಹವನ್ನು ಸುರಿಸುತ್ತಾ ಅಲ್ಲಿಗೆ ಬರುತ್ತಿದ್ದ ಅರ್ಜುನನನ್ನು ತಡೆದನು.

ಅತಿತೀವ್ರಮಭೂದ್ ಯುದ್ಧಂ ನರರಾಕ್ಷಸಯೋರ್ಮೃಧೇ ।
ದ್ರಷ್ಟೄಣಾಂ ಪ್ರೀತಿಜನನಂ ಸರ್ವೇಷಾಂ ಭರತರ್ಷಭ ॥ ೩೮ ॥

ಎಲೈ ಭರತಶ್ರೇಷ್ಠನೇ, ಆಗ ನರ-ರಾಕ್ಷಸರಾದ ಅವರಿಬ್ಬರಿಗೆ ನೋಡುವ ಎಲ್ಲರಿಗೂ ಸಂತೋಷವನ್ನುಂಟು ಮಾಡುವ ಬಹಳ ತೀವ್ರವಾದ ಯುದ್ಧವು ನಡೆಯಿತು.

ತಮರ್ಜುನಃ ಶತೇನೈವ ಪತ್ರಿಣಾಮಭ್ಯತಾಡಯತ್ ।
ನವಭಿಶ್ಚ ಶಿತೈರ್ಬಾಣೈಶ್ಚಿಚ್ಛೇದ ಧ್ವಜಮುಚ್ಛ್ರಿತಮ್ ॥ ೩೯ ॥

ಸಾರಥಿಂ ಚ ತ್ರಿಭಿರ್ಬಾಣೈಸ್ತ್ರಿಭಿರೇವ ತ್ರಿವೇಣುಕಮ್ ।
ಧನುರೇಕೇನ ಚಿಚ್ಛೇದ ಚತುರ್ಭಿಶ್ಚತುರೋ ಹಯಾನ್ ।
ವಿರಥಸ್ಯೋದ್ಯತಂ ಖಡ್ಗಂ ಶರೇಣಾಸ್ಯ ದ್ವಿಧಾऽಚ್ಛಿನತ್ ॥ ೪೦ ॥

ಅರ್ಜುನನು ಅವನನ್ನು ನೂರು ಬಾಣಗಳಿಂದ ಹೊಡೆದು, ಒಂಬತ್ತು ತೀಕ್ಷ್ಣವಾದ ಬಾಣಗಳಿಂದ ಅವನ ಉನ್ನತವಾದ ಧ್ವಜವನ್ನು ಕತ್ತರಿಸಿದನು. ಮೂರು ಬಾಣಗಳಿಂದ ಅವನ ಸಾರಥಿಯನ್ನೂ, ಮೂರು ಬಾಣಗಳಿಂದ ರಥದ ತ್ರಿವೇಣುವನ್ನೂ, ಒಂದು ಬಾಣದಿಂದ ಅವನ ಧನುಸ್ಸನ್ನೂ ಕತ್ತರಿಸಿ, ನಾಲ್ಕು ಬಾಣಗಳಿಂದ ಅವನ ಅಶ್ವಗಳನ್ನೂ ಕೊಂದು, ರಥವನ್ನು ಕಳೆದುಕೊಂಡು ಖಡ್ಗವನ್ನು ಹಿಡಿದುನಿಂತ ಅವನ ಖಡ್ಗವನ್ನು ಒಂದು ಬಾಣದಿಂದ ಎರಡು ಭಾಗವಾಗಿ ಕತ್ತರಿಸಿದನು.

ಅಥೈನಂ ನಿಶಿತೈರ್ಬಾಣೈಶ್ಚತುರ್ಭಿರ್ಭರತರ್ಷಭ ।
ಪಾರ್ಥೋऽರ್ದಯದ್ ರಾಕ್ಷಸೇಂದ್ರಂ ಸ ವಿದ್ದಃ ಪ್ರಾದ್ರವದ್ಭಯಾತ್ ॥

ಎಲೈ ಭರತರ್ಷಭನೇ, ಅನಂತರ ತೀಕ್ಷ್ಣವಾದ ನಾಲ್ಕು ಬಾಣಗಳಿಂದ ಅರ್ಜುನನು ಅವನನ್ನು ಪೀಡಿಸಿದನು. ಆ ರೀತಿ ಬಾಣಗಳಿಂದ ಹೊಡೆಯಲ್ಪಟ್ಟ ರಾಕ್ಷಸೇಂದ್ರನಾದ ಅಲಾಯುಧನು ಭಯದಿಂದ ಓಡಿಹೋದನು.

ತಂ ವಿಜಿತ್ಯಾರ್ಜುನಸ್ತೂರ್ಣಂ ದ್ರೋಣಾಂತಿಕಮುಪಾಯಯೌ ।
ಕಿರನ್ ಶರಗಣಾನ್ ರಾಜನ್ ನರವಾರಣವಾಜಿಷು ॥ ೪೨ ॥

ಎಲೈ ರಾಜನೇ, ಅರ್ಜುನನು ಅವನನ್ನು ಶೀಘ್ರವಾಗಿ ಜಯಿಸಿ ಯೋಧರ ಮೇಲೆ, ಗಜಗಳ ಮೇಲೆ ಮತ್ತು ಅಶ್ವಗಳ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ ದ್ರೋಣರ ಸಮೀಪಕ್ಕೆ ಬಂದನು.

ವಧ್ಯಮಾನಾ ಮಹಾರಾಜ ಪಾಂಡವೇನ ಯಶಸ್ವಿನಾ ।
ಸೈನಿಕಾ ನ್ಯಪತನ್ಭೂರ್ಮ್ಯಾಂ ವಾತನುನ್ನಾ ಇವ ದ್ರುಮಾಃ ॥ ೪೩ ॥

ಎಲೈ ಮಹಾರಾಜನೇ, ಕೀರ್ತಿಶಾಲಿಯಾದ, ಪಾಂಡುಪುತ್ರನಾದ ಅರ್ಜುನನಿಂದ ಹೊಡೆಯಲ್ಪಟ್ಟ ನಿನ್ನ ಸೈನಿಕರು ಬಿರುಗಾಳಿಗೆ ಸಿಕ್ಕಿದ ಮರಗಳಂತೆ ಭೂಮಿಯ ಮೇಲೆ ಬಿದ್ದರು.

ತೇಷು ತೂತ್ಪಾದ್ಯಮಾನೇಷು ಫಲ್ಗುನೇನ ಮಹಾತ್ಮನಾ ।
ಸಂಪ್ರಾದ್ರವದ್ ಬಲಂ ಸರ್ವಂ ಪುತ್ರಾಣಾಂ ತೇ ವಿಶಾಂಪತೇ ॥ ೪೪ ॥

ಎಲೈ ರಾಜನೇ, ಮಹಾತ್ಮನಾದ ಅರ್ಜುನನಿಂದ ನಿನ್ನ ಸೈನಿಕರು ಹೀಗೆ ನಾಶಗೊಳ್ಳುತ್ತಿರಲು ನಿನ್ನ ಪುತ್ರರ ಸೈನ್ಯವು ರಣರಂಗದಿಂದ ಓಡಿಹೋಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ನಾಲ್ಕನೆಯ ಅಧ್ಯಾಯ

ಶತಾನೀಕ-ಚಿತ್ರಸೇನರ, ದ್ರುಪದ-ವೃಷಸೇನರ,
ಪ್ರತಿವಿಂಧ್ಯ-ದುಶ್ಶಾಸನರ ಸಂಕುಲಯುದ್ಧ.

ಸಂಜಯಃ

ಶತಾನೀಕಂ ಶರೈಸ್ತೂರ್ಣಂ ನಿರ್ದಹಂತಂ ಚಮೂಂ ತವ ।
ಚಿತ್ರಸೇನಸ್ತವ ಸುತೋ ವಾರಯಾಮಾಸ ಭಾರತ ॥ ೧ ॥

ಸಂಜಯ– ಎಲೈ ಭಾರತನೇ, ನಿನ್ನ ಸೈನ್ಯವನ್ನು ತನ್ನ ಬಾಣಗಳಿಂದ ಶೀಘ್ರವಾಗಿ ದಹಿಸುತ್ತಿದ್ದ ಶತಾನೀಕನನ್ನು ನಿನ್ನ ಪುತ್ರನಾದ ಚಿತ್ರಸೇನನು ತಡೆದನು.

ನಾಕುಲಿಶ್ಚಿತ್ರಸೇನಂ ತು ನಾರಾಚೇನಾರ್ದಯದ್ ಭೃಶಮ್ ।
ಸ ಚ ತಂ ಪ್ರತಿವಿವ್ಯಾಧ ದಶಭಿರ್ನಿಶಿತೈಃ ಶರೈಃ ॥ ೨ ॥

ನಕುಲಪುತ್ರನಾದ ಶತಾನೀಕನು ಚಿತ್ರಸೇನನನ್ನು ನಾರಾಚದಿಂದ ದೃಢವಾಗಿ ಹೊಡೆದನು. ಚಿತ್ರಸೇನನೂ ಸಹ ಅವನನ್ನು ತೀಕ್ಷ್ಣವಾದ ಹತ್ತು ಬಾಣಗಳಿಂದ ಪ್ರತಿಯಾಗಿ ಹೊಡೆದನು.

ಚಿತ್ರಸೇನೋ ಮಹಾರಾಜ ಶತಾನೀಕಂ ಪುನರ್ಯುಧಿ ।
ನವಭಿರ್ನಿಶಿತೈರ್ಬಾಣೈರಾಜಘಾನ ಸ್ತನಾಂತರೇ ॥ ೩ ॥

ಎಲೈ ಮಹಾರಾಜನೇ, ಪುನಃ ಚಿತ್ರಸೇನನು ರಣರಂಗದಲ್ಲಿ ಶತಾನೀಕನನ್ನು ತೀಕ್ಷ್ಣವಾದ ಒಂಬತ್ತು ಬಾಣಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ನಾಕುಲಿಸ್ತಸ್ಯ ವಿಶಿಖೈರ್ವರ್ಮ ಸನ್ನತಪರ್ವಭಿಃ ।
ಗಾತ್ರಾತ್ ಸಂಚ್ಕವಯಾಮಾಸ ತದದ್ಭುತಮಿವಾಭವತ್ ॥ ೪ ॥

ನಕುಲಪುತ್ರನಾದ ಶತಾನೀಕನು ಬಾಗಿದ ತುದಿಯುಳ್ಳ ಬಾಣಗಳಿಂದ ಅವನ ಕವಚವನ್ನು ಶರೀರದಿಂದ ಕೆಡವಿದನು. ಅದು ಅದ್ಭುತವಾಗಿದ್ದಿತು.

ಸೋಽಪೇತವರ್ಮಾ ಪುತ್ರಸ್ತೇ ವಿರರಾಜ ಭೃಶಂ ನೃಪ ।
ಉತ್ಸೃಜ್ಯ ಕಾಲೇ ರಾಜೇಂದ್ರ ನಿರ್ಮೋಕಮಿವ ಪನ್ನಗಃ ॥ ೫ ॥

ಎಲೈ ರಾಜನೇ, ಕವಚವನ್ನು ಕಳೆದುಕೊಂಡ ನಿನ್ನ ಪುತ್ರನು ಯೋಗ್ಯ ಸಮಯದಲ್ಲಿ ಪೊರೆಯನ್ನು ಕಳಚಿಕೊಂಡ ಸರ್ಪದಂತೆ ಬಹಳವಾಗಿ ವಿರಾಜಿಸಿದನು.

ತತೋಽಸ್ಯ ನಿಶಿತೈರ್ಬಾಣೈರ್ಧ್ವಜಂ ಚಿಚ್ಛೇದ ನಾಕುಲಿಃ ।
ಧನುಶ್ಚೈವ ಮಹಾರಾಜ ಯತಮಾನಸ್ಯ ಸಂಯುಗೇ ॥ ೬ ॥

ಎಲೈ ಮಹಾರಾಜನೇ, ಅನಂತರ ನಕುಲ ಪುತ್ರನು ತೀಕ್ಷ್ಣವಾದ ಬಾಣಗಳಿಂದ ಅವನ ಧ್ವಜವನ್ನು ಕತ್ತರಿಸಿ ಯುದ್ಧದಲ್ಲಿ ಪ್ರಯತ್ನಶೀಲನಾಗಿದ್ದ ಅವನ ಧನುಸ್ಸನ್ನೂ ಕತ್ತರಿಸಿದನು.

ಸ ಛಿನ್ನಧನ್ವಾ ಸಮರೇ ವಿವರ್ಮಾ ಚ ಮಹಾರಥಃ ।
ಧನುರನ್ಯನ್ಮಹಾರಾಜ ಜಗ್ರಾಹಾರಿವಿದಾರಣಮ್ ॥ ೭ ॥

ಎಲೈ ಮಹಾರಾಜನೇ, ತನ್ನ ಧನುಸ್ಸು ಕತ್ತರಿಸಲ್ಪಟ್ಟು ಕವಚವನ್ನು ಕಳೆದುಕೊಂಡ ಮಹಾರಥನಾದ ಚಿತ್ರಸೇನನು ಶತ್ರುಭೇದಕವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡನು.

ತತಸ್ತೂರ್ಣಂ ಚಿತ್ರಸೇನೋ ನಾಕುಲಿಂ ನವಭಿಃ ಶರೈಃ ।
ವಿವ್ಯಾಧ ಸಮರೇ ಕ್ರುದ್ಧೋ ಭರತಾನಾಂ ಮಹಾರಥಃ ॥ ೮ ॥

ಅನಂತರ ಭರತರ ಮಹಾರಥನಾದ ಚಿತ್ರಸೇನನು ರಣರಂಗದಲ್ಲಿ ಕ್ರುದ್ಧನಾಗಿ ನಕುಲ ಪುತ್ರನನ್ನು ಒಂಬತ್ತು ಬಾಣಗಳಿಂದ ಶೀಘ್ರವಾಗಿ ಹೊಡೆದನು.

ಶತಾನೀಕೋऽಥ ಸಂಕ್ರುದ್ಧಶ್ಚಿತ್ರಸೇನಸ್ಯ ಮಾರಿಷ ।
ಜಘಾನ ಚತುರೋ ವಾಹಾನ್ ಸಾರಥಿಂ ಚ ನರೋತ್ತಮಃ ॥ ೯ ॥

ಎಲೈ ಶ್ರೇಷ್ಠನೇ, ಅನಂತರ ನರಶ್ರೇಷ್ಠನಾದ ಶತಾನೀಕನು ಕೋಪಗೊಂಡು ಚಿತ್ರಸೇನನ ರಥದ ನಾಲ್ಕು ಅಶ್ವಗಳನ್ನೂ ಮತ್ತು ಸಾರಥಿಯನ್ನೂ ಕೊಂದನು.

ಅವಪ್ಲುತ್ಯ ರಥಾತ್ ತಸ್ಮಾಚ್ಚಿತ್ರಸೇನೋ ಮಹಾರಥಃ ।
ನಾಕುಲಿಂ ಪಂಚವಿಂಶತ್ಯಾ ಶರಾಣಾಮಾರ್ದಯದ್ ಬಲೀ ॥ ೧೦ ॥

ಮಹಾರಥನಾದ ಚಿತ್ರಸೇನನು ತನ್ನ ರಥದಿಂದ ಕೆಳಗೆ ಹಾರಿ, ಬಲಿಷ್ಠನಾದ ಅವನು ನಕುಲಪುತ್ರನಾದ ಶತಾನೀಕನನ್ನು ಇಪ್ಪತ್ತೈದು ಬಾಣಗಳಿಂದ ಪೀಡಿಸಿದನು.

ತಸ್ಯ ತತ್ಕುರ್ವತಃ ಕರ್ಮ ನಕುಲಸ್ಯ ಸುತೋ ರಣೇ ।
ಅರ್ಧಚಂದ್ರೇಣ ಚಿಚ್ಛೇದ ಚಾಪಂ ರತ್ನವಿಭೂಷಿತಮ್ ॥ ೧೧ ॥

ನಕುಲಪುತ್ರನು ಆ ಕಾರ್ಯವನ್ನು ಮಾಡುತ್ತಿದ್ದ ಚಿತ್ರಸೇನನ ರತ್ನವಿಭೂಷಿತವಾದ ಧನುಸ್ಸನ್ನು ಅರ್ಧಚಂದ್ರದಿಂದ ಕತ್ತರಿಸಿದನು.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಆರುರೋಹ ರಥಂ ತೂರ್ಣಂ ಹಾರ್ದಿಕ್ಯಸ್ಯ ಮಹಾತ್ಮನಃ ॥ ೧೨ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟು ರಥಾಶ್ವ-ಸಾರಥಿಗಳಿಂದ ಹೀನನಾದ ಚಿತ್ರಸೇನನು ಶೀಘ್ರವಾಗಿ ಮಹಾತ್ಮನಾದ ಕೃತವರ್ಮನ ರಥವನ್ನು ಏರಿದನು.

ದ್ರುಪದಂ ತು ಸಹಾನೀಕಂ ದ್ರೋಣಪ್ರೇಪ್ಸುಂ ಮಹಾರಥಮ್ ।
ವೃಷಸೇನೋಽಭ್ಯಯಾತ್ ತೂರ್ಣಂ ಕಿರನ್ ಶರಶತೈಸ್ತದಾ ॥ ೧೩ ॥

ತನ್ನ ಸೈನ್ಯದ ಜೊತೆಯಲ್ಲಿ ದ್ರೋಣರ ಸಮೀಪಕ್ಕೆ ಬರುತ್ತಿದ್ದ ಮಹಾರಥನಾದ ದ್ರುಪದನನ್ನು ಕರ್ಣನ ಪುತ್ರನಾದ ವೃಷಸೇನನು ನೂರಾರು ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಸಮೀಪಿಸಿದನು.

ಯಜ್ಞಸೇನಸ್ತು ಸಮರೇ ಕರ್ಣಪುತ್ರಂ ಮಹಾರಥಮ್ ।
ಷಷ್ಟ್ಯಾ ಶರಾಣಾಂ ವಿವ್ಯಾಧ ಬಾಹ್ವೋರುರಸಿ ಚಾನಘ ॥ ೧೪ ॥

ಎಲೈ ಅನಘನೇ, ಯಜ್ಞಸೇನ(ದ್ರುಪದ)ನಾದರೋ ಯುದ್ಧದಲ್ಲಿ ಮಹಾರಥನಾದ ಕರ್ಣಪುತ್ರನನ್ನು ಅರವತ್ತು ಬಾಣಗಳಿಂದ ಅವನ ಬಾಹುಗಳಲ್ಲಿಯೂ, ಎದೆಯಲ್ಲಿಯೂ ಹೊಡೆದನು.

ವೃಷಸೇನಸ್ತು ಸಂಕ್ರುದ್ಧೋ ಯಜ್ಞಸೇನಂ ರಥೇ ಸ್ಥಿತಮ್ ।
ಬಹುಭಿಃ ಸಾಯಕೈಸ್ತೀಕ್ಷ್ಣೈರಾಜಘಾನ ಸ್ತನಾಂತರೇ ॥ ೧೫ ॥

ಕೋಪಗೊಂಡ ವೃಷಸೇನನು ರಥದಲ್ಲಿದ್ದ ಯಜ್ಞಸೇನನನ್ನು (ದ್ರುಪದನನ್ನು) ಅನೇಕ ತೀಕ್ಷ್ಣವಾದ ಬಾಣಗಳಿಂದ ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ತಾವುಭೌ ಶರನುನ್ನಾಂಗೌ ಶರಕಂಟಕಿನೌ ರಣೇ ।
ವ್ಯಭ್ರಾಜೇತಾಂ ಮಹಾರಾಜ ಶ್ವಾವಿಧೌ ಶಲಲೈರಿವ ॥ ೧೬ ॥

ಎಲೈ ಮಹಾರಾಜನೇ, ಅವರಿಬ್ಬರೂ ಬಾಣಗಳಿಂದ ಪೀಡಿತವಾದ ಶರೀರ ಉಳ್ಳವರಾಗಿ ಶರೀರದಲ್ಲಿ ಬಾಣಗಳು ನಾಟಿರಲು ಮುಳ್ಳುಗಳಿಂದ ಕೂಡಿದ ಮುಳ್ಳು ಹಂದಿಗಳಂತೆ ರಣರಂಗದಲ್ಲಿ ಶೋಭಿಸಿದರು.

ರುಗ್ಣಪುಂಖೈರಜಿಹ್ಮಾಗ್ರೈಃ ಶರೈಶ್ಛಿನ್ನತನುಚ್ಛದೌ ।
ರುಧಿರೌಘಪರಿಕ್ಲಿನ್ನೌ ವ್ಯಭ್ರಾಜೇತಾಂ ಮಹಾಮೃಧೇ ॥ ೧೭ ॥

ರುಗ್ಮಪುಂಖಗಳನ್ನು ಹೊಂದಿದ್ದ, ನೇರವಾದ ಅಗ್ರವನ್ನು ಹೊಂದಿದ್ದ ಬಾಣಗಳಿಂದ ಇಬ್ಬರೂ ಕವಚಗಳನ್ನು ಕಳೆದುಕೊಂಡು ರಕ್ತಪ್ರವಾಹದಿಂದ ಒದ್ದೆಯಾಗಿ ದೊಡ್ಡ ರಣರಂಗದಲ್ಲಿ ಶೋಭಿಸಿದರು.

ತಪನೀಯನಿಭೌ ಚಿತ್ರೌ ಕಲ್ಪವೃಕ್ಷಾವಿವಾದ್ಭುತೌ ।
ಕಿಂಶುಕಾವಿವ ಚೋತ್ಫುಲ್ಲೌ ವ್ಯಕಾಶೇತಾಂ ರಣಾಜಿರೇ ॥ ೧೮ ॥

ಸ್ವರ್ಣಸದೃಶಕಾಂತಿಯುಕ್ತರಾದ, ವಿಚಿತ್ರವಾದ ಕಲ್ಪವೃಕ್ಷದಂತೆ ಅದ್ಭುತವಾಗಿದ್ದ ಅವರಿಬ್ಬರೂ ರಣರಂಗದಲ್ಲಿ ಹೂವು ಅರಳಿದ ಕಿಂಶುಕ (ಮುತ್ತುಗದ) ವೃಕ್ಷದಂತೆ ಶೋಭಿಸಿದರು.

ವೃಷಸೇನಸ್ತತೋ ರಾಜನ್ನವಭಿರ್ದ್ರುಪದಂ ಶರೈಃ ।
ವಿದ್ವಾ ವಿವ್ಯಾಧ ಸಪ್ತತ್ಯಾ ಪುನಶ್ಚಾನ್ಯೈ ಸ್ತ್ರಿಭಿಃ ಶರೈಃ ॥೧೯॥

ಎಲೈ ರಾಜನೇ, ಆಗ ವೃಷಸೇನನು ದ್ರುಪದನನ್ನು ಒಂಬತ್ತು ಬಾಣಗಳಿಂದ ಹೊಡೆದು, ಪುನಃ ಎಪ್ಪತ್ತು ಬಾಣಗಳಿಂದಲೂ, ಪುನಃ ಬೇರೆ ಮೂರು ಬಾಣಗಳಿಂದಲೂ ಹೊಡೆದನು.

ತತಃ ಶರಸಹಸ್ರಾಣಿ ವಿಮುಂಚನ್ ವಿಬಭೌ ತದಾ ।
ಕರ್ಣಪುತ್ರೋ ಮಹಾರಾಜ ವರ್ಷಮಾಣ ಇವಾಂಬುದಃ ॥ ೨೦ ॥

ಎಲೈ ಮಹಾರಾಜನೇ, ಅನಂತರ ಕರ್ಣಪುತ್ರನು ಮಳೆಯನ್ನು ಸುರಿಸುವ ಮೋಡದಂತೆ ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ ಶೋಭಿಸಿದನು.

ತತಸ್ತು ದ್ರುಪದಾನೀಕಂ ಶರೈಶ್ಚಿನ್ನತನುಚ್ಛದಮ್ ।
ಸಂಪ್ರಾದ್ರವದ್ ರಣೇ ರಾಜನ್ ನಿಶೀಥೇ ಭೈರವೇ ಸತಿ ॥ ೨೧ ॥

ಎಲೈ ರಾಜನೇ, ಆಗ ಆ ಬಾಣಗಳಿಂದ ತಮ್ಮ ಕವಚಗಳು ಕತ್ತರಿಸಲ್ಪಡುತ್ತಿರಲು ದ್ರುಪದಸೇನೆಯು ಆ ಭಯಂಕರವಾದ ರಾತ್ರಿಯಲ್ಲಿ ರಣರಂಗದಿಂದ ಓಡಿ ಹೋಯಿತು.

ಪ್ರದೀಪೈರ್ಹಿ ಪರಿತ್ಯಕ್ತೈರ್ಜ್ವಲದ್ಭಿಸ್ತೈಃ ಸಮಂತತಃ ।
ವ್ಯರಾಜತ ಮಹೀ ರಾಜನ್ ವೀತಾಭ್ರಾ ದ್ಯೌರಿವ ಗ್ರಹೈಃ ॥ ೨೨ ॥

ಅಲ್ಲಲ್ಲಿ ಯೋಧರು ಬಿಟ್ಟುಹೋದ ಜ್ವಲಿಸುವ ದೀಪಗಳಿಂದ ಎಲೈ ರಾಜನೇ, ಭೂಮಿಯು ಮೋಡಗಳಿಲ್ಲದ ಆಕಾಶವು ಗ್ರಹಗಳಿಂದ ತುಂಬಿದಂತೆ ಶೋಭಿಸಿತು.

ತಥಾಂಗದೈರ್ನಿಪತಿತೈರ್ವ್ಯರಾಜತ ವಸುಂಧರಾ ।
ಪ್ರಾವೃಟ್ಕಾಲೇ ಮಹಾರಾಜ ವಿದ್ಯುದ್ಭಿರಿವ ತೋಯದಃ ॥ ೨೩ ॥

ಎಲೈ ಮಹಾರಾಜನೇ, ಹಾಗೆಯೇ ಕೆಳಗೆ ಬಿದ್ದ ಅಂಗದಗಳಿಂದ ಭೂಮಿಯು ಮಳೆಗಾಲದಲ್ಲಿ ಮಿಂಚುಗಳಿಂದ ಕೂಡಿದ ಮೋಡದಂತೆ ಶೋಭಿಸಿತು.

ತತಃ ಕರ್ಣಸುತತ್ರಸ್ತಾಃ ಸೋಮಕಾ ವಿಪ್ರದುದ್ರುವುಃ ।
ಯಥೇಂದ್ರಭಯವಿತ್ರಸ್ತಾ ದಾನವಾಸ್ತಾರಕಾಮಯೇ ॥ ೨೪ ॥

ಆಗ ತಾರಕಾಮಯವಾದ ಯುದ್ಧದಲ್ಲಿ ಇಂದ್ರನಿಗೆ ಹೆದರಿ ದಾನವರು ಓಡಿದಂತೆ ಕರ್ಣಪುತ್ರನಾದ ವೃಷಸೇನನಿಗೆ ಹೆದರಿ ಸೋಮಕರು ಓಡಿಹೋದರು.

ತೇನಾರ್ದ್ಯಮಾನಾಃ ಸಮರೇ ದ್ರವಮಾಣಾಶ್ಚ ಸೋಮಕಾಃ ।
ವ್ಯರಾಜಂತ ಮಹಾರಾಜ ಪ್ರದೀಪೈರವಭಾಸಿತಾಃ ॥ ೨೫ ॥

ಎಲೈ ಮಹಾರಾಜನೇ, ವೃಷಸೇನನಿಂದ ಪೀಡಿತರಾಗಿ ರಣರಂಗದಲ್ಲಿ ಓಡಿ ಹೋಗುವ ಸೋಮಕರು ದೀಪಗಳಿಂದ ಪ್ರಕಾಶಿಸಲ್ಪಟ್ಟು ವಿರಾಜಿಸಿದರು.

ತಾಂಸ್ತು ನಿರ್ಜಿತ್ಯ ಸಮರೇ ಕರ್ಣಪುತ್ರೋ ವ್ಯರೋಚತ ।
ಮಧ್ಯಂದಿನಮನುಪ್ರಾಪ್ತೋ ಘರ್ಮಾಂಶುರಿವ ಭಾರತ ॥ ೨೬ ॥

ಎಲೈ ಭಾರತನೇ, ಕರ್ಣಪುತ್ರನಾದ ವೃಷಸೇನನು ಯುದ್ಧದಲ್ಲಿ ಅವರನ್ನು ಸೋಲಿಸಿ ಮಧ್ಯಾಹ್ನದ ಸೂರ್ಯನಂತೆ ಶೋಭಿಸಿದನು.

ತೇಷು ರಾಜಸಹಸ್ರೇಷು ತಾವಕೇಷು ಪರೇಷು ಚ ।
ಏಕ ಏವ ಜ್ವಲಂಸ್ತಸ್ಥೌ ವೃಷಸೇನಃ ಪ್ರತಾಪವಾನ್ ॥ ೨೭ ॥

ನಿನ್ನವರೂ ಮತ್ತು ಅವರೂ ಸೇರಿದ ಸಾವಿರಾರು ರಾಜರಲ್ಲಿ ಪ್ರತಾಪಶಾಲಿಯಾದ ವೃಷಸೇನನೊಬ್ಬನೇ ಜ್ವಲಿಸುತ್ತಾ ನಿಂತನು.

ಸ ವಿಜಿತ್ಯ ರಣೇ ಶೂರಾನ್ ಸೋಮಕಾನಾಂ ಮಹಾರಥಾನ್ ।
ಜಗಾಮ ತ್ವರಿತಸ್ತತ್ರ ಯತ್ರ ರಾಜಾ ಯುಧಿಷ್ಠಿರಃ ॥ ೨೮ ॥

ಅವನು ರಣರಂಗದಲ್ಲಿ ಶೂರರಾದ ಸೋಮಕ ಮಹಾರಥರನ್ನು ಗೆದ್ದು ಶೀಘ್ರವಾಗಿ ರಾಜನಾದ ಯುಧಿಷ್ಠಿರನಿದ್ದಲ್ಲಿಗೆ ಹೋದನು.

ಪ್ರತಿವಿಂಧ್ಯಮಥ ಕ್ರುದ್ಧಂ ಪ್ರಹರಂತಂ ರಣೇ ರಿಪೂನ್ ।
ದುಃಶಾಸನಸ್ತವ ಸುತಃ ಪ್ರತ್ಯುದ್ಗಚ್ಛನ್ ಮಹಾರಥಃ ॥ ೨೯ ॥

ಇನ್ನೊಂದು ಕಡೆ ಕ್ರುದ್ಧನಾಗಿ ಶತ್ರುಗಳನ್ನು ದಹಿಸುತ್ತಿದ್ದ ಪ್ರತಿವಿಂಧ್ಯನ ಕಡೆಗೆ ಮಹಾರಥನಾದ ನಿನ್ನ ಪುತ್ರನಾದ ದುಶ್ಶಾಸನನು ಧಾವಿಸಿದನು.

ತಯೋಃ ಸಮಾಗಮೋ ರಾಜಂಶ್ಚಿತ್ರರೂಪೋ ಬಭೂವ ಹ ।
ವ್ಯಪೇತಜಲದೇ ವ್ಯೋಮ್ನಿ ಬುಧಭಾರ್ಗವಯೋರಿವ ॥ ೩೦ ॥

ಎಲೈ ರಾಜನೇ, ಮೋಡವಿಲ್ಲದ ಆಕಾಶದಲ್ಲಿ ನಡೆಯುವ ಬುಧ-ಶುಕ್ರಗ್ರಹಗಳ ಯುದ್ಧದಂತೆ ಅವರ ಸಂಘರ್ಷವು ವಿಚಿತ್ರವಾಗಿದ್ದಿತು.

ಪ್ರತಿವಿಂಧ್ಯಂ ತು ಸಮರೇ ಕುರ್ವಾಣಂ ಕರ್ಮ ದುಷ್ಕರಮ್ ।
ದುಃಶಾಸನಸ್ತ್ರಿಭಿರ್ಬಾಣೈರ್ಲಲಾಟೇ ಸಮವಿದ್ಧ್ಯತ ॥ ೩೧ ॥

ದುಶ್ಶಾಸನನು ಯುದ್ಧದಲ್ಲಿ ದುಷ್ಕರವಾದ ಕರ್ಮವನ್ನು ಮಾಡುವ ಪ್ರತಿವಿಂಧ್ಯನ ಹಣೆಯಲ್ಲಿ ಮೂರು ಬಾಣಗಳಿಂದ ಹೊಡೆದನು.

ಸೋಽತಿವಿದ್ಧೋ ಬಲವತಾ ಪುತ್ರೇಣ ತವ ಧನ್ವಿನಾ ।
ವಿರರಾಜ ಮಹಾಬಾಹುಃ ಸಶೃಂಗ ಇವ ಪರ್ವತಃ ॥ ೩೨ ॥

ಧನುರ್ಧಾರಿಯೂ, ಬಲಿಷ್ಠನೂ ಆದ ನಿನ್ನ ಪುತ್ರನಿಂದ ಗಾಢವಾಗಿ ಹೊಡೆಯಲ್ಪಟ್ಟ ಮಹಾಬಾಹುವಾದ ಪ್ರತಿವಿಂಧ್ಯನು ಶಿಖರಗಳಿಂದ ಕೂಡಿದ ಪರ್ವತದಂತೆ ಶೋಭಿಸಿದನು.

ದುಃಶಾಸನಂ ತು ಸಮರೇ ಪ್ರತಿವಿಂಧ್ಯೋ ಮಹಾರಥಃ ।
ನವಭಿಃ ಸಾಯಕೈರ್ವಿದ್ವಾ ಪುನರ್ವಿವ್ಯಾಧ ಸಪ್ತಭಿಃ ॥ ೩೩ ॥

ಮಹಾರಥನಾದ ಪ್ರತಿವಿಂಧ್ಯನು ರಣರಂಗದಲ್ಲಿ ದುಶ್ಶಾಸನನನ್ನು ಒಂಬತ್ತು ಬಾಣಗಳಿಂದ ಹೊಡೆದು ಪುನಃ ಏಳು ಬಾಣಗಳಿಂದ ಹೊಡೆದನು.

ತತ್ರ ಭಾರತ ಪುತ್ರಸ್ತೇ ಕೃತವಾನ್ ಕರ್ಮ ದುಷ್ಕರಮ್ ।
ಪ್ರತಿವಿಂಧ್ಯಹಯಾನುಗ್ರೈಃ ಪಾತಯಾಮಾಸ ಯಚ್ಛರೈಃ ॥ ೩೪ ॥

ಎಲೈ ಭಾರತನೇ, ನಿನ್ನ ಪುತ್ರನು ದುಷ್ಕರವಾದ ಕರ್ಮವನ್ನು ಮಾಡಿ ತನ್ನ ಉಗ್ರವಾದ ಬಾಣಗಳಿಂದ ಪ್ರತಿವಿಂಧ್ಯನ ಅಶ್ವಗಳನ್ನು ಉರುಳಿಸಿದನು.

ಸಾರಥಿಂ ಚಾಸ್ಯ ಭಲ್ಲೇನ ಧ್ವಜಂ ಚ ಸಮಪಾತಯತ್ ।
ರಥಂ ಚ ಶತಶೋ ರಾಜನ್ ವ್ಯಧಮತ್ ತಸ್ಯ ಧನ್ವಿನಃ ॥ ೩೫ ॥

ಧನುರ್ಧಾರಿಯಾದ ಅವನ ಸಾರಥಿಯನ್ನೂ ಮತ್ತು ಧ್ವಜವನ್ನೂ ಒಂದು ಭಲ್ಲದಿಂದ ಉರುಳಿಸಿ, ಎಲೈ ರಾಜನೇ, ಅವನ ರಥವನ್ನು ನೂರಾರು ಭಾಗವಾಗಿ ಕತ್ತರಿಸಿ ವಿನಾಶಗೊಳಿಸಿದನು.

ಪತಾಕಾಶ್ಚ ಸ ತೂಣೀರಾನ್ ರಶ್ಮೀನ್ ಯೋಕ್ತ್ರಾಣಿ ಚಾಭಿಭೋ ।
ಚಿಚ್ಛೇದ ತಿಲಶಃ ಕ್ರುದ್ಧಃ ಶರೈಃ ಸನ್ನತಪರ್ವಭಿಃ ॥ ೩೬ ॥

ಶತ್ರುಸಂಹಾರಕನೇ, ದುಶ್ಶಾಸನನು ಪ್ರತಿವಿಂಧ್ಯನ ರಥದ ಪದಾತಿಗಳನ್ನೂ, ಬತ್ತಳಿಕೆಗಳನ್ನೂ, ಕುದುರೆಯ ಕಡಿವಾಣಗಳನ್ನೂ, ಕಡಗೂಟಗಳನ್ನೂ ಬಾಗಿದ ತುದಿಯುಳ್ಳ ಬಾಣಗಳಿಂದ ಎಳ್ಳಿನಷ್ಟು ಸಣ್ಣ ಚೂರುಗಳಾಗಿ ಕತ್ತರಿಸಿದನು.

ವಿರಥಃ ಸ ತು ಧರ್ಮಾತ್ಮಾ ಧನುಷ್ಪಾಣಿರವಸ್ಥಿತಃ ।
ಅಯೋಧಯತ್ ತವ ಸುತಂ ಕಿರನ್ ಶರಶತಾನ್ ಬಹೂನ್ ॥ ೩೭ ॥

ಧರ್ಮಾತ್ಮನಾದ ಪ್ರತಿವಿಂಧ್ಯನು ರಥವನ್ನು ಕಳೆದುಕೊಂಡು ಕೈಯಲ್ಲಿ ಧನುಸ್ಸನ್ನು ಹಿಡಿದುಕೊಂಡು ನಿನ್ನ ಪುತ್ರನ ಮೇಲೆ ನೂರಾರು ಬಾಣಗಳನ್ನು ಪ್ರಯೋಗಿಸುತ್ತಾ ಯುದ್ಧವನ್ನು ಮಾಡಿದನು.

ಕ್ಷುರಪ್ರೇಣ ಧನುಸ್ತಸ್ಯ ಚಿಚ್ಛೇದ ಕೃತಹಸ್ತವತ್ ।
ಅಥೈನಂ ದಶಭಿರ್ಭಲ್ಲೈಶ್ಚಿನ್ನಧನ್ವಾನಮಾರ್ದಯತ್ ॥ ೩೮ ॥

ದುಶ್ಶಾಸನನು ಪಳಗಿದ ಹಸ್ತವುಳ್ಳವನಂತೆ ಅವನ ಧನುಸ್ಸನ್ನು ಕ್ಷುರಪ್ರದಿಂದ ಕತ್ತರಿಸಿದನು. ಅವನ ಧನುಸ್ಸು ಕತ್ತರಿಸಲ್ಪಡುತ್ತಿರಲು ಅನಂತರ ಅವನನ್ನು ಹತ್ತು ಭಲ್ಲಗಳಿಂದ ಪೀಡಿಸಿದನು.

ತಂ ದೃಷ್ಟ್ವಾ ವಿರಥಂ ತತ್ರ ಭ್ರಾತರೋಽಸ್ಯ ಮಹಾರಥಾಃ ।
ಅನ್ವವರ್ತಂತ ವೇಗೇನ ಮಹತ್ಯಾ ಸೇನಯಾ ಸಹ ॥ ೩೯ ॥

ಪ್ರತಿವಿಂಧ್ಯನು ರಥಹೀನನಾಗಿರುವುದನ್ನು ನೋಡಿ ಮಹಾರಥರಾದ ಅವನ ಸಹೋದರರು ದೊಡ್ಡ ಸೇನೆಯನ್ನು ತೆಗೆದುಕೊಂಡು ವೇಗದಿಂದ ಅವನ ಕಡೆಗೆ ಬಂದರು.

ಆಪ್ಲುತಃ ಸ ತತೋ ಯಾನಂ ಸುತಸೋಮಸ್ಯ ಭಾಸ್ವರಮ್ ।
ಧನುರ್ಗೃಹ್ಯ ಮಹಾರಾಜ ವಿವ್ಯಾಧ ತನಯಂ ತವ ॥ ೪೦ ॥

ಎಲೈ ಮಹಾರಾಜನೇ, ಆಗ ಅವನು ಸುತಸೋಮನ ಪ್ರಕಾಶಮಾನವಾದ ರಥಕ್ಕೆ ಹಾರಿ ಧನುಸ್ಸನ್ನು ಹಿಡಿದು ನಿನ್ನ ಪುತ್ರನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತತಸ್ತು ತಾವಕಾಃ ಸರ್ವೇ ಪರಿವಾರ್ಯ ಸುತಂ ತವ ।
ಅಭ್ಯವರ್ತಂತ ಸಂಗ್ರಾಮೇ ಮಹತ್ಯಾ ಸೇನಯಾ ವೃತಾಃ ॥ ೪೧ ॥

ಆಗ ನಿನ್ನವರೆಲ್ಲರೂ ದೊಡ್ಡ ಸೈನ್ಯದಿಂದ ಕೂಡಿದವರಾಗಿ ನಿನ್ನ ಪುತ್ರನನ್ನು ಸುತ್ತುವರಿದು ಯುದ್ಧದಲ್ಲಿ ಮುಂದೆ ಸಾಗಿದರು.

ತತಃ ಪ್ರವವೃತೇ ಯುದ್ಧಂ ತವ ತೇಷಾಂ ಚ ಭಾರತ ।
ನಿಶೀಥೇ ದಾರುಣೇ ಕಾಲೇ ಯಮರಾಷ್ಟ್ರವಿವರ್ಧನಮ್ ॥ ೪೨ ॥

ಎಲೈ ಭಾರತನೇ, ಅನಂತರ ದಾರುಣವಾದ ಆ ರಾತ್ರಿಯ ಕಾಲದಲ್ಲಿ ನಿನ್ನವರಿಗೂ ಮತ್ತು ಪರರಿಗೂ ಯಮರಾಷ್ಟ್ರವನ್ನು ಅಭಿವೃದ್ಧಿಪಡಿಸುವ ಯುದ್ಧವು ಜರುಗಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಚತುಃಪಂಚಾಶದಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೨೬ನೇ ಅಧ್ಯಾಯ

ಭೀಮೋಽರ್ಜುನಃ ಸಾತ್ಯಕಿಶ್ಚ ಪರ್ಯಾಯೇಣ ಗುರೋಃ ಸುತಮ್ ।
ದೂರತೋ ವಾರಯಾಮಾಸುರ್ಮಹತ್ಯಾ ಸೇನಯಾ ಸಹ ॥

ಭೀಮ, ಅರ್ಜುನ, ಸಾತ್ಯಕಿಯರು ಒಬ್ಬರಾದ ಬಳಿಕ ಒಬ್ಬರಂತೆ ಅಶ್ವತ್ಥಾಮರನ್ನು ಮಹತ್ತಾದ ಸೈನ್ಯದೊಂದಿಗೆ ದೂರದಲ್ಲಿಯೇ ತಡೆದು ನಿಲ್ಲಿಸಿದರು.

ಕರ್ಣದುರ್ಯೋಧನಾದೀಂಶ್ಚ ಶಲ್ಯಂ ಭೋಜಂ ಕೃಪಂ ತಥಾ ।
ಭೀಮಾರ್ಜುನೌ ಶರೌಘೇಣ ವಾರಯಾಮಾಸತೂ ರಣೇ ॥

ಕರ್ಣ-ದುರ್ಯೋಧನ ಮುಂತಾದವರನ್ನೂ ಶಲ್ಯ-ಕೃತವರ್ಮ-ಕೃಪರನ್ನೂ ಭೀಮಾರ್ಜುನರು ಬಾಣ ಸಮೂಹದಿಂದ ಯುದ್ಧದಲ್ಲಿ ತಡೆದರು.

ತತ್ರ ಭೀಮೋ ಗಜಾನೀಕಂ ಜಯತ್ಸೇನಂ ಚ ಮಾಗಧಮ್ ।
ಜಘಾನ ಸುಬಹೂಂಶ್ಚೈವ ಮಾಗಧಾನಾಂ ರಥವ್ರಜಾನ್ ॥

ಆಗ ಭೀಮ ಗಜಸೇನೆಯನ್ನೂ ಜಯತ್ಸೇನನನ್ನೂ ಕೊಂದನು. ಮಗಧ ದೇಶದ ರಾಜನನ್ನೂ ಮಗಧ ದೇಶದವರ ಬಹಳ ರಥಸಮೂಹಗಳನ್ನೂ ನಾಶಪಡಿಸಿದನು.

ಅಥ ಮಾಳವರಾಜಸ್ಯ ತ್ವಶ್ವತ್ಥಾಮಾಭಿಧಂ ಗಜಮ್ ।
ಭೀಮಸೇನಹತಂ ದೃಷ್ಟ್ವಾ ವಾಸುದೇವಪ್ರಚೋದಿತಃ ।
ಅಶ್ವತ್ಥಾಮಾ ಹತ ಇತಿ ಪ್ರಾಹ ರಾಜಾ ಯುಧಿಷ್ಠಿರಃ ॥

ಮಾಲವರಾಜನ ಅಶ್ವತ್ಥಾಮ ಎಂಬ ಆನೆ ಭೀಮನಿಂದ ಹತವಾದುದನ್ನು ಕಂಡು ಕೃಷ್ಣನ ಪ್ರೇರಣೆಯಂತೆ ರಾಜಾ ಯುಧಿಷ್ಠಿರನು ಅಶ್ವತ್ಥಾಮ ಹತನಾದನೆಂದನು.

ಅಶ್ವತ್ಥಾಮವಧಂ ಶ್ರುತ್ವಾ ನಾಹಂ ಯೋತ್ಸ್ಯ ಇತಿ ಸ್ವಯಮ್ ।
ಪುರೋಕ್ತಂ ಧರ್ಮಜಾಯೈವ ತೇನ ದ್ರೋಣೋ ಯುಧಿಷ್ಠಿರಮ್ ॥

ಬ್ರೂಹಿ ಸತ್ಯಮಿತಿ ಪ್ರಾಹ ಸತ್ಯಮಿತ್ಯೇವ ಸೋಽಬ್ರವೀತ್ ।
ಉಪಾಂಶು ಕುಂಜರಶ್ಚೇತಿ ದ್ರೋಣೋಽಥೋ ವ್ಯಥಿತೋಽಭವತ್ ॥



ಶ್ರೀಕೃಷ್ಣ-ಪಾಂಡವರು ಮತ್ತು ಕೃಪರು ಇವರು ಆಕಾಶಮಾರ್ಗದಿಂದ ದ್ರೋಣರು ತಮ್ಮ ಲೋಕಕ್ಕೆ ಹೋಗುವುದನ್ನು ಕಂಡರು. ಪಾಂಡವರು ತಡೆಯುತ್ತಿದ್ದರೂ ಧೃಷ್ಟದ್ಯುಮ್ನನು ಖಡ್ಗ-ಚರ್ಮಗಳನ್ನು ಹಿಡಿದು ದ್ರೋಣರಿದ್ದಲ್ಲಿಗೆ ಬಂದನು.

ಛಿತ್ವಾಽಸಿನಾ ತಸ್ಯ ಶಿರಃ ಪುನಶ್ಚ
ರಥಂ ಸ್ವಕೀಯಂ ತ್ವರಯಾ ಸಮಾಸ್ಥಿತಃ ।
ದೃಷ್ಟ್ವಾ ಕೃಪಸ್ತಂ ಸುಭೃಶಂ ಭಯಾರ್ದಿತಃ
ಸಂಪ್ರಾದ್ರವದ್ ವಾಜಿನಮೇಕಮಾಸ್ಥಿತಃ ॥

ಧೃಷ್ಟದ್ಯುಮ್ನ ದ್ರೋಣರ ಶಿರಸ್ಸನ್ನು ತರಿದು ಪುನಃ ಬೇಗನೆ ತನ್ನ ರಥವನ್ನೇರಿದನು. ಕೃಪರು ನೋಡಿ ಬಹಳ ಭಯಾರ್ತರಾಗಿ ಒಂದು ಕುದುರೆಯನ್ನೇರಿ ಪಲಾಯನ ಮಾಡಿದರು.

ಸಂಭಿನ್ನೇ ದ್ರೋಣಶಿರಸಿ ಗರ್ಹಯಾಮಾಸ ವಾಸವಿಃ ।
ಯುಧಿಷ್ಠಿರಂ ಚ ಪಾಂಚಾಲ್ಯಂ ಸಾತ್ಯಕಿಶ್ಚಾಪಿ ಕೋಪಿತಃ ॥

ದ್ರೋಣರ ಶಿರಶ್ಛೇದವಾದಾಗ ಅರ್ಜುನನು ಧರ್ಮರಾಜನನ್ನೂ ಧೃಷ್ಟದ್ಯುಮ್ನನನ್ನೂ ಆಕ್ಷೇಪಿಸಿದನು. ಸಾತ್ಯಕಿಯೂ ಕುಪಿತನಾದನು.

ಧೃಷ್ಟದ್ಯುಮ್ನಸ್ತು ತಾವಾಹ ಕಥಂ ಭೂರಿಶ್ರವಾ ಹತಃ ।
ಇತಿ ತಂ ಸಾತ್ಯಕಿಃ ಕ್ರುದ್ಧೋ ಗದಾಪಾಣಿಃ ಸಮಭ್ಯಯಾತ್ ॥

ಧೃಷ್ಟದ್ಯುಮ್ನನು ಅರ್ಜುನ, ಸಾತ್ಯಕಿಯರನ್ನು ಕೇಳಿದನು- 'ಭೂರಿಶ್ರವನು ನಿಮ್ಮಿಂದ ಹೇಗೆ ಹತನಾದನು?' ಸಾತ್ಯಕಿ ಕ್ರುದ್ಧನಾಗಿ ಗದಾಪಾಣಿಯಾಗಿ ಧೃಷ್ಟದ್ಯುಮ್ನನ ಮೇಲೇರಿ ಬಂದನು.

ಆಹ್ವಯಾಮಾಸ ಪಾಂಚಾಲ್ಯಸ್ತಂ ಧೃತಾಸಿರವಿಸ್ಮಯಃ ॥
ತದಾ ಜಗ್ರಾಹ ಶೈನೇಯಂ ಭೀಮಃ ಕೃಷ್ಣಪ್ರಚೋದಿತಃ ।
ಶಮಯಾಮಾಸ ಪಾರ್ಥಂ ಚ ಪಾಂಚಾಲ್ಯಸ್ನೇಹಯಂತ್ರಿತಃ ॥

ಅಶ್ವತ್ಥಾಮರ ವಧೆಯನ್ನು ಕೇಳಿದ ಬಳಿಕ ನಾನು ಯುದ್ಧ ಮಾಡುವುದಿಲ್ಲ ಎಂದು ದ್ರೋಣರು ತಾನೇ ಯುಧಿಷ್ಠಿರನಿಗೆ ಹಿಂದೆ ಹೇಳಿದ್ದರು. ಆದರಿಂದ ದ್ರೋಣರು ಯುಧಿಷ್ಠಿರನನ್ನು 'ಸತ್ಯವೇ? ಹೇಳು' ಎಂದು ಕೇಳಿದರು. ಯುಧಿಷ್ಠಿರನು ಸತ್ಯ ಎಂದೇ ಹೇಳಿದನು. ಜೊತೆಗೆ ಅಸ್ಪಷ್ಟವಾಗಿ ಆನೆ ಎಂದೂ ಹೇಳಿದನು. ಆದರಿಂದ ದ್ರೋಣರು ವ್ಯಥೆಗೊಂಡರು.

ತಸ್ಯ ಭೀಮೋ ರಥೇಷಾಂ ಚ ಗೃಹೀತ್ವಾ ನ ತವೇದೃಶಮ್ ।
ಯೋಗ್ಯಂ ಗುಣವತೋ ನಿತ್ಯಂ ಪರಧರ್ಮೋಪಜೀವನಮ್ ॥

ಇತ್ಯಾಹ ಖಸ್ಥಾ ಮುನಯಶ್ಚಾಲಮೇಹೀತಿ ತಂ ತದಾ ।
ಊಚುಸ್ತದಖಿಲಂ ಜ್ಞಾತ್ವಾ ದ್ರೋಣಃ ಶಸ್ತ್ರಮವಾಸೃಜತ್ ॥

ಭೀಮನು ದ್ರೋಣರ ರಥದ ಕಂಬವನ್ನು ಹಿಡಿದು, ನಿಮ್ಮಂಥ ಗುಣವಂತರಿಗೆ ಈ ರೀತಿ ಪರಧರ್ಮದಿಂದ ಜೀವಿಸುವುದು ಒಪ್ಪುವುದಿಲ್ಲ ಎಂದನು. ಆಕಾಶದಲ್ಲಿ ವಸಿಷ್ಠಾದಿ ಮುನಿಗಳು 'ಕ್ಷತ್ರಿಯರ ನಾಶಮಾಡಿದ್ದು ಇನ್ನು ಸಾಕು. ಬನ್ನಿ' ಎಂದರು. ಅದೆಲ್ಲವನ್ನೂ ಆಲೋಚಿಸಿ ದ್ರೋಣರು ಶಸ್ತ್ರವನ್ನು ಪರಿತ್ಯಾಗ ಮಾಡಿದರು.

ಸ ನ್ಯಸ್ಯ ಕರ್ಮಾಣಿ ತದಾऽಖಿಲಾನಿ
ಯೋಗಾರೂಢಃ ಪರಮಂ ವಾಸುದೇವಮ್ ।
ಸರ್ವೇಶ್ವರಂ ನಿತ್ಯನಿರಸ್ತದೋಷಂ
ಧ್ಯಾಯನ್ ಮುಕ್ತ್ವಾ ದೇಹಮಗಾತ್ ಸ್ವಧಾಮ ॥

ದ್ರೋಣರು ಆಗ ಸಕಲ ಕರ್ಮಗಳನ್ನೂ ಹರಿಗೆ ಅರ್ಪಿಸಿ ಯೋಗಾರೂಢರಾಗಿ ಸರ್ವೇಶ್ವರನಾದ ನಿತ್ಯನಿರ್ದೋಷನಾದ ಸರ್ವೋತ್ತಮ ವಾಸುದೇವನನ್ನು ಧ್ಯಾನಿಸುತ್ತಾ ಶರೀರವನ್ನು ತೊರೆದು ತಮ್ಮ ಲೋಕಕ್ಕೆ ಹೊರಟು ಹೋದರು.

ತಂ ಕೇಶವಃ ಪಾಂಡವಾ ಗೌತಮಶ್ಚ
ಯಾಂತಂ ಸ್ವಲೋಕಂ ದದೃಶುರ್ವಿಹಾಯಸಾ ।
ಧೃಷ್ಟದ್ಯುಮ್ನಃ ಪಾಂಡವೈರ್ವಾರ್ಯಮಾಣೋ
ऽಗಾತ್ ಖಡ್ಗಂ ಚರ್ಮ ಚಾऽದಾಯ ತತ್ರ ॥

ಶ್ರೀಕೃಷ್ಣ-ಪಾಂಡವರು ಮತ್ತು ಕೃಪರು ಇವರು ಆಕಾಶಮಾರ್ಗದಿಂದ ದ್ರೋಣರು ತಮ್ಮ ಲೋಕಕ್ಕೆ ಹೋಗುವುದನ್ನು ಕಂಡರು. ಪಾಂಡವರು ತಡೆಯುತ್ತಿದ್ದರೂ ಧೃಷ್ಟದ್ಯುಮ್ನನು ಖಡ್ಗ-ಚರ್ಮಗಳನ್ನು ಹಿಡಿದು ದ್ರೋಣರಿದ್ದಲ್ಲಿಗೆ ಬಂದನು.

ಛಿತ್ವಾಽಸಿನಾ ತಸ್ಯ ಶಿರಃ ಪುನಶ್ಚ
ರಥಂ ಸ್ವಕೀಯಂ ತ್ವರಯಾ ಸಮಾಸ್ಥಿತಃ ।
ದೃಷ್ಟ್ವಾ ಕೃಪಸ್ತಂ ಸುಭೃಶಂ ಭಯಾರ್ದಿತಃ
ಸಂಪ್ರಾದ್ರವದ್ ವಾಜಿನಮೇಕಮಾಸ್ಥಿತಃ ॥

ಧೃಷ್ಟದ್ಯುಮ್ನ ದ್ರೋಣರ ಶಿರಸ್ಸನ್ನು ತರಿದು ಪುನಃ ಬೇಗನೆ ತನ್ನ ರಥವನ್ನೇರಿದನು. ಕೃಪರು ನೋಡಿ ಬಹಳ ಭಯಾರ್ತರಾಗಿ ಒಂದು ಕುದುರೆಯನ್ನೇರಿ ಪಲಾಯನ ಮಾಡಿದರು.

ಸಂಭಿನ್ನೇ ದ್ರೋಣಶಿರಸಿ ಗರ್ಹಯಾಮಾಸ ವಾಸವಿಃ ।
ಯುಧಿಷ್ಠಿರಂ ಚ ಪಾಂಚಾಲ್ಯಂ ಸಾತ್ಯಕಿಶ್ಚಾಪಿ ಕೋಪಿತಃ ॥

ದ್ರೋಣರ ಶಿರಶ್ಛೇದವಾದಾಗ ಅರ್ಜುನನು ಧರ್ಮರಾಜನನ್ನೂ ಧೃಷ್ಟದ್ಯುಮ್ನನನ್ನೂ ಆಕ್ಷೇಪಿಸಿದನು. ಸಾತ್ಯಕಿಯೂ ಕುಪಿತನಾದನು.

ಧೃಷ್ಟದ್ಯುಮ್ನಸ್ತು ತಾವಾಹ ಕಥಂ ಭೂರಿಶ್ರವಾ ಹತಃ ।
ಇತಿ ತಂ ಸಾತ್ಯಕಿಃ ಕ್ರುದ್ಧೋ ಗದಾಪಾಣಿಃ ಸಮಭ್ಯಯಾತ್ ॥

ಧೃಷ್ಟದ್ಯುಮ್ನನು ಅರ್ಜುನ, ಸಾತ್ಯಕಿಯರನ್ನು ಕೇಳಿದನು- 'ಭೂರಿಶ್ರವನು ನಿಮ್ಮಿಂದ ಹೇಗೆ ಹತನಾದನು?' ಸಾತ್ಯಕಿ ಕ್ರುದ್ಧನಾಗಿ ಗದಾಪಾಣಿಯಾಗಿ ಧೃಷ್ಟದ್ಯುಮ್ನನ ಮೇಲೇರಿ ಬಂದನು.

ಆಹ್ವಯಾಮಾಸ ಪಾಂಚಾಲ್ಯಸ್ತಂ ಧೃತಾಸಿರವಿಸ್ಮಯಃ ॥
ತದಾ ಜಗ್ರಾಹ ಶೈನೇಯಂ ಭೀಮಃ ಕೃಷ್ಣಪ್ರಚೋದಿತಃ ।
ಶಮಯಾಮಾಸ ಪಾರ್ಥಂ ಚ ಪಾಂಚಾಲ್ಯಸ್ನೇಹಯಂತ್ರಿತಃ ॥

ಧೃಷ್ಟದ್ಯುಮ್ನನು ನಿರ್ಭೀತನಾಗಿ ಖಡ್ಗ ಹಿಡಿದು ಸಾತ್ಯಕಿಯನ್ನು ಯುದ್ಧಕ್ಕೆ ಕರೆದನು. ಆಗ ಕೃಷ್ಣನ ಮಾತಿನಂತೆ ಭೀಮ ಸಾತ್ಯಕಿಯನ್ನು ಗಟ್ಟಿಯಾಗಿ ಹಿಡಿದನು. ಧೃಷ್ಟದ್ಯುಮ್ನನ ಮೇಲಿನ ಪ್ರೀತಿಯಿಂದ ಬದ್ಧನಾಗಿ ಅರ್ಜುನನನ್ನು ಸಮಾಧಾನಪಡಿಸಿದನು.

ತೇ ವಾಸುದೇವೇನ ತದಾऽನುಶಿಷ್ಟಿತಾಃ
ಸ್ನೇಹಂ ಪುನಃ ಪೂರ್ವವದಾಪುರುತ್ತಮಮ್ ।
ಯತ್ತಾಶ್ಚ ಯುದ್ಧಾಯ ಸಮುದ್ಯತಾಶ್ಚ
ತದಾऽऽಗಮದ್ ದ್ರೌಣಿರಪ್ಯಾತ್ತಧನ್ವಾ ॥

ಶ್ರೀಕೃಷ್ಣನು ಆಗ ಅವರಿಗೆ ಚೆನ್ನಾಗಿ ತಿಳಿಹೇಳಿದನು. ಅವರು ಹಿಂದಿನಂತೆ ಅನ್ಯೋನ್ಯವಾಗಿ ಒಳ್ಳೆಯ ಪ್ರೀತಿಯನ್ನು ಹೊಂದಿದರು. ಯುದ್ಧಕ್ಕೆ ಆಯುಧವನ್ನು ಹಿಡಿದು ಸನ್ನದ್ಧರಾದರು. ಅಷ್ಟರಲ್ಲಿ ಧನುರ್ಧಾರಿಯಾಗಿ ಅಶ್ವತ್ಥಾಮರು ಬಂದರು.

ಆಶ್ರುತ್ಯ ತಾತಂ ನಿಹತಂ ಪ್ರತಿಜ್ಞಾಂ
ಚಕಾರ ನಿಃಶೇಷರಿಪುಪ್ರಮಾಥನೇ ।
ನಾರಾಯಣಾಸ್ತ್ರಂ ವಿಸಸರ್ಜ ಕೋಪಾತ್
ತದಾ ಭೀತಾ ಭೀಮಮೃತೇ ಸಮಸ್ತಾಃ ॥

ತನ್ನ ತಂದೆಯು ಹತರಾದರೆಂದು ಕೇಳಿ ತಿಳಿದು ಅಶ್ವತ್ಥಾಮರು ಶತ್ರುಗಳನ್ನು ನಿಃಶೇಷವಾಗಿ ಕೊಲ್ಲುವ ಪ್ರತಿಜ್ಞೆ ಮಾಡಿದರು. ಕೋಪದಿಂದ ನಾರಾಯಣಾಸ್ತ್ರವನ್ನು ಪ್ರಯೋಗಿಸಿದರು. ಆಗ ಭೀಮನ ಹೊರತು ಎಲ್ಲರೂ ಭೀತರಾದರು.

ಯುಧಿಷ್ಠಿರಃ ಪ್ರಾಹ ವಿಷಣ್ಣಚೇತನಃ
ಶೈನೇಯಪೂರ್ವಾಃ ಪ್ರತಿಯಾಂತು ಸರ್ವೇ ।
ಸಭ್ರಾತೃಕೋऽಹಂ ದ್ರೌಣಿವರಾಸ್ತ್ರಮಗ್ನೋ
ಭವೇಯಮಿತ್ಯತ್ರ ಜಗಾದ ಕೇಶವಃ ॥

ಧರ್ಮರಾಜನು ವಿಷಾದಪೂರ್ಣವಾದ ಮನಸ್ಸಿನಿಂದ ಹೇಳಿದನು- 'ಸಾತ್ಯಕಿ ಮುಂತಾದವರೆಲ್ಲರೂ ಹೊರಟು ಹೋಗಿರಿ. ನಾನು ಸಹೋದರರ ಸಮೇತನಾಗಿ ಅಶ್ವತ್ಥಾಮರ ಉತ್ತಮ ಅಸ್ತ್ರದಿಂದ ಕಣ್ಮರೆಯಾಗಿ ಹೋಗುವೆನು' ಎಂದು. ಆಗ ಕೃಷ್ಣನು ನುಡಿದನು.

ನಮಧ್ವಮಸ್ತ್ರಸ್ಯ ತತೋ ವಿಮೋಕ್ಷ್ಯಥೇ-
ತ್ಯಥ ಪ್ರಣೇಮುಶ್ಚ ಧನಂಜಯಾದಿಕಾಃ ।
ಸರ್ವೇ ನ ಭೀಮಸ್ತದಮುಷ್ಯ ಮೂರ್ಧ್ನಿ
ಪಪಾತ ಸೋಽಗ್ನಾವಿವ ಸಂಸ್ಥಿತೋಗ್ನಿಃ ॥

'ಎಲ್ಲರೂ ಅಸ್ತ್ರಕ್ಕೆ ನಮಿಸಿರಿ. ಆಗ ಅಸ್ತ್ರದಿಂದ ವಿಮುಕ್ತರಾಗುವಿರಿ' ಎಂದು ಕೃಷ್ಣನು ಹೇಳಿದಾಗ, ಅರ್ಜುನ ಮುಂತಾದವರೆಲ್ಲರೂ ನಮಿಸಿದರು. ಭೀಮನು ಮಾತ್ರ ನಮಿಸಲಿಲ್ಲ. ಅದರಿಂದ ಅಸ್ತ್ರ ಎಲ್ಲರನ್ನೂ ಬಿಟ್ಟು ಭೀಮನ ತಲೆಯ ಮೇಲೆ ಬಿದ್ದಿತು. ಆದರೆ ಬೆಂಕಿಯ ನಡುವೆ ಬೆಂಕಿಯಂತೆ ಅಸ್ತ್ರದ ನಡುವೆ ಭೀಮನು ನಿಂತನು.

ಅದಹ್ಯಮಾನೇ ಭೀಮೇಽಪಿ ವಹ್ನೌ ವಹ್ನಿರಿವ ಸ್ಥಿತೇ ।
ಅವೇಷ್ಟಯದ್ ವಾರುಣೇನ ಪಾರ್ಥೋಽತ್ಯಾತ್ಮಪ್ರಪತ್ತಯೇ ॥

ಭೀಮನು ಬೆಂಕಿಯ ನಡುವೆ ಬೆಂಕಿಯಂತೆ ಅಸ್ತ್ರದಿಂದ ಸುಡದೆ ನಿಂತಾಗ ಅರ್ಜುನನು ಭಕ್ತಿಯಿಂದ ತನ್ನ ಪಾಲಿನ ಸೇವೆ ಸಲ್ಲಿಸುವುದಕ್ಕಾಗಿ ವಾರುಣಾಸ್ತ್ರದಿಂದ ಭೀಮನನ್ನು ಆವರಿಸಿದನು.

ನ ದೇಹೇ ಪತಿತಾಸ್ತ್ರಸ್ಯ ಬಹಿರ್ವೇಷ್ಟನತಃ ಫಲಮ್ ।
ತಥಾಽಪಿ ಸ್ನೇಹವಶಗೋ ವೇಷ್ಟಯಾಮಾಸ ಫಲ್ಗುನಃ ॥

ದೇಹದಲ್ಲಿ ಬಿದ್ದ ಅಸ್ತ್ರಕ್ಕೆ ಹೊರಗಿನಿಂದ ನೀರು ಆವರಿಸುವುದರಿಂದ ಫಲವಿಲ್ಲ. ಆದರೂ ಅಣ್ಣನೆಂದು ಪ್ರೀತಿಯಿಂದ ಅರ್ಜುನನು ವಾರುಣಾಸ್ತ್ರವನ್ನು ಸುತ್ತುವರಿಸಿದನು.

ಅಮೋಘತ್ವಂ ನಿಜಾಸ್ತ್ರಸ್ಯ ಭೀಮಸ್ಯಾವಧ್ಯತಾಮಪಿ ।
ಸಾಧಯನ್ ಸಾರ್ಜುನಃ ಕೃಷ್ಣೋ ಭೀಮಸ್ಯ ರಥಮಾರುಹತ್ ॥

ನಾರಾಯಣಾಸ್ತ್ರ ಅಮೋಘವೆಂಬುದನ್ನೂ ಭೀಮನು ಅವಧ್ಯನೆಂಬುದನ್ನೂ ತೋರುತ್ತಾ ಶ್ರೀಕೃಷ್ಣನು ಅರ್ಜುನ ಸಮೇತನಾಗಿ ಭೀಮನ ರಥವನ್ನೇರಿದನು.

ವೇಷ್ಟಿತಂ ವಾರುಣಾಸ್ತ್ರೇಣ ಪ್ರವಿಷ್ಟಂ ಬಾಹ್ಯತಸ್ತದಾ ।
ಸಹಿತತ್ವಾತ್ ಕೇಶವೇನ ನರತ್ವಾದಥ ಫಲ್ಗುನಮ್ ॥

ತದಸ್ತ್ರಂ ನಾದಹತ್ ತಾಭ್ಯಾಂ ಸ್ವರಥಾದವರೋಪಿತೇ ।
ಭೀಮ ಆಚ್ಛಿನ್ನಹೇತೌ ಚ ತದಸ್ತ್ರಂ ಶಾಂತಿಮಾಗಮತ್ ॥

ಹೊರಗೆ ವಾರುಣಾಸ್ತ್ರದಿಂದ ಸುತ್ತುವರಿದಿದ್ದ ನಾರಾಯಣಾಸ್ತ್ರವು ಒಳಗಿದ್ದ ಭೀಮನನ್ನು ಸುಡಲಿಲ್ಲ. ಅರ್ಜುನನನ್ನೂ ಸುಡಲಿಲ್ಲ. ಏಕೆಂದರೆ ಅರ್ಜುನನು ಶ್ರೀಕೃಷ್ಣನ ಜೊತೆಗಿದ್ದನು, ನರಾವೇಶವನ್ನೂ ಹೊಂದಿದ್ದನು, ಅಸ್ತ್ರಕ್ಕೆ ನಮಸ್ಕಾರವನ್ನೂ ಮಾಡಿದ್ದನು. ಅದರಿಂದ ಕೃಷ್ಣಾರ್ಜುನರು ಭೀಮನನ್ನು ಅವನ ರಥದಿಂದ ಇಳಿಸಿದರು. ಅವನ ಆಯುಧವನ್ನು ಸೆಳೆದರು. ಅದರಿಂದ ಅಸ್ತ್ರವು ಶಾಂತವಾಯಿತು.

ಶುದ್ಧಕ್ಷತ್ರಿಯಧರ್ಮೇಷು ನಿರತೋ ಯದ್ ವೃಕೋದರಃ ।
ವಾಹನಾದವತೀರ್ಯಾನ್ಯೈಃ ಪ್ರಣತೇಽಪಿ ನಿರಾಯುಧೈಃ ।
ಸಾಯುಧಃ ಸರಥೋಽಯುದ್ಧ್ಯದವಿಷಹ್ಯಮಪೀಶ್ವರೈಃ ॥

ಶುದ್ಧಕ್ಷತ್ರಿಯ ಧರ್ಮದಲ್ಲಿ ಭೀಮ ನಿರತನಾಗಿದ್ದನು. ಅದರಿಂದ ಉಳಿದವರು ನಿರಾಯುಧರಾಗಿ ವಾಹನದಿಂದ ಕೆಳಗಿಳಿದು ನಮಿಸಿದರೂ ಭೀಮ ಆಯುಧ ಸಹಿತನಾಗಿ ರಥದಲ್ಲಿ ನಿಂತೇ ಬ್ರಹ್ಮಾದಿಗಳಿಂದಲೂ ಸಹಿಸಲಾಗದಂಥ ನಾರಾಯಣಾಸ್ತ್ರದ ಮುಂದೆ ಯುದ್ಧಮಾಡಿದನು.

ಸ್ವಧರ್ಮಹಾನೌ ಮಿತ್ರಾಣಾಂ ಕರ್ತವ್ಯಂ ಯನ್ನಿಷೇಧನಮ್ ।
ಅತಃ ಸೋಽನ್ಯಾನಪಿ ಪ್ರಾಹ ಮಾ ನಮಧ್ವಮಿತಿ ಸ್ವಯಮ್ ॥

ಸ್ವಧರ್ಮಕ್ಕೆ ಚ್ಯುತಿ ಬರುವಾಗ ಮಿತ್ರರಿಗೆ ಅದನ್ನು ನಿಷೇಧ ಮಾಡುವುದು ಕರ್ತವ್ಯವಾಗುತ್ತದೆ. ಅದರಿಂದ ಭೀಮನು ಅನ್ಯರಿಗೂ ನಮಸ್ಕರಿಸಬೇಡಿ ಎಂದು ಹೇಳಿದನು.

ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।
ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತನ್ನ ಚಕಾರ ಸಃ ॥

ನಾರಾಯಣಾಸ್ತ್ರ ಎಲ್ಲರಿಗೂ ನಮಸ್ಕಾರ ಯೋಗ್ಯವೇ. ಆದರೂ ಯುದ್ಧದಲ್ಲಿ ಶತ್ರು ಅದನ್ನು ಪ್ರಯೋಗಿಸಿದಾಗ ಬದುಕಿನಾಸೆಯಿಂದ ನಮಿಸಕೂಡರು. ಆದ್ದರಿಂದ ಭೀಮ ನಮಸ್ಕಾರ ಮಾಡಲಿಲ್ಲ.

ಅಸ್ತ್ರಾಭಿಮಾನೀ ವಾಯುರ್ಹಿ ದೇವತಾऽಸ್ಯ ಹರಿಃ ಸ್ವಯಮ್ ।
ತಸ್ಮಾದ್ ಭೀಮಂ ಸ್ವರೂಪತ್ವಾನ್ನಾದಹಚ್ಚಾಗ್ನಿಮಗ್ನಿವತ್ ॥

ನಾರಾಯಣಾಸ್ತ್ರಕ್ಕೆ ಅಭಿಮಾನಿ ವಾಯು. ದೇವತೆ ಸ್ವತಃ ನಾರಾಯಣ. ಆದರಿಂದ ಅಗ್ನಿಯನ್ನು ಅಗ್ನಿ ಹೇಗೆ ಸುಡುವುದಿಲ್ಲವೋ ಹಾಗೆ ಭೀಮನಿಂದ ಅಭಿಮಾನ್ಯಮಾನವಾದ ಆ ಅಸ್ತ್ರ ಭೀಮನನ್ನು ಸುಡಲಿಲ್ಲ.

ಮನಸೈವಾऽದರಂ ಚಕ್ರೇ ಭೀಮೋऽಸ್ತ್ರೇ ಚ ಹರೌ ತದಾ ।
ಕ್ಷತ್ರಧರ್ಮಾನುಸಾರೇಣ ನ ನನಾಮ ಚ ಬಾಹ್ಯತಃ ॥

ಭೀಮ ಅಸ್ತ್ರಕ್ಕೂ ಅಸ್ತ್ರದೇವತೆಯಾದ ಹರಿಗೂ ಮನಸ್ಸಿನಿಂದಲೇ ಆದರ ತೋರಿದನೇ ಹೊರತು ಬಾಹ್ಯದಲ್ಲಿ ಕ್ಷತ್ರಧರ್ಮಾನುಸಾರವಾಗಿ ತಲೆಬಾಗಿ ನಮಿಸಲಿಲ್ಲ.

ವಾಸುದೇವಃ ಸ್ವಕೀಯಾಸ್ತ್ರಂ ಭೀಮಂ ಚಾಮೋಘಮೇವ ತು ।
ಸಾಧಯಿತ್ವಾऽನಂತಶಕ್ತಿಃ ಪುನರಶ್ವಾನಚೋದಯತ್ ॥

ಅನಂತಶಕ್ತಿ ಉಳ್ಳ ಶ್ರೀಕೃಷ್ಣ ತನ್ನ ಅಸ್ತ್ರವನ್ನು ಅಮೋಘವೆಂದೂ ಭೀಮನನ್ನು ಅವಧ್ಯನೆಂದೂ ತೋರಿಸಿ ಪುನಃ ಕುದುರೆಗಳನ್ನು ನಡೆಸಿದನು.

ಪುನಃ ಪ್ರಯೋಕ್ತುಮಸ್ತ್ರಂ ತದ್ ಧಾರ್ತರಾಷ್ಟ್ರೋऽಭ್ಯಚೋದಯತ್ ।
ದ್ರೌಣಿರ್ನ ಶಕ್ಯಮಿತ್ಯುಕ್ತ್ವಾ ಧೃಷ್ಟದ್ಯುಮ್ನಂ ಸಮಭ್ಯಯಾತ್ ॥

ಪುನಃ ನಾರಾಯಣಾಸ್ತ್ರವನ್ನು ಪ್ರಯೋಗಿಸುವಂತೆ ಅಶ್ವತ್ಥಾಮರನ್ನು ದುರ್ಯೋಧನ ಒತ್ತಾಯಿಸಿದನು. ಅಶ್ವತ್ಥಾಮರು ಅದು ಶಕ್ಯವಿಲ್ಲ ಎಂದು ಹೇಳಿ ಧೃಷ್ಟದ್ಯುಮ್ನನನ್ನು ಎದುರಿಸಿದರು.

ಆಯಾಂತಮೀಕ್ಷ್ಯೈವ ಗುರೋಃ ಸುತಂ ತಂ
ಧೃಷ್ಟದ್ಯುಮ್ನಂ ಸಾತ್ಯಕಿರನ್ವಯಾದ್ ರಣೇ ।
ಉಭೌ ಚ ತೌ ಸಾಯಕಾಭ್ಯಾಮವಿದ್ಧ್ಯ-
ನ್ನಿಪೇತತುಸ್ತೌ ಚ ವಿಮೂರ್ಚ್ಛಿತೌ ರಣೇ ॥

ಅಶ್ವತ್ಥಾಮರು ಧೃಷ್ಟದ್ಯುಮ್ನನ ಕಡೆಗೆ ಬರುವುದನ್ನು ಕಂಡು ಸಾತ್ಯಕಿಯು ಯುದ್ಧದಲ್ಲಿ ಅಶ್ವತ್ಥಾಮನ ಎದುರಿಗೆ ಬಂದನು. ಅವರಿಬ್ಬರೂ ಬಾಣಗಳಿಂದ ಹೊಡೆದುಕೊಂಡರು. ಯುದ್ಧದಲ್ಲಿ ಇಬ್ಬರೂ ಮೂರ್ಛಿತರಾಗಿ ಬಿದ್ದರು.

ಭೀಮಸ್ಯಾಭ್ಯಾಗತಸ್ಯಾಶ್ವಾನ್ ದ್ರೌಣಿರ್ವ್ಯದ್ರಾವಯದ್ ರಣೇ ।
ಸಂಸ್ಥಾಪಯತಿ ತಾನ್ ಭೀಮೇ ದದರ್ಶ ದ್ರೌಣಿಮರ್ಜುನಃ ॥

ಭೀಮನು ಬಂದಾಗ ಅವನ ಅಶ್ವಗಳನ್ನು ಯುದ್ಧದಲ್ಲಿ ಅಶ್ವತ್ಥಾಮನು ಓಡಿಸಿದನು. ಆ ಅಶ್ವಗಳನ್ನು ಭೀಮನು ತಡೆಯುತ್ತಿದ್ದಾಗ ಅರ್ಜುನನು ಅಶ್ವತ್ಥಾಮರನ್ನು ಕಂಡನು.

ತತೋರ್ಜುನಸ್ತಂ ಪ್ರತಿಯೋದ್ಧಮಾಗಮದ್
ರೂಕ್ಷಾ ವಾಚಃ ಶ್ರಾವಯನ್ ಕ್ರುದ್ಧರೂಪಃ ।
ತತ್ರಾऽಗ್ನೇಯಂ ದ್ರೌಣಿರಮುಂಚದಸ್ತ್ರಂ
ತೇನ ವ್ಯಾಪ್ತಾ ಪೃತನಾ ಪಾಂಡವಾನಾಮ್ ॥

ಅರ್ಜುನನು ಕ್ರೂರವಾದ ಮಾತುಗಳನ್ನಾಡುತ್ತಾ ಅಶ್ವತ್ಥಾಮರೊಡನೆ ಯುದ್ಧಕ್ಕೆ ಬಂದನು. ಅಶ್ವತ್ಥಾಮರು ಕ್ರುದ್ಧರಾಗಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದರು. ಆ ಅಸ್ತ್ರವು ಪಾಂಡವರ ಸೈನ್ಯವನ್ನು ಎಲ್ಲೆಡೆಯಲ್ಲಿಯೂ ಆವರಿಸಿತು.

ಅಕ್ಷೋಹಿಣೀ ನಿಹತಾ ಚಾತ್ರ ಸೇನಾ
ಪಾರ್ಥಂ ಸಯಾನಂ ಹರಿರುಜ್ಜಹಾರ ।
ಜೀವಂತಮಾಲೋಕ್ಯ ಸುರೇಂದ್ರನಂದನಂ
ದ್ರೌಣಿಃ ಕೋಪಾತ್ ಕಾರ್ಮುಕಂ ಚಾಪಹಾಯ ।
ಯಯೌ ತಮಾಗತ್ಯ ಜಗಾದ ಕೃಷ್ಣೋ
ವೇದಾಂತಕೃತ್ ಪೂರ್ಣಷಾಡ್ಗುಣ್ಯದೇಹಃ ॥

ಅಶ್ವತ್ಥಾಮರ ಆಗ್ನೇಯಾಸ್ತ್ರದಿಂದ ಒಂದು ಅಕ್ಷೋಹಿಣಿ ಸೈನ್ಯವು ಸುಟ್ಟು ಹೋಯಿತು. ಆದರೆ ಅರ್ಜುನನನ್ನು ರಥ ಸಮೇತವಾಗಿ ಕೃಷ್ಣ ಪಾರು ಮಾಡಿದನು. ಅರ್ಜುನ ಬದುಕಿ ಉಳಿದುದನ್ನು ಕಂಡು ಅಶ್ವತ್ಥಾಮರು ಕೋಪದಿಂದ ತಮ್ಮ ಧನುಸ್ಸನ್ನೆಸೆದು ಹೊರಟು ಹೋದರು. ಆಗ ವೇದಾಂಕರ್ತರಾದ ಪೂರ್ಣ ಷಡ್ಗುಣ ಶರೀರಿಯಾದ ವೇದವ್ಯಾಸರು ಅವನ ಬಳಿಗೆ ಬಂದು ಹೇಳಿದರು.

ಮಾ ಯಾಹಿ ಸಾಕ್ಷಾದ್ ಗಿರಿಶಃ ಸುರಾಣಾಂ
ಕಾರ್ಯಾಯ ಭೂಮೌ ಬಲವಾನಜಾಯಥಾಃ ।
ಮಹಚ್ಚ ಕಾರ್ಯಂ ಪುನರಸ್ತಿ ದೃಷ್ಟಂ
ತವಾಶು ತಚ್ಚ ಪ್ರತಿಪಾದಯೇತಿ ॥

'ಹೋಗಬೇಡಿ, ನೀವು ಸಾಕ್ಷಾತ್ ರುದ್ರಾವತಾರ. ದೇವಕಾರ್ಯಕ್ಕಾಗಿ ಭೂಮಿಯಲ್ಲಿ ಬಲಿಷ್ಠರಾಗಿ ಅವತರಿಸಿರುವಿರಿ. ನಿಮ್ಮ ಮಹತ್ತಾದ ಕಾರ್ಯವನ್ನು ನಾವು ಕಂಡಿದ್ದೇವೆ. ಇನ್ನೂ ಅಂಥ ಕಾರ್ಯವನ್ನು ನೀವು ಮಾಡಬೇಕಾಗಿದೆ. ಅದನ್ನೂ ಬೇಗನೆ ಮಾಡಿ' ಎಂದು ಹೇಳಿದರು.

ತಥೋದಿತಃ ಪ್ರಾತರಿತಿ ಬ್ರುವಾಣೋ
ಯಯೌ ಪ್ರಣಮ್ಯಾಖಿಲವೇದಯೋನಿಮ್ ।
ಯಯುಸ್ತಮನ್ವೇವ ಸುಯೋಧನಾದಯೋ
ದುಃಖಾನತಾಸ್ತೇ ಶಿಬಿರಾಯ ಭೀತಾಃ ॥

ವೇದವ್ಯಾಸರು ಹೀಗೆ ಹೇಳಿದಾಗ ಅಶ್ವತ್ಥಾಮರು 'ಬೆಳಿಗ್ಗೆ' ಎನ್ನುತ್ತಾ ಸಕಲ ವೇದಪ್ರತಿಪಾದ್ಯರಾದ ಆ ವ್ಯಾಸರಿಗೆ ನಮಿಸಿ ಶಿಬಿರಕ್ಕೆ ಹೊರಟು ಹೋದರು. ದುರ್ಯೋಧನಾದಿಗಳು ಭೀತರಾಗಿ ದುಃಖದಿಂದ ತಲೆತಗ್ಗಿಸಿ ಅವರ ಹಿಂದಿನಿಂದ ಶಿಬಿರಕ್ಕೆ ತೆರಳಿದರು.

ಪಾರ್ಥಾಶ್ಚ ಸರ್ವೇ ಮುದಿತಾ ಜನಾರ್ದನಂ
ಪರಂ ಸ್ತುವಂತಃ ಶಿಬಿರಾಯ ಜಗ್ಮುಃ ।
ತತ್ರಾಪಿ ರಾತ್ರಾವಮಿತಾನ್ ಹರೇರ್ಗುಣಾ-
ನನುಸ್ಮರಂತೋ ಮುಮುದುಃ ಸಮೇತಾಃ ॥

ಪಾಂಡವರೆಲ್ಲರೂ ಸಂತುಷ್ಟರಾಗಿ ಸರ್ವೋತ್ತಮನಾದ ಕೃಷ್ಣನನ್ನು ಹೊಗಳುತ್ತಾ ಶಿಬಿರಕ್ಕೆ ನಡೆದರು. ಅಲ್ಲಿಯೂ ರಾತ್ರಿಯಲ್ಲಿ ಎಲ್ಲರೂ ಕೂಡಿ ಹರಿಯ ಗುಣಗಳನ್ನು ನೆನೆಯುತ್ತಾ ಆನಂದಪಟ್ಟರು.

★ ★ ★ ★ ★

ನೂರ ಐವತ್ತೈದನೆಯ ಅಧ್ಯಾಯ

ನಕುಲ-ಕೃಪಾಚಾರ್ಯರಿಂದ ಶಕುನಿ ಮತ್ತು ಶಿಖಂಡಿಗಳ ಪರಾಜಯ.

ಸಂಜಯಃ

ನಕುಲಂ ರಭಸಂ ಯುದ್ಧೇ ನಿಘ್ನಂತಂ ವಾಹಿನೀಂ ತವ ।
ಅಭ್ಯಯಾತ್ ಸೌಬಲಃ ಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೧ ॥

ಸಂಜಯ– ಶಕುನಿಯು ಯುದ್ಧದಲ್ಲಿ ವೇಗಶಾಲಿಯಾಗಿ ನಿನ್ನ ಸೈನ್ಯವನ್ನು ಕೊಲ್ಲುತ್ತಿದ್ದಂತಹ ನಕುಲನ ಮೇಲೆ ಎರಗಿ, ಕೋಪಗೊಂಡು 'ನಿಲ್ಲು, ನಿಲ್ಲು' ಎಂದು ಹೇಳಿದನು.

ಕೃತವೈರೌ ತು ತೌ ವೀರಾವನ್ಯೋನ್ಯವಧಕಾಂಕ್ಷಿಣೌ ।
ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಿಜಘ್ನತುಃ ॥ ೨ ॥

ಬಹಳ ವೈರವನ್ನು ಮಾಡಿ ಪರಸ್ಪರ ವಧೆಯನ್ನು ಬಯಸುವ ವೀರರಾದ ಅವರಿಬ್ಬರೂ ಪೂರ್ಣವಾಗಿ ಹೆದೆಯನ್ನು ಎಳೆದು ಪ್ರಯೋಗಿಸಿದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ಯಥೈವ ಸೌಬಲಃ ಕ್ಷಿಪ್ರಂ ಶರವರ್ಷಾಣಿ ಮುಂಚತಿ ।
ತಥೈವ ನಕುಲೋ ರಾಜನ್ ಶಿಕ್ಷಾಂ ಸಂದರ್ಶಯನ್ ಯುಧಿ ॥ ೩ ॥

ಎಲೈ ರಾಜನೇ, ಶಕುನಿಯು ಹೇಗೆ ಶೀಘ್ರವಾಗಿ ಬಾಣಗಳ ಮಳೆಯನ್ನು ಸುರಿಸುತ್ತಾನೆಯೋ ಹಾಗೆಯೇ ನಕುಲನೂ ಸಹ ತನ್ನ ಅಭ್ಯಾಸ ಪಾಟವವನ್ನು ಪ್ರದರ್ಶಿಸಿ ಬಾಣಗಳ ಮಳೆಯನ್ನು ಸುರಿಸಿದನು.

ತಾವುಭೌ ಸಮರೇ ಶೂರೌ ಶರಕಂಟಕಿನೌ ತದಾ ।
ವ್ಯರಾಜೇತಾಂ ಮಹಾರಾಜ ಕಂಟಕೈರಿವ ಶಾಲ್ಮಲೀ ॥ ೪ ॥

ಎಲೈ ಮಹಾರಾಜನೇ, ರಣರಂಗದಲ್ಲಿ ಬಾಣಗಳು ಶರೀರದಲ್ಲಿ ನಾಟಿದ ಶೂರರಾದ ಅವರಿಬ್ಬರೂ ಮುಳ್ಳುಗಳಿಂದ ಕೂಡಿದ ಶಾಲ್ಮಲೀ ವೃಕ್ಷದಂತೆ (ಬೂರುಗದ ಮರ) ಶೋಭಿಸಿದರು.

ಸುಜಿಹ್ಮಂ ಪ್ರೇಕ್ಷಮಾಣೌ ಚ ರಾಜನ್ ವಿವೃತಲೋಚನೌ ।
ಕ್ರೋಧಸಂರಕ್ತನಯನೌ ನಿರ್ದಹಂತೌ ಪರಸ್ಪರಮ್ ॥ ೫ ॥

ಎಲೈ ರಾಜನೇ, ಕಣ್ಣುಗಳನ್ನು ಪೂರ್ಣವಾಗಿ ಅರಳಿಸಿ, ವಕ್ರದೃಷ್ಟಿಯಿಂದ ಒಬ್ಬರನ್ನೊಬ್ಬರು ನೋಡುತ್ತಾ, ಕ್ರೋಧದಿಂದ ಕೆಂಪಾದ ಕಣ್ಣುಳ್ಳವರಾಗಿ ಪರಸ್ಪರವಾಗಿ ನಾಶಮಾಡಲು ಬಯಸಿದರು.

ಸ್ಯಾಲಸ್ತು ತವ ಸಂಕ್ರುದ್ಧೋ ಮಾದ್ರೀಪುತ್ರಂ ಹಸನ್ನಿವ ।
ಕರ್ಣಿನೈಕೇನ ವಿವ್ಯಾಧ ಹೃದಯೇ ನಿಶಿತೇನ ಹ ॥ ೬ ॥

ನಿನ್ನ ಭಾವಮೈದುನನಾದ ಶಕುನಿಯು ತೀಕ್ಷ್ಣವಾದ ಒಂದು ಬಾಣದಿಂದ ಕೋಪಗೊಂಡು ನಗುತ್ತಾ ಮಾದ್ರೀಪುತ್ರನಾದ ನಕುಲನನ್ನು ಅವನ ಹೃದಯದಲ್ಲಿ ಹೊಡೆದನು.

ನಕುಲಸ್ತು ಭೃಶಂ ವಿದ್ಧಃ ಸ್ಯಾಲೇನ ತವ ಧನ್ವಿನಾ ।
ನಿಷಸಾದ ರಥೋಪಸ್ಥೇ ಕಶ್ಮಲಂ ಚೈನಮಾವಿಶತ್ ॥ ೭ ॥

ಧನುರ್ಧಾರಿಯಾದ ನಿನ್ನ ಭಾವಮೈದುನನಿಂದ ಗಾಢವಾಗಿ ಹೊಡೆಯಲ್ಪಟ್ಟ ನಕುಲನಾದರೋ ರಥಪೀಠದಲ್ಲಿ ಕುಸಿದು ಮೂರ್ಛೆಯನ್ನು ಹೊಂದಿದನು.

ಅತ್ಯಂತವೈರಿಣಂ ದೃಪ್ತಂ ದೃಷ್ಟ್ವಾ ಶತ್ರುಂ ತಥಾಗತಮ್ ।
ನನಾದ ಶಕುನೀ ರಾಜಂಸ್ತಪಾಂತೇ ಜಲದೋ ಯಥಾ ॥ ೮ ॥

ಎಲೈ ರಾಜನೇ, ಅತ್ಯಂತ ವೈರಿಯೂ, ದರ್ಪದಿಂದ ಕೂಡಿದವನೂ ಆದ ಶತ್ರುವು ಅಂತಹ ಅವಸ್ಥೆಯನ್ನು ಹೊಂದಿದುದನ್ನು ನೋಡಿ ಶಕುನಿಯು ಮಳೆಗಾಲದಲ್ಲಿ ಮೋಡವು ಗರ್ಜಿಸುವಂತೆ ಗರ್ಜಿಸಿದನು.

ಪ್ರತಿಲಭ್ಯ ತತಃ ಸಂಜ್ಞಾಂ ನಕುಲಃ ಪಾಂಡುನಂದನಃ ।
ಅಭ್ಯಯಾತ್ ಸೌಬಲಂ ಭೂಯೋ ವ್ಯಾತ್ತಾನನ ಇವಾಂತಕಃ ॥ ೯ ॥

ಅಷ್ಟರಲ್ಲಿ ಪಾಂಡುನಂದನನಾದ ನಕುಲನು ಪ್ರಜ್ಞೆಯನ್ನು ಮರಳಿ ಪಡೆದು ಬಾಯ್ತೆರೆದ ಯಮನಂತೆ ಪುನಃ ಶಕುನಿಯ ಮೇಲೆ ಎರಗಿದನು.

ಸಂಕ್ರುದ್ಧಃ ಶಕುನಿಂ ಷಷ್ಟ್ಯಾ ವಿವ್ಯಾಧ ಭರತರ್ಷಭ ।
ಪುನಶ್ಚೈವ ಶತೇನೈವ ನಾರಾಚಾನಾಂ ಸ್ತನಾಂತರೇ ॥ ೧೦ ॥

ಎಲೈ ಭರತಶ್ರೇಷ್ಠನೇ, ಅವನು ಕೋಪಗೊಂಡು ಶಕುನಿಯ ಮೇಲೆ ಅರವತ್ತು ಬಾಣಗಳನ್ನು ಪ್ರಯೋಗಿಸಿದನು. ಪುನಃ ನೂರು ನಾರಾಚಗಳಿಂದ ಅವನನ್ನು ಸ್ತನಗಳ ಮಧ್ಯದಲ್ಲಿ ಹೊಡೆದನು.

ತತೋಽಸ್ಯ ಸಶರಂ ಚಾಪಂ ಮುಷ್ಟಿದೇಶೇ ಸ ಚಿಚ್ಛಿದೇ ।
ಧ್ವಜಂ ಚ ತ್ವರಿತಂ ಛಿತ್ತ್ವಾ ರಥಾದ್ ಭೂಮಾವಪಾತಯತ್ ॥ ೧೧ ॥

ಅನಂತರ ಬಾಣ ಸಹಿತವಾದ ಅವನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು ಮತ್ತು ಧ್ವಜವನ್ನೂ ಶೀಘ್ರವಾಗಿ ಕತ್ತರಿಸಿ ರಥದಿಂದ ಭೂಮಿಯ ಮೇಲೆ ಕೆಡವಿದನು.

ಸೋಽತಿವಿದ್ಧೋ ಮಹಾರಾಜ ರಥೋಪಸ್ಥ ಉಪಾವಿಶತ್ ।
ತಂ ವಿಸಂಜ್ಞಂ ನಿಪತಿತಂ ದೃಷ್ಟ್ವಾ ಸ್ಯಾಲಂ ತವಾನಘ ।
ಅಪೋವಾಹ ರಥೇನಾಶು ಸಾರಥಿರ್ಧ್ವಜನೀಮುಖಾತ್ ॥ ೧೨ ॥

ಎಲೈ ಮಹಾರಾಜನೇ, ಶಕುನಿಯು ಗಾಢವಾಗಿ ಹೊಡೆಯಲ್ಪಟ್ಟು ರಥಪೀಠದಲ್ಲಿ ಕುಳಿತನು. ಎಲೈ ಅನಘನೇ, ನಿನ್ನ ಭಾವಮೈದುನನು ಪ್ರಜ್ಞಾಹೀನನಾದುದನ್ನು ನೋಡಿ ಅವನ ಸಾರಥಿಯು ಅವನನ್ನು ರಣರಂಗದಿಂದ ಶೀಘ್ರವಾಗಿ ಹೊರಗೆ ಕರೆದುಕೊಂಡು ಹೋದನು.

ತತಃ ಸಂಚುಕ್ರುಶುಃ ಪಾರ್ಥಾ ಯೇ ಚ ತೇಷಾಂ ಪದಾನುಗಾಃ ।
ನಿರ್ಜಿತ್ಯ ಚ ರಣೇ ಶತ್ರೂನ್ ನಕುಲಃ ಶತ್ರುತಾಪನಃ ।
ಅಬ್ರವೀತ್ ಸಾರಥಿಂ ಕ್ರುದ್ಧೋ ದ್ರೋಣಾನೀಕಾಯ ಮಾಂ ವಹ ॥೧೩॥

ಆಗ ಪಾಂಡವರು ಮತ್ತು ಅವರ ಅನುಚರರು ಸಿಂಹನಾದವನ್ನು ಮಾಡಿದರು. ಶತ್ರುತಾಪನನಾದ ನಕುಲನು ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ಕೋಪಗೊಂಡು ತನ್ನ ಸಾರಥಿಯನ್ನು ಕುರಿತು ದ್ರೋಣರ ಸೇನೆಯ ಕಡೆಗೆ ನನ್ನನ್ನು ಕರೆದುಕೊಂಡು ಹೋಗು ಎಂದು ಹೇಳಿದನು.

ತಸ್ಯ ತದ್ವಚನಂ ಶ್ರುತ್ವಾ ಮಾದ್ರೀಪುತ್ರಸ್ಯ ಧೀಮತಃ ।
ಪ್ರಾಯಾತ್ ತೇನ ರಣೇ ರಾಜನ್ ಯೇನ ದ್ರೋಣೋಽಸ್ತ್ರಯುದ್ಧ್ಯತ ॥

ಎಲೈ ರಾಜನೇ, ಮೇಧಾವಿಯಾದ ಮಾದ್ರೀಪುತ್ರನ ಆ ಮಾತನ್ನು ಕೇಳಿದ ಸಾರಥಿಯು ರಣರಂಗದಲ್ಲಿ ಅವನನ್ನು ದ್ರೋಣರಿದ್ದ ಕಡೆಗೆ ಕರೆದುಕೊಂಡು ಹೋದನು.

ಶಿಖಂಡಿನಂ ತು ಸಮರೇ ದ್ರೋಣಪ್ರೇಪ್ಸುಂ ವಿಶಾಂಪತೇ ।
ಕೃಪಃ ಶಾರದ್ವತೋ ಯತ್ತಃ ಪ್ರತ್ಯುದ್ಗಚ್ಛತ್ ಸುವೇಗಿತಃ ॥ ೧೫ ॥

ಎಲೈ ರಾಜನೇ, ದ್ರೋಣರ ಬಳಿಗೆ ಬರಲು ಯತ್ನಿಸುತ್ತಿದ್ದ ಶಿಖಂಡಿಯ ಮೇಲೆ ಶಾರದ್ವತರಾದ ಕೃಪರು ರಣರಂಗದಲ್ಲಿ ಬಹಳ ವೇಗದಿಂದ ಮತ್ತು ಪ್ರಯತ್ನ ಪೂರ್ವಕವಾಗಿ ಎರಗಿದರು.

ಗೌತಮಂ ದ್ರುತಮಾಯಾಂತಂ ದ್ರೋಣಾಂತಿಕಮರಿಂದಮಮ್ ।
ವಿವ್ಯಾಧ ನವಭಿರ್ಭಲ್ಲೈಃ ಶಿಖಂಡೀ ಪ್ರಹಸನ್ನಿವ ॥ ೧೬ ॥

ದ್ರೋಣರಿಗೆ ಸಹಾಯವನ್ನು ಮಾಡಲು ಬಯಸಿ ಶೀಘ್ರವಾಗಿ ಬರುತ್ತಿದ್ದ ಅರಿಂದಮರಾದ ಕೃಪರನ್ನು ಶಿಖಂಡಿಯು ನಗುತ್ತಾ ಒಂಬತ್ತು ಭಲ್ಲಗಳಿಂದ ಹೊಡೆದನು.

ತಮಾಚಾರ್ಯೋ ಮಹಾರಾಜ ವಿದ್ಧ್ವಾ ಪಂಚಭಿರಾಶುಗೈಃ ।
ಪುನರ್ವಿವ್ಯಾಧ ವಿಂಶತ್ಯಾ ಪುತ್ರಾಣಾಂ ಪ್ರಿಯಕೃತ್ ತವ ॥ ೧೭ ॥

ಎಲೈ ಮಹಾರಾಜನೇ, ನಿನ್ನ ಪುತ್ರರಿಗೆ ಪ್ರಿಯವನ್ನುಂಟು ಮಾಡುವ ಕೃಪಾಚಾರ್ಯರು ಅವನನ್ನು ಶೀಘ್ರಗಾಮಿಗಳಾದ ಐದು ಬಾಣಗಳಿಂದ ಹೊಡೆದು ಪುನಃ ಇಪ್ಪತ್ತು ಬಾಣಗಳಿಂದ ಹೊಡೆದರು.

ಮಹದ್ ಯುದ್ಧಂ ತಯೋರಾಸೀದ್ ಘೋರರೂಪಂ ವಿಶಾಂಪತೇ ।
ಯಥಾ ದೇವಾಸುರೇ ಯುದ್ಧೇ ಶಂಬರಾಮರರಾಜಯೋಃ ॥ ೧೮ ॥

ಎಲೈ ರಾಜನೇ, ದೇವಾಸುರ ಯುದ್ಧದಲ್ಲಿ ಶಂಬರನಿಗೂ ಮತ್ತು ಇಂದ್ರನಿಗೂ ನಡೆದಂತೆ ಅವರಿಬ್ಬರಿಗೆ ಘೋರವಾದ ಯುದ್ಧವು ಪ್ರವೃತ್ತವಾಯಿತು.

ಶರಜಾಲಾವೃತಂ ವ್ಯೋಮ ಚಕ್ರತುಸ್ತೌ ಮಹಾರಥೌ ।
ಪ್ರಕೃತ್ಯಾ ಘೋರರೂಪಂ ತದಾಸೀದ್ ಘೋರತರಂ ಪುನಃ ॥ ೧೯ ॥

ಮಹಾರಥರಾದ ಅವರಿಬ್ಬರೂ ಆಕಾಶವನ್ನು ಬಾಣಗಳ ಸಮೂಹದಿಂದ ತುಂಬಿದರು. ಮೊದಲೇ ಘೋರವಾಗಿದ್ದ ಯುದ್ಧವು ಇನ್ನೂ ಘೋರವಾಯಿತು.

ರಾತ್ರಿಶ್ಚ ಭರತಶ್ರೇಷ್ಠ ಯೋಧಾನಾಂ ಯುದ್ಧಶಾಲಿನಾಮ್ ।
ಕಾಳರಾತ್ರಿನಿಭಾ ಹ್ಯಾಸೀದ್ ಘೋರರೂಪಾ ಭಯಾವಹಾ ॥ ೨೦ ॥

ಎಲೈ ಭರತಶ್ರೇಷ್ಠನೇ, ಆ ರಾತ್ರಿಯು ಯುದ್ಧಪ್ರಿಯರಾದ ಯೋಧರಿಗೆ ಘೋರವೂ, ಭಯಂಕರವೂ ಆಗಿ ಕಾಳರಾತ್ರಿಯಂತೆ ಆಯಿತು.

ಶಿಖಂಡೀ ತು ಮಹಾರಾಜ ಗೌತಮಸ್ಯ ಮಹದ್ ಧನುಃ ।
ಅರ್ಧಚಂದ್ರೇಣ ಚಿಚ್ಛೇದ ಸಜ್ಯಂ ಸವಿಶಿಖಂ ತದಾ ॥ ೨೧ ॥

ಎಲೈ ಮಹಾರಾಜನೇ, ಶಿಖಂಡಿಯಾದರೂ ಅರ್ಧಚಂದ್ರದಿಂದ ಹೆದೆ ಮತ್ತು ಬಾಣಗಳಿಂದ ಕೂಡಿದ ಕೃಪರ ಧನುಸ್ಸನ್ನು ಕತ್ತರಿಸಿದನು.

ತಸ್ಯ ಕ್ರುದ್ಧಃ ಕೃಪೋ ರಾಜನ್ ಶಕ್ತಿಂ ಚಿಕ್ಷೇಪ ದಾರುಣಾಮ್ ।
ಸ್ವರ್ಣದಂಡಾಮಕುಂಠಾಗ್ರಾಂ ಕರ್ಮಾರಪರಿಮಾರ್ಜಿತಾಮ್ ॥ ೨೨ ॥

ಎಲೈ ರಾಜನೇ, ಅದಕ್ಕೆ ಪ್ರತಿಯಾಗಿ ಕೃಪರು ಸ್ವರ್ಣದಂಡವನ್ನು ಹೊಂದಿದ ತೀಕ್ಷ್ಣವಾದ ತುದಿಯನ್ನು ಹೊಂದಿದ, ಕಮ್ಮಾರರಿಂದ ತೊಳೆಸಲ್ಪಟ್ಟ ದಾರುಣವಾದ ಶಕ್ತಿಯನ್ನು ಅವನ ಮೇಲೆ ಪ್ರಯೋಗಿಸಿದರು.

ತಾಮಾಪತಂತೀಂ ಚಿಚ್ಛೇದ ಶಿಖಂಡೀ ಬಹುಭಿಃ ಶರೈಃ ।
ಸಾಪತನ್ಮೇದಿನೀಂ ದೀಪ್ತಾ ಭಾಸಯಂತೀ ಮಹಾಪ್ರಭಾ ॥ ೨೩ ॥

ತನ್ನ ಕಡೆಗೆ ಬರುತ್ತಿದ್ದ ಆ ಶಕ್ತಿಯನ್ನು ಶಿಖಂಡಿಯು ಅನೇಕ ಬಾಣಗಳಿಂದ ಕತ್ತರಿಸಿದನು. ಮಹಾಪ್ರಭೆಯುಳ್ಳ ಜ್ವಲಿಸುವ ಆ ಶಕ್ತಿಯು ಭೂಮಿಯನ್ನು ಪ್ರಕಾಶಿಸುತ್ತಾ ಕೆಳಗೆ ಬಿದ್ದಿತು.

ಅಥಾನ್ಯದ್ ಧನುರಾದಾಯ ಗೌತಮೋ ರಥಿನಾಂ ವರಃ ।
ಪ್ರಾಚ್ಛಾದಯಚ್ಛಿತೈರ್ಬಾಣೈರ್ಮಹಾರಾಜ ಶಿಖಂಡಿನಮ್ ॥ ೨೪ ॥

ಎಲೈ ಮಹಾರಾಜನೇ, ಆಗ ರಥಿಶ್ರೇಷ್ಠರಾದ ಕೃಪಾಚಾರ್ಯರು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಶಿಖಂಡಿಯ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಅವನನ್ನು ಆಚ್ಛಾದಿಸಿದರು.

ಸ ಛಾದ್ಯಮಾನಃ ಸಮರೇ ಗೌತಮೇನ ಯಶಸ್ವಿನಾ ।
ವ್ಯಷೀದತ ರಥೋಪಸ್ಥೇ ಶಿಖಂಡೀ ರಥಿನಾಂ ವರಃ ॥ ೨೫ ॥

ಕೀರ್ತಿಶಾಲಿಗಳಾದ ಗೌತಮರಿಂದ ರಣರಂಗದಲ್ಲಿ ಆಚ್ಛಾದಿಸಲ್ಪಟ್ಟ ರಥಿಶ್ರೇಷ್ಠನಾದ ಶಿಖಂಡಿಯು ರಥಪೀಠದಲ್ಲಿ ಕುಸಿದನು.

ಸೀದಂತಂ ಚೈನಮಾಲೋಕ್ಯ ಕೃಪಃ ಶಾರದ್ವತೋ ಯುಧಿ ।
ಆಜಘ್ನೇ ಬಹುಭಿರ್ಬಾಣೈರ್ಜಿಘಾಂಸನ್ನಿವ ಭಾರತ ॥ ೨೬ ॥

ಎಲೈ ಭಾರತನೇ, ಶಕ್ತಿಹೀನನಾಗುತ್ತಿರುವ ಶಿಖಂಡಿಯನ್ನು ನೋಡಿ ಶಾರದ್ವತರಾದ ಕೃಪರು ಅವನನ್ನು ಕೊಲ್ಲಲು ಬಯಸಿದವರಂತೆ ರಣರಂಗದಲ್ಲಿ ಅವನನ್ನು ಅನೇಕ ಬಾಣಗಳಿಂದ ಹೊಡೆದರು.

ವಿಮುಖಂ ತಂ ರಣೇ ದೃಷ್ಟ್ವಾ ಯಾಜ್ಞಸೇನಿಂ ಮಹಾರಥಮ್ ।
ಪಾಂಚಾಲಾಃ ಸೋಮಕಾಶ್ಚೈವ ಪರಿವವ್ರುಃ ಸಮಂತತಃ ॥ ೨೭ ॥

ಯಜ್ಞಸೇನನ ಪುತ್ರನಾದ ಮಹಾರಥನಾದ ಶಿಖಂಡಿಯು ರಣರಂಗದಲ್ಲಿ ಯುದ್ಧ ವಿಮುಖನಾಗಿರುವುದನ್ನು ನೋಡಿ ಪಾಂಚಾಲರು ಮತ್ತು ಸೋಮಕರು ಎಲ್ಲ ಕಡೆಗಳಿಂದಲೂ ಅವನನ್ನು ಸುತ್ತುವರಿದರು.

ತಥೈವ ತವ ಪುತ್ರಾಶ್ಚ ಪರಿವವ್ರುರ್ದ್ವಿಜೋತ್ತಮಮ್ ।
ಮಹತ್ಯಾ ಸೇನಯಾ ಸಾರ್ಧಂ ತತೋ ಯುದ್ಧಮಭೂತ್ ಪುನಃ ॥೨೮॥

ಹಾಗೆಯೇ ನಿನ್ನ ಪುತ್ರರೂ ಸಹ ದೊಡ್ಡ ಸೈನ್ಯದಿಂದ ಕೂಡಿದವರಾಗಿ ದ್ವಿಜಶ್ರೇಷ್ಠರಾದ ಕೃಪರನ್ನು ಸುತ್ತುವರಿದರು. ಅನಂತರ ಪುನಃ ಯುದ್ಧವು ನಡೆಯಿತು.

ರಥಾನಾಂ ಚ ರಣೇ ರಾಜನ್ನನ್ಯೋನ್ಯಮಭಿಧಾವತಾಮ್ ।
ಬಭೂವ ತುಮುಲಃ ಶಬ್ದೋ ಮೇಘಾನಾಂ ನದತಾಮಿವ ॥ ೨೯ ॥

ಎಲೈ ರಾಜನೇ, ಪರಸ್ಪರವಾಗಿ ಓಡುವ ರಥರಿಂದ ಉಂಟಾದ ಶಬ್ದವು ಗರ್ಜಿಸುವ ಮೇಘಗಳ ಶಬ್ದದಂತೆ ತೀವ್ರವಾಗಿದ್ದಿತು.

ದ್ರವತಾಂ ಸಾದಿನಾಂ ಚೈವ ಗಜಾನಾಂ ಚ ವಿಶಾಂಪತೇ ।
ಅನ್ಯೋನ್ಯಮಭಿತೋ ರಾಜನ್ ಕ್ರೂರಮಾಯೋಧನಂ ಬಭೌ ॥ ೩೦ ॥

ಎಲೈ ರಾಜನೇ, ಅಶ್ವಾರೋಹಿಗಳು ಮತ್ತು ಗಜಗಳು ಎಲ್ಲ ಕಡೆಯಲ್ಲಿಯೂ ತಿರುಗುತ್ತಿರಲು ಆ ರಣರಂಗವು ಕ್ರೂರವಾಗಿ ಶೋಭಿಸಿತು.

ಪತ್ತೀನಾಂ ದ್ರವತಾಂ ಚೈವ ಪದಶಬ್ದೇನ ಮೇದಿನೀ ।
ಅಕಂಪತ ಮಹಾರಾಜ ಭಯತ್ರಸ್ತೇವ ಚಾಂಗನಾ ॥ ೩೧ ॥

ಎಲೈ ಮಹಾರಾಜನೇ, ಓಡುವ ಪದಾತಿಗಳ ಪಾದಶಬ್ದದಿಂದ ಭೂಮಿಯು ಭಯಗೊಂಡ ವನಿತೆಯಂತೆ ನಡುಗಿತು.

ರಥಾ ರಥಾನ್ ಸಮಾಸಾದ್ಯ ಪ್ರದ್ರುತಾ ವೇಗವತ್ತರಮ್ ।
ನ್ಯಗೃಹ್ಣನ್ ಬಹವೋ ರಾಜನ್ ಶಲಭಾನ್ ವಾಯಸಾ ಇವ ॥ ೩೨ ॥

ಎಲೈ ರಾಜನೇ, ವೇಗವಾಗಿ ಸಾಗುವ ರಥಗಳನ್ನು ಅವುಗಳಿಗಿಂತ ವೇಗವಾಗಿ ಸಾಗುವ ರಥಗಳು ಹಿಂಬಾಲಿಸಿ ಕಾಗೆಗಳು ಪತಂಗಗಳನ್ನು ಹಿಡಿಯುವಂತೆ ಹಿಡಿದವು.

ತಥಾ ಗಜಾನ್ ಪ್ರಭಿನ್ನಾಂಶ್ಚ ಸುಪ್ರಭಿನ್ನಾ ಮಹಾಗಜಾಃ ।
ತಸ್ಮಿನ್ನೇವ ಪದೇ ಯತ್ತಾ ನಿಗೃಹ್ಣಂತಿ ಸ್ಮ ಭಾರತ ॥ ೩೩ ॥

ಎಲೈ ಭಾರತನೇ, ಹಾಗೆಯೇ ಮದೋದಕವನ್ನು ಸುರಿಸುವ ಗಜಗಳನ್ನು ಅವುಗಳಿಂದ ಹೆಚ್ಚು ಮದೋದಕವನ್ನು ಸುರಿಸುವ ಗಜಗಳು ಒಂದೇ ಹೆಜ್ಜೆಯಲ್ಲಿ ನಿಗ್ರಹಿಸುತ್ತಿದ್ದವು.

ಸಾದೀ ಸಾದಿನಮಾಸಾದ್ಯ ಪದಾತೀ ಚ ಪದಾತಿನಮ್ ।
ಸಮಾಸಾದ್ಯ ರಣೇऽನ್ಯೋನ್ಯಂ ಸಂರಬ್ಧಾ ನಾತಿಚಕ್ರಮುಃ ॥ ೩೪ ॥

ಕೋಪಗೊಂಡ ಅಶ್ವಾರೋಹಿಗಳು ಅಶ್ವಾರೋಹಿಗಳನ್ನೂ, ಪದಾತಿಗಳು ಪದಾತಿಗಳನ್ನೂ ರಣರಂಗದಲ್ಲಿ ಸಮೀಪಿಸಿ ಕೋಪಗೊಂಡವರಾಗಿ ಪರಸ್ಪರವಾಗಿ ದಾಟಲಿಲ್ಲ.

ಧಾವತಾಂ ದ್ರವತಾಂ ಚೈವ ಪುನರಾವರ್ತತಾಮಪಿ ।
ಬಭೂವ ತತ್ರ ಸೈನ್ಯಾನಾಂ ಶಬ್ದಃ ಸುತುಮುಲೋ ನಿಶಿ ॥ ೩೫ ॥

ಓಡಿಹೋಗುವ ಮತ್ತು ಪುನಃ ಹಿಂದಿರುಗಿ ಬರುವ ನಿನ್ನ ಸೈನ್ಯಗಳಿಂದ ಉಂಟಾದ ಶಬ್ದವು ಆ ರಾತ್ರಿಯಲ್ಲಿ ತೀವ್ರವಾಗಿದ್ದಿತು.

ದೀಪ್ಯಮಾನಾಃ ಪ್ರದೀಪಾಶ್ಚ ರಥವಾರಣವಾಜಿಷು ।
ಅದೃಶ್ಯಂತ ಮಹಾರಾಜ ಮಹೋಲ್ಕಾ ಇವ ಖಾಚ್ಚ್ಯುತಾಃ ॥ ೩೬ ॥

ಎಲೈ ಮಹಾರಾಜನೇ, ರಥ-ಗಜ-ಅಶ್ವಗಳಲ್ಲಿ ಬೆಳಗುವ ದೀಪಗಳು ಆಕಾಶದಿಂದ ಬಿದ್ದ ದೊಡ್ಡ ಉಲ್ಕೆಗಳಂತೆ ಕಂಡುಬಂದವು.

ಸಾ ನಿಶಾ ಭರತಶ್ರೇಷ್ಠ ಪ್ರದೀಪೈರವಭಾಸಿತಾ ।
ದಿವಸಪ್ರತಿಮಾ ರಾಜನ್ ಬಭೂವ ರಣಮೂರ್ಧನಿ ॥ ೩೭ ॥

ಎಲೈ ರಾಜನೇ, ಭರತಶ್ರೇಷ್ಠನೇ, ಪ್ರದೀಪಗಳಿಂದ ಪ್ರಕಾಶಿಸಲ್ಪಟ್ಟ ರಣಭೂಮಿಯ, ಆ ರಾತ್ರಿಯಲ್ಲಿ ದಿವಸದಂತೆಯೇ ಆಯಿತು.

ಆದಿತ್ಯೇನ ಯಥಾ ವ್ಯಾಪ್ತಂ ತಮೋ ಲೋಕೇ ಪ್ರಣಶ್ಯತಿ ।
ತಥಾ ನಷ್ಟಂ ತಮೋ ಘೋರಂ ದೀಪೈರ್ದೀಪ್ತೈರಲಂಕೃತೈಃ ॥ ೩೮ ॥

ಲೋಕದಲ್ಲಿ ವ್ಯಾಪ್ತವಾದ ಕತ್ತಲು ಹೇಗೆ ಸೂರ್ಯನಿಂದ ನಾಶವನ್ನು ಹೊಂದುವುದೋ ಹಾಗೆ ಉರಿಯುವ ಅಲಂಕೃತ ದೀಪಗಳಿಂದ ಘೋರವಾದ ಆ ಕತ್ತಲೆಯು ನಾಶವನ್ನು ಹೊಂದಿತು.

ಶಸ್ತ್ರಾಣಾಂ ಕವಚಾನಾಂ ಚ ಮಣೀನಾಂ ಚ ಮಹಾತ್ಮನಾಮ್ ।
ಅಂತರ್ದಧುಃ ಪ್ರಭಾಃ ಸರ್ವಾ ದೀಪೈಸ್ತೈರವಭಾಸಿತಾಃ ॥ ೩೯ ॥

ಅವರು ಹಚ್ಚಿದ ಎಲ್ಲಾ ದೀಪಗಳಿಂದ ಉಂಟಾದ ಪ್ರಭೆಯು ಶಸ್ತ್ರಗಳ, ಕವಚಗಳ ಮತ್ತು ಮಹಾತ್ಮರು ಧರಿಸಿದ ಮಣಿಗಳ ಕಾಂತಿಯನ್ನು ಕುಂದಿಸಿತು.

ತಸ್ಮಿನ್ ಕೋಲಾಹಲೇ ಯುದ್ಧೇ ವರ್ತಮಾನೇ ನಿಶಾಮುಖೇ ।
ಅವಧೀತ್ ಸಮರೇ ಪುತ್ರಂ ಪಿತಾ ಭರತಸತ್ತಮ ॥ ೪೦ ॥

ಪುತ್ರಶ್ಚ ಪಿತರಂ ಮೋಹಾತ್ ಸಖಾಯಂ ಚ ಸಖಾ ತಥಾ ।
ಸಂಬಂಧಿನಂ ಚ ಸಂಬಂಧೀ ಸ್ವಸ್ರೀಯಂ ಚಾಪಿ ಮಾತುಲಃ ॥ ೪೧॥

ಸ್ವೇ ಸ್ವಾನ್ ಪರೇ ಪರಾಂಶ್ಚಾಪಿ ನಿಜಘ್ನುರಿತರೇತರಮ್ ।
ನಿರ್ಮರ್ಯಾದಮಭೂದ್ಯುದ್ಧಂ ರಾತ್ರೌ ಘೋರಂ ಭಯಾವಹಮ್ ॥

ಎಲೈ ಭರತಶ್ರೇಷ್ಠನೇ, ಆ ರಾತ್ರಿಯ ಕಾಲದಲ್ಲಿ ಕೋಲಾಹಲ ಸಹಿತವಾದ ಯುದ್ಧವು ನಡೆಯುತ್ತಿರಲು ಯುದ್ಧದಲ್ಲಿ ತಂದೆಯು ಮಗನನ್ನು ಕೊಂದನು. ಅಜ್ಞಾನದಿಂದ ಮಗನೂ ತಂದೆಯನ್ನೂ, ಸ್ನೇಹಿತನು ಸ್ನೇಹಿತನನ್ನೂ, ಸಂಬಂಧಿಯು ಸಂಬಂಧಿಯನ್ನೂ ಮತ್ತು ಸೋದರಳಿಯನನ್ನು ಸೋದರಮಾವನನ್ನು ಕೊಂದರು. ತಮ್ಮವರು ತಮ್ಮವರನ್ನೂ, ಶತ್ರುಗಳೂ ಸಹ ತಮ್ಮವರನ್ನು ಪರಸ್ಪರವಾಗಿ ಕೊಂದರು. ರಾತ್ರಿಯಲ್ಲಿ ನಡೆದ ಘೋರವಾದ ಮತ್ತು ಭಯಂಕರವಾದ ಆ ಯುದ್ಧವು ಎಲ್ಲ ಎಲ್ಲೆಗಳನ್ನೂ ಮೀರಿದ್ದಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಃಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತಾರನೆಯ ಅಧ್ಯಾಯ

ದ್ರೋಣ-ಧೃಷ್ಟದ್ಯುಮ್ನರ ಯುದ್ಧ. ಮಧ್ಯೆ ಸಾತ್ಯಕಿಯ ಪ್ರವೇಶ.
ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಲು ಶಕುನಿಯ ಪ್ರಯಾಣ.

ಸಂಜಯಃ

ತಸ್ಮಿನ್ ಸುತುಮುಲೇ ಯುದ್ಧೇ ವರ್ತಮಾನೇ ಭಯಾವಹೇ ।
ಧೃಷ್ಟದ್ಯುಮ್ನೋ ಮಹಾರಾಜ ದ್ರೋಣಮೇವಾಭ್ಯವರ್ತತ ॥ ೧ ॥

ಸಂಜಯ– ಎಲೈ ಮಹಾರಾಜನೇ, ತೀವ್ರವಾದ ಆ ಭಯಂಕರ ಯುದ್ಧವು ನಡೆಯುತ್ತಿರಲು ಧೃಷ್ಟದ್ಯುಮ್ನನು ದ್ರೋಣರ ಮೇಲೆ ಎರಗಿದನು.

ಸಂಮೃಜಾನೋ ಧನುಃಶ್ರೇಷ್ಠಂ ಜ್ಯಾಂ ವಿಕರ್ಷನ್ ಪುನಃ ಪುನಃ ।
ಅಭ್ಯವರ್ತತ ದ್ರೋಣಸ್ಯ ರಥಂ ರುಗ್ಮವಿಭೂಷಿತಮ್ ॥ ೨ ॥

ಅವನು ತನ್ನ ಶ್ರೇಷ್ಠವಾದ ಧನುಸ್ಸನ್ನು ನೇವರಿಸುತ್ತಾ, ಹೆದೆಯನ್ನು ಪುನಃ ಪುನಃ ಎಳೆಯುತ್ತಾ ಸುವರ್ಣಭೂಷಿತವಾದ ದ್ರೋಣರ ರಥದ ಕಡೆಗೆ ಬಂದನು.

ಧೃಷ್ಟದ್ಯುಮ್ನಂ ತದಾಯಾಂತಂ ದ್ರೋಣಸ್ಯಾಂತಚಿಕೀರ್ಷಯಾ ।
ಪರಿವವ್ರುರ್ಮಹಾರಾಜ ಪಾಂಚಾಲಾಃ ಪಾಂಡವೈಃ ಸಹ ॥ ೩ ॥

ಎಲೈ ಮಹಾರಾಜನೇ, ದ್ರೋಣರನ್ನು ಕೊಲ್ಲುವ ಉದ್ದೇಶದಿಂದ ಬರುತ್ತಿದ್ದ ಧೃಷ್ಟದ್ಯುಮ್ನನನ್ನು ಪಾಂಡವರು ಮತ್ತು ಪಾಂಚಾಲರು ಸುತ್ತುವರಿದರು.

ತಥಾ ಪರಿವೃತಂ ದೃಷ್ಟ್ವಾ ದ್ರೋಣಮಾಚಾರ್ಯಸತ್ತಮಮ್ ।
ಪುತ್ರಾಸ್ತೇ ಸರ್ವತೋ ಯತ್ತಾ ರರಕ್ಷುರ್ದ್ರೋಣಮಾಹವೇ ॥ ೪ ॥

ಆಚಾರ್ಯಶ್ರೇಷ್ಠರಾದ ದ್ರೋಣರು ಹಾಗೆ ಸುತ್ತುವರಿಯಲ್ಪಡುತ್ತಿರಲು ನಿನ್ನ ಪುತ್ರರು ಬಹಳ ಎಚ್ಚರಿಕೆಯಿಂದ ರಣರಂಗದಲ್ಲಿ ದ್ರೋಣರನ್ನು ಎಲ್ಲ ಕಡೆಯಿಂದಲೂ ರಕ್ಷಿಸಿದರು.

ಬಲಾರ್ಣವೌ ತತಸ್ತೌ ತು ಸಮೇಯಾತಾಂ ನಿಶಾಮುಖೇ ।
ವಾತೋದ್ಧೂತೌ ಕ್ಷುಬ್ಧಸತ್ತ್ವೌ ಭೈರವೌ ಸಾಗರಾವಿವ ॥ ೫ ॥

ಧೃಷ್ಟದ್ಯುಮ್ನ ಮತ್ತು ದ್ರೋಣರು ಆ ರಾತ್ರಿಯ ಕಾಲದಲ್ಲಿ ಬಿರುಗಾಳಿಗೆ ಎದ್ದ ಭೀಕರವಾದ ಜಲಚರ ಪ್ರಾಣಿಗಳು ಕ್ಷೋಭೆಗೊಂಡ ಎರಡು ಬಲಸಾಗರಗಳಂತೆ ಅವರು ಪರಸ್ಪರವಾಗಿ ಎದುರಿಸಿದರು.

ತತೋ ದ್ರೋಣಂ ಮಹಾರಾಜ ಪಾಂಚಾಲ್ಯಃ ಪಂಚಭಿಃ ಶರೈಃ ।
ವಿವ್ಯಾಧ ಹೃದಯೇ ತೂರ್ಣಂ ಸಿಂಹನಾದಂ ನನಾದ ಚ ॥ ೬ ॥

ಎಲೈ ಮಹಾರಾಜನೇ, ಆಗ ಪಾಂಚಾಲ್ಯನಾದ ಧೃಷ್ಟದ್ಯುಮ್ನನು ದ್ರೋಣರನ್ನು ಅವರ ಹೃದಯದಲ್ಲಿ ಐದು ಬಾಣಗಳಿಂದ ಹೊಡೆದು ಸಿಂಹನಾದವನ್ನು ಮಾಡಿದನು.

ತಂ ದ್ರೋಣಃ ಪಂಚವಿಂಶತ್ಯಾ ವಿದ್ಧ್ವಾ ಭಾರತ ಸಂಯುಗೇ ।
ಚಿಚ್ಛೇದಾನ್ಯೇನ ಭಲ್ಲೇನ ಧನುರಸ್ಯ ಮಹಾಪ್ರಭಮ್ ॥ ೭ ॥

ಎಲೈ ಭಾರತನೇ, ದ್ರೋಣರು ರಣರಂಗದಲ್ಲಿ ಅವನನ್ನು ಇಪ್ಪತ್ತೈದು ಬಾಣಗಳಿಂದ ಹೊಡೆದು ಇನ್ನೊಂದು ಭಲ್ಲದಿಂದ ಮಹಾಕಾಂತಿಯುಕ್ತವಾದ ಅವನ ಧನುಸ್ಸನ್ನು ಕತ್ತರಿಸಿದರು.

ಧೃಷ್ಟದ್ಯುಮ್ನಸ್ತು ನಿರ್ವಿದ್ಧೋ ದ್ರೋಣೇನ ಭರತರ್ಷಭ ।
ಉತ್ಸಸರ್ಜ ಧನುಸ್ತೂರ್ಣಂ ಸಂದಶ್ಯ ದಶನಚ್ಛದಮ್ ॥ ೮ ॥

ಎಲೈ ಭರತರ್ಷಭನೇ, ದ್ರೋಣರಿಂದ ಗಾಢವಾಗಿ ಹೊಡೆಯಲ್ಪಟ್ಟ ಧೃಷ್ಟದ್ಯುಮ್ನನಾದರೋ ಹಲ್ಲುಮುಡಿಯನ್ನು ಕಚ್ಚಿ ಶೀಘ್ರವಾಗಿ ತನ್ನ ಧನುಸ್ಸನ್ನು ಪರಿತ್ಯಜಿಸಿದನು.

ತತಃ ಕ್ರುದ್ಧೋ ಮಹಾರಾಜ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ಆದದೇಽನ್ಯದ್ ಧನುಃಶ್ರೇಷ್ಠಂ ದ್ರೋಣಸ್ಯಾಂತಚಿಕೀರ್ಷಯಾ ॥ ೯ ॥

ಎಲೈ ಮಹಾರಾಜನೇ, ಆಗ ಕ್ರುದ್ಧನೂ, ಪ್ರತಾಪಶಾಲಿಯೂ ಆದ ಧೃಷ್ಟದ್ಯುಮ್ನನು ದ್ರೋಣರ ಅಂತವನ್ನು ಮಾಡಲು ಬಯಸಿ ಇನ್ನೊಂದು ಶ್ರೇಷ್ಠವಾದ ಧನುಸ್ಸನ್ನು ತೆಗೆದುಕೊಂಡನು.

ವಿಕೃಷ್ಯ ಚ ಧನುಶ್ಚಿತ್ರಮಾಕರ್ಣಾತ್ ಪರವೀರಹಾ ।
ದ್ರೋಣಸ್ಯಾಂತಕರಂ ಘೋರಂ ವ್ಯಸೃಜತ್ ಸಾಯಕಂ ತತಃ ॥ ೧೦ ॥

ಶತ್ರುವೀರಘಾತಕನಾದ ಧೃಷ್ಟದ್ಯುಮ್ನನು ಸುಂದರವಾದ ಆ ಧನುಸ್ಸಿನ ಹೆದೆಯನ್ನು ಕಿವಿಯವರೆಗೂ ಎಳೆದು ದ್ರೋಣರ ವಿನಾಶವನ್ನುಂಟು ಮಾಡುವಂತಹ ಒಂದು ಘೋರವಾದ ಬಾಣವನ್ನು ಅದರಿಂದ ಪ್ರಯೋಗಿಸಿದನು.

ಸ ವಿಸೃಷ್ಟೋ ಬಲವತಾ ಶರೋ ಘೋರೋ ಮಹಾಮೃಧೇ ।
ಭಾಸಯಾಮಾಸ ತತ್ ಸೈನ್ಯಂ ದಿವಾಕರ ಇವೋದಿತಃ ॥ ೧೧ ॥

ಬಲಿಷ್ಠನಾದ ಧೃಷ್ಟದ್ಯುಮ್ನನಿಂದ ಪ್ರಯೋಗಿಸಲ್ಪಟ್ಟ ಆ ಘೋರವಾದ ಬಾಣವು ಮಹಾರಣರಂಗದಲ್ಲಿ ಉದಯಿಸಿದ ಸೂರ್ಯನಂತೆ ಆ ಸೈನ್ಯವನ್ನು ಪ್ರಕಾಶಗೊಳಿಸಿತು.

ತಂ ದೃಷ್ಟ್ವಾ ತು ಶರಂ ಘೋರಂ ದೇವಗಂಧರ್ವಮಾನವಾಃ ।
ಸ್ವಸ್ತ್ಯಸ್ತು ಸಮರೇ ರಾಜನ್ ದ್ರೋಣಾಯೇತ್ಯಬ್ರುವನ್ ವಚಃ ॥ ೧೨ ॥

ಎಲೈ ರಾಜನೇ, ಘೋರವಾದ ಆ ಬಾಣವನ್ನು ನೋಡಿ ದೇವ-ಮಾನವ-ಗಂಧರ್ವರು ದ್ರೋಣರಿಗೆ ಕ್ಷೇಮವಾಗಲಿ ಎಂಬ ಮಾತನ್ನು ಆಡಿದರು.

ತಂ ತು ಸಾಯಕಮಪ್ರಾಪ್ತಮಾಚಾರ್ಯಸ್ಯ ರಥಂ ಪ್ರತಿ ।
ಕರ್ಣೋ ದ್ವಾದಶಧಾ ರಾಜಂಶ್ಚಿಚ್ಛೇದ ಕೃತಹಸ್ತವತ್ ॥ ೧೩ ॥

ಎಲೈ ರಾಜನೇ, ಆ ಬಾಣವು ದ್ರೋಣರ ರಥದ ಸಮೀಪಕ್ಕೆ ಬರುವುದಕ್ಕಿಂತ ಮೊದಲೇ ಶೀಘ್ರಹಸ್ತವುಳ್ಳ ಕರ್ಣನು ಅದನ್ನು ಹನ್ನೆರಡು ಭಾಗವಾಗಿ ಕತ್ತರಿಸಿದನು.

ಸ ಛಿನ್ನೋ ಬಹುಧಾ ರಾಜನ್ ಸೂತಪುತ್ರೇಣ ಮಾರಿಷ ।
ನಿಪಪಾತ ಶರಸ್ತೂರ್ಣಂ ನಿಕೃತ್ತಃ ಕರ್ಣಸಾಯಕೈಃ ॥ ೧೪ ॥

ಎಲೈ ರಾಜನೇ, ಸೂತಪುತ್ರನಾದ ಕರ್ಣನ ಬಾಣಗಳಿಂದ ಕತ್ತರಿಸಲ್ಪಟ್ಟ ಆ ಬಾಣವು ಶೀಘ್ರವಾಗಿ ಭೂಮಿಯ ಮೇಲೆ ಬಿದ್ದಿತು.

ಛಿತ್ತ್ವಾ ತು ಸಮರೇ ಬಾಣಂ ಶರೈಃ ಸನ್ನತಪರ್ವಭಿಃ ।
ಧೃಷ್ಟದ್ಯುಮ್ನಂ ರಣೇ ಕರ್ಣೋ ವಿವ್ಯಾಧ ದಶಭಿಃ ಶರೈಃ ॥ ೧೫ ॥

ಕರ್ಣನು ಬಾಗಿದ ತುದಿಯುಳ್ಳ ಬಾಣಗಳಿಂದ ಧೃಷ್ಟದ್ಯುಮ್ನನ ಆ ಬಾಣವನ್ನು ರಣರಂಗದಲ್ಲಿ ಕತ್ತರಿಸಿ ಅವನನ್ನು ಹತ್ತು ಬಾಣಗಳಿಂದ ಹೊಡೆದನು.

ಪಂಚಭಿರ್ದ್ರೋಣಪುತ್ರಸ್ತು ಸ್ವಯಂ ದ್ರೋಣಶ್ಚ ಸಪ್ತಭಿಃ ।
ಶಲ್ಯಶ್ಚ ನವಭಿರ್ಬಾಣೈಸ್ತ್ರಿಭಿರ್ದುಃಶಾಸನಸ್ತಥಾ ॥ ೧೬ ॥

ದುರ್ಯೋಧನಶ್ಚ ವಿಂಶತ್ಯಾ ಶಕುನಿಶ್ಚಾಪಿ ಪಂಚಭಿಃ ।
ಪಾಂಚಾಲ್ಯಂ ತ್ವರಿತಾऽವಿದ್ಧ್ಯನ್ ಸರ್ವ ಏವ ಮಹಾರಥಾಃ ॥ ೧೭ ॥

ದ್ರೋಣಪುತ್ರರಾದ ಅಶ್ವತ್ಥಾಮರು ಧೃಷ್ಟದ್ಯುಮ್ನನನ್ನು ಐದು ಬಾಣಗಳಿಂದಲೂ, ದ್ರೋಣರು ಏಳು ಬಾಣಗಳಿಂದಲೂ, ಶಲ್ಯನು ಒಂಬತ್ತು ಬಾಣಗಳಿಂದಲೂ, ದುಶ್ಶಾಸನನು ಮೂರು ಬಾಣಗಳಿಂದಲೂ, ದುರ್ಯೋಧನನು ಇಪ್ಪತ್ತು ಬಾಣಗಳಿಂದಲೂ, ಶಕುನಿಯು ಐದು ಬಾಣಗಳಿಂದಲೂ - ಹೀಗೆ ಶೀಘ್ರವಾಗಿ ಆ ಎಲ್ಲಮಹಾರಥರೂ ಪಾಂಚಾಲ್ಯನಾದ ಧೃಷ್ಟದ್ಯುಮ್ನನನ್ನು ಹೊಡೆದರು.

ಸ ವಿದ್ಧಃ ಸಪ್ತಭಿರ್ವೀರೈರ್ದ್ರೋಣತ್ರಾಣಾರ್ಥಮಾಹವೇ ।
ಸರ್ವಾನಸಂಭ್ರಮಾದ್ ರಾಜನ್ ಪ್ರತ್ಯವಿದ್ಧ್ಯತ್ ತ್ರಿಭಿಸ್ತ್ರಿಭಿಃ ।
ದ್ರೋಣಂ ದ್ರೌಣಿಂ ಚ ಕರ್ಣಂ ಚ ವಿವ್ಯಾಧ ತವ ಚಾತ್ಮಜಮ್ ॥ ೧೮॥

ಎಲೈ ರಾಜನೇ, ರಣರಂಗದಲ್ಲಿ ದ್ರೋಣರನ್ನು ರಕ್ಷಿಸುವ ಸಲುವಾಗಿ ಏಳು ವೀರರಿಂದ ಆ ರೀತಿಯಲ್ಲಿಹೊಡೆಯಲ್ಪಟ್ಟ ಧೃಷ್ಟದ್ಯುಮ್ನನು ದ್ರೋಣರು, ಅಶ್ವತ್ಥಾಮರು, ಕರ್ಣ, ನಿನ್ನ ಪುತ್ರ- ಎಲ್ಲರನ್ನೂ ಗಾಬರಿಗೊಳ್ಳದೆ ಮೂರು-ಮೂರು ಬಾಣಗಳಿಂದ ಹೊಡೆದನು.

ತೇ ವಿದ್ಧಾ ಧನ್ವಿನಾ ತೇನ ಧೃಷ್ಟದ್ಯುಮ್ನಂ ಪುನರ್ಮೃಧೇ ।
ವಿವ್ಯಧುಃ ಪಂಚಭಿಸ್ತೂರ್ಣಮೇಕೈಕೋ ರಥಿನಾಂ ವರಃ ॥ ೧೯ ॥

ಧನುರ್ಧಾರಿಯಾದ ಧೃಷ್ಟದ್ಯುಮ್ನನಿಂದ ಹೀಗೆ ಹೊಡೆಯಲ್ಪಟ್ಟ ಅವರಲ್ಲಿ ರಥಶ್ರೇಷ್ಠರಾದ ಪ್ರತಿಯೊಬ್ಬರೂ ಆ ಮಹಾಯುದ್ಧದಲ್ಲಿ ಧೃಷ್ಟದ್ಯುಮ್ನನನ್ನು ಐದೈದು ಬಾಣಗಳಿಂದ ಹೊಡೆದರು.

ದ್ರುಮಸೇನಸ್ತು ಸಂಕ್ರುದ್ಧೋ ರಾಜನ್ ವಿವ್ಯಾಧ ಪತ್ರಿಣಾ ।
ತ್ರಿಭಿಶ್ಚಾನ್ಯೈಃ ಶರೈಸ್ತೂರ್ಣಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೨೦ ॥

ಎಲೈ ರಾಜನೇ, ದ್ರುಮಸೇನನಾದರೋ ಕೋಪಗೊಂಡು ಬಾಣಗಳಿಂದ ಅವನನ್ನು ಹೊಡೆದನು. ಪುನಃ ಮೂರು ಬಾಣಗಳಿಂದ ಹೊಡೆದು ನಿಲ್ಲು, ನಿಲ್ಲು ಎಂದು ಹೇಳಿದನು.

ಸ ತು ತಂ ಪ್ರತಿವಿವ್ಯಾಧ ತ್ರಿಭಿಸ್ತೀಕ್ಷ್ಣೈರಜಿಹ್ಮಗೈಃ ।
ಸ್ವರ್ಣಪುಂಖೈಃ ಶಿಲಾಧೌತೈಃ ಪ್ರಾಣಾಂತಕರಣೈರ್ಯುಧಿ ॥ ೨೧ ॥

ಧೃಷ್ಟದ್ಯುಮ್ನನಾದರೋ ನೇರವಾಗಿ ಸಾಗುವ, ಸ್ವರ್ಣಪುಂಖಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ, ಪ್ರಾಣಾಂತಕವಾದ ಮೂರು ಬಾಣಗಳಿಂದ ದ್ರುಮಸೇನನಿಗೆ ರಣರಂಗದಲ್ಲಿ ಪ್ರತಿಯಾಗಿ ಹೊಡೆದನು.

ಭಲ್ಲೇನಾನ್ಯೇನ ತು ಪುನಃ ಸುವರ್ಣೋಜ್ಜ್ವಲಕುಂಡಲಮ್ ।
ಉನ್ಮಮಾಥ ಶಿರಃ ಕಾಯಾದ್ ದ್ರುಮಸೇನಸ್ಯ ವೀರ್ಯವಾನ್ ॥ ೨೨ ॥

ಪರಾಕ್ರಮಶಾಲಿಯಾದ ಧೃಷ್ಟದ್ಯುಮ್ನನು ಪುನಃ ಒಂದು ಭಲ್ಲದಿಂದ ಉಜ್ವಲವಾದ ಸುವರ್ಣಕುಂಡಲವನ್ನು ಧರಿಸಿದ ಅವನ ಶಿರಸ್ಸನ್ನು ಅವನ ದೇಹದಿಂದ ಕತ್ತರಿಸಿದನು.

ತಚ್ಛಿರೋ ನ್ಯಪತದ್ ಭೂಮೌ ಸಂದಷ್ಟೌಷ್ಠಪುಟಂ ರಣೇ ।
ಮಹಾವಾತಸಮುದ್ಧೂತಂ ಪಕ್ವಂ ತಾಳಫಲಂ ಯಥಾ ॥ ೨೩ ॥

ಹಲ್ಲುಮುಡಿಯನ್ನು ಕಚ್ಚಿದ ಆ ಶಿರಸ್ಸು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ಮಾಗಿದ ತಾಳಫಲದಂತೆ ಭೂಮಿಯ ಮೇಲೆ ಬಿದ್ದಿತು.

ತಾಂಶ್ಚ ವಿದ್ಧ್ವಾ ಪುನರ್ವೀರಾನ್ ವೀರಃ ಸುನಿಶಿತೈಃ ಶರೈಃ ।
ರಾಧೇಯಸ್ಯಾಚ್ಛಿನದ್ ಭಲ್ಲೈಃ ಕಾರ್ಮುಕಂ ಚಿತ್ರಯೋಧಿನಃ ॥ ೨೪ ॥

ವೀರನಾದ ಧೃಷ್ಟದ್ಯುಮ್ನನು ಆ ಎಲ್ಲ ವೀರರನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದು ಆಶ್ಚರ್ಯಕರವಾಗಿ ಯುದ್ಧವನ್ನು ಮಾಡುವ ಕರ್ಣನ ಧನುಸ್ಸನ್ನು ಭಲ್ಲದಿಂದ ಕತ್ತರಿಸಿದನು.

ನ ತು ತನ್ಮಮೃಷೇ ಕರ್ಣೋ ಧನುಷಶ್ಛೇದನಂ ತಥಾ ।
ನಿಕರ್ತನಮಿವಾತ್ಯುಗ್ರೋ ಲಾಂಗೂಲಸ್ಯ ಯಥಾ ಹರಿಃ ॥ ೨೫ ॥

ತನ್ನ ಧನುಸ್ಸು ಕತ್ತರಿಸಲ್ಪಡುತ್ತಿರಲು ಉಗ್ರವಾದ ಕಪಿಯು ತನ್ನ ಬಾಲದ ಛೇದವನ್ನು ಸಹಿಸದಂತೆ ಕರ್ಣನು ಅದನ್ನು ಸಹಿಸಲಿಲ್ಲ.

ಸೋಽನ್ಯದ್ಧನುಃ ಸಮಾದಾಯ ಕ್ರೋಧರಕ್ತೇಕ್ಷಣಃ ಶ್ವಸನ್ ।
ಅಭ್ಯವರ್ಷಚ್ಛರೌಘೈಸ್ತಂ ಧೃಷ್ಟದ್ಯುಮ್ನಂ ಮಹಾಬಲಮ್ ॥ ೨೬ ॥

ಅವನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಗಟ್ಟಿಯಾಗಿ ಉಸಿರಾಡುತ್ತಾ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಮಹಾಬಲನಾದ ಧೃಷ್ಟದ್ಯುಮ್ನನನ್ನು ಬಾಣಗಳ ಸಮೂಹದಿಂದ ಹೊಡೆದನು.

ದೃಷ್ಟ್ವಾ ತು ಕರ್ಣಂ ಸಂರಬ್ಧಂ ತೇ ವೀರಾಃ ಷಡ್ರಥರ್ಷಭಾಃ ।
ಪಾಂಚಾಲ್ಯಪುತ್ರಂ ತ್ವರಿತಾಃ ಪರಿವವ್ರುರ್ಜಿಘಾಂಸಯಾ ॥ ೨೭ ॥

ಕರ್ಣನು ಕೋಪಗೊಂಡಿರುವುದನ್ನು ನೋಡಿ ವೀರರಾದ ಆ ಆರುರಥಶ್ರೇಷ್ಠರು ಪಾಂಚಾಲ್ಯಪುತ್ರನಾದ ಧೃಷ್ಟದ್ಯುಮ್ನನನ್ನು ಕೊಲ್ಲಲು ಬಯಸಿ ಶೀಘ್ರವಾಗಿ ಅವನನ್ನು ಸುತ್ತುವರಿದರು.

ಷಣ್ಣಾಂ ಯೋಧಪ್ರವೀರಾನಾಂ ತಾವಕಾನಾಂ ಪುರಸ್ಕೃತಮ್ ।
ಮೃತ್ಯೋರಾಸ್ಯಮನುಪ್ರಾಪ್ತಂ ಧೃಷ್ಟದ್ಯುಮ್ನಮಮಂಸ್ಮಹಿ ॥ ೨೮ ॥

ನಿನ್ನ ಆರು ಯೋಧಶ್ರೇಷ್ಠರ ಮುಂದೆ ನಿಂತ ಧೃಷ್ಟದ್ಯುಮ್ನನನ್ನು ಅವರು ಮೃತ್ಯುವಿನ ಬಾಯಿಗೆ ಸಿಲುಕಿದ್ದಾನೆ ಎಂದು ತಿಳಿದರು.

ಏತಸ್ಮಿನ್ನೇವ ಕಾಲೇ ತು ದಾಶಾರ್ಹೋ ವಿಕಿರನ್ ಶರಾನ್ ।
ಧೃಷ್ಟದ್ಯುಮ್ನಂ ಪರಾಕ್ರಾಂತಂ ಸಾತ್ಯಕಿಃ ಪ್ರತ್ಯಪದ್ಯತ ॥ ೨೯ ॥

ಆ ಸಮಯಕ್ಕೆ ಸರಿಯಾಗಿ ದಾಶಾರ್ಹನಾದ ಸಾತ್ಯಕಿಯು ಬಾಣಗಳನ್ನು ಚೆಲ್ಲಿದಂತೆ ಪ್ರಯೋಗ ಮಾಡುತ್ತಾ ಪರಾಕ್ರಮಶಾಲಿಯಾದ ಧೃಷ್ಟದ್ಯುಮ್ನನ ಸಮೀಪಕ್ಕೆ ಬಂದನು.

ತಮಾಯಾಂತಂ ಮಹೇಷ್ವಾಸಂ ಸಾತ್ಯಕಿಂ ಯುದ್ಧದುರ್ಮದಮ್ ।
ರಾಧೇಯೋ ದಶಭಿರ್ಬಾಣೈಃ ಪ್ರತ್ಯವಿಧ್ಯದಜಿಹ್ಮಗೈಃ ॥ ೩೦ ॥

ಸಮೀಪಕ್ಕೆ ಬಂದ ಯುದ್ಧದುರ್ಮದನಾದ, ಮಹಾಧನುರ್ಧಾರಿಯಾದ ಸಾತ್ಯಕಿಯನ್ನು ಕರ್ಣನು ನೇರವಾಗಿ ಸಾಗುವ ಹತ್ತು ಬಾಣಗಳಿಂದ ಹೊಡೆದನು.

ತಂ ಸಾತ್ಯಕಿರ್ಮಹಾರಾಜ ವಿವ್ಯಾಧ ದಶಭಿಃ ಶರೈಃ ।
ಪಶ್ಯತಾಂ ಸರ್ವವೀರಾಣಾಂ ಮಾ ಗಾಸ್ತಿಷ್ಠೇತಿ ಚಾಬ್ರವೀತ್ ॥ ೩೧ ॥

ಎಲೈ ಮಹಾರಾಜನೇ, ಅವನು ಎಲ್ಲ ವೀರರು ನೋಡುತ್ತಿರುವಂತೆಯೇ ಕರ್ಣನನ್ನು ಹತ್ತು ಬಾಣಗಳಿಂದ ಹೊಡೆದು ಹೋಗಬೇಡ ನಿಲ್ಲು ಎಂದು ಹೇಳಿದನು.

ಸ ಸಾತ್ಯಕೇಸ್ತು ಬಲಿನಃ ಕರ್ಣಸ್ಯ ಚ ಮಹಾತ್ಮನಃ ।
ಆಸೀತ್ ಸಮಾಗಮೋ ಘೋರೋ ಬಲಿವಾಸವಯೋರಿವ ॥ ೩೨ ॥

ಆಗ ಬಲಿಷ್ಠನಾದ ಸಾತ್ಯಕಿಗೂ ಮತ್ತು ಮಹಾತ್ಮನಾದ ಕರ್ಣನಿಗೂ ಬಲಿ ಮತ್ತು ಇಂದ್ರರಿಗೆ ನಡೆದಂತೆ ಘೋರವಾದ ಸಂಘರ್ಷವು ನಡೆಯಿತು.

ತ್ರಾಸಯಂಸ್ತಳಘೋಷೇಣ ಕ್ಷತ್ರಿಯಾನ್ ಕ್ಷತ್ರಿಯರ್ಷಭಃ ।
ರಾಜೀವಲೋಚನಂ ಕರ್ಣಂ ಸಾತ್ಯಕಿಃ ಪ್ರತ್ಯವಿದ್ಧ್ಯತ ॥ ೩೩ ॥

ಕ್ಷತ್ರಿಯ ಶ್ರೇಷ್ಠನಾದ, ಸಾತ್ಯಕಿಯು ತನ್ನ ಜ್ಯಾತಳ ಘೋಷದಿಂದ ಎಲ್ಲ ಕ್ಷತ್ರಿಯರನ್ನು ಭಯಗೊಳಿಸುತ್ತಾ ರಾಜೀವನೇತ್ರನಾದ ಕರ್ಣನನ್ನು ಬಾಣಗಳಿಂದ ಹೊಡೆದನು.

ಕಂಪಯನ್ನಿವ ಘೋಷೇಣ ಧನುಷೋ ವಸುಧಾಂ ಬಲೀ ।
ಸೂತಪುತ್ರೋ ಮಹಾರಾಜ ಸಾತ್ಯಕಿಂ ಪ್ರತ್ಯಯೋಧಯತ್ ॥ ೩೪ ॥

ಎಲೈ ಮಹಾರಾಜನೇ, ಬಲಿಷ್ಠನಾದ ಸೂತಪುತ್ರನಾದ ಕರ್ಣನು ತನ್ನ ಧನುಸ್ಸಿನ ಘೋಷದಿಂದ ಭೂಮಿಯನ್ನು ನಡುಗಿಸುವವನಂತೆ ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ವಿಪಾಠಕರ್ಣನಾರಾಚೈರ್ವತ್ಸದಂತೈಃ ಕ್ಷುರೈರಪಿ ।
ಕರ್ಣಃ ಶರಶತೈಶ್ಚಾಪಿ ಶೈನೇಯಂ ಪ್ರತ್ಯವಿದ್ಧ್ಯತ ॥ ೩೫ ॥

ವಿಪಾಠಗಳಿಂದಲೂ, ಕರ್ಣಿಗಳಿಂದಲೂ, ನಾರಾಚಗಳಿಂದಲೂ, ವತ್ಸದಂತ-ಗಳಿಂದಲೂ, ಕ್ಷುರಗಳಿಂದಲೂ, ನೂರಾರು ಬಾಣಗಳಿಂದಲೂ ಕರ್ಣನು ಸಾತ್ಯಕಿಯ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತಥೈವ ಯುಯುಧಾನೋಽಪಿ ವೃಷ್ಣೀನಾಂ ಪ್ರವರೋ ರಥಃ ।
ಅಭ್ಯವರ್ಷಚ್ಛರೈಃ ಕರ್ಣಂ ತದ್ಯುದ್ಧಮಭವತ್ ಸಮಮ್ ॥ ೩೬ ॥

ಹಾಗೆಯೇ ವೃಷ್ಣಿಗಳಲ್ಲಿ ಶ್ರೇಷ್ಠ ಮಹಾರಥನಾದ ಯುಯುಧಾನನೂ ಸಹ ಕರ್ಣನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು. ಆ ಯುದ್ಧವು ಸಮವಾಗಿದ್ದಿತು.

ತಾವಕಾಶ್ಚ ಮಹಾರಾಜ ಕರ್ಣಪುತ್ರಶ್ಚ ದಂಸಿತಃ ।
ಸಾತ್ಯಕಿಂ ವಿವ್ಯಧುಸ್ತೂರ್ಣಂ ಸಮಂತಾನ್ನಿಶಿತೈಃ ಶರೈಃ ॥ ೩೭ ॥

ಎಲೈ ಮಹಾರಾಜನೇ, ನಿನ್ನವರು ಮತ್ತು ಕರ್ಣಪುತ್ರನೂ ಸಹ ಸನ್ನದ್ಧರಾಗಿ ಸಾತ್ಯಕಿಯನ್ನು ಎಲ್ಲ ಕಡೆಗಳಿಂದಲೂ ಬಾಣಗಳಿಂದ ಶೀಘ್ರವಾಗಿ ಪೀಡಿಸಿದರು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ತೇಷಾಂ ಕರ್ಣಸ್ಯ ಚಾಭಿಭೋ ।
ಅವಿದ್ಧ್ಯತ್ ಸಾತ್ಯಕಿಃ ಕ್ರುದ್ಧೋ ವೃಷಸೇನಂ ಸ್ತನಾಂತರೇ ॥ ೩೮ ॥

ಎಲೈ ಶತ್ರುಸಂಹಾರಕನೇ, ಸಾತ್ಯಕಿಯಾದರೋ ತನ್ನ ಅಸ್ತ್ರಗಳಿಂದ ಅವರ ಮತ್ತು ಕರ್ಣನ ಅಸ್ತ್ರಗಳನ್ನು ನಿವಾರಿಸಿ ಕೋಪಗೊಂಡು ವೃಷಸೇನನನ್ನು ಅವನ ಸ್ತನಗಳ ಮಧ್ಯದಲ್ಲಿ ಹೊಡೆದನು.

ತೇನ ಬಾಣೇನ ನಿರ್ವಿದ್ಧೋ ವೃಷಸೇನೋ ವಿಶಾಂಪತೇ ।
ನ್ಯಪತತ್ ಸ ರಥೇ ಮೂಢೋ ಧನುರುತ್ಸೃಜ್ಯ ವೀರ್ಯವಾನ್ ॥೩೯॥

ಎಲೈ ರಾಜನೇ, ಆ ಬಾಣದಿಂದ ಹೊಡೆಯಲ್ಪಟ್ಟ ಪರಾಕ್ರಮಶಾಲಿಯಾದ ವೃಷಸೇನನು ಧನುಸ್ಸನ್ನು ಬಿಟ್ಟು ರಥದಲ್ಲಿ ಮೂರ್ಛಿತನಾಗಿ ಬಿದ್ದನು.

ತತಃ ಕರ್ಣೋ ಹತಂ ಮತ್ವಾ ವೃಷಸೇನಂ ಮಹಾರಥಃ ।
ಪುತ್ರಶೋಕಾಭಿಸಂತಪ್ತಃ ಸಾತ್ಯಕಿಂ ಪ್ರತ್ಯಪೀಡಯತ್ ॥ ೪೦ ॥

ಮಹಾರಥನಾದ ಕರ್ಣನು ತನ್ನ ಪುತ್ರನಾದ ವೃಷಸೇನನು ಹತನಾದನೆಂದು ತಿಳಿದು ಪುತ್ರಶೋಕದಿಂದ ಸಂತಪ್ತನಾಗಿ ಸಾತ್ಯಕಿಯನ್ನು ಬಾಣಗಳಿಂದ ಪೀಡಿಸಿದನು.

ಪೀಡ್ಯಮಾನಸ್ತು ಕರ್ಣೇನ ಯುಯುಧಾನೋ ಮಹಾರಥಃ ।
ವಿವ್ಯಾಧ ಬಹುಭಿಃ ಕರ್ಣಂ ತ್ವರಮಾಣಃ ಪುನಃ ಪುನಃ ॥ ೪೧ ॥

ಕರ್ಣನಿಂದ ಪೀಡಿಸಲ್ಪಡುವ ಮಹಾರಥನಾದ ಸಾತ್ಯಕಿಯಾದರೋ ಪುನಃ ಪುನಃ ತ್ವರೆಮಾಡುತ್ತಾ ಕರ್ಣನನ್ನು ಅನೇಕ ಬಾಣಗಳಿಂದ ಹೊಡೆದನು.

ಸ ಕರ್ಣಂ ದಶಭಿರ್ವಿದ್ಧ್ವಾ ವೃಷಸೇನಂ ಚ ಸಪ್ತಭಿಃ ।
ಸಹಸ್ತಾವಾಪಧನುಷೀ ತಯೋಶ್ಚಿಚ್ಛೇದ ಸಾತ್ವತಃ ॥ ೪೨ ॥

ಸಾತ್ಯಕಿಯು ಕರ್ಣನನ್ನು ಹತ್ತು ಬಾಣಗಳಿಂದ ಹೊಡೆದು, ವೃಷಸೇನನನ್ನು ಏಳು ಬಾಣಗಳಿಂದ ಹೊಡೆದನು. ಅವರಿಬ್ಬರ ಧನುಸ್ಸು ಮತ್ತು ಬತ್ತಳಿಕೆಗಳನ್ನು ಕತ್ತರಿಸಿದನು.

ತಾವನ್ಯೇ ಧನುಷೀ ಸಜ್ಯೇ ಕೃತ್ವಾ ಶತ್ರುಭಯಂಕರೇ ।
ಯುಯುಧಾನಮವಿದ್ಧ್ಯೇತಾಂ ಸಮಂತಾನ್ನಿಶಿತೈಃ ಶರೈಃ ॥ ೪೩ ॥

ಅವರಿಬ್ಬರೂ ಶತ್ರುಭಯಂಕರವಾದ ಬೇರೆ ಎರಡು ಧನುಸ್ಸುಗಳನ್ನು ತೆಗೆದುಕೊಂಡು ಹೆದೆ ಏರಿಸಿ ತೀಕ್ಷ್ಣವಾದ ಬಾಣಗಳಿಂದ ಸಾತ್ಯಕಿಯನ್ನು ಎಲ್ಲ ಕಡೆಗಳಿಂದಲೂ ಹೊಡೆದರು.

ವರ್ತಮಾನೇ ತು ಸಂಗ್ರಾಮೇ ತಸ್ಮಿನ್ ವೀರವರಕ್ಷಯೇ ।
ಅತೀವ ಶುಶ್ರುವೇ ರಾಜನ್ ಗಾಂಡೀವಸ್ಯ ಮಹಾಸ್ವನಃ ॥ ೪೪ ॥

ಎಲೈ ರಾಜನೇ, ಶ್ರೇಷ್ಠರಾದ ವೀರರ ನಾಶವನ್ನುಂಟು ಮಾಡುವ ಆ ಯುದ್ಧವು ಹಾಗೆ ನಡೆಯುತ್ತಿರಲು ಗಾಂಡೀವ ಧನುಸ್ಸಿನ ಮಹಾಸ್ವನವು ಬಹಳವಾಗಿ ಕೇಳಿಬಂದಿತು.

ಶ್ರುತ್ವಾ ತು ರಥನಿರ್ಘೋಷಂ ಗಾಂಡೀವಸ್ಯ ಚ ನಿಸ್ವನಮ್ ।
ಸೂತಪುತ್ರೋಬ್ರವೀದ್ ರಾಜನ್ ದುರ್ಯೋಧನಮಿದಂ ವಚಃ॥ ೪೫ ॥

ಅರ್ಜುನನ ರಥದ ಘೋಷವನ್ನು ಮತ್ತು ಗಾಂಡೀವಘೋಷವನ್ನು ಕೇಳಿದ ಸೂತಪುತ್ರನಾದ ಕರ್ಣನು ಎಲೈ ರಾಜನೇ, ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ಏಷ ಸರ್ವಾನ್ ಶಿಬೀನ್ ಹತ್ವಾ ಮುಖ್ಯಾಂಶ್ಚ ನರರ್ಷಭಾನ್ ।
ಪೌರವಾಂಶ್ಚ ಮಹೇಷ್ವಾಸಾನ್ ಗಾಂಡೀವನಿನದೋ ಮಹಾನ್ ॥ ೪೬ ॥

ಶ್ರೂಯತೇ ರಥಘೋಷಶ್ಚ ವಾಸವಸ್ಯೇವ ನರ್ದತಃ ।
ಕರೋತಿ ಪಾಂಡವೋ ವ್ಯಕ್ತಂ ಕರ್ಮೋಪಯಿಕಮಾತ್ಮನಃ ॥ ೪೭ ॥

ಶಿಬಿಗಳ ಎಲ್ಲಾ ಮುಖ್ಯಯೋಧರನ್ನು ಮತ್ತು ಪೌರವರ ಮಹಾಧನುರ್ಧಾರಿಗಳನ್ನು ಕೊಂದಿರುವ ಅರ್ಜುನನ ಈ ದೊಡ್ಡ ಗಾಂಡೀವ ಧನುಸ್ಸಿನ ಘೋಷವು ಮತ್ತು ರಥಘೋಷವು ಇಂದ್ರನ ಗರ್ಜನೆಯಂತೆ ಕೇಳಿಬರುತ್ತಿದೆ. ಪಾಂಡವನಾದ ಅರ್ಜುನನು ನಿಶ್ಚಯವಾಗಿ ತನಗೆ ಹಿತವಾದ ಕರ್ಮವನ್ನು ಮಾಡುತ್ತಿದ್ದಾನೆ.

ಏಷಾ ವಿದೀರ್ಯತೇ ರಾಜನ್ ಬಹುಧಾ ಭಾರತೀ ಚಮೂಃ ।
ವಿಪ್ರಕೀರ್ಣಾನ್ಯನೀಕಾನಿ ನಾವತಿಷ್ಠಂತಿ ಕರ್ಹಿಚಿತ್ ॥ ೪೮ ॥

ವಾತೇನೇವ ಸಮುದ್ಧೂತಮಭ್ರಜಾಲಂ ವಿದೀರ್ಯತೇ ।
ಸವ್ಯಸಾಚಿನಮಾಸಾದ್ಯ ಭಿನ್ನಾ ನೌರಿವ ಸಾಗರೇ ॥ ೪೯ ॥

ಎಲೈ ರಾಜನೇ, ಈ ಕೌರವರ ಸೇನೆಯು ಭಗ್ನವಾಗಿ ಹೋಗುತ್ತಿದೆ. ಚದುರಿ ಹೋಗಿರುವ ಸೈನ್ಯವು ಒಂದು ಕಡೆಯಲ್ಲಿ ನಿಲ್ಲುತ್ತಿಲ್ಲ. ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ಮೋಡಗಳ ಸಮೂಹದಂತೆ ಅರ್ಜುನನನ್ನು ಸಮೀಪಿಸಿ ಸಾಗರದಲ್ಲಿ ಒಡೆದು ಹೋದ ನೌಕೆಯಂತೆ ಸೀಳಿಹೋಗುತ್ತಿದೆ.

ದ್ರವತಾಂ ಯೋಧಮುಖ್ಯಾನಾಂ ಗಾಂಡೀವಪ್ರೇಷಿತೈಃ ಶರೈಃ ।
ವಿದ್ಧಾನಾಂ ಶತಶೋ ರಾಜನ್ ಶ್ರೂಯತೇ ನಿನದೋ ಮಹಾನ್ ।
ನಿಶೀಥೇ ರಾಜಶಾರ್ದೂಲ ಸ್ತನಯಿತ್ನೋರಿವಾಂಬರೇ ॥ ೫೦ ॥

ಗಾಂಡೀವ ಧನುಸ್ಸಿನಿಂದ ಹೊರಟ ಬಾಣಗಳಿಂದ ಪೀಡಿತರಾಗಿ ನೂರರ ಸಂಖ್ಯೆಯಲ್ಲಿ ಓಡಿಹೋಗುವ ಶ್ರೇಷ್ಠಯೋಧರ ಮಹಾನಾದವು ಎಲೈ ರಾಜಶಾರ್ದೂಲನೇ, ರಾತ್ರಿಯ ವೇಳೆಯಲ್ಲಿ ಆಕಾಶದಲ್ಲಿ ಗುಡುಗುಗಳ ಶಬ್ದದಂತೆ ಕೇಳಿಬರುತ್ತಿದೆ.

ಹಾಹಾಕಾರರವಾಂಶ್ಚೈವ ಸಿಂಹನಾದಾಂಶ್ಚ ಪುಷ್ಕಳಾನ್ ।
ಶೃಣು ಶಬ್ದಾನ್ ಬಹುವಿಧಾನರ್ಜುನಸ್ಯ ರಥಂ ಪ್ರತಿ ॥ ೫೧ ॥

ಅರ್ಜುನನ ರಥದ ಸಮೀಪದಲ್ಲಿ ಪುಷ್ಕಳವಾದ ಹಾಹಾಕಾರ ಶಬ್ದಗಳು ಮತ್ತು ಸಿಂಹನಾದಗಳು ಉಂಟಾಗುತ್ತಿರುವುದನ್ನು ಕೇಳು.

ಅಯಂ ಮಧ್ಯೇ ಸ್ಥಿತೋಽಸ್ಮಾಕಂ ಸಾತ್ಯಕಿಃ ಸಾತ್ವತಾಧಮಃ ।
ಇಹ ಚೇಲ್ಲಭ್ಯತೇ ಲಕ್ಷ್ಯಂ ಕೃತ್ವಾನ್ ಜೇಷ್ಯಾಮಹೇ ಪರಾನ್ ॥ ೫೨ ॥

ಈ ಸಾತ್ವತಾಧಮನಾದ ಸಾತ್ಯಕಿಯು ನಮ್ಮ ಮಧ್ಯದಲ್ಲಿ ಇದ್ದಾನೆ. ಇಲ್ಲಿ ನನಗೆ ಒಂದು ಮಾರ್ಗವು ದೊರಕಿದರೆ ಎಲ್ಲ ಶತ್ರುಗಳನ್ನೂ ಗೆಲ್ಲುವೆನು.

ಏಷ ಪಾಂಚಾಲರಾಜಸ್ಯ ಪುತ್ರೋ ದ್ರೋಣೇನ ಸಂಗತಃ ।
ಸರ್ವತಃ ಸಂವೃತೋ ಯೋಧೈ ರಾಜನ್ ಪುರುಷಸತ್ತಮೈಃ ॥ ೫೩ ॥

ಎಲೈ ರಾಜನೇ, ಪಾಂಚಾಲರಾಜನ ಪುತ್ರನಾದ ಈ ಧೃಷ್ಟದ್ಯುಮ್ನನು ಪುರುಷ ಶ್ರೇಷ್ಠರಾದ ಯೋಧರಿಂದ ಕೂಡಿದವನಾಗಿ ದ್ರೋಣರ ಜೊತೆಯಲ್ಲಿ ಸೆಣಸುತ್ತಿದ್ದಾನೆ.

ಸಾತ್ಯಕಿಂ ಯದಿ ಹನ್ಯಾಮೋ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಅಸಂಶಯಂ ಮಹಾರಾಜ ಧ್ರುವೋ ನೋ ವಿಜಯೋ ಭವೇತ್ ॥೫೪॥

ಎಲೈ ಮಹಾರಾಜನೇ, ನಾವು ಸಾತ್ಯಕಿಯನ್ನೂ ಮತ್ತು ಪಾರ್ಷತನಾದ ಧೃಷ್ಟದ್ಯುಮ್ನನನ್ನು ಕೊಂದರೆ ನಮಗೆ ನಿಸ್ಸಂಶಯವಾಗಿ ವಿಜಯವುಂಟಾದೀತು.

ಸೌಭದ್ರವದಿಮೌ ವೀರೌ ಪರಿವಾರ್ಯ ಮಹಾರಥೌ ।
ಪ್ರಯತಾಮೋ ಮಹಾರಾಜ ನಿಹಂತುಂ ವೃಷ್ಣಿಪಾರ್ಷತೌ ॥ ೫೫ ॥

ಎಲೈ ಮಹಾರಾಜನೇ, ಅಭಿಮನ್ಯುವನ್ನು ಕೊಂದಂತೆ ವೀರರೂ ಮಹಾರಥರೂ ಆದ ಈ ವೃಷ್ಣಿ-ಪಾರ್ಷತರನ್ನು ಕೊಲ್ಲಲು ಪ್ರಯತ್ನಿಸೋಣ.

ಸವ್ಯಸಾಚೀ ಪುರೋಭ್ಯೇತಿ ದ್ರೋಣಾನೀಕಾಯ ಭಾರತ ।
ಸಂಸಕ್ತಂ ಸಾತ್ಯಕಿಂ ಜ್ಞಾತ್ವಾ ಬಹುಭಿಃ ಕುರುಪುಂಗವೈಃ ॥ ೫೬ ॥

ಸಾತ್ಯಕಿಯು ಅನೇಕ ಕುರುಶ್ರೇಷ್ಠರ ಜೊತೆಯಲ್ಲಿ ಯುದ್ಧಮಾಡುತ್ತಿದ್ದಾನೆಂದು ತಿಳಿದು ಅರ್ಜುನನು ದ್ರೋಣರ ಸೇನೆಯ ಮುಂಭಾಗದಲ್ಲಿ ಹೋಗುತ್ತಿದ್ದಾನೆ.

ತತ್ರ ಗಚ್ಛಂತು ಬಹವಃ ಪ್ರವರಾ ರಥಸತ್ತಮಾಃ ।
ಯಾವತ್ ಪಾರ್ಥೋ ನ ಚಾಯಾತಿ ಸಾತ್ಯಕಿಂ ಬಹುಭಿರ್ವೃತಮ್ ॥

ಅನೇಕ ಕೌರವರಿಂದ ಸುತ್ತುವರಿಯಲ್ಪಟ್ಟು ಸಾತ್ಯಕಿಯ ಸಮೀಪಕ್ಕೆ ಅರ್ಜುನನು ಬರದಂತೆ ತಡೆಯಲು ನಮ್ಮ ಅನೇಕ ರಥಶ್ರೇಷ್ಠರು ಅಲ್ಲಿಗೆ ಹೋಗಲಿ.

ತೇ ತ್ವರಧ್ವಂ ಯಥಾ ಶೂರಾಃ ಶರಾಣಾಂ ಮೋಕ್ಷಣೇ ಭೃಶಮ್ ।
ಯಥಾ ತೂರ್ಣಂ ವ್ರಜತ್ಯೇಷ ಪರಲೋಕಾಯ ಮಾಧವಃ ॥ ೫೮ ॥

ಅಂತಹ ಶೂರರಾದ ನೀವು ಸಾತ್ಯಕಿಯು ಶೀಘ್ರವಾಗಿ ಪರಲೋಕಕ್ಕೆ ಹೋಗುವಂತೆ ಬಾಣಗಳನ್ನು ತ್ವರೆಯಿಂದ ಪ್ರಯೋಗಿಸುವವರಾಗಿ.

ಕರ್ಣಸ್ಯ ಮತಮಾಜ್ಞಾಯ ಪುತ್ರಸ್ತೇ ಪ್ರಾಹ ಸೌಬಲಮ್ ।
ಯಥೇಂದ್ರಃ ಸಮರೇ ರಾಜನ್ ಪ್ರಾಹ ವಿಷ್ಣುಂ ಯಶಸ್ವಿನಮ್ ॥ ೫೯ ॥

ಯುದ್ಧದಲ್ಲಿ ಇಂದ್ರನು ಕೀರ್ತಿವಂತನಾದ ವಿಷ್ಣುವನ್ನು ಕುರಿತು ಹೇಳಿದಂತೆ ಶಕುನಿಯನ್ನು ಕುರಿತು ನಿನ್ನ ಪುತ್ರನು ಮಾತನಾಡಿದನು.

ವೃತಃ ಸಹಸ್ರೈರ್ದಶಭಿರ್ಗಜಾನಾಮನಿವರ್ತಿನಾಮ್ ।
ರಥೈಶ್ಚ ದಶಸಾಹಸ್ರೈರ್ವೃತೋ ಯಾಹಿ ಧನಂಜಯಮ್ ॥ ೬೦ ॥

ಯುದ್ಧದಲ್ಲಿ ಹಿಮ್ಮೆಟ್ಟದಿರುವ ಹತ್ತು ಸಹಸ್ರ ಗಜಗಳಿಂದಲೂ ಮತ್ತು ಹತ್ತು ಸಹಸ್ರ ರಥಗಳಿಂದಲೂ ಸಹಿತನಾಗಿ ನೀನು ಅರ್ಜುನನ ಮೇಲೆ ಎರಗು.

ದುಃಶಾಸನೋ ದುರ್ವಿಷಹಃ ಸುಬಾಹುರ್ದುಷ್ಪ್ರಧರ್ಷಣಃ ।
ಏತೇ ತ್ವಾಮನುಯಾಸ್ಯಂತಿ ಪತ್ತಿಭಿರ್ಬಹುಭಿರ್ವೃತಾಃ ॥ ೬೧ ॥

ದುಶ್ಶಾಸನ, ದುರ್ವಿಷಹ, ಸುಬಾಹು, ದುಷ್ಪ್ರಧರ್ಷಣ - ಇವರು ಅನೇಕ ಪದಾತಿಗಳಿಂದ ಕೂಡಿ ನಿನ್ನನ್ನು ಹಿಂಬಾಲಿಸುವರು.

ಜಹಿ ಕೃಷ್ಣೌ ಮಹಾಬಾಹೋ ಧರ್ಮರಾಜಂ ಚ ಮಾತುಲ ।
ನಕುಲಂ ಸಹದೇವಂ ಚ ಭೀಮಸೇನಂ ಚ ಭಾರತ ॥ ೬೨ ॥

ಎಲೈ ಸೋದರಮಾವನೇ, ಮಹಾಬಾಹುವೇ, ಭಾರತನೇ, ಕೃಷ್ಣಾರ್ಜುನರನ್ನು, ನಕುಲ-ಸಹದೇವರನ್ನೂ, ಭೀಮಸೇನನನ್ನೂ ಕೊಲ್ಲುವವನಾಗು.

ದೇವಾನಾಮಿವ ದೇವೇಂದ್ರೇ ಜಯಾಶಾ ಮೇ ತ್ವಯಿ ಸ್ಥಿತಾ ।
ಜಹಿ ಮಾತುಲ ಕೌಂತೇಯಾನಸುರಾನಿವ ಪಾವಕಃ ॥ ೬೩ ॥

ದೇವತೆಗಳ ಆಸೆಯು ದೇವೇಂದ್ರನಲ್ಲಿ ನೆಲೆಸಿದಂತೆ ನನ್ನ ಜಯದ ಆಸೆಯು ನಿನ್ನಲ್ಲಿ ನೆಲೆಸಿದೆ. ಸೋದರಮಾವನೇ, ಷಣ್ಮುಖನು ಅಸುರರನ್ನು ಕೊಂದಂತೆ ಕುಂತೀಪುತ್ರನನ್ನು ಕೊಲ್ಲುವವನಾಗು (ಎಂದು ಹೇಳಿದನು).

ಏವಮುಕ್ತೋ ಯಯೌ ಪಾರ್ಥಾನ್ ಪುತ್ರೇಣ ತವ ಸೌಬಲಃ ।
ಮಹತ್ಯಾ ಸೇನಯಾ ಸಾರ್ಧಂ ತವ ಪುತ್ರೈಸ್ತಥಾ ವಿಭೋ ॥ ೬೪ ॥

ಎಲೈ ವಿಭುವೇ, ಹೀಗೆ ನಿನ್ನ ಪುತ್ರನಿಂದ ಹೇಳಲ್ಪಟ್ಟ ಶಕುನಿಯು ದೊಡ್ಡ ಸೇನೆಯಿಂದಲೂ ಮತ್ತು ನಿನ್ನ ಪುತ್ರರಿಂದಲೂ ಕೂಡಿ ಪಾಂಡವರನ್ನು ಎದುರಿಸಲು ಹೊರಟನು.

ಪ್ರಿಯಾರ್ಥಂ ತವ ಪುತ್ರಾಣಾಂ ದಿಧಕ್ಷುಃ ಪಾಂಡುನಂದನಾನ್ ।
ತತಃ ಪ್ರವವೃತೇ ಯುದ್ಧಂ ತಾವಕಾನಾಂ ಪರೈಃ ಸಹ ॥ ೬೫ ॥

ನಿನ್ನ ಪುತ್ರರಿಗೆ ಪ್ರಿಯವುಂಟು ಮಾಡಲು ಪಾಂಡುನಂದನರನ್ನು ಕೊಲ್ಲಲು ಬಯಸಿ (ಹೊರಟನು). ಅನಂತರ ನಿನ್ನವರಿಗೂ ಮತ್ತು ನಿನ್ನ ಶತ್ರುಗಳಿಗೂ ಯುದ್ಧವು ಜರುಗಿತು.

ಪ್ರಯಾತೇ ಸೌಬಲೇ ರಾಜನ್ ಪಾಂಡವಾನಾಮನೀಕಿನೀಮ್ ।
ಬಲೇನ ಮಹತಾ ಯುಕ್ತಃ ಸೂತಪುತ್ರಸ್ತು ಸಾತ್ವತಮ್ ॥ ೬೬ ॥

ಅಭ್ಯಯಾತ್ತ್ವರಿತಂ ಯುದ್ಧೇ ಕಿರನ್ ಶರಶತಾನ್ ಬಹೂನ್ ।
ತಥೈವ ಪಾಂಡವಾಃ ಸರ್ವೇ ಸಾತ್ಯಕಿಂ ಪರ್ಯವಾರಯನ್ ॥ ೬೭ ॥

ಎಲೈ ರಾಜನೇ, ಶಕುನಿಯು ಪಾಂಡವರ ಸೇನೆಯನ್ನು ಕುರಿತು ಹೊರಟಮೇಲೆ ದೊಡ್ಡ ಸೈನ್ಯದಿಂದ ಕೂಡಿದವನಾಗಿ ಕರ್ಣನು ಶೀಘ್ರವಾಗಿ ನೂರಾರು ಬಾಣಗಳನ್ನು ಪ್ರಯೋಗಿಸುತ್ತಾ ಸಾತ್ಯಕಿಯ ಮೇಲೆ ಎರಗಿದನು. ಹಾಗೆಯೇ ಪಾಂಡವರೆಲ್ಲರೂ ಸಾತ್ಯಕಿಯನ್ನು ಸುತ್ತುವರಿದರು.

ಮಹದ್ ಯುದ್ಧಂ ತದಾಸೀತ್ ತು ದ್ರೋಣಸ್ಯ ನಿಶಿ ಭಾರತ ।
ಧೃಷ್ಟದ್ಯುಮ್ನೇನ ಶೂರೇಣ ಪಾಂಚಾಲೈಶ್ಚ ಮಹಾತ್ಮನಃ ॥ ೬೮ ॥

ಎಲೈ ಭಾರತನೇ, ಆಗ ರಾತ್ರಿಯ ಕಾಲದಲ್ಲಿ ಮಹಾತ್ಮರಾದ ದ್ರೋಣರಿಗೂ ಮತ್ತು ಶೂರನಾದ ಧೃಷ್ಟದ್ಯುಮ್ನ ಮತ್ತು ಪಾಂಚಾಲರಿಗೂ ದೊಡ್ಡ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್‌ಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೇಳನೆಯ ಅಧ್ಯಾಯ

ಸಾತ್ಯಕಿಯಿಂದ ದುರ್ಯೋಧನನ, ಅರ್ಜುನನಿಂದ ಶಕುನಿಯ ಮತ್ತು ಧೃಷ್ಟದ್ಯುಮ್ನನಿಂದ ದ್ರೋಣರ ಪರಾಜಯ.

ಸಂಜಯಃ

ತತಸ್ತೇ ಪ್ರಾದ್ರವನ್ ಸರ್ವೇ ತ್ವರಿತಾ ಯುದ್ಧದುರ್ಮದಾಃ ।
ಅಮೃಷ್ಯಮಾಣಾಃ ಸಂರಬ್ಧಾ ಯುಯುಧಾನರಥಂ ಪ್ರತಿ ॥ ೧ ॥

ಸಂಜಯ– ಆಗ ಯುದ್ಧದುರ್ಮದರಾದ ಅವರೆಲ್ಲರೂ ಶತ್ರುಗಳ ಪರಾಕ್ರಮವನ್ನು ನೋಡಿ ಸಹಿಸದೆ ಕೋಪಗೊಂಡು ಶೀಘ್ರವಾಗಿ ಸಾತ್ಯಕಿಯ ರಥದ ಕಡೆಗೆ ಧಾವಿಸಿದರು.

ತೇ ರಥೈಃ ಕಲ್ಪಿತೈ ರಾಜನ್ ಹೇಮರೂಪ್ಯವಿಭೂಷಿತೈಃ ।
ಸಾದಿಭಿಶ್ಚ ಗಜೈಶ್ಚೈವ ಪರಿವವ್ರುಃ ಸ್ಮ ಸಾತ್ವತಮ್ ॥ ೨ ॥

ಎಲೈ ರಾಜನೇ, ಅವರು ಚೆನ್ನಾಗಿ ಅಣಿಗೊಳಿಸಿದ, ಸುವರ್ಣದಿಂದ ಅಲಂಕೃತವಾದ ರಥಗಳಿಂದಲೂ, ಅಶ್ವಾರೋಹಿಗಳಿಂದಲೂ, ಗಜಗಳಿಂದಲೂ ಕೂಡಿ ಸಾತ್ಯಕಿಯನ್ನು ಸುತ್ತುವರಿದರು.

ಅಥೈನಂ ಕೋಷ್ಟಕೀಕೃತ್ಯ ಸರ್ವತಸ್ತೇ ಮಹಾರಥಾಃ ।
ಸಿಂಹನಾದಾಂಸ್ತದಾ ಚಕ್ರುಸ್ತರ್ಜಯಂತಃ ಸ್ಮ ಸಾತ್ಯಕಿಮ್ ॥ ೩ ॥

ಅನಂತರ ಮಹಾರಥರಾದ ಅವರು ಎಲ್ಲ ಕಡೆಗಳಿಂದಲೂ ಸಾತ್ಯಕಿಯನ್ನು ಕೂಡಿಹಾಕಿಕೊಂಡು ಅವನನ್ನು ಹೆದರಿಸುತ್ತಾ ಸಿಂಹನಾದಗಳನ್ನು ಮಾಡಿದರು.

ತೇಽಭ್ಯವರ್ಷನ್ ಶರೈಸ್ತೀಕ್ಷ್ಣೈಃ ಸಾತ್ಯಕಿಂ ಸತ್ಯವಿಕ್ರಮಮ್ ।
ತ್ವರಮಾಣಾ ಮಹಾವೀರ್ಯಾ ಮಾಧವಸ್ಯ ವಧೈಷಿಣಃ ॥ ೪ ॥

ಮಹಾಪರಾಕ್ರಮಶಾಲಿಗಳಾದ ಅವರು ಸತ್ಯವಿಕ್ರಮನಾದ ಮಾಧವನಾದ ಸಾತ್ಯಕಿಯನ್ನು ಕೊಲ್ಲಲು ಬಯಸಿ ತ್ವರೆಯನ್ನು ಮಾಡಿ ಅವನ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಯನ್ನು ಸುರಿಸಿದರು.

ತಾನ್ ದೃಷ್ಟ್ವಾ ಪತತಸ್ತೂರ್ಣಂ ಶೈನೇಯಃ ಪರವೀರಹಾ ।
ಪ್ರತ್ಯಗೃಹ್ಣನ್ಮಹಾಬಾಹುಃ ಪ್ರಮುಂಚನ್ ವಿಶಿಖಾನ್ ಬಹೂನ್ ॥ ೫ ॥

ತನ್ನ ಮೇಲೆ ಎರಗುತ್ತಿದ್ದ ಅವರನ್ನು ನೋಡಿ ಪರವೀರಘಾತಕನೂ, ಮಹಾಬಾಹುವೂ ಆದ ಸಾತ್ಯಕಿಯು ಶೀಘ್ರವಾಗಿ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ಅವರನ್ನು ಸ್ವೀಕರಿಸಿದನು.

ತತ್ರ ವೀರೋ ಮಹೇಷ್ವಾಸಃ ಸಾತ್ಯಕಿರ್ಯುದ್ಧದುರ್ಮದಃ ।
ನಿಚಕರ್ತ ಶಿರಾಂಸ್ಯುಗ್ರೈಃ ಶರೈಃ ಸನ್ನತಪರ್ವಭಿಃ ॥ ೬ ॥

ಆಗ ಯುದ್ಧದುರ್ಮದನೂ, ವೀರನೂ ಮತ್ತು ಮಹಾಧನುರ್ಧಾರಿಯೂ ಆದ ಸಾತ್ಯಕಿಯು ಬಾಗಿದ ತುದಿಯುಳ್ಳ ಉಗ್ರವಾದ ಬಾಣಗಳಿಂದ ಶತ್ರುಗಳ ಶಿರಸ್ಸುಗಳನ್ನು ಕತ್ತರಿಸಿದನು.

ಹಸ್ತಿಹಸ್ತಾನ್ ಹಯಗ್ರೀವಾ ಬಾಹೂನಪಿ ಚ ಸಾಯುಧಾನ್ ।
ಕ್ಷುರಪ್ರೈಃ ಪಾತಯಾಮಾಸ ತಾವಕಾನಾಂ ಸ ಮಾಧವಃ ॥ ೭ ॥

ಮಧುಕುಲದಲ್ಲಿ ಜನಿಸಿದ ಸಾತ್ಯಕಿಯು ಕ್ಷುರಪ್ರಗಳಿಂದ ನಿನ್ನ ಸೈನ್ಯದ ಗಜಗಳ ಸೊಂಡಿಲುಗಳನ್ನೂ, ಅಶ್ವಗಳ ಕತ್ತುಗಳನ್ನೂ, ಯೋಧರ ಆಯುಧಸಹಿತವಾದ ಬಾಹುಗಳನ್ನೂ ನೆಲದ ಮೇಲೆ ಉರುಳಿಸಿದನು.

ಪತತ್ಕೈಶ್ಚಾಮರೈಶ್ಚೈವ ಶ್ವೇತಚ್ಛತ್ರೈಶ್ಚ ಭಾರತ ।
ಬಭೂವ ಧರಣೀ ಪೂರ್ಣಾ ನಕ್ಷತ್ರೈರ್ದ್ಯೌರಿವ ಪ್ರಭೋ ॥ ೮ ॥

ಎಲೈ ಭಾರತನೇ, ಪ್ರಭುವೇ, ಕೆಳಗೆ ಬಿದ್ದ ಚಾಮರಗಳಿಂದಲೂ, ಶ್ವೇತಚ್ಛತ್ರ-ಗಳಿಂದಲೂ ತುಂಬಿಹೋದ ರಣಭೂಮಿಯು ನಕ್ಷತ್ರದಿಂದ ತುಂಬಿದ ಆಕಾಶದಂತೆ ತೋರಿಬಂದಿತು.

ತೇಷಾಂ ತು ಯುಯುಧಾನೇನ ಯುದ್ಧ್ಯತಾಂ ಯುಧಿ ಭಾರತ ।
ಬಭೂವ ತುಮುಲಃ ಶಬ್ದಃ ಪ್ರೇತಾನಾಮಿವ ಕ್ರಂದತಾಮ್ ॥ ೯ ॥

ಎಲೈ ಭಾರತನೇ, ಸಾತ್ಯಕಿಯ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವ ನಿನ್ನವರ ಶಬ್ದವು ಪ್ರೇತಗಳ ಗೋಳಾಟದ ಶಬ್ದದಂತೆ ತೀವ್ರವಾಗಿದ್ದಿತು.

ತೇನ ಶಬ್ದೇನ ಮಹತಾ ಪೂರಿತಾऽऽಸೀದ್ ವಸುಂಧರಾ ।
ರಾತ್ರಿಃ ಸಮಭವಚ್ಚೈವ ತೀವ್ರರೂಪಾ ಭಯಾವಹಾ ॥ ೧೦ ॥

ಭೂಮಿಯು ಆ ದೊಡ್ಡ ಶಬ್ದದಿಂದ ತುಂಬಿಹೋಯಿತು ಮತ್ತು ರಾತ್ರಿಯು ತೀವ್ರವಾದ ಭಯಜನಕವಾಯಿತು.

ದೀರ್ಯಮಾಣಂ ಬಲಂ ದೃಷ್ಟ್ವಾ ಯುಯುಧಾನಶರಾಹತಮ್ ।
ಶ್ರುತ್ವಾ ಚ ವಿಪುಲಂ ನಾದಂ ನಿಶೀಥೇ ಲೋಮಹರ್ಷಣಮ್ ॥ ೧೧ ॥

ಸುತಸ್ತವಾಬ್ರವೀದ್ ರಾಜನ್ ಸಾರಥಿಂ ರಥಿನಾಂ ವರಃ ।
ಯತ್ರೈಷ ಶಬ್ದಸ್ತತ್ರಾಶ್ವಾಂಶ್ಚೋದಯೇತಿ ಪುನಃ ಪುನಃ ॥ ೧೨ ॥

ಸಾತ್ಯಕಿಯ ಬಾಣಗಳಿಂದ ಪೀಡಿತವಾಗಿ ಭಗ್ನವಾಗುತ್ತಿದ್ದ ತನ್ನ ಸೈನ್ಯವನ್ನು ನೋಡಿ ರಾತ್ರಿಯ ವೇಳೆಯಲ್ಲಿ ರೋಮಾಂಚಕಾರಿಯಾದ ವಿಸ್ತಾರವಾದ ಗೋಳಾಟನಾದವನ್ನು ಕೇಳಿ ಎಲೈ ರಾಜನೇ, ರಥಿಕರಲ್ಲಿ ಶ್ರೇಷ್ಠನಾದ ನಿನ್ನ ಪುತ್ರನು ಸಾರಥಿಯನ್ನು ಕುರಿತು ಈ ಶಬ್ದವು ಎಲ್ಲಿಂದ ಕೇಳಿ ಬರುತ್ತಿದೆಯೋ ಅಲ್ಲಿಗೆ ಶೀಘ್ರವಾಗಿ ಅಶ್ವಗಳನ್ನು ಪ್ರಚೋದಿಸು ಎಂದು ಮತ್ತೆ ಮತ್ತೆ ಹೇಳಿದನು.

ತೇನ ಸಂಚೋದ್ಯಮಾನಸ್ತು ತತಸ್ತಾಂಸ್ತುರಗೋತ್ತಮಾನ್ ।
ಸೂತಃ ಸಂಚೋದಯಾಮಾಸ ಯುಯುಧಾನರಥಂ ಪ್ರತಿ ॥ ೧೩ ॥

ದುರ್ಯೋಧನನಿಂದ ಹೀಗೆ ಪ್ರಚೋದಿಸಲ್ಪಟ್ಟ ಸಾರಥಿಯು ಅವನ ಶ್ರೇಷ್ಠವಾದ ಕುದುರೆಗಳನ್ನು ಸಾತ್ಯಕಿಯ ರಥದ ಬಳಿಗೆ ಪ್ರಚೋದಿಸಿದನು.

ತತೋ ದುರ್ಯೋಧನಃ ಕ್ರುದ್ಧೋ ದೃಢಧನ್ವಾ ಜಿತಕ್ಲಮಃ ।
ಶೀಘ್ರಹಸ್ತಶ್ಚಿತ್ರಯೋಧೀ ಯುಯುಧಾನಮುಪಾದ್ರವತ್ ॥ ೧೪ ॥

ಆಗ ಕೋಪಗೊಂಡವನೂ, ದೃಢವಾದ ಧನುಸ್ಸನ್ನು ಹೊಂದಿದವನೂ, ಶ್ರಮವನ್ನು ಮೀರಿದವನೂ, ಶೀಘ್ರಹಸ್ತನೂ, ಆಶ್ಚರ್ಯಕರವಾಗಿ ಯುದ್ಧವನ್ನು ಮಾಡುವವನೂ ಆದ ದುರ್ಯೋಧನನು ಸಾತ್ಯಕಿಯ ಮೇಲೆ ಎರಗಿದನು.

ತತಃ ಪೂರ್ಣಾಯತೋತ್ಸೃಷ್ಟೈರ್ಮಾಂಸಶೋಣಿತಭೋಜನೈಃ ।
ದುರ್ಯೋಧನಂ ದ್ವಾದಶಭಿರ್ಮಾಧವಃ ಪ್ರತ್ಯವಿದ್ಧ್ಯತ ॥ ೧೫ ॥

ಆಗ ಸಾತ್ಯಕಿಯು ಪೂರ್ಣವಾಗಿ ಎಳೆದು ಪ್ರಯೋಗಿಸಿದ, ಮಾಂಸ-ರಕ್ತ ಭೋಜಿಗಳಾದ ಹನ್ನೆರಡು ಬಾಣಗಳಿಂದ ದುರ್ಯೋಧನನನ್ನು ಹೊಡೆದನು.

ದುರ್ಯೋಧನಸ್ತೇನ ತಥಾ ಪೂರ್ವಮೇವಾರ್ದಿತಃ ಶರೈಃ ।
ಶೈನೇಯಂ ದಶಭಿರ್ಬಾಣೈಃ ಪ್ರತ್ಯವಿದ್ಧ್ಯದಮರ್ಷಿತಃ ॥ ೧೬ ॥

ಸಾತ್ಯಕಿಯಿಂದ ಮೊದಲೇ ಆ ರೀತಿಯಲ್ಲಿ ಹೊಡೆಯಲ್ಪಟ್ಟ ದುರ್ಯೋಧನನು ಕೋಪಗೊಂಡು ಹತ್ತು ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು.

ತತಃ ಸಮಭವದ್ಯುದ್ಧಮಾಕುಲಂ ಭರತರ್ಷಭ ।
ಪಾಂಚಾಲಾನಾಂ ಚ ಸರ್ವೇಷಾಂ ಭಾರತಾನಾಂ ಚ ದಾರುಣಮ್ ॥

ಎಲೈ ಭರತಶ್ರೇಷ್ಠನೇ, ಆನಂತರ ಪಾಂಚಾಲರಿಗೂ ಮತ್ತು ಕೌರವರಿಗೂ ಎಲ್ಲವೂ ಮಿಶ್ರಣಗೊಂಡ ದಾರುಣವಾದ ಯುದ್ಧವು ನಡೆಯಿತು.

ಶೈನೇಯಸ್ತು ರಣೇ ಕ್ರುದ್ಧಸ್ತವ ಪುತ್ರಂ ಮಹಾರಥಮ್ ।
ಸಾಯಕಾನಾಮಶೀತ್ಯಾ ತು ವಿವ್ಯಾಧೋರಸಿ ಭಾರತ ॥ ೧೮ ॥

ಎಲೈ ಭಾರತನೇ, ರಣರಂಗದಲ್ಲಿ ಕೋಪಗೊಂಡ ಸಾತ್ಯಕಿಯು ಮಹಾರಥನಾದ ನಿನ್ನ ಪುತ್ರನನ್ನು ಎಂಬತ್ತು ಬಾಣಗಳಿಂದ ಎದೆಯಲ್ಲಿ ಹೊಡೆದನು.

ಪತತ್ಕೈಶ್ಚಾಮರೈಶ್ಚೈವ ಶ್ವೇತಚ್ಛತ್ರೈಶ್ಚ ಭಾರತ ।
ಬಭೂವ ಧರಣೀ ಪೂರ್ಣಾ ನಕ್ಷತ್ರೈರ್ದ್ಯೌರಿವ ಪ್ರಭೋ ॥ ೮ ॥

ಎಲೈ ಭಾರತನೇ, ಪ್ರಭುವೇ, ಕೆಳಗೆ ಬಿದ್ದ ಚಾಮರಗಳಿಂದಲೂ, ಶ್ವೇತಚ್ಛತ್ರ-ಗಳಿಂದಲೂ ತುಂಬಿಹೋದ ರಣಭೂಮಿಯು ನಕ್ಷತ್ರದಿಂದ ತುಂಬಿದ ಆಕಾಶದಂತೆ ತೋರಿಬಂದಿತು.

ತೇಷಾಂ ತು ಯುಯುಧಾನೇನ ಯುದ್ಧ್ಯತಾಂ ಯುಧಿ ಭಾರತ ।
ಬಭೂವ ತುಮುಲಃ ಶಬ್ದಃ ಪ್ರೇತಾನಾಮಿವ ಕ್ರಂದತಾಮ್ ॥ ೯ ॥

ಎಲೈ ಭಾರತನೇ, ಸಾತ್ಯಕಿಯ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡುವ ನಿನ್ನವರ ಶಬ್ದವು ಪ್ರೇತಗಳ ಗೋಳಾಟದ ಶಬ್ದದಂತೆ ತೀವ್ರವಾಗಿದ್ದಿತು.

ತೇನ ಶಬ್ದೇನ ಮಹತಾ ಪೂರಿತಾऽऽಸೀದ್ ವಸುಂಧರಾ ।
ರಾತ್ರಿಃ ಸಮಭವಚ್ಚೈವ ತೀವ್ರರೂಪಾ ಭಯಾವಹಾ ॥ ೧೦ ॥

ಭೂಮಿಯು ಆ ದೊಡ್ಡ ಶಬ್ದದಿಂದ ತುಂಬಿಹೋಯಿತು ಮತ್ತು ರಾತ್ರಿಯು ತೀವ್ರವಾದ ಭಯಜನಕವಾಯಿತು.

ದೀರ್ಯಮಾಣಂ ಬಲಂ ದೃಷ್ಟ್ವಾ ಯುಯುಧಾನಶರಾಹತಮ್ ।
ಶ್ರುತ್ವಾ ಚ ವಿಪುಲಂ ನಾದಂ ನಿಶೀಥೇ ಲೋಮಹರ್ಷಣಮ್ ॥ ೧೧ ॥

ಸುತಸ್ತವಾಬ್ರವೀದ್ ರಾಜನ್ ಸಾರಥಿಂ ರಥಿನಾಂ ವರಃ ।
ಯತ್ರೈಷ ಶಬ್ದಸ್ತತ್ರಾಶ್ವಾಂಶ್ಚೋದಯೇತಿ ಪುನಃ ಪುನಃ ॥ ೧೨ ॥

ಸಾತ್ಯಕಿಯ ಬಾಣಗಳಿಂದ ಪೀಡಿತವಾಗಿ ಭಗ್ನವಾಗುತ್ತಿದ್ದ ತನ್ನ ಸೈನ್ಯವನ್ನು ನೋಡಿ ರಾತ್ರಿಯ ವೇಳೆಯಲ್ಲಿ ರೋಮಾಂಚಕಾರಿಯಾದ ವಿಸ್ತಾರವಾದ ಗೋಳಾಟನಾದವನ್ನು ಕೇಳಿ ಎಲೈ ರಾಜನೇ, ರಥಿಕರಲ್ಲಿ ಶ್ರೇಷ್ಠನಾದ ನಿನ್ನ ಪುತ್ರನು ಸಾರಥಿಯನ್ನು ಕುರಿತು ಈ ಶಬ್ದವು ಎಲ್ಲಿಂದ ಕೇಳಿ ಬರುತ್ತಿದೆಯೋ ಅಲ್ಲಿಗೆ ಶೀಘ್ರವಾಗಿ ಅಶ್ವಗಳನ್ನು ಪ್ರಚೋದಿಸು ಎಂದು ಮತ್ತೆ ಮತ್ತೆ ಹೇಳಿದನು.

ತೇನ ಸಂಚೋದ್ಯಮಾನಸ್ತು ತತಸ್ತಾಂಸ್ತುರಗೋತ್ತಮಾನ್ ।
ಸೂತಃ ಸಂಚೋದಯಾಮಾಸ ಯುಯುಧಾನರಥಂ ಪ್ರತಿ ॥ ೧೩ ॥

ದುರ್ಯೋಧನನಿಂದ ಹೀಗೆ ಪ್ರಚೋದಿಸಲ್ಪಟ್ಟ ಸಾರಥಿಯು ಅವನ ಶ್ರೇಷ್ಠವಾದ ಕುದುರೆಗಳನ್ನು ಸಾತ್ಯಕಿಯ ರಥದ ಬಳಿಗೆ ಪ್ರಚೋದಿಸಿದನು.

ತತೋ ದುರ್ಯೋಧನಃ ಕ್ರುದ್ಧೋ ದೃಢಧನ್ವಾ ಜಿತಕ್ಲಮಃ ।
ಶೀಘ್ರಹಸ್ತಶ್ಚಿತ್ರಯೋಧೀ ಯುಯುಧಾನಮುಪಾದ್ರವತ್ ॥ ೧೪ ॥

ಆಗ ಕೋಪಗೊಂಡವನೂ, ದೃಢವಾದ ಧನುಸ್ಸನ್ನು ಹೊಂದಿದವನೂ, ಶ್ರಮವನ್ನು ಮೀರಿದವನೂ, ಶೀಘ್ರಹಸ್ತನೂ, ಆಶ್ಚರ್ಯಕರವಾಗಿ ಯುದ್ಧವನ್ನು ಮಾಡುವವನೂ ಆದ ದುರ್ಯೋಧನನು ಸಾತ್ಯಕಿಯ ಮೇಲೆ ಎರಗಿದನು.

ತತಃ ಪೂರ್ಣಾಯತೋತ್ಸೃಷ್ಟೈರ್ಮಾಂಸಶೋಣಿತಭೋಜನೈಃ ।
ದುರ್ಯೋಧನಂ ದ್ವಾದಶಭಿರ್ಮಾಧವಃ ಪ್ರತ್ಯವಿದ್ಧ್ಯತ ॥ ೧೫ ॥

ಆಗ ಸಾತ್ಯಕಿಯು ಪೂರ್ಣವಾಗಿ ಎಳೆದು ಪ್ರಯೋಗಿಸಿದ, ಮಾಂಸ-ರಕ್ತ ಭೋಜಿಗಳಾದ ಹನ್ನೆರಡು ಬಾಣಗಳಿಂದ ದುರ್ಯೋಧನನನ್ನು ಹೊಡೆದನು.

ದುರ್ಯೋಧನಸ್ತೇನ ತಥಾ ಪೂರ್ವಮೇವಾರ್ದಿತಃ ಶರೈಃ ।
ಶೈನೇಯಂ ದಶಭಿರ್ಬಾಣೈಃ ಪ್ರತ್ಯವಿದ್ಧ್ಯದಮರ್ಷಿತಃ ॥ ೧೬ ॥

ಸಾತ್ಯಕಿಯಿಂದ ಮೊದಲೇ ಆ ರೀತಿಯಲ್ಲಿ ಹೊಡೆಯಲ್ಪಟ್ಟ ದುರ್ಯೋಧನನು ಕೋಪಗೊಂಡು ಹತ್ತು ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು.

ತತಃ ಸಮಭವದ್ಯುದ್ಧಮಾಕುಲಂ ಭರತರ್ಷಭ ।
ಪಾಂಚಾಲಾನಾಂ ಚ ಸರ್ವೇಷಾಂ ಭಾರತಾನಾಂ ಚ ದಾರುಣಮ್ ॥

ಎಲೈ ಭರತಶ್ರೇಷ್ಠನೇ, ಅನಂತರ ಪಾಂಚಾಲರಿಗೂ ಮತ್ತು ಕೌರವರಿಗೂ ಎಲ್ಲವೂ ಮಿಶ್ರಣಗೊಂಡ ದಾರುಣವಾದ ಯುದ್ಧವು ನಡೆಯಿತು.

ಶೈನೇಯಸ್ತು ರಣೇ ಕ್ರುದ್ಧಸ್ತವ ಪುತ್ರಂ ಮಹಾರಥಮ್ ।
ಸಾಯಕಾನಾಮಶೀತ್ಯಾ ತು ವಿವ್ಯಾಧೋರಸಿ ಭಾರತ ॥ ೧೮ ॥

ಎಲೈ ಭಾರತನೇ, ರಣರಂಗದಲ್ಲಿ ಕೋಪಗೊಂಡ ಸಾತ್ಯಕಿಯು ಮಹಾರಥನಾದ ನಿನ್ನ ಪುತ್ರನನ್ನು ಎಂಬತ್ತು ಬಾಣಗಳಿಂದ ಎದೆಯಲ್ಲಿ ಹೊಡೆದನು.

ತತೋಽಸ್ಯ ವಾಹಾನ್ ಸಮರೇ ಶರೈರ್ನಿನ್ಯೇ ಯಮಕ್ಷಯಮ್ ।
ಸಾರಥಿಂ ಚ ರಥಾತ್ ತೂರ್ಣಂ ಪಾತಯಾಮಾಸ ಪತ್ರಿಣಾ ॥ ೧೯ ॥

ಅನಂತರ ಬಾಣಗಳನ್ನು ಪ್ರಯೋಗಿಸಿ ಅವನ ರಥದ ಅಶ್ವಗಳನ್ನು ಯಮಲೋಕಕ್ಕೆ ಕಳುಹಿಸಿದನು ಮತ್ತು ಪತ್ರವುಳ್ಳ ಒಂದು ಬಾಣದಿಂದ ಅವನ ಸಾರಥಿಯನ್ನು ಶೀಘ್ರವಾಗಿ ರಥದಿಂದ ಕೆಡವಿದನು.

ಹತಾಶ್ವೇ ತು ರಥೇ ತಿಷ್ಠನ್ ಪುತ್ರಸ್ತವ ವಿಶಾಂಪತೇ ।
ಮುಮೋಚ ನಿಶಿತಾನ್ ಬಾಣಾನ್ ಶೈನೇಯಸ್ಯ ರಥಂ ಪ್ರತಿ ॥ ೨೦ ॥

ಎಲೈ ರಾಜನೇ, ನಿನ್ನ ಪುತ್ರನು ಅಶ್ವಗಳು ಮೃತವಾದ ರಥದಲ್ಲಿ ನಿಂತು ಸಾತ್ಯಕಿಯ ರಥವನ್ನು ಕುರಿತು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು.

ಶರಾನ್ ಪಂಚಾಶತಸ್ತಾಂಸ್ತು ಶೈನೇಯಃ ಕೃತಹಸ್ತವತ್ ।
ಚಿಚ್ಛೇದ ಸಮರೇ ರಾಜನ್ ಪ್ರೇಷಿತಾಂಸ್ತನಯೇನ ತೇ ॥ ೨೧ ॥

ಎಲೈ ರಾಜನೇ, ನಿನ್ನ ಪುತ್ರನು ಪ್ರಯೋಗಿಸಿದ ಆ ಐವತ್ತು ಬಾಣಗಳನ್ನು ಸಾತ್ಯಕಿಯು ಶೀಘ್ರಹಸ್ತನಂತೆ ರಣರಂಗದಲ್ಲಿ ಕತ್ತರಿಸಿದನು.

ಅಥಾಪರೇಣ ಭಲ್ಲೇನ ಮುಷ್ಟಿದೇಶೇ ಮಹದ್ಧನುಃ ।
ಚಿಚ್ಛೇದ ರಭಸೋ ಯುದ್ಧೇ ತವ ಪುತ್ರಸ್ಯ ಮಾರಿಷ ॥ ೨೨ ॥

ಎಲೈ ಶ್ರೇಷ್ಠನೇ, ವೇಗಶಾಲಿಯಾದ ಸಾತ್ಯಕಿಯು ಇನ್ನೊಂದು ಭಲ್ಲದಿಂದ ನಿನ್ನ ಪುತ್ರನ ದೊಡ್ಡ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು.

ವಿರಥೋ ವಿಧನುಷ್ಕಶ್ಚ ಸರ್ವಲೋಕೇಶ್ವರಃ ಪ್ರಭುಃ ।
ಆರುರೋಹ ರಥಂ ತೂರ್ಣಂ ಭಾಸ್ವರಂ ಕೃತವರ್ಮಣಃ ॥ ೨೩ ॥

ರಥವನ್ನೂ, ಧನುಸ್ಸನ್ನೂ ಕಳೆದುಕೊಂಡ ಸರ್ವಲೋಕೇಶ್ವರನಾದ, ಪ್ರಭುವಾದ ದುರ್ಯೋಧನನು ಶೀಘ್ರವಾಗಿ ಕೃತವರ್ಮನ ಪ್ರಕಾಶಮಾನವಾದ ರಥವನ್ನು ಏರಿದನು.

ದುರ್ಯೋಧನೇ ಪರಾವೃತ್ತೇ ಶೈನೇಯಸ್ತವ ವಾಹಿನೀಮ್ ।
ದ್ರಾವಯಾಮಾಸ ವಿಶಿಖೈರ್ನಿಶಾಮಧ್ಯೇ ವಿಶಾಂಪತೇ ॥ ೨೪ ॥

ಎಲೈ ರಾಜನೇ, ದುರ್ಯೋಧನನು ಹಿಂದಿರುಗುತ್ತಿರಲು ರಾತ್ರಿಯ ಮಧ್ಯಭಾಗದಲ್ಲಿ ಸಾತ್ಯಕಿಯು ತನ್ನ ಬಾಣಗಳಿಂದ ನಿನ್ನ ಸೈನ್ಯವನ್ನು ಚದುರಿಸಿದನು.

ಶಕುನಿಶ್ಚಾರ್ಜುನಂ ರಾಜನ್ ಪರಿವಾರ್ಯ ಸಮಂತತಃ ।
ರಥೈರನೇಕಸಾಹಸ್ರೈರ್ಗಜೈಶ್ಚೈವ ಸಹಸ್ರಶಃ ।
ತಥಾ ಹಯಸಹಸ್ರೈಶ್ಚ ತುಮುಲಂ ಸರ್ವತೋಽಕರೋತ್ ॥ ೨೫ ॥

ಎಲೈ ರಾಜನೇ, ಶಕುನಿಯು ಅನೇಕ ಸಹಸ್ರ ರಥಗಳಿಂದಲೂ, ಸಹಸ್ರಾರು ಗಜಗಳಿಂದಲೂ ಮತ್ತು ಹಾಗೆಯೇ ಸಹಸ್ರಾರು ಅಶ್ವಗಳಿಂದಲೂ ಅರ್ಜುನನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು ತೀವ್ರವಾದ ಯುದ್ಧವನ್ನು ಮಾಡಿದನು.

ತೇ ಮಹಾಸ್ತ್ರಾಣಿ ದಿವ್ಯಾನಿ ವಿಕಿರಂತೋಽರ್ಜುನಂ ಪ್ರತಿ ।
ಅರ್ಜುನಂ ಯೋಧಯಂತಿ ಸ್ಮ ಕ್ಷತ್ರಿಯಾಃ ಕಾಲಚೋದಿತಾಃ ॥ ೨೬ ॥

ಮೃತ್ಯುಚೋದಿತರಾದ ಆ ಕ್ಷತ್ರಿಯರು ದಿವ್ಯವಾದ ಮಹಾಸ್ತ್ರಗಳನ್ನು ಅರ್ಜುನನ ಮೇಲೆ ಪ್ರಯೋಗಿಸುತ್ತಾ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತಾನ್ಯರ್ಜುನಃ ಸಹಸ್ರಾಣಿ ರಥವಾರಣವಾಜಿನಾಮ್ ।
ಪ್ರತ್ಯವಾರಯದಾಯಸ್ತಃ ಪ್ರಕುರ್ವನ್ ವಿಪುಲಂ ಕ್ಷಯಮ್ ॥ ೨೭ ॥

ಕೋಪಗೊಂಡ ಅರ್ಜುನನು ಶತ್ರುಸೈನ್ಯದಲ್ಲಿ ವಿಸ್ತಾರವಾದ ಕ್ಷಯವನ್ನುಂಟು ಮಾಡುತ್ತಾ ಆ ಸಹಸ್ರ ಅಶ್ವ-ಗಜ-ರಥಗಳನ್ನು ತಡೆದನು.

ತತಸ್ತು ಸಮರೇ ಶೂರಃ ಶಕುನಿಃ ಸೌಬಲಸ್ತದಾ ।
ವಿವ್ಯಾಧ ನಿಶಿತೈರ್ಬಾಣೈರರ್ಜುನಂ ಪ್ರಹಸನ್ನಿವ ॥ ೨೮ ॥

ಆಗ ಶೂರನಾದ, ಸೌಬಲನಾದ ಶಕುನಿಯು ನಗುವವನಂತೆ ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಅರ್ಜುನನನ್ನು ಹೊಡೆದನು.

ಪುನಶ್ಚೈವ ಶತೇನಾಸ್ಯ ಸಂರುರೋಧ ಮಹಾರಥಮ್ ।
ತಮರ್ಜುನಸ್ತು ವಿಂಶತ್ಯಾ ವಿವ್ಯಾಧ ಯುಧಿ ಭಾರತ ॥ ೨೯ ॥

ಪುನಃ ನೂರು ಬಾಣಗಳನ್ನು ಪ್ರಯೋಗಿಸಿ ಮಹಾರಥನಾದ ಅರ್ಜುನನನ್ನು ತಡೆದನು. ಎಲೈ ಭಾರತನೇ, ಅರ್ಜುನನು ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಅಥೇತರಾನ್ ಮಹೇಷ್ವಾಸಾಂಸ್ತ್ರಿಭಿಸ್ತ್ರಿಭಿರವಿದ್ಧ್ಯತ ।
ಸಂವಾರ್ಯ ತಾನ್ ಬಾಣಗಣೈರ್ಯುಧಿ ರಾಜನ್ ಧನಂಜಯಃ ।
ಅವಧೀತ್ ತಾವಕಾನ್ ಯೋಧಾನ್ ವಜ್ರಪಾಣಿರಿವಾಸುರಾನ್ ॥೩೦॥

ಅನಂತರ ಉಳಿದ ಮಹಾಧನುರ್ಧಾರಿಗಳನ್ನು ಮೂರು-ಮೂರು ಬಾಣಗಳಿಂದ ಹೊಡೆದನು. ಎಲೈ ರಾಜನೇ, ಅರ್ಜುನನು ಆ ಮಹಾರಥರೆಲ್ಲರನ್ನೂ ತಡೆದು ವಜ್ರಪಾಣಿಯಾದ ಇಂದ್ರನು ಅಸುರರನ್ನು ಕೊಂದಂತೆ ನಿನ್ನ ಯೋಧರನ್ನು ಕೊಂದನು.

ಭುಜೈಶ್ಚಿನ್ನೈರ್ಮಹಾರಾಜ ಶರೀರೈಶ್ಚ ಸಹಸ್ರಶಃ ।
ಸಮಾಸ್ತೀರ್ಣಾ ಧರಾ ತತ್ರ ಬಭೌ ಪುಷ್ಪೈರಿವಾಚಿತಾ ॥ ೩೧ ॥

ಎಲೈ ಮಹಾರಾಜನೇ, ಕತ್ತರಿಸಲ್ಪಟ್ಟ ಸಹಸ್ರಾರು ಭುಜಗಳಿಂದಲೂ, ಸಹಸ್ರಾರು ಶರೀರಗಳಿಂದಲೂ ಹರಡಿದ ಭೂಮಿಯು ಪುಷ್ಪಗಳು ಹರಡಿದಂತೆ ಅಲ್ಲಿ ಶೋಭಿಸಿತು.

ಸ ವಿದ್ಧ್ವಾ ಶಕುನಿಂ ಭೂಯಃ ಪಂಚಭಿರ್ನತಪರ್ವಭಿಃ ।
ಉಲೂಕಂ ತ್ರಿಭಿರಾಜಘ್ನೇ ತ್ರಿಭಿರೇವ ಮಹಾಯಸೈಃ ॥ ೩೨ ॥

ಅರ್ಜುನನು ಶಕುನಿಯನ್ನು ಪುನಃ ಬಾಗಿದ ತುದಿಯುಳ್ಳ ಐದು ಬಾಣಗಳಿಂದ ಹೊಡೆದು, ಅವನ ಪುತ್ರನಾದ ಉಲೂಕನನ್ನು ಮೂರು ಕಬ್ಬಿಣದ ಬಾಣಗಳಿಂದ ಹೊಡೆದನು.

ತಮುಲೂಕಸ್ತಥಾ ವಿದ್ಧ್ವಾ ವಾಸುದೇವಮತಾಡಯತ್ ।
ನನಾದ ಚ ಮಹಾನಾದಂ ಪೂರಯನ್ ವಸುಧಾತಳಮ್ ॥ ೩೩ ॥

ಉಲೂಕನೂ ಸಹ ಹಾಗೆಯೇ ಅವನನ್ನು ಕಬ್ಬಿಣದಿಂದ ಮಾಡಿದ ಮೂರು ಬಾಣಗಳಿಂದ ಹೊಡೆದು, ಕೃಷ್ಣನನ್ನೂ ಹೊಡೆದು, ಭೂಮಿಯನ್ನು ತುಂಬುವಂತೆ ಮಹಾನಾದವನ್ನು ಮಾಡಿದನು.

ಅರ್ಜುನಸ್ತು ದ್ರುತಂ ಗತ್ವಾ ಶಕುನೇರ್ಧನುರಾಚ್ಛಿನತ್ ।
ನಿನ್ಯೇ ಚ ಚತುರೋ ವಾಹಾನ್ ಯಮಸ್ಯ ಸದನಂ ಪ್ರತಿ ॥ ೩೪ ॥

ಅರ್ಜುನನಾದರೋ ಶೀಘ್ರವಾಗಿ ಹೋಗಿ ಶಕುನಿಯ ಧನುಸ್ಸನ್ನು ಕತ್ತರಿಸಿ, ಅವನ ರಥದ ನಾಲ್ಕು ಅಶ್ವಗಳನ್ನು ಯಮಲೋಕಕ್ಕೆ ಕಳುಹಿಸಿದನು.

ತತೋ ರಥಾದವಪ್ಲುತ್ಯ ಸೌಬಲೋ ಭರತರ್ಷಭ ।
ಉಲೂಕಸ್ಯ ರಥಂ ತೂರ್ಣಮಾರುರೋಹ ವಿಶಾಂಪತೇ ॥ ೩೫ ॥

ಎಲೈ ರಾಜನೇ, ಭರತರ್ಷಭನೇ, ಆಗ ಶಕುನಿಯು ತನ್ನ ರಥದಿಂದ ಕೆಳಗೆ ಹಾರಿ ಶೀಘ್ರವಾಗಿ ಉಲೂಕನ ರಥವನ್ನು ಹತ್ತಿದನು.

ತಾವೇಕರಥಮಾರೂಢೌ ಪಿತಾಪುತ್ರೌ ಮಹಾರಥೌ ।
ಪಾರ್ಥಂ ಸಿಷಿಚತುರ್ಬಾಣೈರ್ಗಿರಿಂ ಮೇಘಾವಿವೋತ್ಥಿತೌ ॥ ೩೬ ॥

ಒಂದೇ ರಥವನ್ನು ಏರಿದ ಮಹಾರಥರಾದ ಆ ಪಿತಾ-ಪುತ್ರರು ಎದ್ದ ಮೋಡಗಳು ಪರ್ವತದ ಮೇಲೆ ಮಳೆಯನ್ನು ಸುರಿಸುವಂತೆ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತೌ ತು ವಿದ್ಧ್ವಾ ಮಹಾರಾಜ ಪಾಂಡವೋ ನಿಶಿತೈಃ ಶರೈಃ ।
ವಿದ್ರಾವಯಂಸ್ತವ ಚಮೂಂ ಶತಶೋ ವ್ಯಧಮಚ್ಚರೈಃ ॥ ೩೭ ॥

ಎಲೈ ಮಹಾರಾಜನೇ, ಪಾಂಡವನಾದ ಅರ್ಜುನನು ತೀಕ್ಷ್ಣವಾದ ಬಾಣಗಳಿಂದ ಅವರನ್ನು ಹೊಡೆದು ನಿನ್ನ ಸೈನ್ಯವನ್ನು ಚದುರಿಸುವವನಾಗಿ ನೂರಾರು ಬಾಣಗಳಿಂದ ನಿನ್ನ ಸೈನ್ಯವನ್ನು ನಾಶಗೊಳಿಸಿದನು.

ಅನಿಲೇನ ಯಥಾಭ್ರಾಣಿ ವಿಚ್ಛಿನ್ನಾನಿ ಸಮಂತತಃ ।
ವಿಚ್ಛಿನ್ನಾನಿ ತಥಾ ರಾಜನ್ ಬಲಾನ್ಯಾಸನ್ ವಿಶಾಂಪತೇ ॥ ೩೮॥

ಎಲೈ ರಾಜನೇ, ಬಲವಾದ ವಾಯುವಿನಿಂದ ಮೋಡಗಳು ಎಲ್ಲ ಕಡೆಗಳಲ್ಲಿಯೂ ಹರಡಿಹೋದಂತೆ ನಿನ್ನ ಸೈನ್ಯಗಳು ಒಡೆದುಹೋದವು.

ತದ್ಬಲಂ ಭರತಶ್ರೇಷ್ಠ ವಧ್ಯಮಾನಂ ತಥಾ ನಿಶಿ ।
ಪ್ರದುದ್ರಾವ ದಿಶಃ ಸರ್ವಾ ವೀಕ್ಷಮಾಣಂ ಭಯಾರ್ದಿತಮ್ ॥ ೩೯ ॥

ಎಲೈ ಭರತಶ್ರೇಷ್ಠನೇ, ಆ ರಾತ್ರಿಯಲ್ಲಿ ಹೀಗೆ ಹೊಡೆಯಲ್ಪಡುತ್ತಿದ್ದ ನಿನ್ನ ಸೈನ್ಯವು ಭಯದಿಂದ ಪೀಡಿತವಾಗಿ ಎಲ್ಲ ದಿಕ್ಕುಗಳನ್ನೂ ನೋಡುತ್ತಾ ಓಡಿಹೋಯಿತು.

ಉತ್ಸೃಜ್ಯ ವಾಹಾನ್ ಸಮರೇ ಚೋದಯಂತಸ್ತಥಾಪರೇ ।
ಸಂಭ್ರಾಂತಾಃ ಪರ್ಯಧಾವಂತ ತಸ್ಮಿಂಸ್ತಮಸಿ ದಾರುಣೇ ॥ ೪೦ ॥

ಕೆಲವರು ವಾಹನವನ್ನು ಬಿಟ್ಟರು, ಕೆಲವರು ರಣರಂಗದಲ್ಲಿ ತಮ್ಮ ವಾಹನಗಳನ್ನು ಪ್ರಚೋದಿಸುತ್ತಾ ದಿಗ್ಭ್ರಾಂತರಾಗಿ ಆ ದಾರುಣವಾದ ಕತ್ತಲೆಯಲ್ಲಿ ಓಡಿಹೋದರು.

ವಿಜಿತ್ಯ ಸಮರೇ ಯೋಧಾಂಸ್ತಾವಕಾನ್ ಭರತರ್ಷಭ ।
ದಧ್ಮತುರ್ಮುದಿತೌ ಶಂಖೌ ವಾಸುದೇವಧನಂಜಯೌ ॥ ೪೧ ॥

ಎಲೈ ಭರತಶ್ರೇಷ್ಠನೇ, ವಾಸುದೇವಾರ್ಜುನರು ನಿನ್ನ ಯೋಧರನ್ನು ಯುದ್ಧದಲ್ಲಿ ಗೆದ್ದು, ಸಂತೋಷಗೊಂಡು ತಮ್ಮ ಶಂಖವನ್ನು ಊದಿದರು.

ಧೃಷ್ಟದ್ಯುಮ್ನೋ ಮಹಾರಾಜ ದ್ರೋಣಂ ವಿದ್ಧ್ವಾ ತ್ರಿಭಿಃ ಶರೈಃ ।
ಚಿಚ್ಛೇದ ಧನುಷಸ್ತೂರ್ಣಂ ಜ್ಯಾಂ ಶರೇಣ ಶಿತೇನ ಹ ॥ ೪೨ ॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನನು ಮೂರು ಬಾಣಗಳಿಂದ ದ್ರೋಣರನ್ನು ಹೊಡೆದು ಶೀಘ್ರವಾಗಿ ಒಂದು ನಿಶಿತವಾದ ಬಾಣದಿಂದ ಅವರ ಧನುಸ್ಸಿನ ಹೆದೆಯನ್ನು ಕತ್ತರಿಸಿದನು.

ತನ್ನಿಧಾಯ ಧನುರ್ನಿರ್ಡೇ ದ್ರೋಣಃ ಕ್ಷತ್ರಿಯಮರ್ದನಃ ।
ಆದದೇಽನ್ಯದ್ಧನುಃ ಶೂರೋ ವೇಗವತ್ ಸಾರವತ್ತರಮ್ ॥ ೪೩ ॥

ಕ್ಷತ್ರಿಯಮರ್ದನರೂ, ಶೂರರೂ ಆದ ದ್ರೋಣರು ಕತ್ತರಿಸಿದ ಆ ಧನುಸ್ಸನ್ನು ರಥದಲ್ಲಿಟ್ಟು, ವೇಗಶಾಲಿಯೂ, ಮೊದಲಿಗಿಂತಲೂ ದೃಢತರವೂ ಆದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡರು.

ಧೃಷ್ಟದ್ಯುಮ್ನಂ ತತೋ ದ್ರೋಣೋ ವಿದ್ಧ್ವಾ ಸಪ್ತಭಿರಾಶುಗೈಃ ।
ಸಾರಥಿಂ ಪಂಚಭಿರ್ಬಾಣೈ ರಾಜನ್ ವಿವ್ಯಾಧ ಸಂಯುಗೇ ॥ ೪೪ ॥

ಎಲೈ ರಾಜನೇ, ಅನಂತರ ದ್ರೋಣರು ಶೀಘ್ರಗಾಮಿಗಳಾದ ಏಳು ಬಾಣಗಳಿಂದ ಧೃಷ್ಟದ್ಯುಮ್ನನನ್ನು ಹೊಡೆದು ರಣರಂಗದಲ್ಲಿ ಐದು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದರು.

ತಂ ನಿವಾರ್ಯ ಶರೈಸ್ತೂರ್ಣಂ ಧೃಷ್ಟದ್ಯುಮ್ನೋ ಮಹಾರಥಃ ।
ವ್ಯಧಮತ್ ಕೌರವೀಂ ಸೇನಾಂ ಶತಶೋಽಥ ಸಹಸ್ರಶಃ ॥ ೪೫ ॥

ಮಹಾರಥನಾದ ಧೃಷ್ಟದ್ಯುಮ್ನನು ತನ್ನ ಬಾಣಗಳಿಂದ ಅವರನ್ನು ಶೀಘ್ರವಾಗಿ ತಡೆದು, ಕೌರವಸೈನ್ಯವನ್ನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ನಾಶಪಡಿಸಿದನು.

ವಧ್ಯಮಾನೇ ಬಲೇ ತಸ್ಮಿಂಸ್ತವ ಪುತ್ರಸ್ಯ ಮಾರಿಷ ।
ಪ್ರಾವರ್ತತ ನದೀ ಘೋರಾ ಶೋಣಿತೌಘತರಂಗಿಣೀ ॥ ೪೬ ॥

ಉಭಯೋಃ ಸೇನಯೋರ್ಮಧ್ಯೇ ನರಾಶ್ವದ್ವಿಪವಾಹಿನೀ ।
ಯಥಾ ವೈತರಣೀ ರಾಜನ್ ಯಮರಾಷ್ಟ್ರಪುರಂ ಪ್ರತಿ ॥ ೪೭ ॥

ಎಲೈ ಶ್ರೇಷ್ಠನೇ, ರಾಜನೇ, ನಿನ್ನ ಪುತ್ರನ ಸೈನ್ಯವು ಹಾಗೆ ವಧಿಸಲ್ಪಡುತ್ತಿರಲು ಎರಡು ಸೈನ್ಯಗಳ ಮಧ್ಯದಲ್ಲಿ ಮೃತರಾದ ನರ-ಅಶ್ವ-ಗಜಗಳನ್ನು ಕೊಚ್ಚಿಕೊಂಡು ಹೋಗುವ, ಯಮಪಟ್ಟಣದ ವೈತರಣಿ ನದಿಯಂತಿರುವ ಘೋರವಾದ, ರಕ್ತಪ್ರವಾಹದ ಅಲೆಗಳುಳ್ಳ ನದಿಯು ಹರಿಯಿತು.

ದ್ರಾವಯಿತ್ವಾ ತು ತತ್ ಸೈನ್ಯಂ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ಅತ್ಯರಾಜತ ತೇಜಸ್ವೀ ಶಕ್ರೋ ದೇವಗಣೇಷ್ವಿವ ॥ ೪೮ ॥

ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನು ಆ ನಿನ್ನ ಸೈನ್ಯವನ್ನು ಓಡಿಸಿ ತೇಜಸ್ವಿಯಾಗಿ ದೇವಗಣಗಳಲ್ಲಿ ಇಂದ್ರನಂತೆ ಬಹಳವಾಗಿ ಶೋಭಿಸಿದನು.

ಅಥ ದಧ್ಮುರ್ಮಹಾಶಂಖಾನ್ ಧೃಷ್ಟದ್ಯುಮ್ನಶಿಖಂಡಿನೌ ।
ಯಮೌ ಚ ಯುಯುಧಾನಶ್ಚ ಪಾಂಡವಶ್ಚ ವೃಕೋದರಃ ॥ ೪೯ ॥

ಅನಂತರ ಧೃಷ್ಟದ್ಯುಮ್ನ-ಶಿಖಂಡಿಗಳೂ, ನಕುಲ-ಸಹದೇವರೂ, ಸಾತ್ಯಕಿಯೂ, ಪಾಂಡವನಾದ ವೃಕೋದರನೂ ತಮ್ಮ ಶಂಖಗಳನ್ನು ಊದಿದರು.

ಜಿತ್ವಾ ರಥಸಹಸ್ರಾಣಿ ತಾವಕಾನಾಂ ಮಹಾರಥಾಃ ।
ಸಿಂಹನಾದರವಾಂಶ್ಚಕ್ರುಃ ಪಾಂಡವಾ ಜಿತಕಾಶಿನಃ ॥ ೫೦ ॥

ಪಶ್ಯತಸ್ತವ ಪುತ್ರಸ್ಯ ಕರ್ಣಸ್ಯ ಚ ಮದೋತ್ಕಟಾಃ ।
ತಥಾ ದ್ರೋಣಸ್ಯ ಶೂರಸ್ಯ ದ್ರೌಣೇಶ್ಚೈವ ವಿಶಾಂಪತೇ ॥ ೫೧ ॥

ಎಲೈ ರಾಜನೇ, ಮಹಾರಥರಾದ ಪಾಂಡವರು ನಿನ್ನ ಪುತ್ರನೂ ಮತ್ತು ಕರ್ಣನೂ, ಶೂರನಾದ ದ್ರೋಣರೂ ಮತ್ತು ಅಶ್ವತ್ಥಾಮರೂ ನೋಡುತ್ತಿರುವಂತೆಯೇ ಮದೋತ್ಕಟರಾಗಿ ಸಹಸ್ರಾರು ರಥರನ್ನು ಗೆದ್ದು ಜಯವನ್ನು ಹೊಂದಿ ಸಿಂಹನಾದವನ್ನು ಮಾಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಚತುರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆಂಟನೆಯ ಅಧ್ಯಾಯ

ದ್ರೋಣ-ಕರ್ಣರನ್ನು ಕುರಿತು ದುರ್ಯೋಧನನ ನಿಂದಾವಾಕ್ಯಗಳು.
ಅನಂತರದಲ್ಲಿ ಘೋರವಾದ ಸಂಗ್ರಾಮ.

ಸಂಜಯಃ

ವಿದ್ರುತಂ ಸ್ವಬಲಂ ದೃಷ್ಟ್ವಾ ವಧ್ಯಮಾನಂ ಮಹಾತ್ಮಭಿಃ ।
ಕ್ರೋಧೇನ ಮಹತಾऽऽವಿಷ್ಟಃ ಪುತ್ರಸ್ತವ ವಿಶಾಂಪತೇ ॥ ೧ ॥

ಅಭ್ಯೇತ್ಯ ಸಹಸಾ ಕರ್ಣಂ ದ್ರೋಣಂ ಚ ಜಯತಾಂ ವರಮ್ ।
ಅಮರ್ಷವಶಮಾಪನ್ನೋ ವಾಕ್ಯಜ್ಞೋ ವಾಕ್ಯಮಬ್ರವೀತ್ ॥ ೨ ॥

ಸಂಜಯ– ತನ್ನ ಸೈನ್ಯವು ಮಹಾತ್ಮರಾದ ಪಾಂಡವರಿಂದ ಭಗ್ನವಾಗುತ್ತಿರುವುದನ್ನು ನೋಡಿ ಎಲೈ ರಾಜನೇ, ಬಹಳ ಕ್ರೋಧದಿಂದ ಕೂಡಿದ ನಿನ್ನ ಪುತ್ರನು ಜಯಶೀಲರಲ್ಲಿ ಶ್ರೇಷ್ಠರಾದ ಕರ್ಣನನ್ನೂ ಮತ್ತು ದ್ರೋಣರನ್ನೂ ಸಮೀಪಿಸಿ ಮಾತುಬಲ್ಲ ಅವನು ಮಾತನಾಡಿದನು.

ಭವದ್ಭ್ಯಾಮಿಹ ಸಂಗ್ರಾಮೋ ಕ್ರುದ್ಧಾಭ್ಯಾಂ ಸಂಪ್ರವರ್ತಿತಃ ।
ಆಹವೇ ನಿಹತಂ ದೃಷ್ಟ್ವಾ ಸೈಂಧವಂ ಸವ್ಯಸಾಚಿನಾ ॥ ೩ ॥

ಯುದ್ಧದಲ್ಲಿ ಅರ್ಜುನನಿಂದ ಸೈಂಧವನು ಹತನಾದುದನ್ನು ನೋಡಿ ಕೋಪಗೊಂಡ ನೀವಿಬ್ಬರೂ ಇಲ್ಲಿ ಯುದ್ಧವನ್ನು ಪ್ರಾರಂಭಿಸಿದಿರಿ.

ನಿಹನ್ಯಮಾನಾಂ ಪಾಂಡೂನಾಂ ಬಲೇನ ಮಮ ವಾಹಿನೀಮ್ ।
ಭೂತ್ವಾ ತದ್ವಿಜಯೇ ಶಕ್ತಾವಶಕ್ತಾವಿವ ಪಶ್ಯತಃ ॥ ೪ ॥

ಪಾಂಡವರ ಸೈನ್ಯದಿಂದ ಹತವಾಗುತ್ತಿರುವ ನನ್ನ ಸೈನ್ಯವನ್ನು ನೋಡುತ್ತಾ ನೀವು ಗೆಲ್ಲಲು ಶಕ್ತರಾದರೂ ಅಶಕ್ತರಂತೆ ಸುಮ್ಮನಿದ್ದೀರಿ.

ಯದ್ಯಹಂ ಭವತೋಸ್ತ್ಯಾಜ್ಯೋ ನ ವಾಚ್ಯೋಽಸ್ಮಿ ತದೈವ ಹಿ ।
ಆವಾಂ ಪಾಂಡುಸುತಾನ್ ಸಂಖ್ಯೇ ಜೇಷ್ಯಾವ ಇತಿ ಮಾನದೌ ॥ ೫ ॥

ನಾನು ನಿಮ್ಮಿಂದ ಪರಿತ್ಯಾಜ್ಯನಾಗಿದ್ದರೆ ಮಾನದರಾದ ನೀವು ನಾವಿಬ್ಬರೂ ಪಾಂಡು ಸುತರನ್ನು ಯುದ್ಧದಲ್ಲಿ ಗೆಲ್ಲುವೆವು ಎಂದು ಆಗಲೇ ಹೇಳಬಾರದಾಗಿದ್ದಿತು.

ತದೈವಾಹಂ ವಚಃ ಶ್ರುತ್ವಾ ಭವದ್ಭ್ಯಾಮನು ಸಮ್ಮತಮ್ ।
ಕೃತವಾನ್ ಪಾಂಡವೈಃ ಸಾರ್ಧಂ ವೈರಂ ಯೋಧವಿನಾಶನಮ್ ॥ ೬ ॥

ನಿಮ್ಮ ಮಾತುಗಳನ್ನು ಕೇಳಿ ನಾನು ನಿಮ್ಮ ಸಮ್ಮತಿಯಂತೆ ಪಾಂಡವರ ಜೊತೆಯಲ್ಲಿ ಯೋಧ ವಿನಾಶಕರವಾದ ವೈರವನ್ನು ಮಾಡಿದೆನು.

ಯದಿ ನಾಹಂ ಪರಿತ್ಯಾಜ್ಯೋ ಭವದ್ಭ್ಯಾಂ ಪುರುಷರ್ಷಭೌ ।
ಯುದ್ಧ್ಯೇತಾಮನುರೂಪೇಣ ವಿಕ್ರಮೇಣ ಸುವಿಕ್ರಮೌ ॥ ೭ ॥

ಎಲೈ ಪುರುಷಶ್ರೇಷ್ಠರೇ, ನಾನು ನಿಮ್ಮಿಂದ ಪರಿತ್ಯಾಜ್ಯನಲ್ಲದಿದ್ದರೆ ಬಹಳ ವಿಕ್ರಮಶಾಲಿಗಳಾದ ನೀವು ನಿಮಗೆ ಅನುರೂಪವಾದ ಪರಾಕ್ರಮದಿಂದ ಯುದ್ಧವನ್ನು ಮಾಡಿ (ಎಂದು ಹೇಳಿದನು).

ಸಂಜಯಃ

ವಾಕ್ಪತೋದೇನ ತೌ ವೀರೌ ಪ್ರಣುನ್ನೌ ತನಯೇನ ತೇ ।
ಪ್ರಾವರ್ತಯೇತಾಂ ತೌ ಯುದ್ಧಂ ಘಟ್ಟಾವಿವ ಪನ್ನಗೌ ॥ ೮ ॥

ಸಂಜಯ– ನಿನ್ನ ಪುತ್ರನ ವಾಕ್ಯದ ಚಾವಟಿಗಳಿಂದ ಹೀಗೆ ಹಿಂಸಿಸಲ್ಪಟ್ಟ ಆ ವೀರರು ಕೋಲಿನಿಂದ ಹೊಡೆಯಲ್ಪಟ್ಟ ಸರ್ಪಗಳಂತೆ ಯುದ್ಧವನ್ನು ಪ್ರಾರಂಭಿಸಿದರು.

ತತಸ್ತೌ ರಥಿನಾಂ ಶ್ರೇಷ್ಠೌ ಸರ್ವಲೋಕಧನುರ್ಧರೌ ।
ಶೈನೇಯಪ್ರಮುಖಾನ್ ಪಾರ್ಥಾನಭಿದುದ್ರುವತೂ ರಣೇ ॥ ೯ ॥

ಆಗ ಸರ್ವಲೋಕ ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಮಹಾರಥರಾದ ಅವರಿಬ್ಬರೂ ಸಾತ್ಯಕಿಯೇ ಮೊದಲಾದ ಪಾಂಡವರನ್ನು ರಣರಂಗದಲ್ಲಿ ಸಮೀಪಿಸಿದರು.

ತಥೈವ ಸಹಿತಾಃ ಪಾರ್ಥಾಃ ಸ್ವೇನ ಸೈನ್ಯೇನ ಸಂವೃತಾಃ ।
ಅಭ್ಯವರ್ತಂತ ತೌ ವೀರೌ ನರ್ದಮಾನೌ ಮುಹುರ್ಮುಹುಃ ॥ ೧೦ ॥

ಹಾಗೆಯೇ ತಮ್ಮ ಸೈನ್ಯದಿಂದ ಒಡಗೂಡಿದ ಪಾಂಡವರೂ ಸಹ ಪುನಃ ಪುನಃ ಗರ್ಜನೆಯನ್ನು ಮಾಡುತ್ತಾ ವೀರರಾದ ಅವರಿಬ್ಬರ ಮೇಲೆ ಎರಗಿದರು.

ಅಥ ದ್ರೋಣೋ ಮಹೇಷ್ವಾಸೋ ದಶಭಿಃ ಶಿನಿಪುಂಗವಮ್ ।
ಅವಿಧ್ಯತ್ ತ್ವರಿತಂ ಕ್ರುದ್ಧಃ ಸರ್ವಶಸ್ತ್ರಭೃತಾಂ ವರಃ ॥ ೧೧ ॥

ಅನಂತರ ಮಹಾಧನುರ್ಧಾರಿಗಳೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರೂ ಆದ ದ್ರೋಣರು ಕೋಪಗೊಂಡು ಶೀಘ್ರವಾಗಿ ಹತ್ತು ಬಾಣಗಳಿಂದ ಸಾತ್ಯಕಿಯನ್ನು ಹೊಡೆದರು.

ಕರ್ಣಶ್ಚ ದಶಭಿರ್ಬಾಣೈಃ ಪುತ್ರಶ್ಚ ತವ ಸಪ್ತಭಿಃ ।
ದಶಭಿರ್ವೃಷಸೇನಶ್ಚ ಸೌಬಲಶ್ಚಾಪಿ ಸಪ್ತಭಿಃ ।
ಏತೇ ಕೌರವ ಸಂಕ್ರಂದೇ ಶೈನೇಯಂ ಪರ್ಯವಾರಯನ್ ॥ ೧೨ ॥

ಎಲೈ ಕೌರವನೇ, ಕರ್ಣನು ಹತ್ತು ಬಾಣಗಳಿಂದಲೂ, ನಿನ್ನ ಪುತ್ರನು ಏಳು ಬಾಣಗಳಿಂದಲೂ, ವೃಷಸೇನನು ಹತ್ತು ಬಾಣಗಳಿಂದಲೂ, ಶಕುನಿಯು ಏಳು ಬಾಣಗಳಿಂದಲೂ ಹೊಡೆದು ಯುದ್ಧದಲ್ಲಿ ಸಾತ್ಯಕಿಯನ್ನು ಸುತ್ತಲೂ ತಡೆದರು.

ದೃಷ್ಟ್ವಾ ಚ ಸಮರೇ ದ್ರೋಣಂ ನಿಘ್ನಂತಂ ಪಾಂಡವೀಂ ಚಮೂಮ್ ।
ವಿವ್ಯಧುಃ ಸೋಮಕಾಸ್ತೂರ್ಣಂ ಸಮಂತಾಚ್ಛರವೃಷ್ಟಿಭಿಃ ॥ ೧೩ ॥

ದ್ರೋಣರು ಪಾಂಡವರ ಸೇನೆಯನ್ನು ರಣರಂಗದಲ್ಲಿ ಕೊಲ್ಲುತ್ತಿರುವುದನ್ನು ನೋಡಿದ ಸೋಮಕರು ಶೀಘ್ರವಾಗಿ ಬಾಣಗಳ ಮಳೆಯಿಂದ ಎಲ್ಲ ಕಡೆಗಳಿಂದಲೂ ಅವರನ್ನು ಹೊಡೆದರು.

ತತೋ ದ್ರೋಣೋऽಹರತ್ ಪ್ರಾಣಾನ್ ಕ್ಷತ್ರಿಯಾಣಾಂ ವಿಶಾಂಪತೇ ।
ರಶ್ಮಿಭಿರ್ಭಾಸ್ಕರೋ ರಾಜಂಸ್ತಮಸಾಮಿವ ಭಾರತ ॥ ೧೪ ॥

ಎಲೈ ರಾಜನೇ, ಭಾರತನೇ, ಆಗ ದ್ರೋಣರು ಸೂರ್ಯನು ತನ್ನ ಕಿರಣಗಳಿಂದ ಕತ್ತಲೆಯನ್ನು ನಾಶಮಾಡಿದಂತೆ ಕ್ಷತ್ರಿಯರ ಪ್ರಾಣಗಳನ್ನು ವಿನಾಶಗೊಳಿಸಿದರು.

ದ್ರೋಣೇನ ವಧ್ಯಮಾನಾನಾಂ ಪಾಂಚಾಲಾನಾಂ ವಿಶಾಂಪತೇ ।
ಶುಶ್ರುವೇ ತುಮುಲಃ ಶಬ್ದಃ ಕ್ರೋಶತಾಮಿತರೇತರಮ್ ॥ ೧೫ ॥

ಎಲೈ ರಾಜನೇ, ದ್ರೋಣರಿಂದ ಹೊಡೆಯಲ್ಪಡುತ್ತಿದ್ದ ಪಾಂಚಾಲರ ಪರಸ್ಪರವಾಗಿ ಕಿರುಚುವ ತೀವ್ರವಾದ ನಾದವು ಕೇಳಿಬಂದಿತು.

ಪುತ್ರಾನನ್ಯೇ ಪಿತೄನನ್ಯೇ ಭ್ರಾತೄನನ್ಯೇ ಚ ಮಾತುಲಾನ್ ।
ಭಾಗಿನೇಯಾನ್ ವಯಸ್ಯಾಂಶ್ಚ ತಥಾ ಸಂಬಂಧಿಬಾಂಧವಾನ್ ।
ಉತ್ಸೃಜ್ಯೋತ್ಸೃಜ್ಯ ಗಚ್ಛಂತಿ ತ್ವರಿತಾ ಜೀವಿತೇಪ್ಸವಃ ॥ ೧೬ ॥

ಕೆಲವರು ಪುತ್ರರನ್ನೂ, ಕೆಲವರು ಪಿತೃಗಳನ್ನೂ, ಕೆಲವರು ಸಹೋದರರನ್ನೂ, ಕೆಲವರು ಸೋದರಮಾವಂದಿರನ್ನೂ, ಕೆಲವರು ಸೋದರಳಿಯಂದಿರನ್ನೂ, ಕೆಲವರು ಸ್ನೇಹಿತರನ್ನೂ, ಇನ್ನು ಕೆಲವರು ಸಂಬಂಧಿ ಬಾಂಧವರನ್ನೂ ಬಿಟ್ಟು ಬಿಟ್ಟು ಪ್ರಾಣವನ್ನು ಉಳಿಸಿಕೊಳ್ಳುವ ಆಸೆಯಿಂದ ಶೀಘ್ರವಾಗಿ ಓಡಿಹೋದರು.

ಅಪರೇ ಮೋಹಿತಾ ಮೋಹಾತ್ ತಮೇವಾಭಿಮುಖಾ ಯಯುಃ ।
ಪಾಂಡವಾನಾಂ ರಣೇ ಯೋಧಾಃ ಪರಲೋಕಂ ತಥಾಪರೇ ॥ ೧೭ ॥

ಇನ್ನು ಕೆಲವರು ಭ್ರಾಂತಿಗೆ ಒಳಗಾಗಿ ದ್ರೋಣರಿಗೇ ಅಭಿಮುಖವಾಗಿ ಹೋದರು. ಇನ್ನು ಕೆಲವು ಪಾಂಡವ ಯೋಧರು ಪರಲೋಕಕ್ಕೆ ಹೋದರು.

ಸಾ ತಥಾ ಪಾಂಡವೀ ಸೇನಾ ವಧ್ಯಮಾನಾ ಮಹಾತ್ಮಭಿಃ ।
ನಿಶಿ ಸಂಪ್ರಾದ್ರವದ್ ರಾಜನುತ್ಸೃಜ್ಯೋಲ್ಕಾಃ ಸಹಸ್ರಶಃ ॥ ೧೮ ॥

ಪಶ್ಯತೋ ಭೀಮಸೇನಸ್ಯ ವಿಜಯಸ್ಯಾಚ್ಯುತಸ್ಯ ಚ ।
ಯಮಯೋರ್ಧರ್ಮಪುತ್ರಸ್ಯ ಪಾರ್ಷತಸ್ಯ ಚ ಪಶ್ಯತಃ ॥ ೧೯ ॥

ಎಲೈ ರಾಜನೇ, ಮಹಾತ್ಮರಿಂದ ಹೊಡೆಯಲ್ಪಟ್ಟ ಪಾಂಡವರ ಆ ಸೇನೆಯು ರಾತ್ರಿಯ ಕಾಲದಲ್ಲಿ ತಮ್ಮ ಪಂಜುಗಳನ್ನು ಅಲ್ಲಲ್ಲಿಯೇ ಬಿಟ್ಟು ಭೀಮಸೇನನು, ಅರ್ಜುನನು, ಕೃಷ್ಣನು, ನಕುಲ-ಸಹದೇವರು, ಧರ್ಮಪುತ್ರನು ಮತ್ತು ಧೃಷ್ಟದ್ಯುಮ್ನನು ನೋಡುತ್ತಿರುವಂತೆಯೇ ಓಡಿಹೋಯಿತು.

ತಮಸಾ ಸಂವೃತೇ ಲೋಕೇ ನ ಪ್ರಾಜ್ಞಾಯತ ಕಿಂಚನ ।
ಕೌರವಾಣಾಂ ಪ್ರಕಾಶೇನ ದೃಶ್ಯಂತೇ ತು ದ್ರುತಾಃ ಪರೇ ॥ ೨೦ ॥

ಪ್ರಪಂಚವು ಕತ್ತಲೆಯಿಂದ ತುಂಬಿರಲು ಯಾವುದೂ ತಿಳಿಯಲಿಲ್ಲ. ಕೌರವರು ಮಾಡಿದ ದೀಪದ ಪ್ರಕಾಶದಿಂದ ಪಾಂಡವರ ಯೋಧರು ಓಡುವುದು ಕಂಡು ಬರುತ್ತಿದ್ದಿತು.

ದ್ರವಮಾಣಂ ತು ತತ್ ಸೈನ್ಯಂ ದ್ರೋಣಕರ್ಣೌ ಮಹಾರಥೌ ।
ಜಘ್ನತುಃ ಪೃಷ್ಠತೋ ರಾಜನ್ ಕಿರಂತೌ ಸಾಯಕಾನ್ ಬಹೂನ್ ॥೨೧॥

ಎಲೈ ರಾಜನೇ, ಮಹಾರಥರಾದ ದ್ರೋಣ-ಕರ್ಣರು ಓಡುತ್ತಿರುವ ಸೈನ್ಯವನ್ನು ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ಹಿಂಭಾಗದಿಂದ ಹೊಡೆದರು.

ಪಾಂಚಾಲೇಷು ಪ್ರಭಗ್ನೇಷು ದೀರ್ಯಮಾಣೇಷು ಸರ್ವಶಃ ।
ಜನಾರ್ದನೋ ದೀನಮನಾಃ ಪ್ರತ್ಯಭಾಷತ ಫಲ್ಗುನಮ್ ॥ ೨೨ ॥

ಪಾಂಚಾಲರು ಭಗ್ನಗೊಂಡು ಸೈನ್ಯವು ಎಲ್ಲಕಡೆಯಲ್ಲಿಯೂ ಚದುರಿಹೋಗುತ್ತಿರಲು ಕೃಷ್ಣನು ದೀನಮನಸ್ಸಿನಿಂದ ಕೂಡಿದವನಾಗಿ ಅರ್ಜುನನನ್ನು ಕುರಿತು ಹೇಳಿದನು.

ದ್ರೋಣಕರ್ಣೌ ಮಹೇಷ್ವಾಸಾವೇತೌ ಪಾರ್ಷತಸಾತ್ಯಕ ।
ಪಾಂಚಾಲಾಂಶ್ಚೈವ ಸಹಿತೌ ಜಘ್ನತುಃ ಸಾಯಕೈರ್ಭೃಶಮ್ ॥ ೨೩ ॥

ಮಹಾಧನುರ್ಧಾರಿಗಳಾದ ದ್ರೋಣ-ಕರ್ಣರು ಸಹಿತರಾಗಿ ತಮ್ಮ ಬಾಣಗಳಿಂದ ಧೃಷ್ಟದ್ಯುಮ್ನ-ಸಾತ್ಯಕಿಯರನ್ನು ಮತ್ತು ಪಾಂಚಾಲರನ್ನು ತೀವ್ರವಾಗಿ ಹೊಡೆಯುತ್ತಿದ್ದಾರೆ.

ಏತಯೋಃ ಶರವರ್ಷೇಣ ಪ್ರಭಗ್ನಾ ನೋ ಮಹಾರಥಾಃ ।
ವಾರ್ಯಮಾಣಾಪಿ ಕೌಂತೇಯ ಪೃತನಾ ನಾವತಿಷ್ಠತೇ ॥ ೨೪ ॥

ಎಲೈ ಕೌಂತೇಯನೇ, ಇವರಿಬ್ಬರ ಶರವೃಷ್ಟಿಯಿಂದ ನಮ್ಮ ಮಹಾರಥರು ಭಗ್ನಗೊಂಡಿದ್ದಾರೆ. ತಡೆದರೂ ನಮ್ಮ ಸೈನ್ಯವು ನಿಲ್ಲುತ್ತಿಲ್ಲ.

ಏತಾವಾವಾಂ ಸರ್ವಸೈನ್ಯೈರ್ವ್ಯೂಢೈಃ ಸಮ್ಯಗುದಾಯುಧೈಃ ।
ದ್ರೋಣಂ ಚ ಸೂತಪುತ್ರಂ ಚ ಪ್ರಯತಾವಃ ಪ್ರಬಾಧಿತುಮ್ ॥ ೨೫ ॥

ನಾವಿಬ್ಬರೂ ಶ್ರೇಷ್ಠವಾದ ಆಯುಧವನ್ನು ಹಿಡಿದ ನಮ್ಮ ಸೈನ್ಯದ ಜೊತೆಯಲ್ಲಿ ಸೇರಿ ದ್ರೋಣರನ್ನು ಮತ್ತು ಕರ್ಣನನ್ನು ಬಾಧಿಸಲು ಪ್ರಯತ್ನವನ್ನು ಮಾಡೋಣ.

ಏತೌ ಹಿ ಬಲಿನೌ ಶೂರೌ ಕೃತಾಸ್ತ್ರೌ ಜಿತಕಾಶಿನೌ ।
ಉಪೇಕ್ಷಿತೌ ಬಲಂ ಕ್ಷುದ್ರೌ ನಾಶಯೇತಾಂ ನಿಶಾಮಿಮಾಮ್ ।
ಏಷ ಭೀಮೋಽಭಯಾತ್ಯುಗ್ರಃ ಪುನರಾವರ್ತ್ಯ ವಾಹಿನೀಮ್ ॥ ೨೬ ॥

ಇವರಿಬ್ಬರೂ ಜಯವನ್ನು ಕಂಡವರು, ಅಸ್ತ್ರಕೌಶಲವುಳ್ಳವರು, ಶೂರರಾದವರು ಮತ್ತು ಬಲಿಷ್ಠರಾದವರು. ಇವರನ್ನು ಉಪೇಕ್ಷೆ ಮಾಡಿದರೆ ಕ್ಷುದ್ರರಾದ ಇವರು ಈ ರಾತ್ರಿಯಲ್ಲಿ ನಮ್ಮ ಸೈನ್ಯವನ್ನು ನಾಶಮಾಡಿಯಾರು. ಈ ಉಗ್ರನಾದ ಭೀಮಸೇನನು ನಮ್ಮ ಸೈನ್ಯವನ್ನು ಹಿಂದಿರುಗಿಸಿ ಈ ಕಡೆಯಲ್ಲಿಯೇ ಬರುತ್ತಿದ್ದಾನೆ (ಎಂದು ಹೇಳಿದನು).

ವೃಕೋದರಂ ತಥಾऽऽಯಾಂತಂ ದೃಷ್ಟ್ವಾ ತತ್ರ ಜನಾರ್ದನಃ ।
ಪುನರೇವಾಬ್ರವೀದ್ ರಾಜನ್ ಹರ್ಷಯನ್ನಿವ ಪಾಂಡವಮ್ ॥ ೨೭ ॥

ಭೀಮಸೇನನು ಹಾಗೆ ಬರುತ್ತಿರುವುದನ್ನು ನೋಡಿ, ಎಲೈ ರಾಜನೇ, ಜನಾರ್ದನನು ಅರ್ಜುನನನ್ನು ಹರ್ಷಪಡಿಸುತ್ತಾ ಪುನಃ ಮಾತನಾಡಿದನು.

ಏಷ ಭೀಮೋ ರಣಶ್ಲಾಘೀ ವೃತಃ ಸೋಮಕಪಾಂಡವೈಃ ।
ರುಷಿತೋऽಭ್ಯೇತಿ ವೇಗೇನ ದ್ರೋಣಕರ್ಣೌ ಮಹಾಬಲೌ ॥ ೨೮ ॥

ರಣಶ್ಲಾಘಿಯಾದ ಈ ಭೀಮಸೇನನು ಸೋಮಕ-ಪಾಂಡವ ಸೈನ್ಯದಿಂದ ಕೂಡಿ ಕೋಪಗೊಂಡು ವೇಗದಿಂದ ಮಹಾಬಲರಾದ ದ್ರೋಣ-ಕರ್ಣರ ಕಡೆಗೆ ಬರುತ್ತಿದ್ದಾನೆ.

ಏತೇನ ಸಹಿತೋ ಯುದ್ಧ್ಯ ಪಾಂಚಾಲೈಶ್ಚ ಮಹಾರಥೈಃ ।
ಆಶ್ವಾಸನಾರ್ಥಂ ಸರ್ವೇಷಾಂ ಸೈನ್ಯಾನಾಂ ಪಾಂಡುನಂದನ ॥ ೨೯ ॥

ಎಲೈ ಪಾಂಡುನಂದನನೇ, ಎಲ್ಲ ಸೈನ್ಯಗಳಲ್ಲಿಯೂ ಭರವಸೆಯನ್ನು ಕೊಡಲು ಭೀಮನಿಂದಲೂ ಮತ್ತು ಮಹಾರಥರಾದ ಪಾಂಚಾಲರಿಂದಲೂ ಸಹಿತನಾಗಿ ಯುದ್ಧವನ್ನು ಮಾಡು (ಎಂದು ಹೇಳಿದನು).

ಸಂಜಯಃ

ತತಸ್ತೌ ಪುರುಷವ್ಯಾಘ್ರಾವುಭೌ ಮಾಧವಪಾಂಡವೌ ।
ದ್ರೋಣಕರ್ಣೌ ಸಮಾಸಾದ್ಯ ಧಿಷ್ಠಿತೌ ರಣಮೂರ್ಧನಿ ॥ ೩೦ ॥

ಸಂಜಯ– ಆಗ ಪುರುಷವ್ಯಾಘ್ರರಾದ ಕೃಷ್ಣಾರ್ಜುನರಿಬ್ಬರೂ ದ್ರೋಣ- ಕರ್ಣರನ್ನು ಸಮೀಪಿಸಿ ರಣರಂಗದಲ್ಲಿ ನಿಂತರು.

ತತಸ್ತತ್ಪುನರಾವೃತ್ತಂ ಯುಧಿಷ್ಠಿರಬಲಂ ಮಹತ್ ।
ತತೋ ದ್ರೋಣಶ್ಚ ಕರ್ಣಶ್ಚ ಪರಾನ್ ಮಮೃದತುರ್ಯುಧಿ ॥ ೩೧ ॥

ಅನಂತರ ಯುಧಿಷ್ಠಿರನ ದೊಡ್ಡ ಸೈನ್ಯವು ಹಿಂದಿರುಗಿತು. ಆಗ ದ್ರೋಣ-ಕರ್ಣರು ಯುದ್ಧದಲ್ಲಿ ಅವರನ್ನು ಎದುರಿಸಿದರು.

ಸ ಸಂಪ್ರಹಾರಸ್ತುಮುಲೋ ನಿಶಿ ಪ್ರತ್ಯಭವನ್ಮಹಾನ್ ।
ಯಥಾ ಸಾಗರಯೋ ರಾಜಂಶ್ಚಂದ್ರೋದಯವಿವೃದ್ಧಯೋಃ ॥ ೩೨ ॥

ಎಲೈ ರಾಜನೇ, ರಾತ್ರಿಯಲ್ಲಿ ಚಂದ್ರೋದಯವಾದಾಗ ವೃದ್ಧವಾದ ಎರಡು ಸಾಗರಗಳಂತೆ ಆ ಎರಡು ಸೈನ್ಯಗಳಿಗೆ ರಾತ್ರಿಯ ಕಾಲದಲ್ಲಿ ದೊಡ್ಡದಾದ ಸಂಘರ್ಷವು ಉಂಟಾಯಿತು.

ತತ ಉತ್ಸೃಜ್ಯ ಪಾಣಿಭ್ಯಃ ಪ್ರದೀಪಾಂಸ್ತವ ವಾಹಿನೀ ।
ಯುಯುಧೇ ಪಾಂಡವೈಃ ಸಾರ್ಧಮುನ್ಮತ್ತವದಹಃಕ್ಷಯೇ ॥ ೩೩ ॥

ಆಗ ನಿನ್ನ ಸೈನ್ಯವು ತಮ್ಮ ಕೈಯಲ್ಲಿದ್ದ ದೀಪಗಳನ್ನು ಬಿಟ್ಟು ಪಾಂಡವರ ಜೊತೆಯಲ್ಲಿ ರಾತ್ರಿಯಲ್ಲಿ ಉನ್ಮತ್ತರಂತೆ ಯುದ್ಧವನ್ನು ಮಾಡಿದರು.

ರಜಸಾ ತಮಸಾ ಚೈವ ಸಂವೃತೇ ಭೃಶದಾರುಣೇ ।
ಕೇವಲಂ ನಾಮಗೋತ್ರೇಣ ಪ್ರಾಯುದ್ಧ್ಯಂತ ಜಯೈಷಿಣಃ ॥ ೩೪ ॥

ಸೈನ್ಯದ ಧೂಳಿನಿಂದಲೂ, ದಾರುಣವಾದ ಕತ್ತಲೆಯಿಂದಲೂ ಎಲ್ಲವೂ ಮುಚ್ಚಿ ಹೋಗಿರಲು ಕೇವಲ ನಾಮ-ಗೋತ್ರ ಶ್ರವಣದಿಂದ ಜಯವನ್ನು ಬಯಸುವವರು ಯುದ್ಧವನ್ನು ಮಾಡಿದರು.

ಅಶ್ರೂಯಂತ ಹಿ ನಾಮಾನಿ ಶ್ರಾವ್ಯಮಾಣಾನಿ ಪಾರ್ಥಿವೈಃ ।
ಪ್ರಹರದ್ಭಿರ್ಮಹಾರಾಜ ಸ್ವಯಂವರ ಇವಾಹವೇ ॥ ೩೫ ॥

ಎಲೈ ಮಹಾರಾಜನೇ, ಸ್ವಯಂವರದಲ್ಲಿ ನಾಮಗಳನ್ನು ಘೋಷಿಸುವಂತೆ ದೊಡ್ಡ ಯುದ್ಧದಲ್ಲಿ ಪ್ರಹಾರವನ್ನು ಮಾಡುವ ರಾಜರಿಂದ ಘೋಷಿಸಲ್ಪಡುವ ನಾಮಗಳು ಕೇಳಿಬಂದವು.

ನಿಃಶಬ್ದಮಾಸೀತ್ ಸಹಸಾ ಪುನಃ ಶಬ್ದೋ ಮಹಾನಭೂತ್ ।
ಕ್ರುದ್ಧಾನಾಂ ಯುದ್ಧ್ಯಮಾನಾನಾಂ ಜಯತಾಂ ಜೇಯತಾಮಪಿ ॥೩೬॥

ಒಂದು ಕ್ಷಣ ಎಲ್ಲವೂ ನಿಶ್ಶಬ್ದವಾಗುತ್ತಿದ್ದಿತು. ಪುನಃ ಕ್ರುದ್ಧರಾದ ಯುದ್ಧವನ್ನು ಮಾಡುವ, ಗೆಲ್ಲುವ ಮತ್ತು ಸೋಲುವವರಿಂದ ದೊಡ್ಡ ಶಬ್ದವು ಉಂಟಾಗುತ್ತಿದ್ದಿತು.

ಯತ್ರ ಯತ್ರ ಸ್ಮ ದೃಶ್ಯಂತೇ ಪ್ರದೀಪಾಃ ಕುರುಸತ್ತಮ ।
ತತ್ರ ತತ್ರ ಸ್ಮ ತೇ ಶೂರಾ ನಿಪತಂತಿ ಪತಂಗವತ್ ॥ ೩೭ ॥

ಎಲೈ ಕುರುಶ್ರೇಷ್ಠನೇ, ಎಲ್ಲೆಲ್ಲಿ ದೀಪಗಳು ಕಾಣುತ್ತವೆಯೋ ಅಲ್ಲಲ್ಲಿ ಶೂರರು ಪತಂಗಗಳಂತೆ ಕೆಳಗೆ ಬೀಳುತ್ತಿದ್ದರು.

ತಥಾ ಸಂಯುದ್ಧ್ಯಮಾನಾನಾಂ ವಿಗಾಢಾಭೂನ್ಮಹಾನಿಶಾ ।
ಪಾಂಡವಾನಾಂ ಚ ರಾಜೇಂದ್ರ ಕೌರವಾಣಾಂ ಚ ಸರ್ವಶಃ ॥ ೩೮ ॥

ಎಲೈ ರಾಜೇಂದ್ರನೇ, ಪಾಂಡವರು ಮತ್ತು ಕೌರವರು ಎಲ್ಲ ಕಡೆಯಲ್ಲಿಯೂ ಹಾಗೆ ಯುದ್ಧವನ್ನು ಮಾಡುತ್ತಿರಲು ಮಹಾನಿಶೆಯು ಗಾಢವಾಗಿ ಪ್ರಾಪ್ತವಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಪಂಚಾಶದಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂಬತ್ತನೆಯ ಅಧ್ಯಾಯ

ಕರ್ಣನ ಪ್ರತಾಪ. ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನನ್ನು ನಿಷೇಧಿಸಿ, ಘಟೋತ್ಕಚನ ಪ್ರೇಷಣ.

ಸಂಜಯಃ

ತತಃ ಕರ್ಣೋ ರಣೇ ದೃಷ್ಟ್ವಾ ಪಾರ್ಷತಂ ಪರವೀರಹಾ ।
ಆಜಘಾನೋರಸಿ ಶರೈರ್ದಶಭಿರ್ಮರ್ಮಭೇದಿಭಿಃ ॥ ೧ ॥

ಸಂಜಯ– ಆಗ ಶತ್ರುಘಾತಕನಾದ ಕರ್ಣನು ರಣರಂಗದಲ್ಲಿ ಧೃಷ್ಟದ್ಯುಮ್ನನನ್ನು ನೋಡಿ ಮರ್ಮಭೇದಿಗಳಾದ ಹತ್ತು ಬಾಣಗಳಿಂದ ಅವನನ್ನು ಎದೆಯಲ್ಲಿ ಹೊಡೆದನು.

ಪ್ರತಿವಿವ್ಯಾಧ ತಂ ತೂರ್ಣಂ ಧೃಷ್ಟದ್ಯುಮ್ನೋऽಪಿ ಮಾರಿಷ ।
ಪಂಚಭಿಃ ಸಾಯಕೈರ್ಹೃಷ್ಟಸ್ತಿಷ್ಠೇತಿ ಚಾಬ್ರವೀತ್ ॥ ೨ ॥

ಎಲೈ ಶ್ರೇಷ್ಠನೇ, ಧೃಷ್ಟದ್ಯುಮ್ನನೂ ಸಹ ಶೀಘ್ರವಾಗಿ ಸಂತೋಷದಿಂದ ಅವನನ್ನು ಐದು ಬಾಣಗಳಿಂದ ಹೊಡೆದು 'ನಿಲ್ಲು, ನಿಲ್ಲು' ಎಂದು ಹೇಳಿದನು.

ತಾವನ್ಯೋನ್ಯಂ ಶರೈಃ ಸಂಖ್ಯೇ ಸಂಛಾದ್ಯ ಸುಮಹಾರಥೌ ।
ಪುನಃ ಪೂರ್ಣಾಯತೋತ್ಸೃಷ್ಟೈರ್ವಿವ್ಯಧಾತೇ ಪರಸ್ಪರಮ್ ॥ ೩ ॥

ಶ್ರೇಷ್ಠಮಹಾರಥರಾದ ಅವರಿಬ್ಬರೂ ರಣರಂಗದಲ್ಲಿ ಪರಸ್ಪರವಾಗಿ ಬಾಣಗಳಿಂದ ಆಚ್ಛಾದಿಸಿ, ಪುನಃ ಹೆದೆಯನ್ನು ಪೂರ್ಣವಾಗಿ ಎಳೆದು ಪ್ರಯೋಗಿಸಿದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ತತಃ ಪಾಂಚಾಲಮುಖ್ಯಸ್ಯ ಧೃಷ್ಟದ್ಯುಮ್ನಸ್ಯ ಸಂಯುಗೇ ।
ಸಾರಥಿಂ ಚತುರಶ್ಚಾಶ್ವಾನ್ ಕರ್ಣೋ ಏವ್ಯಾಧ ಸಾಯಕೈಃ ॥ ೪ ॥

ಆಗ ಕರ್ಣನು ಪಾಂಚಾಲ ಶ್ರೇಷ್ಠನಾದ ಧೃಷ್ಟದ್ಯುಮ್ನನ ಸಾರಥಿಯನ್ನೂ ಮತ್ತು ನಾಲ್ಕು ಅಶ್ವಗಳನ್ನೂ ಬಾಣಗಳಿಂದ ಹೊಡೆದನು.

ಕಾರ್ಮುಕಪ್ರವರಂ ಚಾಸ್ಯ ಪ್ರಚಿಚ್ಛೇದ ಶಿತೈಃ ಶರೈಃ ।
ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾತಯತ್ ॥ ೫ ॥

ಅವನ ಶ್ರೇಷ್ಠವಾದ ಧನುಸ್ಸನ್ನು ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು ಮತ್ತು ಭಲ್ಲದಿಂದ ಅವನ ಸಾರಥಿಯನ್ನು ರಥಪೀಠದಿಂದ ಕೆಳಗೆ ಉರುಳಿಸಿದನು.

ಧೃಷ್ಟದ್ಯುಮ್ನಸ್ತು ವಿರಥೋ ಹತಾಶ್ವೋ ಹತಸಾರಥಿಃ ।
ಗೃಹೀತ್ವಾ ಪರಿಘಂ ಘೋರಂ ಕರ್ಣಸ್ಯಾಶ್ವಾನಪೀಪಿಷತ್ ॥ ೬ ॥

ಧೃಷ್ಟದ್ಯುಮ್ನನಾದರೂ ರಥವನ್ನು, ಅಶ್ವಗಳನ್ನು ಮತ್ತು ಸಾರಥಿಯನ್ನು ಕಳೆದುಕೊಂಡು ಒಂದು ಘೋರವಾದ ಪರಿಘವನ್ನು ತೆಗೆದುಕೊಂಡು ಅದರಿಂದ ಕರ್ಣನ ರಥದ ಅಶ್ವಗಳನ್ನು ನಾಶಪಡಿಸಿದನು.

ವಿದ್ಧಶ್ಚ ಬಹುಭಿಸ್ತೇನ ಶರೈರಾಶೀವಿಷೋಪಮೈಃ ।
ತತೋ ಯುಧಿಷ್ಠಿರಾನೀಕಂ ಪದ್ಭ್ಯಾಮೇವಾನ್ವವರ್ತತ ।
ಆರುರೋಹ ರಥಂ ಚಾಪಿ ಸಹದೇವಸ್ಯ ಮಾರಿಷ ॥ ೭ ॥

ಸರ್ಪಗಳಂತಿದ್ದ ಅನೇಕ ಬಾಣಗಳಿಂದ ಕರ್ಣನಿಂದ ಪೀಡಿಸಲ್ಪಟ್ಟ ಅವನು ಎಲೈ ಶ್ರೇಷ್ಠನೇ, ಯುಧಿಷ್ಠಿರನ ಸೈನ್ಯವಿದ್ದಲ್ಲಿಗೆ ನಡೆದುಕೊಂಡೇ ಹೋಗಿ ಸಹದೇವನ ರಥವನ್ನು ಹತ್ತಿದನು.

ಕರ್ಣಸ್ಯಾಪಿ ರಥೇ ವಾಹಾನನ್ಯಾನ್ ಸೂತೋ ನ್ಯಯೋಜಯತ್ ।
ಶಂಖವರ್ಣಾನ್ ಮಹಾವೇಗಾನ್ ಸೈಂಧವಾನ್ ಸಾಧುವಾಹಿನಃ ॥೮॥

ಕರ್ಣನ ಸಾರಥಿಯು ಅವನ ರಥದಲ್ಲಿ ಶಂಖವರ್ಣದ ಮಹಾವೇಗವುಳ್ಳ, ಸೈಂಧವ ದೇಶದಲ್ಲಿ ಜನಿಸಿದ, ಪಳಗಿದ ಬೇರೆ ಅಶ್ವಗಳನ್ನು ಹೂಡಿದನು.

ಲಬ್ಧಲಕ್ಷ್ಯಸ್ತು ರಾಧೇಯಃ ಪಾಂಚಾಲಾನಾಂ ಮಹಾರಥಾನ್ ।
ಅಭ್ಯಪೀಡಯದಾಯಸ್ತಃ ಶರೈರ್ಮೇಘ ಇವಾಚಲಾನ್ ॥ ೯ ॥

ತನ್ನ ಗುರಿಯನ್ನು ಸಾಧಿಸಿದ ಕರ್ಣನು ಕೋಪಗೊಂಡು ಪಾಂಚಾಲ ಮಹಾರಥರ ಮೇಲೆ ಮೋಡವು ಪರ್ವತಗಳ ಮೇಲೆ ಮಳೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿ ಪೀಡಿಸಿದನು.

ಸಾ ಪೀಡ್ಯಮಾನಾ ಕರ್ಣೇನ ಪಾಂಚಾಲಾನಾಂ ಮಹಾಚಮೂಃ ।
ಸಂಪ್ರಾದ್ರವತ್ ಸುಸಂತ್ರಸ್ತಾ ಸಿಂಹೇನೇವಾರ್ದಿತಾ ಮೃಗೀ ॥ ೧೦ ॥

ಕರ್ಣನ ಬಾಣಗಳಿಂದ ಪೀಡಿಸಲ್ಪಟ್ಟ ಪಾಂಚಾಲರ ದೊಡ್ಡ ಸೈನ್ಯವು ಬಹಳ ಹೆದರಿ ಸಿಂಹದಿಂದ ಪೀಡಿತವಾದ ಹೆಣ್ಣು ಜಿಂಕೆಯಂತೆ ಓಡಿಹೋಯಿತು.

ಪತಿತಾಸ್ತುರಗೇಭ್ಯಶ್ಚ ಗಜೇಭ್ಯಶ್ಚ ಮಹೀತಲೇ ।
ರಥೇಭ್ಯಶ್ಚ ನರಾಸ್ತೂರ್ಣಮದೃಶ್ಯಂತ ತತಸ್ತತಃ ॥ ೧೧ ॥

ಅಶ್ವಗಳಿಂದಲೂ, ಗಜಗಳಿಂದಲೂ, ರಥಗಳಿಂದಲೂ ಶೀಘ್ರವಾಗಿ ಭೂಮಿಯ ಮೇಲೆ ಬೀಳುವ ಯೋಧರು ಅಲ್ಲಲ್ಲಿ ಕಂಡುಬಂದರು.

ಧಾವಮಾನಸ್ಯ ಯೋಧಸ್ಯ ಕ್ಷುರಪ್ರೈಃ ಸ ಮಹಾಮೃಧೇ ।
ಬಾಹೂ ಚಿಚ್ಛೇದ ವೈ ಕರ್ಣಃ ಶಿರಶ್ಚೈವ ಸಕುಂಡಲಮ್ ॥ ೧೨ ॥

ಮಹಾಸಂಗ್ರಾಮದಲ್ಲಿ ಕರ್ಣನು ಹಾಗೆ ಓಡುತ್ತಿದ್ದ ಯೋಧರ ಬಾಹುಗಳನ್ನು ಮತ್ತು ಕುಂಡಲ ಸಹಿತವಾದ ಶಿರಸ್ಸನ್ನು ಕ್ಷುರಪ್ರದಿಂದ ಕತ್ತರಿಸಿದನು.

ಊರೂ ಚಿಚ್ಛೇದ ಚಾನ್ಯಸ್ಯ ಗಜಸ್ಥಸ್ಯ ವಿಶಾಂಪತೇ ।
ವಾಜಿಪೃಷ್ಠಗತಸ್ಯಾಪಿ ಭೂಮಿಷ್ಠಸ್ಯ ಚ ಮಾರಿಷ ॥ ೧೩ ॥

ಎಲೈ ರಾಜನೇ, ಶ್ರೇಷ್ಠನೇ, ಅವನು ಗಜಾರೋಹಿಗಳ, ಅಶ್ವಾರೋಹಿಗಳ ಹಾಗೂ ಭೂಮಿಯಲ್ಲಿರುವ ಪದಾತಿಗಳ ತೊಡೆಗಳನ್ನು ಕತ್ತರಿಸಿದನು.

ನಾಜ್ಞಾಸಿಷುರ್ಹಾವಮಾನಾ ಬಹವಶ್ಚ ಮಹಾರಥಾಃ ।
ಸಂಛಿನ್ನಾನ್ಯಾತ್ಮಗಾತ್ರಾಣಿ ವಾಹನಾನಿ ಚ ಸಂಯುಗೇ ॥ ೧೪ ॥

ಓಡುತ್ತಿದ್ದ ಅನೇಕ ಮಹಾರಥರಿಗೆ ಯುದ್ಧದಲ್ಲಿ ತಮ್ಮ ದೇಹಗಳು ಮತ್ತು ತಮ್ಮ ವಾಹನಗಳು ಕತ್ತರಿಸಲ್ಪಟ್ಟರೂ ತಿಳಿಯಲಿಲ್ಲ.

ತೇ ವಧ್ಯಮಾನಾಃ ಸಮರೇ ಪಾಂಚಾಲಾಃ ಸೃಂಜಯೈಃ ಸಹ ।
ತೃಣಪ್ರಸ್ಪಂದನಾಚ್ಚಾಪಿ ಸೂತಪುತ್ರಂ ಸ್ಮ ಮೇನಿರೇ ॥ ೧೫ ॥

ಯುದ್ಧದಲ್ಲಿ ಕರ್ಣನಿಂದ ಹೊಡೆಯಲ್ಪಡುತ್ತಿದ್ದ ಪಾಂಚಾಲರು ಮತ್ತು ಸೃಂಜಯರು ಒಂದು ಹುಲ್ಲು ಅಲ್ಲಾಡಿದರೂ ಅದನ್ನು ಕರ್ಣನೆಂದು ಭಾವಿಸಿದರು.

ಅಪಿ ಸ್ವಂ ಸಮರೇ ಯೋಧಂ ಧಾವಮಾನಂ ವಿಚೇತಸಃ ।
ಕರ್ಣಮೇವಾಭ್ಯಮನ್ಯಂತ ತತೋ ಭೀತಾ ದ್ರವಂತಿ ತೇ ॥ ೧೬ ॥

ವಿವೇಕಶೂನ್ಯರಾಗಿ ರಣರಂಗದಲ್ಲಿ ಓಡುವ ತಮ್ಮವರನ್ನು ಕರ್ಣನೆಂದು ತಿಳಿದು ಅನಂತರ ಭೀತರಾಗಿ ಬೇರೆ ಕಡೆಗೆ ಓಡುತ್ತಿದ್ದರು.

ತಾನ್ಯನೀಕಾನಿ ಭಗ್ನಾನಿ ದ್ರವಮಾಣಾನಿ ಭಾರತ ।
ಅಭ್ಯದ್ರವದ್ ದ್ರುತಂ ಕರ್ಣಃ ಪೃಷ್ಠತೋ ವಿಕಿರನ್ ಶರಾನ್ ॥ ೧೭ ॥

ಎಲೈ ಭಾರತನೇ, ಭಗ್ನಗೊಂಡು ಓಡುತ್ತಿರುವ ಆ ಸೈನ್ಯಗಳನ್ನು ಕರ್ಣನು ಹಿಂದಿನಿಂದ ಓಡಿ ಶೀಘ್ರವಾಗಿ ಬಾಣಗಳಿಂದ ಹೊಡೆದನು.

ಅವೇಕ್ಷಮಾಣಾಸ್ತೇಽನ್ಯೋನ್ಯಂ ಸುಸಮ್ಮೂಢಾ ವಿಚೇತಸಃ ।
ನಾಶಕ್ನುವನ್ನವಸ್ಥಾತುಂ ಕಾಲ್ಯಮಾನಾ ಮಹಾತ್ಮನಾ ॥ ೧೮ ॥

ಮಹಾತ್ಮನಾದ ಕರ್ಣನಿಂದ ಕಲಕಾಡಲ್ಪಡುತ್ತಿದ್ದ ವಿವೇಕಶೂನ್ಯರಾದ ಆ ಯೋಧರು ಬಹಳ ಭ್ರಾಂತರಾಗಿ ತಮ್ಮನ್ನೇ ಪರಸ್ಪರವಾಗಿ ನೋಡುತ್ತಾ ರಣರಂಗದಲ್ಲಿ ನಿಲ್ಲಲು ಅಸಮರ್ಥರಾದರು.

ಕರ್ಣೇನಾಭ್ಯಾಹತಾ ರಾಜನ್ ಪಾಂಚಾಲಾಃ ಪರಮೇಷುಭಿಃ ।
ದ್ರೋಣೇನ ಚ ದಿಶಃ ಸರ್ವಾ ವೀಕ್ಷಮಾಣಾಃ ಪ್ರದುದ್ರುವುಃ ॥ ೧೯ ॥

ಎಲೈ ರಾಜನೇ, ಕರ್ಣನಿಂದಲೂ ಮತ್ತು ದ್ರೋಣರಿಂದಲೂ ಶ್ರೇಷ್ಠವಾದ ಬಾಣಗಳಿಂದ ಹೊಡೆಯಲ್ಪಟ್ಟ ಪಾಂಚಾಲರು ಎಲ್ಲ ದಿಕ್ಕುಗಳನ್ನೂ ನೋಡುತ್ತಾ ಓಡಿ ಹೋದರು.

ತತೋ ಯುಧಿಷ್ಠಿರೋ ರಾಜಾ ಸ್ವಸೈನ್ಯಂ ಪ್ರೇಕ್ಷ್ಯ ವಿದ್ರುತಮ್ ।
ಅಪಯಾನೇ ಮತಿಂ ಕೃತ್ವಾ ಫಲ್ಗುನಂ ವಾಕ್ಯಮಬ್ರವೀತ್ ॥ ೨೦ ॥

ತನ್ನ ಸೈನ್ಯವು ಓಡಿಹೋಗುತ್ತಿರುವುದನ್ನು ನೋಡಿದ ರಾಜನಾದ ಯುಧಿಷ್ಠಿರನು ರಣರಂಗದಿಂದ ಅಪಯಾನವನ್ನು ಮಾಡಲು ನಿಶ್ಚಯಿಸಿ ಅರ್ಜುನನನ್ನು ಕುರಿತು ಹೇಳಿದನು.

ಪಶ್ಯ ಕರ್ಣಂ ಮಹೇಷ್ವಾಸಂ ಧನುಷ್ಪಾಣಿಮವಸ್ಥಿತಮ್ ।
ನಿಶೀಥೇ ದಾರುಣೇ ಕಾಲೇ ತಪಂತಮಿವ ಭಾಸ್ಕರಮ್ ॥ ೨೧ ॥

ಮಹಾಧನುರ್ಧಾರಿಯಾದ ಕರ್ಣನು ಈ ದಾರುಣವಾದ ರಾತ್ರಿಯ ಕಾಲದಲ್ಲಿ ದಹಿಸುವ ಸೂರ್ಯನಂತೆ ಕೈಯಲ್ಲಿ ಧನುಸ್ಸನ್ನು ಹಿಡಿದಿರುವುದನ್ನು ನೋಡು.

ಕರ್ಣಸಾಯಕನುನ್ನಾನಾಂ ಕ್ರೋಶತಾಮೇಷ ನಿಸ್ವನಃ ।
ಅನಿಶಂ ಶ್ರೂಯತೇ ಪಾರ್ಥ ತ್ವದ್ಬಂಧೂನಾಮನಾಥವತ್ ॥ ೨೨ ॥

ಎಲೈ ಅರ್ಜುನನೇ, ಕರ್ಣನ ಬಾಣಗಳಿಂದ ಪೀಡಿಸಲ್ಪಟ್ಟು ಅನಾಥರಂತೆ ಕಿರುಚುತ್ತಿರುವ ನಿನ್ನ ಬಾಂಧವರ ಈ ಘೋರವಾದ ನಾದವು ಸತತವಾಗಿ ಕೇಳಿ ಬರುತ್ತಿದೆ.

ಯಥಾ ವಿಸೃಜತಶ್ಚಾಸ್ಯ ಸಂದಧಾನಸ್ಯ ಚಾಶುಗಾನ್ ।
ಪಶ್ಯಾಮಿ ಜಯವಿಕ್ರಾಂತಂ ಕ್ಷಪಯಿಷ್ಯತಿ ನೋ ಧ್ರುವಮ್ ॥ ೨೩ ॥

ಕರ್ಣನು ಶೀಘ್ರವೇಗಿಯಾದ ಬಾಣಗಳನ್ನು ಹೂಡುವುದನ್ನೂ, ಅದನ್ನು ಪ್ರಯೋಗಿಸುವುದನ್ನೂ, ಅವನ ಪರಾಕ್ರಮವನ್ನೂ ಮತ್ತು ಜಯವನ್ನೂ ನೋಡಿದರೆ ನಮ್ಮನ್ನು ಶೀಘ್ರವಾಗಿ ನಾಶಮಾಡುವನು ಎಂದು ತೋರುತ್ತದೆ.

ಯದತ್ರಾನಂತರಂ ಕಾರ್ಯಂ ಪ್ರಾಪ್ತಕಾಲಂ ಪ್ರಪಶ್ಯಸಿ ।
ಕರ್ಣಸ್ಯ ವಧಸಂಯುಕ್ತಂ ತತ್ ಕುರುಷ್ವ ಧನಂಜಯ ॥ ೨೪ ॥

ಎಲೈ ಧನಂಜಯನೇ, ಈ ಪ್ರಸಕ್ತವಾದ ಸಮಯದಲ್ಲಿ ಕರ್ಣನ ವಧೆಯನ್ನು ಉದ್ದೇಶಿಸಿ ಏನು ಮಾಡುವುದು ಸರಿ ಎನಿಸುತ್ತದೆಯೋ ಅದನ್ನು ಮಾಡು (ಎಂದು ಹೇಳಿದನು).

ಏವಮುಕ್ತೋ ಮಹಾಬಾಹುಃ ಪಾರ್ಥಃ ಕೃಷ್ಣಮಥಾಬ್ರವೀತ್ ।
ಭೀತಃ ಕುಂತೀಸುತೋ ರಾಜಾ ರಾಧೇಯಸ್ಯಾತಿವಿಕ್ರಮಾತ್ ॥ ೨೫ ॥

ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಅರ್ಜುನನು ಕೃಷ್ಣನನ್ನು ಕುರಿತು ಹೇಳಿದನು. ಕರ್ಣನ ಅತಿಶಯವಾದ ಪರಾಕ್ರಮದಿಂದ ರಾಜನಾದ ಯುಧಿಷ್ಠಿರನು ಭೀತನಾಗಿದ್ದಾನೆ.

ಏವಂ ಗತೇ ಪ್ರಾಪ್ತಕಾಲಂ ಕರ್ಣಾನೀಕೇ ಪುನಃ ಪುನಃ ।
ಭವಾನ್ ವ್ಯವಸ್ಯತಾಂ ಕ್ಷಿಪ್ರಂ ದ್ರವತೇ ಹಿ ವರೂಥಿನೀ ॥ ೨೬ ॥

ಈ ಸಂದರ್ಭದಲ್ಲಿ ಕರ್ಣನ ಸೈನ್ಯವನ್ನು ಉದ್ದೇಶಿಸಿ ಏನು ಮಾಡುವುದು ಉಚಿತವೆಂದು ನೀನು ನಿರ್ಧರಿಸು. ನಮ್ಮ ಸೈನ್ಯವು ಶೀಘ್ರವಾಗಿ ಓಡಿಹೋಗುತ್ತಿದೆ.

ದ್ರೋಣಸಾಯಕನುನ್ನಾನಾಂ ಭಗ್ನಾನಾಂ ಮಧುಸೂದನ ।
ಕರ್ಣೇನ ತ್ರಾಸ್ಯಮಾನಾನಾಮವಸ್ಥಾನಂ ನ ವಿದ್ಯತೇ ॥ ೨೭ ॥

ಎಲೈ ಮಧುಸೂದನನೇ, ದ್ರೋಣರ ಬಾಣಗಳಿಂದ ಪೀಡಿತವಾಗಿ ಭಗ್ನಗೊಂಡು, ಕರ್ಣನಿಂದ ಹೆದರಿಸಲ್ಪಡುತ್ತಿರುವ ನಮ್ಮ ಸೈನ್ಯಕ್ಕೆ ಒಂದು ಆಶ್ರಯವೂ ಕಾಣುತ್ತಿಲ್ಲ.

ಪಶ್ಯಾಮಿ ಚ ತಥಾ ಕರ್ಣಂ ವಿಚರಂತಮಭೀತವತ್ ।
ದ್ರವಮಾಣಾನ್ ರಥೋದಾರಾನ್ ಕಿರಂತಂ ವಿಶಿಖೈಃ ಶಿತೈಃ ॥ ೨೮ ॥

ಕರ್ಣನು ಓಡುತ್ತಿರುವ ರಥಶ್ರೇಷ್ಠರನ್ನು ಹಿಂಬಾಲಿಸಿ ನಿರ್ಭೀತನಾಗಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಿರುವುದನ್ನು ನಾನು ನೋಡುತ್ತಿದ್ದೇನೆ.

ನೈತದಸ್ಯೋತ್ಸಹೇ ಸೋಢುಂ ಚರಿತಂ ರಣಮೂರ್ಧನಿ ।
ಪ್ರತ್ಯಕ್ಷಂ ವೃಷ್ಣಿಶಾರ್ದೂಲ ಪಾದಸ್ಪರ್ಶಮಿವೋರಗಃ ॥ ೨೯ ॥

ಎಲೈ ವೃಷ್ಣಿಶಾರ್ದೂಲನೇ, ಸರ್ಪವು ಪಾದಸ್ಪರ್ಶವನ್ನು ಸಹಿಸದಂತೆ ಈ ಶ್ರೇಷ್ಠ ಯುದ್ಧದಲ್ಲಿ ಕರ್ಣನ ಚರ್ಯೆಯನ್ನು ನೋಡಿ ನಾನು ಸಹಿಸಲಾರೆ.

ಸ ಭವಾನತ್ರ ಯಾತ್ವಾಶು ಯತ್ರ ಕರ್ಣೋ ಮಹಾರಥಃ ।
ಅಹಮೇನಂ ವಧಿಷ್ಯಾಮಿ ಮಾಂ ವೈಷ ಮಧುಸೂದನ ॥ ೩೦ ॥

ಎಲೈ ಮಧುಸೂದನನೇ, ಮಹಾರಥನಾದ ಕರ್ಣನು ಇರುವಲ್ಲಿಗೆ ಶೀಘ್ರವಾಗಿ ಹೋಗು. ನಾನು ಅವನನ್ನು ಕೊಲ್ಲುವೆನು ಅಥವಾ ಅವನಾದರೂ ನನ್ನನ್ನು ಕೊಲ್ಲುವನು.

ವಾಸುದೇವಃ

ಪಶ್ಯಾಮಿ ಕರ್ಣಂ ಕೌಂತೇಯ ದೇವರಾಜಮಿವಾಹವೇ ।
ವಿಚರಂತಂ ನರವ್ಯಾಘ್ರಮತಿಮಾನುಷವಿಕ್ರಮಮ್ ॥ ೩೧ ॥

ವಾಸುದೇವ– ಎಲೈ ಅರ್ಜುನನೇ, ನರವ್ಯಾಘ್ರನಾದ ಕರ್ಣನು ಮನುಷ್ಯರನ್ನು ಮೀರಿದ ಪರಾಕ್ರಮವನ್ನು ಹೊಂದಿ ರಣರಂಗದಲ್ಲಿ ದೇವರಾಜನಂತೆ ಸಂಚರಿಸುತ್ತಿರುವುದನ್ನು ನಾನು ನೋಡುತ್ತಿದ್ದೇನೆ.

ನೈತಸ್ಯಾನ್ಯೋಽಸ್ತಿ ಸಮರೇ ಪ್ರತ್ಯುದ್ಯಾತಾ ಧನಂಜಯ ।
ಋತೇ ತ್ವಾಂ ಪುರುಷವ್ಯಾಘ್ರ ರಾಕ್ಷಸಾದ್ವಾ ಘಟೋತ್ಕಚಾತ್ ॥ ೩೨ ॥

ಎಲೈ ಧನಂಜಯನೇ, ಪುರುಷವ್ಯಾಘ್ರನೇ, ನಿನ್ನನ್ನು ಅಥವಾ ರಾಕ್ಷಸನಾದ ಘಟೋತ್ಕಚನನ್ನು ಬಿಟ್ಟು ಅವನ ಎದುರಿಗೆ ಹೋಗಿ ಯುದ್ಧವನ್ನು ಮಾಡುವವರು ಬೇರೆ ಯಾರೂ ಇಲ್ಲ.

ನ ತು ತಾವದಹಂ ಮನ್ಯೇ ಪ್ರಾಪ್ತಕಾಲಂ ತವಾನಘ ।
ಸಮಾಗಮಂ ಮಹಾಬಾಹೋ ಸೂತಪುತ್ರೇಣ ಸಂಯುಗೇ ॥ ೩೩ ॥

ಎಲೈ ಅನಘನೇ, ಮಹಾಬಾಹುವೇ, ನೀನು ಸದ್ಯದ ಪರಿಸ್ಥಿತಿಯಲ್ಲಿ ಕರ್ಣನ ಜೊತೆಯಲ್ಲಿ ಹೋಗಿ ಯುದ್ಧವನ್ನು ಮಾಡುವುದು ಯೋಗ್ಯವಲ್ಲವೆಂದು ಭಾವಿಸುತ್ತೇನೆ.

ದೀಪ್ಯಮಾನಾ ಮಹೋಲ್ಕೇವ ತಿಷ್ಠತ್ಯಸ್ಯ ಹಿ ವಾಸವೀ ।
ತ್ವದರ್ಥಂ ಹಿ ಮಹಾಬಾಹೋ ರೌದ್ರರೂಪಂ ಬಿಭರ್ತಿ ಚ ॥ ೩೪ ॥

ಎಲೈ ಮಹಾಬಾಹುವೇ, ನಿನ್ನ ಸಲುವಾಗಿ ರಕ್ಷಿಸಿರುವ ಭಯಂಕರ ರೂಪವುಳ್ಳ, ದೊಡ್ಡ ಉಲ್ಕೆಯಂತಹ ಇಂದ್ರನು ಕೊಟ್ಟ ಶಕ್ತಿಯು ಅವನ ಬಳಿ ಜ್ವಲಿಸುತ್ತಿದೆ.

ಘಟೋತ್ಕಚಸ್ತು ರಾಧೇಯಂ ಪ್ರತ್ಯುದ್ಯಾತು ಮಹಾಬಲಃ ।
ಸ ಹಿ ಭೀಮೇನ ಬಲಿನಾ ಜಾತಃ ಸುರಪರಾಕ್ರಮಃ ॥ ೩೫ ॥

ಮಹಾಬಲನಾದ ಘಟೋತ್ಕಚನು ಕರ್ಣನನ್ನು ಎದುರಿಸಲಿ. ದೇವತೆಗಳ ಪರಾಕ್ರಮವನ್ನು ಹೊಂದಿದ ಅವನು ಭಯಂಕರವಾದ ಬಲವನ್ನು ಹೊಂದಿ ಜನಿಸಿದ್ದಾನಷ್ಟೆ?

ತಸ್ಮಿನ್ನಸ್ತ್ರಾಣಿ ದಿವ್ಯಾನಿ ರಾಕ್ಷಸಾನ್ಯಾಸುರಾಣಿ ಚ ।
ಸತತಂ ಚಾನುರಕ್ತೋ ವೋ ಹಿತೈಷೀ ಚ ಘಟೋತ್ಕಚಃ ।
ವಿಜೇಷ್ಯತಿ ರಣೇ ಕರ್ಣಮಿತಿ ಮೇ ನಾತ್ರ ಸಂಶಯಃ ॥ ೩೬ ॥

ಅವನ ಬಳಿ ದೇವತೆಗಳ ಅಸ್ತ್ರಗಳೂ, ರಾಕ್ಷಸರ ಅಸ್ತ್ರಗಳೂ ಮತ್ತು ಅಸುರರ ಅಸ್ತ್ರಗಳೂ ಇವೆ. ಅವನು ಯಾವಾಗಲೂ ನಿಮ್ಮಲ್ಲಿ ನಿಷ್ಠೆಯುಳ್ಳವನು ಮತ್ತು ನಿಮ್ಮ ಹಿತವನ್ನು ಬಯಸುವವನು. ಅವನು ಕರ್ಣನನ್ನು ಜಯಿಸುವನು ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಸಂಜಯಃ

ಏವಮುಕ್ತ್ವಾ ಮಹಾಬಾಹುಃ ಪಾರ್ಥಂ ಪುಷ್ಕರಲೋಚನಃ ।
ಆಜುಹಾವಾಥ ತದ್ರಕ್ಷಃ ತಚ್ಚಾಸೀತ್ ಪ್ರಾದುರಗ್ರತಃ ।
ಕವಚೀ ಸ ಶರೀ ಖಡ್ಗೀ ಸಧನ್ವಾ ಚ ವಿಶಾಂಪತೇ ॥ ೩೭ ॥

ಸಂಜಯ– ಮಹಾಬಾಹುವಾದ, ಪುಂಡರೀಕಾಕ್ಷನಾದ ಕೃಷ್ಣನು ಅರ್ಜುನನನ್ನು ಕುರಿತು ಹೀಗೆ ಹೇಳಿ, ಅನಂತರ ರಾಕ್ಷಸನಾದ ಘಟೋತ್ಕಚನನ್ನು ಕರೆದನು. ಘಟೋತ್ಕಚನು ಕವಚವನ್ನು ಧರಿಸಿ, ಧನುರ್ಬಾಣಗಳನ್ನು, ಖಡ್ಗವನ್ನು ಹಿಡಿದು ಅವರ ಎದುರಿಗೆ ಪ್ರತ್ಯಕ್ಷನಾದನು.

ಅಭಿವಾದ್ಯ ತತಃ ಕೃಷ್ಣಂ ಪಾಂಡವಂ ಚ ಧನಂಜಯಮ್ ।
ಅಬ್ರವೀತ್ ತಂ ತದಾ ಹೃಷ್ಟ್ವಾ ಯಮಸ್ಮ್ಯನುಶಾಧಿ ಮಾಮ್ ॥ ೩೮ ॥

ಅವನು ಕೃಷ್ಣನನ್ನು ಮತ್ತು ಅರ್ಜುನನನ್ನು ನಮಸ್ಕರಿಸಿ ಸಂತೋಷದಿಂದ, ಇಗೋ ಬಂದಿದ್ದೇನೆ. ನನಗೆ ಅನುಶಾಸನವನ್ನು ಮಾಡಿ ಎಂದು ಹೇಳಿದನು.

ತತಸ್ತಂ ಮೇಘಸಂಕಾಶಂ ದೀಪ್ತಾಸ್ಯಂ ದೀಪ್ತಕುಂಡಲಮ್ ।
ಅಭ್ಯಭಾಷತ ಹೈಡಿಂಬಂ ದಾಶಾರ್ಹಃ ಪ್ರಹಸನ್ನಿವ ॥ ೩೯ ॥

ಆಗ ಜ್ವಲಿಸುವ ಮುಖವುಳ್ಳವನೂ, ಜ್ವಲಿಸುವ ಕುಂಡಲಗಳುಳ್ಳವನೂ, ಮೇಘ ಕಾಂತಿಯನ್ನು ಹೊಂದಿದವನೂ ಆದ ಆ ಹಿಡಿಂಬೆಯ ಪುತ್ರನನ್ನು ಕುರಿತು ಕೃಷ್ಣನು ನಗುತ್ತಾ ಮಾತನಾಡಿದನು.

ಘಟೋತ್ಕಚ ವಿಜಾನೀಹಿ ಯತ್ತ್ವಾಂ ವಕ್ಷ್ಯಾಮಿ ಪುತ್ರಕ ।
ಪ್ರಾಪ್ತೋ ವಿಕ್ರಮಕಾಲೋಽಯಂ ತವ ನಾನ್ಯಸ್ಯ ಕಸ್ಯಚಿತ್ ॥ ೪೦ ॥

ಪುತ್ರನೇ, ಘಟೋತ್ಕಚನೇ, ನಾನು ನಿನಗೆ ಹೇಳುವುದನ್ನು ತಿಳಿ. ಈಗ ನಿನ್ನ ಪರಾಕ್ರಮದ ಕಾಲವು ಪ್ರಾಪ್ತವಾಗಿದೆ. ಅದನ್ನು ಬೇರೆ ಯಾರೂ ಮಾಡಲು ಸಾಧ್ಯವಿಲ್ಲ.

ಸ ಭವಾನ್ ಮಜ್ಜಮಾನಾನಾಂ ಬಂಧೂನಾಂ ತ್ವಂ ಪ್ಲವೋ ಯಥಾ ।
ವಿವಿಧಾನಿ ತವಾಸ್ತ್ರಾಣಿ ಸಂತಿ ಮಾಯಾ ಚ ರಾಕ್ಷಸೀ ॥ ೪೧ ॥

ಮುಳುಗುತ್ತಿರುವ ಬಂಧುಗಳಿಗೆ ನೀನು ದೋಣಿಯಂತೆ ಇದ್ದೀಯೆ. ನಿನ್ನ ಬಳಿ ಅನೇಕವಾದ ಅಸ್ತ್ರಗಳೂ ಮತ್ತು ರಾಕ್ಷಸ ಮಾಯೆಯೂ ಇದೆ.

ಪಶ್ಯ ಕರ್ಣೇನ ಹೈಡಿಂಬ ಪಾಂಡವಾನಾಮನೀಕಿನೀ ।
ಕಾಲ್ಯಮಾನಾ ಯಥಾ ಗಾವಃ ಪಾಲೇನ ರಣಮೂರ್ಧನಿ ॥ ೪೨ ॥

ಎಲೈ ಹಿಡಿಂಬೆ ಪುತ್ರನೇ, ಪಶುಪಾಲಕನಿಂದ ಗೋವುಗಳು ಅಟ್ಟಾಡಿಸಲ್ಪಡುವಂತೆ ಕರ್ಣನಿಂದ ಪಾಂಡವರ ಸೈನ್ಯವು ಅಟ್ಟಾಡಿಸಲ್ಪಡುವುದನ್ನು ನೋಡು.

ಏಷ ಕರ್ಣೋ ಮಹೇಷ್ವಾಸೋ ಮತಿಮಾನ್ ದೃಢವಿಕ್ರಮಃ ।
ಪಾಂಡವಾನಾಮನೀಕೇಷು ನಿಹಂತಿ ಕ್ಷತ್ರಿಯರ್ಷಭಾನ್ ॥ ೪೩ ॥

ಮಹಾಧನುರ್ಧಾರಿಯೂ, ಮೇಧಾವಿಯೂ, ದೃಢವಾದ ಪರಾಕ್ರಮವುಳ್ಳವನೂ ಆದ ಈ ಕರ್ಣನು ಪಾಂಡವರ ಸೇನೆಯಲ್ಲಿ ಶ್ರೇಷ್ಠರಾದ ಕ್ಷತ್ರಿಯರನ್ನು ಕೊಲ್ಲುತ್ತಿದ್ದಾನೆ.

ಕಿರಂತಃ ಶರವರ್ಷಾಣಿ ಮಹಾಂತಿ ದೃಢಧನ್ವಿನಃ ।
ನ ಶಕ್ನುವಂತ್ಯವಸ್ಥಾತುಂ ಪೀಡ್ಯಮಾನಾಃ ಶರಾರ್ಚಿಷಾ ॥ ೪೪ ॥

ದೃಢವಾದ ಧನುಸ್ಸುಳ್ಳ ನಮ್ಮವರು ಅವನ ಮೇಲೆ ಬಾಣಗಳ ದೊಡ್ಡ ಮಳೆಯನ್ನು ಸುರಿಸುತ್ತಿದ್ದರೂ ಅವನ ಬಾಣಗಳ ಜ್ವಾಲೆಯಿಂದ ಪೀಡಿತರಾಗಿ ಅವನ ಎದುರಿಗೆ ನಿಲ್ಲಲು ಸಾಧ್ಯವಾಗುತ್ತಿಲ್ಲ.

ನಿಶೀಥೇ ಸೂತಪುತ್ರೇಣ ಶರವರ್ಷೇಣ ಪೀಡಿತಾಃ ।
ಏತೇ ದ್ರವಂತಿ ಪಾಂಚಾಲಾಃ ಸಿಂಹಸ್ಯೇವ ಭಯಾನ್ಮೃಗಾಃ ॥ ೪೫ ॥

ಈ ರಾತ್ರಿಯ ಕಾಲದಲ್ಲಿ ಕರ್ಣನ ಬಾಣಗಳ ಮಳೆಯಿಂದ ಪೀಡಿತರಾದ ಈ ಪಾಂಚಾಲರು ಸಿಂಹವನ್ನು ನೋಡಿ ಹೆದರಿದ ಮೃಗಗಳಂತೆ ಓಡಿಹೋಗುತ್ತಿದ್ದಾರೆ.

ಏತಸ್ಯೈವಂ ಪ್ರವೃದ್ಧಸ್ಯ ಸೂತಪುತ್ರಸ್ಯ ಸಂಯುಗೇ ।
ನಿಷೇದ್ಧಾ ವಿದ್ಯತೇ ನಾನ್ಯಸ್ತ್ವದೃತೇ ಭೀಮವಿಕ್ರಮ ॥ ೪೬ ॥

ಎಲೈ ಭಯಂಕರ ಪರಾಕ್ರಮವುಳ್ಳವನೇ, ಹೀಗೆ ಯುದ್ಧದಲ್ಲಿ ಬೆಳೆದು ನಿಂತ ಸೂತಪುತ್ರನಾದ ಕರ್ಣನನ್ನು ತಡೆಯುವವನು ನಿನ್ನನ್ನು ಬಿಟ್ಟು ಬೇರೆ ಯಾವನೂ ಇಲ್ಲ.

ಸ ತ್ವಂ ಕುರು ಮಹಾಬಾಹೋ ಕರ್ಮ ಯುಕ್ತಮಿಹಾತ್ಮನಃ ।
ಮಾತುಲಾನಾಂ ಪಿತೄಣಾಂ ಚ ತೇಜಸೋಽಸ್ತ್ರಬಲಸ್ಯ ಚ ॥ ೪೭ ॥

ಎಲೈ ಮಹಾಬಾಹುವೇ, ನಿನ್ನ ಸೋದರಮಾವಂದಿರಿಗೂ, ತಂದೆಗಳಿಗೂ, ನಿನ್ನ ತೇಜಸ್ಸಿಗೂ, ನಿನ್ನ ಬಳಿ ಇರುವ ಅಸ್ತ್ರಸಾಮರ್ಥ್ಯಕ್ಕೂ ಅನುಗುಣವಾದ ಕಾರ್ಯವನ್ನು ಮಾಡುವವನಾಗು.

ಏತದರ್ಥಂ ಹಿ ಹೈಡಿಂಬ ಪುತ್ರಾನಿಚ್ಛಂತಿ ಮಾನವಾಃ ।
ಕಥಂ ನಸ್ತಾರಯೇದ್ದುಃಖಾತ್ ಸ ತ್ವಂ ತಾರಯ ಬಾಂಧವಾನ್ ॥ ೪೮ ॥

ಎಲೈ ಹಿಡಿಂಬೆಯ ಪುತ್ರನೇ, ನಮ್ಮ ಪುತ್ರನು ನಮ್ಮನ್ನು ಹೇಗೆ ದುಃಖದಿಂದ ದಾಟಿಸಿಯಾನು ಎಂದು ಮನುಷ್ಯರು ಇದರ ಸಲುವಾಗಿ ಪುತ್ರರನ್ನು ಬಯಸುತ್ತಾರೆ. ಅಂತಹ ನೀನು ಬಾಂಧವರನ್ನು ದಾಟಿಸು.

ತವ ಹ್ಯಸ್ತ್ರಬಲಂ ಭೀಮಂ ಮಾಯಾಶ್ಚ ತವ ದುಸ್ತರಾಃ ।
ಸಂಗ್ರಾಮೇ ಯುದ್ಧ್ಯಮಾನಸ್ಯ ಸತತಂ ಭೀಮನಂದನ ॥ ೪೯ ॥

ಎಲೈ ಭೀಮಪುತ್ರನೇ, ರಣರಂಗದಲ್ಲಿ ಸತತವಾಗಿ ಯುದ್ಧವನ್ನು ಮಾಡುವ ನಿನ್ನ ಅಸ್ತ್ರಬಲವು ಭಯಂಕರವಾಗಿದೆ ಮತ್ತು ನಿನ್ನ ಮಾಯೆಗಳೂ ಸಹ ದಾಟಲಾ ಅಸಾಧ್ಯವಾದವುಗಳು.

ಪಾಂಡವಾನಾಂ ಪ್ರಭಗ್ನಾನಾಂ ಕರ್ಣೇನ ಶಿತಸಾಯಕೈಃ ।
ಮಜ್ಜತಾಂ ಧಾರ್ತರಾಷ್ಟ್ರೇಷು ಭವ ಪಾರಂ ಪರಂತಪ ॥ ೫೦ ॥

ಎಲೈ ಪರಂತಪನೇ, ಕರ್ಣನ ತೀಕ್ಷ್ಣವಾದ ಬಾಣಗಳಿಂದ ಭಗ್ನಗೊಂಡು, ದುರ್ಯೋಧನನ ಸೈನ್ಯಸಾಗರದಲ್ಲಿ ಮುಳುಗುತ್ತಿರುವ ಪಾಂಡವರಿಗೆ ನೀನು ದಡವಾಗು.

ರಾತ್ರೌ ಹಿ ರಾಕ್ಷಸಾ ಭೂಯೋ ಭವಂತ್ಯಮಿತವಿಕ್ರಮಾಃ ।
ಬಲವಂತಃ ಸುದುರ್ಧರ್ಷಾಃ ಶೂರಾ ವಿಕ್ರಾಂತಚಾರಿಣಃ ॥ ೫೧ ॥

ರಾತ್ರಿಯ ವೇಳೆಯಲ್ಲಿ ರಾಕ್ಷಸರು ಇನ್ನೂ ಹೆಚ್ಚಿನ ಅಗಾಧವಾದ ಪರಾಕ್ರಮವುಳ್ಳವರೂ, ಬಲಿಷ್ಠರೂ, ಸೋಲಿಸಲು ಅಸಾಧ್ಯರಾದವರೂ, ಶೂರರೂ ಮತ್ತು ಪರಾಕ್ರಮದಿಂದ ಸಂಚರಿಸುವವರೂ ಆಗುತ್ತಾರೆ.

ಜಹಿ ಕರ್ಣಂ ಮಹೇಷ್ವಾಸಂ ನಿಶೀಥೇ ಮಾಯಯಾ ರಣೇ ।
ಪಾರ್ಥಾ ದ್ರೋಣಂ ವಧಿಷ್ಯಂತಿ ಧೃಷ್ಟದ್ಯುಮ್ನಪುರೋಗಮಾಃ ॥ ೫೨ ॥

ಆದ್ದರಿಂದ ನೀನು ಈ ರಾತ್ರಿಯಲ್ಲಿ ನಿನ್ನ ಮಾಯೆಯಿಂದ ಯುದ್ಧದಲ್ಲಿ ಕರ್ಣನನ್ನು ಕೊಲ್ಲುವವನಾಗು. ಧೃಷ್ಟದ್ಯುಮ್ನನೇ ಮೊದಲಾದ ಪಾಂಡವರು ದ್ರೋಣರನ್ನು ಕೊಲ್ಲುವರು (ಎಂದು ಹೇಳಿದನು).

ಸಂಜಯಃ

ಕೇಶವಸ್ಯ ವಚಃ ಶ್ರುತ್ವಾ ಬೀಭತ್ಸುರಪಿ ರಾಕ್ಷಸಮ್ ।
ಅಭ್ಯಭಾಷತ ಕೌರವ್ಯ ಘಟೋತ್ಕಚಮರಿಂದಮಮ್ ॥ ೫೩ ॥

ಸಂಜಯ– ಕೃಷ್ಣನ ಮಾತುಗಳನ್ನು ಕೇಳಿ ಎಲೈ ಕೌರವ್ಯನೇ, ಅರ್ಜುನನೂ ಸಹ ಅರಿಂದಮನಾದ ಘಟೋತ್ಕಚನನ್ನು ಕುರಿತು ಮಾತನಾಡಿದನು.

ಘಟೋತ್ಕಚ ಭವಾಂಶ್ಚೈವ ದೀರ್ಘಬಾಹುಶ್ಚ ಸಾತ್ಯಕಿಃ ।
ಮತೌ ಮೇ ಸರ್ವಸೈನ್ಯೇಷು ಭೀಮಸೇನಶ್ಚ ಪಾಂಡವಃ ॥ ೫೪ ॥

ಎಲೈ ಘಟೋತ್ಕಚನೇ, ನೀನೂ, ದೀರ್ಘಬಾಹುವಾದ ಸಾತ್ಯಕಿಯೂ ಮತ್ತು ಪಾಂಡುಪುತ್ರನಾದ ಭೀಮಸೇನನೂ ಎಲ್ಲಸೈನ್ಯಗಳಲ್ಲಿಯೂ ಶ್ರೇಷ್ಠರಾದವರೆಂದು ನನ್ನ ಅಭಿಪ್ರಾಯ.

ಸ ಭವಾನ್ ಯಾತು ಕರ್ಣೇನ ದ್ವೈರಥಂ ಯುದ್ಧ್ಯತಾಂ ನಿಶಿ ।
ಸಾತ್ಯಕಿಃ ಪೃಷ್ಠಗೋಪಸ್ತೇ ಭವಿಷ್ಯತಿ ಮಹಾರಥಃ ॥ ೫೫ ॥

ಈ ರಾತ್ರಿಯಲ್ಲಿ ನೀನು ಕರ್ಣನ ಜೊತೆಯಲ್ಲಿ ದ್ವಂದ್ವಯುದ್ಧವನ್ನು ಮಾಡು. ಮಹಾರಥನಾದ ಸಾತ್ಯಕಿಯು ಹಿಂದಿನಿಂದ ನಿನ್ನನ್ನು ರಕ್ಷಿಸುವನು.

ಜಹಿ ಕರ್ಣಂ ರಣೇ ಶೂರಂ ಸಾತ್ವತೇನ ಸಹಾಯವಾನ್ ।
ಯಥೇಂದ್ರಸ್ತಾರಕಂ ಪೂರ್ವಂ ಸ್ಕಂದೇನ ಸಹ ಜಘ್ನಿವಾನ್ ॥ ೫೬ ॥

ಸಾತ್ಯಕಿಯ ಸಹಾಯವನ್ನು ಹೊಂದಿದ ನೀನು ಹಿಂದೆ ಸ್ಕಂದನ ಸಹಾಯದಿಂದ ಇಂದ್ರನು ತಾರಕಾಸುರನನ್ನು ಸಂಹರಿಸಿದಂತೆ ಶೂರನಾದ ಕರ್ಣನನ್ನು ಸಂಹರಿಸು (ಎಂದು ಹೇಳಿದನು).

ಘಟೋತ್ಕಚಃ

ಅಲಮೇವಾಸ್ಮಿ ಕರ್ಣಾಯ ದ್ರೋಣಾಯಾಲಂ ಚ ಸತ್ತಮ ।
ಅನ್ಯೇಷಾಂ ಕ್ಷತ್ರಿಯಾಣಾಂ ಚ ಕೃತಾಸ್ತ್ರಾಣಾಂ ಮಹಾತ್ಮನಾಮ್ ॥ ೫೭ ॥

ಘಟೋತ್ಕಚ– ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ಕರ್ಣನನ್ನೂ, ದ್ರೋಣರನ್ನೂ, ಅಸ್ತ್ರಜ್ಞರಾದ ಮಹಾತ್ಮರಾದ ಉಳಿದ ಕ್ಷತ್ರಿಯರನ್ನೂ ಯುದ್ಧದಲ್ಲಿ ಕೊಲ್ಲಲು ನಾನು ಸಮರ್ಥನಾಗಿದ್ದೇನೆ.

ಅದ್ಯ ದಾಸ್ಯಾಮಿ ಸಂಗ್ರಾಮಂ ಸೂತಪುತ್ರಾಯ ತಂ ನಿಶಿ ।
ಯಂ ಜನಾಃ ಸಂಪ್ರವಕ್ಷ್ಯಂತಿ ಯಾವದ್ ಭೂಮಿರ್ಧರಿಷ್ಯತಿ ॥ ೫೮ ॥

ನಾನು ಈ ರಾತ್ರಿಯಲ್ಲಿ ಭೂಮಿ ಇರುವವರೆಗೂ ಜನರು ಯಾವ ಯುದ್ಧವನ್ನು ಸ್ಮರಿಸಿ ಮಾತನಾಡುವರೋ ಅಂತಹ ಯುದ್ಧವನ್ನು ಕರ್ಣನಿಗೆ ಕೊಡುವೆನು.

ನ ಚಾತ್ರ ಶೂರಾನ್ ಮೋಕ್ಷ್ಯಾಮಿ ನ ಭೀತಾನ್ನ ಕೃತಾಂಜಲೀನ್ ।
ಸರ್ವಾನೇವ ವಧಿಷ್ಯಾಮಿ ರಾಕ್ಷಸಂ ಧರ್ಮಮಾಸ್ಥಿತಃ ॥ ೫೯ ॥

ರಾಕ್ಷಸಧರ್ಮವನ್ನು ಆಶ್ರಯಿಸಿದ ನಾನು ಶೂರರನ್ನಾಗಲೀ, ಭೀತರನ್ನಾಗಲೀ, ಕೈಮುಗಿದವರನ್ನಾಗಲೀ ಬಿಡುವುದಿಲ್ಲ. ಎಲ್ಲರನ್ನೂ ಕೊಲ್ಲುವೆನು.

ಸಂಜಯಃ

ಏವಮುಕ್ತ್ವಾ ಮಹಾಬಾಹುರ್ಹೈಡಿಂಬಃ ಪರವೀರಹಾ ।
ಅಭ್ಯಯಾತ್ ತುಮುಲೇ ಕರ್ಣಂ ತವ ಸೈನ್ಯಂ ವಿಭೀಷಯನ್ ॥ ೬೦ ॥

ಸಂಜಯ– ಹೀಗೆ ಹೇಳಿ ಪರವೀರಘಾತಕನಾದ, ಮಹಾಬಾಹುವಾದ ಘಟೋತ್ಕಚನು ರಣರಂಗದಲ್ಲಿ ನಿನ್ನ ಸೈನ್ಯವನ್ನು ಭಯಗೊಳಿಸುತ್ತಾ ಕರ್ಣನ ಕಡೆಗೆ ನುಗ್ಗಿದನು.

ತಮಾಪತಂತಂ ಸಂಕ್ರುದ್ಧಂ ದೀಪ್ತಾಸ್ಯಮಿವ ಪನ್ನಗಮ್ ।
ಅಭ್ಯಸ್ಯನ್ ಪರಮೇಷ್ವಾಸಃ ಪ್ರತಿಜಗ್ರಾಹ ಸೂತಜಃ ॥ ೬೧ ॥

ಜ್ವಲಿಸುವ ಮುಖವನ್ನು ಹೊಂದಿ ಕ್ರೋಧದಿಂದ ತನ್ನೆಡೆಗೆ ಸರ್ಪದಂತೆ ಬರುತ್ತಿದ್ದ ಅವನ ಮೇಲೆ ಸೂತಪುತ್ರನಾದ ಮಹಾಧನುರ್ಧಾರಿಯಾದ ಕರ್ಣನು ಬಾಣಗಳ ಮಳೆಯನ್ನು ಸುರಿಸುತ್ತಾ ಅವನನ್ನು ಸ್ವೀಕರಿಸಿದನು.

ತಯೋಃ ಸಮಭವದ್ ಯುದ್ಧಂ ಕರ್ಣರಾಕ್ಷಸಯೋರ್ನಿಶಿ ।
ಗರ್ಜತೋ ರಾಜಶಾರ್ದೂಲ ಶಕ್ರಪ್ರಹ್ಲಾದಯೋರಿವ ॥ ೬೨ ॥

ಎಲೈ ರಾಜಶಾರ್ದೂಲನೇ, ಆ ರಾತ್ರಿಯಲ್ಲಿ ಗರ್ಜಿಸುವ ಕರ್ಣ ಮತ್ತು ಘಟೋತ್ಕಚರಿಗೆ ಇಂದ್ರ-ಪ್ರಹ್ಲಾದರಿಗೆ ನಡೆದಂತೆ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಏಕೋನಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಷಟ್‌ಏಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತನೆಯ ಅಧ್ಯಾಯ

ಘಟೋತ್ಕಚನಿಂದ ಅಲಂಬಲನ ವಧೆ. ಅವನ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆಯುವುದು.

ಸಂಜಯಃ

ದೃಷ್ಟ್ವಾ ಘಟೋತ್ಕಚಂ ರಾಜನ್ ಸೂತಪುತ್ರರಥಂ ಪ್ರತಿ ।
ಪ್ರಯಾಂತಂ ತ್ವರಯಾ ಯುಕ್ತಂ ಜಿಘಾಂಸುಂ ಕರ್ಣಮಾಹವೇ ॥ ೧ ॥

ಅಬ್ರವೀತ್ ತವ ಪುತ್ರಸ್ತು ದುಃಶಾಸನಮಿದಂ ವಚಃ ।
ಏತದ್ರಕ್ಷೋ ರಣೇ ತೂರ್ಣಂ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ॥ ೨ ॥

ಅಭಿಯಾತಿ ದ್ರುತಂ ಕರ್ಣಂ ತದ್‌ವಾರಯ ಮಹಾರಥಮ್ ।
ವೃತಃ ಸೈನ್ಯೇನ ಮಹತಾ ಯಾಹಿ ಯತ್ರ ಮಹಾಬಲಃ ॥ ೩ ॥

ಸಂಜಯ– ಎಲೈ ರಾಜನೇ, ರಣರಂಗದಲ್ಲಿ ಘಟೋತ್ಕಚನು ಕರ್ಣನನ್ನು ಕೊಲ್ಲಲು ಬಯಸಿ, ತ್ವರೆಯಿಂದ ಕೂಡಿ ಕರ್ಣನ ರಥದ ಕಡೆಗೆ ಹೋಗುತ್ತಿರುವುದನ್ನು ನೋಡಿ ನಿನ್ನ ಪುತ್ರನಾದ ದುರ್ಯೋಧನನು ದುಶ್ಶಾಸನನನ್ನು ಕುರಿತು- 'ರಣರಂಗದಲ್ಲಿ ಕರ್ಣನ ಪರಾಕ್ರಮವನ್ನು ನೋಡಿ ಈ ರಾಕ್ಷಸನು ಶೀಘ್ರವಾಗಿ ಕರ್ಣನ ಕಡೆಗೆ ಹೋಗುತ್ತಿದ್ದಾನೆ. ದೊಡ್ಡ ಸೈನ್ಯದಿಂದ ಕೂಡಿ ಮಹಾಬಲನಾದ ಅವನು ಹೋಗುತ್ತಿರುವಲ್ಲಿಗೆ ಹೋಗಿ ಅವನನ್ನು ತಡೆ.

ಕರ್ಣೋ ವೈಕರ್ತನೋ ಯುದ್ಧೇ ರಾಕ್ಷಸೇನ ಯುಯುತ್ಸತಿ ।
ರಕ್ಷ ಕರ್ಣಂ ರಣೇ ಯತ್ತೋ ವೃತಃ ಸೈನ್ಯೇನ ಮಾನದ ॥ ೪ ॥

ವೈಕರ್ತನನಾದ ಕರ್ಣನು ರಾಕ್ಷಸನಾದ ಘಟೋತ್ಕಚನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಾನೆ. ಎಲೈ ಮಾನದನೇ, ಸೈನ್ಯ ಸಹಿತನಾಗಿ ಜಾಗರೂಕನಾಗಿ ರಣರಂಗದಲ್ಲಿ ಕರ್ಣನನ್ನು ರಕ್ಷಿಸು' ಎಂದು ಹೇಳಿದನು.

ಏತಸ್ಮಿನ್ನಂತರೇ ರಾಜನ್ ಜಟಾಸುರಸುತೋ ಬಲೀ ।
ದುರ್ಯೋಧನಮುಪಾಗಮ್ಯ ಪ್ರಾಹ ಪ್ರಹರತಾಂ ವರಃ ॥೫॥

ದುರ್ಯೋಧನ ತವಾಮಿತ್ರಾನ್ ಪ್ರಖ್ಯಾತಾನ್ ಯುದ್ಧದುರ್ಮದಾನ್ ।
ಪಾಂಡವಾನ್ ಹಂತುಮಿಚ್ಛಾಮಿ ತ್ವಯಾऽऽಜ್ಞಪ್ತಃ ಸಹಾನುಗಾನ್ ॥೬॥

ಜಟಾಸುರೋ ಮಮ ಪಿತಾ ರಕ್ಷಸಾಮಗ್ರಣೀಃ ಪುರಾ ।
ಪ್ರಯುಜ್ಯ ಕರ್ಮ ರಕ್ಷೋಘ್ನಂ ಕ್ಷುದ್ರೈಃ ಪಾರ್ಥೈರ್ನಿಪಾತಿತಃ ।
ತಸ್ಯಾಪಚಿತಿಮಿಚ್ಛಾಮಿ ತ್ವದ್ದಿಷ್ಟೋ ಗಂತುಮೀಶ್ವರ ॥೭॥

ಎಲೈ ರಾಜನೇ, ಈ ಮಧ್ಯದಲ್ಲಿ ಜಟಾಸುರನ ಪುತ್ರನೂ, ಬಲಿಷ್ಠನೂ, ಪ್ರಹಾರ ಮಾಡುವವರಲ್ಲಿ ಶ್ರೇಷ್ಠನೂ ಆದ ಅಲಂಬಲನು ದುರ್ಯೋಧನನ ಸಮೀಪಕ್ಕೆ ಬಂದು 'ಎಲೈ ದುರ್ಯೋಧನನೇ, ನಿನ್ನ ಅನುಮತಿಯನ್ನು ಹೊಂದಿ ನಾನು ಯುದ್ಧ ದುರ್ಮದರೂ, ಪ್ರಖ್ಯಾತರೂ, ನಿನ್ನ ಶತ್ರುಗಳೂ ಆದ ಪಾಂಡವರನ್ನು ಅವರ ಅನುಯಾಯಿಗಳ ಜೊತೆಯಲ್ಲಿ ಕೊಲ್ಲಲು ಬಯಸುತ್ತೇನೆ. ಹಿಂದೆ ರಾಕ್ಷಸರ ನಾಯಕನಾದ ಜಟಾಸುರನೆಂಬ ನನ್ನ ತಂದೆಯನ್ನು ಕ್ಷುದ್ರರಾದ ಪಾಂಡವರು ರಕ್ಷೋಘ್ನ ಕರ್ಮವನ್ನು ಮಾಡಿ ಕೊಂದಿದ್ದಾರೆ. ಎಲೈ ಪ್ರಭುವೇ, ನಿನ್ನ ಆದೇಶವನ್ನು ಪಡೆದು ನಾನು ಅದಕ್ಕೆ ಪ್ರತೀಕಾರ ಮಾಡಲು ಬಯಸುತ್ತೇನೆ' ಎಂದು ಹೇಳಿದನು.

ತಮಬ್ರವೀತ್ ತತೋ ರಾಜಾ ಪ್ರೀಯಮಾಣಃ ಪುನಃ ಪುನಃ ।
ದ್ರೋಣಕರ್ಣಾದಿಭಿಃ ಸಾರ್ಧಂ ಪರ್ಯಾಪ್ತೋऽಹಂ ದ್ವಿಷದ್ವಧೇ ।
ತ್ವಂ ತು ಗಚ್ಛ ಮಯಾಜ್ಞಪ್ತೋ ಜಹಿ ಯುದ್ಧೇ ಘಟೋತ್ಕಚಮ್ ॥ ೮ ॥

ರಾಜನು ಅವನ ಮಾತುಗಳನ್ನು ಕೇಳಿ ಪುನಃ ಪುನಃ ಸಂತೋಷಗೊಳ್ಳುತ್ತಾ ಅವನನ್ನು ಕುರಿತು- 'ದ್ರೋಣ-ಕರ್ಣಾದಿ ಸಹಿತನಾದ ನಾನು ಶತ್ರುಗಳ ವಧೆಯನ್ನು ಮಾಡಲು ಸಮರ್ಥನಾಗಿದ್ದೇನೆ. ನೀನು ನನ್ನ ಆಜ್ಞೆಯಂತೆ ಹೋಗಿ ಯುದ್ಧದಲ್ಲಿ ಘಟೋತ್ಕಚನನ್ನು ಕೊಲ್ಲು' ಎಂದು ಹೇಳಿದನು.

ತಥೇತ್ಯುಕ್ತ್ವಾ ಮಹಾಕಾಯಃ ಸಮಾಹೂಯ ಘಟೋತ್ಕಚಮ್ ।
ಜಟಾಸುರಿರ್ಭೈಮಸೇನಿಂ ನಾನಾಶಸ್ತ್ರೈರವಾಕಿರತ್ ॥ ೯ ॥

ಮಹಾಕಾಯನಾದ ಅಲಂಬಲನು ಹಾಗೆಯೇ ಆಗಲೆಂದು ಹೇಳಿ ಘಟೋತ್ಕಚನನ್ನು ಆಹ್ವಾನಿಸಿ ಅವನ ಮೇಲೆ ನಾನಾಶಸ್ತ್ರಗಳನ್ನು ಪ್ರಯೋಗಿಸಿದನು.

ಅಲಂಬಲಂ ಚ ಕರ್ಣಂ ಚ ಕುರುಸೈನ್ಯಂ ಚ ದುಸ್ತರಮ್ ।
ಹೈಡಿಂಬಃ ಪ್ರಮಮಾಥೈಕೋ ಮಹಾವಾತೋಂಬುದಾನಿವ ॥ ೧೦ ॥

ಹಿಡಿಂಬೆಯ ಪುತ್ರನಾದ ಘಟೋತ್ಕಚನೊಬ್ಬನೇ ಬಿರುಗಾಳಿಯು ಮೋಡಗಳನ್ನು ನಾಶಪಡಿಸಿದಂತೆ ಅಲಂಬಲನನ್ನೂ, ಕರ್ಣನನ್ನೂ ಮತ್ತು ದುಸ್ತರವಾದ ಕುರು ಸೈನ್ಯವನ್ನೂ ಮರ್ದಿಸಿದನು.

ತತೋ ಮಾಯಾಮಯಂ ದೃಷ್ಟ್ವಾ ರಥಂ ತೂರ್ಣಮಲಂಬಲಃ ।
ಘಟೋತ್ಕಚಂ ಶರವ್ರಾತೈರ್ನಾನಾಲಿಂಗೈಃ ಸಮಾರ್ದಯತ್ ॥ ೧೧ ॥

ಆಗ ಅಲಂಬಲನು ಘಟೋತ್ಕಚನ ಮಾಯಾಮಯವಾದ ರಥವನ್ನು ನೋಡಿ ಶೀಘ್ರವಾಗಿ ನಾನಾವಿಧವಾದ ಬಾಣಗಳ ಸಮೂಹದಿಂದ ಅವನನ್ನು ಪೀಡಿಸಿದನು.

ವಿದ್ಧ್ವಾ ಚ ಬಹುಭಿರ್ಬಾಣೈರ್ಭೈಮಸೇನಿಮಲಂಬಲಃ ।
ವ್ಯದ್ರಾವಯಚ್ಛರವ್ರಾತೈಃ ಪಾಂಡವಾನಾಮನೀಕಿನೀಮ್ ॥ ೧೨ ॥

ಅಲಂಬಲನು ಭೀಮಸೇನನ ಪುತ್ರನಾದ ಘಟೋತ್ಕಚನನ್ನು ಅನೇಕ ಬಾಣಗಳಿಂದ ಹೊಡೆದು ತನ್ನ ಬಾಣಗಳ ಸಮೂಹದಿಂದ ಪಾಂಡವರ ಸೈನ್ಯವನ್ನು ಚದುರಿಸಿದನು.

ತೇನ ವಿದ್ರಾವ್ಯಮಾಣಾನಿ ಪಾಂಡುಸೈನ್ಯಾನಿ ಮಾರಿಷ ।
ನಿಶೀಥೇ ವಿಪ್ರಕೀರ್ಯಂತ ವಾತನುನ್ನಾ ಘನಾ ಇವ ॥ ೧೩ ॥

ಎಲೈ ಶ್ರೇಷ್ಠನೇ, ಅವನಿಂದ ಅಟ್ಟಸಲ್ಪಟ್ಟ ಪಾಂಡವರ ಸೈನ್ಯವು ರಾತ್ರಿಯ ಕಾಲದಲ್ಲಿ ಬಿರುಗಾಳಿಯಿಂದ ಚದುರಿಸಲ್ಪಟ್ಟ ಮೋಡಗಳಂತೆ ಚದುರಿಹೋಯಿತು.

ಘಟೋತ್ಕಚಶರೈರ್ನುನ್ನಾ ತಥೈವ ಕುರುವಾಹಿನೀ ।
ನಿಶೀಥೇ ಪ್ರಾದ್ರವದ್ ರಾಜನ್ಮುತ್ಸೃಜ್ಯೋಲ್ಕಾಃ ಸಹಸ್ರಶಃ ॥ ೧೪ ॥

ಎಲೈ ರಾಜನೇ, ಹಾಗೆಯೇ ಘಟೋತ್ಕಚನ ಬಾಣಗಳಿಂದ ಪೀಡಿತವಾದ ಕುರು ಸೈನ್ಯವು ರಾತ್ರಿಯ ವೇಳೆಯಲ್ಲಿ ಸಹಸ್ರಾರು ಪಂಜುಗಳನ್ನು ಅಲ್ಲಿಯೇ ಬಿಟ್ಟು ಓಡಿ ಹೋಯಿತು.

ಅಲಂಬಲಸ್ತತಃ ಕ್ರುದ್ಧೋ ಭೈಮಸೇನಿಂ ಮಹಾಮೃಧೇ ।
ಆಜಘ್ನೇ ನಿಶಿತೈರ್ಬಾಣೈಸ್ತೋತ್ತ್ರೈರಿವ ಮಹಾದ್ವಿಪಮ್ ॥ ೧೫ ॥

ಮಹಾಯುದ್ಧದಲ್ಲಿ ಕೋಪಗೊಂಡ ಅಲಂಬಲನು ಆಗ ಘಟೋತ್ಕಚನನ್ನು ಅಂಕುಶಗಳಿಂದ ಮಹಾಗಜವನ್ನು ಹೊಡೆಯುವಂತೆ ತೀಕ್ಷ್ಣವಾದ ಬಾಣಗಳಿಂದ ಚೆನ್ನಾಗಿ ಹೊಡೆದನು.

ತಿಲಶಸ್ತಸ್ಯ ತದ್ಯಾನಂ ಸೂತಂ ಸರ್ವಾಯುಧಾನಿ ಚ ।
ಘಟೋತ್ಕಚಃ ಪ್ರಚಿಚ್ಛೇದ ಪ್ರಾಣದಚ್ಚಾತಿದಾರುಣಮ್ ॥ ೧೬ ॥

ಘಟೋತ್ಕಚನು ಅವನ ರಥವನ್ನೂ, ಸಾರಥಿಯನ್ನೂ ಮತ್ತು ಎಲ್ಲ ಆಯುಧಗಳನ್ನೂ ಎಳ್ಳಿನಷ್ಟು ಸಣ್ಣ ಚೂರುಗಳಾಗಿ ಕತ್ತರಿಸಿ ಅತಿಭೈರವವಾದ ನಾದವನ್ನು ಮಾಡಿದನು.

ತತಃ ಕರ್ಣಂ ಶರವ್ರಾತೈಃ ಕುರೂನನ್ಯಾನ್ ಸಹಸ್ರಶಃ ।
ಅಲಂಬಲಂ ಚಾಭ್ಯವರ್ಷನ್ಮೇಘೋ ಮೇರುಮಿವಾಚಲಮ್ ॥ ೧೭ ॥

ಅನಂತರ ಘಟೋತ್ಕಚನು ಮೇಘವು ಮೇರುಪರ್ವತದ ಮೇಲೆ ಜಲಧಾರೆಗಳನ್ನು ಸುರಿಸಿದಂತೆ ಬಾಣಗಳ ಸಮೂಹಗಳಿಂದ ಕರ್ಣನ, ಸಹಸ್ರಾರು ಕೌರವ ಯೋಧರ, ಅಲಂಬಲನ ಬಾಣಗಳ ಮಳೆಯನ್ನು ಸುರಿಸಿದನು.

ತತಃ ಸಂಚುಕ್ಷುಭೇ ಸೈನ್ಯಂ ಕುರೂಣಾಂ ರಾಕ್ಷಸಾರ್ದಿತಮ್ ।
ಉಪರ್ಯುಪರಿ ಚಾನ್ಯೋನ್ಯಂ ಚತುರಂಗಂ ಮಮರ್ದ ಹ ॥ ೧೮ ॥

ಆಗ ಘಟೋತ್ಕಚನಿಂದ ಪೀಡಿತವಾದ ಕೌರವ ಸೇನೆಯು ಕ್ಷೋಭೆಗೊಂಡಿತು. ಘಟೋತ್ಕಚನು ಮುಂದೆ ಮುಂದೆ ಸಾಗಿ ಚತುರಂಗ ಬಲವನ್ನು ಮರ್ದಿಸಿದನು.

ಜಟಾಸುರಿರ್ಮಹಾರಾಜ ವಿರಥೋ ಹತಸಾರಥಿಃ ।
ಘಟೋತ್ಕಚಂ ರಣೇ ಕ್ರುದ್ಧೋ ಮುಷ್ಟಿನಾಭ್ಯಹನದ್ ದೃಢಮ್ ॥ ೧೯ ॥

ಎಲೈ ಮಹಾರಾಜನೇ, ರಥವನ್ನೂ ಮತ್ತು ಸಾರಥಿಯನ್ನೂ ಕಳೆದುಕೊಂಡ ಅಲಂಬಲನು ರಣರಂಗದಲ್ಲಿ ಕ್ರುದ್ಧನಾಗಿ ಘಟೋತ್ಕಚನನ್ನು ಸಮೀಪಿಸಿ ತನ್ನ ಮುಷ್ಟಿಯಿಂದ ಅವನನ್ನು ದೃಢವಾಗಿ ಹೊಡೆದನು.

ಮುಷ್ಟಿನಾಽಭಿಹತಸ್ತೇನ ಪ್ರಚಚಾಲ ಘಟೋತ್ಕಚಃ ।
ಕ್ಷಿತಿಕಂಪೇ ಯಥಾ ಶೈಲಃ ಸವೃಕ್ಷಗಣಗುಲ್ಮವಾನ್ ॥ ೨೦ ॥

ಘಟೋತ್ಕಚನು ಭೂಕಂಪವಾದಾಗ ವೃಕ್ಷಸಮೂಹದಿಂದ ಕೂಡಿದ ಪರ್ವತದಂತೆ ಅವನ ಮುಷ್ಟಿಘಾತದಿಂದ ಕಂಪಿಸಿದನು.

ತತಃ ಸ ಪರಿಘಾಭೇನ ದ್ವಿಟ್‌ಸಂಘಘ್ನೇನ ಬಾಹುನಾ ।
ಜಟಾಸುರಿಂ ಭೈಮಸೇನಿರವಧೀನ್ಮುಷ್ಟಿನಾ ಭೃಶಮ್ ॥ ೨೧ ॥

ಅನಂತರ ಭೀಮಸೇನ ಪುತ್ರನಾದ ಘಟೋತ್ಕಚನು ಶತ್ರುಗಳ ಸಮೂಹವನ್ನು ಕೊಲ್ಲುವ ಒನಕೆಯಂತಿದ್ದ ತನ್ನ ಬಾಹುವಿನಿಂದ ಅಲಂಬಲನನ್ನು ಮುಷ್ಟಿಯಿಂದ ಬಲವಾಗಿ ಹೊಡೆದನು.

ತಂ ಪ್ರಮಥ್ಯ ತತಃ ಕ್ರುದ್ಧಸ್ತೂರ್ಣಂ ಹೈಡಿಂಬಿರಾಕ್ಷಿಪತ್ ।
ದೋರ್ಭ್ಯಾಮಿಂದ್ರಧ್ವಜಾಭಾಭ್ಯಾಂ ನಿಷ್ಪಿಪೇಷ ಮಹೀತಲೇ ॥ ೨೨ ॥

ಕ್ರೋಧಗೊಂಡ ಘಟೋತ್ಕಚನು ಅವನನ್ನು ಮುಷ್ಟಿಯಿಂದ ಗುದ್ದಿ, ಇಂದ್ರ-ಧ್ವಜದಂತಹ ತನ್ನ ಎರಡು ಬಾಹುಗಳಿಂದ ಅವನನ್ನು ಮೇಲಕ್ಕೆ ಎಸೆದು ಭೂಮಿಯಲ್ಲಿ ಕೆಡವಿ ಕಾಲಿನಿಂದ ತುಳಿದನು.

ಅಲಂಬಲೋಽಪಿ ವಿಕ್ಷಿಪ್ಯ ಸಮುತ್ಕ್ಷಿಪ್ಯ ಚ ರಾಕ್ಷಸಮ್ ।
ಘಟೋತ್ಕಚಂ ರಣೇ ರೋಷಾನ್ನಿಷ್ಪಿಪೇಷ ಮಹೀತಲೇ ॥ ೨೩ ॥

ಅಲಂಬಲನೂ ಸಹ ರಾಕ್ಷಸನಾದ ಘಟೋತ್ಕಚನನ್ನು ರೋಷದಿಂದ ಮೇಲಕ್ಕೆಸೆದು ಭೂಮಿಯ ಮೇಲೆ ಕೆಡವಿ ತುಳಿದನು.

ತಯೋಃ ಸಮಭವದ್ ಯುದ್ಧಂ ಗರ್ಜತೋರತಿಕಾಯಯೋಃ ।
ಘಟೋತ್ಕಚಾಲಂಬಲಯೋಸ್ತುಮುಲಂ ಲೋಮಹರ್ಷಣಮ್ ॥ ೨೪ ॥

ಮಹಾಶರೀರವನ್ನು ಹೊಂದಿ ಗರ್ಜನೆಯನ್ನು ಮಾಡುತ್ತಾ ಯುದ್ಧವನ್ನು ಮಾಡುವ ಘಟೋತ್ಕಚ-ಅಲಂಬಲರಿಗೆ ತೀವ್ರವೂ ರೋಮಾಂಚನಕಾರಿಯೂ ಆದ ಯುದ್ಧವು ನಡೆಯಿತು.

ವಿಶೇಷಯಂತಾವನ್ಯೋನ್ಯಂ ಮಾಯಾಭಿರತಿಮಾಯಿನೌ ।
ಯುಯುಧಾತೇ ಮಹಾವೀರ್ಯಾವಿಂದ್ರವೈರೋಚನಾವಿವ ॥ ೨೫ ॥

ಶ್ರೇಷ್ಠ ಮಾಯೆಯನ್ನು ಹೊಂದಿದ, ಮಹಾಪರಾಕ್ರಮವನ್ನು ಹೊಂದಿದ ಅವರಿಬ್ಬರೂ ತಮ್ಮ ಮಾಯೆಯಿಂದ ಒಬ್ಬರನ್ನೊಬ್ಬರು ಮೀರಿಸುತ್ತಾ ಇಂದ್ರ-ವೈರೋಚನರಂತೆ ಯುದ್ಧವನ್ನು ಮಾಡಿದರು.

ಪಾವಕಾಂಬುನಿಧೀ ಭೂತ್ವಾ ಪುನರ್ಗರುಡತಕ್ಷಕೌ ।
ಪುನರ್ಮೇಘಮಹಾವಾತೌ ಪುನರ್ವಜ್ರಮಹಾಚಲೌ ।
ಪುನಃ ಕುಂಜರಶಾರ್ದೂಲೌ ಪುನಃ ಸ್ವರ್ಭಾನುಭಾಸ್ಕರೌ ॥ ೨೬ ॥

ಏವಂ ಮಾಯಾಶತಸೃಜಾವನ್ಯೋನ್ಯವಧಕಾಂಕ್ಷಿಣೌ ।
ಭೃಶಂ ಚಿತ್ರಮಯುದ್ಧ್ಯೇತಾಮಲಂಬಲಘಟೋತ್ಕಚೌ ॥ ೨೭ ॥

ಅಗ್ನಿ-ಜಲಗಳಾಗಿ, ಪುನಃ ಗರುಡ-ಸರ್ಪಗಳಾಗಿ, ಪುನಃ ಮೇಘ-ವಾತಗಳಾಗಿ, ಪುನಃ ವಜ್ರ-ಮಹಾಪರ್ವತವಾಗಿ, ಪುನಃ ಕುಂಜರ-ವ್ಯಾಘ್ರಗಳಾಗಿ, ಪುನಃ ರಾಹು-ಸೂರ್ಯರಾಗಿ - ಈ ರೀತಿಯಾಗಿ ನೂರಾರು ಮಾಯೆಗಳನ್ನು ಸೃಷ್ಟಿಸುತ್ತಾ ಪರಸ್ಪರ ವಧೆಯನ್ನು ಆಶಿಸಿದ ಅಲಂಬಲ-ಘಟೋತ್ಕಚರು ಆಶ್ಚರ್ಯಕರವಾಗಿ ತೀವ್ರವಾದ ಯುದ್ಧವನ್ನು ಮಾಡಿದರು.

ಪರಿಘೈಶ್ಚ ಗದಾಭಿಶ್ಚ ಪ್ರಾಸಮುದ್ಗರಪಟ್ಟಿಶೈಃ ।
ಮುಸಲೈಃ ಪರ್ವತಾಗ್ರೈಶ್ಚ ತಾವನ್ಯೋನ್ಯಂ ನಿಜಘ್ನತುಃ ॥ ೨೮ ॥

ಅವರು ಪರಿಘಗಳಿಂದಲೂ, ಗದೆಗಳಿಂದಲೂ, ಪ್ರಾಸ-ಮುದ್ಗರ-ಪಟ್ಟಿಶ-ಗಳಿಂದಲೂ, ಮುಸಲಗಳಿಂದಲೂ, ಪರ್ವತಶಿಖರಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ಹಯಾಭ್ಯಾಂ ಚ ಗಜಾಭ್ಯಾಂ ಚ ಪದಾತಿರಥಿನೌ ಪುನಃ ।
ಯುಯುಧಾತೇ ಮಹಾಮಾಯೌ ರಾಕ್ಷಸಪ್ರವರೌ ಯುಧಿ ॥ ೨೯ ॥

ಮಹಾಮಾಯೆಯನ್ನು ಹೊಂದಿದ, ರಾಕ್ಷಸಶ್ರೇಷ್ಠರಾದ ಅವರಿಬ್ಬರು ಅಶ್ವಗಳಿಂದಲೂ, ಗಜಗಳಿಂದಲೂ, ರಥಗಳಿಂದಲೂ ಕೂಡಿದವರಾಗಿ ಪುನಃ ಪದಾತಿಗಳಾಗಿ ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ತತೋ ಘಟೋತ್ಕಚೋ ರಾಜನ್ನಲಂಬಲವಧೇಪ್ಸಯಾ ।
ಉತ್ಪಪಾತ ಭೃಶಂ ಕ್ರುದ್ಧಃ ಶ್ಯೇನವನ್ನಿಪಪಾತ ಹ ॥ ೩೦ ॥

ಎಲೈ ರಾಜನೇ, ಆಗ ಘಟೋತ್ಕಚನು ಅಲಂಬಲನನ್ನು ಕೊಲ್ಲಲು ಬಯಸಿ ಬಹಳ ಕೋಪಗೊಂಡು ಹದ್ದಿನಂತೆ ತನ್ನ ರಥದಿಂದ ಹಾರಿ ಅವನ ರಥದಲ್ಲಿ ಇಳಿದನು.

ಗೃಹೀತ್ವಾ ಚ ಮಹಾಕಾಯಂ ರಾಕ್ಷಸೇಂದ್ರಮಲಂಬಲಮ್ ।
ಉದ್ಯಮ್ಯ ನ್ಯವಧೀದ್ ಭೂಮೌ ಮಯಂ ವಿಷ್ಣುರಿವಾಹವೇ ॥ ೩೧ ॥

ಮಹಾಶರೀರವುಳ್ಳವನೂ, ರಾಕ್ಷಸಶ್ರೇಷ್ಠನೂ ಆದ ಅಲಂಬಲನನ್ನು ಹಿಡಿದು ಎತ್ತಿ ಭೂಮಿಯಲ್ಲಿ ಒಗೆದು ಯುದ್ಧದಲ್ಲಿ ವಿಷ್ಣುವು ಮಯನನ್ನು ಕೊಂದಂತೆ ಅವನನ್ನು ಕೊಂದನು.

ತತೋ ಘಟೋತ್ಕಚಃ ಖಡ್ಗಮುದ್ಗೃಹ್ಯಾದ್ಭುತದರ್ಶನಮ್ ।
ಚಕರ್ತ ಕಾಯಾದ್ಧಿ ಶಿರೋ ಭೀಮಂ ವಿಕೃತದರ್ಶನಮ್ ॥ ೩೨ ॥

ಅನಂತರ ಘಟೋತ್ಕಚನು ಅದ್ಭುತವಾಗಿ ಕಾಣುತ್ತಿದ್ದ ತನ್ನ ಖಡ್ಗವನ್ನು ಮೇಲಕ್ಕೆತ್ತಿ ವಿಚಿತ್ರವೂ, ಭಯಂಕರವೂ ಆಗಿದ್ದ ಅವನ ಶಿರಸ್ಸನ್ನು ದೇಹದಿಂದ ಕತ್ತರಿಸಿದನು.

ತಚ್ಚಿರೋ ರುಧಿರಾಭ್ಯಕ್ತಂ ಗೃಹ್ಯ ಕೇಶೇಷು ರಾಕ್ಷಸಃ ।
ಘಟೋತ್ಕಚೋ ಯಯಾವಾಶು ದುರ್ಯೋಧನರಥಂ ಪ್ರತಿ ॥ ೩೩ ॥

ರಾಕ್ಷಸನಾದ ಘಟೋತ್ಕಚನು ರಕ್ತವು ಸೋರುತ್ತಿದ್ದ ಅಲಂಬಲನ ಶಿರಸ್ಸನ್ನು ಕೇಶಗಳಲ್ಲಿ ಹಿಡಿದು ಶೀಘ್ರವಾಗಿ ಅದನ್ನು ದುರ್ಯೋಧನನ ರಥದ ಬಳಿಗೆ ಹೋದನು.

ಅಭ್ಯೇತ್ಯ ಚ ಮಹಾಬಾಹುಃ ಸ್ಥಯಮಾನಃ ಸ ರಾಕ್ಷಸಃ ।
ರಥೇऽಸ್ಯ ನಿಕ್ಷಿಪ್ಯ ಶಿರೋ ವಿಕೃತಾನನಮೂರ್ಧಜಮ್ ॥
ಪ್ರಾಣದದ್ ಭೈರವಂ ನಾದಂ ಪ್ರಾವೃಷೀವ ಬಲಾಹಕಃ ॥ ೩೪ ॥

ಮಹಾಬಾಹುವಾದ ರಾಕ್ಷಸನಾದ ಘಟೋತ್ಕಚನು ವಿಕಾರ ಹೊಂದಿದ, ಮುಖ ಮತ್ತು ಕೇಶಗಳುಳ್ಳ ಆ ಶಿರಸ್ಸನ್ನು ದುರ್ಯೋಧನನ ರಥದ ಮೇಲೆ ಎಸೆದು, ಅವನನ್ನು ಸಮೀಪಿಸಿ ಮಳೆಗಾಲದ ಮೋಡದಂತೆ ಭೈರವವಾದ ಗರ್ಜನೆಯನ್ನು ಮಾಡಿದನು.

ಅಬ್ರವೀಚ್ಚ ತತೋ ರಾಜನ್ ದುರ್ಯೋಧನಮಿದಂ ವಚಃ ।
ಏಷ ತೇ ನಿಹತೋ ಬಂಧುಸ್ತ್ವಯಾ ದೃಷ್ಟೋಽಸ್ಯ ವಿಕ್ರಮಃ ।
ಪುನರ್ದ್ರಷ್ಟಾಸಿ ಕರ್ಣಸ್ಯ ನಿಷ್ಠಾಮೇತಾಂ ತಥಾತ್ಮನಃ ॥ ೩೫ ॥

ಎಲೈ ರಾಜನೇ, ಅವನು ದುರ್ಯೋಧನನನ್ನು ಕುರಿತು- 'ಯಾವನ ಪರಾಕ್ರಮವನ್ನು ನೋಡಿದೆಯೋ ಅಂತಹ ನಿನ್ನ ಬಂಧುವು ಹತನಾಗಿದ್ದಾನೆ. ನೀನು ಕರ್ಣನ ಮತ್ತು ಅನಂತರ ನಿನ್ನ ಇಂತಹ ಪರಿಸ್ಥಿತಿಯನ್ನು ನೋಡುವಿ' ಎಂದು ಹೇಳಿದನು.

ಏವಮುಕ್ತ್ವಾ ತತಃ ಪ್ರಾಯಾತ್ ಕರ್ಣಂ ಪ್ರತಿ ಜನೇಶ್ವರ ।
ಕಿರನ್ ಶರಶತಾಂಸ್ತೀಕ್ಷ್ಣಾನ್ ವಿಮುಂಚನ್ ಕರ್ಣಮೂರ್ಧನಿ ॥ ೩೬ ॥

ಎಲೈ ರಾಜನೇ, ದುರ್ಯೋಧನನನ್ನು ಕುರಿತು ಹೀಗೆ ಹೇಳಿ, ಕರ್ಣನ ಶಿರಸ್ಸಿನ ಮೇಲೆ ತೀಕ್ಷ್ಣವಾದ ನೂರಾರು ಬಾಣಗಳನ್ನು ಪ್ರಯೋಗಿಸುತ್ತಾ ಘಟೋತ್ಕಚನು ಕರ್ಣನ ಕಡೆಗೆ ಹೋದನು.

ತತಃ ಸಮಭವದ್ ಯುದ್ಧಂ ಘೋರರೂಪಂ ಭಯಾನಕಮ್ ।
ವಿಸ್ಮಾಪನಂ ಮಹಾರಾಜ ನರರಾಕ್ಷಸಯೋರ್ಮೃಧೇ ॥ ೩೭ ॥

ಎಲೈ ಮಹಾರಾಜನೇ, ಅನಂತರ ನರ-ರಾಕ್ಷಸರಾದ ಕರ್ಣ-ಘಟೋತ್ಕಚರಿಗೆ ಘೋರವೂ, ಭಯಂಕರವೂ, ಆಶ್ಚರ್ಯಕರವೂ ಆದ ಯುದ್ಧವು ನಡೆಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂದನೆಯ ಅಧ್ಯಾಯ

ಕರ್ಣ-ಘಟೋತ್ಕಚರ ಯುದ್ಧದ ವಿಸ್ತೃತ ಕಥನ.

ಧೃತರಾಷ್ಟ್ರಃ

ಯತ್ರ ವೈಕರ್ತನಃ ಕರ್ಣೋ ರಾಕ್ಷಸಶ್ಚ ಘಟೋತ್ಕಚಃ ।
ನಿಶೀಥೇ ಸಮಸಜ್ಜೇತಾಂ ತದ್ ಯುದ್ಧಮಭವತ್ ಕಥಮ್ ॥ ೧ ॥

ಧೃತರಾಷ್ಟ್ರ- ರಾತ್ರಿಯ ಕಾಲದಲ್ಲಿ ವೈಕರ್ತನನಾದ ಕರ್ಣನೂ ರಾಕ್ಷಸನಾದ ಘಟೋತ್ಕಚನೂ ಸಂಸಕ್ತರಾದಾಗ ಯುದ್ಧವು ಹೇಗೆ ನಡೆಯಿತು?

ಕೀದೃಶಂ ಚಾಭವದ್ ಯುದ್ಧಂ ತಸ್ಯ ಘೋರಸ್ಯ ರಕ್ಷಸಃ ।
ರಥಶ್ಚ ಕೀದೃಶಸ್ತಸ್ಯ ಮಾಯಾಃ ಸರ್ವಾಯುಧಾನಿ ಚ ॥ ೨ ॥

ಘೋರರಾದ ಆ ರಾಕ್ಷಸನ ಯುದ್ಧವು ಹೇಗಿದ್ದಿತು? ರಥವು ಹೇಗಿದ್ದಿತು? ಅವನ ಮಾಯೆಗಳು ಮತ್ತು ಎಲ್ಲ ಆಯುಧಗಳು ಹೇಗಿದ್ದವು?

ಕಿಂಪ್ರಮಾಣಾ ಹಯಾಸ್ತಸ್ಯ ರಥಕೇತುರ್ಧನುಸ್ತಥಾ ।
ಕೀದೃಶಂ ವರ್ಮ ಚೈವಾಸ್ಯ ಕಂಠತ್ರಾಣಂ ಚ ಕೀದೃಶಮ್ ।
ಪೃಷ್ಟಸ್ತ್ವಮೇತದಾಚಕ್ಷ್ವ ಕುಶಲೋ ಹ್ಯಸಿ ಸಂಜಯ ॥ ೩ ॥

ಅವನ ಅಶ್ವಗಳ ಎತ್ತರವೆಷ್ಟು? ಅವನ ರಥದ ಧ್ವಜದ ಪರಿಮಾಣವೆಷ್ಟು? ಧನುಸ್ಸಿನ ಪರಿಮಾಣವೆಷ್ಟು? ಅವನ ಕವಚವು ಹೇಗಿದ್ದಿತು? ಅವನ ಕಂಠರಕ್ಷಣ ಹೇಗಿದ್ದಿತು? ಎಲೈ ಸಂಜಯನೇ, ನನ್ನ ಪ್ರಶ್ನೆಗೆ ಉತ್ತರವಾಗಿ ನೀನು ಇದೆಲ್ಲವನ್ನೂ ಹೇಳು. ನೀನು ಕುಶಲನಾಗಿದ್ದೀಯೆ.

ಸಂಜಯಃ

ಲೋಹಿತಾಕ್ಷೋ ಮಹಾಕಾಯಸ್ತಾಮ್ರಾಸ್ಯೋ ನಿಮ್ನಿತೋದರಃ ।
ಊರ್ಧ್ವರೋಮಾ ಹರಿಶ್ಮಶ್ರುಃ ಶಂಕುಕರ್ಣೋ ಮಹಾಹನುಃ ॥ ೪ ॥

ಆಕರ್ಣಾದ್ ದಾರಿತಾಸ್ಯಶ್ಚ ತೀಕ್ಷ್ಣದಂಷ್ಟ್ರಃ ಕರಾಳವಾನ್ ।
ಸುದೀರ್ಘತಾಮ್ರಜಿಹ್ವೋಷ್ಠೋ ಲಂಬಭ್ರೂಃ ಸ್ಥೂಲನಾಸಿಕಃ ॥ ೫ ॥

ನೀಲಾಂಗೋ ಲೋಹಿತಗ್ರೀವೋ ಗಿರಿವರ್ಷ್ಮಾ ಭಯಂಕರಃ ।
ಮಹಾಕಾಯೋ ಮಹಾಬಾಹುರ್ಮಹಾಶೀರ್ಷೋ ಮಹಾಬಲಃ ॥ ೬ ॥

ವಿಕಚಃ ಪರುಷಸ್ಪರ್ಶೋ ವಿಕಟೋದ್ಬದ್ಧಪಿಂಡಿಕಃ ।
ಸ್ಥೂಲಷ್ಟಿಗ್ ಗೂಢನಾಭಿಶ್ಚ ಶಿಥಿಲೋಪಚಯೋ ಮಹಾನ್ ॥ ೭ ॥

ಸಂಜಯ– ಘಟೋತ್ಕಚನು ಕೆಂಪುಕಣ್ಣುಳ್ಳವನು, ದೊಡ್ಡದೇಹ, ಕೆಂಪಾದ ಮುಖ, ಆಳವಾದ ಉದರ, ಮೇಲ್ಮುಖವಾದ ದೇಹದ ರೋಮಗಳು, ಹಸಿರು ಬಣ್ಣದ ಮೀಸೆಗಳು, ತ್ರಿಕೋಣಾಕಾರದ ಕಿವಿಗಳು, ದೊಡ್ಡದಾದ ಗಲ್ಲ, ಕಿವಿಯವರೆಗೂ ಹಬ್ಬಿರುವ ಬಾಯಿ, ತೀಕ್ಷ್ಣವೂ ಕರಾಳವೂ ಆದ ದಂತಗಳು, ದೀರ್ಘವಾದ ಕೆಂಪಾದ ನಾಲಿಗೆ ಮತ್ತು ತುಟಿಗಳು, ಇಳಿಬಿದ್ದಿರುವ ಹುಬ್ಬು, ದಪ್ಪವಾದ ಮೂಗು, ಕಪ್ಪಾದ ಶರೀರ, ಕೆಂಪಾದ ಕತ್ತು- ಇವುಗಳಿಂದ ಕೂಡಿದವನಾಗಿ ಪರ್ವತದ ಕಾಂತಿಯನ್ನು ಹೊಂದಿ, ಭಯಂಕರನಾಗಿ ದೀರ್ಘವಾದ ಬಾಹು, ದೊಡ್ಡ ತಲೆ, ಮಹಾಬಲದಿಂದ ಕೂಡಿ, ಒರಟಾದ ದೇಹಸ್ಪರ್ಶ, ವಿರೂಪವಾದ ದೇಹ, ಸ್ಥೂಲವಾದ ಜಘನಗಳು, ನಿಮ್ನವಾದ ನಾಭಿ, ಪುಷ್ಟಾಂಗಗಳು, ದೊಡ್ಡ ಆಕೃತಿ ಇವುಗಳಿಂದ ಕೂಡಿದವನಾಗಿದ್ದನು.

ತಥೈವ ಹಸ್ತಾಭರಣೋ ಮಹಾಮಾಯೋಂಗದೀ ತಥಾ ।
ಉರಸಾ ಧಾರಯನ್ನಿಷ್ಕಮಗ್ನಿಮಾಲಾಂ ಯಥಾಚಲಃ ॥ ೮ ॥

ಹಾಗೆಯೇ ಹಸ್ತಾಭರಣಗಳನ್ನು ಧರಿಸಿ, ಭುಜಕೀರ್ತಿಗಳನ್ನು ಧರಿಸಿ, ಎದೆಯಲ್ಲಿ ಪರ್ವತವು ಅಗ್ನಿಮಾಲೆಯನ್ನು ಧರಿಸಿದಂತೆ ಚಿನ್ನದ ನಾಣ್ಯಹಾರಗಳನ್ನು ಧರಿಸಿ ಮಹಾಮಾಯೆ ಉಳ್ಳವನಾಗಿದ್ದನು.

ತಸ್ಯ ಹೇಮಮಯಂ ಚಿತ್ರಂ ಬಹುರೂಪಾಂಗಶೋಭಿತಮ್ ।
ತೋರಣಪ್ರತಿಮಂ ಶುಭ್ರಾಂ ಕಿರೀಟಂ ಮೂರ್ಧ್ನ್ಯಶೋಭತ ॥ ೯ ॥

ಕುಂಡಲೇ ಬಾಲಸೂರ್ಯಾಭೇ ಮಾಲಾಂ ಹೇಮಮಯೀಂ ಶುಭಾಮ್।
ಧಾರಯನ್ ವಿಪುಲಂ ಕಾಂಸ್ಯಂ ಕವಚಂ ಚ ಮಹಾಪ್ರಭಮ್ ॥ ೧೦ ॥

ಅವನ ಶಿರಸ್ಸಿನಲ್ಲಿ ಸುವರ್ಣಮಯವಾದ, ಆಶ್ಚರ್ಯಕರವಾದ ಅನೇಕ ರೂಪವುಳ್ಳ ಅವಯವಗಳಿಂದ ಶೋಭಿತವಾದ, ಶಿರಸ್ಸಿಗೆ ಕಟ್ಟಿದ ತೋರಣದಂತಿದ್ದ ಶುಭ್ರವಾದ

ಕಿರೀಟವು ಶೋಭಿಸುತ್ತಿದ್ದಿತು. ಬಾಲಸೂರ್ಯನ ಕಾಂತಿಯನ್ನು ಹೊಂದಿದ ಕುಂಡಲಗಳನ್ನೂ, ಸುವರ್ಣಮಯವಾದ ಪುಷ್ಪಮಾಲೆಯನ್ನು ಮಹಾಕಾಂತಿಯುಳ್ಳ, ವಿಸ್ತಾರವಾದ ಕಂಚಿನ ಕವಚವನ್ನೂ ಧರಿಸಿದ್ದನು.

ಕಿಂಕಿಣೀಶತನಿರ್ಘೋಷಂ ರಕ್ತಧ್ವಜಪತಾಕಿನಮ್ ।
ಋಕ್ಷಚರ್ಮಾವನದ್ಧಾಂಗಂ ನಲ್ವಮಾತ್ರಂ ಮಹಾರಥಮ್ ॥ ೧೧ ॥

ಸರ್ವಾಯುಧವರೋಪೇತಮಾಸ್ಥಿತೋ ಧ್ವಜಮಾಲಿನಮ್ ।
ಅಷ್ಟಚಕ್ರಸಮಾಯುಕ್ತಂ ಮೇಘಗಂಭೀರನಿಸ್ವನಮ್ ॥ ೧೨ ॥

ಅವನ ರಥವು ನೂರಾರು ಕಿಂಕಿಣಿಗಳ ಘೋಷದಿಂದ ಕೂಡಿ, ಕೆಂಪು ಬಣ್ಣದ ಧ್ವಜಪತಾಕೆಗಳನ್ನು ಹೊಂದಿ, ಕರಡಿಯ ಚರ್ಮದಿಂದ ಆಚ್ಛಾದಿಸಲ್ಪಟ್ಟು, ಒಂದು ನಲ್ವದಷ್ಟು ಎತ್ತರವನ್ನು ಹೊಂದಿ, ಸರ್ವಾಯುಧಗಳಿಂದ ತುಂಬಿದುದಾಗಿ, ಧ್ವಜಮಾಲೆಯನ್ನು ಹೊಂದಿ, ಎಂಟು ಚಕ್ರದಿಂದ ಕೂಡಿ, ಮೇಘಗಂಭೀರ ಸ್ವನವುಳ್ಳದ್ದಾಗಿದ್ದಿತು.

ತತ್ರ ಮಾತಂಗಸಂಕಾಶಾ ಲೋಹಿತಾಕ್ಷಾ ವಿಭೀಷಣಾಃ ।
ಕಾಮವರ್ಣಜವಾ ಯುಕ್ತಾ ಬಲವಂತೋಽವಹನ್ ಹಯಾಃ ॥ ೧೩ ॥

ರಾಕ್ಷಸೋಽಸ್ಯ ವಿರೂಪಾಕ್ಷಃ ಸೂತೋ ದೀಪ್ತಾಸ್ಯಕುಂಡಲಃ ।
ರಶ್ಮಿಭಿಃ ಸೂರ್ಯರಶ್ಮ್ಯಾಭೈಃ ಸಂಜಗ್ರಾಹ ಹಯಾನ್ ರಣೇ ।
ಸ ತೇನ ಸಹಿತಸ್ತಸ್ಥಾವರುಣೇನ ಯಥಾ ರವಿಃ ॥ ೧೪ ॥

ಅವನ ಅಂತಹ ರಥವನ್ನು ಆನೆಯನ್ನು ಹೋಲುವ, ಕೆಂಪುಕಣ್ಣುಗಳುಳ್ಳ, ಭಯಂಕರವಾದ, ಕಾಮವರ್ಣ ಮತ್ತು ಕಾಮವೇಗಗಳನ್ನು ಹೊಂದಿದ ಬಲಿಷ್ಠವಾದ ಕುದುರೆಗಳು ಎಳೆದವು. ಆ ರಥದ ಸಾರಥಿಯಾದರೋ ವಿರೂಪಾಕ್ಷವುಳ್ಳವನೂ, ಪ್ರಕಾಶಿಸುವ ಕುಂಡಲವನ್ನು ಹೊಂದಿದ ಮುಖವುಳ್ಳವನೂ ಆದ ಒಬ್ಬ ರಾಕ್ಷಸ. ಸೂರ್ಯನ ಕಿರಣಗಳನ್ನು ಹೋಲುವ ಕಡಿವಾಣವನ್ನು ಹಿಡಿದು, ಅಶ್ವಗಳನ್ನು ನಿಯಂತ್ರಿಸುತ್ತಾ ಅವನು ರಥದಲ್ಲಿ ಅರುಣನಿಂದ ಸಹಿತನಾದ ರವಿಯಂತೆ ಘಟೋತ್ಕಚನು ಶೋಭಿಸುವಂತೆ ಮಾಡಿದನು.

ಸಂಸಕ್ತ ಇವ ಚಾಭ್ರೇಣ ಯಥಾದ್ರಿರ್ಮಹತಾ ಮಹಾನ್ ।
ದಿವಸ್ಪೃಕ್ಸುಮಹಾನ್ ಕೇತುಃ ಸ್ಯಂದನೇಸ್ಯ ಸಮುಚ್ಛ್ರಿತಃ ।
ರಕ್ತೋತ್ತಮಾಂಗಃ ಕ್ರವ್ಯಾದೋ ಗೃಧ್ರಃ ಪರಮಭೀಷಣಃ ॥ ೧೫ ॥

ಅವನ ರಥದ ರಕ್ತವರ್ಣದ ಎತ್ತರವಾದ ಧ್ವಜವು ಮಹಾಪರ್ವತದಂತೆ ಮೋಡಗಳನ್ನು ಮುಟ್ಟುವಂತಿದ್ದಿತು. ಕೆಂಪಾದ ಶಿರಸ್ಸುಳ್ಳ ಮಾಂಸಾಹಾರಿಯಾದ ಪರಮ ಭಯಂಕರವಾದ ಹದ್ದು ಅವನ ಧ್ವಜಚಿಹ್ನೆಯಾಗಿದ್ದಿತು.

ವಾಸವಾಶನಿನಿರ್ಘೋಷಂ ದೃಢಜ್ಯಮಭಿವಿಕ್ಷಿಪನ್ ।
ವ್ಯಕ್ತಂ ಕಿಷ್ಕುಪರೀಣಾಹಂ ದ್ವಾದಶಾರತ್ನಿ ಕಾರ್ಮುಕಮ್ ॥ ೧೬ ॥

ಅವನು ಒಂದು ಕಿಷ್ಕು ಪರಿಮಾಣವುಳ್ಳ ಹನ್ನೆರಡು ಮೊಳ ಎತ್ತರದ ದೃಢವಾದ ಹೆದೆಯನ್ನು ಹೊಂದಿದ ಇಂದ್ರನ ವಜ್ರಾಯುಧದ ಘೋಷಕ್ಕೆ ಸಮವಾದ ಘೋಷವುಳ್ಳ ಧನುಸ್ಸನ್ನು ಹೊಂದಿದ್ದನು.

ರಥಾಕ್ಷಮಾತ್ರೈರಿಷುಭಿಃ ಸರ್ವಾಃ ಪ್ರಚ್ಛಾದಯನ್ ದಿಶಃ ।
ತಸ್ಯಾಂ ವೀರಾಪಹಾರಿಣ್ಯಾಂ ನಿಶಾಯಾಂ ಕರ್ಣಮಭ್ಯಯಾತ್ ॥ ೧೭ ॥

ರಥದ ಅಕ್ಷದಷ್ಟು ಸುತ್ತಳತೆಯುಳ್ಳ ಬಾಣಗಳಿಂದ ಎಲ್ಲಾ ದಿಕ್ಕುಗಳನ್ನೂ ಆಚ್ಛಾದಿಸುತ್ತಾ ವೀರರನ್ನು ನಾಶಗೊಳಿಸುವ ಆ ರಾತ್ರಿಯಲ್ಲಿ ಅವನು ಕರ್ಣನ ಸಮೀಪಕ್ಕೆ ಬಂದನು.

ತಸ್ಯ ವಿಕ್ಷಿಪತಶ್ಚಾಪಂ ರಥೇ ವಿಷ್ಟಭ್ಯ ತಿಷ್ಠತಃ ।
ಅಶ್ರೂಯತ ಧನುರ್ಘೋಷೋ ವಿಸೃಜ್ಯೇತಮಿವಾಶನೇಃ ॥ ೧೮ ॥

ರಥದಲ್ಲಿ ಭದ್ರವಾಗಿ ನಿಂತು ಧನುಸ್ಸನ್ನು ಎಳೆಯುವ ಅವನ ಧನುಸ್ಸಿನ ಘೋಷವು ಸಿಡಿಲಿನ ಸ್ಫೋಟದಂತೆ ಕೇಳಿಬರುತ್ತಿದ್ದಿತು.

ತೇನ ವಿತ್ರಾಸ್ಯಮಾನಾನಿ ತವ ಸೈನ್ಯಾನಿ ಭಾರತ ।
ಸಮಕಂಪಂತ ಸರ್ವಾಣಿ ಸಿಂಧೋರಿವ ಮಹೋರ್ಮಯಃ ॥ ೧೯ ॥

ಎಲೈ ಭಾರತನೇ, ಅವನಿಂದ ಹೆದರಿಸಲ್ಪಟ್ಟ ನಿನ್ನ ಸೈನ್ಯಗಳೆಲ್ಲವೂ ಸಮುದ್ರದ ಅಲೆಗಳಂತೆ ಚಂಚಲವಾದವು.

ತಮಾಪತಂತಂ ಸಂಪ್ರೇಕ್ಷ್ಯ ವಿರೂಪಾಕ್ಷಂ ವಿಭೀಷಣಮ್ ।
ಉತ್ಸ್ಮಯನ್ನಿವ ರಾಧೇಯಸ್ತ್ವರಮಾಣೋಽಭ್ಯವಾರಯತ್ ॥ ೨೦ ॥

ವಿರೂಪಾಕ್ಷನೂ, ಭಯಂಕರನೂ ಆದ ಅವನು ವೇಗದಿಂದ ಬರುತ್ತಿರುವುದನ್ನು ನೋಡಿ ಕರ್ಣನು ನಗುತ್ತಾ ಶೀಘ್ರವಾಗಿ ಅವನನ್ನು ತಡೆದನು.

ತತಃ ಕರ್ಣೋಭ್ಯಯಾದೇನಮಸ್ಯನ್ನಸ್ಯಂತಮಂತಿಕಾತ್ ।
ಮಾತಂಗ ಇವ ಮಾತಂಗಂ ಯೂಥರ್ಷಭ ಇವರ್ಷಭಮ್ ॥ ೨೧ ॥

ಅನಂತರ ಕರ್ಣನು ಹತ್ತಿರದಿಂದ ಬಾಣಗಳನ್ನು ಪ್ರಯೋಗಿಸುತ್ತಾ ಅವನ ಸಮೀಪಕ್ಕೆ ಗಜವು ಗಜದ ಬಳಿಗೆ ಹೋದಂತೆ, ಗೂಳಿಯು ಗೂಳಿಯ ಬಳಿಗೆ ಹೋದಂತೆ ಅವನನ್ನು ಸಮೀಪಿಸಿದನು.

ಸ ಸನ್ನಿಪಾತಸ್ತುಮುಲಸ್ತಯೋರಾಸೀದ್ ವಿಶಾಂಪತೇ ।
ಕರ್ಣರಾಕ್ಷಸಯೋ ರಾಜನ್ನಿಂದ್ರಶಂಬರಯೋರಿವ ॥ ೨೨ ॥

ರಾಜನೇ, ಕರ್ಣನಿಗೂ ರಾಕ್ಷಸನಾದ ಘಟೋತ್ಕಚನಿಗೂ ಉಂಟಾದ ಆ ಸಂಘರ್ಷವು ಇಂದ್ರನಿಗೂ ಶಂಬರನಿಗೂ ಉಂಟಾದ ಸಂಘರ್ಷದಂತೆ ತೀವ್ರವಾಗಿದ್ದಿತು.

ತೌ ಪ್ರಗೃಹ್ಯ ಮಹಾವೇಗೇ ಧನುಷೀ ಭೀಮನಿಸ್ವನೇ ।
ಪ್ರಾಚ್ಛಾದಯೇತಾಮನ್ಯೋನ್ಯಂ ತಕ್ಷಮಾಣೌ ಮಹೇಷುಭಿಃ ॥ ೨೩ ॥

ಅವರು ಮಹಾವೇಗವನ್ನೂ, ಭಯಂಕರ ಘೋಷವನ್ನೂ ಹೊಂದಿದ್ದ ಧನುಸ್ಸುಗಳ ಹಿಡಿದು ದೊಡ್ಡ ಬಾಣಗಳಿಂದ ಪರಸ್ಪರವಾಗಿ ಗಾಯಗೊಳಿಸುತ್ತಾ ಪರಸ್ಪರವಾಗಿ ಮುಚ್ಚಿಹಾಕಿದರು.

ತತಃ ಪೂರ್ಣಾಯತೋತ್ಸೃಷ್ಟೈಃ ಶರೈಃ ಸನ್ನತಪರ್ವಭಿಃ ।
ನ್ಯವಾರಯೇತಾಮನ್ಯೋನ್ಯಂ ಕಾಂಸ್ಯೇ ನಿರ್ಭಿದ್ಯ ವರ್ಮಣೀ ॥ ೨೪ ॥

ಅನಂತರ ಪೂರ್ಣವಾಗಿ ಎಳೆದು ಪ್ರಯೋಗಿಸಿದ ಬಾಗಿದ ತುದಿಯುಳ್ಳ ಬಾಣಗಳಿಂದ ಅವರು ಪರಸ್ಪರವಾಗಿ ತಮ್ಮ ಕಂಚಿನ ಕವಚಗಳನ್ನು ಭೇದಿಸಿ ಒಬ್ಬರನ್ನೊಬ್ಬರು ತಡೆದರು.

ತೌ ನಖೈರಿವ ಶಾರ್ದೂಲೌ ದಂತೈರಿವ ಮಹಾದ್ವಿಪೌ ।
ರಥಶಕ್ತಿಭಿರನ್ಯೋನ್ಯಂ ವಿಶಿಖೈಶ್ಚ ತತಕ್ಷತುಃ ॥ ೨೫ ॥

ವ್ಯಾಘ್ರಗಳು ನಖಗಳಿಂದ ಹೋರಾಡಿದಂತೆ, ಮಹಾಗಜಗಳು ದಂತಗಳಿಂದ ಹೋರಾಡಿದಂತೆ ರಥಭೇದಕವಾದ ಶಕ್ತಿಗಳಿಂದಲೂ ಮತ್ತು ಬಾಣಗಳಿಂದಲೂ ಅವರು ಪರಸ್ಪರವಾಗಿ ಗಾಯಗೊಳಿಸಿದರು.

ಸಂಛಿಂದಂತೌ ಹಿ ಗಾತ್ರಾಣಿ ಸಂದಧಾನೌ ಚ ಸಾಯಕಾನ್ ।
ಧಕ್ಷ್ಯಮಾಣೌ ಶರವ್ರಾತೈರ್ನೋದೀಕ್ಷಿತುಮಶಕ್ನುತಾಮ್ ॥ ೨೬ ॥

ಧನುಸ್ಸುಗಳಲ್ಲಿ ಬಾಣಗಳನ್ನು ಹೂಡಿ, ಬಾಣಗಳ ಸಮೂಹದಿಂದ ಶತ್ರುಸೇನೆಯನ್ನು ಸುಡುವ, ಶತ್ರುಗಳ ಶರೀರವನ್ನು ಕತ್ತರಿಸುವ ಅವರನ್ನು ನೋಡಲು ಯಾರಿಗೂ ಸಾಧ್ಯವಾಗಲಿಲ್ಲ.

ತೌ ತು ವಿಕ್ಷತಸರ್ವಾಂಗೌ ರುಧಿರೌಘಪರಿಪ್ಲುತೌ ।
ವ್ಯಭ್ರಾಜೇತಾಂ ಯಥಾ ವಾರಿಪ್ರಸ್ರುತೌ ಗೈರಿಕಾಚಲೌ ॥ ೨೭ ॥

ದೇಹದಲ್ಲೆಲ್ಲಾ ಗಾಯಗೊಂಡು ರಕ್ತಪ್ರವಾಹವನ್ನು ಸುರಿಸುತ್ತಿದ್ದ ಅವರಿಬ್ಬರೂ ಗೈರಿಕಾದಿ ಧಾತು ರಸವನ್ನು ಸುರಿಸುವ ಪರ್ವತಗಳಂತೆ ಶೋಭಿಸಿದರು.

ತೌ ಶರಾಗ್ರವಿಭಿನ್ನಾಂಗೌ ನಿರ್ಭಿಂದಂತೌ ಪರಸ್ಪರಮ್ ।
ನಾಕಂಪಯೇತಾಮನ್ಯೋನ್ಯಂ ಯತಮಾನೌ ಮಹಾದ್ಯುತೀ ॥ ೨೮ ॥

ಮಹಾಕಾಂತಿಯುಳ್ಳ ಅವರಿಬ್ಬರೂ ಪರಸ್ಪರವಾಗಿ ಬಾಣದ ತುದಿಗಳಿಂದ ಗಾಯಗೊಂಡ ದೇಹವುಳ್ಳವರಾಗಿ ಇನ್ನೊಬ್ಬರನ್ನು ಗಾಯಗೊಳಿಸುತ್ತಾ ಪ್ರಯತ್ನಪಟ್ಟರೂ ಒಬ್ಬರನ್ನೊಬ್ಬರು ಅಲುಗಾಡಿಸಲು ಸಾಧ್ಯವಾಗಲಿಲ್ಲ.

ತತ್ ಪ್ರವೃತ್ತಂ ನಿಶಾಯುದ್ಧಂ ಚಿರಂ ಸಮಮಿವಾಭವತ್ ।
ಪ್ರಾಣಯೋರ್ದ್ಯೂತಕೃತಯೋ ರಾಜನ್ ಕರ್ಣರಾಕ್ಷಸಯೋರ್ಮೃಧೇ ॥೨೯॥

ಎಲೈ ರಾಜನೇ, ಪ್ರಾಣವನ್ನು ಪಣವಾಗಿಟ್ಟ ದ್ಯೂತದಂತೆ ನಡೆಯುವ ಆ ಕರ್ಣ-ರಾಕ್ಷಸರ ರಾತ್ರಿಯುದ್ಧದಲ್ಲಿ ಬಹಳ ಸಮಯ ಸಮವಾಗಿಯೇ ಯುದ್ಧವು ನಡೆಯಿತು.

ತಸ್ಯ ಸಂದಧತಸ್ತೀಕ್ಷ್ಣಾನ್ ಶರಾಂಶ್ಚಾಸಕ್ತಮಸ್ಯತಃ ।
ಧನುರ್ಘೋಷೇಣ ವಿತ್ರಸ್ತಾಃ ಸ್ವೇ ಪರೇ ಚ ತದಾಭವನ್ ।
ಘಟೋತ್ಕಚಂ ಯದಾ ಕರ್ಣೋ ವಿಶೇಷಯತಿ ನೋ ನೃಪ ॥ ೩೦ ॥

ಎಲೈ ರಾಜನೇ, ಕರ್ಣನು ಘಟೋತ್ಕಚನನ್ನು ಮೀರಿಸಲು ಸಾಧ್ಯವಾಗದಿದ್ದಾಗ ಒಂದಕ್ಕೆ ಒಂದು ಸೇರಿಕೊಂಡಂತೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದ ಘಟೋತ್ಕಚನ ಧನುಸ್ಸಿನ ಘೋಷವನ್ನು ಕೇಳಿ ತಮ್ಮವರೂ ಮತ್ತು ಶತ್ರುಗಳು ಭಯವನ್ನು ಹೊಂದಿದರು.

ತತಃ ಪ್ರಾದುಷ್ಕರೋದ್ ದಿವ್ಯಮಸ್ತ್ರಮಸ್ತ್ರವಿದಾಂ ವರಃ ।
ಕರ್ಣೇನ ವಿಹಿತಂ ದೃಷ್ಟ್ವಾ ದಿವ್ಯಮಸ್ತ್ರಂ ಘಟೋತ್ಕಚಃ ।
ಪ್ರಾದುಶ್ಚಕ್ರೇ ಮಹಾಮಾಯಾಂ ರಾಕ್ಷಸಃ ಪಾಂಡುನಂದನಃ ॥ ೩೧ ॥

ಅನಂತರ ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದ ಕರ್ಣನು ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು. ಕರ್ಣನು ದಿವ್ಯಾಸ್ತ್ರಗಳನ್ನು ಪ್ರಯೋಗಿಸುವುದನ್ನು ನೋಡಿ ಪಾಂಡುನಂದನನೂ, ರಾಕ್ಷಸನೂ ಆದ ಘಟೋತ್ಕಚನು ದೊಡ್ಡ ಮಾಯೆಯನ್ನು ಸೃಷ್ಟಿಮಾಡಿದನು.

ಶೂಲಮುದ್ಗರಧಾರಿಣ್ಯಾ ಶೈಲಪಾದಪಹಸ್ತಯಾ ।
ರಕ್ಷಸಾಂ ಘೋರರೂಪಾಣಾಂ ಮಹತ್ಯಾ ಸೇನಯಾ ವೃತಃ ॥ ೩೨ ॥

ತಮುದ್ಯತಮಹಾಚಾಪಂ ದೃಷ್ಟ್ವಾ ತೇ ವ್ಯಥಿತಾ ನೃಪಾಃ ।
ಭೂತಾಂತಕಮಿವಾಯಾಂತಂ ಕಾಲದಂಡೋಗ್ರಧಾರಿಣಮ್ ॥ ೩೩ ॥

ಕೈಯಲ್ಲಿ ಶೂಲ-ಮುದ್ಗರಗಳನ್ನು ಹಿಡಿದ, ಪರ್ವತ ಮತ್ತು ವೃಕ್ಷಗಳನ್ನು ಹಿಡಿದ ಘೋರರೂಪರಾದ ರಾಕ್ಷಸರ ದೊಡ್ಡ ಸೈನ್ಯದಿಂದ ಪರಿವೃತನಾಗಿ, ಕೈಯಲ್ಲಿ ದೊಡ್ಡ ಧನುಸ್ಸನ್ನು ಎತ್ತಿಹಿಡಿದ, ಉಗ್ರವಾದ ಕಾಲದಂಡವನ್ನು ಹಿಡಿದು ಬರುತ್ತಿರುವ ಭೂತಾಂತನಾದ ಯಮನಂತೆ ಇರುವ ಅವನನ್ನು ನೋಡಿ ರಾಜರು ವ್ಯಥೆಗೊಂಡರು.

ಘಟೋತ್ಕಚಪ್ರಮುಕ್ತೇನ ಸಿಂಹನಾದೇನ ಭೀಷಿತಾಃ ।
ಪ್ರಸುಸ್ರುವುರ್ಗಜಾ ಮೂತ್ರಂ ವಿವ್ಯಥುಶ್ಚ ನರಾ ಭೃಶಮ್ ॥ ೩೪ ॥

ಘಟೋತ್ಕಚನು ಮಾಡಿದ ಸಿಂಹನಾದದಿಂದ ಭಯಗೊಂಡ ಗಜಗಳು ಮೂತ್ರವನ್ನು ಸುರಿಸಿದವು. ಯೋಧರು ಬಹಳ ವ್ಯಥೆಯನ್ನು ಹೊಂದಿದರು.

ತತೋಽಶ್ಮವೃಷ್ಟಿರತ್ಯುಗ್ರಾ ಮಹತ್ಯಾಸೀತ್ ಸಮಂತತಃ ।
ಅರ್ಧರಾತ್ರೇಽಧಿಕಬಲೈರ್ವಿಮುಕ್ತಾ ರಕ್ಷಸಾಂ ಬಲೈಃ ॥ ೩೫ ॥

ಅನಂತರ ಅರ್ಧರಾತ್ರಿಯ ಸಮಯದಲ್ಲಿ ಅಧಿಕಬಲವುಳ್ಳ ರಾಕ್ಷಸರ ಸೇನೆಗಳಿಂದ ಸೃಷ್ಟಿಸಲ್ಪಟ್ಟ ಉಗ್ರವಾದ ಮತ್ತು ದೊಡ್ಡದಾದ ಕಲ್ಲಿನ ಮಳೆಯು ಎಲ್ಲ ಕಡೆಗಳಲ್ಲಿಯೂ ಉಂಟಾಯಿತು.

ಆಯಸಾನಿ ಚ ಚಕ್ರಾಣಿ ಭುಶುಂಡ್ಯಃ ಶಕ್ತಿತೋಮರಾಃ ।
ಪತಂತ್ಯವಿರಲಾಃ ಶೂಲಾಃ ಶತಘ್ನ್ಯಃ ಪಟ್ಟಿಶಾಸ್ತಥಾ ॥ ೩೬ ॥

ಕಬ್ಬಿಣದ ಚಕ್ರಗಳೂ, ಭುಶುಂಡಿಗಳೂ, ಶಕ್ತಿ-ತೋಮರಗಳೂ, ನಿಬಿಡವಾದ ಶೂಲಗಳೂ, ಶತಘ್ನಿಗಳೂ ಮತ್ತು ಪಟ್ಟಿಶಗಳೂ ಬೀಳಲು ಪ್ರಾರಂಭಿಸಿದವು.

ತದುಗ್ರಮತಿರೌದ್ರಂ ಚ ದೃಷ್ಟ್ವಾ ಯುದ್ಧಂ ನರಾಧಿಪಾಃ ।
ಪುತ್ರಾಶ್ಚ ತವ ಯೋಧಾಶ್ಚ ವ್ಯಥಿತಾ ವಿಪ್ರದುದ್ರುವುಃ ॥ ೩೭ ॥

ಅತ್ಯಂತ ಘೋರವೂ ಮತ್ತು ಭಯಂಕರವೂ ಆದ ಆ ಯುದ್ಧವನ್ನು ನೋಡಿ ರಾಜರೂ, ನಿನ್ನ ಪುತ್ರರೂ ಮತ್ತು ಉಳಿದ ಯೋಧರೂ ವ್ಯಥೆಗೊಂಡು ಓಡಿಹೋದರು.

ತತ್ರೈಕೋಽಸ್ತ್ರಬಲಶ್ಲಾಘೀ ಕರ್ಣೋ ಮಾನೀ ನ ವಿವ್ಯಥೇ ।
ವ್ಯಧಮಚ್ಚ ಶರೈರ್ಮಾಯಾಂ ಘಟೋತ್ಕಚವಿನಿರ್ಮಿತಾಮ್ ॥ ೩೮ ॥

ಅಸ್ತ್ರಬಲವನ್ನು ಶ್ಲಾಘಿಸುವ ಆತ್ಮಾಭಿಮಾನಿಯಾದ ಕರ್ಣನೊಬ್ಬನೇ ಅಲ್ಲಿ ವ್ಯಥೆಪಡಲಿಲ್ಲ. ಅವನು ಘಟೋತ್ಕಚನು ಸೃಷ್ಟಿಸಿದ ಮಾಯೆಯನ್ನು ತನ್ನ ಬಾಣಗಳಿಂದ ನಾಶಪಡಿಸಿದನು.

ಮಾಯಾಯಾಂ ತು ಪ್ರಹೀಣಾಯಾಮಮರ್ಷಾತ್ ಸ ಘಟೋತ್ಕಚಃ ।
ವಿಸಸರ್ಜ ಶರಾನ್ ಘೋರಾನ್ ಸೂತಪುತ್ರಂ ತ ಆವಿಶನ್ ॥ ೩೯ ॥

ತನ್ನ ಮಾಯೆಯು ನಾಶವನ್ನು ಹೊಂದುತ್ತಿರಲು ಕೋಪಗೊಂಡ ಘಟೋತ್ಕಚನು ಘೋರವಾದ ಬಾಣಗಳನ್ನು ಪ್ರಯೋಗಿಸಿದನು. ಅವು ಕರ್ಣನ ಶರೀರದಲ್ಲಿ ನಾಟಿದವು.

ತತಸ್ತೇ ರುಧಿರಾಭ್ಯಕ್ತಾ ಭಿತ್ತ್ವಾ ಕರ್ಣಂ ಮಹಾಹವೇ ।
ವಿವಿಶುರ್ಧರಣೀಂ ಬಾಣಾಃ ಸಂಕ್ರುದ್ಧ ಇವ ಪನ್ನಗಾಃ ॥ ೪೦ ॥

ಅನಂತರ ಅವು ರಣರಂಗದಲ್ಲಿ ಕರ್ಣನ ಶರೀರವನ್ನು ಭೇದಿಸಿ, ರಕ್ತಲೇಪನವನ್ನು ಹೊಂದಿ, ಬಹಳ ಕೋಪಗೊಂಡ ಸರ್ಪಗಳಂತೆ ಭೂಮಿಯಲ್ಲಿ ಇಳಿದವು.

ಸೂತಪುತ್ರಸ್ತು ಸಂಕ್ರುದ್ಧೋ ಲಘುಹಸ್ತಃ ಪ್ರತಾಪವಾನ್ ।
ಘಟೋತ್ಕಚಮಭಿದ್ರುತ್ಯ ಬಿಭೇದ ದಶಭಿಃ ಶರೈಃ ॥ ೪೧ ॥

ಪ್ರತಾಪಶಾಲಿಯೂ, ಕ್ಷಿಪ್ರಹಸ್ತನೂ ಆದ ಕರ್ಣನು ಬಹಳ ಕೋಪಗೊಂಡು ಘಟೋತ್ಕಚನ ಕಡೆಗೆ ಓಡಿ ಹತ್ತು ಬಾಣಗಳಿಂದ ಅವನ ಶರೀರವನ್ನು ಭೇದಿಸಿದನು.

ಘಟೋತ್ಕಚೋ ವಿನಿರ್ಭಿನ್ನಃ ಸೂತಪುತ್ರೇಣ ಮರ್ಮಸು ।
ಚಕ್ರಂ ದಿವ್ಯಂ ಸಹಸ್ರಾರಮಗೃಹ್ಣಾದ್ ವ್ಯಥಿತೋ ಭೃಶಮ್ ॥ ೪೨ ॥

ಸೂತಪುತ್ರನಾದ ಕರ್ಣನಿಂದ ಮರ್ಮಸ್ಥಾನಗಳಲ್ಲಿ ಕತ್ತರಿಸಲ್ಪಟ್ಟ ಘಟೋತ್ಕಚನು ಬಹಳ ವ್ಯಥೆಯನ್ನು ಹೊಂದಿ ಸಹಸ್ರ ಅಂಚುಗಳನ್ನುಳ್ಳ ದಿವ್ಯವಾದ ಚಕ್ರವನ್ನು ಕೈಯಲ್ಲಿ ತೆಗೆದುಕೊಂಡನು.

ಕ್ಷುರಾಂತಂ ಬಾಲಸೂರ್ಯಾಭಂ ಮಣಿರತ್ನವಿಭೂಷಿತಮ್ ।
ಚಿಕ್ಷೇಪಾಧಿರಥೇಃ ಕ್ರುದ್ಧೋ ಭೈಮಸೇನಿರ್ಜಿಘಾಂಸಯಾ ॥ ೪೩ ॥

ಭೀಮಸೇನನ ಪುತ್ರನಾದ ಅವನು ಕೋಪಗೊಂಡು ಕರ್ಣನನ್ನು ಕೊಲ್ಲಲು ಬಯಸಿ ಕತ್ತಿಯಂತಹ ಅಲುಗುಳ್ಳ, ಬಾಲಸೂರ್ಯನ ಕಾಂತಿಯನ್ನು ಹೊಂದಿದ, ಮಣಿರತ್ನ ವಿಭೂಷಿತವಾದ ಆ ಚಕ್ರವನ್ನು ಕರ್ಣನ ಮೇಲೆ ಎಸೆದನು.

ಪ್ರವಿದ್ಧಮತಿವೇಗೇನ ವಿಕ್ಷಿಪ್ತಂ ಕರ್ಣಸಾಯಕೈಃ ।
ಅಭಾಗ್ಯಸ್ಯೇವ ಸಂಕಲ್ಪಸ್ತನ್ಮೋಘಮಪತದ್ ಭುವಿ ॥ ೪೪ ॥

ಬಹಳ ವೇಗದಿಂದ ಎಸೆಯಲ್ಪಟ್ಟ ಆ ಚಕ್ರವು ಕರ್ಣನ ಬಾಣಗಳಿಂದ ಹೊಡೆಯಲ್ಪಟ್ಟು ದುರದೃಷ್ಟಶಾಲಿಯ ಆಸೆಯಂತೆ ವ್ಯರ್ಥವಾಗಿ ಭೂಮಿಯ ಮೇಲೆ ಬಿದ್ದಿತು.

ಘಟೋತ್ಕಚಸ್ತು ಸಂಕ್ರುದ್ಧೋ ದೃಷ್ಟ್ವಾ ಚಕ್ರಂ ನಿಪಾತಿತಮ್ ।
ಕರ್ಣಂ ಪ್ರಾಚ್ಛಾದಯದ್ ಬಾಣೈಃ ಸ್ವರ್ಭಾನುರಿವ ಭಾಸ್ಕರಮ್ ॥ ೪೫ ॥

ತನ್ನ ಚಕ್ರವು ಭೂಮಿಯ ಮೇಲೆ ಬಿದ್ದುದನ್ನು ನೋಡಿದ ಘಟೋತ್ಕಚನು ಬಹಳ ಕೋಪಗೊಂಡು ರಾಹುವು ಸೂರ್ಯನನ್ನು ಮುಚ್ಚುವಂತೆ ತನ್ನ ಬಾಣಗಳಿಂದ ಕರ್ಣನನ್ನು ಮುಚ್ಚಿಹಾಕಿದನು.

ಸೂತಪುತ್ರಸ್ತ ಸಂಭ್ರಾಂತೋ ರುದ್ರೋಪೇಂದ್ರೇಂದ್ರವಿಕ್ರಮಃ ।
ಘಟೋತ್ಕಚರಥಂ ತೂರ್ಣಂ ಛಾದಯಾಮಾಸ ಪತ್ರಿಭಃ ॥ ೪೬ ॥

ರುದ್ರ-ಉಪೇಂದ್ರ-ಇಂದ್ರನ ಪರಾಕ್ರಮವನ್ನು ಹೊಂದಿದ ಸೂತಪುತ್ರನಾದ ಕರ್ಣನು ಗಾಬರಿಗೊಳ್ಳದೆ ಶೀಘ್ರವಾಗಿ ಘಟೋತ್ಕಚನ ರಥವನ್ನು ಬಾಣಗಳಿಂದ ಆಚ್ಛಾದಿಸಿದನು.

ಘಟೋತ್ಕಚೇನ ಕ್ರುದ್ಧೇನ ಗದಾ ಹೇಮಾಂಗದಾ ತದಾ ।
ಕ್ಷಿಪ್ತಾ ಭ್ರಾಮ್ಯ ಶರೈಃ ಸಾಪಿ ಕರ್ಣೇನಾಭ್ಯಾಹತಾಪತತ್ ॥ ೪೭ ॥

ಆಗ ಕೋಪಗೊಂಡ ಘಟೋತ್ಕಚನು ಚಿನ್ನದ ಪಟ್ಟಿಯಿರುವ ಗದೆಯನ್ನು ತಿರುಗಿಸಿ ಕರ್ಣನ ಮೇಲೆ ಎಸೆದನು. ಅದನ್ನೂ ಸಹ ಕರ್ಣನು ತನ್ನ ಬಾಣಗಳಿಂದ ಹೊಡೆದು ಬೀಳಿಸಿದನು.

ತತೋಽಂತರಿಕ್ಷಮುತ್ಪತ್ಯ ಕಾಲಮೇಘ ಇವೋನ್ನದನ್ ।
ಪ್ರವವರ್ಷ ಮಹಾಕಾಯೋ ದ್ರುಮವರ್ಷಂ ನಭಸ್ತಳಾತ್ ॥ ೪೮ ॥

ಅನಂತರ ಮಹಾಕಾಯನಾದ ಘಟೋತ್ಕಚನು ಅಂತರಿಕ್ಷಕ್ಕೆ ಹಾರಿ ಕಾಲಮೇಘದಂತೆ ಗರ್ಜಿಸುತ್ತಾ ಆಕಾಶದಿಂದ ಕರ್ಣನ ಮೇಲೆ ತೀಕ್ಷ್ಣವಾದ ಮಂಗಳ ಮಳೆಯನ್ನು ಸುರಿಸಿದನು.

ತತೋ ಮಾಯಾವಿನಂ ಕರ್ಣೋ ಭೀಮಸೇನಸುತಂ ದಿವಿ ।
ಮಾರ್ಗಣೈರಭಿವಿವ್ಯಾಧ ಘನಂ ಸೂರ್ಯ ಇವಾಂಶುಭಿಃ ॥ ೪೯ ॥

ಆಗ ಕರ್ಣನು ಭೀಮಸೇನನ ಸುತನಾದ, ಮಾಯಾವಿಯಾದ ಘಟೋತ್ಕಚನನ್ನು ಅಂತರಿಕ್ಷದಲ್ಲಿಯೇ ಸೂರ್ಯನು ತನ್ನ ಕಿರಣಗಳಿಂದ ಕತ್ತಲೆಯನ್ನು ಹೊಡೆಯುವಂತೆ ತನ್ನ ಬಾಣಗಳಿಂದ ಹೊಡೆದನು.

ತಸ್ಯ ಸರ್ವಾನ್ ಹಯಾನ್ ಹತ್ವಾ ಸಂಭಿದ್ಯ ಶತಧಾ ರಥಮ್ ।
ಅಭ್ಯವರ್ಷಚ್ಛರೈಃ ಕರ್ಣಃ ಪರ್ಜನ್ಯ ಇವ ವೃಷ್ಟಿಮಾನ್ ॥ ೫೦ ॥

ಕರ್ಣನು ಪರ್ಜನ್ಯನಂತೆ ಬಾಣಗಳ ಮಳೆಯನ್ನು ಸುರಿಸಿ, ಅವನ ಎಲ್ಲ ಅಶ್ವಗಳನ್ನೂ ಮತ್ತು ರಥವನ್ನೂ ನೂರು ಭಾಗವಾಗಿ ಕತ್ತರಿಸಿದನು.

ನ ಚಾಸ್ಯಾಸೀದನಿರ್ಭಿನ್ನಂ ಗಾತ್ರೇ ದ್ವ್ಯಂಗುಲಮಂತರಮ್ ।
ಸೋಽದೃಶ್ಯತ ಮುಹೂರ್ತೇನ ಶ್ವಾವಿಚ್ಛಲಲಿತೋ ಯಥಾ ॥ ೫೧ ॥

ಘಟೋತ್ಕಚನ ದೇಹದಲ್ಲಿ ಎಲ್ಲಿಯೂ ಗಾಯಗೊಳ್ಳದ ಎರಡು ಅಂಗುಲಿಗಳಷ್ಟು ಪ್ರದೇಶವೂ ಇರಲಿಲ್ಲ. ಒಂದು ಮುಹೂರ್ತದಲ್ಲಿ ಅವನು ಮುಳ್ಳುಗಳಿಂದ ಕೂಡಿದ ಮುಳ್ಳುಹಂದಿಯಂತೆ ಕಂಡುಬಂದನು.

ನ ಹಯಾನ್ನ ರಥಂ ತಸ್ಯ ನ ಧ್ವಜಂ ನ ಘಟೋತ್ಕಚಮ್ ।
ದೃಷ್ಟವಂತಃ ಸ್ಮ ಸಮರೇ ಶರೌಘೈರಭಿ ಸಂವೃತಮ್ ॥ ೫೨ ॥

ಅವನು ಬಾಣಗಳ ಸಮೂಹದಿಂದ ಮುಚ್ಚಲ್ಪಟ್ಟಾಗ ರಣರಂಗದಲ್ಲಿ ನಾವು ಘಟೋತ್ಕಚನನ್ನಾಗಲೀ, ಅವನ ಅಶ್ವಗಳನ್ನಾಗಲೀ, ರಥವನ್ನಾಗಲೀ, ಧ್ವಜವನ್ನಾಗಲೀ ಕಾಣಲಿಲ್ಲ.

ಸ ತು ಕರ್ಣಸ್ಯ ತದ್ ದಿವ್ಯಮಸ್ತ್ರಮಸ್ತ್ರೇಣ ಶಾತಯನ್ ।
ಮಾಯಾಯುದ್ಧೇನ ಮಾಯಾವೀ ಸೂತಪುತ್ರಮಯೋಧಯತ್ ॥೫೩॥

ಮಾಯಾವಿಯಾದ ಅವನು ಕರ್ಣನ ದಿವ್ಯಾಸ್ತ್ರಗಳನ್ನು ಮಾಯಾ ಯುದ್ಧದಿಂದ ತನ್ನ ಅಸ್ತ್ರದಿಂದ ನಾಶಗೊಳಿಸುತ್ತಾ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸೋಽಯೋಧಯತ್ ತದಾ ಕರ್ಣಂ ಮಾಯಯಾ ಲಾಘವೇನ ಚ ।
ಅಲಕ್ಷ್ಯಮಾಣೋಽಥ ದಿವಿ ಶರಜಾಲೇಷು ಸಂಪತನ್ ॥ ೫೪ ॥

ಬಾಣಗಳ ಸಮೂಹದಲ್ಲಿ ಅಲಕ್ಷಿತನಾದ ಅವನು ಮಾಯೆಯನ್ನು ಮತ್ತು ಕ್ಷಿಪ್ರತೆಯನ್ನು ಆಶ್ರಯಿಸಿ ಅಂತರಿಕ್ಷಕ್ಕೆ ಹಾರಿ ಅಲ್ಲಿಂದ ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಭೈಮಸೇನಿರ್ಮಹಾಮಾಯೋ ಮಾಯಯಾ ಕುರುಸತ್ತಮ ।
ಪ್ರಚಕಾರ ಮಹಾಮಾಯಾಂ ಮೋಹಯನ್ನಿವ ಭಾರತ ॥ ೫೫ ॥

ಎಲೈ ಭಾರತನೇ, ಕುರುಶ್ರೇಷ್ಠನೇ, ತನ್ನ ಮಹಾಮಾಯೆಯಿಂದ ಕರ್ಣನನ್ನು ಮೋಹಗೊಳಿಸುತ್ತಾ ಭೀಮಸೇನನ ಪುತ್ರನಾದ ಘಟೋತ್ಕಚನು ಮಾಯೆಗಳನ್ನು ಸೃಷ್ಟಿಸಿದನು.

ಸ ಸ್ಮ ಕೃತ್ವಾ ವಿರೂಪಾಣಿ ವದನಾನ್ಯಶುಭಾನನಃ ।
ಅಗ್ರತಃ ಸೂತಪುತ್ರಸ್ಯ ದಿವ್ಯಾನ್ಯಸ್ತ್ರಾಣಿ ಮಾಯಯಾ ॥ ೫೬ ॥

ಪುನಶ್ಚಾಪಿ ಮಹಾಕಾಯಃ ಸಂಛಿನ್ನಃ ಶತಧಾ ರಣೇ ।
ಗತಸತ್ತ್ವೋ ನಿರುತ್ಸಾಹಃ ಪತಿತಃ ಖಾದ್ ವ್ಯದೃಶ್ಯತ ।
ಹತಂ ತಂ ಮನ್ಯಮಾನಾಃ ಸ್ಮ ಪ್ರಾಣದನ್ ಕುರುಪುಂಗವಾಃ ॥ ೫೭ ॥

ಅಶುಭವಾದ ಮುಖವುಳ್ಳ ಅವನು ಅನೇಕ ರೂಪಗಳನ್ನು ತೆಗೆದುಕೊಂಡು ತನ್ನ ಮಾಯೆಯಿಂದ ಕರ್ಣನ ಮೇಲೆ ದಿವ್ಯಾಸ್ತ್ರಗಳನ್ನು ಸುರಿಸಿದನು. ಮಹಾಕಾಯನಾದ ಅವನು ಪುನಃ ಕರ್ಣನ ಬಾಣಗಳಿಂದ ರಣರಂಗದಲ್ಲಿ ನೂರಾರು ಸ್ಥಳದಲ್ಲಿ ಗಾಯಗೊಂಡು ತನ್ನ ಬಲವನ್ನೂ, ಉತ್ಸಾಹವನ್ನೂ ಕಳೆದುಕೊಂಡು ಅಂತರಿಕ್ಷದಿಂದ ಕೆಳಗೆ ಬೀಳುವುದು ಕಂಡುಬಂದಿತು. ಘಟೋತ್ಕಚನು ಹತನಾದನೆಂದು ತಿಳಿದು ಕುರುಪುಂಗವರು ದೊಡ್ಡನಾದವನ್ನು ಮಾಡಿದರು.

ಅಥ ದೇಹೈರ್ನವೈರನ್ಯೈರ್ದಿಕ್ಷು ಸರ್ವಾಸ್ವದೃಶ್ಯತ ।
ಪುನಶ್ಚಾಪಿ ಮಹಾಕಾಯಃ ಶತಶೀರ್ಷಃ ಶತೋದರಃ ॥ ೫೮ ॥

ಅನಂತರ ಅವನು ನೂರು ಶಿರಸ್ಸುಗಳನ್ನು ಧರಿಸಿದ, ನೂರು ಉದರಗಳನ್ನು ಹೊಂದಿದ ದೊಡ್ಡ ಶರೀರವನ್ನು ತೆಗೆದುಕೊಂಡು ಎಲ್ಲ ದಿಕ್ಕುಗಳಲ್ಲಿಯೂ ಪುನಃ ಕಂಡುಬಂದನು.

ವ್ಯದೃಶ್ಯತ ಮಹಾಬಾಹುರ್ಮೈನಾಕ ಇವ ಪರ್ವತಃ ।
ಅಂಗುಷ್ಠಮಾತ್ರೋ ಭೂತ್ವಾ ಚ ಪುನರೇವ ಸ ರಾಕ್ಷಸಃ ।
ಸಾಗರೋರ್ಮಿರಿವೋದ್ಧೂತಸ್ತಿರ್ಯಗೂರ್ಧ್ವಮವರ್ತತ ॥ ೫೯ ॥

ಮಹಾಬಾಹುವಾದ ಅವನು ಮೈನಾಕಪರ್ವತದಂತೆ ಕಂಡುಬಂದನು. ಅಂಗುಷ್ಠ ಮಾತ್ರದಷ್ಟು ಎತ್ತರವಿದ್ದ ಆ ರಾಕ್ಷಸನು ಏಳುವ ಸಾಗರದ ಅಲೆಗಳಂತೆ ಅಡ್ಡವಾಗಿ ಮತ್ತು ಮೇಲ್ಮುಖವಾಗಿ ಬೆಳೆದನು.

ವಸುಧಾಂ ದಾರಯಿತ್ವಾ ಚ ಪುನರಪ್ಸು ನ್ಯಮಜ್ಜತ ।
ಅದೃಶ್ಯತ ತದಾ ತತ್ರ ಪುನರುನ್ಮಜ್ಜತೋನ್ಯತಃ ॥ ೬೦ ॥

ಭೂಮಿಯನ್ನು ಸೀಳಿಕೊಂಡು ಅವನು ನೀರಿನಲ್ಲಿ ಮುಳುಗಿ ಇನ್ನೊಂದು ಸ್ಥಳದಲ್ಲಿ ಮೇಲೇಳುವುದು ಕಂಡುಬಂದಿತು.

ಸೋಽವತೀರ್ಯ ಪುನಸ್ತಸ್ಥೌ ರಥೇ ಹೇಮಪರಿಷ್ಕೃತೇ ।
ಕ್ಷಿತಿಂ ದ್ಯಾಂ ಚ ದಿಶಶ್ಚೈವ ಮಾಯಯಾऽऽವೃತ್ಯ ದಂಶಿತಃ ॥ ೬೧ ॥

ಅವನು ಇನ್ನೊಮ್ಮೆ ಭೂಮಿಯಲ್ಲಿ ಇಳಿದು ಸುವರ್ಣಾಲಂಕೃತವಾದ ರಥವನ್ನು ಏರಿ ತನ್ನ ಮಾಯೆಯಿಂದ ಭೂಮಿ-ಅಂತರಿಕ್ಷವನ್ನು ಮತ್ತು ದಿಕ್ಕುಗಳನ್ನು ವ್ಯಾಪಿಸಿ ಶಸ್ತ್ರಕವಚ ಸನ್ನದ್ಧನಾಗಿ ನಿಂತನು.

ಗತ್ವಾ ಕರ್ಣರಥಾಭ್ಯಾಶಂ ವಿಚಲತ್ಕುಂಡಲಾನನಃ ।
ಪ್ರಾಹ ವಾಕ್ಯಮಸಂಭ್ರಾಂತಃ ಸೂತಪುತ್ರಂ ವಿಶಾಂಪತೇ ॥ ೬೨ ॥

ತಿಷ್ಠೇದಾನೀಂ ನ ಮೇ ಜೀವನ್ ಸೂತಪುತ್ರ ಗಮಿಷ್ಯಸಿ ।
ಯುದ್ಧಶ್ರದ್ಧಾಮಹಂ ತೇऽದ್ಯ ವಿನೇಷ್ಯಾಮಿ ರಣಾಜಿರೇ ॥ ೬೩ ॥

ಎಲೈ ರಾಜನೇ, ಚಲಿಸುವ ಕುಂಡಲಗಳನ್ನು ಹೊಂದಿದ ಮುಖವುಳ್ಳ ಅವನು ಕರ್ಣನ ರಥದ ಸಮೀಪಕ್ಕೆ ಹೋಗಿ, ಗಾಬರಿಗೊಳ್ಳದೆ ಸೂತಪುತ್ರನನ್ನು ಕುರಿತು- 'ಎಲೈ

ಸೂತಪುತ್ರನೇ, ಈಗ ನಿಲ್ಲು, ಜೀವಿಸಿ ನನ್ನಿಂದ ಹೋಗಲಾರೆ. ನಿನಗಿರುವ ಯುದ್ಧಶ್ರದ್ಧೆಯನ್ನು ನಾನು ಈ ದಿನ ನಾಶಗೊಳಿಸುವೆನು' ಎಂದು ಹೇಳಿದನು.

ಇತ್ಯುಕ್ತ್ವಾ ರೋಷತಾಮ್ರಾಕ್ಷಂ ರಕ್ಷಃ ಕ್ರೂರಪರಾಕ್ರಮಮ್ ।
ಉತ್ಪಪಾತಾಂತರಿಕ್ಷಂ ಚ ಜಹಾಸ ಚ ಸುವಿಸ್ವರಮ್ ।
ಕರ್ಣಮಭ್ಯಾಹನಚ್ಚೈವ ಗಜೇಂದ್ರಮಿವ ಕೇಸರೀ ॥ ೬೪ ॥

ಹೀಗೆ ಹೇಳಿ ರೋಷದಿಂದ ಕೆಂಪಾದ ಕಣ್ಣುಳ್ಳ, ಕ್ರೂರಪರಾಕ್ರಮವುಳ್ಳ ಆ ರಾಕ್ಷಸನು ಅಂತರಿಕ್ಷಕ್ಕೆ ಹಾರಿ, ವಿಕಾರಸ್ವರದಿಂದ ನಕ್ಕು, ಸಿಂಹವು ಗಜವನ್ನು ಹೊಡೆಯುವಂತೆ ಕರ್ಣನನ್ನು (ಬಾಣಗಳಿಂದ) ಹೊಡೆದನು.

ರಥಾಕ್ಷಮಾತ್ರೈರಿಷುಭಿರಭ್ಯವರ್ಷದ್ ಘಟೋತ್ಕಚಃ ।
ರಥಿನಾಮೃಷಭಂ ಕರ್ಣಂ ಧಾರಾಭಿರಿವ ತೋಯದಃ ।
ಶರವೃಷ್ಟಿಂ ಚ ತಾಂ ಕರ್ಣೋ ದೂರಪ್ರಾಪ್ತಾಮಶಾತಯತ್ ॥ ೬೫ ॥

ರಥದ ಅಕ್ಷದಷ್ಟು ಗಾತ್ರವುಳ್ಳ ಬಾಣಗಳಿಂದ ಘಟೋತ್ಕಚನು ಮೋಡವು ಮಳೆಯನ್ನು ಸುರಿಸುವಂತೆ ರಥಿಕಶ್ರೇಷ್ಠನಾದ ಕರ್ಣನನ್ನು ಪೀಡಿಸಿದನು. ಕರ್ಣನು ಆ ಬಾಣವೃಷ್ಟಿಯು ದೂರವಿರುವಾಗಲೇ ಅದನ್ನು ನಾಶಗೊಳಿಸಿದನು.

ದೃಷ್ಟ್ವಾ ಚ ವಿಹತಾಂ ಮಾಯಾಂ ಕರ್ಣೇನ ಭರತರ್ಷಭ ।
ಘಟೋತ್ಕಚಸ್ತತೋ ಮಾಯಾಂ ಸಸರ್ಜಾಂತರ್ಹಿತಃ ಪುನಃ ॥ ೬೬ ॥

ಎಲೈ ಭರತಶ್ರೇಷ್ಠನೇ, ತನ್ನ ಮಾಯೆಯು ಕರ್ಣನಿಂದ ನಾಶಗೊಳಿಸಲ್ಪಟ್ಟುದನ್ನು ನೋಡಿ, ಘಟೋತ್ಕಚನು ಅಂತರ್ಧಾನವನ್ನು ಹೊಂದಿ, ಪುನಃ ಮಾಯೆಯನ್ನು ಸೃಷ್ಟಿಸಿದನು.

ಸೋಽಭವದ್ ಗಿರಿರತ್ಯುಚ್ಚಃ ಶಿಖರೈಸ್ತರುಸಂಕಟೈಃ ।
ಶೂಲಪ್ರಾಸಾಸಿಮುಸಲಜಲಪ್ರಸ್ರವಣೋ ಮಹಾನ್ ॥ ೬೭ ॥

ಅವನು ನಿಬಿಡವಾದ ಮರಗಳಿಂದ ಕೂಡಿದ ಎತ್ತರವಾದ ಪರ್ವತವಾದನು. ಶೂಲ-ಪ್ರಾಸ-ಖಡ್ಗ-ಮುಸಲಗಳ ಜಲವು ಹರಿಯುವ ಮಹಾನದಿಯಾದನು.

ತಮಂಜನಚಯಪ್ರಖ್ಯಂ ಕರ್ಣೋ ದೃಷ್ಟ್ವಾ ಮಹೀಧರಮ್ ।
ಪ್ರಪಾತೈರಾಯುಧಾನ್ಯುಗ್ರಾಣ್ಯುದ್ವಹಂತಂ ನ ಚುಕ್ಷುಭೇ ॥ ೬೮ ॥

ತನ್ನ ಶರೀರದಲ್ಲಿ ಆಯುಧಗಳನ್ನು ಧರಿಸಿದ್ದ, ಕಾಡಿಗೆಯ ರಾಶಿಯಂತಿದ್ದ ಆ ಪರ್ವತವನ್ನು ನೋಡಿ ಕರ್ಣನು ಧೃತಿಗೆಡಲಿಲ್ಲ.

ಸ್ಮಯನ್ನಿವ ತತಃ ಕರ್ಣೋ ದಿವ್ಯಮಸ್ತ್ರಮುದೀರಯತ್ ।
ತತಃ ಸೋಽಸ್ತ್ರೇಣ ಶೈಲೇಂದ್ರೋ ವಿಕ್ಷಿಪ್ತೋ ವೈ ವ್ಯನಶ್ಯತ ॥ ೬೯ ॥

ಅವನು ನಗುತ್ತಾ ದಿವ್ಯಾಸ್ತ್ರವನ್ನು ಪ್ರಯೋಗಿಸಿದನು. ಕರ್ಣನ ದಿವ್ಯಾಸ್ತ್ರದಿಂದ ಹೊಡೆಯಲ್ಪಟ್ಟ ಆ ಉನ್ನತವಾದ ಪರ್ವತವು ನಾಶವನ್ನು ಹೊಂದಿತು.

ತತಃ ಸ ತೋಯದೋ ಭೂತ್ವಾ ನೀಲಃ ಸೇಂದ್ರಾಯುಧೋ ದಿವಿ ।
ಅಶ್ಮವೃಷ್ಟಿಭಿರತ್ಯುಗ್ರಃ ಸೂತಪುತ್ರಮವಾಕಿರತ್ ॥ ೭೦ ॥

ಅನಂತರ ಉಗ್ರನಾದ ಅವನು ಇಂದ್ರಾಯುಧದಿಂದ ಸಹಿತವಾದ ನೀಲಮೇಘನಾಗಿ ಅಂತರಿಕ್ಷದಲ್ಲಿ ನಿಂತು ಕರ್ಣನ ಮೇಲೆ ಕಲ್ಲಿನ ಮಳೆಯನ್ನು ಸುರಿಸಿದನು.

ಅಥ ಸಂಧಾಯ ವಾಯವ್ಯಮಸ್ತ್ರಮಸ್ತ್ರವಿದಾಂ ವರಃ ।
ವ್ಯಧಮತ್ ಕಾಲಮೇಘಂ ತಂ ಕರ್ಣೋ ವೈಕರ್ತನೋ ವೃಷಾ ॥ ೭೧ ॥

ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದ ವೈಕರ್ತನನಾದ ಕರ್ಣನು ವಾಯವ್ಯಾಸ್ತ್ರವನ್ನು ಪ್ರಯೋಗಿಸಿ ಆ ಕಪ್ಪುಮೋಡವನ್ನು ನಾಶಪಡಿಸಿದನು.

ಸ ಮಾರ್ಗಣಗಣೈಃ ಕರ್ಣೋ ದಿಶಃ ಪ್ರಚ್ಛಾದ್ಯ ಸರ್ವಶಃ ।
ಜಘಾನಾಸ್ತ್ರಂ ಮಹಾರಾಜ ಘಟೋತ್ಕಚಸಮೀರಿತಮ್ ॥ ೭೨ ॥

ಎಲೈ ಮಹಾರಾಜನೇ, ಕರ್ಣನು ತನ್ನ ಬಾಣಗಳ ಸಮೂಹದಿಂದ ಎಲ್ಲ ದಿಕ್ಕುಗಳನ್ನೂ ಆಚ್ಛಾದಿಸಿ ಘಟೋತ್ಕಚನು ಪ್ರಯೋಗಿಸಿದ ಅಸ್ತ್ರವನ್ನು ನಾಶಮಾಡಿದನು.

ತತಃ ಪ್ರಹಸ್ಯ ಸಮರೇ ಭೈಮಸೇನಿರ್ಮಹಾಬಲಃ ।
ಪ್ರಾದುಶ್ಚಕ್ರೇ ಮಹಾಮಾಯಾಂ ಕರ್ಣಂ ಪ್ರತಿ ಮಹಾರಥಮ್ ॥ ೭೩ ॥

ಅನಂತರ ಮಹಾಬಲನಾದ ಭೀಮಸೇನಪುತ್ರನಾದ ಘಟೋತ್ಕಚನು ನಕ್ಕು ಯುದ್ಧದಲ್ಲಿ ಮಹಾರಥನಾದ ಕರ್ಣನ ಸುತ್ತಲೂ ದೊಡ್ಡ ಮಾಯೆಯನ್ನು ಸೃಷ್ಟಿಸಿದನು.

ಸ ದೃಷ್ಟ್ವಾ ಪುನರಾಯಾಂತಂ ರಥೇನ ರಥಿನಾಂ ವರಮ್ ।
ಘಟೋತ್ಕಚಮಸಂಭ್ರಾಂತಂ ರಾಕ್ಷಸೈರ್ಬಹುಭಿರ್ವೃತಮ್ ॥ ೭೪ ॥

ಸಿಂಹಶಾರ್ದೂಲಸದೃಶೈರ್ಮತ್ತದ್ವಿರದವಿಕ್ರಮೈಃ ।
ಗಜಸ್ಥೈಶ್ಚ ರಥಸ್ಥೈಶ್ಚ ವಾಜಿಪೃಷ್ಠಗತೈಸ್ತಥಾ ॥ ೭೫ ॥

ನಾನಾಶಸ್ತ್ರಧರೈಃ ಕ್ರೂರೈರ್ನಾನಾಕವಚಭೂಷಣೈಃ ।
ವೃತಂ ಘಟೋತ್ಕಚಂ ಕ್ರೂರೈರ್ಮರುದ್ಭಿರಿವ ವಾಸವಮ್ ।
ದೃಷ್ಟ್ವಾ ಕರ್ಣೋ ಮಹೇಷ್ವಾಸೋ ಯೋಧಯಾಮಾಸ ರಾಕ್ಷಸಮ್ ॥

ಕರ್ಣನು ಸಿಂಹ-ವ್ಯಾಘ್ರ ಸದೃಶವಾದ, ಮದಗಜದ ಪರಾಕ್ರಮವುಳ್ಳ ಕೈಯಲ್ಲಿ ನಾನಾ ಆಯುಧವನ್ನು ಹಿಡಿದು, ನಾನಾವಿಧವಾದ ಕವಚಭೂಷಣವನ್ನು ಧರಿಸಿ ರಥಗಳನ್ನು ಏರಿದ, ಅಶ್ವಗಳನ್ನು ಏರಿದ ಅನೇಕ ಕ್ರೂರರಾದ ರಾಕ್ಷಸರಿಂದ ಮರುದ್ಗಣದಿಂದ ಇಂದ್ರನು ಪರಿವೃತನಾದಂತೆ ಕೂಡಿ ಗಾಬರಿಯಿಲ್ಲದೆ ತನ್ನೆಡೆಗೆ ಬರುತ್ತಿದ್ದ ರಥಿಶ್ರೇಷ್ಠನಾದ ಘಟೋತ್ಕಚನನ್ನು ನೋಡಿ ಮಹಾಧನುರ್ಧಾರಿಯಾದ ಅವನು ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಘಟೋತ್ಕಚಸ್ತತಃ ಕರ್ಣಂ ವಿದ್ಧ್ವಾ ಪಂಚಭಿರಾಶುಗೈಃ ।
ನನಾದ ಭೈರವಂ ನಾದಂ ಭೀಷಯನ್ ಸರ್ವಪಾರ್ಥಿವಾನ್ ॥ ೭೭ ॥

ಅನಂತರ ಘಟೋತ್ಕಚನು ಐದು ಶೀಘ್ರಗಾಮಿಗಳಾದ ಬಾಣಗಳಿಂದ ಕರ್ಣನನ್ನು ಹೊಡೆದು ಎಲ್ಲ ರಾಜರನ್ನೂ ಭಯಗೊಳಿಸುತ್ತಾ ಭೈರವನಾದವನ್ನು ಮಾಡಿದನು.

ಭೂಯಶ್ಚಾಂಜಲಿಕೇನಾಥ ಸಮಾರ್ಗಣಗಣಂ ಮಹತ್ ।
ಕರ್ಣಹಸ್ತಸ್ಥಿತಂ ಚಾಪಂ ಚಿಚ್ಛೇದಾಶು ಘಟೋತ್ಕಚಃ ॥ ೭೮ ॥

ಪುನಃ ಒಂದು ಅಂಜಲಿಕವನ್ನು ಪ್ರಯೋಗಿಸಿ ಘಟೋತ್ಕಚನು ಕರ್ಣನ ಹಸ್ತದಲ್ಲಿದ್ದ ಧನುಸ್ಸನ್ನು ಮತ್ತು ಬಾಣಗಳ ದೊಡ್ಡ ಸಮೂಹವನ್ನು ಶೀಘ್ರವಾಗಿ ಕತ್ತರಿಸಿದನು.

ಅಥಾನ್ಯದ್ ಧನುರಾದಾಯ ದೃಢಂ ಭಾರಸಹಂ ಮಹತ್ ।
ವ್ಯಕರ್ಷತ ಬಲಾತ್ಕರ್ಣ ಇಂದ್ರಾಯುಧಮಿವೋಚ್ಚ್ರಿತಮ್ ॥ ೭೯ ॥

ಆಗ ಕರ್ಣನು ಇಂದ್ರಾಯುಧದಂತೆ ಉನ್ನತವಾದ, ದೃಢವಾದ, ಭಾರಸಹವಾದ ದೊಡ್ಡದಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತನ್ನ ಬಲದಿಂದ ಎಳೆದನು.

ತತಃ ಕರ್ಣೋ ಮಹಾರಾಜ ಪ್ರೇಷಯಾಮಾಸ ಸಾಯಕಾನ್ ।
ಸುವರ್ಣಪುಂಖಾನ್ ಶತ್ರುಘ್ನಾನ್ ಖಿಚರಾನ್ ರಾಕ್ಷಸಾನ್ ಪ್ರತಿ ॥೮೦॥

ಎಲೈ ಮಹಾರಾಜನೇ, ಆಗ ಕರ್ಣನು ಅಂತರಿಕ್ಷಚಾರಿಗಳಾದ ರಾಕ್ಷಸರ ಮೇಲೆ ಸುವರ್ಣಪುಂಖವನ್ನು ಹೊಂದಿದ, ಶತ್ರುಸಂಹಾರಕವಾದ ಬಾಣಗಳನ್ನು ಪ್ರಯೋಗಿಸಿದನು.

ತದ್ಬಾಣೈರರ್ದಿತಂ ಯೂಥಂ ರಕ್ಷಸಾಂ ಪೀನವಕ್ಷಸಾಮ್ ।
ಸಿಂಹೇನೇವಾರ್ದಿತಂ ವನ್ಯಂ ಗಜಾನಾಮಾಕುಲಂ ಕುಲಮ್ ॥ ೮೧ ॥

ಆಗ ಸಿಂಹದಿಂದ ಪೀಡಿಸಲ್ಪಟ್ಟ ವನಗಜಗಳ ಸಮೂಹದಂತೆ ಪೀನವಕ್ಷಸ್ಥಲವುಳ್ಳ ರಾಕ್ಷಸ ಸಮೂಹವು ಕರ್ಣನ ಬಾಣಗಳಿಂದ ಪೀಡಿಸಲ್ಪಟ್ಟಿತು.

ವಿಧಮ್ಯ ರಾಕ್ಷಸಾನ್ ಬಾಣೈಃ ಸಾಶ್ವಸೂತಗಜಾನ್ ವಿಭುಃ ।
ದದಾಹ ಭಗವಾನ್ ವಹ್ನಿರ್ಭೂತಾನೀವ ಯುಗಕ್ಷಯೇ ॥ ೮೨ ॥

ವಿಭುವಾದ ಕರ್ಣನು ಯುಗಕ್ಷಯ ಕಾಲದಲ್ಲಿ ಪೂಜ್ಯನಾದ ಅಗ್ನಿಯು ಪ್ರಾಣಿಗಳನ್ನು ದಹಿಸುವಂತೆ ತನ್ನ ಬಾಣಗಳಿಂದ ಅಶ್ವ-ಸೂತ-ಗಜ ಸಹಿತರಾದ ರಾಕ್ಷಸರನ್ನು ಹಾರಿಸಿದನು.

ಸ ಹತ್ವಾ ರಾಕ್ಷಸೀಂ ಸೇನಾಂ ಶುಶುಭೇ ಸೂತನಂದನಃ ।
ಪುರೇವ ತ್ರಿಪುರಂ ದಗ್ಧ್ವಾ ದಿವಿ ದೇವೋ ಮಹೇಶ್ವರಃ ॥ ೮೩ ॥

ಸೂತನಂದನನಾದ ಕರ್ಣನು ಆಕಾಶದಲ್ಲಿ ತ್ರಿಪುರವನ್ನು ದಹಿಸಿ ದೇವನಾದ ಮಹೇಶ್ವರನು ಶೋಭಿಸಿದಂತೆ ರಾಕ್ಷಸ ಸೈನ್ಯವನ್ನು ಕೊಂದು ಶೋಭಿಸಿದನು.

ತೇಷು ರಾಜಸಹಸ್ರೇಷು ಪಾಂಡವೇಯೇಷು ಮಾರಿಷ ।
ನೈನಂ ನಿರೀಕ್ಷಿತುಮಪಿ ಕಶ್ಚಿಚ್ಛಕ್ನೋತಿ ಪಾರ್ಥಿವ ॥ ೮೪ ॥

ಋತೇ ಘಟೋತ್ಕಚಾದ್ ರಾಜನ್ ರಾಕ್ಷಸೇಂದ್ರಾನ್ಮಹಾಬಲಾತ್ ।
ಭೀಮವೀರ್ಯಬಲೋಪೇತಾತ್ ಕ್ರುದ್ಧಾದ್ ವೈವಸ್ವತಾದಿವ ॥ ೮೫ ॥

ಎಲೈ ಶ್ರೇಷ್ಠನೇ, ರಾಜನೇ, ಆಗ ಪಾಂಡವರ ಸೇನೆಯ ಸಹಸ್ರಾರು ರಾಜರಲ್ಲಿ ರಾಕ್ಷಸೇಂದ್ರನೂ, ಮಹಾಬಲನೂ, ಕೋಪಗೊಂಡ ಯಮನಂತೆ ಭಯಂಕರವಾದ ಪರಾಕ್ರಮ ಮತ್ತು ಬಲವನ್ನು ಹೊಂದಿದವನೂ ಆದ ಘಟೋತ್ಕಚನನ್ನು ಬಿಟ್ಟು, ಬೇರೆ ಯಾವನೂ ಸಹ ಕರ್ಣನನ್ನು ನೋಡಲೂ ಸಾಧ್ಯವಾಗಲಿಲ್ಲ.

ತಸ್ಯ ಕ್ರುದ್ಧಸ್ಯ ನೇತ್ರಾಭ್ಯಾಂ ಪಾವಕಃ ಸಮಜಾಯತ ।
ಮಹೋಲ್ಕಾಭ್ಯಾಂ ಯಥಾ ರಾಜನ್ ಸಾರ್ಚಿಷಃ ಸ್ನೇಹಬಿಂದವಃ ॥೮೬॥

ಘಟೋತ್ಕಚನ ಕಣ್ಣುಗಳಿಂದ ಅಗ್ನಿಯುಂಟಾಯಿತು. ಎಲೈ ರಾಜನೇ, ಮಹೋಲ್ಕೆಗಳಂತಿದ್ದ ಅವನ ಕಣ್ಣುಗಳಿಂದ ಪಂಜುಗಳಿಂದ ಕಾದ ಎಣ್ಣೆಯ ಹನಿಗಳು ಬೀಳುವಂತೆ ಅಗ್ನಿಜ್ವಾಲೆಯಿಂದ ಕೂಡಿದ ಬಿಂದುಗಳು ಉದುರಿದವು.

ತಳಂ ತಳೇನ ಸಂಹತ್ಯ ಸಂದಶ್ಯ ದಶನಚ್ಛದಮ್ ।
ರಥಮಾಸ್ಥಾಯ ಚ ಪುನರ್ಮಾಯಯಾ ನಿರ್ಮಿತಂ ಪುನಃ ॥ ೮೭ ॥

ಯುಕ್ತಂ ಗಜನಿಭೈರ್ವಾಹೈಃ ಪಿಶಾಚವದನೈಃ ಖರೈಃ ।
ಸ ಸೂತಮಬ್ರವೀತ್ ಕ್ರುದ್ಧಃ ಸೂತಪುತ್ರಾಯ ಮಾ ವಹ ॥ ೮೮ ॥

ಅವನು ಅಂಗೈಯಿಂದ ಅಂಗೈಯನ್ನು ಉಜ್ಜುತ್ತಾ ಹಲ್ಲುಗಳನ್ನು ಕಚ್ಚಿ ಪುನಃ ಮಾಯೆಯಿಂದ ನಿರ್ಮಿತವಾದ, ಆನೆಯಷ್ಟು ಪರಿಮಾಣವನ್ನು ಹೊಂದಿದ್ದ ಪಿಶಾಚಿ ಮುಖಗಳುಳ್ಳ ಕತ್ತೆಗಳಿಂದ ಹೂಡಿದ, ರಥವನ್ನು ಏರಿ ಕ್ರುದ್ಧನಾದ ಅವನು ತನ್ನ ಸಾರಥಿಯನ್ನು ಕುರಿತು ಕರ್ಣನ ಕಡೆಗೆ ನನ್ನನ್ನು ಕರೆದುಕೊಂಡು ಹೋಗು ಎಂದು ಹೇಳಿದನು.

ಸ ಯಯೌ ಘೋರರೂಪೇಣ ರಥೇನ ರಥಿನಾಂ ವರಃ ।
ದ್ವೈರಥಂ ಸೂತಪುತ್ರೇಣ ಪುನರೇವ ಏಶಾಂಪತೇ ॥ ೮೯ ॥

ಎಲೈ ರಾಜನೇ, ರಥಿಶ್ರೇಷ್ಠನಾದ ಅವನು ಘೋರರೂಪವಾದ ರಥದಲ್ಲಿ ಹೋಗಿ ಪುನಃ ಕರ್ಣನ ಜೊತೆಯಲ್ಲಿ ದ್ವಂದ್ವಯುದ್ಧವನ್ನು ಮಾಡಿದನು.

ಸ ಚಿಕ್ಷೇಪ ಪುನಃ ಕ್ರುದ್ಧಃ ಸೂತಪುತ್ರಾಯ ರಾಕ್ಷಸಃ ।
ಅಷ್ಟಚಕ್ರಾಂ ಮಹಾಘೋರಾಮಶನಿಂ ರುದ್ರನಿರ್ಮಿತಾಮ್ ॥ ೯೦ ॥

ಆ ಕೋಪಗೊಂಡ ರಾಕ್ಷಸನು ಕರ್ಣನ ಮೇಲೆ ಮಹಾಘೋರವಾದ ರುದ್ರದೇವರಿಂದ ನಿರ್ಮಿತವಾದ ಎಂಟುಮೂಲೆಗಳಿಂದ ಕೂಡಿದ ಅಶನಿಯನ್ನು ಎಸೆದನು.

ತಾಮವಪ್ಲುತ್ಯ ಜಗ್ರಾಹ ಕರ್ಣೋ ನ್ಯಸ್ಯ ರಥೇ ಧನುಃ ।
ಚಿಕ್ಷೇಪ ಚೈನಾಂ ತಸ್ಯೈವ ಸ್ಯಂದನಾತ್ ಸೋಽವಪುಪ್ಲುವೇ ॥ ೯೧ ॥

ಕರ್ಣನು ರಥದಲ್ಲಿ ತನ್ನ ಧನುಸ್ಸನ್ನು ಇಟ್ಟು ಹಾರಿ ಆ ಅಶನಿಯನ್ನು ಹಿಡಿದು ಘಟೋತ್ಕಚನ ಮೇಲೆಯೇ ಎಸೆದನು. ಘಟೋತ್ಕಚನು ತನ್ನ ರಥದಿಂದ ಕೆಳಗೆ ಹಾರಿದನು.

ಸಾಶ್ವಸೂತಧ್ವಜಂ ಯಾನಂ ಭಸ್ಮ ಕೃತ್ವಾ ಮಹಾಪ್ರಭಾ ।
ವಿವೇಶ ವಸುಧಾಂ ಭಿತ್ತ್ವಾ ಸುರಾಸ್ತತ್ರ ವಿಸಿಷ್ಮಿಯುಃ ॥ ೯೨ ॥

ಮಹಾಪ್ರಭೆಯುಳ್ಳ ಆ ಅಶನಿಯು ಅಶ್ವ-ಸಾರಥಿ-ಧ್ವಜಗಳಿಂದ ಕೂಡಿದ ಘಟೋತ್ಕಚನ ರಥವನ್ನು ಭಸ್ಮವನ್ನು ಮಾಡಿ ಭೂಮಿಯನ್ನು ಸೀಳಿಕೊಂಡು ಒಳಗೆ ಇಳಿಯಿತು. ಆಗ ದೇವತೆಗಳು ವಿಸ್ಮಯಗೊಂಡರು.

ಕರ್ಣಂ ತು ಸರ್ವಭೂತಾನಿ ಪೂಜಯಾಮಾಸುರಂಜಸಾ ।
ಯದವಪ್ಲುತ್ಯ ಜಗ್ರಾಹ ದೇವಸೃಷ್ಟಾಂ ಮಹಾಶನಿಮ್ ॥ ೯೩ ॥

ರುದ್ರದೇವರು ಸೃಷ್ಟಿಸಿದ ಮಹಾಶನಿಯನ್ನು ರಥದಿಂದ ಹಾರಿ ಹಿಡಿದ ಕಾರಣದಿಂದ ಎಲ್ಲ ಪ್ರಾಣಿಗಳೂ ಕರ್ಣನನ್ನು ಚೆನ್ನಾಗಿ ಪೂಜಿಸಿದವು.

ಏವಂ ಕೃತ್ವಾ ರಣೇ ಕರ್ಣ ಆರುರೋಹ ರಥಂ ಪುನಃ ।
ತತೋ ಮುಮೋಚ ನಾರಾಚಾನ್ ಸೂತಪುತ್ರಃ ಪರಂತಪಃ ॥ ೯೪ ॥

ರಣರಂಗದಲ್ಲಿ ಸೂತಪುತ್ರನೂ, ಪರಂತಪನೂ ಆದ ಕರ್ಣನು ಹೀಗೆ ಮಾಡಿ ಪುನಃ ತನ್ನ ರಥವನ್ನು ಏರಿ ಘಟೋತ್ಕಚನ ಮೇಲೆ ನಾರಾಚಗಳನ್ನು ಪ್ರಯೋಗಿಸಿದನು.

ಅಶಕ್ಯಂ ಕರ್ತುಮನ್ಯೇನ ಸರ್ವಭೂತೇಷು ಮಾನದ ।
ಯದಕಾರ್ಷೀತ್ ತದಾ ಕರ್ಣಃ ಸಂಗ್ರಾಮೇ ಭೀಮದರ್ಶನೇ ॥ ೯೫ ॥

ಎಲೈ ಮಾನದನೇ, ಭಯಂಕರವಾಗಿ ತೋರುತ್ತಿದ್ದ ರಣರಂಗದಲ್ಲಿ ಕರ್ಣನು ಏನು ಮಾಡಿದನೋ ಅದನ್ನು ಸರ್ವಯೋಧರಲ್ಲಿ ಇನ್ನೊಬ್ಬನು ಮಾಡಲು ಸಾಧ್ಯವಿಲ್ಲ.

ಸ ಹನ್ಯಮಾನೋ ನಾರಾಚೈರ್ಧಾರಾಭಿರಿವ ಪರ್ವತಃ ।
ಗಂಧರ್ವನಗರಾಕಾರಃ ಪುನರಂತರಧೀಯತ ॥ ೯೬ ॥

ಪರ್ವತದ ಮೇಲೆ ಜಲಧಾರೆಯನ್ನು ಸುರಿಸಿದಂತೆ ಎಲ್ಲ ಕಡೆಗಳಿಂದಲೂ ಕರ್ಣನ ನಾರಾಚಗಳಿಂದ ಹೊಡೆಯಲ್ಪಟ್ಟ ಗಂಧರ್ವನಗರದಂತಿದ್ದ ಘಟೋತ್ಕಚನು ಪುನಃ ಅಂತರ್ಧಾನವನ್ನು ಹೊಂದಿದನು.

ಏವಂ ಸ ವೈ ಮಹಾಮಾಯೋ ಮಾಯಯಾ ಲಾಘವೇನ ಚ ।
ಅಸ್ತ್ರಾಣಿ ತಾನಿ ದಿವ್ಯಾನಿ ಜಘಾನ ರಿಪುಸೂದನಃ ॥ ೯೭ ॥

ಹೀಗೆ ಮಹಾಮಾಯೆಯುಳ್ಳವನೂ ಶತ್ರುಸೂದನನೂ ಆದ ಘಟೋತ್ಕಚನು ತನ್ನ ಮಾಯೆಯಿಂದಲೂ ಮತ್ತು ಕ್ಷಿಪ್ರತೆಯಿಂದಲೂ ಕರ್ಣನು ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನು ನಾಶಪಡಿಸಿದನು.

ನಿಹನ್ಯಮಾನೇಷ್ವಸ್ತ್ರೇಷು ಮಾಯಯಾ ತೇನ ರಕ್ಷಸಾ ।
ಅಸಂಭ್ರಾಂತಸ್ತತಃ ಕರ್ಣಸ್ತದ್ರಕ್ಷಃ ಪ್ರತ್ಯಯುದ್ಧ್ಯತ ॥ ೯೮ ॥

ತನ್ನ ಅಸ್ತ್ರಗಳು ರಾಕ್ಷಸನ ಮಾಯೆಯಿಂದ ಹತವಾಗುತ್ತಿದ್ದರೂ ಕರ್ಣನು ಗಾಬರಿಗೊಳ್ಳದೆ ಪುನಃ ಆ ರಾಕ್ಷಸನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತತಃ ಕ್ರುದ್ಧೋ ಮಹಾರಾಜ ಭೈಮಸೇನಿರ್ಮಹಾಬಲಃ ।
ಚಕಾರ ಬಹುಧಾऽತ್ಮಾನಂ ಭೀಷಯಾಣೋ ನರಾಧಿಪಾನ್ ॥ ೯೯ ॥

ಎಲೈ ಮಹಾರಾಜನೇ, ಆಗ ಮಹಾಬಲನಾದ ಘಟೋತ್ಕಚನು ಬಹಳ ಕೋಪಗೊಂಡು, ರಾಜರನ್ನು ಭಯಗೊಳಿಸುತ್ತಾ ತನ್ನನ್ನೇ ಬಹುರೂಪನನ್ನಾಗಿ ಮಾಡಿಕೊಂಡನು.

ತತೋ ದಿಗ್ಭ್ಯಃ ಸಮಾಪೇತುಃ ಸಿಂಹವ್ಯಾಘ್ರತರಕ್ಷವಃ ।
ಅಗ್ನಿಜಿಹ್ವಾಶ್ಚ ಭುಜಗಾ ವಿಹಗಾಶ್ಚಾಪ್ಯಯೋಮುಖಾಃ ॥ ೧೦೦ ॥

ಅನಂತರ ದಿಕ್ಕುದಿಕ್ಕುಗಳಿಂದ ಸಿಂಹ-ವ್ಯಾಘ್ರ-ಚಿರತೆಗಳು, ಅಗ್ನಿಜಿಹ್ವೆಯುಳ್ಳ ಸರ್ಪಗಳು, ಕಬ್ಬಿಣ ಮುಖವುಳ್ಳ ಪಕ್ಷಿಗಳು ಕರ್ಣನ ಮೇಲೆ ಎರಗಿದವು.

ಸ ಕೀರ್ಯಮಾಣೋ ನಿಶಿತೈಃ ಕರ್ಣಚಾಪಚ್ಯುತೈಃ ಶರೈಃ ।
ನಗರಾದ್ರಿವನಪ್ರಖ್ಯಸ್ತತ್ರೈವಾಂತರಧೀಯತ ॥ ೧೦೧ ॥

ಕರ್ಣನ ಬಿಲ್ಲಿನಿಂದ ಹೊರಹೊಮ್ಮಿದ ತೀಕ್ಷ್ಣವಾದ ಬಾಣಗಳಿಂದ ಹೊಡೆಯಲ್ಪಟ್ಟ ನಗರದಂತೆ, ಪರ್ವತದಂತೆ, ಕಾಡಿನಂತೆ ಇದ್ದ ಆ ಸಮೂಹವು ಅಲ್ಲಿಯೇ ಅಂತರ್ಧಾನವನ್ನು ಹೊಂದಿತು.

ರಾಕ್ಷಸಾಶ್ಚ ಪಿಶಾಚಾಶ್ಚ ಯಾತುಧಾನಾಃ ಶಲಾವೃಕಾಃ ।
ತೇ ಕರ್ಣಂ ಭಕ್ಷಯಿಷ್ಯಂತಃ ಸರ್ವತಃ ಸಮುಪಾದ್ರವನ್ ।
ಅಥೈನಂ ವಾಗ್ಭಿರುಗ್ರಾಭಿಸ್ತ್ರಾಸಯಾಂಚಕ್ರಿರೇ ತದಾ ॥ ೧೦೨ ॥

ರಾಕ್ಷಸರು, ಪಿಶಾಚಿಗಳು, ಯಾತುಧಾನರು ಮತ್ತು ತೋಳಗಳು ಕರ್ಣನನ್ನು ತಿನ್ನಲು ಬಯಸಿ ಎಲ್ಲ ಕಡೆಗಳಿಂದಲೂ ಅವನ ಮೇಲೆ ನುಗ್ಗಿದವು ಮತ್ತು ತಮ್ಮ ಕ್ರೂರವಾದ ನಾದಗಳಿಂದ ಅವನನ್ನು ಹೆದರಿಸಿದವು.

ಉದ್ಯತೈರ್ಬಾಹುಭಿರ್ಘೋರೈರಾಯುಧೈಃ ಶೋಣಿತೋಕ್ಷಿತೈಃ ।
ತೇಷಾಮನೇಕೈರೇಕೈಕಂ ಕರ್ಣೋ ವಿವ್ಯಾಧ ಚಾಶುಗೈಃ ॥ ೧೦೩ ॥

ಕೈಯಲ್ಲಿ ರಕ್ತಸಿಕ್ತವಾದ ಘೋರವಾದ ಆಯುಧವನ್ನು ಎತ್ತಿಹಿಡಿದ ಅನೇಕ ರಾಕ್ಷಸಾದಿಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಕರ್ಣನು ಅವರಲ್ಲಿ ಒಬ್ಬೊಬ್ಬರನ್ನೂ ಶೀಘ್ರಗಾಮಿಗಳಾದ ಬಾಣಗಳಿಂದ ಹೊಡೆದನು.

ರಣರಂಗದಲ್ಲಿ ಸೂತಪುತ್ರನೂ, ಪರಂತಪನೂ ಆದ ಕರ್ಣನು ಹೀಗೆ ಮಾಡಿ ಪುನಃ ತನ್ನ ರಥವನ್ನು ಏರಿ ಘಟೋತ್ಕಚನ ಮೇಲೆ ನಾರಾಚಗಳನ್ನು ಪ್ರಯೋಗಿಸಿದನು.

ಅಶಕ್ಯಂ ಕರ್ತುಮನ್ಯೇನ ಸರ್ವಭೂತೇಷು ಮಾನದ ।
ಯದಕಾರ್ಷೀತ್ ತದಾ ಕರ್ಣಃ ಸಂಗ್ರಾಮೇ ಭೀಮದರ್ಶನೇ ॥ ೯೫ ॥

ಎಲೈ ಮಾನದನೇ, ಭಯಂಕರವಾಗಿ ತೋರುತ್ತಿದ್ದ ರಣರಂಗದಲ್ಲಿ ಕರ್ಣನು ಏನು ಮಾಡಿದನೋ ಅದನ್ನು ಸರ್ವಯೋಧರಲ್ಲಿ ಇನ್ನೊಬ್ಬನು ಮಾಡಲು ಸಾಧ್ಯವಿಲ್ಲ.

ಸ ಹನ್ಯಮಾನೋ ನಾರಾಚೈರ್ಧಾರಾಭಿರಿವ ಪರ್ವತಃ ।
ಗಂಧರ್ವನಗರಾಕಾರಃ ಪುನರಂತರಧೀಯತ ॥ ೯೬ ॥

ಪರ್ವತದ ಮೇಲೆ ಜಲಧಾರೆಯನ್ನು ಸುರಿಸಿದಂತೆ ಎಲ್ಲ ಕಡೆಗಳಿಂದಲೂ ಕರ್ಣನ ನಾರಾಚಗಳಿಂದ ಹೊಡೆಯಲ್ಪಟ್ಟ ಗಂಧರ್ವನಗರದಂತಿದ್ದ ಘಟೋತ್ಕಚನು ಪುನಃ ಅಂತರ್ಧಾನವನ್ನು ಹೊಂದಿದನು.

ಏವಂ ಸ ವೈ ಮಹಾಮಾಯೋ ಮಾಯಯಾ ಲಾಘವೇನ ಚ ।
ಅಸ್ತ್ರಾಣಿ ತಾನಿ ದಿವ್ಯಾನಿ ಜಘಾನ ರಿಪುಸೂದನಃ ॥ ೯೭ ॥

ಹೀಗೆ ಮಹಾಮಾಯೆಯುಳ್ಳವನೂ ಶತ್ರುಸೂದನನೂ ಆದ ಘಟೋತ್ಕಚನು ತನ್ನ ಮಾಯೆಯಿಂದಲೂ ಮತ್ತು ಕ್ಷಿಪ್ರತೆಯಿಂದಲೂ ಕರ್ಣನು ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನು ನಾಶಪಡಿಸಿದನು.

ನಿಹನ್ಯಮಾನೇಷ್ವಸ್ತ್ರೇಷು ಮಾಯಯಾ ತೇನ ರಕ್ಷಸಾ ।
ಅಸಂಭ್ರಾಂತಸ್ತತಃ ಕರ್ಣಸ್ತದ್ರಕ್ಷಃ ಪ್ರತ್ಯಯುದ್ಧ್ಯತ ॥ ೯೮ ॥

ತನ್ನ ಅಸ್ತ್ರಗಳು ರಾಕ್ಷಸನ ಮಾಯೆಯಿಂದ ಹತವಾಗುತ್ತಿದ್ದರೂ ಕರ್ಣನು ಗಾಬರಿಗೊಳ್ಳದೆ ಪುನಃ ಆ ರಾಕ್ಷಸನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತತಃ ಕ್ರುದ್ಧೋ ಮಹಾರಾಜ ಭೈಮಸೇನಿರ್ಮಹಾಬಲಃ ।
ಚಕಾರ ಬಹುಧಾऽತ್ಮಾನಂ ಭೀಷಯಾನೋ ನರಾಧಿಪಾನ್ ॥ ೯೯ ॥

ಎಲೈ ಮಹಾರಾಜನೇ, ಆಗ ಮಹಾಬಲನಾದ ಘಟೋತ್ಕಚನು ಬಹಳ ಕೋಪಗೊಂಡು, ರಾಜರನ್ನು ಭಯಗೊಳಿಸುತ್ತಾ ತನ್ನನ್ನೇ ಬಹುರೂಪನನ್ನಾಗಿ ಮಾಡಿಕೊಂಡನು.

ತತೋ ದಿಗ್ಭ್ಯಃ ಸಮಾಪೇತುಃ ಸಿಂಹವ್ಯಾಘ್ರತರಕ್ಷವಃ ।
ಅಗ್ನಿಜಿಹ್ವಾಶ್ಚ ಭುಜಗಾ ವಿಹಗಾಶ್ಚಾಪ್ಯಯೋಮುಖಾಃ ॥ ೧೦೦ ॥

ಅನಂತರ ದಿಕ್ಕುದಿಕ್ಕುಗಳಿಂದ ಸಿಂಹ-ವ್ಯಾಘ್ರ-ಚಿರತೆಗಳು, ಅಗ್ನಿಜಿಹ್ವೆಯುಳ್ಳ ಸರ್ಪಗಳು, ಕಬ್ಬಿಣ ಮುಖವುಳ್ಳ ಪಕ್ಷಿಗಳು ಕರ್ಣನ ಮೇಲೆ ಎರಗಿದವು.

ಸ ಕೀರ್ಯಮಾಣೋ ನಿಶಿತೈಃ ಕರ್ಣಚಾಪಚ್ಯುತೈಃ ಶರೈಃ ।
ನಗರಾದ್ರಿವನಪ್ರಖ್ಯಸ್ತತ್ರೈವಾಂತರಧೀಯತ ॥ ೧೦೧ ॥

ಕರ್ಣನ ಬಿಲ್ಲಿನಿಂದ ಹೊರಹೊಮ್ಮಿದ ತೀಕ್ಷ್ಣವಾದ ಬಾಣಗಳಿಂದ ಹೊಡೆಯಲ್ಪಟ್ಟ ನಗರದಂತೆ, ಪರ್ವತದಂತೆ, ಕಾಡಿನಂತೆ ಇದ್ದ ಆ ಸಮೂಹವು ಅಲ್ಲಿಯೇ ಅಂತರ್ಧಾನವನ್ನು ಹೊಂದಿತು.

ರಾಕ್ಷಸಾಶ್ಚ ಪಿಶಾಚಾಶ್ಚ ಯಾತುಧಾನಾಃ ಶಲಾವೃಕಾಃ ।
ತೇ ಕರ್ಣಂ ಭಕ್ಷಯಿಷ್ಯಂತಃ ಸರ್ವತಃ ಸಮುಪಾದ್ರವನ್ ।
ಅಥೈನಂ ವಾಗ್ಭಿರುಗ್ರಾಭಿಸ್ತ್ರಾಸಯಾಂಚಕ್ರಿರೇ ತದಾ ॥ ೧೦೨ ॥

ರಾಕ್ಷಸರು, ಪಿಶಾಚಿಗಳು, ಯಾತುಧಾನರು ಮತ್ತು ತೋಳಗಳು ಕರ್ಣನನ್ನು ತಿನ್ನಲು ಬಯಸಿ ಎಲ್ಲ ಕಡೆಗಳಿಂದಲೂ ಅವನ ಮೇಲೆ ನುಗ್ಗಿದವು ಮತ್ತು ತಮ್ಮ ಕ್ರೂರವಾದ ನಾದಗಳಿಂದ ಅವನನ್ನು ಹೆದರಿಸಿದವು.

ಉದ್ಯತೈರ್ಬಾಹುಭಿರ್ಘೋರೈರಾಯುಧೈಃ ಶೋಣಿತೋಕ್ಷಿತೈಃ ।
ತೇಷಾಮನೇಕೈರೇಕೈಕಂ ಕರ್ಣೋ ವಿವ್ಯಾಧ ಚಾಶುಗೈಃ ॥ ೧೦೩ ॥

ಕೈಯಲ್ಲಿ ರಕ್ತಸಿಕ್ತವಾದ ಘೋರವಾದ ಆಯುಧವನ್ನು ಎತ್ತಿಹಿಡಿದ ಅನೇಕ ರಾಕ್ಷಸಾದಿಗಳ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಕರ್ಣನು ಅವರಲ್ಲಿ ಒಬ್ಬೊಬ್ಬರನ್ನೂ ಶೀಘ್ರಗಾಮಿಗಳಾದ ಬಾಣಗಳಿಂದ ಹೊಡೆದನು.

ಪ್ರತಿಹತ್ಯ ತು ತಾಂ ಮಾಯಾಂ ದಿವ್ಯೇನಾಸ್ತ್ರೇಣ ರಾಕ್ಷಸೀಮ್ ।
ಆಜಘಾನ ಹಯಾನಸ್ಯ ಶರೈಃ ಸನ್ನತಪರ್ವಭಿಃ ॥ ೧೦೪ ॥

ತನ್ನ ದಿವ್ಯಾಸ್ತ್ರದಿಂದ ಆ ರಾಕ್ಷಸ ಮಾಯೆಯನ್ನು ನಾಶಗೊಳಿಸಿ ಕರ್ಣನು ಬಾಗಿದ ತುದಿಯುಳ್ಳ ಬಾಣಗಳಿಂದ ಘಟೋತ್ಕಚನ ರಥದ ಅಶ್ವಗಳನ್ನು ಕೊಂದನು.

ತೇ ಭಗ್ನಾ ವಿಕೃತಾಂಗಾಶ್ಚ ಛಿನ್ನಪೃಷ್ಠಾಶ್ಚ ಸಾಯಕೈಃ ।
ಸುಧಾಮನ್ವಪದ್ಯಂತ ಪಶ್ಯತಸ್ತಸ್ಯ ರಕ್ಷಸಃ ॥ ೧೦೫ ॥

ಕರ್ಣನ ಬಾಣಗಳಿಂದ ಹೊಡೆಯಲ್ಪಟ್ಟು, ಭಗ್ನಗೊಂಡ ಅಂಗಗಳನ್ನು ಹೊಂದಿ, ಹಿಂಭಾಗವು ಕತ್ತರಿಸಲ್ಪಟ್ಟು ಆ ಅಶ್ವಗಳು ರಾಕ್ಷಸನಾದ ಘಟೋತ್ಕಚನು ನೋಡುತ್ತಿರುವಂತೆಯೇ ಭೂಮಿಯ ಮೇಲೆ ಬಿದ್ದವು.

ಸ ಭಗ್ನಮಾಯೋ ಹೈಡಿಂಬಃ ಕರ್ಣಂ ವೈಕರ್ತನಂ ತತಃ ।
ಏಷ ತೇ ವಿದಧೇ ಮೃತ್ಯುಮಿತ್ಯುಕ್ತ್ವಾಂತರಧೀಯತ ॥ ೧೦೬ ॥

ತನ್ನ ಮಾಯೆಗಳು ಭಗ್ನವಾಗುತ್ತಿರಲು ಘಟೋತ್ಕಚನು ವೈಕರ್ತನನಾದ ಕರ್ಣನನ್ನು ಕುರಿತು ಇವನು ನಿನ್ನ ಮೃತ್ಯುವಾಗಿ ಕ್ಲಪ್ತವಾಗಿದ್ದಾನೆ ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಏಕಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆರಡನೆಯ ಅಧ್ಯಾಯ

ದುರ್ಯೋಧನನ ಅನುಜ್ಞೆಯನ್ನು ಪಡೆದು ಅಲಾಯುಧನಿಂದ
ಘಟೋತ್ಕಚನ ಜೊತೆಯಲ್ಲಿ ಯುದ್ಧಕ್ಕೆ ಗಮನ.

ಸಂಜಯಃ

ತಸ್ಮಿಂಸ್ತಥಾ ವರ್ತಮಾನೇ ಕರ್ಣರಾಕ್ಷಸಯೋರ್ಮೃಧೇ ।
ಅಲಾಯುಧೋ ರಾಕ್ಷಸೇಂದ್ರೋ ವೀರ್ಯವಾನಭ್ಯವರ್ತತ ॥ ೧ ॥

ಸಂಜಯ– ಕರ್ಣ-ರಾಕ್ಷಸರ ಯುದ್ಧವು ಹಾಗೆ ನಡೆಯುತ್ತಿರಲು ಪರಾಕ್ರಮಶಾಲಿಯೂ, ರಾಕ್ಷಸಶ್ರೇಷ್ಠನೂ ಆದ ಅಲಾಯುಧನು ಅಲ್ಲಿಗೆ ಬಂದನು.

ಮಹತ್ಯಾ ಸೇನಯಾ ಯುಕ್ತಃ ಸುಯೋಧನಮುಪಾಗಮತ್ ।
ರಾಕ್ಷಸಾನಾಂ ವಿರೂಪಾಣಾಂ ಸಹಸ್ರೈಃ ಪರಿವಾರಿತಃ ।
ನಾನಾರೂಪಧರೈರ್ವೀರೈಃ ಪೂರ್ವವೈರಮನುಸ್ಮರನ್ ॥ ೨ ॥

ವಿರೂಪವುಳ್ಳ, ನಾನಾಯುಧಧಾರಿಗಳಾದ, ತೀವ್ರವಾದ ಸಹಸ್ರ ರಾಕ್ಷಸರಿಂದ ಪರಿವೃತನಾಗಿ, ಹಿಂದಿನ ವೈರವನ್ನು ಸ್ಮರಿಸುತ್ತಾ ದೊಡ್ಡ ಸೇನೆಯ ಜೊತೆಯಲ್ಲಿ ದುರ್ಯೋಧನನ ಸಮೀಪಕ್ಕೆ ಅಲಾಯುಧನು ಬಂದನು.

ತಸ್ಯ ಜ್ಞಾತಿರ್ಹಿ ವಿಕ್ರಾಂತೋ ಬ್ರಾಹ್ಮಣಾದೋ ಬಕೋ ಹತಃ ।
ಕಿರ್ಮೀರಶ್ಚ ಮಹಾತೇಜಾ ಹಿಡಿಂಬಶ್ಚ ಸಖಾ ತಥಾ ॥ ೩ ॥

ಪರಾಕ್ರಮಶಾಲಿಯೂ, ಬ್ರಾಹ್ಮಣ ಭಕ್ಷಕನೂ ಆದ ಅವನ ಬಂಧುವಾದ ಬಕನು ಹತನಾದನಷ್ಟೆ. ಹಾಗೆಯೇ ಮಹಾತೇಜಸ್ವಿಯಾದ ಕಿರ್ಮೀರನೂ ಮತ್ತು ಅವನ ಸ್ನೇಹಿತನಾದ ಹಿಡಿಂಬನೂ ಹತರಾಗಿದ್ದರು.

ಸ ದೀರ್ಘಕಾಲಾಧ್ಯುಷಿತಂ ಪೂರ್ವವೈರಮನುಸ್ಮರನ್ ।
ವಿಜ್ಞಾಯೈತನ್ನಿಶಾಯುದ್ಧಂ ಜಿಘಾಂಸುರ್ಭೀಮಮಾಹವೇ ॥ ೪ ॥

ಸ ಮತ್ತ ಇವ ಮಾತಂಗಃ ಸಂಕ್ರುದ್ಧ ಇವ ಚೋರಗಃ ।
ದುರ್ಯೋಧನಮಿದಂ ವಾಕ್ಯಮಬ್ರವೀದ್ ಯುದ್ಧಲಾಲಸಃ ॥ ೫ ॥

ಅವನು ದೀರ್ಘಕಾಲದಿಂದ ತನ್ನಲ್ಲಿ ವಾಸವಾಗಿದ್ದ ಈ ಹಿಂದಿನ ವೈರವನ್ನು ಸ್ಮರಿಸಿಕೊಂಡು, ಈ ರಾತ್ರಿಯುದ್ಧದ ವಾರ್ತೆಯನ್ನು ಕೇಳಿ, ಯುದ್ಧದಲ್ಲಿ ಭೀಮನನ್ನು ಕೊಲ್ಲಲು ಬಯಸಿ, ಮತ್ತಮಾತಂಗದಂತೆ ಮತ್ತು ರೋಷವುಳ್ಳ ಸರ್ಪದಂತೆ ಯುದ್ಧಲಾಲಸನಾಗಿ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ಅಲಾಯುಧಃ

ವಿದಿತಂ ತೇ ಮಹಾರಾಜ ಯಥಾ ಭೀಮೇನ ರಾಕ್ಷಸಾಃ ।
ಹಿಡಿಂಬಬಕಕಿರ್ಮೀರಾ ನಿಹತಾ ಮಮ ಬಾಂಧವಾಃ ॥ ೬ ॥

ಅಲಾಯುಧ– ಎಲೈ ಮಹಾರಾಜನೇ, ನನ್ನ ಬಂಧುಗಳಾದ ಹಿಡಿಂಬ, ಬಕ, ಕಿರ್ಮೀರ ರಾಕ್ಷಸರು ಹೇಗೆ ಭೀಮನಿಂದ ಹತರಾದರೆಂದು ನಿನಗೆ ತಿಳಿದಿದೆ.

ಪರಾಮರ್ಶಶ್ಚ ಕನ್ಯಾಯಾ ಹಿಡಿಂಬಾಯಾಃ ಕೃತಃ ಪುರಾ ।
ಕಿಮನ್ಯದ್ ರಾಕ್ಷಸಾನನ್ಯಾನಸ್ಮಾಂಶ್ಚ ಪರಿಭೂಯ ಹ ॥ ೭ ॥

ಉಳಿದ ರಾಕ್ಷಸರನ್ನು ಮತ್ತು ನನ್ನನ್ನು ಪರಿಗಣಿಸದೆ ಹಿಂದೆ ಕನ್ಯೆಯಾದ ಹಿಡಿಂಬೆಯ ಮೇಲೆ ಅವನು ಕೈ ಮಾಡಿದ್ದಾನೆ. ಇದಕ್ಕಿಂತ ಇನ್ನೇನು ಬೇಕು?

ತಮಹಂ ಸಗಣಂ ರಾಜನ್ ಸವಾಜಿರಥಕುಂಜರಮ್ ।
ಹೈಡಿಂಬಂ ಚ ಸಹಾಮಾತ್ಯಂ ಹಂತುಮಭ್ಯಾಗತಃ ಸ್ವಯಮ್ ॥ ೮ ॥

ಎಲೈ ರಾಜನೇ, ಗಜಾಶ್ವರಥಗಳಿಂದ ಕೂಡಿದ ಪರಿವಾರ ಸಹಿತನಾದ ಅವನನ್ನೂ ಅಮಾತ್ಯರಿಂದ ಸಹಿತನಾದ ಘಟೋತ್ಕಚನನ್ನೂ ಕೊಲ್ಲಲು ನಾನಾಗಿಯೇ ಇಲ್ಲಿಗೆ ಬಂದಿದ್ದೇನೆ.

ಅದ್ಯ ಕುಂತೀಸುತಾನ್ ಸರ್ವಾನ್ ವಾಸುದೇವಪುರೋಗಮಾನ್ ।
ಹತ್ವಾ ಸಂಭಕ್ಷಯಿಷ್ಯಾಮಿ ಸರ್ವೈರನುಚರೈಃ ಸಹ ।
ನಿವಾರಯ ಬಲಂ ಸರ್ವಂ ವಯಂ ಯೋತ್ಸ್ಯಾಮ ಪಾಂಡವಾನ್ ॥೯॥

ಕೃಷ್ಣನೇ ಮೊದಲಾದ ಎಲ್ಲ ಕುಂತೀಪುತ್ರರನ್ನೂ ಕೊಂದು, ಅನುಚರರ ಜೊತೆಯಲ್ಲಿ ಅವರನ್ನು ಭಕ್ಷಿಸುವೆನು. ನಿನ್ನ ಸೈನ್ಯವೆಲ್ಲವನ್ನೂ ಹಿಂದೆ ತೆಗೆದುಕೊ. ನಾವು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವೆವು.

ತಸ್ಯ ತದ್ವಚನಂ ಶ್ರುತ್ವಾ ಹೃಷ್ಟೋ ದುರ್ಯೋಧನಸ್ತದಾ ।
ಪ್ರತಿಪೂಜ್ಯಾಬ್ರವೀದ್ ವಾಕ್ಯಂ ಭ್ರಾತೃಭಿಃ ಪರಿವಾರಿತಃ ॥ ೧೦ ॥

ತ್ವಾಂ ಪುರಸ್ಕೃತ್ಯ ಸಗಣಂ ವಯಂ ಯೋತ್ಸ್ಯಾಮಹೇ ಪರಾನ್ ।
ನ ಹಿ ವೈರಾಂತಮನಸಃ ಸ್ಥಾಸ್ಯಂತಿ ಮಮ ಸೈನಿಕಾಃ ॥ ೧೧ ॥

ಅವನ ಆ ಮಾತುಗಳನ್ನು ಕೇಳಿ ಸಂತೋಷಗೊಂಡ, ಸಹೋದರರಿಂದ ಪರಿವಾರಿತನಾದ ದುರ್ಯೋಧನನು ಅವನನ್ನು ಕುರಿತು- 'ಪರಿವಾರ ಸಹಿತನಾದ ನಿನ್ನನ್ನು ಮುಂದೆ ಮಾಡಿಕೊಂಡು ನಾವು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವೆವು. ವೈರವನ್ನು ಮುಗಿಸುವ ಮನಸ್ಸುಳ್ಳ ನನ್ನ ಸೈನಿಕರು ಮಧ್ಯದಲ್ಲಿ ಸುಮ್ಮನಿರುವುದಿಲ್ಲ' ಎಂದು ಹೇಳಿದನು.

ಏವಮಸ್ತ್ವಿತಿ ರಾಜಾನಮುಕ್ತ್ವಾ ರಾಕ್ಷಸಪುಂಗವಃ ।
ಅಭ್ಯಯಾತ್ ತ್ವರಿತೋ ಭೀಮಂ ಸಹಿತಃ ಪುರುಷಾಶನೈಃ ॥ ೧೨ ॥

ದೀಪ್ಯಮಾನೇನ ವಪುಷಾ ರಥೇನಾದಿತ್ಯವರ್ಚಸಾ ।
ತಾದೃಶೇನೈವ ರಾಜೇಂದ್ರ ಯಾದೃಶೇನ ಘಟೋತ್ಕಚಃ ॥ ೧೩ ॥

ರಾಕ್ಷಸಶ್ರೇಷ್ಠನಾದ ಅಲಾಯುಧನು ದುರ್ಯೋಧನನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿ, ನರಭಕ್ಷಕರಾದ ಅವನ ಪರಿವಾರದಿಂದ ಸಹಿತನಾಗಿ, ಜ್ವಲಿಸುವ ದೇಹದಿಂದ ಕೂಡಿ, ಎಲೈ ರಾಜೇಂದ್ರನೇ, ಘಟೋತ್ಕಚನ ರಥದಂತೆಯೇ ಇದ್ದ ಸೂರ್ಯನಂತೆ ಶೋಭಿಸುವ ರಥದಿಂದ ಶೀಘ್ರವಾಗಿ ಭೀಮನ ಮೇಲೆ ಸಾಗಿದನು.

ತಸ್ಯಾಪ್ಯತುಲನಿರ್ಘೋಷೋ ಬಹುತೋರಣಚಿತ್ರಿತಃ ।
ಋಕ್ಷಚರ್ಮಾವನದ್ಧಾಂಗೋ ನಲ್ವಮಾತ್ರೋ ಮಹಾರಥಃ ॥ ೧೪ ॥

ಅವನ ರಥವೂ ಕೂಡ ಅಸದೃಶವಾದ ಘೋಷದಿಂದ ಕೂಡಿದ್ದು, ಅನೇಕ ತೋರಣಗಳಿಂದ ಆಶ್ಚರ್ಯಕರವಾಗಿದ್ದು, ಕರಡಿಯ ಚರ್ಮದಿಂದ ಆಚ್ಛಾದಿಸಲ್ಪಟ್ಟು ಒಂದು ನಲ್ವದಪ್ಪು ಎತ್ತರವಿದ್ದಿತು.

ತಸ್ಯಾಪಿ ತುರಗಾಃ ಶೀಘ್ರಾ ಹಸ್ತಿಕಾಯಾಃ ಖರಸ್ವನಾಃ ।
ಶತಂ ಯುಕ್ತಾ ಮಹಾಕಾಯಾ ಮಾಂಸಶೋಣಿತಭೋಜನಾಃ ॥ ೧೫ ॥

ಅವನ ರಥದ ನೂರು ಅಶ್ವಗಳೂ ಆನೆಯಂತಹ ಶರೀರವನ್ನು ಹೊಂದಿ, ಕರ್ಕಶವಾದ ಸ್ವರವನ್ನು ಹೊಂದಿ, ಮಾಂಸ-ರಕ್ತಭೋಜಿಗಳಾಗಿ ಶೀಘ್ರಗಾಮಿಗಳಾಗಿದ್ದವು.

ತಸ್ಯಾಪಿ ರಥನಿರ್ಘೋಷೋ ಮಹಾಮೇಘರವೋಪಮಃ ।
ತಸ್ಯಾಪಿ ಸುಮಹಚ್ಚಾಪಂ ದೃಢಜ್ಯಂ ಬಲವತ್ತರಮ್ ॥ ೧೬ ॥

ಅವನ ರಥದ ಘೋಷವೂ ಮಹಾಮೇಘಘೋಷದಂತಿದ್ದಿತು. ಅವನ ದೊಡ್ಡ ಧನುಸ್ಸೂ ಸಹ ಬಲವಾಗಿದ್ದು ದೃಢವಾದ ಹೆದೆಯನ್ನು ಹೊಂದಿದ್ದಿತು.

ತಸ್ಯಾಪ್ಯಕ್ಷಸಮಾ ಬಾಣಾ ರುಗ್ಮಪುಂಖಾಃ ಶಿಲಾಶಿತಾಃ ।
ಸೋಽಪಿ ವೀರೋ ಮಹಾಬಾಹುರ್ಯಥೈವ ಸ ಘಟೋತ್ಕಚಃ ॥ ೧೭ ॥

ಅವನ ಬಾಣಗಳೂ ಸಹ ರಥಾಕ್ಷದಷ್ಟು ಸುತ್ತಳತೆಯನ್ನು ಹೊಂದಿ, ಸುವರ್ಣ ಪುಂಖಗಳಿಂದ ಕೂಡಿ ಕಲ್ಲಿನಲ್ಲಿ ಸಾಣೆಯನ್ನು ಹಿಡಿಯಲ್ಪಟ್ಟಿದ್ದವು. ಘಟೋತ್ಕಚನಂತೆ ಆ ವೀರನೂ ಮಹಾಬಾಹುವಾಗಿದ್ದನು.

ತಸ್ಯಾಪಿ ಗೋಮಾಯುಬಲಾಭಿಗುಪ್ತೋ
ಬಭೂವ ಕೇತುರ್ಜ್ವಲನಾರ್ಕತುಲ್ಯಃ ।
ಸ ಚಾಪಿ ರೂಪೇಣ ಘಟೋತ್ಕಚಸ್ಯ
ಶ್ರೀಮತ್ತಮೋ ವ್ಯಾಕುಲದೀಪಿತಾಸ್ಯಃ ॥ ೧೮ ॥

ಅವನ ರಥದ ಧ್ವಜವೂ ಸಹ ನರಿ ಮತ್ತು ಬಲಗಳಿಂದ (ಮಾಂಸಾಹಾರಿ ಪಕ್ಷಿ) ರಕ್ಷಿತವಾಗಿ ಸೂರ್ಯಾಗ್ನಿಸದೃಶವಾಗಿದ್ದಿತು. ಅವನೂ ಸಹ ರೂಪದಲ್ಲಿ ಘಟೋತ್ಕಚನಿಗಿಂತ ಹೆಚ್ಚು ಕಾಂತಿಯುಕ್ತನಾಗಿ ಜ್ವಲಿಸುವ ಮುಖವುಳ್ಳವನಾಗಿದ್ದನು.

ದೀಪ್ತಾಂಗದೋ ದೀಪ್ತಕಿರೀಟಮಾಲೀ
ಬದ್ಧಸ್ರಗುಷ್ಣೀಷನಿಬದ್ಧಖಡ್ಗಃ ।
ಗದೀ ಭುಶುಂಡೀ ಮುಸಲೀ ಹಲೀ ಚ
ಶರಾಸನೀ ವಾರಣತುಲ್ಯವರ್ಷ್ಮಾ ॥ ೧೯ ॥

ಜ್ವಲಿಸುವ ಅಂಗದಗಳು, ಜ್ವಲಿಸುವ ಕಿರೀಟ ಮತ್ತು ಮಾಲೆಗಳು, ಕಟ್ಟಿದ ಮಾಲೆಗಳು ಮತ್ತು ರುಮಾಲುಗಳು, ಸೊಂಟಕ್ಕೆ ಕಟ್ಟಿದ ಖಡ್ಗ, ಗದೆ, ಭುಶುಂಡಿ, ಮುಸಲ, ಹಲ ಮತ್ತು ಧನುಸ್ಸುಗಳನ್ನು ಧರಿಸಿ ಗಜರಾಜನಿಗೆ ಸಮಾನವಾದ ಕಾಂತಿಯನ್ನು ಹೊಂದಿದ್ದನು.

ರಥೇನ ತೇನಾನಲವರ್ಚಸಾ ಚ
ವಿದ್ರಾವಯನ್ ಪಾಂಡವವಾಹಿನೀಂ ತಾಮ್ ।
ರರಾಜ ಸಂಖೇ ಪರಿವರ್ತಮಾನೋ
ವಿದ್ಯುನ್ಮಾಲೀ ಮೇಘ ಇವಾಂತರಿಕ್ಷೇ ॥ ೨೦ ॥

ಅಗ್ನಿಯ ಕಾಂತಿಯನ್ನು ಹೊಂದಿದ ಆ ರಥದಿಂದ ಅವನು ಪಾಂಡವರ ಸೈನ್ಯವನ್ನು ಓಡಿಸುತ್ತಾ ವಿದ್ಯುತ್ತಿನ ಮಾಲೆಯನ್ನು ಧರಿಸಿದ ಮೇಘವು ಅಂತರಿಕ್ಷದಲ್ಲಿ ಸಂಚರಿಸುವಂತೆ ರಣರಂಗದಲ್ಲಿ ಸಂಚರಿಸುತ್ತಾ ಶೋಭಿಸಿದನು.

ತೇ ಚಾಪಿ ಸರ್ವೇ ಪ್ರವರಾ ನರೇಂದ್ರಾ
ಮಹಾಬಲಾ ವರ್ಮಿಣಶ್ಚರ್ಮಿಣಶ್ಚ ।
ಹರ್ಷಾನ್ವಿತಾ ಯುಯುಧುಸ್ತತ್ರ ರಾಜನ್
ಸಮಂತತಃ ಪಾಂಡವಯೋಧವೀರಾಃ ॥ ೨೧ ॥

ಅವನ ಅನುಚರರೆಲ್ಲರೂ ಸಹ ಶ್ರೇಷ್ಠರು, ರಾಜರು, ಮಹಾಬಲವುಳ್ಳವರು, ಕವಚವನ್ನು ಮತ್ತು ಚರ್ಮಗಳನ್ನು ಧರಿಸಿದವರು. ಎಲೈ ರಾಜನೇ, ಪಾಂಡವರ ವೀರ ಸೈನಿಕರೂ ಸಹ ಹರ್ಷಾನ್ವಿತರಾಗಿ ಅವರ ಜೊತೆಯಲ್ಲಿ ಎಲ್ಲ ಕಡೆಗಳಲ್ಲಿಯೂ ಯುದ್ಧವನ್ನು ಮಾಡಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ನವವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ಮೂರನೆಯ ಅಧ್ಯಾಯ

ಭೀಮ ಮತ್ತು ಅಲಾಯುಧರ ಯುದ್ಧ.

ಸಂಜಯಃ

ತಮಾಗತಮಭಿಪ್ರೇಕ್ಷ್ಯ ಭೀಮಕರ್ಮಾಣಮಾಹವೇ ।
ಹರ್ಷಮಾಹಾರಯಾಂಚಕ್ರುಃ ಕುರವಃ ಸರ್ವ ಏವ ತೇ ॥ ೧ ॥

ಸಂಜಯ– ಯುದ್ಧದಲ್ಲಿ ಭಯಂಕರ ಕರ್ಮವನ್ನು ಮಾಡುವ ಅಲಾಯುಧನು ಬರುತ್ತಿರುವುದನ್ನು ನೋಡಿ ಪಾಂಡವರೆಲ್ಲರೂ ಬಹಳ ಸಂತೋಷವನ್ನು ತಂದುಕೊಂಡರು.

ತಥೈವ ತವ ಪುತ್ರಾಸ್ತೇ ದುರ್ಯೋಧನಪುರೋಗಮಾಃ ।
ಅಪ್ಲವಾಃ ಪ್ಲವಮಾಸಾದ್ಯ ತರ್ತುಕಾಮಾ ಇವಾರ್ಣವಮ್ ॥ ೨ ॥

ಪುನರ್ಜಾತಮಿವಾತ್ಮಾನಂ ಮನ್ವಾನಾಃ ಪಾರ್ಥಿವಾಸ್ತದಾ ।
ಅಲಾಯುಧಂ ರಾಕ್ಷಸೇಂದ್ರಂ ಸ್ವಾಗತೇನಾಭ್ಯಪೂಜಯನ್ ॥ ೩ ॥

ಹಾಗೆಯೇ ದುರ್ಯೋಧನ ಮೊದಲಾದ ನಿನ್ನ ಪುತ್ರರು, ಸಮುದ್ರವನ್ನು ದಾಟಲು ನೌಕೆಯಿಲ್ಲದವರು ನೌಕೆಯನ್ನು ಪಡೆದಂತೆ ತಮ್ಮನ್ನು ಪುನರ್ಜನ್ಮವನ್ನು ಪಡೆದವರೆಂದು ತಿಳಿದುಕೊಂಡು, ಅವರು ಮತ್ತು ಉಳಿದ ರಾಜರು ರಾಕ್ಷಸಶ್ರೇಷ್ಠನಾದ ಅಲಾಯುಧನಿಗೆ ಸ್ವಾಗತವನ್ನು ಕೋರಿ ಪೂಜಿಸಿದರು.

ತಸ್ಮಿಂಸ್ತ್ವಮಾನುಷೇ ಯುದ್ಧೇ ವರ್ತಮಾನೇ ಭಯಾವಹೇ ।
ಕರ್ಣರಾಕ್ಷಸಯೋರ್ನಕ್ತಂ ದಾರುಣಪ್ರತಿದರ್ಶನೇ ॥ ೪ ॥

ಉಪಪ್ರೇಕ್ಷಂತ ಪಾಂಚಾಲಾಃ ಸ್ಮಯಮಾನಾಃ ಸರಾಜಕಾಃ ।
ತಥೈವ ತಾವಕಾ ರಾಜನ್ ಘೂರ್ಣಮಾನಾಸ್ತತಸ್ತತಃ ॥ ೫ ॥

ಕರ್ಣನಿಗೂ ಮತ್ತು ಘಟೋತ್ಕಚನಿಗೂ ರಾತ್ರಿಯ ಕಾಲದಲ್ಲಿ ದಾರುಣವಾಗಿ ತೋರುತ್ತಿದ್ದ, ಭಯಂಕರವಾದ ಅಮಾನುಷವಾದ ಯುದ್ಧವು ನಡೆಯುತ್ತಿರಲು ಪಾಂಚಾಲರು ಮತ್ತು ಉಳಿದ ರಾಜರು ನಗುತ್ತಾ ನೋಡುತ್ತಿದ್ದರು. ರಾಜನೇ, ಹಾಗೆಯೇ ನಿನ್ನವರು ಮುಖಗಳನ್ನು ಅರಳಿಸಿ ನೋಡುತ್ತಿದ್ದರು.

ಚುಕ್ರುಶುರ್ನೇದಮಸ್ತೀತಿ ದ್ರೋಣದ್ರೌಣಿಕೃಪಾದಯಃ ।
ತತ್ಕರ್ಮ ದೃಷ್ಟ್ವಾ ಸಂಭ್ರಾಂತಾ ಹೈಡಿಂಬಸ್ಯ ರಣಾಜಿರೇ ॥ ೬ ॥

ರಣರಂಗದಲ್ಲಿ ಘಟೋತ್ಕಚನ ಆ ಪರಾಕ್ರಮಯುಕ್ತವಾದ ಕರ್ಮವನ್ನು ನೋಡಿ ದ್ರೋಣರು-ಅಶ್ವತ್ಥಾಮರು-ಕೃಪರು ಮೊದಲಾದವರು ಇದು ಸರಿಯಲ್ಲ ಎಂದು ಹೇಳಿದರು.

ಸರ್ವಮಾವಿಗ್ನಮಭವದ್ದಾಹಾಭೂತಮಚೇತನಮ್ ।
ತವ ಸೈನ್ಯಂ ಮಹಾರಾಜ ನಿರಾಶಂ ಕರ್ಣಜೀವಿತೇ ॥ ೭ ॥

ಎಲೈ ಮಹಾರಾಜನೇ, ನಿನ್ನ ಸೈನ್ಯವೆಲ್ಲವೂ ಶತ್ರುಗಳ ಹೊಡೆತಕ್ಕೆ ಸಿಲುಕಿ ಹಾಹಾಕಾರವನ್ನು ಹೊಂದಿ, ವಿವೇಕಶೂನ್ಯವಾಗಿ ಕರ್ಣನ ಜೀವಿತದಲ್ಲಿ ಆಸೆಯನ್ನು ಕಳೆದುಕೊಂಡವು.

ದುರ್ಯೋಧನಸ್ತು ಸಂಪ್ರೇಕ್ಷ್ಯ ಕರ್ಣಮಾರ್ತಿಂ ಪರಾಂ ಗತಮ್ ।
ಅಲಾಯುಧಂ ರಾಕ್ಷಸೇಂದ್ರಮಾಹೂಯೇದಮಥಾಬ್ರವೀತ್ ॥ ೮ ॥

ದುರ್ಯೋಧನನಾದರೋ ಸಂಕಟಕ್ಕೆ ಸಿಲುಕಿದ ಕರ್ಣನನ್ನು ನೋಡಿ ರಾಕ್ಷಸೇಂದ್ರನಾದ ಅಲಾಯುಧನನ್ನು ಕರೆದು ಈ ಮಾತನ್ನು ಆಡಿದನು.

ಏಷ ವೈಕರ್ತನಃ ಕರ್ಣೋ ಹೈಡಿಂಬೇನ ಸಮಾಗತಃ ।
ಕುರುತೇ ಕರ್ಮ ಸುಮಹದ್ಯದಸ್ಯೈಪಯಿಕಂ ಮೃಧೇ ॥ ೯ ॥

ವೈಕರ್ತನನಾದ ಈ ಕರ್ಣನು ಘಟೋತ್ಕಚನಿಂದ ಸಂಸಕ್ತನಾಗಿ ರಣರಂಗದಲ್ಲಿ ತನಗೆ ಅನುಕೂಲವಾದ ಮಹತ್ಕಾರ್ಯವನ್ನು ಮಾಡುತ್ತಿದ್ದಾನೆ.

ಪಶ್ಯೈತಾನ್ ಪಾರ್ಥಿವಾನ್ ಶೂರಾನ್ನಿಹತಾನ್ ಭೈಮಸೇನಿನಾ ।
ನಾನಾಶಸ್ತ್ರೈರಭಿಹತಾನ್ ಪಾದಪಾನಿವ ದಂತಿನಾ ॥ ೧೦ ॥

ಘಟೋತ್ಕಚನಿಂದ ನಾನಾ ಆಯುಧಗಳಿಂದ ಹೊಡೆಯಲ್ಪಟ್ಟು ಗಜೇಂದ್ರನಿಂದ ಉರುಳಿಸಲ್ಪಟ್ಟ ಮರಗಳಂತೆ ಬಿದ್ದಿರುವ ಶೂರರಾದ ಈ ರಾಜರನ್ನು ನೋಡು.

ತವೈಷ ಭಾಗಃ ಸಮರೇ ರಾಜಮಧ್ಯೇ ಮಯಾ ಕೃತಃ ।
ತವೈವಾನುಮತೇ ವೀರ ತಂ ವಿಕ್ರಮ್ಯ ನಿಬರ್ಹಯ ॥ ೧೧ ॥

ಪುರಾ ವೈಕರ್ತನಂ ಕರ್ಣಮೇಷ ಪಾಪೋ ಘಟೋತ್ಕಚಃ ।
ಮಾಯಾಬಲಮುಪಾಶ್ರಿತ್ಯ ಕರ್ಶಯತ್ಯರಿಕರ್ಶನಃ ॥ ೧೨ ॥

ಎಲೈ ವೀರನೇ, ಈ ಘಟೋತ್ಕಚನನ್ನು ನಿನ್ನ ಅಭಿಪ್ರಾಯದಂತೆಯೇ ರಾಜರ ಮಧ್ಯದಲ್ಲಿ ಯುದ್ಧದಲ್ಲಿ ನಿನ್ನ ಭಾಗವೆಂದು ಕಲ್ಪಿಸಿದ್ದೇನೆ. ಪರಾಕ್ರಮವನ್ನು ಮಾಡಿ ಅವನನ್ನು ನಾಶಗೊಳಿಸು. ಈ ಪಾಪಿಯೂ ಮತ್ತು ಶತ್ರುಕರ್ಶನನೂ ಆದ ಘಟೋತ್ಕಚನು ಮಾಯಾಬಲವನ್ನು ಆಶ್ರಯಿಸಿ ಕರ್ಣನನ್ನು ಮೊದಲು ಕ್ಲೇಶಗೊಳಿಸುತ್ತಿದ್ದಾನೆ.

ಸಂಜಯಃ

ಏವಮುಕ್ತಃ ಸ ರಾಜ್ಞಾ ತು ರಾಕ್ಷಸಸ್ತೀವ್ರವಿಕ್ರಮಃ ।
ತಥೇತ್ಯುಕ್ತ್ವಾ ಮಹಾಬಾಹುರ್ಘಟೋತ್ಕಚಮುಪಾದ್ರವತ್ ॥ ೧೩ ॥

ಸಂಜಯ– ರಾಜನಿಂದ ಹೀಗೆ ಹೇಳಲ್ಪಟ್ಟ ತೀವ್ರ ಪರಾಕ್ರಮಶಾಲಿಯಾದ ಮಹಾಬಾಹುವಾದ ಆ ರಾಕ್ಷಸನು ಹಾಗೆಯೇ ಆಗಲಿ ಎಂದು ಹೇಳಿ ಘಟೋತ್ಕಚನ ಮೇಲೆ ಎರಗಿದನು.

ತತಃ ಕರ್ಣಂ ಸಮುತ್ಸೃಜ್ಯ ಭೈಮಸೇನಿರಪಿ ಪ್ರಭೋ ।
ಪ್ರತ್ಯಮಿತ್ರಮುಪಾಯಾಂತಂ ಮರ್ದಯಾಮಾಸ ಮಾರ್ಗಣೈಃ ॥ ೧೪ ॥

ಎಲೈ ಪ್ರಭುವೇ, ಆಗ ಭೀಮಸೇನ ಪುತ್ರನಾದ ಘಟೋತ್ಕಚನು ಕರ್ಣನನ್ನು ಬಿಟ್ಟು ಹೊಸದಾಗಿ ಬರುತ್ತಿದ್ದ ಶತ್ರುವನ್ನು ಬಾಣಗಳಿಂದ ಮರ್ದಿಸಿದನು.

ತಯೋಃ ಸಮಭವದ್ ಯುದ್ಧಂ ಕ್ರುದ್ಧಯೋ ರಾಕ್ಷಸೇಂದ್ರಯೋಃ ।
ಮತ್ತಯೋರ್ವಾಸಿತಾಹೇತೋರ್ದ್ವಿಪಯೋರಿವ ಕಾನನೇ ॥ ೧೫ ॥

ಅರಣ್ಯದಲ್ಲಿ ಎರಡು ಮದಗಜಗಳು ಆಗ ತಾನೇ ಪ್ರೌಢತೆಯನ್ನು ಹೊಂದಿದ ಹೆಣ್ಣಾನೆಯ ಸಲುವಾಗಿ ಹೊಡೆದಾಡುವಂತೆ ಕ್ರುದ್ಧರಾದ ಆ ಇಬ್ಬರು ರಾಕ್ಷಸಶ್ರೇಷ್ಠರಿಗೆ ಯುದ್ಧವು ನಡೆಯಿತು.

ರಕ್ಷಸಾ ವಿಪ್ರಮುಕ್ತಸ್ತು ಕರ್ಣೋಽಪಿ ರಥಿನಾಂ ವರಃ ।
ಅಭ್ಯದ್ರವದ್ ಭೀಮಸೇನಂ ರಥೇನಾದಿತ್ಯವರ್ಚಸಾ ॥ ೧೬ ॥

ರಾಕ್ಷಸನಾದ ಘಟೋತ್ಕಚನಿಂದ ಬಿಡುಗಡೆಯನ್ನು ಹೊಂದಿದ, ರಥಿಕರಲ್ಲಿ ಶ್ರೇಷ್ಠನಾದ ಕರ್ಣನೂ ಸಹ ಸೂರ್ಯನ ಕಾಂತಿಯನ್ನು ಹೊಂದಿದ್ದ ರಥದಿಂದ ಭೀಮಸೇನನ ಮೇಲೆ ಸಾಗಿದನು.

ತಮಾಯಾಂತಮನಾದೃತ್ಯ ದೃಷ್ಟ್ವಾ ಗ್ರಸ್ತಂ ಘಟೋತ್ಕಚಮ್ ।
ಅಲಾಯುಧೇನ ಸಮರೇ ಸಿಂಹೇನೇವ ಗವಾಂ ಪತಿಮ್ ॥ ೧೭ ॥

ರಥೇನಾದಿತ್ಯವಪುಷಾ ಭೀಮಃ ಪ್ರಹರತಾಂ ವರಃ ।
ಕಿರನ್ ಶರೌಘಾನ್ ಪ್ರಯಯಾವಲಾಯುಧರಥಂ ಪ್ರತಿ ॥ ೧೮ ॥

ತನ್ನ ಕಡೆಗೆ ಬರುತ್ತಿದ್ದ ಕರ್ಣನನ್ನು ಲೆಕ್ಕಿಸದೆ ಸಿಂಹವು ವೃಷಭವನ್ನು ಹಿಡಿದಂತೆ, ಯುದ್ಧದಲ್ಲಿ ಅಲಾಯುಧನು ಘಟೋತ್ಕಚನನ್ನು ಹಿಡಿದಿರುವುದನ್ನು ನೋಡಿ ಪ್ರಹಾರ ಮಾಡುವುದರಲ್ಲಿ ಶ್ರೇಷ್ಠನಾದ ಭೀಮನು ಬಾಣಗಳ ಸಮೂಹಗಳನ್ನು ಪ್ರಯೋಗಿಸುತ್ತಾ ಸೂರ್ಯಕಾಂತಿಯುಳ್ಳ ರಥದಿಂದ ಅಲಾಯುಧನ ರಥದ ಕಡೆಗೆ ಬಂದನು.

ತಮಾಯಾಂತಮಭಿಪ್ರೇಕ್ಷ್ಯ ಸ ತದಾಲಾಯುಧಃ ಪ್ರಭೋ ।
ಘಟೋತ್ಕಚಂ ಸಮುತ್ಸೃಜ್ಯ ಭೀಮಸೇನಂ ಸಮಾಹ್ವಯತ್ ॥ ೧೯ ॥

ಎಲೈ ಪ್ರಭುವೇ, ಭೀಮಸೇನನು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಅಲಾಯುಧನು ಘಟೋತ್ಕಚನನ್ನು ಬಿಟ್ಟು ಭೀಮಸೇನನನ್ನು ಯುದ್ಧಕ್ಕೆ ಆಹ್ವಾನಿಸಿದನು.

ತಂ ಭೀಮಃ ಸಹಸಾಭ್ಯೇತ್ಯ ರಾಕ್ಷಸಾಂತಕರಃ ಪ್ರಭೋ ।
ಸಗಣಂ ರಾಕ್ಷಸೇಂದ್ರಂ ತಂ ಶರವರ್ಷೈರವಾಕಿರತ್ ॥ ೨೦ ॥

ಎಲೈ ಪ್ರಭುವೇ, ರಾಕ್ಷಸಾಂತಕನಾದ ಭೀಮನು ಶೀಘ್ರವಾಗಿ ಸಮೀಪಿಸಿ ಪರಿವಾರ ಸಹಿತನಾದ ಆ ರಾಕ್ಷಸಶ್ರೇಷ್ಠನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಥೈವಾಲಾಯುಧೋ ರಾಜನ್ ಶಿಲಾಧೌತೈರಜಿಹ್ಮಗೈಃ ।
ಅಭ್ಯವರ್ಷತ ಕೌಂತೇಯಂ ಪುನಃ ಪುನರರಿಂದಮಃ ॥ ೨೧ ॥

ಎಲೈ ರಾಜನೇ, ಅರಿಂದಮನಾದ ಅಲಾಯುಧನೂ ಸಹ ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ನೇರವಾದ ಬಾಣಗಳಿಂದ ಭೀಮಸೇನನ ಮೇಲೆ ಪುನಃ ಪುನಃ ಬಾಣಗಳ ಮಳೆಯನ್ನು ಸುರಿಸಿದನು.

ತಥಾ ತೇ ರಾಕ್ಷಸಾಃ ಸರ್ವೇ ಭೀಮಸೇನಮುಪಾದ್ರವನ್ ।
ನಾನಾಪ್ರಹರಣಾ ಭೀಮಾಸ್ತ ತ್ಪುತ್ರಾನಾಂ ಜಯೈಷಿಣಃ ॥ ೨೨ ॥

ಹಾಗೆಯೇ ನಾನಾ ಶಸ್ತ್ರವನ್ನು ಹಿಡಿದ ಭಯಂಕರರಾದ ಆ ಎಲ್ಲ ರಾಕ್ಷಸರೂ ಸಹ ನಿನ್ನ ಪುತ್ರನ ಜಯವನ್ನು ಬಯಸಿ ಭೀಮಸೇನನ ಮೇಲೆಯೇ ಧಾವಿಸಿದರು.

ಸ ತಾಡ್ಯಮಾನೋ ಬಲಿಭಿರ್ಭೀಮಸೇನೋ ಮಹಾಬಲಃ ।
ಪಂಚಭಿಃ ಪಂಚಭಿಃ ಸರ್ವಾಂಸ್ತಾನವಿಧ್ಯ ಚ್ಛಿತೈಃ ಶರೈಃ ॥ ೨೩ ॥

ಬಲಿಷ್ಠರಾದ ಅವರಿಂದ ಹೊಡೆಯಲ್ಪಟ್ಟ ಮಹಾಬಲನಾದ ಭೀಮಸೇನನು ಅವರಲ್ಲಿ ಒಬ್ಬೊಬ್ಬರನ್ನೂ ತೀಕ್ಷ್ಣವಾದ ಐದೈದು ಬಾಣಗಳಿಂದ ಹೊಡೆದನು.

ತೇ ವಧ್ಯಮಾನಾ ಭೀಮೇನ ರಾಕ್ಷಸಾಃ ಖರಯೋನಯಃ ।
ವಿನೇದುಸ್ತುಮುಲಾನ್ ನಾದಾನ್ ದುದ್ರುವುಶ್ಚ ದಿಶೋ ದಶ ॥ ೨೪ ॥

ಭೀಮಸೇನನಿಂದ ಹೊಡೆಯಲ್ಪಡುತ್ತಿದ್ದ ಖರನ ಜಾತಿಯಲ್ಲಿ ಹುಟ್ಟಿದ ಆ ರಾಕ್ಷಸರು ತೀವ್ರವಾದ ನಾದಗಳನ್ನು ಮಾಡುತ್ತಾ ದಿಕ್ಕು-ದಿಕ್ಕುಗಳಿಗೆ ಓಡಿಹೋದರು.

ತಾಂಸ್ತ್ರಸ್ಯಮಾನಾನ್ ಭೀಮೇನ ದೃಷ್ಟ್ವಾ ರಕ್ಷೋ ಮಹಾಬಲಮ್ ।
ಅಭಿದುದ್ರಾವ ವೇಗೇನ ಶರೈಶ್ಚೈನಮವಾಕಿರತ್ ॥ ೨೫ ॥

ಭೀಮಸೇನನಿಂದ ಹೆದರಿಸಲ್ಪಡುತ್ತಿದ್ದ ಅವರನ್ನು ನೋಡಿ ಮಹಾಬಲನಾದ ಅಲಾಯುಧ ರಾಕ್ಷಸನು ತನ್ನ ಬಾಣಗಳನ್ನು ಭೀಮಸೇನನ ಮೇಲೆ ಸುರಿಸುತ್ತಾ ವೇಗದಿಂದ ಅವನ ಕಡೆಗೆ ಓಡಿದನು.

ತಂ ಭೀಮಸೇನಃ ಸಮರೇ ತೀಕ್ಷ್ಣೈರ್ರಕ್ಷೋಚ್ಛರೈಃ ।
ಅಲಾಯುಧಸ್ತು ತಾನಸ್ತಾನ್ ಭೀಮೇನ ವಿಶಿಖಾನ್ ರಣೇ ।
ಚಿಚ್ಛೇದ ಕಾಂಶ್ಚಿತ್ ಸಮರೇ ತ್ವರಯಾ ಕಾಂಶ್ಚಿದಗ್ರಹೀತ್ ॥ ೨೬ ॥

ಭೀಮಸೇನನು ರಣರಂಗದಲ್ಲಿ ತೀಕ್ಷ್ಣವಾದ ತುದಿಯನ್ನು ಹೊಂದಿದ್ದ ಬಾಣಗಳಿಂದ ಅವನನ್ನು ಪೀಡಿಸಿದನು. ಅಲಾಯುಧನಾದರೋ ಭೀಮಸೇನನು ಪ್ರಯೋಗಿಸಿದ ಆ ಬಾಣಗಳಲ್ಲಿ ಕೆಲವನ್ನು ರಣರಂಗದಲ್ಲಿ ಕತ್ತರಿಸಿದನು, ಇನ್ನು ಕೆಲವನ್ನು ಶೀಘ್ರವಾಗಿ ಕೈಯಲ್ಲಿ ಹಿಡಿದನು.

ಸ ತಂ ದೃಷ್ಟ್ವಾ ರಾಕ್ಷಸೇಂದ್ರಂ ಭೀಮೋ ಭೀಮಪರಾಕ್ರಮಃ ।
ಗದಾಂ ಚಿಕ್ಷೇಪ ವೇಗೇನ ವಜ್ರಪಾತೋಪಮಾಂ ತದಾ ॥ ೨೭ ॥

ಭಯಂಕರ ಪರಾಕ್ರಮವುಳ್ಳ ಭೀಮಸೇನನು ಆ ರಾಕ್ಷಸಶ್ರೇಷ್ಠನನ್ನು ನೋಡಿ ವಜ್ರಪಾತದ ವೇಗಕ್ಕೆ ಸಮವಾದ ಗದೆಯನ್ನು ಅವನ ಮೇಲೆ ಎಸೆದನು.

ತಾಮಾಪತಂತೀಂ ವೇಗೇನ ಗದಾಂ ಜ್ವಾಲಾಕುಲಾಂ ತತಃ ।
ಗದಯಾ ತಾಡಯಾಮಾಸ ಸಾ ಗದಾ ಭೀಮಮಾವ್ರಜತ್ ॥ ೨೮ ॥

ಜ್ವಾಲೆಗಳಿಂದ ಕೂಡಿ ತನ್ನ ಕಡೆಗೆ ವೇಗದಿಂದ ಬರುತ್ತಿದ್ದ ಆ ಗದೆಯನ್ನು ರಾಕ್ಷಸನು ತನ್ನ ಗದೆಯಿಂದ ಹೊಡೆದನು. ಭೀಮನ ಗದೆಯು ಹಿಂದಿರುಗಿ ಭೀಮನ ಬಳಿಗೇ ಬಂದಿತು.

ಸ ರಾಕ್ಷಸೇಂದ್ರಂ ಕೌಂತೇಯಃ ಶರವರ್ಷೈರವಾಕಿರತ್ ।
ತಾನಪ್ಯಸ್ಯಾಕರೋನ್ಮೋಘಾನ್ ರಾಕ್ಷಸೋ ನಿಶಿತೈಃ ಶರೈಃ ॥ ೨೯ ॥

ಕುಂತೀಪುತ್ರನಾದ ಭೀಮಸೇನನು ರಾಕ್ಷಸೇಂದ್ರನಾದ ಅಲಾಯುಧನ ಮೇಲೆ ಬಾಣಗಳ ಮಳೆಯನ್ನು ಕರೆದನು. ರಾಕ್ಷಸನು ತೀಕ್ಷ್ಣವಾದ ಬಾಣಗಳಿಂದ ಆ ಬಾಣಗಳನ್ನೂ ವ್ಯರ್ಥಗೊಳಿಸಿದನು.

ತೇ ಚಾಪಿ ರಾಕ್ಷಸಾಃ ಸರ್ವೇ ಸೈನಿಕಾ ಭೀಮರೂಪಿಣಃ ।
ಶಾಸನಾದ್ ರಾಕ್ಷಸೇಂದ್ರಸ್ಯ ನಿಜಘ್ನೂ ರಥಕುಂಜರಾನ್ ॥ ೩೦ ॥

ಭಯಂಕರವಾದ ಆಕಾರವುಳ್ಳ ಸೈನಿಕರಾದ ಆ ಎಲ್ಲ ರಾಕ್ಷಸರೂ ಸಹ ರಾಕ್ಷಸೇಂದ್ರನಾದ ಅಲಾಯುಧನ ಶಾಸನದಂತೆ ರಥಗಳನ್ನೂ, ಗಜಗಳನ್ನೂ ಹೊಡೆದರು.

ಪಾಂಚಾಲಾಃ ಸೃಂಜಯಾಶ್ಚೈವ ವಾಜಿನಃ ಪರಮದ್ವಿಪಾಃ ।
ನ ಶಾಂತಿಂ ಲೇಭಿರೇ ತತ್ರ ರಾಕ್ಷಸೈರ್ಭೃಶಪೀಡಿತಾಃ ॥ ೩೧ ॥

ರಾಕ್ಷಸರಿಂದ ತೀವ್ರವಾಗಿ ಹೊಡೆಯಲ್ಪಟ್ಟ ಪಾಂಚಾಲರು, ಸೃಂಜಯರು, ಅಶ್ವಗಳು ಮತ್ತು ಶ್ರೇಷ್ಠ ಗಜಗಳು ಅಲ್ಲಿ ಶಾಂತಿಯನ್ನು ಹೊಂದಲಿಲ್ಲ.

ತಂ ತು ದೃಷ್ಟ್ವಾ ಮಹಾಘೋರಂ ವರ್ತಮಾನಂ ಮಹಾಹವೇ ।
ಅಬ್ರವೀತ್ ಪುರುಷಶ್ರೇಷ್ಠೋ ಧನಂಜಯಮಿದಂ ವಚಃ ॥ ೩೨ ॥

ದೊಡ್ಡ ರಣರಂಗದಲ್ಲಿ ಮಹಾಘೋರವಾದ ಕಾರ್ಯವು ಜರುಗುತ್ತಿರುವುದನ್ನು ನೋಡಿದ ಪುರುಷೋತ್ತಮನಾದ ಕೃಷ್ಣನು ಅರ್ಜುನನನ್ನು ಕುರಿತು ಈ ಮಾತನ್ನು ಆಡಿದನು.

ಪಶ್ಯ ಭೀಮಂ ಮಹಾಬಾಹೋ ರಾಕ್ಷಸೇಂದ್ರವಶಂ ಗತಮ್ ।
ಪದವೀಮಸ್ಯ ಗಚ್ಛ ತ್ವಂ ಮಾ ವಿಚಾರಯ ಪಾಂಡವ ॥ ೩೩ ॥

ಎಲೈ ಮಹಾಬಾಹುವೇ, ಭೀಮನು ರಾಕ್ಷಸೇಂದ್ರನ ವಶವಾಗಿರುವುದನ್ನು ನೋಡು. ಪಾಂಡವನೇ, ನೀನು ಅವನ ಮಾರ್ಗದಲ್ಲಿ ಹೋಗು. ಏನೂ ವಿಚಾರ ಮಾಡಬೇಡ.

ಧೃಷ್ಟದ್ಯುಮ್ನಃ ಶಿಖಂಡೀ ಚ ಯುಧಾಮನ್ಯೂತ್ತಮೌಜಸೌ ।
ಸಹಿತಾ ದ್ರೌಪದೇಯಾಶ್ಚ ಕರ್ಣಂ ಯಾಂತು ಮಹಾರಥಾಃ ॥ ೩೪ ॥

ಮಹಾರಥರಾದ ಧೃಷ್ಟದ್ಯುಮ್ನ, ಶಿಖಂಡಿ, ಯುಧಾಮನ್ಯು, ಉತ್ತಮೌಜ ಮತ್ತು ದ್ರೌಪದಿಯ ಮಕ್ಕಳು ಒಟ್ಟಾಗಿ ಕರ್ಣನ ಮೇಲೆ ಹೋಗಲಿ.

ನಕುಲಃ ಸಹದೇವಶ್ಚ ಯುಯುಧಾನಶ್ಚ ವೀರ್ಯವಾನ್ ।
ಇತರಾನ್ ರಾಕ್ಷಸಾನ್ ಘ್ನಂತು ಶಾಸನಾತ್ತವ ಪಾಂಡವ ॥ ೩೫ ॥

ನಕುಲ-ಸಹದೇವರು ಮತ್ತು ಪರಾಕ್ರಮಿಯಾದ ಸಾತ್ಯಕಿ, ಎಲೈ ಪಾಂಡವನೇ, ನಿನ್ನ ಶಾಸನದಂತೆ ರಾಕ್ಷಸನನ್ನು ಸಂಹಾರ ಮಾಡಲಿ.

ತ್ವಮಪೀಮಾಂ ಮಹಾಬಾಹೋ ಚಮೂಂ ದ್ರೋಣಪುರಸ್ಕೃತಾಮ್ ।
ವಾರಯಸ್ವ ನರವ್ಯಾಘ್ರ ಮಹದ್ಧಿ ಭಯಮಾಗತಮ್ ॥ ೩೬ ॥

ಎಲೈ ಮಹಾಬಾಹುವೇ, ನೀನೂ ಸಹ ದ್ರೋಣರ ಮುಂಭಾಗದಲ್ಲಿರುವ ಈ ಸೈನ್ಯವನ್ನು ತಡೆ. ಎಲೈ ನರವ್ಯಾಘ್ರನೇ, ದೊಡ್ಡ ಭಯವು ಪ್ರಾಪ್ತವಾಗಿದೆ (ಎಂದು ಹೇಳಿದನು).

ಏವಮುಕ್ತೇ ತು ಕೃಷ್ಣೇನ ಯಥೋದ್ದಿಷ್ಟಾ ಮಹಾರಥಾಃ ।
ಜಗ್ಮುರ್ವೈಕರ್ತನಂ ಕರ್ಣಂ ರಾಕ್ಷಸಾಂಶ್ಚೇತರಾನ್ ರಣೇ ॥ ೩೭ ॥

ಕೃಷ್ಣನು ಹೀಗೆ ಹೇಳುತ್ತಿರಲು ಅವನ ಅಭಿಪ್ರಾಯದಂತೆ ಮಹಾರಥರು ವೈಕರ್ತನನಾದ ಕರ್ಣನ ಮೇಲೆಯೂ ಮತ್ತು ಇತರ ರಾಕ್ಷಸರ ಮೇಲೆಯೂ ಎರಗಿದರು.

ಅಥ ಪೂರ್ಣಾಯತೋತ್ಸೃಷ್ಟೈಃ ಶರೈರಾಶೀವಿಷೋಪಮೈಃ ।
ಧನುಶ್ಚಿಚ್ಛೇದ ಭೀಮಸ್ಯ ರಾಕ್ಷಸೇಂದ್ರಃ ಪ್ರತಾಪವಾನ್ ॥ ೩೮ ॥

ಆಗ ಪ್ರತಾಪಶಾಲಿಯಾದ ರಾಕ್ಷಸೇಂದ್ರನಾದ ಅಲಾಯುಧನು ಪೂರ್ಣವಾಗಿ ಎಳೆದು ಪ್ರಯೋಗಿಸಿದ ಸರ್ಪದಂತಿದ್ದ ಬಾಣಗಳಿಂದ ಭೀಮಸೇನನ ಧನುಸ್ಸನ್ನು ಕತ್ತರಿಸಿದನು.

ಹಯಾಂಶ್ಚಾಸ್ಯ ಶಿತೈರ್ಬಾಣೈಃ ಸಾರಥಿಂ ಚ ಮಹಾಬಲಃ ।
ಜಘಾನ ಮಿಷತಃ ಸಂಖ್ಯೇ ಭೀಮಸೇನಸ್ಯ ಭಾರತ ॥ ೩೯ ॥

ಎಲೈ ಭಾರತನೇ, ಮಹಾಬಲನಾದ ಅವನು ರಣರಂಗದಲ್ಲಿ ಭೀಮಸೇನನು ನೋಡುತ್ತಿರುವಂತೆಯೇ ತನ್ನ ಬಾಣಗಳಿಂದ ಅವನ ಸಾರಥಿಯನ್ನೂ ಮತ್ತು ಅಶ್ವಗಳನ್ನೂ ಕೊಂದನು.

ಸೋಽವತೀರ್ಯ ರಥೋಪಸ್ಥಾದ್ಧತಾಶ್ವೋ ಹತಸಾರಥಿಃ ।
ತಸ್ಮೈ ಗುರ್ವೀಂ ಗದಾಂ ಘೋರಾಂ ಸ ವಿನರ್ದ್ಯೋತ್ಸರ್ಜ ಹ ॥ ೪೦ ॥

ಸಾರಥಿಯನ್ನು ಮತ್ತು ಅಶ್ವಗಳನ್ನು ಕಳೆದುಕೊಂಡ ಭೀಮನು ರಥಪೀಠದಿಂದ ಕೆಳಗೆ ಇಳಿದು ಸಿಂಹನಾದವನ್ನು ಮಾಡಿ ಅಲಾಯುಧನ ಮೇಲೆ ಘೋರವಾದ ಒಂದು ಭಾರವಾದ ಗದೆಯನ್ನು ಎಸೆದನು.

ತತಸ್ತಾಂ ಭೀಮನಿರ್ಘೋಷಾಮಾಪತಂತೀಂ ಮಹಾಗದಾಮ್ ।
ಗದಯಾ ರಾಕ್ಷಸೋ ಘೋರೋ ನಿಜಘಾನ ನನಾದ ಚ ॥ ೪೧ ॥

ಆಗ ಭಯಂಕರವಾದ ಘೋಷದೊಡನೆ ತನ್ನೆಡೆಗೆ ಬರುತ್ತಿದ್ದ ಆ ಮಹಾಗದೆಯನ್ನು ಘೋರನಾದ ರಾಕ್ಷಸನು ತನ್ನ ಗದೆಯಿಂದ ಹೊಡೆದು ಗರ್ಜಿಸಿದನು.

ತದ್ ದೃಷ್ಟ್ವಾ ರಾಕ್ಷಸೇಂದ್ರಸ್ಯ ಘೋರಂ ಕರ್ಮ ಭಯಾವಹಮ್ ।
ಭೀಮಸೇನಃ ಪ್ರಹೃಷ್ಟಾತ್ಮಾ ಗದಾಮಾಶು ಪರಾಮೃಶತ್ ॥ ೪೨ ॥

ರಾಕ್ಷಸೇಂದ್ರನ ಘೋರವೂ, ಭಯಂಕರವೂ ಆದ ಆ ಕರ್ಮವನ್ನು ನೋಡಿದ ಭೀಮಸೇನನು ಸಂತೋಷಗೊಂಡು ಕೈಯಲ್ಲಿ ಶೀಘ್ರವಾಗಿ ಗದೆಯನ್ನು ಹಿಡಿದನು.

ತಯೋಃ ಸಮಭವದ್ ಯುದ್ಧಂ ತುಮುಲಂ ನರರಕ್ಷಸೋಃ ।
ಗದಾನಿಪಾತಸಂಹ್ರಾದೈರ್ಭುವಂ ಕಂಪಯತೋರ್ಭೃಶಮ್ ॥ ೪೩ ॥

ಗದೆಗಳ ಆಘಾತದ ಶಬ್ದದಿಂದ ಭೂಮಿಯನ್ನು ತೀವ್ರವಾಗಿ ನಡುಗಿಸುವ ನರ-ರಾಕ್ಷಸರಾದ ಅವರಿಬ್ಬರಿಗೆ ತೀವ್ರವಾದ ಗದಾಯುದ್ಧವು ಉಂಟಾಯಿತು.

ಗದಾವಿಮುಕ್ತೌ ತೌ ಭೂಯಃ ಸಮಾಸಾದ್ಯೇತರೇತರಮ್ ।
ಮುಷ್ಟಿಭಿರ್ವಜ್ರಸಂಹ್ರಾದೈರನ್ಯೋನ್ಯಮಭಿಜಘ್ನತುಃ ॥ ೪೪ ॥

ಅವರು ಪುನಃ ಗದೆಗಳನ್ನು ಬಿಟ್ಟು ಒಬ್ಬರ ಜೊತೆಯಲ್ಲಿ ಒಬ್ಬರು ಸಂಸಕ್ತರಾಗಿ ವಜ್ರಘೋಷವನ್ನು ಮಾಡುತ್ತಿದ್ದ ಮುಷ್ಟಿಗಳಿಂದ ಪರಸ್ಪರವಾಗಿ ಹೊಡೆದಾಡಿದರು.

ರಥಚಕ್ರೈರ್ಯುಗೈರಕ್ಷೈರಧಿಷ್ಠಾನೈರುಪಸ್ಕರೈಃ ।
ಯಥಾಸನ್ನಮುಪಾದಾಯ ನಿಜಘ್ನತುರಮರ್ಷಣೌ ॥ ೪೫ ॥

ರೋಷಶೀಲರಾದ ಅವರು ರಥಚಕ್ರಗಳಿಂದಲೂ, ನೊಗಗಳಿಂದಲೂ, ರಥದ ತೂಬುಗಳಿಂದಲೂ, ರಥದ ಉಪಕರಣಗಳಿಂದಲೂ ಮತ್ತು ಕೈಗೆ ಸಿಕ್ಕಿದ ಎಲ್ಲ ಪದಾರ್ಥಗಳಿಂದಲೂ ಪರಸ್ಪರವಾಗಿ ಹೊಡೆದಾಡಿದರು.

ತೌ ವಿಕ್ಷರಂತೌ ರುಧಿರಂ ಸಮಾಸಾದ್ಯೇತರೇತರಮ್ ।
ಮತ್ತಾವಿವ ಮಹಾನಾಗಾವಕೃಷ್ಟೇತಾಂ ಪುನಃ ಪುನಃ ॥ ೪೬ ॥

ಅವರು ಪರಸ್ಪರವಾಗಿ ಸಂಧಿಸಿ ದೇಹದಿಂದ ರಕ್ತವನ್ನು ಸುರಿಸುತ್ತಾ ಎರಡು ಮತ್ತವಾದ ಮಹಾಗಜಗಳಂತೆ ಪುನಃ ಪುನಃ ಪರಸ್ಪರವಾಗಿ ಎಳೆದಾಡಿದರು.

ತಮಪಶ್ಯದ್ ಹೃಷೀಕೇಶಃ ಪಾಂಡವಾನಾಂ ಹಿತೇ ರತಃ ।
ಸ ಭೀಮಸೇನರಕ್ಷಾರ್ಥಂ ಹೈಡಿಂಬಂ ಪ್ರತ್ಯಚೋದಯತ್ ॥ ೪೭ ॥

ಪಾಂಡವರ ಹಿತದಲ್ಲಿ ಆಸಕ್ತನಾದ ಹೃಷೀಕೇಶನು ಅದನ್ನು ನೋಡಿದನು. ಅವನು ಭೀಮಸೇನನನ್ನು ರಕ್ಷಿಸುವ ಉದ್ದೇಶದಿಂದ ಘಟೋತ್ಕಚನನ್ನು ಪ್ರಚೋದಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ನಾಲ್ಕನೆಯ ಅಧ್ಯಾಯ

ಘಟೋತ್ಕಚನನಿಂದ ಅಲಾಯುಧನ ವಧೆ.

ಸಂಜಯಃ

ಸಂಪ್ರೇಕ್ಷ್ಯ ಸಮರೇ ಭೀಮಂ ರಕ್ಷಸಾ ಗ್ರಸ್ತಮಂತಿಕಾತ್ ।
ವಾಸುದೇವೋಬ್ರವೀದ್ ವಾಕ್ಯಂ ಘಟೋತ್ಕಚಮಿದಂ ತದಾ ॥ ೧ ॥

ಪಶ್ಯ ಭೀಮಂ ಮಹಾಬಾಹೋ ರಕ್ಷಸಾ ಗ್ರಸ್ತಮಂತಿಕಾತ್ ।
ಪಶ್ಯತಾಂ ಸರ್ವಸೈನ್ಯಾನಾಂ ತವ ಚೈವ ಮಹಾದ್ಯುತೇ ॥ ೨ ॥

ಸ ಕರ್ಣಂ ತ್ವಂ ಸಮುತ್ಸೃಜ್ಯ ರಾಕ್ಷಸೇಂದ್ರಮಲಾಯುಧಮ್ ।
ಜಹಿ ಕ್ಷಿಪ್ರಂ ಮಹಾಬಾಹೋ ಪಶ್ಚಾತ್ ಕರ್ಣಂ ವಧಿಷ್ಯಸಿ ॥ ೩ ॥

ಸಂಜಯ– ಹತ್ತಿರದಲ್ಲಿ ರಣರಂಗದಲ್ಲಿ ಭೀಮನು ಅಲಾಯುಧ ರಾಕ್ಷಸನ ಹಿಡಿತಕ್ಕೆ ಸಿಕ್ಕಿರುವುದನ್ನು ನೋಡಿ ಕೃಷ್ಣನು ಘಟೋತ್ಕಚನನ್ನು ಕುರಿತು- 'ಎಲೈ ಮಹಾಬಾಹುವೇ, ಸಮೀಪದಲ್ಲಿಯೇ ಸರ್ವಸೈನ್ಯಗಳೂ ಮತ್ತು ನೀನು ನೋಡುತ್ತಿರುವಂತೆಯೇ ರಾಕ್ಷಸನಿಂದ ಹಿಡಿಯಲ್ಪಟ್ಟಿರುವ ಭೀಮಸೇನನನ್ನು ನೋಡು. ಎಲೈ ಮಹಾದ್ಯುತಿಯೇ, ನೀನು ಕರ್ಣನನ್ನು ಬಿಟ್ಟು ರಾಕ್ಷಸಶ್ರೇಷ್ಠನಾದ ಅಲಾಯುಧನನ್ನು ಶೀಘ್ರವಾಗಿ ಕೊಲ್ಲು. ಎಲೈ ಮಹಾಬಾಹುವೇ, ನೀನು ಕರ್ಣನನ್ನು ಅನಂತರ ಕೊಲ್ಲುವಿ' ಎಂದು ಹೇಳಿದನು.

ಸ ವಾಷ್ಣೇಯವಚಃ ಶ್ರುತ್ವಾ ಕರ್ಣಮುತ್ಸೃಜ್ಯ ವೀರ್ಯವಾನ್ ।
ಯುಯುಧೇ ರಾಕ್ಷಸೇಂದ್ರೇಣ ಬಕಭ್ರಾತ್ರಾ ಘಟೋತ್ಕಚಃ ।
ತಯೋಃ ಸುತುಮುಲಂ ಯುದ್ಧಂ ಬಭೂವ ನಿಶಿ ರಕ್ಷಸೋಃ ॥ ೪ ॥

ಪರಾಕ್ರಮಶಾಲಿಯಾದ ಆ ಘಟೋತ್ಕಚನು ಕೃಷ್ಣನ ಮಾತುಗಳನ್ನು ಕೇಳಿ ಕರ್ಣನನ್ನು ಬಿಟ್ಟು ಬಕನ ಸಹೋದರನೂ, ರಾಕ್ಷಸಶ್ರೇಷ್ಠನೂ ಆದ ಅಲಾಯುಧನ ಜೊತೆಯಲ್ಲಿ ಯುದ್ಧವನ್ನು ಮಾಡಿದನು. ಆ ರಾತ್ರಿಯಲ್ಲಿ ಆ ಇಬ್ಬರು ರಾಕ್ಷಸರಿಗೆ ಘೋರವಾದ ಯುದ್ಧವು ನಡೆಯಿತು.

ಅಲಾಯುಧಸ್ಯ ಯೋಧಾಂಸ್ತು ರಾಕ್ಷಸಾನ್ ಭೀಮದರ್ಶನಾನ್ ।
ವೇಗೇನಾಪತತಃ ಶೂರಾನ್ ಪ್ರಗೃಹೀತಶರಾಸನಾನ್ ॥ ೫ ॥

ಆತ್ತಾಯುಧಃ ಸುಸಂಕ್ರುದ್ಧೋ ಯುಯುಧಾನೋ ಮಹಾರಥಃ ।
ನಕುಲಃ ಸಹದೇವಶ್ಚ ಚಿಚ್ಛಿದುರ್ನಿಶಿತೈಃ ಶರೈಃ ॥ ೬ ॥

ಅಲಾಯುಧನ ಸೈನಿಕರಾದ, ಭಯಂಕರವಾಗಿ ಕಾಣುವ ಧನುಸ್ಸನ್ನು ಕೈಯಲ್ಲಿ ಹಿಡಿದು ವೇಗದಿಂದ ಮೇಲೆ ಬೀಳುವ, ರಾಕ್ಷಸರನ್ನು ಮಹಾರಥನೂ, ಕೋಪಗೊಂಡವನೂ, ಕೈಯಲ್ಲಿ ಆಯುಧವನ್ನು ಹಿಡಿದವನೂ ಆದ ಸಾತ್ಯಕಿಯೂ, ನಕುಲ-ಸಹದೇವರೂ ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು.

ಸರ್ವಾಂಶ್ಚ ಸಮರೇ ರಾಜನ್ ಕಿರೀಟೀ ಕ್ಷತ್ರಿಯರ್ಷಭಾನ್ ।
ಪರಿಚಿಕ್ಷೇಪ ಬೀಭತ್ಸುಃ ಸರ್ವತಃ ಪ್ರಕ್ಷಿಪನ್ ಶರಾನ್ ॥ ೭ ॥

ಎಲೈ ರಾಜನೇ, ಅರ್ಜುನನು ರಣರಂಗದಲ್ಲಿ ಎಲ್ಲ ಕಡೆಗಳಲ್ಲಿಯೂ ಬಾಣಗಳನ್ನು ಪ್ರಯೋಗಿಸುತ್ತಾ ಎಲ್ಲ ಕ್ಷತ್ರಿಯಶ್ರೇಷ್ಠರನ್ನೂ ಎತ್ತಿ ಎಸೆದನು.

ಕರ್ಣಶ್ಚ ಸಮರೇ ರಾಜನ್ ವ್ಯದ್ರಾವಯತ ಪಾರ್ಥಿವಾನ್ ।
ಧೃಷ್ಟದ್ಯುಮ್ನಶಿಖಂಡ್ಯಾದೀನ್ ಪಾಂಚಾಲಾನಾಂ ಮಹಾರಥಾನ್ ॥೮॥

ಎಲೈ ರಾಜನೇ, ರಣರಂಗದಲ್ಲಿ ಕರ್ಣನು ರಾಜರನ್ನೂ, ಪಾಂಚಾಲರ ಮಹಾರಥರಾದ ಧೃಷ್ಟದ್ಯುಮ್ನ, ಶಿಖಂಡಿ ಮೊದಲಾದವರನ್ನೂ ಓಡಿಸಿದನು.

ತಾನ್ ವಧ್ಯಮಾನಾನ್ ದೃಷ್ಟ್ವಾ ತು ಭೀಮೋ ಭೀಮಪರಾಕ್ರಮಃ ।
ಅಭ್ಯಯಾತ್ ತ್ವರಿತಃ ಕರ್ಣಂ ವಿಶಿಖಾನ್ ವಿಕಿರನ್ ರಣೇ ॥ ೯ ॥

ಭಯಂಕರ ಪರಾಕ್ರಮವುಳ್ಳ ಭೀಮಸೇನನು ಕರ್ಣನಿಂದ ಹೊಡೆಯಲ್ಪಡುತ್ತಿದ್ದ ಅವರನ್ನು ನೋಡಿ ರಣರಂಗದಲ್ಲಿ ಬಾಣಗಳನ್ನು ಪ್ರಯೋಗಿಸುತ್ತಾ ಶೀಘ್ರವಾಗಿ ಕರ್ಣನ ಕಡೆಗೆ ಸಾಗಿದನು.

ತತಸ್ತೇऽಪ್ಯಾಯಯುರ್ಹತ್ವಾ ರಾಕ್ಷಸಾನ್ ಯತ್ರ ಸೂತಜಃ ।
ನಕುಲಃ ಸಹದೇವಶ್ಚ ಸಾತ್ಯಕಿಶ್ಚ ಮಹಾರಥಃ ।
ತೇ ಕರ್ಣಂ ಯೋಧಯಾಮಾಸುಃ ಪಾಂಚಾಲಾ ದ್ರೋಣಮೇವ ಚ ॥

ಅನಂತರ ನಕುಲ-ಸಹದೇವರೂ, ಮಹಾರಥನಾದ ಸಾತ್ಯಕಿಯೂ ರಾಕ್ಷಸರನ್ನು ಕೊಂದು ಕರ್ಣನಿದ್ದಲ್ಲಿಗೆ ಬಂದರು. ಅವರು ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡಿದರು. ಪಾಂಚಾಲರು ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಅಲಾಯುಧಸ್ತು ಸಂಕ್ರುದ್ಧೋ ಘಟೋತ್ಕಚಮರಿಂದಮಮ್ ।
ಪರಿಘೇಣಾತಿವೇಗೇನ ತಾಡಯಾಮಾಸ ಮೂರ್ಧನಿ ॥ ೧೧ ॥

ಕೋಪಗೊಂಡ ಅಲಾಯುಧನಾದರೋ ಅತಿವೇಗವುಳ್ಳ ಪರಿಘದಿಂದ ಅರಿಂದಮನಾದ ಘಟೋತ್ಕಚನನ್ನು ಅವನ ತಲೆಯಲ್ಲಿ ಹೊಡೆದನು.

ಸ ತು ತೇನ ಪ್ರಹಾರೇಣ ಭೈಮಸೇನಿರ್ಮಹಾಬಲಃ ।
ಈಷನ್ಮೂರ್ಛಾನ್ವಿತೋऽತ್ಮಾನಂ ಸಂಸ್ತಂಭಯತ ವೀರ್ಯವಾನ್॥ ೧೨ ॥

ಮಹಾಬಲನಾದ, ಭೀಮಸೇನಪುತ್ರನಾದ ಘಟೋತ್ಕಚನು ಆ ಪ್ರಹಾರದಿಂದ ಸ್ವಲ್ಪ ಮೂರ್ಛೆಯನ್ನು ಹೊಂದಿದರೂ ಪರಾಕ್ರಮಶಾಲಿಯಾದ ಅವನು ತನ್ನನ್ನೇ ಸುಧಾರಿಸಿಕೊಂಡನು.

ತತೋ ದೀಪ್ತಾಗ್ನಿಸಂಕಾಶಾಂ ಶತಘಂಟಾಮಲಂಕೃತಾಮ್ ।
ಚಿಕ್ಷೇಪ ಸಮರೇ ತಸ್ಮೈ ಗದಾಂ ಕಾಂಚನಭೂಷಣಾಮ್ ॥ ೧೩ ॥

ಅನಂತರ ನೂರು ಘಂಟೆಗಳಿಂದ ಅಲಂಕೃತವಾದ, ಜ್ವಲಿಸುವ ಅಗ್ನಿಯಂತಿದ್ದ, ಸುವರ್ಣಭೂಷಿತವಾದ ಗದೆಯನ್ನು ರಣರಂಗದಲ್ಲಿ ಅಲಾಯುಧನ ಮೇಲೆ ಎಸೆದನು.

ಸಾ ಹಯಾನ್ ಸಾರಥಿಂ ಚೈವ ರಥಂ ಚಾಸ್ಯ ಮಹಾಸ್ವನಾ ।
ಚೂರ್ಣಯಾಮಾಸ ವೇಗೇನ ವಿಸೃಷ್ಟಾ ಭೀಮಕರ್ಮಣಾ ॥ ೧೪ ॥

ಭಯಂಕರ ಕರ್ಮವನ್ನು ಮಾಡುವ ಘಟೋತ್ಕಚನಿಂದ ಪ್ರಯೋಗಿಸಲ್ಪಟ್ಟ ಆ ಗದೆಯು ಮಹಾನಾದವನ್ನು ಮಾಡುತ್ತಾ ವೇಗದಿಂದ ಸಾಗಿ ಅಲಾಯುಧನ ಅಶ್ವಗಳನ್ನೂ, ಸಾರಥಿಯನ್ನೂ ಮತ್ತು ರಥವನ್ನೂ ಪುಡಿಮಾಡಿತು.

ಸ ಭಗ್ನಹಯಚಕ್ರಾಕ್ಷೋ ವಿಶೀರ್ಣಧ್ವಜಕೂಬರಃ ।
ಉತ್ಪಪಾತ ರಥಾತ್ ತೂರ್ಣಂ ಮಾಯಾಮಾಸ್ಥಾಯ ರಾಕ್ಷಸೀಮ್ ॥

ತನ್ನ ರಥದ ಅಶ್ವ-ಚಕ್ರ ಮತ್ತು ಅಕ್ಷಗಳು, ಧ್ವಜ-ಕೂಬರಗಳು ಭಗ್ನವಾಗುತ್ತಿರಲು ಅಲಾಯುಧನು ರಾಕ್ಷಸ ಮಾಯೆಯನ್ನು ಆಶ್ರಯಿಸಿ ಶೀಘ್ರವಾಗಿ ರಥದಿಂದ ಮೇಲೆ ಹಾರಿದನು.

ಸ ಸಮಾಸ್ಥಾಯ ಮಾಯಾಂ ತು ವವರ್ಷ ರುಧಿರಂ ಬಹು ।
ವಿದ್ಯುದ್ವಿಭ್ರಾಜಿತಂ ಚಾಸೀತ್ ತುಮುಲಾಭ್ರಾಕುಲಂ ನಭಃ ॥ ೧೬ ॥

ಅವನು ಮಾಯೆಯನ್ನು ಆಶ್ರಯಿಸಿ ರಕ್ತದ ಮಳೆಯನ್ನು ಸುರಿಸಿದನು. ಸಾಂದ್ರವಾದ ಮೋಡದಿಂದ ಕೂಡಿದ ಆಕಾಶವು ಮಿಂಚುಗಳಿಂದ ಪ್ರಕಾಶಮಾನವಾಗಿದ್ದಿತು.

ತತೋ ವಜ್ರನಿಪಾತಾಶ್ಚ ಸಾಶನಿಸ್ತನಯಿತ್ನವಃ ।
ಮಹಾಂಶ್ಚಟಚಟಾಶಬ್ದಸ್ತತ್ರಾಸೀದ್ಧಿ ಮಹಾಹವೇ ॥ ೧೭ ॥

ಅನಂತರ ಆ ದೊಡ್ಡ ರಣರಂಗದಲ್ಲಿ ವಜ್ರಾಯುಧಗಳ ನಿಪಾತಗಳು, ಸಿಡಿಲು-ಗುಡುಗುಗಳು, ದೊಡ್ಡ ಚಟ-ಚಟ ಶಬ್ದವು ಉಂಟಾದವು.

ತಾಂ ಪ್ರೇಕ್ಷ್ಯ ವಿಹಿತಾಂ ಮಾಯಾಂ ರಾಕ್ಷಸೋ ರಾಕ್ಷಸೇನ ತು ।
ಊರ್ಧ್ವಮುತ್ಪತ್ಯ ಹೈಡಿಂಬಸ್ತಾಂ ಮಾಯಾಂ ಮಾಯಯಾಽವಧೀತ್ ॥

ರಾಕ್ಷಸನು ಪ್ರಯೋಗಿಸಿದ ಆ ಮಾಯೆಯನ್ನು ನೋಡಿ ಹಿಡಿಂಬಾ ಪುತ್ರನಾದ ಘಟೋತ್ಕಚನು ತಾನೂ ಮೇಲೆ ಹಾರಿ ಅಲಾಯುಧನ ಮಾಯೆಯನ್ನು ತನ್ನ ಮಾಯೆಯಿಂದ ನಾಶಗೊಳಿಸಿದನು.

ಸೋಽಭಿವೀಕ್ಷ್ಯ ಹತಾಂ ಮಾಯಾಂ ಮಾಯಾವೀ ಮಾಯಯೈವ ಹಿ ।
ಅಶ್ಮವರ್ಷಂ ಸುತುಮುಲಂ ವಿಸಸರ್ಜ ಘಟೋತ್ಕಚೇ ॥ ೧೯ ॥

ತನ್ನ ಮಾಯೆಯು ಮಾಯೆಯಿಂದಲೇ ಹತವಾದುದನ್ನು ನೋಡಿ ಮಾಯಾವಿಯಾದ ಅಲಾಯುಧನು ಘಟೋತ್ಕಚನ ಮೇಲೆ ತೀವ್ರವಾದ ಕಲ್ಲಿನ ಮಳೆಯನ್ನು ಸುರಿಸಿದನು.

ಅಶ್ಮವರ್ಷಂ ಸ ತದ್ ಘೋರಂ ಶರವರ್ಷೇಣ ವೀರ್ಯವಾನ್ ।
ದಿಶೋ ವಿಧ್ವಂಸಯಾಮಾಸ ತದದ್ಭುತಮಿವಾಭವತ್ ॥ ೨೦ ॥

ಪರಾಕ್ರಮಶಾಲಿಯಾದ ಘಟೋತ್ಕಚನು ಆ ಕಲ್ಲಿನ ಮಳೆಯನ್ನು ದಿಕ್ಕು-ದಿಕ್ಕುಗಳಲ್ಲಿ ನಾಶಗೊಳಿಸಿದನು. ಆ ದೃಶ್ಯವು ಅದ್ಭುತವಾಗಿದ್ದಿತು.

ತತೋ ನಾನಾಪ್ರಹರಣೈರನ್ಯೋನ್ಯಮಭಿವರ್ಷತಾಮ್ ।
ಆಯಸೈಃ ಪರಿಘೈಃ ಶೂಲೈರ್ಗದಾಮುಸಲಮುದ್ಗರೈಃ ॥ ೨೧ ॥

ಪಿನಾಕೈಃ ಕರವಾಳೈಶ್ಚ ತೋಮರಪ್ರಾಸಕಂಪನೈಃ ।
ನಾರಾಚೈರ್ನಿಶಿತೈರ್ಭಲ್ಲೈಃ ಶರೈಶ್ಚಕ್ರೈಃ ಪರಶ್ವಧೈಃ ॥ ೨೨ ॥

ಅಯೋಗುಡೈರ್ಭಿಂಡಿಪಾಲೈರ್ಗೋಶೀರ್ಷೋಲೂಖಲೈರಪಿ ।
ಉತ್ಪಾಟ್ಯ ಚ ಮಹಾಶಾಖೈರ್ವಿವಿಧೈರ್ದ್ರುಗತೀರುಹೈಃ ॥ ೨೩ ॥

ಶಮೀಪೀಲುಕರೀರೈಶ್ಚ ಶಮ್ಯಾಕೈಶ್ಚೈವ ಭಾರತ ।
ಇಂಗುದೈರ್ಬದರೀಭಿಶ್ಚ ಕೋವಿದಾರೈಶ್ಚ ಪುಷ್ಪಿತೈಃ ॥ ೨೪ ॥

ಪಲಾಶೈರರಿಮೇದೈಶ್ಚ ಪ್ಲಕ್ಷನ್ಯಗ್ರೋಧಪಿಪ್ಪಲೈಃ ।
ಮಹದ್ಭಿಃ ಸಮರೇ ತಸ್ಮಿನ್ನನ್ಯೋನ್ಯಮಭಿಜಘ್ನತುಃ ॥ ೨೫ ॥

ವಿವಿಧೈಃ ಪರ್ವತಾಗ್ರೈಶ್ಚ ನಾನಾಧಾತುಭಿರಾಚಿತೈಃ ।
ತೇಷಾಂ ಶಬ್ದೋ ಮಹಾನಾಸೀದ್ವಜ್ರಾಣಾಂ ಭಿದ್ಯತಾಮಿವ ॥ ೨೬ ॥

ಅನಂತರ ಆಯಸಗಳು, ಪರಿಘಗಳು, ಶೂಲಗಳು, ಗದಾ-ಮುಸಲ-ಮುದ್ಗರಗಳು, ಪಿನಾಕಗಳು, ಖಡ್ಗಗಳು, ತೋಮರ-ಪ್ರಾಸ-ಕಂಪನಗಳು,

ನಾರಾಚಗಳು, ತೀಕ್ಷ್ಣವಾದ ಭಲ್ಲಗಳು, ಬಾಣಗಳು, ಚಕ್ರಗಳು, ಪರಶ್ವಧಗಳು, ಅಯೋಗುಡಗಳು, ಭಿಂಡಿಪಾಲಗಳು, ಗೋಶೀರ್ಷಗಳು, ಉಲೂಖಲಗಳು, ಬೇರು ಸಹಿತವಾಗಿ ಕಿತ್ತ ವಿವಿಧವಾದ ಮರಗಳ ದೊಡ್ಡ ಕೊಂಬೆಗಳು, ಶಮೀ-ಪೀಲು-ಕರೀರ-ಶಮ್ಯಾದಿ ವೃಕ್ಷಗಳು, ಇಂಗುದ-ಬದರೀ ವೃಕ್ಷಗಳು, ಪುಷ್ಪಿತವಾದ ಕೋವಿದಾರ ವೃಕ್ಷಗಳು, ಪಲಾಶ-ಅರಿಮೇಧ ವೃಕ್ಷಗಳು, ಪ್ಲಕ್ಷ-ನ್ಯಗ್ರೋಧ-ಪಿಪ್ಪಲ ವೃಕ್ಷಗಳು, ನಾನಾ ಧಾತುಗಳಿಂದ ಕೂಡಿದ ಪರ್ವತದ ಕೋಡುಗಳು ಮತ್ತು ಇನ್ನೂ ಅನೇಕ ವಿಧವಾದ ಆಯುಧಗಳು - ಇವುಗಳಿಂದ ಅವರು ಪರಸ್ಪರವಾಗಿ ಹೊಡೆದಾಡಿದರು. ಆ ಆಯುಧಗಳ ಶಬ್ದವು ಬಿರಿಯುವ ವಜ್ರಗಳ ಶಬ್ದದಂತೆ ದೊಡ್ಡದಾಗಿದ್ದಿತು.

ಯುದ್ಧಂ ತದಭವದ್ ಘೋರಂ ಭೈಮ್ಯಲಾಯುಧಯೋರ್ನೃಪ ।
ಹರೀಂದ್ರಯೋರ್ಯಥಾ ರಾಜನ್ ವಾಲಿಸುಗ್ರೀವಯೋಃ ಪುರಾ ॥೨೭॥

ಎಲೈ ರಾಜನೇ, ಭೀಮಪುತ್ರನಿಗೂ ಮತ್ತು ಅಲಾಯುಧನಿಗೂ ನಡೆದ ಯುದ್ಧವು ಹಿಂದೆ ಕಪಿಶ್ರೇಷ್ಠರಾದ ವಾಲಿ-ಸುಗ್ರೀವರಿಗೆ ನಡೆದ ಯುದ್ಧದಂತೆ ಘೋರವಾಗಿದ್ದಿತು.

ತೌ ಯುದ್ಧ್ವಾ ವಿವಿಧೈರ್ಘೋರೈರಾಯುಧೈರ್ವಿಶಿಖೈಸ್ತಥಾ ।
ಪ್ರಗೃಹ್ಯ ನಿಶಿತೌ ಖಡ್ಗಾವನ್ಯೋನ್ಯಮಭಿಜಘ್ನತುಃ ॥ ೨೮ ॥

ಅವರು ವಿವಿಧವಾದ, ಘೋರವಾದ ಆಯುಧಗಳಿಂದಲೂ, ಹಾಗೆಯೇ ಬಾಣಗಳಿಂದಲೂ ಯುದ್ಧವನ್ನು ಮಾಡಿ, ತೀಕ್ಷ್ಣವಾದ ಖಡ್ಗಗಳನ್ನು ಹಿಡಿದು ಪರಸ್ಪರವಾಗಿ ಯುದ್ಧವನ್ನು ಮಾಡಿದರು.

ತಾವನ್ಯೋನ್ಯಮಭಿದ್ರುತ್ಯ ಕೇಶೇಷು ಸುಮಹಾಬಲೌ ।
ಭುಜಾಭ್ಯಾಂ ಪರ್ಯಗೃಹ್ಣೀತಾಂ ಮಹಾಕಾಯೌ ಮಹಾಬಲೌ ॥ ೨೯ ॥

ಅತ್ಯಂತ ಶ್ರೇಷ್ಠವಾದ ಬಲವುಳ್ಳ, ಮಹಾಶರೀರವುಳ್ಳ ಅವರಿಬ್ಬರೂ ಓಡಿ ಪರಸ್ಪರವಾಗಿ ಕೇಶಗಳಲ್ಲಿ ಹಿಡಿದು, ಒಬ್ಬರನ್ನೊಬ್ಬರು ಭುಜಗಳಲ್ಲಿ ಹಿಡಿದರು.

ತೌ ಭಿನ್ನಗಾತ್ರೌ ಪ್ರಸ್ವೇದಂ ಸುಸ್ರುವಾತೇ ಜನಾಧಿಪ ।
ರುಧಿರಂ ಚ ಮಹಾಕಾಯಾವಭವೃಷ್ಟಾವಿವಾಚಲೌ ॥ ೩೦ ॥

ಎಲೈ ರಾಜನೇ, ಗಾಯಗೊಂಡ ಅವರಿಬ್ಬರೂ ದೇಹದಿಂದ ಬೆವರನ್ನು ಸುರಿಸಿದರು. ಮಹಾಕಾಯರಾದ ಅವರು ಪರ್ವತಗಳು ನೀರಿನ ಧಾರೆಯನ್ನು ಸುರಿಸಿದಂತೆ ರಕ್ತವನ್ನೂ ಸ್ರವಿಸಿದರು.

ಅಥಾಭಿಪತ್ಯ ವೇಗೇನ ಸಮುದ್ಯಾಮ್ಯ ಚ ರಾಕ್ಷಸಮ್ ।
ಬಲೇನಾಕ್ಷಿಪ್ಯ ಹೈಡಿಂಬಶ್ಚಕರ್ತಾಸ್ಯ ಶಿರೋ ಮಹತ್ ॥ ೩೧ ॥

ಅನಂತರ ವೇಗವಾಗಿ ಬಂದು ಅಲಾಯುಧನನ್ನು ಹಿಡಿದು, ಎತ್ತಿ ತಿರುಗಿಸಿ ಘಟೋತ್ಕಚನು ಅವನ ದೊಡ್ಡ ತಲೆಯನ್ನು ಕತ್ತರಿಸಿದನು.

ಸೋಽಪಹೃತ್ಯ ಶಿರಸ್ತಸ್ಯ ಕುಂಡಲಾಭ್ಯಾಂ ವಿಭೂಷಿತಮ್ ।
ತದಾ ಸುತುಮುಲಂ ನಾದಂ ನನಾದ ಸುಮಹಾಬಲಃ ॥ ೩೨ ॥

ಅತ್ಯಂತ ಶ್ರೇಷ್ಠ ಬಲವುಳ್ಳ ಘಟೋತ್ಕಚನು ಕುಂಡಲಗಳಿಂದ ಭೂಷಿತವಾದ ಅವನ ಶಿರಸ್ಸನ್ನು ಕತ್ತರಿಸಿ ಘೋರವಾದ ನಾದವನ್ನು ಮಾಡಿದನು.

ಹತಂ ದೃಷ್ಟ್ವಾ ಮಹಾಕಾಯಂ ಬಕಭ್ರಾತಿಮರಿಂದಮಮ್ ।
ಪಾಂಚಾಲಾಃ ಪಾಂಡವಾಶ್ಚೈವ ಸಿಂಹನಾದಾನ್ ಏನೇದಿರೇ ॥ ೩೩ ॥

ಬಕನ ಬಂಧುವೂ, ಅರಿಂದಮನೂ, ಮಹಾಕಾಯನೂ ಆದ ಅಲಾಯುಧನು ಹತನಾದುದನ್ನು ನೋಡಿ ಪಾಂಚಾಲರು ಮತ್ತು ಪಾಂಡವರು ಸಿಂಹನಾದಗಳನ್ನು ಮಾಡಿದರು.

ತತೋ ಭೇರೀಸಹಸ್ರಾಣಿ ಶಂಖಾನಾಮಯುತಾನಿ ಚ ।
ಅವಾದಯನ್ ಪಾಂಡವೇಯಾಸ್ತಸ್ಮಿನ್ ರಕ್ಷಸಿ ಪಾತಿತೇ ॥ ೩೪ ॥

ಆಗ ಆ ರಾಕ್ಷಸನು ಹತನಾಗುತ್ತಿರಲು ಪಾಂಡವ ಸೇನೆಯ ಯೋಧರು ಸಹಸ್ರ ಭೇರಿಗಳನ್ನು ಬಾರಿಸಿ, ಹತ್ತು ಸಹಸ್ರ ಶಂಖಗಳನ್ನು ಊದಿದರು.

ಅತೀವ ಸಾ ನಿಶಾ ತೇಷಾಂ ಬಭೂವ ವಿಜಯಾವಹಾ ।
ವಿದ್ಯೋತಮಾನಾ ವಿಬಭೌ ಸಮಂತಾದ್ ದೀಪಮಾಲಿನೀ ॥ ೩೫ ॥

ಎಲ್ಲ ಕಡೆಗಳಲ್ಲಿಯೂ ದೀಪದಿಂದ ಪ್ರಕಾಶಗೊಂಡ ಆ ರಾತ್ರಿಯು ಅವರಿಗೆ ವಿಜಯವನ್ನು ತಂದುಕೊಡುವುದಾಯಿತು.

ಅಲಾಯುಧಸ್ಯ ತು ಶಿರೋ ಭೈಮಸೇನಿರ್ಮಹಾಬಲಃ ।
ದುರ್ಯೋಧನಸ್ಯ ಪ್ರಮುಖೇ ಚಿಕ್ಷೇಪ ಗತಚೇತನಮ್ ॥ ೩೬ ॥

ಮಹಾಬಲನಾದ ಘಟೋತ್ಕಚನು ಮೃತನಾದ ಅಲಾಯುಧನ ಶಿರಸ್ಸನ್ನು ದುರ್ಯೋಧನನ ಎದುರಿಗೆ ಎಸೆದನು.

ಅಥ ದುರ್ಯೋಧನೋ ರಾಜಾ ದೃಷ್ಟ್ವಾ ಹತಮಲಾಯುಧಮ್ ।
ಬಭೂವ ಪರಮೋದ್ವಿಗ್ನಃ ಸಹ ಸೈನ್ಯೇನ ಭಾರತ ॥ ೩೭ ॥

ಎಲೈ ಭಾರತನೇ, ಅಲಾಯುಧನು ಹತನಾದುದನ್ನು ನೋಡಿ ರಾಜನಾದ ದುರ್ಯೋಧನನೂ ಮತ್ತು ಅವನ ಸೈನ್ಯವೂ ಬಹಳ ಉದ್ವೇಗವನ್ನು ಹೊಂದಿದರು.

ತೇನ ಹ್ಯಸ್ಯ ಪ್ರತಿಜ್ಞಾತಂ ಭೀಮಸೇನಮಹಂ ಯುಧಿ ।
ಹಂತೇತಿ ಸ್ವಯಮಾಗಮ್ಯ ಸ್ಮರತಾ ವೈರಮುತ್ತಮಮ್ ॥ ೩೮ ॥

ಅವನು ಹಿಂದಿನ ಪ್ರಬಲವಾದ ವೈರವನ್ನು ಸ್ಮರಿಸಿ ತಾನಾಗಿಯೇ ಬಂದು ಯುದ್ಧದಲ್ಲಿ ನಾನು ಭೀಮಸೇನನನ್ನು ಕೊಲ್ಲುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದನಷ್ಟೆ?

ಧ್ರುವಂ ಸ ತೇನ ಹಂತವ್ಯ ಇತ್ಯಮನ್ಯತ ಪಾರ್ಥಿವಃ ।
ಜೀವಿತಂ ಚಿರಕಾಲಾಯ ಭ್ರಾತೄಣಾಂ ಚಾಪ್ಯಮನ್ಯತ ॥ ೩೯ ॥

ಖಂಡಿತವಾಗಿ ಭೀಮಸೇನನು ಅಲಾಯುಧನಿಂದ ಕೊಲ್ಲಲ್ಪಡಬೇಕು ಎಂದು ರಾಜನು ತಿಳಿದಿದ್ದನು ಮತ್ತು ಅದರಿಂದ ತನ್ನ ಸಹೋದರರು ಬಹುಕಾಲದವರೆಗೂ ಬದುಕುತ್ತಾರೆ ಎಂದೂ ತಿಳಿದಿದ್ದನು.

ಸ ತಂ ದೃಷ್ಟ್ವಾ ವಿನಿಹತಂ ಭೀಮಸೇನಾತ್ಮಜೇನ ವೈ ।
ಪ್ರತಿಜ್ಞಾಂ ಭೀಮಸೇನಸ್ಯ ಪೂರ್ಣಾಮೇವಾಭ್ಯಮನ್ಯತ ॥ ೪೦ ॥

ಅಂತಹ ಅಲಾಯುಧನು ಭೀಮಸೇನನ ಪುತ್ರನಾದ ಘಟೋತ್ಕಚನಿಂದ ಹತನಾದುದನ್ನು ನೋಡಿ ಭೀಮಸೇನನ ಪ್ರತಿಜ್ಞೆಯು ನೆರವೇರುವುದು ಎಂದೇ ತಿಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಃಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

ಕರ್ಣನಿಂದ ಘಟೋತ್ಕಚನ ವಧೆ.

ಸಂಜಯಃ

ನಿಹತ್ಯಾಲಾಯುಧಂ ರಕ್ಷಃ ಪ್ರಹೃಷ್ಟಾತ್ಮಾ ಘಟೋತ್ಕಚಃ ।
ನನಾದ ವಿವಿಧಾನ್ನಾದಾನ್ ವಾಹಿನ್ಯಾಃ ಪ್ರಮುಖೇ ಸ್ಥಿತಃ ॥ ೧ ॥

ಸಂಜಯ– ರಾಕ್ಷಸನಾದ ಘಟೋತ್ಕಚನು ಅಲಾಯುಧನನ್ನು ಕೊಂದು ಸಂತೋಷಗೊಂಡ ಮನಸ್ಸುಳ್ಳವನಾಗಿ ಸೈನ್ಯದ ಎದುರಿನಲ್ಲಿನಿಂತು ಅನೇಕ ನಾದಗಳನ್ನು ಮಾಡಿದನು.

ತಸ್ಯ ತಂ ತುಮುಲಂ ಶಬ್ದಂ ಶ್ರುತ್ವಾ ಕುಂಜರಕಂಪನಮ್ ।
ತಾವಕಾನಾಂ ಮಹಾರಾಜ ಭಯಮಾಸೀತ್ ಸುದಾರುಣಮ್ ॥ ೨ ॥

ಎಲೈ ಮಹಾರಾಜನೇ, ಆನೆಗಳನ್ನೂ ನಡುಗಿಸುವ ಅವನ ತೀವ್ರವಾದ ಶಬ್ದವನ್ನು ಕೇಳಿ ನಿನ್ನ ಯೋಧರಿಗೆ ಘೋರವಾದ ಭಯವುಂಟಾಯಿತು.

ಅಲಾಯುಧವಿಷಕ್ತಂ ತು ಭೈಮಸೇನಿಂ ಮಹಾಬಲಮ್ ।
ದೃಷ್ಟ್ವಾ ಕರ್ಣೋ ಮಹಾಬಾಹುಃ ಪಾಂಚಾಲಾನ್ ಸಮುಪಾದ್ರವತ್ ॥

ಅಲಾಯುಧನ ಜೊತೆಯಲ್ಲಿ ಸಂಸಕ್ತನಾಗಿದ್ದ ಮಹಾಬಲನಾದ ಘಟೋತ್ಕಚನನ್ನು ನೋಡಿ ಮಹಾಬಾಹುವಾದ ಕರ್ಣನು ಪಾಂಚಾಲರ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೊರಟನು.

ದಶಭಿರ್ದಶಭಿರ್ಬಾಣೈರ್ಧೃಷ್ಟದ್ಯುಮ್ನಶಿಖಂಡಿನೌ ।
ದೃಢೈಃ ಪೂರ್ಣಾಯತೋತ್ಸೃಷ್ಟೈರ್ಬಿಭೇದ ನತಪರ್ವಭಿಃ ॥ ೪ ॥

ಅವನು ಪೂರ್ಣವಾಗಿ ಎಳೆದು ಪ್ರಯೋಗಿಸಿದ ಬಾಗಿದ ತುದಿಯುಳ್ಳ ದೃಢವಾದ ಹತ್ತು- ಹತ್ತು ಬಾಣಗಳಿಂದ ಧೃಷ್ಟದ್ಯುಮ್ನನನ್ನೂ ಮತ್ತು ಶಿಖಂಡಿಯನ್ನೂ ಭೇದಿಸಿದನು.

ತತಃ ಪರಮನಾರಾಚೈರ್ಯುಧಾಮನ್ಯೂತ್ತಮೌಜಸೌ ।
ಸಾತ್ಯಕಿಂ ಚ ರಥೋದಾರಂ ಕಂಪಯಾಮಾಸ ಮಾರ್ಗಣೈಃ ॥ ೫ ॥

ಅನಂತರ ಶ್ರೇಷ್ಠವಾದ ನಾರಾಚಗಳಿಂದ ಯುಧಾಮನ್ಯು ಮತ್ತು ಉತ್ತಮೌಜರನ್ನು ಹೊಡೆದು ರಥಶ್ರೇಷ್ಠನಾದ ಸಾತ್ಯಕಿಯನ್ನು ಬಾಣಗಳಿಂದ ನಡುಗಿಸಿದನು.

ತೇಷಾಮಭ್ಯಸ್ಯತಾಂ ತತ್ರ ಸರ್ವೇಷಾಂ ಸವ್ಯದಕ್ಷಿಣಮ್ ।
ಮಂಡಲಾನ್ಯೇವ ಚಾಪಾನಿ ವ್ಯದೃಶ್ಯಂತ ಜನಾಧಿಪ ॥ ೬ ॥

ಎಲೈ ರಾಜನೇ, ಅವರು ಬಲಭಾಗದಲ್ಲಿಯೂ ಮತ್ತು ಎಡಭಾಗದಲ್ಲಿಯೂ ಬಾಣಗಳನ್ನು ಪ್ರಯೋಗಿಸುವಾಗ ಅವರೆಲ್ಲರ ಧನುಸ್ಸುಗಳೂ ಮಂಡಲಾಕಾರವಾಗಿಯೇ ಕಾಣುತ್ತಿದ್ದವು.

ತೇಷಾಂ ಜ್ಯಾತಳನಿರ್ಘೋಷೋ ರಥನೇಮಿಸ್ವನಶ್ಚ ಹ ।
ಮೇಘಾನಾಮಿವ ಘರ್ಮಾಂತೇ ಬಭೂವ ತುಮುಲೋ ನಿಶಿ ॥ ೭ ॥

ಅವರ ಜ್ಯಾತಳನಿರ್ಘೋಷಗಳು, ರಥಚಕ್ರನಾದಗಳು ರಾತ್ರಿಯ ಕಾಲದಲ್ಲಿ ಮಳೆಗಾಲದ ಮೋಡಗಳ ತೀವ್ರವಾದ ಶಬ್ದದಂತೆ ಇದ್ದವು.

ಜ್ಯಾನೇಮಿಘೋಷಸ್ತನಯಿತ್ನುಮಾನ್ ವೈ
ಧನುಸ್ತಡಿನ್ಮಂಡಲಕೇತುಶೃಂಗಃ ।
ಶರೌಘವರ್ಷಾಕುಲವೃಷ್ಟಿಮಾಂಶ್ಚ
ಸಂಗ್ರಾಮಮೇಘಃ ಸ ಬಭೂವ ರಾಜನ್ ॥ ೮ ॥

ಎಲೈ ರಾಜನೇ, ಆ ಸಂಗ್ರಾಮವೆಂಬ ಮೇಘವು ಹೆದೆಯ ಘೋಷ ಮತ್ತು ರಥದ ಘೋಷವೆಂಬ ಗುಡುಗುಗಳಿಂದಲೂ, ಧನುಸ್ಸುಗಳೆಂಬ ಮಿಂಚಿನ ಸಮೂಹದಿಂದಲೂ, ಧ್ವಜಗಳೆಂಬ ಶಿಖರಗಳಿಂದಲೂ, ಶರಸಮೂಹ ಪ್ರಯೋಗವೆಂಬ ಮಳೆಯಿಂದಲೂ ಕೂಡಿದ್ದಿತು.

ತದುದ್ಧತಂ ಶೈಲ ಇವಾಪ್ರಕಂಪ್ಯೋ
ವರ್ಷಂ ಮಹಚ್ಛೈಲಸಮಾನಸಾರಃ ।
ವಿಧ್ವಂಸಯಾಮಾಸ ರಣೇ ನರೇಂದ್ರ
ವೈಕರ್ತನಃ ಶತ್ರುಗಣಾವಮರ್ದೀ ॥ ೯ ॥

ಪರ್ವತದಂತೆ ಅಲುಗಾಡಿಸಲು ಸಾಧ್ಯವಿಲ್ಲದ, ದೊಡ್ಡ ಪರ್ವತದ ಬಲಕ್ಕೆ ಸಮಾನವಾದ ಬಲವುಳ್ಳ, ಶತ್ರುಗಣಗಳನ್ನು ನಾಶಪಡಿಸುವ ವೈಕರ್ತನನಾದ ಕರ್ಣನು ಎಲೈ ರಾಜೇಂದ್ರನೇ, ರಣರಂಗದಲ್ಲಿ ಉದ್ಧತವಾದ ಆ ಸಂಗ್ರಾಮ ಮೋಡವನ್ನು ನಾಶಗೊಳಿಸಿದನು.

ತತೋಽತುಲೈರ್ವಜ್ರನಿಪಾತಕಲ್ಪೈಃ
ಶಿತೈಃ ಶರೈಃ ಕಾಂಚನಚಿತ್ರಪುಂಖೈಃ ।
ಶತ್ರೂನ್ ವ್ಯಪೋಹತ್ ಸಮರೇ ಮಹಾತ್ಮಾ
ವೈಕರ್ತನಃ ಪುತ್ರಹಿತೇ ರತಸ್ತೇ ॥ ೧೦ ॥

ಅನಂತರ ನಿನ್ನ ಪುತ್ರರ ಹಿತದಲ್ಲಿ ರತನಾದ ಮಹಾತ್ಮನಾದ ಕರ್ಣನು ವಜ್ರದ ನಿಪಾತದಂತಿದ್ದ, ಅಸದೃಶವಾದ, ಸುವರ್ಣಚಿತ್ರಿತವಾದ, ನಿಶಿತವಾದ ಬಾಣಗಳಿಂದ ರಣರಂಗದಲ್ಲಿ ಶತ್ರುಗಳನ್ನು ದೂರ ಸರಿಸಿದನು.

ಸಂಛಿನ್ನಭಿನ್ನಧ್ವಜಿನಶ್ಚ ಕೇಚಿತ್-
ಕೇಚಿಚ್ಛರೈರರ್ದಿತಭಿನ್ನದೇಹಾಃ ।
ಕೇಚಿದ್ ವಿಸೂತಾ ವಿಹಯಾಶ್ಚ ಕೇಚಿದ್-
ವೈಕರ್ತನೇನಾಶು ಕೃತಾ ಬಭೂವುಃ ॥ ೧೧ ॥

ಕೆಲವರ ರಥದ ಧ್ವಜಗಳು ಛಿನ್ನಭಿನ್ನವಾದವು. ಇನ್ನು ಕೆಲವರ ದೇಹಗಳು ಬಾಣಗಳಿಂದ ಪೀಡಿತವಾಗಿ ಕತ್ತರಿಸಲ್ಪಟ್ಟವು. ಇನ್ನು ಕೆಲವು ರಥರು ತಮ್ಮ

ಸಾರಥಿಯನ್ನು, ಅಶ್ವಗಳನ್ನು ಕಳೆದುಕೊಂಡರು. ಹೀಗೆ ಕರ್ಣನು ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸಿದನು.

ಅವಿಂದಮಾನಾಸ್ತ್ವಥ ಶರ್ಮ ಸಂಖೇ
ಯೌಧಿಷ್ಠಿರಂ ತೇ ಬಲಮನ್ವಪದ್ಯನ್ ।
ತಾನ್ ಪ್ರೇಕ್ಷ್ಯ ಭಗ್ನಾನ್ ವಿಮುಖೀಕೃತಾಂಶ್ಚ
ಘಟೋತ್ಕಚೋ ರೋಷಮತೀವ ಚಕ್ರೇ ॥ ೧೨ ॥

ಆ ಸೈನ್ಯವು ಯುದ್ಧದಲ್ಲಿ ಸುಖವನ್ನು ಹೊಂದದೆ, ಯುಧಿಷ್ಠಿರನ ಸೈನ್ಯವನ್ನು ಸೇರಿತು. ಪಾಂಡವಯೋಧರು ಭಗ್ನರಾಗಿ ಯುದ್ಧವಿಮುಖರಾದುದನ್ನು ನೋಡಿ ಘಟೋತ್ಕಚನು ಬಹಳ ರೋಷವನ್ನು ತಾಳಿದನು.

ಆಸ್ಥಾಯ ತಂ ಕಾಂಚನರತ್ನಚಿತ್ರಂ
ರಥೋತ್ತಮಂ ಸಿಂಹ ಇವೋನ್ನನಾದ ।
ವೈಕರ್ತನಂ ಕರ್ಣಮುಪೇತ್ಯ ಚಾಪಿ
ವಿವ್ಯಾಧ ವಜ್ರಪ್ರತಿಮೈಃ ಪೃಷತ್ಕೈಃ ॥ ೧೩ ॥

ಅವನು ಸುವರ್ಣರತ್ನಗಳಿಂದ ಚಿತ್ರಿತವಾಗಿದ್ದ ಶ್ರೇಷ್ಠವಾದ ರಥವನ್ನು ಏರಿ ಸಿಂಹದಂತೆ ಗರ್ಜಿಸಿದನು. ವೈಕರ್ತನನಾದ ಕರ್ಣನನ್ನು ಸಮೀಪಿಸಿ ವಜ್ರದಂತಹ ಬಾಣಗಳಿಂದ ಅವನನ್ನು ಹೊಡೆದನು.

ತೌ ಕರ್ಣನಾರಾಚಶಿಲೀಮುಖೈಶ್ಚ
ನಾಲೀಕದಂಡೈಶ್ಚ ಸವತ್ಸದಂತೈಃ ।
ವರಾಹಕರ್ಣೈಃ ಸವಿಷಾಣಶೃಂಗೈಃ
ಕ್ಷುರಪ್ರವರ್ಷೈಶ್ಚ ವಿನೇದತುಃ ಖಮ್ ॥ ೧೪ ॥

ಅವರು ಕರ್ಣ-ನಾರಾಚ-ಶಿಲಿಗಳಿಂದಲೂ, ನಾಲೀಕದಂಡಗಳಿಂದಲೂ, ವತ್ಸ ದಂತಗಳಿಂದಲೂ, ವರಾಹಕರ್ಣಗಳಿಂದಲೂ, ವಿಷಾಣಶೃಂಗಗಳಿಂದಲೂ, ಕ್ಷುರ ವೃಷ್ಟಿಗಳಿಂದಲೂ ಆಕಾಶವು ಪ್ರತಿಧ್ವನಿಸುವಂತೆ ಮಾಡಿದರು.

ತದ್ಬಾಣಧಾರಾವೃತಮಂತರಿಕ್ಷಂ
ತಿರ್ಯಗ್ಗತಾಭಿಃ ಸಮರೇ ರರಾಜ ।
ಸುವರ್ಣಪುಂಖಜ್ವಲಿತಪ್ರಭಾಭಿಃ
ವಿಚಿತ್ರಪುಷ್ಪಾಭಿರಿವ ಸ್ರಜಾಭಿಃ ॥ ೧೫ ॥

ರಣರಂಗದಲ್ಲಿ ಅಡ್ಡವಾಗಿ ಸಂಚರಿಸುವ ಬಾಣಧಾರೆಗಳಿಂದ ತುಂಬಿದ ಅಂತರಿಕ್ಷವು ಸುವರ್ಣಪುಂಖಗಳಿಂದ ಉಂಟಾದ ದೀಪ್ತವಾದ ಪ್ರಭೆಗಳಿಂದ ಕೂಡಿ ವಿಚಿತ್ರ ಪುಷ್ಪಮಾಲೆಗಳಿಂದ ಕೂಡಿದಂತೆ ಶೋಭಿಸಿತು.

ಸಮಂ ಹಿ ತಾವಪ್ರತಿಮಪ್ರಭಾವೌ
ಅನ್ಯೋನ್ಯಮಾಜಘ್ನತುರುತ್ತಮಾಸ್ತ್ರೈಃ ।
ತಯೋರ್ಹಿ ವೀರೋತ್ತಮಯೋರ್ನ ಕಶ್ಚಿದ್
ದದರ್ಶ ತಸ್ಮಿನ್ ಸಮರೇ ವಿಶೇಷಮ್ ॥ ೧೬ ॥

ಅಸದೃಶ ಸಾಮರ್ಥ್ಯವುಳ್ಳ ಅವರಿಬ್ಬರೂ ಉತ್ತಮಾಸ್ತ್ರಗಳಿಂದ ಪರಸ್ಪರವಾಗಿ ಸಮವಾಗಿ ಯುದ್ಧವನ್ನು ಮಾಡಿದರು. ಯುದ್ಧವನ್ನು ಮಾಡುವ ಆ ವೀರೋತ್ತಮರಲ್ಲಿ ಯಾವನಿಗೂ ಯಾವ ಅಧಿಕ್ಯವೂ ಕಾಣಲಿಲ್ಲ.

ಅತೀವ ತಚ್ಚಿತ್ರಮತುಲ್ಯರೂಪಂ
ಬಭೂವ ಯುದ್ಧಂ ರವಿಭೀಮಸೂನ್ವೋಃ ।
ಸಮಾಕುಲಂ ಶಸ್ತ್ರನಿಪಾತಘೋರಂ
ದಿವೀವ ರಾಹ್ವಂಶುಮತೋಃ ಪ್ರತಪ್ತಮ್ ॥ ೧೭ ॥

ರವಿಪುತ್ರನಿಗೂ ಮತ್ತು ಭೀಮಪುತ್ರನಿಗೂ ನಡೆದ ಶಸ್ತ್ರನಿಪಾತದಿಂದ ಘೋರವಾದ, ನಿಬಿಡವಾದ ಆ ಯುದ್ಧವು ಆಕಾಶದಲ್ಲಿ ರಾಹು ಮತ್ತು ಸೂರ್ಯರ ಪ್ರತಪ್ತವಾದ ಸಂಘರ್ಷದಂತೆ ಆಶ್ಚರ್ಯಕರವೂ ಮತ್ತು ಅಸದೃಶವೂ ಆಗಿದ್ದಿತು.

ಘಟೋತ್ಕಚೋ ಯದಾ ಕರ್ಣಂ ನ ವಿಶೇಷಯತೇ ನೃಪ ।
ತದಾ ಪ್ರಾದುಶ್ಚಕಾರೋಗ್ರಮಸ್ತ್ರಮಸ್ತ್ರವಿದಾಂ ವರಃ ॥ ೧೮ ॥

ಎಲೈ ರಾಜನೇ, ಘಟೋತ್ಕಚನು ಕರ್ಣನನ್ನು ಮೀರಿಸಲು ಸಾಧ್ಯವಿಲ್ಲದಿದ್ದಾಗ, ಅಸ್ತ್ರಜ್ಞರಲ್ಲಿ ಶ್ರೇಷ್ಠನಾದ ಅವನು ಉಗ್ರವಾದ ಅಸ್ತ್ರವನ್ನು ಪ್ರಯೋಗಿಸಿದನು.

ತೇನಾಸ್ತ್ರೇಣ ಹಯಾನ್ ಪೂರ್ವಂ ಹತ್ವಾ ಕರ್ಣಸ್ಯ ರಾಕ್ಷಸಃ ।
ಸಾರಥಿಂ ಚೈವ ಹೈಡಿಂಬಃ ಕ್ಷಿಪ್ರಮಂತರಧೀಯತ ॥ ೧೯ ॥

ರಾಕ್ಷಸನಾದ ಘಟೋತ್ಕಚನು ಆ ಅಸ್ತ್ರದಿಂದ ಮೊದಲು ಕರ್ಣನ ಅಶ್ವಗಳನ್ನು ಕೊಂದು, ಅನಂತರ ಸಾರಥಿಯನ್ನು ಕೊಂದು ಶೀಘ್ರವಾಗಿ ಅಂತರ್ಧಾನವನ್ನು ಹೊಂದಿದನು.

ಧೃತರಾಷ್ಟ್ರಃ

ತಥಾ ಹ್ಯಂತರ್ಹಿತೇ ತಸ್ಮಿನ್ ಕೂಟಯೋಧಿನಿ ರಾಕ್ಷಸೇ ।
ಮಾಮಕೈಃ ಪ್ರತಿಪನ್ನಂ ಯತ್ ತನ್ಮಮಾಚಕ್ಷ್ವ ಸಂಜಯ ॥ ೨೦ ॥

ಧೃತರಾಷ್ಟ್ರ– ಸಂಜಯನೇ, ಮಾಯಾಯುದ್ಧವನ್ನು ಮಾಡುವ ಆ ರಾಕ್ಷಸನು ಅಂತರ್ಧಾನವನ್ನು ಹೊಂದಿದಾಗ ನನ್ನವರು ಏನು ಮಾಡಬೇಕೆಂದು ನಿರ್ಧರಿಸಿದರು ಎಂದು ನನಗೆ ಹೇಳು.

ಸಂಜಯಃ

ಅಂತರ್ಹಿತಂ ರಾಕ್ಷಸಂ ತಂ ವಿದಿತ್ವಾ
ಸಂಪ್ರಾಕ್ರೋಶನ್ ಕುರವಃ ಸರ್ವ ಏವ ।
ಕಥಂ ನಾಯಂ ರಾಕ್ಷಸಃ ಕೂಟಯೋಧೀ
ಹನ್ಯಾತ್ ಕರ್ಣಂ ಸಮರೇಽದೃಶ್ಯಮಾನಃ ॥ ೨೧ ॥

ಸಂಜಯ– ರಾಕ್ಷಸನಾದ ಘಟೋತ್ಕಚನು ಅಂತರ್ಧಾನವನ್ನು ಹೊಂದಿದುದನ್ನು ನೋಡಿ ಎಲ್ಲ ಕುರುಗಳೂ ಮಾಯಾಯೋಧಿಯಾದ ಈ ರಾಕ್ಷಸನು ಯುದ್ಧದಲ್ಲಿ ಅದೃಶ್ಯನಾಗಿ ಹೇಗೆ ಕರ್ಣನನ್ನು ಕೊಲ್ಲದೆ ಇದ್ದಾನು! ಎಂದು ಕಿರುಚಿದರು.

ತತಃ ಕರ್ಣೋ ಲಘುಚಿತ್ರಾಸ್ತ್ರಯೋಧೀ
ಸರ್ವಾ ದಿಶೋ ವ್ಯಾವೃಣೋದ್ ಬಾಣಜಾಲೈಃ ।

ನ ವೈ ಕಿಂಚಿದ್ವ್ಯಾಪತತ್ತತ್ರ ಭೂತಂ
ತಮೋಭೂತೇ ಸಾಯಕೈರಂತರಿಕ್ಷೇ ॥ ೨೨ ॥

ಆಗ ಕ್ಷಿಪ್ರವಾಗಿ ಆಶ್ಚರ್ಯಕರವಾಗಿ ಅಸ್ತ್ರಗಳಿಂದ ಯುದ್ಧವನ್ನು ಮಾಡುವ ಆ ಕರ್ಣನು ಎಲ್ಲ ದಿಕ್ಕುಗಳನ್ನು ತನ್ನ ಬಾಣಗಳ ಸಮೂಹದಿಂದ ತುಂಬಿದನು. ಕರ್ಣನ ಬಾಣಗಳಿಂದ ಅಂತರಿಕ್ಷವೆಲ್ಲವೂ ಕತ್ತಲೆಯಿಂದ ಕೂಡಿರಲು ಯಾವ ಒಂದು ಪ್ರಾಣಿಯೂ ಅಲ್ಲಿ ಅಲುಗಾಡಲು ಸಾಧ್ಯವಾಗಲಿಲ್ಲ.

ನ ಚಾದದಾನೋ ನ ಚ ಸಂದಧಾನೋ
ನ ಚೇಷುಧೀ ಸ್ಪೃಶಮಾನಃ ಕರಾಗ್ರೈಃ ।
ಅದೃಶ್ಯದ್ ವೈ ಲಾಘವಾತ್ ಸೂತಪುತ್ರಃ
ಸರ್ವಂ ಬಾಣೈಶ್ಛಾದಯಾನೋಽಂತರಿಕ್ಷಮ್ ॥ ೨೩ ॥

ಸೂತಪುತ್ರನಾದ ಕರ್ಣನು ಬಾಣಗಳನ್ನು ತೆಗೆದುಕೊಳ್ಳುವುದಾಗಲೀ, ಬಿಲ್ಲಿನಲ್ಲಿ ಹೂಡುವುದಾಗಲೀ, ಬತ್ತಳಿಕೆಯನ್ನು ಹಸ್ತದಿಂದ ಸ್ಪರ್ಶಮಾಡುವುದಾಗಲೀ ಕಂಡು ಬರುತ್ತಿರಲಿಲ್ಲ. ಅಂತಹ ಕ್ಷಿಪ್ರತೆಯಿಂದ ಕೂಡಿದ ಅವನು ಅಂತರಿಕ್ಷವೆಲ್ಲವನ್ನೂ ಬಾಣಗಳಿಂದ ಆಚ್ಛಾದಿಸಿದನು.

ತತೋ ಮಾಯಾಂ ವಿಹಿತಾಮಂತರಿಕ್ಷೇ
ಘೋರಾಂ ಭೀಮಾಂ ದಾರುಣಾಂ ರಾಕ್ಷಸೇನ ।
ಸಂಪಶ್ಯಾಮೋ ಲೋಹಿತಾಭ್ರಪ್ರಕಾಶಾಂ
ದೇದೀಪ್ಯಂತೀಮಗ್ನಿಶಿಖಾಮಿವೋಗ್ರಾಮ್ ॥ ೨೪ ॥

ಆಗ ನಾವು ರಾಕ್ಷಸನಾದ ಘಟೋತ್ಕಚನು ಪ್ರಯೋಗಿಸಿದ ಘೋರವಾದ, ಭಯಂಕರವಾದ, ತೀವ್ರವಾದ ಮಾಯೆಯನ್ನು ಅಂತರಿಕ್ಷದಲ್ಲಿ ನೋಡಿದೆವು. ಆಕಾಶವೆಲ್ಲವೂ ಕೆಂಪುಮೋಡಗಳಿಂದ ಕೂಡಿ ಅಗ್ನಿಶಿಖೆಯಂತೆ ಉಗ್ರವಾಗಿ ಜ್ವಲಿಸುತ್ತಿದ್ದುದನ್ನು ನೋಡಿದೆವು.

ತತಸ್ತಸ್ಯಾ ವಿದ್ಯುತಃ ಪ್ರಾದುರಾಸ-
ನ್ನುಲ್ಕಾಶ್ಚಾಪಿ ಜ್ವಲಿತಾಃ ಕೌರವೇಂದ್ರ ।

ಘೋಷಶ್ಚಾನ್ಯಃ ಪ್ರಾದುರಾಸೀತ್ ಸುಘೋರಃ
ಸಹಸ್ರಶೋ ನದತಾಂ ದುಂದುಭೀನಾಮ್ ॥ ೨೫ ॥

ಎಲೈ ಕೌರವೇಂದ್ರನೇ, ಅನಂತರ ಆ ಮಾಯೆಯಿಂದ ಜ್ವಲಿಸುವ ಮಿಂಚುಗಳು ಮತ್ತು ಉಲ್ಕೆಗಳು ಪ್ರಾದುರ್ಭವಿಸಿದವು. ಸಹಸ್ರಸಂಖ್ಯೆಯಲ್ಲಿ ಬಾರಿಸಲ್ಪಡುವ ದುಂದುಭಿಗಳ ಬಹಳ ಘೋರವಾದ ಇನ್ನೊಂದು ಶಬ್ದವು ಕೇಳಿಬಂದಿತು.

ತತಃ ಶರಾಃ ಪ್ರಾಪತನ್ ರುಗ್ಮಪುಂಖಾಃ
ಶಕ್ತ್ಯಃ ಪ್ರಾಸಾ ಮುಸಲಾನ್ಯಾಯುಧಾನಿ ।
ಪರಶ್ವಧಾಸ್ಸೈಲಧೌತಾಶ್ಚ ಖಡ್ಗಾಃ
ಪ್ರದೀಪ್ತಾಗ್ರಾಃ ಪಟ್ಟಶಾಸ್ತೋಮರಾಶ್ಚ ॥ ೨೬ ॥

ಅನಂತರ ರುಗ್ಮಪುಂಖಗಳನ್ನು ಹೊಂದಿದ್ದ ಬಾಣಗಳೂ, ಶಕ್ತಿಗಳೂ, ಪ್ರಾಸಗಳೂ, ಮುಸಲಗಳೂ, ಬೇರೆ ಆಯುಧಗಳೂ, ಪರಶ್ವಧಗಳೂ, ತೈಲದಲ್ಲಿ ಸಾಣೆಯನ್ನು ಹಿಡಿದ ಖಡ್ಗಗಳೂ, ಜ್ವಲಿಸುವ ತುದಿಯುಳ್ಳ ಪಟ್ಟಶಗಳೂ, ತೋಮರಗಳೂ ಬೀಳಲು ಪ್ರಾರಂಭಿಸಿದವು.

ಮಯೂಖಿನಃ ಪರಿಘಾ ಲೋಹಬದ್ಧಾ
ಗದಾಶ್ಚಿತ್ರಾಃ ಶತಧಾರಾಶ್ಚ ಶೂಲಾಃ ।
ಗುರ್ವ್ಯೋ ಗದಾ ಹೇಮಪಟ್ಟಾವನದ್ಧಾಃ
ಶತಘ್ನ್ಯಶ್ಚ ಪ್ರಾದುರಾಸನ್ ಸಮಂತಾತ್ ॥ ೨೭ ॥

ಲೋಹಬದ್ಧವಾದ ಕಿರಣಗಳಿಂದ ಕೂಡಿದ ಪರಿಘಗಳೂ, ವಿಚಿತ್ರವಾದ ಗದೆಗಳೂ, ತೀಕ್ಷ್ಣವಾದ ತುದಿಯುಳ್ಳ ಶೂಲಗಳೂ, ಚಿನ್ನದ ಪಟ್ಟಗಳಿಂದ ಕೂಡಿದ ಭಾರವಾದ ಗದೆಗಳೂ, ಶತಘ್ನಿಗಳೂ ಎಲ್ಲ ಕಡೆಗಳಿಂದಲೂ ಪ್ರಾದುರ್ಭವಿಸಿದವು.

ಮಹಾಶಿಲಾಶ್ಚಾಪತಂಸ್ತತ್ರ ತತ್ರ
ಸಹಸ್ರಶಃ ಸಾಶನಯಃ ಸವಜ್ರಾಃ ।
ಚಕ್ರಾಣಿ ಚಾನೇಕಶತಕ್ಷುರಾಣಿ
ಪ್ರಾದುರ್ಬಭೂವುರ್ಜ್ವಲನಪ್ರಭಾಣಿ ॥ ೨೮ ॥

ಅಲ್ಲಲ್ಲಿ ಸಹಸ್ರ ಸಂಖ್ಯೆಯಲ್ಲಿ ಅಶನಿಗಳಿಂದ ಮತ್ತು ವಜ್ರಗಳಿಂದ ಕೂಡಿದ ದೊಡ್ಡ ಶಿಲೆಗಳು ಬಿದ್ದವು. ಅಗ್ನಿಯ ಕಾಂತಿಯನ್ನು ಹೊಂದಿದ ಚಕ್ರಗಳು ಮತ್ತು ನೂರಾರು ಕ್ಷುರಗಳು ಪ್ರಾದುರ್ಭವಿಸಿದವು.

ತಾಂ ಶಕ್ತಿಪಾಷಾಣಪರಶ್ವಧಾನಾಂ
ಪ್ರಾಸಾಸಿವಜ್ರಾಶನಿಮುದ್ಗರಾಣಾಮ್ ।
ವೃಷ್ಟಿಂ ವಿಶಾಲಾಂ ಜ್ವಲಿತಾಂ ಪತಂತೀಂ
ಕರ್ಣಃ ಶರೌಘೈರ್ನ ಶಶಾಕ ಹಂತುಮ್ ॥ ೨೯ ॥

ಶಕ್ತಿ-ಪಾಷಾಣ-ಪರಶ್ವಧಗಳ, ಪ್ರಾಸ-ಖಡ್ಗ-ವಜ್ರ-ಅಶನಿ-ಮುದ್ಗರಗಳ, ವಿಶಾಲವಾದ ಜ್ವಲಿಸುತ್ತಾ ಕೆಳಗೆ ಬೀಳುತ್ತಿರುವ ಆ ವೃಷ್ಟಿಯನ್ನು ಕರ್ಣನು ತನ್ನ ಬಾಣಗಳ ಸಮೂಹದಿಂದ ವಿನಾಶ ಮಾಡಲು ಸಾಧ್ಯವಾಗಲಿಲ್ಲ.

ಶರಾಹತಾನಾಂ ಪತತಾಂ ಹಯಾನಾಂ
ವಜ್ರಾಹತಾನಾಂ ಪತತಾಂ ಗಜಾನಾಮ್ ।
ಶಿಲಾಹತಾನಾಂ ಚ ಮಹಾರಥಾನಾಂ
ಮಹಾನ್ನಿನಾದಃ ಪತತಾಂ ಬಭೂವ ॥ ೩೦ ॥

ಬಾಣಗಳಿಂದ ಹೊಡೆಯಲ್ಪಟ್ಟು ಬೀಳುವ ಅಶ್ವಗಳ, ವಜ್ರದಿಂದ ಹೊಡೆಯಲ್ಪಟ್ಟು ಬೀಳುವ ಗಜಗಳ, ಶಿಲೆಗಳಿಂದ ಹೊಡೆಯಲ್ಪಟ್ಟು ಬೀಳುವ ಮಹಾರಥರ ದೊಡ್ಡ ನಾದವು ಉಂಟಾಯಿತು.

ಸುಭೀಮನಾನಾವಿಧಶಸ್ತ್ರಪಾತೈ-
ರ್ಘಟೋತ್ಕಚೇನಾಭಿಹತಂ ಸಮಂತಾತ್ ।
ದೌರ್ಯೋಧನಂ ತದ್ಬಲಮಾರ್ತರೂಪ-
ಮಾವರ್ತಮಾನಂ ದದೃಶೇ ಭ್ರಮತ್ ತತ್ ॥ ೩೧ ॥

ಅತ್ಯಂತ ಭಯಂಕರವಾದ ನಾನಾವಿಧವಾದ ಶಸ್ತ್ರಪಾತಗಳಿಂದ ಘಟೋತ್ಕಚನಿಂದ ಎಲ್ಲ ಕಡೆಗಳಲ್ಲಿಯೂ ಹೊಡೆಯಲ್ಪಟ್ಟ ದುರ್ಯೋಧನನ ಆ ಸೈನ್ಯವು ಬಹಳ ದುಃಖವನ್ನು ಹೊಂದಿ ಅಲ್ಲಲ್ಲಿಯೇ ತಿರುಗಾಡುವುದು ಕಂಡುಬಂದಿತು.

ಹಾಹಾಕೃತಂ ಸಂಪರಿವರ್ತಮಾನಂ
ಸಂಲೀಯಮಾನಂ ಚ ವಿಷಣ್ಣರೂಪಮ್ ।
ತೇ ತ್ವಾರ್ಯಭಾವಾತ್ ಪುರುಷಪ್ರವೀರಾಃ
ಪರಾಙ್ಮುಖಾ ನ ಬಭೂವುಸ್ತದಾನೀಮ್ ॥ ೩೨ ॥

ಹಾಹಾಕಾರವನ್ನು ಮಾಡುತ್ತಾ ಅಲ್ಲಿಯೇ ತಿರುಗುವುದು, ವಿಷಾದವನ್ನು ಹೊಂದಿ ಅಲ್ಲಲ್ಲಿ ಅಡಗಿಕೊಳ್ಳುವುದು ಕಂಡುಬಂದಿತು. ಪುರುಷಶ್ರೇಷ್ಠರಾದ ಆ ವೀರರು ಮಾತ್ರ ಆರ್ಯಭಾವವನ್ನು ಹೊಂದಿ ಆಗ ಯುದ್ಧದಿಂದ ಪರಾಙ್ಮುಖರಾಗಲಿಲ್ಲ.

ತಾಂ ರಾಕ್ಷಸೀಂ ಘೋರತರಾಂ ಸುಭೀಮಾಂ
ವೃಷ್ಟಿಂ ಮಹಾಶಸ್ತ್ರಮಯೀಂ ಪತಂತೀಮ್ ।
ದೃಷ್ಟ್ವಾ ಬಲೌಘಾಂಶ್ಚ ನಿಪಾತ್ಯಮಾನಾನ್
ಮಹದ್ಭಯಂ ತವ ಪುತ್ರಾನ್ ವಿವೇಶ ॥ ೩೩ ॥

ಅತ್ಯಂತ ಭಯಂಕರವಾದ ಮತ್ತು ಘೋರತರವಾದ ಮಹಾಶಸ್ತ್ರಗಳ ವೃಷ್ಟಿಯು ಕೆಳಗೆ ಬಿದ್ದು ತಮ್ಮ ಸೇನಾ ಸಮೂಹಗಳು ಓಡುತ್ತಿರುವುದನ್ನು ನೋಡಿದ ನಿನ್ನ ಪುತ್ರರಿಗೆ ದೊಡ್ಡ ಭಯವುಂಟಾಯಿತು.

ಶಿವಾಶ್ಚ ವೈಶ್ವಾನರದೀಪ್ತಜಿಹ್ವಾಃ
ಸುಭೀಮನಾದಾಃ ಶತಶೋ ನದಂತ್ಯಃ ।
ರಕ್ಷೋಗಣಾನ್ ನರ್ದತಶ್ಚಾಭಿವೀಕ್ಷ್ಯ
ನರೇಂದ್ರಯೋಧಾ ವ್ಯಥಿತಾ ಬಭೂವುಃ ॥ ೩೪ ॥

ಅಗ್ನಿದೀಪ್ತವಾದ ನಾಲಿಗೆಯುಳ್ಳ ನರಿಗಳು ನೂರಾರು ಸಂಖ್ಯೆಯಲ್ಲಿ ಭೈರವವಾದ ನಾದವನ್ನು ಮಾಡಿದವು. ರಾಕ್ಷಸರ ಮೋಹಗಳನ್ನು ನೋಡಿ ಘೋರವಾಗಿ ಕಿರುಚುವ ಆ ನರಿಗಳನ್ನು ನೋಡಿ ಕೌರವ ಸೇನೆಯ ಯೋಧರು ವ್ಯಥೆಯನ್ನು ಹೊಂದಿದರು.

ತೇ ದೀಪ್ತಜಿಹ್ವಾನನತೀಕ್ಷ್ಣದಂಷ್ಟ್ರಾ
ವಿಭೀಷಣಾಃ ಶೈಲನಿಕಾಶಕಾಯಾಃ ।
ನಭೋಗತಾಃ ಶಕ್ತಿವಿಷಕ್ತಹಸ್ತಾ
ಮೇಘಾ ವ್ಯಮುಂಚನ್ನಿವ ವೃಷ್ಟಿಮಾರ್ಗಮ್ ॥ ೩೫ ॥

ಜ್ವಲಿಸುವ ನಾಲಿಗೆ ಮತ್ತು ಮುಖಗಳನ್ನು, ತೀಕ್ಷ್ಣವಾದ ದಂಷ್ಟ್ರಗಳನ್ನು ಹೊಂದಿದ್ದ ಭಯಂಕರವಾದ, ಪರ್ವತದಂತಹ ದೊಡ್ಡ ಶರೀರವನ್ನು ಧರಿಸಿದ್ದ, ಕೈಯಲ್ಲಿ ಶಕ್ತಿ ಮೊದಲಾದ ಆಯುಧಗಳನ್ನು ಹಿಡಿದ ಆಕಾಶದಲ್ಲಿದ್ದ ಆ ರಾಕ್ಷಸರು ಮೋಡಗಳು ಮಳೆಯನ್ನು ಸುರಿಸುವಂತೆ ಶಸ್ತ್ರಗಳ ಮಳೆಯನ್ನು ಸುರಿಸಿದರು.

ತೈರಾಹತಾಸ್ತೇ ಶರಶಕ್ತಿಶೂಲೈ-
ರ್ಗದಾಭಿರುಗ್ರೈಃ ಪರಿಘೈಶ್ಚ ದೀಪ್ತೈಃ ।
ವಜ್ರೈಃ ಪಿನಾಕೈರಶನಿಪ್ರಹಾರೈ-
ಶ್ಚಕ್ರೈಃ ಶತಘ್ನ್ಯಶ್ಚ ಪೇತುಃ ॥ ೩೬ ॥

ಅವರಿಂದ ಬಾಣ-ಶಕ್ತಿ-ಶೂಲಗಳಿಂದಲೂ, ಉಗ್ರವಾದ ಗದೆಗಳಿಂದಲೂ, ಜ್ವಲಿಸುವ ಪರಿಘಗಳಿಂದಲೂ, ವಜ್ರಗಳಿಂದಲೂ, ಪಿನಾಕಗಳಿಂದಲೂ, ಅಶನಿ-ಪ್ರಹಾರಗಳಿಂದಲೂ, ಚಕ್ರಗಳಿಂದಲೂ, ಶತಘ್ನಿಗಳಿಂದಲೂ ಹೊಡೆದು ಮರ್ದಿಸಲ್ಪಟ್ಟ ನಿನ್ನ ಸೈನ್ಯದ ಯೋಧರು ಕೆಳಗೆ ಬಿದ್ದರು.

ಹುಡಾ ಭುಶುಂಡ್ಯೋಽಶ್ಮಗುಡಾಃ ಶತಘ್ನ್ಯಃ
ಸ್ಥೂಣಾಶ್ಚ ಕಾರ್ಷ್ಣಾಯಸಪಟ್ಟನದ್ಧಾಃ ।
ಅವಾಕಿರಂಸ್ತವ ಪುತ್ರಸ್ಯ ಸೈನ್ಯಂ
ತಥಾ ರೌದ್ರಂ ಕಶ್ಮಲಂ ಪ್ರಾದುರಾಸೀತ್ ॥ ೩೭ ॥

ಹುಡಗಳು, ಭುಶುಂಡಿಗಳು, ಅಶ್ಮಗುಡಗಳು, ಶತಘ್ನಿಗಳು, ಕಬ್ಬಿಣದ ಪಟ್ಟಗಳಿಂದ ಬಿಗಿಯಲ್ಪಟ್ಟ ಸ್ಥೂಣಗಳು ನಿನ್ನ ಪುತ್ರರ ಸೈನ್ಯದ ಮೇಲೆ ಬಿದ್ದವು. ಆಗ ಭಯಂಕರವಾದ ವಿಷಾದವು ಉಂಟಾಯಿತು.

ನಿಷ್ಕೀರ್ಣಾಂತ್ರಾ ವಿಹತೈರುತ್ತಮಾಂಗೈಃ
ಸಂಭಗ್ನಾಂಗಾಃ ಶೇರತೇ ತತ್ರ ಶೂರಾಃ ।
ಭಿನ್ನಾ ಹಯಾಃ ಕುಂಜರಾಶ್ಚಾವಭಗ್ನಾಃ
ಸಂಚೂರ್ಣಿತಾಶ್ಚೈವ ರಥಾಃ ಶಿಲಾಭಿಃ ॥ ೩೮ ॥

ಶೂರರು ಹೊರಗೆಳೆದ ಕರುಳುಗಳಿಂದಲೂ, ಜಜ್ಜಿಹೋದ ಶಿರಸ್ಸುಗಳಿಂದಲೂ, ಭಗ್ನವಾದ ಅಂಗಗಳಿಂದಲೂ ಕೂಡಿ ರಣರಂಗದಲ್ಲಿ ಮಲಗಿದರು. ಅಶ್ವಗಳು ಕತ್ತರಿಸಲ್ಪಟ್ಟವು, ಗಜಗಳು ಭೇದಿಸಲ್ಪಟ್ಟವು, ರಥಗಳು ಶಿಲೆಗಳಿಂದ ಪುಡಿಮಾಡಲ್ಪಟ್ಟವು.

ಏವಂ ಮಹಚ್ಚಸ್ತ್ರವರ್ಷಂ ಸೃಜಂತ-
ಸ್ತೇ ಯಾತುಧಾನಾ ಭುವಿ ಘೋರರೂಪಾಃ ।
ಮಾಯಾಃ ಸೃಷ್ಟಾಸ್ತತ್ರ ಘಟೋತ್ಕಚೇನ
ನಾಮುಂಚನ್ ವೈ ಯಾಚಮಾನಂ ನ ಭೀತಮ್ ॥ ೩೯ ॥

ಹೀಗೆ ಘಟೋತ್ಕಚನು ಸೃಷ್ಟಿಸಿದ ಮಾಯಾಮಯವಾದ ಘೋರರೂಪವನ್ನು ಹೊಂದಿದ ಆ ರಾಕ್ಷಸರು ಬೇಡುವವನನ್ನೂ ಮತ್ತು ಭೀತನನ್ನೂ ಬಿಡದೆ ಭೂಮಿಯ ಮೇಲೆ ದೊಡ್ಡ ಶಸ್ತ್ರಗಳ ಮಳೆಯನ್ನು ಸುರಿಸಿದರು.

ತಸ್ಮಿನ್ ಘೋರೇ ಕುರುವೀರಾವಮರ್ದೇ
ಕಾಲೋತ್ಸೃಷ್ಟೇ ಕ್ಷತ್ರಿಯಾಣಾಮಭಾವೇ ।
ತೇ ವೈ ಭಗ್ನಾಃ ಸಹಸಾ ವ್ಯದ್ರವಂತ
ಪ್ರಾಕ್ರೋಶಂತಃ ಕೌರವಾಃ ಸರ್ವ ಏವ ॥ ೪೦ ॥

ಮೃತ್ಯುವಿನಿಂದ ಕ್ಷತ್ರಿಯರ ವಿನಾಶಕ್ಕಾಗಿ ಸೃಷ್ಟವಾದ ಘೋರವಾದ ಆ ಕುರುವೀರರ ಸಂಘರ್ಷದಲ್ಲಿ ಭಗ್ನರಾದ ಕೌರವರೆಲ್ಲರೂ ತಕ್ಷಣದಲ್ಲಿ ಕಿರುಚುತ್ತಾ ಓಡಿಹೋದರು.

ಪಲಾಯಧ್ವಂ ಕುರವೋ ನೈತದಸ್ತಿ
ಸೇಂದ್ರಾ ದೇವಾ ಘ್ನಂತಿ ನಃ ಪಾಂಡವಾರ್ಥೇ ।
ತಥಾ ತೇಷಾಂ ಮಜ್ಜತಾಂ ಭಾರತಾನಾಂ
ನ ಸ್ಮ ದ್ವೀಪಸ್ತತ್ರ ಕಶ್ಚಿದ್ ಬಭೂವ ॥ ೪೧ ॥

ಕುರುಗಳೆಲ್ಲರೂ ಓಡಿಹೋಗಿ 'ಇದು ಅಸಾಧ್ಯವಾದುದು. ಇಂದ್ರ ಸಹಿತರಾದ ದೇವತೆಗಳು ನಮ್ಮನ್ನು ಕೊಲ್ಲುತ್ತಿದ್ದಾರೆ' (ಎಂದು ಕಿರುಚುತ್ತಾ ಓಡಿಹೋದರು). ಆ ರೀತಿಯಲ್ಲಿ ಶಸ್ತ್ರವರ್ಷದಲ್ಲಿ ಮುಳುಗುವ ಕೌರವರ ಸೇನೆಗೆ ಅಲ್ಲಿ ಯಾವನೂ ದ್ವೀಪನಾಗಲಿಲ್ಲ.

ತಸ್ಮಿನ್ ಸಂಕ್ರಂದೇ ತುಮುಲೇ ವರ್ತಮಾನೇ
ಸೈನ್ಯೇ ಭಗ್ನೇ ಲೀಯಮಾನೇ ಕುರೂಣಾಮ್ ।
ಅನೀಕಾನಾಂ ಪ್ರವಿಭಾಗೇಽಪ್ರಕಾಶೇ
ನ ಜ್ಞಾಯಂತೇ ಕುರವೋ ನೇತರೇ ವಾ ॥ ೪೨ ॥

ಅಂತಹ ತೀವ್ರವಾದ ಸಂಘರ್ಷವು ನಡೆದು ಕೌರವರ ಸೈನ್ಯವು ಭಗ್ನವಾಗಿ ಅಡಗಿಹೋಗುತ್ತಿರಲು, ರಾತ್ರಿಯ ಕತ್ತಲಿನಲ್ಲಿ ಸೈನ್ಯದ ಭಾಗಗಳು ಕಾಣದೆ ಇರುತ್ತಿರಲು ಕುರುಗಳು ಯಾರು, ಪಾಂಡವರು ಯಾರು ಎಂದು ತಿಳಿಯಲಿಲ್ಲ.

ನಿರ್ಮರ್ಯಾದೇ ವಿದ್ರವೇ ಘೋರರೂಪೇ
ಸರ್ವಾ ದಿಶಃ ಪ್ರೇಕ್ಷಮಾಣಾಃ ಸ್ಮ ಶೂನ್ಯಾಃ ।
ತಾಂ ಶಸ್ತ್ರವೃಷ್ಟಿಮುರಸಾ ಗಾಹಮಾನಂ
ಕರ್ಣಂ ಚೈಕಂ ತತ್ರ ರಾಜನ್ನಪಶ್ಯಮ್ ॥ ೪೩ ॥

ಎಲ್ಲ ಎಲ್ಲೆಗಳನ್ನೂ ಮೀರಿದ ಘೋರವಾದ ಆ ಸಂಘರ್ಷದಲ್ಲಿ ಯೋಧರು ಎಲ್ಲ ದಿಕ್ಕುಗಳನ್ನೂ ಶೂನ್ಯವಾಗಿ ಕಾಣುತ್ತಾ ಓಡಿಹೋದರು. ಎಲೈ ರಾಜನೇ, ಆ ಶಸ್ತ್ರವೃಷ್ಟಿಯನ್ನು ತನ್ನ ಎದೆಯಿಂದ ದಾಟುತ್ತಿದ್ದ ಕರ್ಣನೊಬ್ಬನನ್ನು ಮಾತ್ರ ನಾನು ಅಲ್ಲಿ ನೋಡಿದೆನು.

ತತೋ ಬಾಣೈರಾವೃಣೋದಂತರಿಕ್ಷಂ
ದಿವ್ಯಾಂ ಮಾಯಾಂ ಯೋಧಯನ್ ರಾಕ್ಷಸಸ್ಯ ।
ಹ್ರೀಮಾನ್ ಕುರ್ವನ್ ದುಷ್ಕರಮಾರ್ಯಕರ್ಮ
ನೈವಾಮುಹ್ಯತ್ ಸಂಯುಗೇ ಸೂತಪುತ್ರಃ ॥ ೪೪ ॥

ಆಗ ಸೂತಪುತ್ರನಾದ ಕರ್ಣನು ರಾಕ್ಷಸನ ದಿವ್ಯಮಾಯೆಯ ಜೊತೆಯಲ್ಲಿ ಯುದ್ಧವನ್ನು ಮಾಡಿ, ಅಂತರಿಕ್ಷವನ್ನು ತಾನು ಪ್ರಯೋಗಿಸಿದ ಬಾಣಗಳಿಂದ ತುಂಬಿದನು. ನಾಚಿಕೆಯುಳ್ಳವನೂ, ಯುದ್ಧದಲ್ಲಿ ದುಷ್ಕರವಾದ ಉದಾತ್ತವಾದ ಕರ್ಮವನ್ನು ಮಾಡುವವನೂ ಆದ ಅವನು ರಣರಂಗದಲ್ಲಿ ಮೋಹವನ್ನು ಹೊಂದಲಿಲ್ಲ.

ತತೋ ಭೀತಾಃ ಸಮುದ್ವೀಕ್ಷಂತ ಕರ್ಣಂ
ರಾಜನ್ ಸರ್ವೇ ಸೈಂಧವಾ ಬಾಹ್ಲಿಕಾಶ್ಚ ।

ಅಸಮ್ಮೋಹಂ ಪೂಜಯಂತೋಽಸ್ಯ ಸಂಖ್ಯೇ
ಸಂಪಶ್ಯಂತೋ ವಿಜಯಂ ರಾಕ್ಷಸಸ್ಯ ॥ ೪೫ ॥

ಎಲೈ ರಾಜನೇ, ಆಗ ಭೀತರಾದ ಸೈಂಧವ-ಬಾಹ್ಲೀಕರೆಲ್ಲರೂ ಕರ್ಣನನ್ನು ನೋಡಿದರು. ಯುದ್ಧದಲ್ಲಿ ಅವನ ಧೈರ್ಯವನ್ನೂ, ರಾಕ್ಷಸನಾದ ಘಟೋತ್ಕಚನ ವಿಜಯವನ್ನೂ ನೋಡಿ ಕರ್ಣನನ್ನು ಪೂಜಿಸಿದರು.

ತೇನೋತ್ಸೃಷ್ಟಾ ಚಕ್ರಯುಕ್ತಾ ಶತಘ್ನೀ
ಸಮಂ ಸರ್ವಾಂಶ್ಚತುರೋಽಶ್ವಾಂಜಘಾನ ।
ತೇ ಜಾನುಭಿರ್ಜಗತೀಮನ್ವಪದ್ಯನ್
ಗತಾಸವೋ ನಿರ್ದಶನಾಕ್ಷಿಜಿಹ್ವಾಃ ॥ ೪೬ ॥

ಘಟೋತ್ಕಚನಿಂದ ಪ್ರಯುಕ್ತವಾದ ಚಕ್ರಯುಕ್ತವಾದ ಶತಘ್ನಿಯು ಕರ್ಣನ ರಥದ ನಾಲ್ಕು ಅಶ್ವಗಳನ್ನು ಒಂದೇ ಕಾಲದಲ್ಲಿ ಕೊಂದಿತು. ಆ ಅಶ್ವಗಳು ದಂತ-ಅಕ್ಷಿ-ಜಿಹ್ವೆಗಳನ್ನು ಕಳೆದುಕೊಂಡು ಮೃತವಾಗಿ ಭೂಮಿಯ ಮೇಲೆ ಬಿದ್ದವು.

ತತೋ ಹತಾಶ್ವಾದವರುಹ್ಯ ವಾಹಾ-
ದಂತರ್ಮನಾಃ ಕುರುಷು ಪ್ರಾದ್ರವತ್ಸು ।
ದಿವ್ಯೇ ಚಾಸ್ತ್ರೇ ಮಾಯಯಾ ವಧ್ಯಮಾನೇ
ನೈವಾಮುಹ್ಯಚ್ಚಿಂತಯನ್ ಪ್ರಾಪ್ತಕಾಲಮ್ ॥ ೪೭ ॥

ಆಗ ಕುರುಗಳು ಓಡುತ್ತಿರಲು, ಅಶ್ವಗಳು ಮೃತವಾದ ರಥದಿಂದ ಇಳಿದು ಮನಸ್ಸಿನಲ್ಲೇ ಚಿಂತಿಸುತ್ತಾ, ತನ್ನ ದಿವ್ಯಾಸ್ತ್ರಗಳು ಘಟೋತ್ಕಚನ ಮಾಯೆಯಿಂದ ನಾಶಗೊಳಿಸಲ್ಪಡುತ್ತಿರಲು ಆ ಪರಿಸ್ಥಿತಿಯಲ್ಲಿ ಮಾಡಬೇಕಾದ ಕಾರ್ಯವನ್ನು ಕುರಿತು ಮೋಹಗೊಳ್ಳದೆ ಕರ್ಣನು ಯೋಚಿಸಿದನು.

ತತೋಽಬ್ರುವನ್ ಕುರವಃ ಸರ್ವ ಏವ
ಕರ್ಣಂ ದೃಷ್ಟ್ವಾ ಘೋರರೂಪಾಂ ಚ ಮಾಯಾಮ್ ।
ಶಕ್ಯಾ ರಕ್ಷೋ ಜಹಿ ಕರ್ಣಾದ್ಯ ತೂರ್ಣಂ
ನಶ್ಯಂತ್ಯೇತೇ ಕುರವೋ ಧಾರ್ತರಾಷ್ಟ್ರಾಃ ॥ ೪೮ ॥

ಆಗ ಕುರುಗಳೆಲ್ಲರೂ ಕರ್ಣನನ್ನು ಮತ್ತು ಘೋರವಾದ ಘಟೋತ್ಕಚನ ಮಾಯೆಯನ್ನು ನೋಡಿ, ಎಲೈ ಕರ್ಣನೇ, ಈ ದಿನ ಶೀಘ್ರವಾಗಿ ಶಕ್ತ್ಯಾಯುಧದಿಂದ ರಾಕ್ಷಸನನ್ನು ಕೊಲ್ಲು, ಈ ಧೃತರಾಷ್ಟ್ರ ಪುತ್ರರು ನಾಶವನ್ನು ಹೊಂದುತ್ತಿದ್ದಾರೆ ಎಂದು ಹೇಳಿದರು.

ಕರಿಷ್ಯತಃ ಕಿಂ ಚ ನೋ ಭೀಮಪಾರ್ಥೌ
ತಪಂತಮೇನಂ ಜಹಿ ರಕ್ಷೋ ನಿಶೀಥೇ ।
ಯೋ ನಃ ಸಂಗ್ರಾಮಾದ್ ಘೋರರೂಪಾದ್ ವಿಮುಚ್ಯೇತ್
ಸ ನಃ ಪಾರ್ಥಾನ್ ಸಮರೇ ಯೋಧಯೇತ ॥ ೪೯ ॥

ಭೀಮಾರ್ಜುನರು ನಮಗೆ ಏನು ಮಾಡುವರು? ಈಗ ರಾತ್ರಿಯಲ್ಲಿ ನಮ್ಮನ್ನು ದಹಿಸುತ್ತಿರುವ ಈ ರಾಕ್ಷಸನನ್ನು ಕೊಲ್ಲು. ಈ ಘೋರವಾದ ಸಂಗ್ರಾಮದಲ್ಲಿ ನಮ್ಮಲ್ಲಿ ಯಾವನು ಉಳಿಯುವನೋ ಅವನು ಅನಂತರ ಪಾರ್ಥರ ಜೊತೆಯಲ್ಲಿ ಯುದ್ಧವನ್ನು ಮಾಡಿಯಾನು.

ತಸ್ಮಾದೇನಂ ರಾಕ್ಷಸಂ ಘೋರರೂಪಂ
ಜಹಿ ಶಕ್ತ್ಯಾ ದತ್ತಯಾ ವಾಸವೇನ ।
ಮಾ ಕೌರವಾಃ ಸರ್ವ ಏವೇಂದ್ರಕಲ್ಪಾ
ರಾತ್ರೀಮುಖೇ ಕರ್ಣ ನೇಶುಃ ಸಯೋಧಾಃ ॥ ೫೦ ॥

ಆದ್ದರಿಂದ ಇಂದ್ರನು ಕೊಟ್ಟ ಶಕ್ತಿಯಿಂದ ಈ ಘೋರರೂಪನಾದ ರಾಕ್ಷಸನನ್ನು ಕೊಲ್ಲು. ಎಲೈ ಕರ್ಣನೇ, ಈ ರಾತ್ರಿಯಲ್ಲಿಯೇ ಇಂದ್ರಕಲ್ಪರಾದ ಎಲ್ಲ ಕೌರವರೂ ಮತ್ತು ಅವರ ಯೋಧರೂ ನಾಶಹೊಂದದಿರಲಿ (ಎಂದು ಹೇಳಿದರು).

ಸ ವಧ್ಯಮಾನೋ ರಕ್ಷಸಾ ವೈ ನಿಶೀಥೇ
ದೃಷ್ಟ್ವಾ ರಾಜನ್ ನಶ್ಯಮಾನಂ ಬಲಂ ಚ ।
ಮಹಚ್ಚ ಶ್ರುತ್ವಾ ನಿನದಂ ಕೌರವಾಣಾಂ
ಮತಿಂ ದಧ್ರೇ ಶಕ್ತಿಮೋಕ್ಷಾಯ ಕರ್ಣಃ ॥ ೫೧ ॥

ಎಲೈ ರಾಜನೇ, ಕರ್ಣನು ರಾಕ್ಷಸೇಂದ್ರನಿಂದ ತಾನೂ ಹೊಡೆಯಲ್ಪಟ್ಟು ನಾಶ ಹೊಂದುತ್ತಿರುವ ಸೈನ್ಯವನ್ನು ನೋಡಿ, ಕೌರವರ ಮಹಾನಾದವನ್ನೂ ಕೇಳಿ ಶಕ್ತ್ಯಾಯುಧವನ್ನು ಪ್ರಯೋಗಿಸಲು ಮನಸ್ಸಿನಲ್ಲಿ ನಿರ್ಧರಿಸಿದನು.

ಸ ವೈ ಕ್ರುದ್ಧಃ ಸಿಂಹ ಇವಾತ್ಯಮರ್ಷೀ
ನಾಮರ್ಷಯತ್ ಪ್ರತಿಘಾತಂ ರಣೇ ತಮ್ ।
ಶಕ್ತಿಂ ಶ್ರೇಷ್ಠಾಂ ವೈಜಯಂತೀಮಸಹ್ಯಾಂ
ಸಮಾದದೇ ತಸ್ಯ ವಧಂ ಚಿಕೀರ್ಷನ್ ॥ ೫೨ ॥

ಕೋಪಗೊಂಡ ಸಿಂಹದಂತೆ ರೋಷವಶನಾದ ಕರ್ಣನು ಶತ್ರುಗಳಿಂದ ರಣರಂಗದಲ್ಲಿ ಉಂಟಾದ ಆ ಪ್ರತಿಘಾತವನ್ನು ಸಹಿಸದೆ ರಾಕ್ಷಸನ ವಧೆಯನ್ನು ಮಾಡಲು ಬಯಸಿ, ಸಹಿಸಲು ಅಸಾಧ್ಯವಾದ ಮತ್ತು ಶ್ರೇಷ್ಠವಾದ ವೈಜಯಂತೀ ಎಂಬ ಆ ಶಕ್ತಿಯನ್ನು ಕೈಯಲ್ಲಿ ತೆಗೆದುಕೊಂಡನು.

ಯಾಽಸೌ ರಾಜನ್ ನಿಹಿತಾ ವರ್ಷಪೂಗಾನ್
ವಧಾಯಾಜೌ ಸತೃತಾ ಫಲ್ಗುನಸ್ಯ ।
ಯಾಂ ವೈ ಪ್ರಾದಾತ್ ಸೂತಪುತ್ರಾಯ ಶಕ್ರಃ
ಶಕ್ತಿಂ ಶ್ರೇಷ್ಠಾಂ ಕುಂಡಲಾಭ್ಯಾಂ ನಿಮಾಯ ॥ ೫೩ ॥

ಎಲೈ ರಾಜನೇ, ಅನೇಕ ವರ್ಷಗಳವರೆಗೆ ಯುದ್ಧದಲ್ಲಿ ಅರ್ಜುನನ ವಧೆಗಾಗಿ ಯಾವ ಶಕ್ತಿಯು ಪೂಜಿಸಲ್ಪಟ್ಟಿದ್ದಿತೋ, ಯಾವ ಶ್ರೇಷ್ಠವಾದ ಶಕ್ತಿಯನ್ನು ಇಂದ್ರನು ಕರ್ಣನಿಗೆ ಕುಂಡಲಗಳನ್ನು ವಿನಿಮಯ ಮಾಡಿಕೊಂಡು ಕೊಟ್ಟಿದ್ದನೋ (ಆ ಶಕ್ತಿಯನ್ನು ಕರ್ಣನು ಕೈಯಲ್ಲಿ ತೆಗೆದುಕೊಂಡನು).

ತಾಂ ವೈ ಶಕ್ತಿಂ ಲೇಲಿಹಾನಾಂ ಪ್ರದೀಪ್ತಾಂ
ಪಾಶೈರ್ಯುಕ್ತಾಮಂತಕಸ್ಯೇವ ರಾತ್ರಿಮ್ ।
ಮೃತ್ಯೋಃ ಸ್ವಸಾರಂ ಜ್ವಲಿತಾಮಿವೋಲ್ಕಾಂ
ವೈಕರ್ತನಃ ಪ್ರಾಹಿಣೋದ್ ರಾಕ್ಷಸಾಯ ॥ ೫೪ ॥

ಪ್ರದೀಪ್ತವಾದ ಜ್ವಾಲೆಗಳನ್ನು ಸೂಸುತ್ತಿದ್ದ, ಪಾಶಗಳನ್ನು ಹೊಂದಿದ್ದ, ಅಂತಕನ ರಾತ್ರಿಯಂತಿದ್ದ, ಮೃತ್ಯುವಿನ ತಂಗಿಯಂತಿದ್ದ, ಜ್ವಲಿಸುವ ಉಲ್ಕೆಯಂತಿದ್ದ ಆ ಶಕ್ತಿಯನ್ನು ಕರ್ಣನು ಘಟೋತ್ಕಚನ ಮೇಲೆ ಎಸೆದನು.

ತಾಮುತ್ತಮಾಂ ಪರಕಾಯಾಪಹಂತ್ರೀಂ
ದೃಷ್ಟ್ವಾ ಸೌತೇರ್ಬಾಹುಸಂಸ್ಥಾಂ ಜ್ವಲಂತೀಮ್ ।
ಭೀತಂ ರಕ್ಷೋ ವಿಪ್ರದುದ್ರಾವ ರಾಜನ್
ಕೃತ್ವಾತ್ಮಾನಂ ವಿಂಧ್ಯಪಾದಪ್ರಮಾಣಮ್ ॥ ೫೫ ॥

ಎಲೈ ರಾಜನೇ, ಉತ್ತಮವಾದ ಪರಕಾಯವನ್ನು ನಾಶಮಾಡುವ ಜ್ವಲಿಸುವ ಆ ಶಕ್ತಿಯು ಕರ್ಣನ ಕೈಯಲ್ಲಿ ಇದ್ದುದನ್ನು ನೋಡಿ ಭಯಗೊಂಡ ಘಟೋತ್ಕಚನು ತನ್ನನ್ನು ವಿಂಧ್ಯಪರ್ವತದಷ್ಟು ದೊಡ್ಡ ಪ್ರಮಾಣವುಳ್ಳವನಾಗಿ ಮಾಡಿಕೊಂಡು ಓಡಿದನು.

ದೃಷ್ಟ್ವಾ ಶಕ್ತಿಂ ಕರ್ಣಬಾಹ್ವಂತರಸ್ಥಾಂ
ನೇದುರ್ಭೂತಾನ್ಯಂತರಿಕ್ಷೇ ನರೇಂದ್ರ ।
ವವುರ್ವಾತಾಸ್ತುಮುಲಾಶ್ಚಾಪಿ ರಾಜನ್
ಸನಿರ್ಘಾತಾ ಚಾಶನಿರ್ಗಾಂ ಜಗಾಮ ॥ ೫೬ ॥

ಎಲೈ ರಾಜನೇ, ಕರ್ಣನ ಬಾಹುಗಳಲ್ಲಿದ್ದ ಆ ಶಕ್ತಿಯನ್ನು ನೋಡಿ ಅಂತರಿಕ್ಷದಲ್ಲಿದ್ದ ಭೂತಗಳು ಘೋರವಾದ ನಾದವನ್ನು ಮಾಡಿದವು. ಎಲೈ ರಾಜನೇ, ತೀವ್ರವಾದ ವಾಯುವು ಬೀಸಿತು. ಭೂಮಿಯಲ್ಲಿ ದೊಡ್ಡ ಶಬ್ದದಿಂದ ಕೂಡಿದ ಸಿಡಿಲುಗಳು ಬಿದ್ದವು.

ಸಾ ತಾಂ ಮಾಯಾಂ ಭಸ್ಮ ಕೃತ್ವಾ ಜ್ವಲಂತೀ
ಭಿತ್ತ್ವಾ ಗಾಢಂ ಹೃದಯಂ ರಾಕ್ಷಸಸ್ಯ ।
ಊರ್ಧ್ವಂ ಯಯೌ ದೀಪ್ಯಮಾನಾ ನಿಶಾಯಾಂ
ನಕ್ಷತ್ರಾಣಾಮಂತರಾಣ್ಯಾವಿಶಂತೀ ॥ ೫೭ ॥

ಜ್ವಲಿಸುವ ಆ ಶಕ್ತಿಯು ಘಟೋತ್ಕಚನ ಮಾಯೆಯನ್ನು ಭಸ್ಮಮಾಡಿ ರಾಕ್ಷಸನಾದ ಅವನ ಹೃದಯವನ್ನು ಗಾಢವಾಗಿ ಭೇದಿಸಿ, ಆ ರಾತ್ರಿಯಲ್ಲಿ ನಕ್ಷತ್ರಗಳ ಮಾರ್ಗದಿಂದ ಜ್ವಲಿಸುತ್ತಾ ಊರ್ಧ್ವಮುಖವಾಗಿ ಹೊರಟು ಹೋಯಿತು.

ಯುದ್ಧ್ವಾ ಚಿತ್ರೈರ್ವಿವಿಧೈಃ ಶಸ್ತ್ರಪೂಗೈ-
ರ್ದಿವ್ಯೈರ್ವೀರೋ ಮಾನುಷೈ ರಾಕ್ಷಸೈಶ್ಚ ।
ಕೃತ್ವಾ ನಾದಾನ್ ವಿವಿಧಾನ್ ಭೈರವಾಂಶ್ಚ
ಪ್ರಾಣಾನಿಷ್ಟಾಂಸ್ಯಾಜಿತಃ ಶಕ್ರಶಕ್ಯಾ ॥ ೫೮ ॥

ವೀರನಾದ ಘಟೋತ್ಕಚನು ವಿವಿಧವಾದ ಮತ್ತು ವಿಚಿತ್ರವಾದ ಶಸ್ತ್ರಗಳಿಂದಲೂ, ಮನುಷ್ಯರ ಮತ್ತು ರಾಕ್ಷಸರ ದಿವ್ಯಾಸ್ತ್ರಗಳಿಂದಲೂ ಯುದ್ಧವನ್ನು ಮಾಡಿ, ವಿವಿಧವಾದ ಭೈರವನಾದಗಳನ್ನು ಮಾಡುತ್ತಾ ಇಂದ್ರನ ಶಕ್ತಿಯಿಂದ ಕರ್ಣನಿಂದ ಪ್ರಾಣಗಳನ್ನು ಬಿಡುವಂತೆ ಮಾಡಲ್ಪಟ್ಟನು.

ಇದಂ ಚಾನ್ಯಚ್ಚಿತ್ರಮಾಶ್ಚರ್ಯರೂಪಂ
ಚಕಾರಾಸೌ ಕರ್ಮ ಶತ್ರುಕ್ಷಯಾಯ ।
ತಸ್ಮಿನ್ ಕಾಲೇ ಶಕ್ತಿನಿರ್ಭಿನ್ನಮರ್ಮಾ
ಬಭೌ ರಾಜನ್ ಮೇಘಶೈಲಪ್ರಕಾಶಃ ॥ ೫೯ ॥

ಎಲೈ ರಾಜನೇ, ಆ ಕಾಲದಲ್ಲಿ ಶಕ್ತಿಯಿಂದ ಭೇದಿಸಲ್ಪಟ್ಟ ಮರ್ಮಸ್ಥಾನಗಳುಳ್ಳ ಮೋಡದ ಪರ್ವತದಂತಹ ಕಾಂತಿಯುಳ್ಳ ಅವನು ಶತ್ರುಕ್ಷಯವನ್ನು ಮಾಡಲು ಇದೊಂದು ಆಶ್ಚರ್ಯಕರವಾದ ಕರ್ಮವನ್ನು ಮಾಡಿದನು.

ತತೋಽಂತರಿಕ್ಷಾದಪತದ್ ಗತಾಸುಃ
ಸ ರಾಕ್ಷಸೇಂದ್ರೋ ಭುವಿ ಭಿನ್ನದೇಹಃ ।
ಅವಾಕ್ಶಿರಾಃ ಸ್ತಬ್ಧಗಾತ್ರೋ ವಿಜಿಹ್ವೋ
ಘಟೋತ್ಕಚೋ ಮಹದಾಸ್ಥಾಯ ರೂಪಮ್ ॥ ೬೦ ॥

ದೊಡ್ಡ ರೂಪವನ್ನು ತೆಗೆದುಕೊಂಡ ರಾಕ್ಷಸೇಂದ್ರನಾದ ಘಟೋತ್ಕಚನು ದೇಹವು ಭಿನ್ನವಾಗಿ ನಿಶ್ಚೇಷ್ಟವಾಗಿ, ಜಿಹ್ವಾಹೀನನಾಗಿ, ತಲೆಕೆಳಗಾಗಿ ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದನು.

ಸ ತದ್ರೂಪಂ ಭೈರವಂ ಭೀಮಕರ್ಮಾ
ಭೀಮಂ ಕೃತ್ವಾ ಭೈಮಸೇನಿಃ ಪಪಾತ ।
ಹತೋಽಪ್ಯೇವಂ ತವ ಸೈನ್ಯೈಕದೇಶ-
ಮಪೋಥಯತ್ ಕೌರವಾನ್ ಭೀಷಯಾಣಃ ॥ ೬೧ ॥

ಭಯಂಕರವಾದ ಕರ್ಮವನ್ನು ಮಾಡಿ ಭೀಮಸೇನನ ಪುತ್ರನಾದ ಘಟೋತ್ಕಚನು ಘೋರವಾದ ರೂಪವನ್ನು ತಾಳಿ ಭೂಮಿಯ ಮೇಲೆ ಬಿದ್ದನು. ಮೃತನಾದರೂ ಬೀಳುತ್ತಾ ಕೌರವರಿಗೆ ಭಯವನ್ನುಂಟು ಮಾಡುತ್ತಾ ಸೈನ್ಯದ ಒಂದು ಭಾಗವನ್ನು ಚೂರ್ಣಗೊಳಿಸಿದನು.

ತತೋ ಮಿಶ್ರಾಃ ಪ್ರಾಣದನ್ ಸಿಂಹನಾದ್ಯೈ-
ರ್ಭೇರ್ಯಃ ಶಂಖಾ ಮುರಜಾಶ್ಚಾನಕಾಶ್ಚ ।
ದಗ್ಧಾಂ ಮಾಯಾಂ ನಿಹತಂ ರಾಕ್ಷಸಂ ಚ
ದೃಷ್ಟ್ವಾ ಹೃಷ್ಟಾಃ ಪ್ರಾಣದನ್ ಕೌರವೇಯಾಃ ॥ ೬೨ ॥

ಆಗ ಸಿಂಹನಾದಗಳಿಂದ ಮಿಶ್ರಿತವಾದ ಭೇರಿಗಳ, ಶಂಖಗಳ, ಮುರಜಗಳ ನಾದಗಳು ಮೊಳಗಿದವು. ರಾಕ್ಷಸನಾದ ಘಟೋತ್ಕಚನ ಮಾಯೆಯು ದಗ್ಧವಾದುದನ್ನೂ, ರಾಕ್ಷಸನು ಹತನಾದುದನ್ನೂ ನೋಡಿ ಕೌರವ ಸೇನೆಯ ಯೋಧರು ಸಂತೋಷದಿಂದ ನಾದವನ್ನು ಮಾಡಿದರು.

ತತಃ ಕರ್ಣಃ ಕುರುಭಿಃ ಪೂಜ್ಯಮಾನೋ
ಯಥಾ ಶಕ್ರೋ ವೃತ್ರವಧೇ ಮರುದ್ಭಿಃ ।
ಅನ್ವಾರೂಢಸ್ತವ ಪುತ್ರಂ ರಥಸ್ಥಂ
ಹೃಷ್ಟಶ್ಚಾಪಿ ಪ್ರಾವಿಶತ್ ಸ್ವಂ ಸ ಸೈನ್ಯಮ್ ॥ ೬೩ ॥

ಆಗ ವೃತ್ರವಧೆಯು ಉಂಟಾದಾಗ ಮರುತ್ತುಗಳು ಇಂದ್ರನನ್ನು ಪೂಜಿಸಿದಂತೆ ಕರ್ಣನು ಕೌರವರಿಂದ ಪೂಜಿಸಲ್ಪಟ್ಟು, ನಿನ್ನ ಪುತ್ರನ ರಥವನ್ನು ತನ್ನ ರಥದಲ್ಲಿ ಹಿಂಬಾಲಿಸಿ, ಸಂತೋಷದಿಂದ ಕೂಡಿದವನಾಗಿ ತನ್ನ ಸೈನ್ಯವನ್ನು ಪ್ರವೇಶಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

॥ ಘಟೋತ್ಕಚವಧಪರ್ವವು ಮುಗಿಯಿತು ॥

★ ★ ★ ★ ★

ಯುದ್ಧ್ವಾ ಚಿತ್ರೈರ್ವಿವಿಧೈಃ ಶಸ್ತ್ರಪೂಗೈ-
ರ್ದಿವ್ಯೈರ್ವೀರೋ ಮಾನುಷೈ ರಾಕ್ಷಸೈಶ್ಚ ।
ಕೃತ್ವಾ ನಾದಾನ್ ವಿವಿಧಾನ್ ಭೈರವಾಂಶ್ಚ
ಪ್ರಾಣಾನಿಷ್ಟಾಂಸ್ಯಾಜಿತಃ ಶಕ್ರಶಕ್ತ್ಯಾ ॥ ೫೮ ॥

ವೀರನಾದ ಘಟೋತ್ಕಚನು ವಿವಿಧವಾದ ಮತ್ತು ವಿಚಿತ್ರವಾದ ಶಸ್ತ್ರಗಳಿಂದಲೂ, ಮನುಷ್ಯರ ಮತ್ತು ರಾಕ್ಷಸರ ದಿವ್ಯಾಸ್ತ್ರಗಳಿಂದಲೂ ಯುದ್ಧವನ್ನು ಮಾಡಿ, ವಿವಿಧವಾದ ಭೈರವನಾದಗಳನ್ನು ಮಾಡುತ್ತಾ ಇಂದ್ರನ ಶಕ್ತಿಯಿಂದ ಕರ್ಣನಿಂದ ಪ್ರಾಣಗಳನ್ನು ಬಿಡುವಂತೆ ಮಾಡಲ್ಪಟ್ಟನು.

ಇದಂ ಚಾನ್ಯಚ್ಚಿತ್ರಮಾಶ್ಚರ್ಯರೂಪಂ
ಚಕಾರಾಸೌ ಕರ್ಮ ಶತ್ರುಕ್ಷಯಾಯ ।
ತಸ್ಮಿನ್ ಕಾಲೇ ಶಕ್ತಿನಿರ್ಭಿನ್ನಮರ್ಮಾ
ಬಭೌ ರಾಜನ್ ಮೇಘಶೈಲಪ್ರಕಾಶಃ ॥ ೫೯ ॥

ಎಲೈ ರಾಜನೇ, ಆ ಕಾಲದಲ್ಲಿ ಶಕ್ತಿಯಿಂದ ಭೇದಿಸಲ್ಪಟ್ಟ ಮರ್ಮಸ್ಥಾನಗಳುಳ್ಳ ಮೋಡದ ಪರ್ವತದಂತಹ ಕಾಂತಿಯುಳ್ಳ ಅವನು ಶತ್ರುಕ್ಷಯವನ್ನು ಮಾಡಲು ಇದೊಂದು ಆಶ್ಚರ್ಯಕರವಾದ ಕರ್ಮವನ್ನು ಮಾಡಿದನು.

ತತೋಽಂತರಿಕ್ಷಾದಪತದ್ ಗತಾಸುಃ
ಸ ರಾಕ್ಷಸೇಂದ್ರೋ ಭುವಿ ಭಿನ್ನದೇಹಃ ।
ಅವಾಕ್ಕರಾಃ ಸ್ತಬ್ಧಗಾತ್ರೋ ವಿಜಿಹ್ವೋ
ಘಟೋತ್ಕಚೋ ಮಹದಾಸ್ಥಾಯ ರೂಪಮ್ ॥ ೬೦ ॥

ದೊಡ್ಡ ರೂಪವನ್ನು ತೆಗೆದುಕೊಂಡ ರಾಕ್ಷಸೇಂದ್ರನಾದ ಘಟೋತ್ಕಚನು ದೇಹವು ಭಿನ್ನವಾಗಿ ನಿಶ್ಚೇಷ್ಟವಾಗಿ, ಜಿಹ್ವಾಹೀನನಾಗಿ, ತಲೆಕೆಳಗಾಗಿ ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದನು.

ಸ ತದ್ರೂಪಂ ಭೈರವಂ ಭೀಮಕರ್ಮಾ
ಭೀಮಂ ಕೃತ್ವಾ ಭೈಮಸೇನಿಃ ಪಪಾತ ।
ಹತೋಽಪ್ಯೇವಂ ತವ ಸೈನ್ಯೈಕದೇಶ-
ಮಪೋಥಯತ್ ಕೌರವಾನ್ ಭೀಷಯಾಣಃ ॥ ೬೧ ॥

ಭಯಂಕರವಾದ ಕರ್ಮವನ್ನು ಮಾಡಿ ಭೀಮಸೇನನ ಪುತ್ರನಾದ ಘಟೋತ್ಕಚನು ಘೋರವಾದ ರೂಪವನ್ನು ತಾಳಿ ಭೂಮಿಯ ಮೇಲೆ ಬಿದ್ದನು. ಮೃತನಾದರೂ ಬೀಳುತ್ತಾ ಕೌರವರಿಗೆ ಭಯವನ್ನುಂಟು ಮಾಡುತ್ತಾ ಸೈನ್ಯದ ಒಂದು ಭಾಗವನ್ನು ಚೂರ್ಣಗೊಳಿಸಿದನು.

ತತೋ ಮಿಶ್ರಾಃ ಪ್ರಾಣದನ್ ಸಿಂಹನಾದ್ಯೈ-
ರ್ಭೇರ್ಯಃ ಶಂಖಾ ಮುರಜಾಶ್ಚಾನಕಾಶ್ಚ ।
ದಗ್ಧಾಂ ಮಾಯಾಂ ನಿಹತಂ ರಾಕ್ಷಸಂ ಚ
ದೃಷ್ಟ್ವಾ ಹೃಷ್ಟಾಃ ಪ್ರಾಣದನ್ ಕೌರವೇಯಾಃ ॥ ೬೨ ॥

ಆಗ ಸಿಂಹನಾದಗಳಿಂದ ಮಿಶ್ರಿತವಾದ ಭೇರಿಗಳ, ಶಂಖಗಳ, ಮುರಜಗಳ ನಾದಗಳು ಮೊಳಗಿದವು. ರಾಕ್ಷಸನಾದ ಘಟೋತ್ಕಚನ ಮಾಯೆಯು ದಗ್ಧವಾದುದನ್ನೂ, ರಾಕ್ಷಸನು ಹತನಾದುದನ್ನೂ ನೋಡಿ ಕೌರವ ಸೇನೆಯ ಯೋಧರು ಸಂತೋಷದಿಂದ ನಾದವನ್ನು ಮಾಡಿದರು.

ತತಃ ಕರ್ಣಃ ಕುರುಭಿಃ ಪೂಜ್ಯಮಾನೋ
ಯಥಾ ಶಕ್ರೋ ವೃತ್ರವಧೇ ಮರುದ್ಭಿಃ ।
ಅನ್ವಾರೂಢಸ್ತವ ಪುತ್ರಂ ರಥಸ್ಥಂ
ಹೃಷ್ಟಶ್ಚಾಪಿ ಪ್ರಾವಿಶತ್ ಸ್ವಂ ಸ ಸೈನ್ಯಮ್ ॥ ೬೩ ॥

ಆಗ ವೃತ್ರವಧೆಯು ಉಂಟಾದಾಗ ಮರುತ್ತುಗಳು ಇಂದ್ರನನ್ನು ಪೂಜಿಸಿದಂತೆ ಕರ್ಣನು ಕೌರವರಿಂದ ಪೂಜಿಸಲ್ಪಟ್ಟು, ನಿನ್ನ ಪುತ್ರನ ರಥವನ್ನು ತನ್ನ ರಥದಲ್ಲಿ ಹಿಂಬಾಲಿಸಿ, ಸಂತೋಷದಿಂದ ಕೂಡಿದವನಾಗಿ ತನ್ನ ಸೈನ್ಯವನ್ನು ಪ್ರವೇಶಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

॥ ಘಟೋತ್ಕಚವಧಪರ್ವವು ಮುಗಿಯಿತು ॥

★ ★ ★ ★ ★

ಯುದ್ಧ್ವಾ ಚಿತ್ರೈರ್ವಿವಿಧೈಃ ಶಸ್ತ್ರಪೂಗೈ-
ರ್ದಿವ್ಯೈರ್ವೀರೋ ಮಾನುಷೈ ರಾಕ್ಷಸೈಶ್ಚ ।
ಕೃತ್ವಾ ನಾದಾನ್ ವಿವಿಧಾನ್ ಭೈರವಾಂಶ್ಚ
ಪ್ರಾಣಾನಿಷ್ಟಾಂಸ್ಯಾಜಿತಃ ಶಕ್ರಶಕ್ತ್ಯಾ ॥ ೫೮ ॥

ವೀರನಾದ ಘಟೋತ್ಕಚನು ವಿವಿಧವಾದ ಮತ್ತು ವಿಚಿತ್ರವಾದ ಶಸ್ತ್ರಗಳಿಂದಲೂ, ಮನುಷ್ಯರ ಮತ್ತು ರಾಕ್ಷಸರ ದಿವ್ಯಾಸ್ತ್ರಗಳಿಂದಲೂ ಯುದ್ಧವನ್ನು ಮಾಡಿ, ವಿವಿಧವಾದ ಭೈರವನಾದಗಳನ್ನು ಮಾಡುತ್ತಾ ಇಂದ್ರನ ಶಕ್ತಿಯಿಂದ ಕರ್ಣನಿಂದ ಪ್ರಾಣಗಳನ್ನು ಬಿಡುವಂತೆ ಮಾಡಲ್ಪಟ್ಟನು.

ಇದಂ ಚಾನ್ಯಚ್ಚಿತ್ರಮಾಶ್ಚರ್ಯರೂಪಂ
ಚಕಾರಾಸೌ ಕರ್ಮ ಶತ್ರುಕ್ಷಯಾಯ ।
ತಸ್ಮಿನ್ ಕಾಲೇ ಶಕ್ತಿನಿರ್ಭಿನ್ನಮರ್ಮಾ
ಬಭೌ ರಾಜನ್ ಮೇಘಶೈಲಪ್ರಕಾಶಃ ॥ ೫೯ ॥

ಎಲೈ ರಾಜನೇ, ಆ ಕಾಲದಲ್ಲಿ ಶಕ್ತಿಯಿಂದ ಭೇದಿಸಲ್ಪಟ್ಟ ಮರ್ಮಸ್ಥಾನಗಳುಳ್ಳ ಮೋಡದ ಪರ್ವತದಂತಹ ಕಾಂತಿಯುಳ್ಳ ಅವನು ಶತ್ರುಕ್ಷಯವನ್ನು ಮಾಡಲು ಇದೊಂದು ಆಶ್ಚರ್ಯಕರವಾದ ಕರ್ಮವನ್ನು ಮಾಡಿದನು.

ತತೋಽಂತರಿಕ್ಷಾದಪತದ್ ಗತಾಸುಃ
ಸ ರಾಕ್ಷಸೇಂದ್ರೋ ಭುವಿ ಭಿನ್ನದೇಹಃ ।
ಅವಾಕ್ಶಿರಾಃ ಸ್ತಬ್ಧಗಾತ್ರೋ ವಿಜಿಹ್ವೋ
ಘಟೋತ್ಕಚೋ ಮಹದಾಸ್ಥಾಯ ರೂಪಮ್ ॥ ೬೦ ॥

ದೊಡ್ಡ ರೂಪವನ್ನು ತೆಗೆದುಕೊಂಡ ರಾಕ್ಷಸೇಂದ್ರನಾದ ಘಟೋತ್ಕಚನು ದೇಹವು ಭಿನ್ನವಾಗಿ ನಿಶ್ಚೇಷ್ಟವಾಗಿ, ಜಿಹ್ವಾಹೀನನಾಗಿ, ತಲೆಕೆಳಗಾಗಿ ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದನು.

ಸ ತದ್ರೂಪಂ ಭೈರವಂ ಭೀಮಕರ್ಮಾ
ಭೀಮಂ ಕೃತ್ವಾ ಭೈಮಸೇನಿಃ ಪಪಾತ ।
ಹತೋಽಪ್ಯೇವಂ ತವ ಸೈನ್ಯೈಕದೇಶ-
ಮಪೋಥಯತ್ ಕೌರವಾನ್ ಭೀಷಯಾಣಃ ॥ ೬೧ ॥

ಭಯಂಕರವಾದ ಕರ್ಮವನ್ನು ಮಾಡಿ ಭೀಮಸೇನನ ಪುತ್ರನಾದ ಘಟೋತ್ಕಚನು ಘೋರವಾದ ರೂಪವನ್ನು ತಾಳಿ ಭೂಮಿಯ ಮೇಲೆ ಬಿದ್ದನು. ಮೃತನಾದರೂ ಬೀಳುತ್ತಾ ಕೌರವರಿಗೆ ಭಯವನ್ನುಂಟು ಮಾಡುತ್ತಾ ಸೈನ್ಯದ ಒಂದು ಭಾಗವನ್ನು ಚೂರ್ಣಗೊಳಿಸಿದನು.

ತತೋ ಮಿಶ್ರಾಃ ಪ್ರಾಣದನ್ ಸಿಂಹನಾದ್ಯೈ-
ರ್ಭೇರ್ಯಃ ಶಂಖಾ ಮುರಜಾಶ್ಚಾನಕಾಶ್ಚ ।
ದಗ್ಧಾಂ ಮಾಯಾಂ ನಿಹತಂ ರಾಕ್ಷಸಂ ಚ
ದೃಷ್ಟ್ವಾ ಹೃಷ್ಟಾಃ ಪ್ರಾಣದನ್ ಕೌರವೇಯಾಃ ॥ ೬೨ ॥

ಆಗ ಸಿಂಹನಾದಗಳಿಂದ ಮಿಶ್ರಿತವಾದ ಭೇರಿಗಳ, ಶಂಖಗಳ, ಮುರಜಗಳ ನಾದಗಳು ಮೊಳಗಿದವು. ರಾಕ್ಷಸನಾದ ಘಟೋತ್ಕಚನ ಮಾಯೆಯು ದಗ್ಧವಾದುದನ್ನೂ, ರಾಕ್ಷಸನು ಹತನಾದುದನ್ನೂ ನೋಡಿ ಕೌರವ ಸೇನೆಯ ಯೋಧರು ಸಂತೋಷದಿಂದ ನಾದವನ್ನು ಮಾಡಿದರು.

ತತಃ ಕರ್ಣಃ ಕುರುಭಿಃ ಪೂಜ್ಯಮಾನೋ
ಯಥಾ ಶಕ್ರೋ ವೃತ್ರವಧೇ ಮರುದ್ಭಿಃ ।
ಅನ್ವಾರೂಢಸ್ತವ ಪುತ್ರಂ ರಥಸ್ಥಂ
ಹೃಷ್ಟಶ್ಚಾಪಿ ಪ್ರಾವಿಶತ್ ಸ್ವಂ ಸ ಸೈನ್ಯಮ್ ॥ ೬೩ ॥

ಆಗ ವೃತ್ರವಧೆಯು ಉಂಟಾದಾಗ ಮರುತ್ತುಗಳು ಇಂದ್ರನನ್ನು ಪೂಜಿಸಿದಂತೆ ಕರ್ಣನು ಕೌರವರಿಂದ ಪೂಜಿಸಲ್ಪಟ್ಟು, ನಿನ್ನ ಪುತ್ರನ ರಥವನ್ನು ತನ್ನ ರಥದಲ್ಲಿ ಹಿಂಬಾಲಿಸಿ, ಸಂತೋಷದಿಂದ ಕೂಡಿದವನಾಗಿ ತನ್ನ ಸೈನ್ಯವನ್ನು ಪ್ರವೇಶಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ಘಟೋತ್ಕಚವಧಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

॥ ಘಟೋತ್ಕಚವಧಪರ್ವವು ಮುಗಿಯಿತು ॥

★ ★ ★ ★ ★

೭. ದ್ರೋಣವಧಪರ್ವ

ನೂರ ಅರವತ್ತಾರನೆಯ ಅಧ್ಯಾಯ

ಘಟೋತ್ಕಚನಿಧನದಿಂದ ಪಾಂಡವರು ಶೋಕಪಡುತ್ತಿರುವಾಗ ಕೃಷ್ಣನ ಹರ್ಷ. ಅರ್ಜುನನಿಗೆ ಅದರ ಕಾರಣನಿರೂಪಣೆ.

ಧೃತರಾಷ್ಟ್ರಃ

ತಸ್ಮಿನ್ ಹತೇ ಮಹಾಮಾಯೇ ಮಹಾತೇಜಸಿ ರಾಕ್ಷಸೇ ।
ಅಮರ್ಷಿತಾ ಪಾಂಡವೇಯಾ ಕಿಮಕುರ್ವನ್ ಮಹಾರಣೇ ॥ ೧ ॥

ಧೃತರಾಷ್ಟ್ರ– ಮಹಾಮಾಯೆಗಳನ್ನು ಹೊಂದಿದ್ದ ಮಹಾತೇಜಸ್ವಿಯಾದ ರಾಕ್ಷಸನು ಆ ದೊಡ್ಡಯುದ್ಧದಲ್ಲಿ ಹತನಾಗುತ್ತಿರಲು ರೋಷಗೊಂಡ ಪಾಂಡವರು ಏನು ಮಾಡಿದರು?

ಮರ್ದಿತಾಶ್ಚ ಭೃಶಂ ಯುದ್ಧೇ ಕಿಮಕುರ್ವಂತ ಸಂಜಯ ।
ಯೇ ಚ ತೇऽಭ್ಯದ್ರವನ್ ದ್ರೋಣಂ ವ್ಯೂಢಾನೀಕಾಃ ಪ್ರಹಾರಿಣಃ ।
ಸೃಂಜಯಾ ಸಹಪಾಂಚಾಲೈಸ್ತೇऽಕುರ್ವನ್ ಕಿಂ ಮಹಾರಣೇ ॥ ೨ ॥

ಎಲೈ ಸಂಜಯನೇ, ಯುದ್ಧದಲ್ಲಿ ಚೆನ್ನಾಗಿ ಮರ್ದಿತರಾದ ನನ್ನವರಾದರೂ ಏನು ಮಾಡಿದರು? ವ್ಯೂಹವನ್ನು ಮಾಡಿ ದ್ರೋಣರನ್ನು ಎದುರಿಸಿದ ಪ್ರಹಾರಶೀಲರಾದ ಸೃಂಜಯರು ಮತ್ತು ಪಾಂಚಾಲರು ಸಹ ಮಹಾಯುದ್ಧದಲ್ಲಿ ಏನು ಮಾಡಿದರು?

ಸೌಮದತ್ತೇರ್ವಧಾದ್ ದ್ರೋಣಮಾಯತ್ತಂ ಸೈಂಧವಸ್ಯ ಚ ।
ಅಮರ್ಷಾಜ್ಜೀವಿತಂ ತ್ಯಕ್ತ್ವಾ ಗಾಹಮಾನಂ ವರೂಥಿನೀಮ್ ॥ ೩ ॥

ಜೃಂಭಮಾಣಮಿವ ವ್ಯಾಘ್ರಂ ವ್ಯಾತ್ತಾನನಮಿವಾಂತಕಮ್ ।
ಕಥಂ ಪ್ರತ್ಯುದ್ಯಯುರ್ದ್ರೋಣಮಜಯ್ಯಂ ಕುರುಸೃಂಜಯಾಃ ॥ ೪ ॥

ಭೂರಿಶ್ರವನ ವಧೆಯಿಂದಲೂ, ಸೈಂಧವನ ವಧೆಯಿಂದಲೂ ರೋಷಗೊಂಡು ಜೀವದ ಆಸೆಯನ್ನು ತೊರೆದು ಆಕಳಿಸುವ ವ್ಯಾಘ್ರದಂತೆ, ಬಾಯ್ತೆರೆದ ಯಮನಂತೆ ಪಾಂಡವರ ಸೈನ್ಯವನ್ನು ಪ್ರವೇಶಿಸುವ, ಜಯಿಸಲು ಅಸಾಧ್ಯರಾದ ದ್ರೋಣರನ್ನು ಪಾಂಡವ-ಸೃಂಜಯರು ಹೇಗೆ ಎದುರಿಸಿದರು?

ಆಚಾರ್ಯಂ ಯೇ ಚ ರಕ್ಷಂತಿ ದುರ್ಯೋಧನಪುರೋಗಮಾಃ ।
ದ್ರೌಣಿಕರ್ಣಕೃಪಾಸ್ತಾತ ತೇ ಹ್ಯಕುರ್ವನ್ ಕಿಮಾಹವೇ ॥ ೫ ॥

ಎಲೈ ಪ್ರೀತಿಪಾತ್ರನೇ, ಆಚಾರ್ಯರನ್ನು ರಕ್ಷಿಸುವ ದುರ್ಯೋಧನನೇ ಮೊದಲಾದ, ಅಶ್ವತ್ಥಾಮ-ಕರ್ಣ-ಕೃಪರು ಯುದ್ಧದಲ್ಲಿ ಏನು ಮಾಡಿದರು?

ಭಾರದ್ವಾಜಂ ಜಿಘಾಂಸಂತೌ ಸವ್ಯಸಾಚಿವೃಕೋದರೌ ।
ಆರ್ಚ್ಛತಾಂ ಮಾಮಕಾನ್ ಯುದ್ಧೇ ಕಥಂ ಸಂಜಯ ಶಂಸ ಮೇ ॥೬॥

ಎಲೈ ಸಂಜಯನೇ, ದ್ರೋಣರನ್ನು ಕೊಲ್ಲುವ ಇಚ್ಛೆಯಿಂದ ಭೀಮಾರ್ಜುನರು ಯುದ್ಧದಲ್ಲಿ ಹೇಗೆ ನನ್ನವರನ್ನು ಸಮೀಪಿಸಿದರೆಂದು ನನಗೆ ಹೇಳು.

ಸಿಂಧುರಾಜವಧೇನೇಮೇ ಘಟೋತ್ಕಚವಧೇನ ತೇ ।
ಅಮರ್ಷಿತಾಶ್ಚ ಸಂಕ್ರುದ್ಧಾ ರಣಂ ಚಕ್ರುಃ ಕಥಂ ಯುಧಿ ॥ ೭ ॥

ಸೈಂಧವನ ವಧೆಯಿಂದ ಕೋಪಗೊಂಡ ಈ ನನ್ನವರೂ, ಘಟೋತ್ಕಚನ ವಧೆಯಿಂದ ಕೋಪಗೊಂಡ ಅವರೂ ರೋಷಾವಿಷ್ಟರಾಗಿ ರಣರಂಗದಲ್ಲಿ ಹೇಗೆ ಯುದ್ಧವನ್ನು ಮಾಡಿದರು?

ಸಂಜಯಃ

ಹೈಡಿಂಬಂ ನಿಹತಂ ದೃಷ್ಟ್ವಾ ವಿಕೀರ್ಣಮಿವ ಪರ್ವತಮ್ ।
ಪಾಂಡವಾ ದೀನಮನಸಃ ಸರ್ವೇ ಬಾಷ್ಪಾಕುಲೇಕ್ಷಣಾಃ ॥ ೮ ॥

೭. ದ್ರೋಣವಧಪರ್ವ

ನೂರ ಅರವತ್ತಾರನೆಯ ಅಧ್ಯಾಯ

ಘಟೋತ್ಕಚನಿಧನದಿಂದ ಪಾಂಡವರು ಶೋಕಪಡುತ್ತಿರುವಾಗ ಕೃಷ್ಣನ ಹರ್ಷ. ಅರ್ಜುನನಿಗೆ ಅದರ ಕಾರಣನಿರೂಪಣೆ.

ಧೃತರಾಷ್ಟ್ರಃ

ತಸ್ಮಿನ್ ಹತೇ ಮಹಾಮಾಯೇ ಮಹಾತೇಜಸಿ ರಾಕ್ಷಸೇ ।
ಅಮರ್ಷಿತಾ ಪಾಂಡವೇಯಾ ಕಿಮಕುರ್ವನ್ ಮಹಾರಣೇ ॥ ೧ ॥

ಧೃತರಾಷ್ಟ್ರ– ಮಹಾಮಾಯೆಗಳನ್ನು ಹೊಂದಿದ್ದ ಮಹಾತೇಜಸ್ವಿಯಾದ ರಾಕ್ಷಸನು ಆ ದೊಡ್ಡಯುದ್ಧದಲ್ಲಿ ಹತನಾಗುತ್ತಿರಲು ರೋಷಗೊಂಡ ಪಾಂಡವರು ಏನು ಮಾಡಿದರು?

ಮರ್ದಿತಾಶ್ಚ ಭೃಶಂ ಯುದ್ಧೇ ಕಿಮಕುರ್ವಂತ ಸಂಜಯ ।
ಯೇ ಚ ತೇऽಭ್ಯದ್ರವನ್ ದ್ರೋಣಂ ವ್ಯೂಢಾನೀಕಾಃ ಪ್ರಹಾರಿಣಃ ।
ಸೃಂಜಯಾ ಸಹಪಾಂಚಾಲೈಸ್ತೇऽಕುರ್ವನ್ ಕಂ ಮಹಾರಣೇ ॥ ೨ ॥

ಎಲೈ ಸಂಜಯನೇ, ಯುದ್ಧದಲ್ಲಿ ಚೆನ್ನಾಗಿ ಮರ್ದಿತರಾದ ನನ್ನವರಾದರೂ ಏನು ಮಾಡಿದರು? ವ್ಯೂಹವನ್ನು ಮಾಡಿ ದ್ರೋಣರನ್ನು ಎದುರಿಸಿದ ಪ್ರಹಾರಶೀಲರಾದ ಸೃಂಜಯರು ಮತ್ತು ಪಾಂಚಾಲರು ಸಹ ಮಹಾಯುದ್ಧದಲ್ಲಿ ಏನು ಮಾಡಿದರು?

ಸೌಮದತ್ತೇರ್ವಧಾದ್ ದ್ರೋಣಮಾಯತ್ತಂ ಸೈಂಧವಸ್ಯ ಚ ।
ಅಮರ್ಷಾಜ್ಜೀವಿತಂ ತ್ಯಕ್ತ್ವಾ ಗಾಹಮಾನಂ ವರೂಥಿನೀಮ್ ॥ ೩ ॥

ಜೃಂಭಮಾಣಮಿವ ವ್ಯಾಘ್ರಂ ವ್ಯಾತ್ತಾನನಮಿವಾಂತಕಮ್ ।
ಕಥಂ ಪ್ರತ್ಯುದ್ಯಯುರ್ದ್ರೋಣಮಜಯ್ಯಂ ಕುರುಸೃಂಜಯಾಃ ॥ ೪ ॥

ಭೂರಿಶ್ರವನ ವಧೆಯಿಂದಲೂ, ಸೈಂಧವನ ವಧೆಯಿಂದಲೂ ರೋಷಗೊಂಡು ಜೀವದ ಆಸೆಯನ್ನು ತೊರೆದು ಆಕಳಿಸುವ ವ್ಯಾಘ್ರದಂತೆ, ಬಾಯ್ತೆರೆದ ಯಮನಂತೆ ಪಾಂಡವರ ಸೈನ್ಯವನ್ನು ಪ್ರವೇಶಿಸುವ, ಜಯಿಸಲು ಅಸಾಧ್ಯರಾದ ದ್ರೋಣರನ್ನು ಪಾಂಡವ-ಸೃಂಜಯರು ಹೇಗೆ ಎದುರಿಸಿದರು?

ಆಚಾರ್ಯಂ ಯೇ ಚ ರಕ್ಷಂತಿ ದುರ್ಯೋಧನಪುರೋಗಮಾಃ ।
ದ್ರೌಣಿಕರ್ಣಕೃಪಾಸ್ತಾತ ತೇ ಹ್ಯಕುರ್ವನ್ ಕಿಮಾಹವೇ ॥ ೫ ॥

ಎಲೈ ಪ್ರೀತಿಪಾತ್ರನೇ, ಆಚಾರ್ಯರನ್ನು ರಕ್ಷಿಸುವ ದುರ್ಯೋಧನನೇ ಮೊದಲಾದ, ಅಶ್ವತ್ಥಾಮ-ಕರ್ಣ-ಕೃಪರು ಯುದ್ಧದಲ್ಲಿ ಏನು ಮಾಡಿದರು?

ಭಾರದ್ವಾಜಂ ಜಿಘಾಂಸಂತೌ ಸವ್ಯಸಾಚಿವೃಕೋದರೌ ।
ಆರ್ಚ್ಛತಾಂ ಮಾಮಕಾನ್ ಯುದ್ಧೇ ಕಥಂ ಸಂಜಯ ಶಂಸ ಮೇ ॥೬॥

ಎಲೈ ಸಂಜಯನೇ, ದ್ರೋಣರನ್ನು ಕೊಲ್ಲುವ ಇಚ್ಛೆಯಿಂದ ಭೀಮಾರ್ಜುನರು ಯುದ್ಧದಲ್ಲಿ ಹೇಗೆ ನನ್ನವರನ್ನು ಸಮೀಪಿಸಿದರೆಂದು ನನಗೆ ಹೇಳು.

ಸಿಂಧುರಾಜವಧೇನೇಮೇ ಘಟೋತ್ಕಚವಧೇನ ತೇ ।
ಅಮರ್ಷಿತಾಶ್ಚ ಸಂಕ್ರುದ್ಧಾ ರಣಂ ಚಕ್ರುಃ ಕಥಂ ಯುಧಿ ॥ ೭ ॥

ಸೈಂಧವನ ವಧೆಯಿಂದ ಕೋಪಗೊಂಡ ಈ ನನ್ನವರೂ, ಘಟೋತ್ಕಚನ ವಧೆಯಿಂದ ಕೋಪಗೊಂಡ ಅವರೂ ರೋಷಾವಿಷ್ಟರಾಗಿ ರಣರಂಗದಲ್ಲಿ ಹೇಗೆ ಯುದ್ಧವನ್ನು ಮಾಡಿದರು?

ಸಂಜಯಃ

ಹೈಡಿಂಬಂ ನಿಹತಂ ದೃಷ್ಟ್ವಾ ವಿಕೀರ್ಣಮಿವ ಪರ್ವತಮ್ ।
ಪಾಂಡವಾ ದೀನಮನಸಃ ಸರ್ವೇ ಬಾಷ್ಪಾಕುಲೇಕ್ಷಣಾಃ ॥ ೮ ॥

ಸಂಜಯ– ಬಿರಿದು ಹೋದ ಪರ್ವತದಂತೆ ಘಟೋತ್ಕಚನು ಹತನಾದುದನ್ನು ನೋಡಿ ಪಾಂಡವರೆಲ್ಲರೂ ದೀನ ಮನಸ್ಸಿನಿಂದ ಕೂಡಿ ಬಾಷ್ಪಪೂರಿತನೇತ್ರರಾದರು.

ವಾಸುದೇವಸ್ತು ಹರ್ಷೇಣ ಮಹತಾऽಭಿಪರಿಪ್ಲುತಃ ।
ನನಾದ ಸಿಂಹವನ್ನಾದಂ ವ್ಯಥಯನ್ನಿವ ಭಾರತ ।
ವಿನದ್ಯ ಚ ಮಹಾನಾದಂ ಪರ್ಯಷ್ವಜತ ಫಲ್ಗುನಮ್ ॥ ೯ ॥

ಎಲೈ ಭಾರತನೇ, ಕೃಷ್ಣನಾದರೋ ಮಹಾಸಂತೋಷದಿಂದ ಪೂರ್ಣನಾಗಿ ಎಲ್ಲರನ್ನೂ ವ್ಯಥೆಪಡಿಸುವವನಂತೆ ಸಿಂಹನಾದವನ್ನು ಮಾಡಿದನು. ಮಹಾನಾದವನ್ನು ಮಾಡಿದ ಅವನು ಅರ್ಜುನನನ್ನು ಆಲಿಂಗಿಸಿದನು.

ಸ ವಿನದ್ಯ ಮಹಾನಾದಮಭೀಶೂನ್ ಸನ್ನಿಯಮ್ಯ ಚ ।
ನನರ್ತ ಹರ್ಷಸಂವೀತೋ ವಾತೋದ್ಧೂತ ಇವ ದ್ರುಮಃ ॥ ೧೦ ॥

ಅವನು ಮಹಾನಾದವನ್ನು ಮಾಡಿ ಕಡಿವಾಣಗಳನ್ನು ಹಿಡಿದು ಹರ್ಷಪೂರ್ಣನಾಗಿ ಬಿರುಗಾಳಿಗೆ ಸಿಕ್ಕಿದ ಮರದಂತೆ ನರ್ತನವನ್ನು ಮಾಡಿದನು.

ತತೋ ವಿನಿರ್ಧ್ಯಮ್ಯ ಪುನಃ ಪಾರ್ಥಮಾಸ್ಫೋಟ್ಯ ಚಾಸಕೃತ್ ।
ರಥೋಪಸ್ಥಗತೋ ಭೀಮಂ ಪ್ರಾಣದತ್ ಪುನರಚ್ಯುತಃ ॥ ೧೧ ॥

ಅನಂತರ ಸುತ್ತಲೂ ತಿರುಗಿ ಅರ್ಜುನನ ಬೆನ್ನಿನ ಮೇಲೆ ಸಂತೋಷದ ಏಟನ್ನು ಹೊಡೆದು ರಥದ ಮುಂಭಾಗದಲ್ಲಿ ಕುಳಿತು ಅಚ್ಯುತನು ಪುನಃ ಭಯಂಕರವಾದ ನಾದವನ್ನು ಮಾಡಿದನು.

ಪ್ರಹೃಷ್ಟಮನಸಂ ಜ್ಞಾತ್ವಾ ವಾಸುದೇವಂ ಮಹಾಬಲಮ್ ।
ಅಬ್ರವೀದರ್ಜುನೋ ರಾಜನ್ ನಾತಿಹೃಷ್ಟಮನಾ ಇವ ॥ ೧೨ ॥

ಮಹಾಬಲನಾದ ವಾಸುದೇವನು ಸಂತೋಷಗೊಂಡ ಮನಸ್ಸುಳ್ಳವನಾಗಿದ್ದಾನೆಂದು ತಿಳಿದ ಅರ್ಜುನನು ಬಹಳ ಸಂತೋಷಗೊಳ್ಳದೆ ಎಲೈ ರಾಜನೇ, ಅವನನ್ನು ಕುರಿತು ಮಾತನಾಡಿದನು.

ಅತಿಹರ್ಷೋऽಯಮಸ್ಥಾನೇ ತವಾದ್ಯ ಮಧುಸೂದನ ।
ಶೋಕಸ್ಥಾನೇ ಪರೇ ಪ್ರಾಪ್ತೇ ಹೈಡಿಂಬಸ್ಯ ವಧೇನ ವೈ ॥ ೧೩ ॥

ಎಲೈ ಮಧುಸೂದನನೇ, ಘಟೋತ್ಕಚನ ವಧೆಯಿಂದ ಶೋಕಪಡುವ ಕಾರಣವು ಒದಗಿರುವಾಗ ಈ ಅನುಚಿತವಾದ ಕಾಲದಲ್ಲಿ ಈ ದಿನ ನಿನಗೆ ಬಹಳ ಹರ್ಷವು ಉಂಟಾಗಿದೆ!

ವಿಮುಖಾನಿ ಚ ಸೈನ್ಯಾನಿ ಹತಂ ದೃಷ್ಟ್ವಾ ಘಟೋತ್ಕಚಮ್ ।
ವಯಂ ಚ ಭೃಶಮಾವಿಗ್ನಾ ಹೈಡಿಂಬಸ್ಯ ನಿಪಾತನಾತ್ ॥ ೧೪ ॥

ಘಟೋತ್ಕಚನು ಹತನಾದುದನ್ನು ನೋಡಿ ನಮ್ಮ ಸೈನ್ಯಗಳು ವಿಮುಖವಾಗಿವೆ. ಘಟೋತ್ಕಚನ ನಿಪಾತದಿಂದ ನಾವೂ ಸಹ ಬಹಳ ದುಃಖಗೊಂಡಿದ್ದೇವೆ.

ನೈತತ್ಕಾರಣಮಲ್ಪಂ ಹಿ ಭವಿಷ್ಯತಿ ಜನಾರ್ದನ ।
ತದದ್ಯ ಶಂಸ ಮೇ ಪೃಷ್ಟಃ ಸತ್ಯಂ ಸತ್ಯವತಾಂ ವರ ॥ ೧೫ ॥

ಎಲೈ ಜನಾರ್ದನನೇ, ಇದಕ್ಕೆ ಅಲ್ಪವಾದ ಕಾರಣವು ಇರಲಾರದು. ಎಲೈ ಸತ್ಯವಂತರಲ್ಲಿ ಶ್ರೇಷ್ಠನೇ, ನನ್ನ ಪ್ರಶ್ನೆಗೆ ಉತ್ತರವಾಗಿ ಈ ದಿನ ನನಗೆ ಸತ್ಯವಾದ ವಿಷಯವನ್ನು ಹೇಳು.

ಯದ್ಯೇತನ್ನ ರಹಸ್ಯಂ ತೇ ವಕ್ತುಮರ್ಹಸ್ಯರಿಂದಮ ।
ಧೈರ್ಯಸ್ಯ ವೈ ಕೃತಿಂ ಬ್ರೂಹಿ ತ್ವಮದ್ಯ ಮಧುಸೂದನ ॥ ೧೬ ॥

ಎಲೈ ಅರಿಂದಮನೇ, ಇದು ರಹಸ್ಯವಲ್ಲದಿದ್ದರೆ ನನಗೆ ಈ ಧೈರ್ಯ ಮತ್ತು ಸಂತಸದ ಕಾರಣವನ್ನು ಎಲೈ ಮಧುಸೂದನನೇ, ಈ ದಿನ ಹೇಳುವವನಾಗು.

ಸಮುದ್ರಸ್ಯೇವ ಸಂಶೋಷಂ ಮೇರೋರಿವ ವಿಸರ್ಪಣಮ್ ।
ತಥೈತಲ್ಲಾಘವಂ ಮನ್ಯೇ ತವ ಕರ್ಮ ಜನಾರ್ದನ ॥ ೧೭ ॥

ಎಲೈ ಜನಾರ್ದನನೇ, ಈ ನಿನ್ನ ಹಗುರವಾದ ವರ್ತನೆಯನ್ನು ಸಮುದ್ರದ ಶೋಷಣದಂತೆ, ಮೇರುವಿನ ಚಲನೆಯಂತೆ ಎಂದು ನಾನು ಭಾವಿಸುತ್ತೇನೆ.

ವಾಸುದೇವಃ

ಅತಿಹರ್ಷಮಿಮಂ ಪ್ರಾಪ್ತಂ ಶೃಣು ಮೇ ತ್ವಂ ಧನಂಜಯ ।
ಅತೀವ ಮನಸಃ ಸದ್ಯಃ ಪ್ರಸಾದಕರಮುತ್ತಮಮ್ ॥ ೧೮ ॥

ವಾಸುದೇವ– ಎಲೈ ಧನಂಜಯನೇ, ತಕ್ಷಣದಲ್ಲಿಯೇ ಮನಸ್ಸಿಗೆ ಶ್ರೇಷ್ಠವಾದ ಪ್ರಸನ್ನತೆಯನ್ನು ಉಂಟು ಮಾಡುವ ಈ ಹರ್ಷದ ಸಂಗತಿಯು ಪ್ರಾಪ್ತವಾದುದನ್ನು ನೀನು ನನ್ನಿಂದ ಕೇಳು.

ಶಕ್ತಿಂ ಘಟೋತ್ಕಚೇನೇಮಾಂ ವ್ಯಂಸಯಿತ್ವಾ ಮಹಾದ್ಯುತೇ ।
ಕರ್ಣಂ ನಿಹತಮೇವಾಜೌ ವಿದ್ಧಿ ಸದ್ಯೋ ಧನಂಜಯ ॥ ೧೯ ॥

ಎಲೈ ಧನಂಜಯನೇ, ಮಹಾದ್ಯುತಿಯೇ, ಘಟೋತ್ಕಚನ ಮೂಲಕವಾಗಿ ಕರ್ಣನ ಶಕ್ತಿಯನ್ನು ವ್ಯರ್ಥಗೊಳಿಸಿದ ಮೇಲೆ ಈ ದಿನವೇ ನೀನು ಯುದ್ಧದಲ್ಲಿ ಕರ್ಣನನ್ನು ಕೊಂದಿದ್ದೇನೆಂದು ತಿಳಿ.

ಶಕ್ತಿಹಸ್ತಂ ಪುನಃ ಕರ್ಣಂ ಕೋ ಲೋಕೇऽಸ್ತಿ ಪುಮಾನಿಹ ।
ಯ ಏನಮಭಿತಸ್ತಿಷ್ಠೇತ್ ಕಾರ್ತಿಕೇಯಮಿವಾಹವೇ ॥ ೨೦ ॥

ಕೈಯಲ್ಲಿ ಶಕ್ತಿಯನ್ನು ಹಿಡಿದು ರಣರಂಗದಲ್ಲಿ ಷಣ್ಮುಖನಂತೆ ನಿಂತ ಕರ್ಣನನ್ನು ಈ ಲೋಕದಲ್ಲಿ ಯಾವ ಮನುಷ್ಯನು ಎದುರಿಸಿಯಾನು?

ದಿಷ್ಟ್ಯಾऽಪನೀತಕವಚೋ ದಿಷ್ಟ್ಯಾऽಪಹೃತಕುಂಡಲಃ ।
ದಿಷ್ಟ್ಯಾ ಚ ವ್ಯಂಸಿತಾ ಶಕ್ತಿರಮೋಘಾऽಸ್ಯ ಘಟೋತ್ಕಚೇ ॥ ೨೧ ॥

ದೇವರ ದಯದಿಂದ ಅವನ ಕವಚವು ಅಪಹರಿಸಲ್ಪಟ್ಟಿತು. ಅವನ ಕುಂಡಲಗಳೂ ಅಪಹರಿಸಲ್ಪಟ್ಟವು. ದೇವರ ದಯದಿಂದಲೇ ಅಮೋಘವಾದ ಅವನ ಶಕ್ತಿಯು ಘಟೋತ್ಕಚನಲ್ಲಿ ವಂಚಿಸಲ್ಪಟ್ಟಿತು.

ಯದಿ ಹಿ ಸ್ಯಾತ್ ಸಕವಚಸ್ತಥೈವ ಚ ಸಕುಂಡಲಃ ।
ಸಾಮರಾನಪಿ ಲೋಕಾಂಸ್ತ್ರೀನೇಕಃ ಕರ್ಣೋ ಜಯೇದ್ ಬಲೀ ॥ ೨೨ ॥

ಕರ್ಣನು ಕವಚ-ಕುಂಡಲಗಳಿಂದ ಸಹಿತನಾಗಿದ್ದರೆ ಬಲಿಷ್ಠನಾದ ಅವನೊಬ್ಬನೇ ದೇವತೆಗಳಿಂದ ಕೂಡಿದ ಮೂರುಲೋಕಗಳನ್ನೂ ಗೆದ್ದಾನು.

ವಾಸವೋ ವಾ ಕುಬೇರೋ ವಾ ವರುಣೋ ವಾ ಜಲೇಶ್ವರಃ ।
ಯಮೋ ವಾ ನೋತ್ಸಹೇತ್ ಕರ್ಣಂ ರಣೇ ಪ್ರತಿಸಮಾಸಿತುಮ್ ॥೨೩॥

ಇಂದ್ರನಾಗಲೀ, ಕುಬೇರನಾಗಲೀ, ಜಲೇಶ್ವರನಾದ ವರುಣನಾಗಲೀ, ಯಮನಾಗಲೀ, ರಣರಂಗದಲ್ಲಿ ಕರ್ಣನ ಎದುರಿಗೆ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲ.

ಗಾಂಡೀವಮಾಯಮ್ಯ ಭವಾಂಶ್ಚಕ್ರಂ ವಾಽಹಂ ಸುದರ್ಶನಮ್ ।
ನ ಶಕ್ತೌ ಸ್ವೋ ರಣೇ ಜೇತುಂ ತಥಾಯುಕ್ತಂ ನರರ್ಷಭಮ್ ॥ ೨೪ ॥

ಗಾಂಡೀವ ಧನುಸ್ಸನ್ನು ಬಗ್ಗಿಸುವ ನೀನಾಗಲೀ, ಸುದರ್ಶನಚಕ್ರವನ್ನು ಧರಿಸಿದ ನಾನಾಗಲೀ ರಣರಂಗದಲ್ಲಿ ಅಂತಹ ಪರಾಕ್ರಮದಿಂದ ಯುಕ್ತನಾದ ಕರ್ಣನನ್ನು ಗೆಲ್ಲಲು ಸಮರ್ಥರಾಗುತ್ತಿರಲಿಲ್ಲ.

ತ್ವದ್ಧಿತಾರ್ಥಂ ತು ಶಕ್ರೇಣ ಮಾಯಯಾ ಹೃತಕುಂಡಲಃ ।
ವಿಹೀನಕವಚಶ್ಚಾಯಂ ಕೃತಃ ಪರಪುರಂಜಯಃ ॥ ೨೫ ॥

ನಿನ್ನ ಹಿತಾರ್ಥವಾಗಿ ಇಂದ್ರನು ಪರಪುರಂಜಯನಾದ ಕರ್ಣನ ಕವಚ-ಕುಂಡಲಗಳನ್ನು ಕಪಟದಿಂದ ಅಪಹರಿಸಿದನು.

ಉತೃತ್ಯ ಕವಚಂ ಯಸ್ಮಾತ್ ಕುಂಡಲೇ ವಿಮಲೇ ಚ ತೇ ।
ಪ್ರಾದಾಚ್ಛಕ್ರಾಯ ಕರ್ಣೋ ವೈ ತೇನ ವೈಕರ್ತನಃ ಸ್ಮೃತಃ ॥ ೨೬ ॥

ದೇಹವನ್ನು ಕತ್ತರಿಸಿ ಕರ್ಣನು ಇಂದ್ರನಿಗೆ ಕವಚ-ಕುಂಡಲಗಳನ್ನು ಕೊಟ್ಟ ಕಾರಣದಿಂದ ಅವನಿಗೆ ವೈಕರ್ತನ ಎಂಬ ಹೆಸರು ಬಂದಿತು.

ಆಶೀವಿಷ ಇವ ಕ್ರುದ್ಧಃ ಸ್ತಂಭಿತೋ ಮಂತ್ರತೇಜಸಾ ।
ತಥಾದ್ಯ ಭಾತಿ ಕರ್ಣೋ ಮೇ ಶಾಂತಜ್ವಾಲ ಇವಾನಲಃ ॥ ೨೭ ॥

ಮಂತ್ರತೇಜಸ್ಸಿನಿಂದ ಸ್ತಂಭಿತವಾದ ಕೋಪಗೊಂಡ ಸರ್ಪದಂತೆ ಈ ದಿನ ಕರ್ಣನು ಜ್ವಾಲೆಗಳು ಶಾಂತವಾದ ಅಗ್ನಿಯಂತೆ ನನಗೆ ಕಾಣುತ್ತಿದ್ದಾನೆ.

ಯದಾ ಪ್ರಭೃತಿ ಕರ್ಣಾಯ ಶಕ್ತಿರ್ದತ್ತಾ ಮಹಾತ್ಮನಾ ।
ವಾಸವೇನ ಮಹಾಬಾಹೋ ಪ್ರಾಪ್ತಾ ಯಾಽಸೌ ಘಟೋತ್ಕಚೇ ॥ ೨೮ ॥

ಕುಂಡಲಾಭ್ಯಾಂ ನಿಮಾಯಾಥ ದಿವ್ಯೇನ ಕವಚೇನ ಚ ।
ತಾಂ ಪ್ರಾಪ್ಯಾಮನ್ಯತ ವೃಥಾ ಸತತಂ ತ್ವಾಂ ಹತಂ ರಣೇ ॥ ೨೯ ॥

ಎಲೈ ಮಹಾಭಾರತನೇ, ಮಹಾತ್ಮನಾದ ಇಂದ್ರನು ಈಗ ಘಟೋತ್ಕಚನ ಮೇಲೆ ಪ್ರಯೋಗಿಸಿದ ಶಕ್ತಿಯನ್ನು ಯಾವಾಗ ಕರ್ಣನಿಗೆ ಕುಂಡಲಗಳ ಮತ್ತು ದಿವ್ಯವಾದ ಕವಚದ ವಿನಿಮಯದಿಂದ ಕೊಟ್ಟನೋ, ಆಗಲಿಂದಲೂ ವೃಷನು (ಶ್ರೇಷ್ಠನಾದ ಕರ್ಣನು) ಆ ಶಕ್ತಿಯನ್ನು ಹೊಂದಿ ನೀನು ಯುದ್ಧದಲ್ಲಿ ಮೃತನಾಗಿದ್ದೀಯೆ ಎಂದೇ ತಿಳಿದನು.

ಏವಂಗತೇऽಪಿ ಶಕ್ಯೋऽಯಂ ಹಂತುಂ ನಾನ್ಯೇನ ಕೇನಚಿತ್ ।
ಋತೇ ತ್ವಾ ಪುರುಷವ್ಯಾಘ್ರ ಶಪೇ ಸತ್ಯೇನ ಚಾನಘ ॥ ೩೦ ॥

ಎಲೈ ಪುರುಷವ್ಯಾಘ್ರನೇ, ಅವನು ಕವಚ-ಕುಂಡಲಗಳಿಂದ ಹೀನನಾಗಿದ್ದರೂ ಅವನನ್ನು ನಿನ್ನನ್ನು ಬಿಟ್ಟು ಬೇರೆ ಯಾರೂ ಕೊಲ್ಲಲು ಸಾಧ್ಯವಿಲ್ಲ. ಎಲೈ ಅನಘನೇ, ಶಪಥವನ್ನು ಮಾಡಿ ಇದನ್ನು ಹೇಳುತ್ತಿದ್ದೇನೆ.

ಬ್ರಹ್ಮಣ್ಯಃ ಸತ್ಯವಾದೀ ಚ ತಪಸ್ವೀ ನಿಯತವ್ರತಃ ।
ರಿಪುಷ್ವಪಿ ದಯಾವಾಂಶ್ಚ ತಸ್ಮಾತ್ ಕರ್ಣೋ ವೃಷಾ ಸ್ಮೃತಃ ॥ ೩೧॥

ಅವನು ಬ್ರಾಹ್ಮಣರಲ್ಲಿ ವತ್ಸಲನಾದವನು, ಸತ್ಯವನ್ನು ನುಡಿಯುವವನು, ತಪಸ್ವಿ, ವ್ರತನಿಷ್ಠನಾದವನು ಮತ್ತು ಶತ್ರುಗಳಲ್ಲಿಯೂ ದಯೆಯನ್ನು ತೋರಿಸುವವನು. ಆ ಕಾರಣದಿಂದ ಕರ್ಣನಿಗೆ ವೃಷ ಎಂಬ ಹೆಸರಿದೆ.

ಯುದ್ಧಶೌಂಡೋ ಮಹಾಬಾಹುರ್ನಿತ್ಯೋದ್ಯತಶರಾಸನಃ ।
ಕೇಸರೀವ ವನೇ ಮರ್ದನ್ ಮತ್ತಮಾತಂಗಯೂಥಪಾನ್ ।
ವಿಮದಾನ್ ರಥಶಾರ್ದೂಲಾನ್ ಕುರುತೇ ರಣಮೂರ್ಧನಿ ॥ ೩೨ ॥

ಯುದ್ಧಕುಶಲನೂ, ಮಹಾಬಾಹುವೂ, ಯಾವಾಗಲೂ ಉದ್ಯುಕ್ತ ಧನುಸ್ಸನ್ನು ಎತ್ತಿ ಹಿಡಿದವನೂ ಆದ ಕರ್ಣನು ಮದಗಜಗಳ ಸಮೂಹವನ್ನು ಕಾಡಿನಲ್ಲಿ ಸಿಂಹವು ಮರ್ದಿಸಿದಂತೆ ಶ್ರೇಷ್ಠವಾದ ಯುದ್ಧದಲ್ಲಿ ರಥಶಾರ್ದೂಲರನ್ನು ಮದರಹಿತರನ್ನಾಗಿ ಮಾಡುತ್ತಾನೆ.

ಮಧ್ಯಂಗತ ಇವಾದಿತ್ಯೋ ಯೋ ನ ಶಕ್ಯೋ ನಿರೀಕ್ಷಿತುಮ್ ।
ತ್ವದೀಯೈಃ ಪುರುಷವ್ಯಾಘ್ರ ಯೋಧಮುಖ್ಯೈರ್ಮಹಾತ್ಮಭಿಃ ।
ಶರಜಾಲಸಹಸ್ರಾಂಶುಃ ಶರದೀವ ದಿವಾಕರಃ ॥ ೩೩ ॥

ಎಲೈ ಪುರುಷವ್ಯಾಘ್ರನೇ, ಆಕಾಶದಲ್ಲಿ ಮಧ್ಯಂದಿನ ಗತನಾದ ಸೂರ್ಯನಂತೆ ನಿನ್ನ ಶ್ರೇಷ್ಠ ಯೋಧರು ಯಾರೂ ಅವನನ್ನು ನೋಡಲಾರರು. ಅವನು ಶರಜಾಲಗಳ ಕಿರಣಗಳಿಂದ ಕೂಡಿದ ಶರತ್ಕಾಲದ ಸೂರ್ಯನಂತೆ ಇದ್ದಾನೆ.

ತಪಾಂತೇ ತೋಯದೋ ಯದ್ವಚ್ಛರಧಾರಾಃ ಕ್ಷರತ್ಯಸೌ ।
ದಿವ್ಯಾಸ್ತ್ರಜಲದಃ ಕರ್ಣಃ ಪರ್ಜನ್ಯ ಇವ ವೃಷ್ಟಿಮಾನ್ ।
ಸೋಽದ್ಯ ಮಾನುಷತಾಂ ಪ್ರಾಪ್ತೋ ವಿಮುಕ್ತಃ ಶಕ್ರದತ್ತಯಾ ॥ ೩೪ ॥

ಮಳೆಗಾಲದಲ್ಲಿ ಮೋಡವು ಹೇಗೆ ಜಲಧಾರೆಗಳನ್ನು ಸುರಿಸುವುದೋ ಅದರಂತೆ ಈ ದಿವ್ಯಾಸ್ತ್ರಮೇಘರೂಪವಾದ ಕರ್ಣನು ಪರ್ಜನ್ಯನಂತೆ ಅಸ್ತ್ರವನ್ನು ಸುರಿಸುವವನು. ಈ ದಿನ ಅವನು ಇಂದ್ರನು ಕೊಟ್ಟ ಶಕ್ತಿಯಿಂದ ರಹಿತನಾಗಿ ಸಾಧಾರಣ ಮನುಷ್ಯನಂತೆ ಆಗಿದ್ದಾನೆ.

ಏಕೋ ಹಿ ಯೋಗೋಽಸ್ಯ ಭವೇದ್ ವಧಾಯ
ಛಿದ್ರೇ ಹ್ಯೇನಂ ಸ್ವಪ್ರಮತ್ತಃ ಪ್ರಮತ್ತಮ್ ।
ಕೃಚ್ಛ್ರಪ್ರಾಪ್ತಂ ರಥಚಕ್ರೇ ನಿಮಗ್ನೇ
ಹನ್ಯಾಃ ಪೂರ್ವಂ ತ್ವಂ ತು ಸಂಜ್ಞಾಂ ವಿಚಾರ್ಯ ॥ ೩೫ ॥

ಅವನನ್ನು ವಧೆ ಮಾಡಲು ಒಂದೇ ಒಂದು ಉಪಾಯವಿದೆ. ಒಂದು ಸಣ್ಣ ಅವಕಾಶವು ದೊರೆತಾಗ ಎಂದರೆ ಅವನು ತನ್ನ ರಥಚಕ್ರವು ಭೂಮಿಯಲ್ಲಿ ಹೂತು ಕಷ್ಟಕ್ಕೆ ಸಿಲುಕಿ ಪ್ರಮತ್ತನಾದಾಗ ನೀನು ಪ್ರಮತ್ತನಾಗದೆ ನಾನು ಕೊಟ್ಟ ಸಂಕೇತವನ್ನು ಗಮನಿಸಿ ಮೊದಲು ಅವನನ್ನು ಕೊಲ್ಲಬೇಕು.

ಜರಾಸಂಧಶ್ಚೇದಿರಾಜೋ ಮಹಾತ್ಮಾ
ಮಹಾಬಲಶ್ಚೈಕಲವ್ಯೋ ನಿಷಾದಃ ।
ಏಕೈಕಶೋ ನಿಹತಾಃ ಸರ್ವ ಏವ
ಯೋಗೈಸ್ತೈಸ್ತೈಸ್ತ್ವದ್ಧಿತಾರ್ಥಂ ಮಯೈವ ॥ ೩೬ ॥

ಜರಾಸಂಧ, ಚೇದಿರಾಜನಾದ ಮಹಾತ್ಮನಾದ ಶಿಶುಪಾಲ, ಮಹಾಬಲನಾದ ಏಕಲವ್ಯ ಇವರಲ್ಲಿ ಒಬ್ಬೊಬ್ಬರನ್ನೂ ನಿನ್ನ ಹಿತದ ಸಲುವಾಗಿ ಆಯಾ ಉಪಾಯಗಳಿಂದ ನಾನೇ ಕೊಂದಿದ್ದೇನೆ.

ಅಥಾಪರೇ ನಿಹತಾ ರಾಕ್ಷಸೇಂದ್ರಾ
ಓಡಿಂಬಕಿರ್ಮೀರಬಕಪ್ರಧಾನಾಃ ।
ಅಲಾಯುಧಃ ಪರಸೈನ್ಯಾವಮರ್ದೀ
ಘಟೋತ್ಕಚಶ್ಚೋಗ್ರಕರ್ಮಾ ತರಸ್ವೀ ॥ ೩೭ ॥

ಹಾಗೆಯೇ ಉಳಿದ ರಾಕ್ಷಸೇಂದ್ರರಾದ ಹಿಡಿಂಬ, ಕಿರ್ಮೀರ, ಬಕ ಮೊದಲಾದವರು, ಪರಸೈನ್ಯನಾಶಕನಾದ ಅಲಾಯುಧ, ಯುದ್ಧದಲ್ಲಿ ಉಗ್ರಕರ್ಮವನ್ನು ಮಾಡುವ ಘಟೋತ್ಕಚ ಎಲ್ಲರೂ ನನ್ನಿಂದಲೇ ಹತರಾಗಿದ್ದಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್‌ಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ದ್ರೋಣವಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೇಳನೆಯ ಅಧ್ಯಾಯ

ಪಾಂಡವರ ಹಿತಕ್ಕಾಗಿ ಕೃಷ್ಣನಿಂದ ತಾನು ಒಳ್ಳೆಯ ಉಪಾಯದಿಂದ ಮಾಡಿಸಿದ ಜರಾಸಂಧಾದಿ ವಧೆಗಳ ಕಥನ.

ಅರ್ಜುನಃ

ಕಥಮಸ್ಮದ್ಧಿತಾರ್ಥಂ ತೇ ಕೈಶ್ಚ ಯೋಗೈರ್ಜನಾರ್ದನ ।
ಜರಾಸಂಧಪ್ರಭೃತಯೋ ಘಾತಿತಾಃ ಪೃಥಿವೀಶ್ವರಾಃ ॥ ೧ ॥

ಅರ್ಜುನ– ಎಲೈ ಜನಾರ್ದನನೇ, ಹೇಗೆ ನಮ್ಮ ಹಿತಕ್ಕಾಗಿ ಜರಾಸಂಧಾದಿ ರಾಜರನ್ನು ನೀನು ಕೊಲ್ಲಿಸಿದೆ? ಮತ್ತು ಯಾವ ಉಪಾಯಗಳಿಂದ ಕೊಲ್ಲಿಸಿದೆ?

ವಾಸುದೇವಃ

ಜರಾಸಂಧಶ್ಚೇದಿರಾಜೋ ನೈಷಾದಿಶ್ಚ ಮಹಾಬಲಃ ।
ಯದಿ ಸ್ಯುರ್ನ ಹತಾಃ ಪೂರ್ವಮಿದಾನೀಂ ಸ್ಯುರ್ಭಯಂಕರಾಃ ॥ ೨ ॥

ವಾಸುದೇವ– ಜರಾಸಂಧ, ಶಿಶುಪಾಲ, ಮಹಾಬಲನಾದ ಏಕಲವ್ಯ ಅವರು ಮೊದಲು ಹತರಾಗದಿದ್ದರೆ ಈಗ ಭಯಂಕರರಾಗಿರುತ್ತಿದ್ದರು.

ಸುಯೋಧನಸ್ತಾನವಶ್ಯಂ ವೃಣುಯಾದ್ ರಥಸತ್ತಮಾನ್ ।
ತೇಽಸ್ಮಾಭಿರ್ನಿತ್ಯವಿದ್ವಿಷ್ಟಾಃ ಸಂಶ್ರಯೇಯುಶ್ಚ ಕೌರವಾನ್ ॥ ೩ ॥

ಸುಯೋಧನನು ಖಂಡಿತವಾಗಿ ಆ ರಥಶ್ರೇಷ್ಠರನ್ನು ಆಹ್ವಾನಿಸಿರುತ್ತಿದ್ದನು. ನಮ್ಮ ಜೊತೆಯಲ್ಲಿ ನಿತ್ಯವೂ ದ್ವೇಷವನ್ನು ಮಾಡಿದ ಅವರು ಕೌರವರನ್ನು ಆಶ್ರಯಿಸಿರುತ್ತಿದ್ದರು.

ತೇ ಹಿ ವೀರಾ ಮಹಾತ್ಮಾನಃ ಕೃತಾಸ್ತ್ರಾ ದೃಢಯೋಧಿನಃ ।
ಧಾರ್ತರಾಷ್ಟ್ರೀಂ ಚಮೂಂ ಕೃತ್ಸ್ನಾಂ ರಕ್ಷೇಯುರಮರಾ ಇವ ॥ ೪ ॥

ವೀರರೂ, ಮಹಾತ್ಮರೂ, ಅಸ್ತ್ರಜ್ಞರೂ, ದೃಢಯೋಧಿಗಳೂ ಆದ ಅವರು ದುರ್ಯೋಧನನ ಸಮಗ್ರವಾದ ಸೈನ್ಯವನ್ನು ದೇವತೆಗಳಂತೆ ರಕ್ಷಿಸಿರುತ್ತಿದ್ದರು.

ಸೂತಪುತ್ರೋ ಜರಾಸಂಧಶ್ಚೇದಿರಾಜೋ ನಿಷಾದಜಃ ।
ಸುಯೋಧನಂ ಸಮಾಶ್ರಿತ್ಯ ತಪೇರನ್ ಪೃಥಿವೀಮಿಮಾಮ್ ॥ ೫ ॥

ಸೂತಪುತ್ರನಾದ ಕರ್ಣ, ಜರಾಸಂಧ, ಚೇದಿರಾಜನಾದ ಶಿಶುಪಾಲ, ಮಹಾತ್ಮನಾದ ಏಕಲವ್ಯ ಇವರು ದುರ್ಯೋಧನನನ್ನು ಆಶ್ರಯಿಸಿ ಈ ಭೂಮಿಯನ್ನೇ ಸಂತಾಪಪಡಿಸಿರುತ್ತಿದ್ದರು.

ಯೋಗೈರಪಿ ಹತಾ ಯೈಸ್ತೇ ತಾನ್ ಮೇ ಶೃಣು ಧನಂಜಯ ।
ಅಜಯ್ಯಾ ಹಿ ಏನಾ ಯೋಗೈರ್ಮಧೇ ತೇ ದೈವತೈರಪಿ ॥ ೬ ॥

ಎಲೈ ಧನಂಜಯನೇ, ಅವರು ಯಾವ ಉಪಾಯಗಳಿಂದ ಹತರಾದರೆಂಬುದನ್ನು ಕೇಳು. ಉಪಾಯಗಳನ್ನು ಮಾಡದಿದ್ದರೆ ಅವರು ಯುದ್ಧದಲ್ಲಿ ದೇವತೆಗಳಿಂದಲೂ ಜಯಿಸಲು ಅಸಾಧ್ಯರಾದವರು.

ಏಕೈಕೋ ಹಿ ಪೃಥಕ್ ತೇಷಾಂ ಸಮಸ್ತಾಂ ಸುರವಾಹಿನೀಮ್ ।
ಯೋಧಯೇತ್ ಸಮರೇ ಪಾರ್ಥ ಲೋಕಪಾಲಾಭಿರಕ್ಷಿತಾಮ್ ॥ ೭ ॥

ಎಲೈ ಅರ್ಜುನನೇ, ಅವರಲ್ಲಿ ಒಬ್ಬೊಬ್ಬನೂ ಲೋಕಪಾಲಕರಿಂದ ರಕ್ಷಿತರಾದ ಸಮಗ್ರವಾದ ದೇವಸೇನೆಯ ಜೊತೆಯಲ್ಲಿ ಯುದ್ಧವನ್ನು ಮಾಡಿಯಾನು.

ಜರಾಸಂಧೋ ಹಿ ರುಷಿತೋ ರೌಹಿಣೇಯಪ್ರಧರ್ಷಿತಃ ।
ಅಸ್ಮದ್ವಧಾರ್ಥಂ ಚಿಕ್ಷೇಪ ಗದಾಂ ವೈ ಲೋಹಿತಾಮುಖೀಮ್ ॥ ೮ ॥

ಬಲರಾಮನಿಂದ ಅವಮಾನಗೊಳಿಸಲ್ಪಟ್ಟ ಜರಾಸಂಧನು ಕೋಪಗೊಂಡು ನಮ್ಮ ವಧೆಗಾಗಿ ರಕ್ತಮುಖವುಳ್ಳ ಗದೆಯನ್ನು ಎಸೆದನು.

ಸೀಮಂತಮಿವ ಕುರ್ವಾಣಾಂ ನಭಸಃ ಪಾವಕಪ್ರಭಾಮ್ ।
ವ್ಯದೃಶ್ಯತಾಪತಂತೀ ಸಾ ಶಕ್ರಮುಕ್ತಾ ಯಥಾಶನಿಃ ॥ ೯ ॥

ಅವನು ಎಸೆದ ಅಗ್ನಿಜ್ವಾಲೆಯ ಪ್ರಭೆಯುಳ್ಳ ಆಕಾಶದಲ್ಲಿ ಬೈತಲೆಯನ್ನು ಉಂಟು ಮಾಡುವಂತೆ ಬರುತ್ತಿದ್ದ ಆ ಗದೆಯು ಇಂದ್ರನು ಪ್ರಯೋಗಿಸಿದ ವಜ್ರಾಯುಧದಂತೆ ನಮ್ಮ ಕಡೆಗೆ ಬರುತ್ತಿದ್ದುದು ಕಂಡುಬಂದಿತು.

ತಾಮಾಪತಂತೀಂ ದೃಷ್ಟ್ವೈವ ಗದಾಂ ರೋಹಿಣೀನಂದನಃ ।
ಪ್ರತಿಘಾತಾರ್ಥಮಸ್ತ್ರಂ ವೈ ಸ್ಥೂಣಾಕರ್ಣಮವಾಸೃಜತ್ ॥ ೧೦ ॥

ನಮ್ಮ ಕಡೆಗೆ ಬರುತ್ತಿದ್ದ ಆ ಗದೆಯನ್ನು ನೋಡಿದ ಕೂಡಲೇ ರೋಹಿಣೀ ನಂದನನಾದ ಬಲರಾಮನು ಅದಕ್ಕೆ ಪ್ರತಿಘಾತವನ್ನು ಮಾಡಲು ಸ್ಥೂಣಾಕರ್ಣಾಸ್ತ್ರವನ್ನು ಪ್ರಯೋಗ ಮಾಡಿದನು.

ಅಸ್ತ್ರವೇಗಪ್ರತಿಹತಾ ಸಾ ಗದಾ ಪ್ರಾಪತದ್ ಭುವಿ ।
ದಾರಯಂತೀ ಧರಾಂ ದೇವೀಂ ಕಂಪಯಂತೀವ ಪರ್ವತಾನ್ ॥ ೧೧ ॥

ಬಲರಾಮನ ಅಸ್ತ್ರದಿಂದ ಪ್ರತಿಹತವಾದ ಆ ಗದೆಯು ಭೂಮಿಯನ್ನು ಸೀಳುತ್ತಾ, ಪರ್ವತಗಳನ್ನು ನಡುಗಿಸುತ್ತಾ ಭೂಮಿಯಲ್ಲಿ ಬಿದ್ದಿತು.

ತತ್ರ ಸ್ಮ ರಾಕ್ಷಸೀ ಘೋರಾ ಜರಾ ನಾಮಾಶುವಿಕ್ರಮಾ ।
ಸಂಧಯಾಮಾಸ ತಂ ಜಾತಂ ಜರಾಸಂಧಮರಿಂದಮಮ್ ॥ ೧೨ ॥

ಅಲ್ಲಿ ಘೋರಳಾದ, ಶೀಘ್ರಪರಾಕ್ರಮಿಯಾದ ಜರಾ ಎಂಬ ರಾಕ್ಷಸಿಯು ಅರಿಂದಮನಾದ ಜರಾಸಂಧನು ಹುಟ್ಟಿದಾಗ ಅವನನ್ನು ಜೋಡಿಸಿದ್ದಳು.

ದ್ವಾಭ್ಯಾಂ ಜಾತೋ ಹಿ ಮಾತೃಭ್ಯಾಮರ್ಧದೇಹಃ ಪೃಥಕ್ ಪೃಥಕ್ ।
ತಯಾ ಸ ಸಂಧಿತೋ ಯಸ್ಮಾಜ್ಜರಾಸಂಧಸ್ತತಃ ಸ್ಮೃತಃ ॥ ೧೩ ॥

ಇಬ್ಬರು ತಾಯಿಯರಿಂದ ಅರ್ಧ-ಅರ್ಧ ದೇಹವುಳ್ಳವನಾಗಿ ಹುಟ್ಟಿ ಆ ಜರೆಯಿಂದ ಜೋಡಿಸಲ್ಪಟ್ಟ ಕಾರಣದಿಂದ ಜರಾಸಂಧನೆಂಬ ಹೆಸರನ್ನು ಹೊಂದಿದನು.

ಸಾ ತು ಭೂಮಿಗತಾ ಪಾರ್ಥ ಹತಾ ಸಸುತಬಾಂಧವಾ ।
ಗದಯಾ ತೇನ ಚಾಸ್ತ್ರೇಣ ಸ್ಥೂಣಾಕರ್ಣೇನ ರಾಕ್ಷಸೀ ॥ ೧೪ ॥

ಎಲೈ ಪಾರ್ಥನೇ, ತನ್ನ ಪುತ್ರ ಮತ್ತು ಬಾಂಧವರೊಡನೆ ಭೂಮಿಯೊಳಗಿದ್ದ ಆ ಜರೆಯು ಗದೆಯಿಂದಲೂ, ಆ ಸ್ಥೂಣಾಕರ್ಣಾಸ್ತ್ರದಿಂದಲೂ ಹತಳಾದಳು.

ಏನಾಭೂತಃ ಸ ಗದಯಾ ಜರಾಸಂಧೋ ಮಹಾಮೃಧೇ ।
ನಿಹತೋ ಭೀಮಸೇನೇನ ಪಶ್ಯತಸ್ತೇ ಧನಂಜಯ ॥ ೧೫ ॥

ಎಲೈ ಧನಂಜಯನೇ, ಗದೆಯಿಂದ ರಹಿತನಾದ ಜರಾಸಂಧನು ದೊಡ್ಡ ಯುದ್ಧದಲ್ಲಿ ನಿನ್ನ ಎದುರಿಗೇ ಭೀಮಸೇನನಿಂದ ಹತನಾದನು.

ಯದಿ ಹಿ ಸ್ಯಾದ್ ಗದಾಪಾಣಿರ್ಜರಾಸಂಧಃ ಪ್ರತಾಪವಾನ್ ।
ಸೇಂದ್ರಾ ದೇವಾ ನ ತಂ ಹಂತುಂ ರಣೇ ಶಕ್ತಾ ನರೋತ್ತಮ ॥ ೧೬ ॥

ಎಲೈ ನರೋತ್ತಮನೇ, ಒಂದು ಪಕ್ಷ ಪ್ರತಾಪಶಾಲಿಯಾದ ಜರಾಸಂಧನು ಗದೆಯನ್ನು ಹಿಡಿದು ನಿಂತಿದ್ದರೆ ಇಂದ್ರನಿಂದ ಸಹಿತರಾದ ದೇವತೆಗಳೂ ಸಹ ಯುದ್ಧದಲ್ಲಿ ಅವನನ್ನು ಕೊಲ್ಲಲು ಸಮರ್ಥರಾಗಿರುತ್ತಿರಲಿಲ್ಲ.

ತ್ವದ್ಧಿತಾರ್ಥಂ ಹಿ ನೈಷಾದಿರಂಗುಷ್ಠೇನ ವಿಯೋಜಿತಃ ।
ದ್ರೋಣೇನಾಚಾರ್ಯಕಂ ಕೃತ್ವಾ ಧರ್ಮಜ್ಞಾ ಸತ್ಯವಿಕ್ರಮಃ ॥ ೧೭ ॥

ನಿನ್ನ ಹಿತಕ್ಕಾಗಿಯೇ ದ್ರೋಣರು ಗುರುಭಾವವನ್ನು ಹೊಂದಿ ಸತ್ಯವಿಕ್ರಮನಾದ ಏಕಲವ್ಯನನ್ನು ಕಪಟದಿಂದ ಅಂಗುಷ್ಠರಹಿತನಾಗುವಂತೆ ಮಾಡಿದರು.

ಸ ತು ಬದ್ಧಾಂಗುಲಿತ್ರಾಣೋ ನೈಷಾದಿರ್ದೃಢವಿಕ್ರಮಃ ।
ಅಸ್ಯನ್ನೇಕೋ ವನಚರೋ ಬಭೌ ರಾಮ ಇವಾಪರಃ ॥ ೧೮ ॥

ದೃಢವಿಕ್ರಮನಾದ ಏಕಲವ್ಯನಾದರೂ ಅಂಗುಲಿತ್ರಾಣಗಳನ್ನು ಧರಿಸಿ ಕಾಡಿನಲ್ಲಿ ಸಂಚರಿಸಿ ಬಾಣಗಳನ್ನು ಬಿಡುತ್ತಾ ಇನ್ನೊಬ್ಬ ರಾಮನಂತೆ ಶೋಭಿಸಿದನು.

ಏಕಲವ್ಯಂ ಹಿ ಸಾಂಗುಷ್ಠಮಶಕ್ತಾ ದೇವದಾನವಾಃ ।
ಸರಾಕ್ಷಸೋರಗಾಃ ಪಾರ್ಥ ವಿಜೇತುಂ ಯುಧಿ ಕರ್ಹಿಚಿತ್ ॥ ೧೯ ॥

ಎಲೈ ಪಾರ್ಥನೇ, ಅಂಗುಷ್ಠಸಹಿತನಾದ ಏಕಲವ್ಯನನ್ನು ದೇವ-ದಾನವರು, ರಾಕ್ಷಸ-ಉರಗಗಳು ಯುದ್ಧದಲ್ಲಿ ಯಾವ ರೀತಿಯಿಂದಲೂ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ.

ಕಿಮು ಮಾನುಷಮಾತ್ರೇಣ ಶಕ್ಯಃ ಸ್ಯಾತ್ ಪ್ರತಿವೀಕ್ಷಿತುಮ್ ।
ದೃಢಮುಷ್ಟಿಃ ಕೃತೀ ನಿತ್ಯಮಸ್ಯಮಾನೋ ದಿವಾನಿಶಮ್ ।
ತ್ವದ್ಧಿತಾರ್ಥಂ ತು ಸ ಮಯಾ ಹತಃ ಸಂಗ್ರಾಮಮೂರ್ಧನಿ ॥ ೨೦ ॥

ಇನ್ನು ದೃಢಮುಷ್ಟಿಯುಳ್ಳವನೂ, ಕುಶಲನೂ, ಹಗಲು-ರಾತ್ರಿಯೂ ಬಾಣಗಳನ್ನು ಪ್ರಯೋಗಿಸಿ ಅಭ್ಯಾಸವನ್ನು ಮಾಡುವವನೂ ಆದ ಅವನನ್ನು ಮನುಷ್ಯ ಮಾತ್ರನಾದವನು ನೋಡಲು ಸಾಧ್ಯವಾಗಿರುತ್ತಿದ್ದಿತೇ? ನಿನ್ನ ಹಿತಕ್ಕಾಗಿ ನಾನು ಅವನನ್ನು ದೊಡ್ಡ ಯುದ್ಧದಲ್ಲಿ ಕೊಂದೆನು.

ಚೇದಿರಾಜಶ್ಚ ವಿಕ್ರಾಂತಃ ಪ್ರತ್ಯಕ್ಷಂ ನಿಹತಸ್ತವ ।
ಸ ಚಾಪ್ಯಶಕ್ಯಃ ಸಂಗ್ರಾಮೇ ಜೇತುಂ ಸರ್ವೈಃ ಸುರಾಸುರೈಃ ॥ ೨೧ ॥

ಪರಾಕ್ರಮಶಾಲಿಯಾದ ಶಿಶುಪಾಲನೂ ಸಹ ನಿನ್ನ ಎದುರಿನಲ್ಲಿಯೇ ಕೊಲ್ಲಲ್ಪಟ್ಟನು. ಅವನೂ ಸಹ ಯುದ್ಧದಲ್ಲಿ ಸರ್ವಸುರಾಸುರರಿಂದಲೂ ಸೋಲಿಸಲು ಅಶಕ್ಯನಾದವನು.

ವಧಾರ್ಥಂ ತಸ್ಯ ಜಾತೋಽಹಮನ್ಯೇಷಾಂ ಚ ಸುರದ್ವಿಷಾಮ್ ।
ತ್ವತ್ಸಹಾಯೋ ನರವ್ಯಾಘ್ರ ಲೋಕಾನಾಂ ಹಿತಕಾಮ್ಯಯಾ ॥ ೨೨ ॥

ಎಲೈ ನರವ್ಯಾಘ್ರನೇ, ಅವನ ವಧೆಗಾಗಿ ಮತ್ತು ಲೋಕದ ಹಿತದ ದೃಷ್ಟಿಯಿಂದ ನಿನ್ನ ಸಹಾಯವನ್ನು ಪಡೆದು ಉಳಿದ ದೇವತಾದ್ವೇಷಿಗಳ ವಧೆಗಾಗಿ ನಾನು ಅವತರಿಸಿದ್ದೇನೆ.

ಹಿಡಿಂಬಬಕಕಿರ್ಮೀರಾ ಭೀಮಸೇನೇನ ಪಾತಿತಾಃ ।
ರಾಮೇಣ ಸಮಪ್ರಾಣಾ ಬ್ರಹ್ಮಯಜ್ಞವಿನಾಶನಾಃ ॥ ೨೩ ॥

ರಾವಣನಿಗೆ ಸಮಾನನಾದ ಪ್ರಾಣಶಕ್ತಿಯುಳ್ಳ, ಬ್ರಾಹ್ಮಣರ ಯಜ್ಞವಿನಾಶಕರಾದ ಹಿಡಿಂಬ-ಬಕ-ಕಿರ್ಮೀರರು ಭೀಮಸೇನನಿಂದ ಉರುಳಿಸಲ್ಪಟ್ಟರು.

ಹತಸ್ತಥೈವ ಮಾಯಾವೀ ಹೈಡಿಂಬೇನಾಪ್ಯಲಾಯುಧಃ ।
ಹೈಡಿಂಬಾಶ್ಚಾಪ್ಯುಪಾಯೇನ ಶಕ್ತ್ಯಾ ಕರ್ಣೇನ ಘಾತಿತಃ ॥ ೨೪ ॥

ಹಾಗೆಯೇ ಮಾಯಾವಿಯಾದ ಅಲಾಯುಧನೂ ಘಟೋತ್ಕಚನಿಂದ ಹತನಾದನು. ಘಟೋತ್ಕಚನನ್ನೂ ಸಹ ಉಪಾಯವನ್ನು ಆಶ್ರಯಿಸಿ ಕರ್ಣನಿಂದ ಶಕ್ತಿಯ ಮೂಲಕ ಕೊಲ್ಲಿಸಿದೆವು.

ಯದಿ ಹ್ಯೇನಂ ರಣಪಸ್ಥಸ್ಥಂ ಕರ್ಣಃ ಶಕ್ತ್ಯಾ ನ ಜಘಾನ್ಹ ಸಃ ।
ಮಯಾ ವಧ್ಯೋಽಭವಿಷ್ಯತ್ ಸ ವೈದುರ್ಯೋಘಟೋತ್ಕಚಃ ॥ ೨೫ ॥

ಕರ್ಣನು ದೊಡ್ಡ ಯುದ್ಧದಲ್ಲಿ ಶಕ್ತಿಯಿಂದ ಅವನನ್ನು ಕೊಲ್ಲದಿದ್ದರೆ ಭೀಮಸೇನನ ಪುತ್ರನಾದ ಘಟೋತ್ಕಚನು ನನ್ನಿಂದ ಹತನಾಗುತ್ತಿದ್ದನು.

ಮುಲ್ಲಿ ಭೀಮಸೇನನ ಪುತ್ರನಾದ ಘಟೋತ್ಕಚನು ದೇವತೆಯಾದ ನಂ. ಅದರಿಂ ಅಸುರಸಂಹಾರಮಾಡಲ್ಪಟ್ಟಿದ್ದ ಕಾರಣದಿಂದ ಸ್ವಲ್ಪ ಅಸುರಾವೇಶದಿಂದಲೂ ಮತ್ತು ಕ್ಷ ಸೇನೆಯಲ್ಲಿರುವ ದುರ್ಜನರಾದ ಅಸುರರ ವಶನಾದ ಕಾರಣದಿಂದಲೂ ಅವನು ಕೃಷ್ಣನಿಶ್ಚಯಕ್ಕೆ ವಿರುದ್ಧವಾಗಿರುವ ಕಾರ್ಯಗಳನ್ನು ಮಾಡಬಹುದು. ಆದ್ದರಿಂದ ಪುಣ್ಯಾತ್ಮನಾ ನಿಮ್ಮವನು ಸ್ವಲ್ಪ- ಸ್ವಲ್ಪ ಪಾಪವನ್ನು ಗಳಿಸುವುದುಂಟು. ಆದ್ದರಿಂದ ನಮ್ಮ ಬಳಿಯಲ್ಲಿರುವ ಅವನನ್ನು ಕೊಲ್ಲುವಂತೆ ಬಂದನು. ಆಗಿ ಬಿಟ್ಟಿದೆಯಾದರೆ.

ಮಯಾ ಸ ನಿಹತಃ ಪೂರ್ವಮೇವ ಯುಷ್ಮದ್ಧಿತೈಷಿಣಾ ।
ಬಹ್ವೀ ಹಿ ಬಾಧತೇ ಯುದ್ಧೇಷು ಚ ದಾಕ್ಷಿಣ್ಯ ॥ ೨೬ ॥

ಏಷ್ಟು ಬಳಿಕವೆನ್ನು ಬಳಿಯಲ್ಲಿ ನಾನು ಅವನನ್ನು ಮೊದಲು ಕೊಲ್ಲಲಿಲ್ಲ. ದಾಕ್ಷಿಣ್ಯವಾದ ಘಟೋತ್ಕಚನು ನಿಮ್ಮ ಬಗ್ಗೆ ಒಳ್ಳೆಯದನ್ನು. ಯುದ್ಧದ್ವೇಷವನ್ನೂ ಮಾಡಿಯೇನು

ಸ ತು ಬದ್ಧಾಂಗುಲಿತ್ರಾಣೋ ನೈಷಾದಿರ್ದೃಢವಿಕ್ರಮಃ ।
ಅಸ್ಯನ್ನೇಕೋ ವನಚರೋ ಬಭೌ ರಾಮ ಇವಾಪರಃ ॥ ೧೮ ॥

ದೃಢವಿಕ್ರಮನಾದ ಏಕಲವ್ಯನಾದರೂ ಅಂಗುಲಿತ್ರಾಣಗಳನ್ನು ಧರಿಸಿ ಕಾಡಿನಲ್ಲಿ ಸಂಚರಿಸಿ ಬಾಣಗಳನ್ನು ಬಿಡುತ್ತಾ ಇನ್ನೊಬ್ಬ ರಾಮನಂತೆ ಶೋಭಿಸಿದನು.

ಏಕಲವ್ಯಂ ಹಿ ಸಾಂಗುಷ್ಠಮಶಕ್ತಾ ದೇವದಾನವಾಃ ।
ಸರಾಕ್ಷಸೋರಗಾಃ ಪಾರ್ಥ ವಿಜೇತುಂ ಯುಧಿ ಕರ್ಹಿಚಿತ್ ॥ ೧೯ ॥

ಎಲೈ ಪಾರ್ಥನೇ, ಅಂಗುಷ್ಠಸಹಿತನಾದ ಏಕಲವ್ಯನನ್ನು ದೇವ-ದಾನವರು, ರಾಕ್ಷಸ-ಉರಗಗಳು ಯುದ್ಧದಲ್ಲಿ ಯಾವ ರೀತಿಯಿಂದಲೂ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ.

ಕಿಮು ಮಾನುಷಮಾತ್ರೇಣ ಶಕ್ಯಃ ಸ್ಯಾತ್ ಪ್ರತಿವೀಕ್ಷಿತುಮ್ ।
ದೃಢಮುಷ್ಟಿಃ ಕೃತೀ ನಿತ್ಯಮಸ್ಯಮಾನೋ ದಿವಾನಿಶಮ್ ।
ತ್ವದ್ಧಿತಾರ್ಥಂ ತು ಸ ಮಯಾ ಹತಃ ಸಂಗ್ರಾಮಮೂರ್ಧನಿ ॥ ೨೦ ॥

ಇನ್ನು ದೃಢಮುಷ್ಟಿಯುಳ್ಳವನೂ, ಕುಶಲನೂ, ಹಗಲು-ರಾತ್ರಿಯೂ ಬಾಣಗಳನ್ನು ಪ್ರಯೋಗಿಸಿ ಅಭ್ಯಾಸವನ್ನು ಮಾಡುವವನೂ ಆದ ಅವನನ್ನು ಮನುಷ್ಯ ಮಾತ್ರನಾದವನು ನೋಡಲು ಸಾಧ್ಯವಾಗಿರುತ್ತಿದ್ದಿತೇ? ನಿನ್ನ ಹಿತಕ್ಕಾಗಿ ನಾನು ಅವನನ್ನು ದೊಡ್ಡ ಯುದ್ಧದಲ್ಲಿ ಕೊಂದೆನು.

ಚೇದಿರಾಜಶ್ಚ ವಿಕ್ರಾಂತಃ ಪ್ರತ್ಯಕ್ಷಂ ನಿಹತಸ್ತವ ।
ಸ ಚಾಪ್ಯಶಕ್ಯಃ ಸಂಗ್ರಾಮೇ ಜೇತುಂ ಸರ್ವೈಃ ಸುರಾಸುರೈಃ ॥ ೨೧ ॥

ಪರಾಕ್ರಮಶಾಲಿಯಾದ ಶಿಶುಪಾಲನೂ ಸಹ ನಿನ್ನ ಎದುರಿನಲ್ಲಿಯೇ ಕೊಲ್ಲಲ್ಪಟ್ಟನು. ಅವನೂ ಸಹ ಯುದ್ಧದಲ್ಲಿ ಸರ್ವಸುರಾಸುರರಿಂದಲೂ ಸೋಲಿಸಲು ಅಶಕ್ಯನಾದವನು.

ವಧಾರ್ಥಂ ತಸ್ಯ ಜಾತೋಽಹಮನ್ಯೇಷಾಂ ಚ ಸುರದ್ವಿಷಾಮ್ ।
ತ್ವತ್ಸಹಾಯೋ ನರವ್ಯಾಘ್ರ ಲೋಕಾನಾಂ ಹಿತಕಾಮ್ಯಯಾ ॥ ೨೨ ॥

ಎಲೈ ನರವ್ಯಾಘ್ರನೇ, ಅವನ ವಧೆಗಾಗಿ ಮತ್ತು ಲೋಕದ ಹಿತದ ದೃಷ್ಟಿಯಿಂದ ನಿನ್ನ ಸಹಾಯವನ್ನು ಪಡೆದು ಉಳಿದ ದೇವತಾದ್ವೇಷಿಗಳ ವಧೆಗಾಗಿ ನಾನು ಅವತರಿಸಿದ್ದೇನೆ.

ಹಿಡಿಂಬಬಕಕಿರ್ಮೀರಾ ಭೀಮಸೇನೇನ ಪಾತಿತಾಃ ।
ರಾವಣೇನ ಸಮಪ್ರಾಣಾ ಬ್ರಹ್ಮಯಜ್ಞವಿನಾಶನಾಃ ॥ ೨೩ ॥

ರಾವಣನಿಗೆ ಸಮಾನನಾದ ಪ್ರಾಣಶಕ್ತಿಯುಳ್ಳ, ಬ್ರಾಹ್ಮಣರ ಯಜ್ಞವಿನಾಶಕರಾದ ಹಿಡಿಂಬ-ಬಕ-ಕಿರ್ಮೀರರು ಭೀಮಸೇನನಿಂದ ಉರುಳಿಸಲ್ಪಟ್ಟರು.

ಹತಸ್ತಥೈವ ಮಾಯಾವೀ ಹೈಡಿಂಬೇನಾಪ್ಯಲಾಯುಧಃ ।
ಹೈಡಿಂಬಶ್ಚಾಪ್ಯುಪಾಯೇನ ಶಕ್ತ್ಯಾ ಕರ್ಣೇನ ಘಾತಿತಃ ॥ ೨೪ ॥

ಹಾಗೆಯೇ ಮಾಯಾವಿಯಾದ ಅಲಾಯುಧನೂ ಘಟೋತ್ಕಚನಿಂದ ಹತನಾದನು. ಘಟೋತ್ಕಚನನ್ನೂ ಸಹ ಉಪಾಯವನ್ನು ಆಶ್ರಯಿಸಿ ಕರ್ಣನಿಂದ ಶಕ್ತಿಯ ಮೂಲಕ ಕೊಲ್ಲಿಸಿದೆನು.

ಯದಿ ಹ್ಯೇನಂ ನಾಹನಿಷ್ಯತ್ ಕರ್ಣಃ ಶಕ್ತ್ಯಾ ಮಹಾಮೃಧೇ ।
ಮಯಾ ವಧ್ಯೋಽಭವಿಷ್ಯತ್ ಸ ಭೈಮಸೇನಿರ್ಘಟೋತ್ಕಚಃ ॥ ೨೫ ॥

ಕರ್ಣನು ದೊಡ್ಡ ಯುದ್ಧದಲ್ಲಿ ಶಕ್ತಿಯಿಂದ ಅವನನ್ನು ಕೊಲ್ಲದಿದ್ದರೆ ಭೀಮಸೇನನ ಪುತ್ರನಾದ ಘಟೋತ್ಕಚನು ನನ್ನಿಂದ ಹತನಾಗುತ್ತಿದ್ದನು.

ಯದ್ಯಪಿ ಭೀಮಸೇನನ ಪುತ್ರನಾದ ಘಟೋತ್ಕಚನು ದೇವತೆಯಾದ ಸರಿ. ಆದರೂ ಅಸುರಯೋನಿಯಲ್ಲಿ ಹುಟ್ಟಿದ ಕಾರಣದಿಂದ ಸ್ವಲ್ಪ ಅಸುರಾವೇಶದಿಂದಲೂ ಮತ್ತು ತನ್ನ ಸೇನೆಯಲ್ಲಿರುವ ದುರ್ಜನರಾದ ಅಸುರರ ವಶನಾದ ಕಾರಣದಿಂದಲೂ ಅವನು ತನ್ನಿಮಿತ್ತವಾಗಿ ಬ್ರಹ್ಮದ್ರೋಹಾದಿಗಳನ್ನು ಮಾಡಬಹುದು. ಆದ್ದರಿಂದ ಪುಣ್ಯಾತ್ಮರಾದ ನಿಮಗೂ ಸ್ವಲ್ಪ- ಸ್ವಲ್ಪ ಪಾಪದಲ್ಲಿ ಲೇಪವುಂಟಾದೀತು. ಆದ್ದರಿಂದ ನಿಮ್ಮ ಹಿತದ ಸಲುವಾಗಿ ಅವನನ್ನು ಕೊಲ್ಲಿಸಿದೆ ಎಂದು ಅರ್ಥ - ಲಕ್ಷಾಲಂಕಾರ.

ಮಯಾ ನ ನಿಹತಃ ಪೂರ್ವಮೇಷ ಯುಷ್ಮತ್ಪ್ರಿಯೇಪ್ಸಯಾ ।
ಏಷ ಹಿ ಬ್ರಾಹ್ಮಣದ್ವೇಷೀ ಯಜ್ಞದ್ವೇಷೀ ಚ ರಾಕ್ಷಸಃ ॥ ೨೬ ॥

ನಿಮ್ಮ ಹಿತವನ್ನು ಬಯಸಿ ನಾನು ಅವನನ್ನು ಮೊದಲು ಕೊಲ್ಲಲಿಲ್ಲ. ರಾಕ್ಷಸನಾದ ಘಟೋತ್ಕಚನು ಸ್ವಲ್ಪ ಬ್ರಾಹ್ಮಣದ್ವೇಷವನ್ನೂ, ಯಜ್ಞದ್ವೇಷವನ್ನೂ ಮಾಡುವವನು.

ಧರ್ಮಸ್ಯ ಲೋಪ್ತಾ ಪಾಪಾತ್ಮಾ ತಸ್ಮಾದೇಷ ನಿಪಾತಿತಃ ।
ವ್ಯಂಸಿತಾ ಚಾಪ್ಯುಪಾಯೇನ ಶಕ್ರದತ್ತಾ ಮಯಾಽನಘ ॥ ೨೭ ॥

ಅವನು ಧರ್ಮದ ಲೋಪವನ್ನು ಮಾಡುವವನು ಮತ್ತು ಪಾಪದಿಂದ ಕೂಡಿದವನು. ಆದ್ದರಿಂದ ಅವನನ್ನು ಕೊಲ್ಲಬೇಕಾಯಿತು. ಎಲೈ ಅನಘನೇ, ನಾನು ಇಂದ್ರನು ಕೊಟ್ಟ ಆ ಶಕ್ತಿಯನ್ನು ಉಪಾಯದಿಂದ ವ್ಯರ್ಥಗೊಳಿಸಿದೆ.

ಯೇ ಹಿ ಧರ್ಮಸ್ಯ ಲೋಪ್ತಾರೋ ವಧ್ಯಾಸ್ತೇ ಮಮ ಪಾಂಡವ ।
ಧರ್ಮಸಂಸ್ಥಾಪನಾರ್ಥಂ ಹಿ ಪ್ರತಿಜ್ಞೈಷಾ ಮಮಾವ್ಯಯಾ ॥ ೨೮ ॥

ಎಲೈ ಪಾಂಡವನೇ, ಯಾರು ಧರ್ಮಲೋಪವನ್ನು ಮಾಡುವರೋ ಅವರು ನನ್ನಿಂದ ವಧ್ಯರಾಗುತ್ತಾರೆ. ಈ ನನ್ನ ಅವತಾರವು ಧರ್ಮಸಂಸ್ಥಾಪನೆ- ಗೋಸ್ಕರವಾಗಿ ಇದೆ ಎಂದು ನನ್ನ ಶಾಶ್ವತವಾದ ಪ್ರತಿಜ್ಞೆಯಿದೆ.

ಬ್ರಹ್ಮ ಸತ್ಯಂ ದಮಃ ಶೌಚಂ ಧರ್ಮೋ ಹ್ರೀಃ ಶ್ರೀರ್ಧೃತಿಃ ಕ್ಷಮಾ ।
ಯತ್ರ ತತ್ರ ರಮೇ ನಿತ್ಯಮಹಂ ಸತ್ಯೇನ ತೇ ಶಪೇ ॥ ೨೯ ॥

ವೇದಗಳು, ಸತ್ಯ, ಇಂದ್ರಿಯನಿಗ್ರಹ, ಶೌಚ, ಧರ್ಮ, ನಾಚಿಕೆ, ಸಂಪತ್ತು, ಧೈರ್ಯ, ಕ್ಷಮೆ ಎಲ್ಲಿ ಇವೆಯೋ ಅಲ್ಲಿ ನಾನು ಸಂತೋಷವಾಗಿರುತ್ತೇನೆ. ಈ ಮಾತನ್ನು ನಿನಗೆ ಸತ್ಯದ ಮೇಲೆ ಆಣೆಯಿಟ್ಟು ನಾನು ಹೇಳುತ್ತಿದ್ದೇನೆ.

ನ ವಿಷಾದಸ್ತ್ವಯಾ ಕಾರ್ಯಃ ಕರ್ಣಂ ವೈಕರ್ತನಂ ಪ್ರತಿ ।
ಉಪದೇಕ್ಷ್ಯಾಮ್ಯುಪಾಯಂ ತೇ ಯೇನ ತಂ ಪ್ರಸಹಿಷ್ಯಸಿ ॥ ೩೦ ॥

ಎಲೈ ಪಾರ್ಥನೇ, ವೈಕರ್ತನನಾದ ಕರ್ಣನ ವಿಷಯದಲ್ಲಿ ನೀನು ವಿಷಾದವನ್ನು ಪಡಬೇಕಾಗಿಲ್ಲ. ಅವನನ್ನು ಯುದ್ಧದಲ್ಲಿ ಎದುರಿಸಿ ಸಹಿಸುವ ಉಪಾಯವನ್ನು ನಾನು ನಿನಗೆ ಹೇಳಿಕೊಡುವೆನು.

ಸುಯೋಧನಂ ಚಾಪಿ ರಣೇ ಹನಿಷ್ಯತಿ ವೃಕೋದರಃ ।
ತಸ್ಯ ಚಾಪಿ ವಧೋಪಾಯಂ ವಕ್ಷ್ಯಾಮಿ ತವ ಪಾಂಡವ ॥ ೩೧ ॥

ವೃಕೋದರನು ಸುಯೋಧನನನ್ನು ರಣರಂಗದಲ್ಲಿ ಕೊಲ್ಲುವನು. ಎಲೈ ಪಾಂಡವನೇ, ಅವನ ವಧೆಯ ಉಪಾಯವನ್ನೂ ನಿನಗೆ ಹೇಳುವೆನು.

ವರ್ಧತೇ ತುಮುಲಸ್ತೀವ್ರ ಶಬ್ದಃ ಪರಚಮೂಂ ಪ್ರತಿ ।
ವಿದ್ರವಂತಿ ಚ ಸೈನ್ಯಾನಿ ತ್ವದೀಯಾನಿ ದಿಶೋ ದಶ ॥ ೩೨ ॥

ತೀವ್ರವಾದ ಶಬ್ದವು ಹೆಚ್ಚಾಗುತ್ತಿದೆ. ನಿನ್ನ ಸೈನ್ಯಗಳು ಹತ್ತುದಿಕ್ಕುಗಳಿಗೂ ಓಡಿ ಹೋಗುತ್ತಿವೆ.

ಲಬ್ಧಲಕ್ಷ್ಯಾ ಹಿ ಕೌರವ್ಯಾ ವಿಧಮಂತಿ ಚಮೂಂ ತವ ।
ದಹತ್ಯೇಷ ಚ ವಃ ಸೈನ್ಯಂ ದ್ರೋಣಃ ಪ್ರಹರತಾಂ ವರಃ ॥ ೩೩ ॥

ಗುರಿಯನ್ನು ಹೊಡೆಯುತ್ತಿರುವ ಕೌರವ ಸೈನಿಕರು ನಿನ್ನ ಸೈನ್ಯವನ್ನು ಹಾರಿಸುತ್ತಿದ್ದಾರೆ. ಪ್ರಹಾರ ಮಾಡುವರಲ್ಲಿ ಶ್ರೇಷ್ಠರಾದ ಈ ದ್ರೋಣರು ನಿಮ್ಮ ಸೈನ್ಯವನ್ನು ದಹಿಸುತ್ತಿದ್ದಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಷಷ್ಟ್ಯಧಿಕಶತತಮೋಽಧ್ಯಾಯಃ ॥

॥ ದ್ರೋಣವಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆಂಟನೆಯ ಅಧ್ಯಾಯ

ಅರ್ಜುನನ ಮೇಲೆ ಶಕ್ತಿಯನ್ನು ಪ್ರಯೋಗಿಸದಿರಲು ಕಾರಣ ನಿರೂಪಣೆ. ಶಕ್ತಿಯ ವೈಫಲ್ಯದಿಂದ ಧೃತರಾಷ್ಟ್ರನ ಶೋಕ.

ಧೃತರಾಷ್ಟ್ರಃ

ಏಕವೀರವಧೇಽಮೋಘಾ ಶಕ್ತಿಃ ಸೂತಾತ್ಮಜೇ ಯದಾ ।
ಕಸ್ಮಾತ್ ಸರ್ವಾನ್ ಸಮುತ್ಸೃಜ್ಯ ಸ ತಾಂ ಪಾರ್ಥೇ ನ ಮುಕ್ತವಾನ್ ॥

ಧೃತರಾಷ್ಟ್ರ- ಸೂತಪುತ್ರನಾದ ಕರ್ಣನಲ್ಲಿ ಒಬ್ಬ ವೀರನ ವಧೆಯ ವಿಷಯದಲ್ಲಿ ವ್ಯರ್ಥವಾಗದ ಶಕ್ತಿ ಇದ್ದಾಗ ಅವನು ಎಲ್ಲರನ್ನೂ ಬಿಟ್ಟು ಅರ್ಜುನನ ಮೇಲೆ ಅದನ್ನು ಏಕೆ ಎಸೆಯಲಿಲ್ಲ?

ತಸ್ಮಿನ್ ಹತೇ ಹತಾ ಹಿ ಸ್ಯುಃ ಸರ್ವೇ ಪಾಂಡವಸೃಂಜಯಾಃ ।
ಏಕವೀರವಧೇ ಕಸ್ಮಾನ್ನ ಯುದ್ಧೇ ಜಯಮಾದಧತ್ ॥ ೨ ॥

ಅರ್ಜುನನೊಬ್ಬನು ಹತನಾಗಿದ್ದರೆ ಎಲ್ಲ ಪಾಂಡವ-ಸೃಂಜಯರೂ ಹತರಾಗಿರುತ್ತಿದ್ದರು. ಆದ್ದರಿಂದ ಒಬ್ಬ ವೀರನನ್ನು ಕೊಂದು ಏಕೆ ಅವನು ಯುದ್ಧದಲ್ಲಿ ಜಯವನ್ನು ಗಳಿಸಲಿಲ್ಲ?

ಆಹೂತೋ ನ ನಿವರ್ತೇಯಮಿತಿ ತಸ್ಯ ಮಹಾವ್ರತಮ್ ।
ಸ್ವಯಮಾಹ್ವಯಿತವ್ಯಃ ಸ ಸೂತಪುತ್ರೇಣ ಫಲ್ಗುನಃ ॥ ೩ ॥

ಯುದ್ಧದಲ್ಲಿ ಆಹ್ವಾನ ಮಾಡಿದರೆ ನಾನು ಹಿಂದಿರುಗುವುದಿಲ್ಲವೆಂದು ಅರ್ಜುನನ ಮಹಾವ್ರತ. ಸೂತಪುತ್ರನು ಸ್ವತಃ ಅರ್ಜುನನನ್ನು ಆಹ್ವಾನ ಮಾಡಬೇಕಾಗಿದ್ದಿತು.

ತತೋ ದ್ವೈರಥಮಾನೀಯ ಫಲ್ಗುನಂ ಶಕ್ರದತ್ತಯಾ ।
ನ ಜಘಾನ ವೃಷಾ ಕಸ್ಮಾತ್ ತನ್ಮಮಾಚಕ್ಷ್ವ ಸಂಜಯ ॥ ೪ ॥

ಎಲೈ ಸಂಜಯನೇ, ಅನಂತರ ಎರಡು ರಥದ ದ್ವಂದ್ವಯುದ್ಧದಲ್ಲಿ ಅರ್ಜುನನನ್ನು ಬರಮಾಡಿ ವೃಷನಾದ ಕರ್ಣನು ಇಂದ್ರದತ್ತವಾದ ಶಕ್ತಿಯಿಂದ ಅವನನ್ನು ಏಕೆ ಕೊಲ್ಲಲಿಲ್ಲವೆಂದು ನನಗೆ ಹೇಳು.

ನೂನಂ ಬುದ್ಧಿವಿಹೀನಶ್ಚಾಪ್ಯಸಹಾಯಶ್ಚ ಮೇ ಸುತಃ ।
ಶತ್ರುಭಿರ್ವ್ಯಂಸಿತೋಪಾಯಃ ಕಥಂ ನು ಸ ಜಯೇದರೀನ್ ॥ ೫ ॥

ನಿಶ್ಚಿತವಾಗಿ ನನ್ನ ಪುತ್ರನು ಬುದ್ಧಿಯಿಲ್ಲದವನು ಮತ್ತು ಸಹಾಯರಹಿತನಾದವನು. ಅವನ ಉಪಾಯಗಳನ್ನು ಶತ್ರುಗಳು ವ್ಯರ್ಥಗೊಳಿಸಿದ್ದಾರೆ. ಅವನು ಹೇಗೆ ಶತ್ರುಗಳನ್ನು ಗೆದ್ದಾನು?

ಯಾ ಹ್ಯಸ್ಯ ಪರಮಾ ಶಕ್ತಿರ್ಜಯಸ್ಯ ಚ ಪರಾಯಣಮ್ ।
ಸಾ ಶಕ್ತಿರ್ವಾಸುದೇವೇನ ವ್ಯಂಸಿತಾಸ್ಯ ಘಟೋತ್ಕಚೇ ॥ ೬ ॥

ಯಾವುದು ಅವನ ಪರಮಶಕ್ತಿಯಾಗಿದ್ದಿತೋ ಮತ್ತು ಜಯಕ್ಕೆ ಮುಖ್ಯ ಆಸರೆಯಾಗಿದ್ದಿತೋ ಅಂತಹ ಶಕ್ತಿಯನ್ನು ಕೃಷ್ಣನು ಘಟೋತ್ಕಚನಲ್ಲಿ ಪ್ರಯೋಗಿಸುವಂತೆ ಮಾಡಿ ದುರ್ಯೋಧನನು ಅದರಿಂದ ಹೀನನಾಗುವಂತೆ ಮಾಡಿದ್ದಾನೆ.

ಕುರ್ಯೇರ್ಯಥಾ ಹಸ್ತಗತಂ ಹ್ರಿಯೇದ್ ಬಿಲ್ವಂ ಬಲೀಯಸಾ ।
ತಥಾ ಶಕ್ತಿರಮೋಘಾ ಸಾ ಮೋಘೀಭೂತಾ ಘಟೋತ್ಕಚೇ ॥ ೭ ॥

ಕೈಚೊತ್ತಾದವನ ಹಸ್ತದಲ್ಲಿರುವ ಬಿಲ್ವಫಲವನ್ನು ಪ್ರಬಲನಾದವನು ಹಾರಿಸಿದಂತೆ ಅಮೋಘವಾದ ಶಕ್ತಿಯು ಘಟೋತ್ಕಚನಲ್ಲಿ ಪ್ರಯೋಗಿಸಿ ವ್ಯರ್ಥಗೊಳಿಸಲ್ಪಟ್ಟತು.

ಯಥಾ ವರಾಹಸ್ಯ ಶುನಶ್ಚ ಯುದ್ಧ್ಯತೋ-
ಸ್ತಯೋರಭಾವೇ ಶ್ವಪಚಸ್ಯ ಲಾಭಃ ।
ಮನ್ಯೇ ವಿದ್ವನ್ ವಾಸುದೇವಸ್ಯ ತದ್ವದ್-
ಯುದ್ಧೇ ಲಾಭಃ ಕರ್ಣಹೈಡಿಂಬಯೋರ್ವೈ ॥ ೮ ॥

ಎಲೈ ವಿದ್ವಾಂಸನೇ, ವರಾಹ ಮತ್ತು ನಾಯಿಗಳು ಯುದ್ಧವನ್ನು ಮಾಡುವಾಗ ಅವುಗಳಲ್ಲಿ ಒಂದಿರದಿದ್ದರೂ ಹೇಗೆ ಶ್ವಪಚನಿಗೆ ಲಾಭವೋ ಹಾಗೆಯೇ ಕರ್ಣ-ಘಟೋತ್ಕಚರು ಯುದ್ಧವನ್ನು ಮಾಡುವಾಗ ಅವರಲ್ಲಿ ಒಬ್ಬರಿಲ್ಲದಿದ್ದರೂ ಅದು ವಾಸುದೇವನಿಗೆ ಲಾಭವಾಗುತ್ತದೆ.

ಘಟೋತ್ಕಚೋ ಯದಿ ಹನ್ಯಾದ್ಧಿ ಕರ್ಣಂ
ಪರೋ ಲಾಭಃ ಸ ಭವೇತ್ ಪಾಂಡವಾನಾಮ್ ।
ವೈಕರ್ತನೋ ವಾ ಯದಿ ತಂ ನಿಹನ್ಯಾತ್
ತಥಾಪಿ ಕೃತ್ಯಂ ಶಕ್ತಿನಾಶಾತ್ ಕೃತಂ ಸ್ಯಾತ್ ॥ ೯ ॥

ಒಂದು ಪಕ್ಷ ಘಟೋತ್ಕಚನೇ ಕರ್ಣನನ್ನು ಕೊಂದರೆ ಪಾಂಡವರಿಗೆ ಅದು ಪರಮ ಲಾಭವಾದೀತು. ಕರ್ಣನೇ ಘಟೋತ್ಕಚನನ್ನು ಕೊಂದರೂ ಶಕ್ತಿಯು ನಾಶವಾಗುವುದರಿಂದ ಪಾಂಡವ ಪ್ರಯೋಜನವು ಸಿದ್ಧಿಸುತ್ತದೆ.

ಇತಿ ಪ್ರಾಜ್ಞಃ ಪ್ರಜ್ಞಯೈತದ್ ವಿಚಾರ್ಯ
ಘಟೋತ್ಕಚಂ ಸೂತಪುತ್ರೇಣ ಯುದ್ಧೇ ।
ಅಯೋಧಯದ್ ವಾಸುದೇವೋ ನೃಸಿಂಹಃ
ಪ್ರಿಯಂ ಕುರ್ವನ್ ಪಾಂಡವಾನಾಂ ಹಿತಂ ಚ ॥ ೧೦ ॥

ಹೀಗೆ ಪ್ರಾಜ್ಞನೂ, ನರಸಿಂಹನೂ ಆದ ವಾಸುದೇವನು ತನ್ನ ಪ್ರಜ್ಞೆಯಿಂದ ವಿಚಾರ ಮಾಡಿ, ಪಾಂಡವರಿಗೆ ಪ್ರಿಯವನ್ನು ಮತ್ತು ಹಿತವನ್ನುಂಟು ಮಾಡುವವನಾಗಿ, ಘಟೋತ್ಕಚನು ಕರ್ಣನ ಜೊತೆಯಲ್ಲಿ ಯುದ್ಧವನ್ನು ಮಾಡುವುದಕ್ಕೆ ಪ್ರೇರಿಸಿದನು.

ಸಂಜಯಃ

ಏತಚ್ಚಿಕೀರ್ಷಿತಂ ಜ್ಞಾತ್ವಾ ಕರ್ಣೇ ಮಧುನಿಹಾ ನೃಪ ।
ನಿಯೋಜಯಾಮಾಸ ತದಾ ದ್ವೈರಥೇ ರಾಕ್ಷಸೇಶ್ವರಮ್ ॥ ೧೧ ॥

ಸಂಜಯ– ಎಲೈ ರಾಜನೇ, ಮಧುಸೂದನನಾದ ಕೃಷ್ಣನು ಇದನ್ನು ತಿಳಿದು ಆಗ ಕರ್ಣನ ಜೊತೆಯಲ್ಲಿ ದ್ವೈರಥದಲ್ಲಿ ರಾಕ್ಷಸೇಶ್ವರನಾದ ಘಟೋತ್ಕಚನನ್ನು ನಿಯೋಜಿಸಿದನು.

ಘಟೋತ್ಕಚಂ ಮಹಾವೀರ್ಯಂ ಮಹಾಬುದ್ಧಿರ್ಜನಾರ್ದನಃ ।
ಅಮೋಘಾಯಾ ವಿಘಾತಾರ್ಥಂ ರಾಜನ್ ದುರ್ಮಂತ್ರಿತೇ ತವ ॥೧೨॥

ಮಹಾಬುದ್ಧಿಯುಳ್ಳ ಜನಾರ್ದನನು ನಿನ್ನ ದುರ್ಮಂತ್ರದ ಫಲವಾಗಿ, ಎಲೈ ರಾಜನೇ, ಅಮೋಘವಾದ ಶಕ್ತಿಯನ್ನು ವಿಘಾತಗೊಳಿಸಲು ಮಹಾಪರಾಕ್ರಮಶಾಲಿಯಾದ ಘಟೋತ್ಕಚನನ್ನು ನಿಯೋಜಿಸಿದನು.

ತದೈವ ಕೃತಕಾರ್ಯಾ ಹಿ ವಯಂ ಸ್ಯಾಮ ಕುರೂದ್ವಹ ।
ನ ರಕ್ಷೇದ್ ಯದಿ ಕೃಷ್ಣಸ್ತಂ ಪಾರ್ಥಂ ಕರ್ಣಾನ್ಮಹಾರಥಾತ್ ॥ ೧೩ ॥

ಎಲೈ ಕುರೂದ್ವಹನೇ, ಕೃಷ್ಣನು ಮಹಾರಥನಾದ ಕರ್ಣನಿಂದ ಪಾರ್ಥನನ್ನು ರಕ್ಷಿಸದಿದ್ದರೆ ನಾವು ಆಗಲೇ ಕೃತಕೃತ್ಯರಾಗಿರುತ್ತಿದ್ದೆವು.

ಸಾಶ್ವಧ್ವಜರಥಃ ಸಂಖೇ ಧೃತರಾಷ್ಟ್ರ ಪತೇದ್ ಭುವಿ ।
ವಿನಾ ಜನಾರ್ದನಂ ಪಾರ್ಥೋ ಯೋಗಾನಾಮೀಶ್ವರಂ ಪ್ರಭುಮ್ ॥

ಎಲೈ ಧೃತರಾಷ್ಟ್ರನೇ, ಯೋಗೀಶ್ವರನೂ, ಪ್ರಭುವೂ ಆದ ಜನಾರ್ದನನಿಲ್ಲದಿದ್ದರೆ ಅರ್ಜುನನು ಯುದ್ಧದಲ್ಲಿ ಅಶ್ವ-ಧ್ವಜ-ರಥ ಸಹಿತನಾಗಿ ಭೂಮಿಯಲ್ಲಿ ಬಿದ್ದಿರುತ್ತಿದ್ದನು.

ತೈಸ್ತೈರುಪಾಯೈರ್ಬಾಹುಭೀ ರಕ್ಷ್ಯಮಾಣಃ ಸ ಪಾರ್ಥಿವ ।
ಜಯತ್ಯಭಿಮುಖಃ ಶತ್ರೂನ್ ಪಾರ್ಥಃ ಕೃಷ್ಣೇನ ಪಾಲಿತಃ ॥ ೧೫ ॥

ಅನೇಕವಾದ ಆಯಾ ಉಪಾಯಗಳಿಂದ ರಕ್ಷಿಸಲ್ಪಟ್ಟು ಕೃಷ್ಣನಿಂದ ಪಾಲಿತನಾದ ಅರ್ಜುನನು ಶತ್ರುಗಳಿಗೆ ಅಭಿಮುಖವಾಗಿ ನಿಂತು ಗೆಲ್ಲುತ್ತಿದ್ದಾನೆ.

ಸವಿಶೇಷಂ ತ್ವಮೋಘಾಯಾಃ ಕೃಷ್ಣೋಽರಕ್ಷತ ಪಾಂಡವಮ್ ।
ಹನ್ಯಾತ್ ಕ್ಷಿಪ್ತಾ ಹಿ ಕೌಂತೇಯಂ ಶಕ್ತಿರ್ವೃಕ್ಷಮಿವಾಶನಿಃ ॥ ೧೬ ॥

ಕೃಷ್ಣನು ವಿಶೇಷವಾಗಿ ಅರ್ಜುನನನ್ನು ಅಮೋಘವಾದ ಶಕ್ತಿಯಿಂದ ರಕ್ಷಿಸಿದನು. ಆ ಶಕ್ತಿಯನ್ನು ಅರ್ಜುನನ ಮೇಲೆ ಪ್ರಯೋಗಿಸಿದ್ದರೆ ಅದು ಸಿಡಿಲು ವೃಕ್ಷವನ್ನು ನಾಶಮಾಡುವಂತೆ ಅರ್ಜುನನನ್ನು ನಾಶಮಾಡಿರುತ್ತಿದ್ದಿತು.

ಧೃತರಾಷ್ಟ್ರಃ

ವಿರೋಧೀ ಚ ಕುಮಂತ್ರೀ ಚ ಪ್ರಾಜ್ಞಮಾನೀ ಮಮಾತ್ಮಜಃ ।
ಯಸ್ಯೈಷ ಸಮತಿಕ್ರಾಂತೋ ವಧೋಪಾಯೋ ಜಯಂ ಪ್ರತಿ ॥ ೧೭ ॥

ತವಾಪಿ ಸಮತಿಕ್ರಾಂತಮೇತದ್ ಗಾವಲ್ಗಣೇ ಕಥಮ್ ।
ಏತಮರ್ಥಂ ಮಹಾಬುದ್ಧೇ ಯತ್ ತ್ವಯಾ ನಾವಬೋಧಿತಃ ॥ ೧೮ ॥

ಧೃತರಾಷ್ಟ್ರ- ನನ್ನ ಪುತ್ರನು ಸಜ್ಜನರನ್ನು ವಿರೋಧ ಮಾಡುವವನು, ಕೆಟ್ಟ ಮತಿಯನ್ನು ಹೊಂದಿದವನು, ತನ್ನನ್ನೇ ಪ್ರಾಜ್ಞನೆಂದು ತಿಳಿದವನು. ಯುದ್ಧದಲ್ಲಿ ಜಯವನ್ನು ಕುರಿತು ಇದ್ದ ಒಂದೇ ಒಂದು ವಧೆಯ ಉಪಾಯವು ಅವನನ್ನು ಬಿಟ್ಟು ಹೊರಟು ಹೋಯಿತು. ಎಲೈ ಗಾವಲ್ಗಣಯೇ, ಮಹಾಬುದ್ಧಿಯುಳ್ಳವನೇ, ನೀನು ಅವನಿಗೆ ಈ ಬೋಧನೆಯನ್ನು ಉಂಟುಮಾಡದೆ ಇದ್ದುದರಿಂದ ಹೇಗೆ ಈ ಘಟನೆಯು ನಿನ್ನ ಬುದ್ಧಿಯನ್ನೂ ಮೀರಿತು?

ಸಂಜಯಃ

ದುರ್ಯೋಧನಸ್ಯ ಶಕುನೇರ್ಮಮ ದುಃಶಾಸನಸ್ಯ ಚ ।
ರಾತ್ರೌ ರಾತ್ರೌ ಭವತ್ಯೇಷಾ ನಿತ್ಯಮೇವ ಸಮರ್ಥನಾ ॥ ೧೯ ॥

ಸಂಜಯ– ದುರ್ಯೋಧನ, ಶಕುನಿ, ನಾನು ಮತ್ತು ದುಶ್ಶಾಸನರಿಗೆ - ಈ ನಾಲ್ವರಿಗೆ ಪ್ರತಿರಾತ್ರಿಯೂ ಯಾವಾಗಲೂ ಸಮರ್ಥನೆಯು ನಡೆಯುತ್ತದೆ.

ಶ್ವಃ ಸರ್ವಸೈನ್ಯಾನುತ್ಸೃಜ್ಯ ಜಹಿ ಕರ್ಣ ಧನಂಜಯಮ್ ।
ಪ್ರೇಷ್ಯವತ್ ಪಾಂಡುಪಾಂಚಾಲಾನುಪಭೋಕ್ಷ್ಯಾಮಹೇ ತ್ವತಃ ॥ ೨೦ ॥

ನಾಳೆಯ ದಿನ ಎಲ್ಲ ಸೈನ್ಯಗಳನ್ನೂ ಬಿಟ್ಟು ಎಲೈ ಕರ್ಣನೇ, ಧನಂಜಯನನ್ನು ಕೊಲ್ಲು. ಅನಂತರ ನಾವು ಪಾಂಡು-ಪಾಂಚಾಲರನ್ನು ದಾಸರಂತೆ ಮಾಡಿಕೊಂಡು ರಾಜ್ಯವನ್ನು ಅನುಭವಿಸುವೆವು.

ಅಥ ವಾ ನಿಹತೇ ಪಾರ್ಥೇ ಪಾಂಡುಪ್ವನ್ಯತಮಂ ತತಃ ।
ಸ್ಥಾಪಯೇದ್ ಯುಧಿ ವಾರ್ಷ್ಣೇಯಸ್ತಸ್ಮಾತ್ಕೃಷ್ಣೋ ನಿಪಾತ್ಯತಾಮ್ ॥

ಅಥವಾ ಒಂದು ಪಕ್ಷ ಅರ್ಜುನನು ಹತನಾದರೆ ಕೃಷ್ಣನು, ಪಾಂಡವರಲ್ಲಿ ಇನ್ನೊಬ್ಬನನ್ನು ಯುದ್ಧದಲ್ಲಿ ಮತ್ತು ರಾಜ್ಯದಲ್ಲಿ ಸ್ಥಾಪಿಸುವನು. ಆದ್ದರಿಂದ ಕೃಷ್ಣನನ್ನೇ ಕೊಲ್ಲುವವನಾಗು.

ಕೃಷ್ಣೋ ಹಿ ಮೂಲಂ ಪಾಂಡೂನಾಂ ಪಾರ್ಥಃ ಸ್ಕಂಧ ಇವೋದ್ಗತಃ ।
ಶಾಖಾ ಇವೇತರೇ ಪಾರ್ಥಾಃ ಪಾಂಚಾಲಾಃ ಪತ್ರಸಂಜ್ಞಿತಾಃ ॥ ೨೨ ॥

ಪಾಂಡವರಿಗೆ ಕೃಷ್ಣನು ಬೇರಿನಂತೆ ಇರುವವನು. ಅರ್ಜುನನು ನೆಲದಿಂದ ಮೇಲೆ ಬರುವ ಮರದ ಬುಡದಂತೆ ಇರುವವನು, ಇತರ ಪಾಂಡವರು ಶಾಖೆಗಳು, ಪಾಂಚಾಲರು ಪತ್ರಸ್ಥಾನದಲ್ಲಿದ್ದಾರೆ.

ಕೃಷ್ಣಾಶ್ರಯಾಃ ಕೃಷ್ಣಬಲಾಃ ಕೃಷ್ಣನಾಥಾಶ್ಚ ಪಾಂಡವಾಃ ।
ಕೃಷ್ಣಃ ಪರಾಯಣಂ ಚೈಷಾಂ ಜ್ಯೋತಿಷಾಮಿವ ಚಂದ್ರಮಾಃ ॥ ೨೩ ॥

ಪಾಂಡವರು ಕೃಷ್ಣನನ್ನು ಆಶ್ರಯಿಸಿದವರು, ಕೃಷ್ಣನೇ ಅವರಿಗೆ ಬಲ, ಎಲ್ಲ ಜ್ಯೋತಿಸ್ಸುಗಳಿಗೆ ಚಂದ್ರನಿದ್ದಂತೆ ಕೃಷ್ಣನೇ ಅವರಿಗೆ ಸ್ವಾಮಿ, ಕೃಷ್ಣನೇ ಅವರಿಗೆ ಗತಿ.

ತಸ್ಮಾತ್ಪರ್ಣಾನಿ ಶಾಖಾಶ್ಚ ಸ್ಕಂಧಂ ಚೋತ್ಸೃಜ್ಯ ಸೂತಜ ।
ಕೃಷ್ಣಂ ನಿಕೃಂಧಿ ಪಾಂಡೂನಾಂ ಮೂಲಂ ಸರ್ವತ್ರ ಸರ್ವದಾ ॥ ೨೪ ॥

ಆದ್ದರಿಂದ ಎಲೈ ಸೂತಪುತ್ರನೇ, ಪತ್ರಗಳನ್ನೂ, ಶಾಖೆಗಳನ್ನೂ, ಸ್ಕಂಧವನ್ನೂ ಬಿಟ್ಟು ಪಾಂಡವರಿಗೆ ಎಲ್ಲ ಕಾಲದಲ್ಲಿಯೂ ಮೂಲನಾದ ಕೃಷ್ಣನನ್ನೇ ಕೊಲ್ಲು.

ಹನ್ಯಾದ್ ಯದಿ ಹಿ ದಾಶಾರ್ಹಂ ಕರ್ಣೋ ಯಾದವನಂದನಮ್ ।
ಕೃತ್ಸ್ನಾ ವಸುಮತೀ ರಾಜನ್ ವಶೇ ತೇ ಸ್ಯಾನ್ನ ಸಂಶಯಃ ॥ ೨೫ ॥

ಎಲೈ ರಾಜನೇ, ಒಂದು ಪಕ್ಷ ಕರ್ಣನು ಯಾದವನಂದನನಾದ ಕೃಷ್ಣನನ್ನು ಕೊಂದರೆ ಸಮಗ್ರವಾದ ಭೂಮಿಯು ನಿನ್ನ ವಶವಾದೀತು. ಇದರಲ್ಲಿ ಸಂಶಯವಿಲ್ಲ.

ಯದಿ ಹಿ ಸ ನಿಹತಃ ಶಯೀತ ಭೂಮೌ
ಯದುಕುಲಪಾಂಡವನಂದನೋ ಮಹಾತ್ಮಾ ।
ನನು ತವ ವಸುಧಾ ನರೇಂದ್ರ ಸರ್ವಾ
ಸಗಿರಿಸಮುದ್ರವನಾ ವಶಂ ವ್ರಜೇತ ॥ ೨೬ ॥

ಪಾಂಡವನಂದನನೂ, ಯದುಕುಲನಂದನನೂ ಆದ ಆ ಮಹಾತ್ಮನು ಹತನಾಗಿ ಭೂಮಿಯಲ್ಲಿ ಮಲಗಿದರೆ ಎಲೈ ನರೇಂದ್ರನೇ, ಗಿರಿ-ಕಾನನ-ಸಮುದ್ರ ಸಹಿತವಾದ ಭೂಮಿಯು ನಿನ್ನ ವಶವಾದೀತು.

ಸಾ ತು ಬುದ್ಧಿಃ ಕೃತಾಪ್ಯೇವಂ ಜಾಗ್ರತಿ ತ್ರಿದಶೇಶ್ವರೇ ।
ಅಪ್ರಮೇಯೇ ಹೃಷೀಕೇಶೇ ಯುದ್ಧಕಾಲೇ ವ್ಯಮುಹ್ಯತ ॥ ೨೭ ॥

ಹೀಗೆ ನಾವು ಬುದ್ಧಿಯಿಂದ ನಿಶ್ಚಯಿಸಿದರೂ ತ್ರಿದಶಪತಿಯೂ, ಅಪ್ರಮೇಯನೂ ಆದ ಹೃಷೀಕೇಶನು ಜಾಗರೂಕನಾಗಿರುವ ಕಾರಣದಿಂದ ಯುದ್ಧಕಾಲದಲ್ಲಿ ಬುದ್ಧಿ ಮೋಹವು ಉಂಟಾಯಿತು.

ಅರ್ಜುನಂ ಚಾಪಿ ಕೌಂತೇಯಂ ಸದಾ ರಕ್ಷತಿ ಕೇಶವಃ ।
ನ ಹ್ಯೇನಮೈಚ್ಛತ್ ಪ್ರಮುಖೇ ಸೌತೇಃ ಸ್ಥಾಪಯಿತುಂ ರಣೇ ॥ ೨೮ ॥

ಕುಂತೀಪುತ್ರನಾದ ಅರ್ಜುನನನ್ನೂ ಕೇಶವನು ಸದಾ ರಕ್ಷಿಸುತ್ತಾನೆ. ಆದ್ದರಿಂದ ರಣರಂಗದಲ್ಲಿ ಕರ್ಣನ ಮುಂಭಾಗದಲ್ಲಿ ಅರ್ಜುನನಿರುವುದನ್ನು ಅವನು ಬಯಸಲಿಲ್ಲ.

ಅನ್ಯಾಂಶ್ಚಾಸ್ಮೈ ರಥೋದಾರಾನುಪಸ್ಥಾಪಯದಚ್ಯುತಃ ।
ಅಮೋಘಾಂ ತಾಂ ಕಥಂ ಶಕ್ತಿಂ ಮೋಘಾಂ ಕುರ್ಯಾಮಿತಿ ಪ್ರಭೋ ॥

ಎಲೈ ಪ್ರಭುವೇ, ಅಮೋಘವಾದ ಆ ಶಕ್ತಿಯನ್ನು ನಾನು ಹೇಗೆ ವ್ಯರ್ಥಗೊಳಿಸಿಯೇನು ಎಂದು ಚಿಂತಿಸಿ ಉಳಿದ ಶ್ರೇಷ್ಠರಥರನ್ನು ಕರ್ಣನ ಮುಂದೆ ನಿಯೋಜಿಸಿದನು.

ತತಃ ಕೃಷ್ಣಂ ಮಹಾಬಾಹುಃ ಸಾತ್ಯಕಿಃ ಸತ್ಯವಿಕ್ರಮಃ ।
ಪಪ್ರಚ್ಛ ರಥಶಾರ್ದೂಲ ಕರ್ಣಂ ಪ್ರತಿ ಮಹಾರಥಮ್ ॥ ೩೦ ॥

ಆಗ ಮಹಾಬಾಹುವೂ, ಸತ್ಯವಿಕ್ರಮನೂ ಆದ ಸಾತ್ಯಕಿಯು ಕೃಷ್ಣನನ್ನು ಕುರಿತು ಮಹಾರಥನಾದ ಕರ್ಣನ ವಿಷಯದಲ್ಲಿ ಇದೇ ಪ್ರಶ್ನೆಯನ್ನು ಮಾಡಿದನು.

ಅಯಂ ಚ ಪ್ರತ್ಯಯಃ ಕರ್ಣೇ ಶಕ್ಯಾ ಚಾಮಿತವಿಕ್ರಮ ।
ಕಿಮರ್ಥಂ ಸೂತಪುತ್ರೇಣ ನ ಮುಕ್ತಾ ಫಲ್ಗುನೇ ತು ಸಾ ॥ ೩೧ ॥

ಎಲೈ ಅಮಿತವಿಕ್ರಮನೇ, ಕರ್ಣನು ಶಕ್ತಿಯನ್ನು ಬಹಳ ನಂಬಿದ್ದಾನೆ. ಕರ್ಣನು ಏತಕ್ಕೆ ಅದನ್ನು ಅರ್ಜುನನ ಮೇಲೆ ಪ್ರಯೋಗಿಸಲಿಲ್ಲ?

ವಾಸುದೇವಃ

ದುಃಶಾಸನಶ್ಚ ಕರ್ಣಶ್ಚ ಶಕುನಿಶ್ಚ ಸಸೈಂಧವಃ ।
ಸತತಂ ಮಂತ್ರಯಂತಿ ಸ್ಮ ದುರ್ಯೋಧನಪುರೋಗಮಾಃ ॥ ೩೨ ॥

ವಾಸುದೇವ– ದುಶ್ಶಾಸನ, ಕರ್ಣ, ಶಕುನಿ, ಜಯದ್ರಥ - ಇವರು ದುರ್ಯೋಧನನನ್ನು ಮುಂದೆ ಮಾಡಿಕೊಂಡು ಯಾವಾಗಲೂ ಮಂತ್ರಾಲೋಚನೆಯನ್ನು ಮಾಡುತ್ತಿದ್ದರು.

ಕರ್ಣ ಕರ್ಣ ಮಹೇಷ್ವಾಸ ರಣೇऽಮಿತಪರಾಕ್ರಮ ।
ನಾನ್ಯಸ್ಯ ಶಕ್ತಿರೇಷಾ ತೇ ಮೋಕ್ತವ್ಯಾ ಜಯತಾಂ ವರ ॥ ೩೩ ॥

ಋತೇ ಮಹಾರಥಾತ್ ಪಾರ್ಥಾತ್ ಕುಂತೀಪುತ್ರಾದ್ಧನಂಜಯಾತ್ ।
ಸ ಹಿ ತೇಷಾಮತಿಯಶಾ ದೇವಾನಾಮಿವ ವಾಸವಃ ॥ ೩೪ ॥

ಎಲೈ ಕರ್ಣನೇ, ಕರ್ಣನೇ, ಮಹಾಧನುರ್ಧಾರಿಯೇ, ಜಯಿಸುವವರಲ್ಲಿ ಶ್ರೇಷ್ಠನಾದವನೇ, ಅಮಿತಪರಾಕ್ರಮವುಳ್ಳವನೇ, ನೀನು ಅರ್ಜುನನನ್ನು ಬಿಟ್ಟು ಬೇರೆ ಯಾರ ಮೇಲೂ ಈ ಶಕ್ತಿಯನ್ನು ಪ್ರಯೋಗಿಸಬಾರದು. ಮಹಾರಥನಾದ ಕುಂತೀಪುತ್ರನಾದ ಧನಂಜಯನೊಬ್ಬನೇ ದೇವತೆಗಳಿಗೆ ಇಂದ್ರನಿದ್ದಂತೆ ಪಾಂಡವರಿಗೆ ಬಹಳ ಯಶಸ್ಕರನಾದವನು.

ತಸ್ಮಿನ್ ವಿನಿಹತೇ ಸರ್ವೇ ಪಾಂಡವಾಃ ಸೃಂಜಯೈಃ ಸಹ ।
ಭವಿಷ್ಯಂತಿ ಗತಾತ್ಮಾನಃ ಸುರಾ ಇವ ನಿರಗ್ನಯಃ ॥ ೩೫ ॥

ಅವನು ಹತನಾದರೆ ಪಾಂಡವರು ಮತ್ತು ಸೃಂಜಯರು ಅಗ್ನಿಯಿಲ್ಲದ ದೇವತೆಗಳಂತೆ ಪ್ರಾಣತ್ಯಾಗವನ್ನು ಮಾಡುವರು (ಎಂದು ಹೇಳುತ್ತಿದ್ದರು).

ತಥೇತಿ ಚ ಪ್ರತಿಜ್ಞಾತಂ ಕರ್ಣೇನ ಶಿನಿಪುಂಗವ ।
ಹೃದಿ ನಿತ್ಯಂ ತು ಕರ್ಣಸ್ಯ ವಧೋ ಗಾಂಡೀವಧನ್ವನಃ ॥ ೩೬ ॥

ಎಲೈ ಶಿನಿಪುಂಗವನಾದ ಸಾತ್ಯಕಿಯೇ, ಹಾಗೆಯೇ ಆಗಲಿ ಎಂದು ಕರ್ಣನು ಪ್ರತಿಜ್ಞೆಯನ್ನು ಮಾಡುತ್ತಿದ್ದನು. ಕರ್ಣನ ಹೃದಯದಲ್ಲಿ ಯಾವಾಗಲೂ ಗಾಂಡೀವ ಧನುರ್ಧಾರಿಯಾದ ಅರ್ಜುನನ ವಧೆಯ ಚಿಂತನೆಯೇ ಇರುತ್ತಿದ್ದಿತು.

ಅಹಮೇವ ತು ರಾಧೇಯಂ ಮೋಹಯಾಮಿ ಯುಧಾಂವರ ।
ಯತೋ ನಾವಸೃಜಚ್ಛಕ್ತಿಂ ಪಾಂಡವೇ ಶ್ವೇತವಾಹನೇ ॥ ೩೭ ॥

ಎಲೈ ಯೋಧರಲ್ಲಿ ಶ್ರೇಷ್ಠನಾದವನೇ, ನಾನೇ ಕರ್ಣನಿಗೆ ಮೋಹವನ್ನು ಉಂಟು ಮಾಡುತ್ತಿದ್ದೆ. ಆ ಕಾರಣದಿಂದ ಪಾಂಡವನಾದ ಅರ್ಜುನನ ಮೇಲೆ ಶಕ್ತಿಯನ್ನು ಪ್ರಯೋಗಿಸಲಿಲ್ಲ.

ಫಲ್ಗುನಸ್ಯ ಹಿ ತಾಂ ಮೃತ್ಯುಮವಗಮ್ಯ ಯುಯುತ್ಸತಃ ।
ನ ನಿದ್ರಾ ನ ಚ ಮೇ ಹರ್ಷೋ ಮನಸೋಽಸ್ತಿ ಯುಧಾಂವರ ॥೩೮॥

ಎಲೈ ಯುದ್ಧಮಾಡುವವರಲ್ಲಿ ಶ್ರೇಷ್ಠನೇ, ಯುದ್ಧಮಾಡಲು ಬಯಸುವ ಅರ್ಜುನನಿಗೆ ಶಕ್ತಿಯು ಮೃತ್ಯುವೆಂದು ತಿಳಿದು ನಾನು ನಿದ್ರೆಯನ್ನೂ ಮಾಡಲಿಲ್ಲ, ನನ್ನ ಮನಸ್ಸಿಗೆ ಹರ್ಷವೂ ಉಂಟಾಗಲಿಲ್ಲ.

ಘಟೋತ್ಕಚೇ ವ್ಯಂಸಿತಾಂ ತು ದೃಷ್ಟ್ವಾ ತಾಂ ಶಿನಿಪುಂಗವ ।
ಮೃತ್ಯೋರಾಸ್ಯಾಂತರಾನ್ಮುಕ್ತಂ ಪಶ್ಯಾಮ್ಯದ್ಯ ಧನಂಜಯಮ್ ॥ ೩೯ ॥

ಎಲೈ ಶಿನಿಪುಂಗವನೇ, ಘಟೋತ್ಕಚನಲ್ಲಿ ಪ್ರಯೋಗಿಸಿ ವ್ಯರ್ಥವಾದ ಆ ಶಕ್ತಿಯನ್ನು ನೋಡಿ, ನಾನು ಈ ದಿನ ಧನಂಜಯನು ಮೃತ್ಯುವಿನ ಬಾಯಿಯಿಂದ ಹೊರಗೆ ಬಂದಿದ್ದಾನೆಂದು ಭಾವಿಸುತ್ತೇನೆ.

ನ ಪಿತಾ ನ ಚ ಮೇ ಮಾತಾ ನ ಯೂಯಂ ಭ್ರಾತರಸ್ತಥಾ ।
ನ ಚ ಪ್ರಾಣಾಸ್ತಥಾ ರಕ್ಷ್ಯಾ ಯಥಾ ಬೀಭತ್ಸೂರಾಹವೇ ॥ ೪೦ ॥

ನನಗೆ ನನ್ನ ತಂದೆಯಾಗಲೀ, ತಾಯಿಯಾಗಲೀ, ನೀವಾಗಲೀ, ಸಹೋದರರೇ ಆಗಲೀ ಅಥವಾ ನನ್ನ ಪ್ರಾಣಗಳೇ ಆಗಲಿ, ಯುದ್ಧದಲ್ಲಿ ಅರ್ಜುನನನ್ನು ರಕ್ಷಿಸಲ್ಪಡಬೇಕಾದುದು ಬೇರೆ ಯಾವುದೂ ಇಲ್ಲ.

ತ್ರೈಲೋಕ್ಯರಾಜ್ಯಾದ್ ಯತ್ಕಿಂಚದ್ ಭವೇದನ್ಯತ್ ಸುದುರ್ಲಭಮ್ ।
ನೇಚ್ಛೇಯಂ ಸಾತ್ವತಾಹಂ ತದ್ ಏನಾ ಪಾರ್ಥಂ ಧನಂಜಯಮ್ ॥

ಎಲೈ ಸಾತ್ವತನೇ, ತ್ರೈಲೋಕ್ಯ ರಾಜ್ಯಕ್ಕಿಂತ ಹೆಚ್ಚಿನದಾದ, ಅತ್ಯಂತ ದುರ್ಲಭವಾದುದು ಏನಾದರೂ ಇದ್ದರೆ ಕುಂತೀಪುತ್ರನಾದ ಧನಂಜಯನನ್ನು ಬಿಟ್ಟು ನಾನು ಅದನ್ನು ಬಯಸುವುದಿಲ್ಲ.

ಅತಃ ಪ್ರಹರ್ಷಃ ಸುಮಹಾನ್ ಯುಯುಧಾನಾದ್ಯ ಮೇಽಭವತ್ ।
ಮೃತಂ ಪ್ರತ್ಯಾಗತಮಿವ ದೃಷ್ಟ್ವಾ ಪಾರ್ಥಂ ಧನಂಜಯಮ್ ॥ ೪೨ ॥

ಎಲೈ ಯುಯುಧಾನನೇ, ಆದ್ದರಿಂದ ನನಗೆ (ಘಟೋತ್ಕಚನು ಮೃತನಾದಾಗ) ಈ ದಿನ ಮರಣವನ್ನು ಹೊಂದಿ ಹಿಂದಿರುಗಿದಂತಹ ಧನಂಜಯನನ್ನು ನೋಡಿ ಬಹಳ ಸಂತೋಷವಾಯಿತು.

ಅತಶ್ಚ ಪ್ರಹಿತೋ ಯುದ್ಧೇ ಮಯಾ ಕರ್ಣಾಯ ರಾಕ್ಷಸಃ ।
ನ ಹ್ಯನ್ಯಃ ಸಮರೇ ರಾತ್ರೌ ಶಕ್ತಃ ಕರ್ಣಂ ಪ್ರಬಾಧಿತುಮ್ ॥ ೪೩ ॥

ಆ ಕಾರಣದಿಂದ ನಾನು ಕರ್ಣನ ಎದುರಿಗೆ ರಾಕ್ಷಸನಾದ ಘಟೋತ್ಕಚನನ್ನು ಕಳುಹಿಸಿದೆ. ರಾತ್ರಿಯ ಸಮಯದಲ್ಲಿ ಯುದ್ಧದಲ್ಲಿ ಕರ್ಣನನ್ನು ಬಾಧಿಸಲು ಬೇರೆ ಇನ್ನೊಬ್ಬನು ಶಕ್ತನಾಗಿರಲಿಲ್ಲ.

ಸಂಜಯಃ

ಇತಿ ಸಾತ್ಯಕಯೇ ಪ್ರಾಹ ತದಾ ದೇವಕಿನಂದನಃ ।
ಧನಂಜಯಹಿತೇ ಯುಕ್ತಸ್ತತ್ಪ್ರಿಯೇ ಸತತಂ ರತಃ ॥ ೪೪ ॥

ಸಂಜಯ– ದೇವಕಿನಂದನನಾದ ಕೃಷ್ಣನು ಧನಂಜಯನ ಹಿತದಲ್ಲಿಯೇ ಸತತವಾಗಿಯೂ ರತನಾದವನೂ ಮತ್ತು ಅವನ ಹಿತವನ್ನೇ ಸಾಧಿಸುವವನೂ ಆಗಿ ಸಾತ್ಯಕಿಗೆ ಆಗ ಈ ರೀತಿಯಲ್ಲಿ ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಷ್ಟಷಷ್ಟ್ಯಧಿಕಶತತಮೋऽಧ್ಯಾಯಃ ॥

॥ ದ್ರೋಣವಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಕರ್ಣನ ಶಕ್ತಿಯ ವೈಫಲ್ಯವನ್ನು ನೋಡಿ ಧೃತರಾಷ್ಟ್ರನ ಶೋಕ. ವ್ಯಾಸರಿಂದ ಯುಧಿಷ್ಠಿರನಿಗೆ ಸಮಾಧಾನದ ವಚನಗಳು ಮತ್ತು ವ್ಯಾಸರ ಅಂತರ್ಧಾನ.

ಧೃತರಾಷ್ಟ್ರಃ

ಕರ್ಣದುರ್ಯೋಧನಾದೀನಾಂ ಶಕುನೇಃ ಸೌಬಲಸ್ಯ ಚ ।
ಅಪನೀತಂ ಮಹತ್ ತಾತ ತವ ಚೈವ ವಿಶೇಷತಃ ॥ ೧ ॥

ಧೃತರಾಷ್ಟ್ರ– ಪ್ರೀತಿಪಾತ್ರನೇ, ಕರ್ಣ-ದುರ್ಯೋಧನಾದಿಗಳ ಮತ್ತು ಸೌಬಲನಾದ ಶಕುನಿಯ ಅಪಚಾರವು ದೊಡ್ಡದಾಗಿದೆ ಮತ್ತು ವಿಶೇಷವಾಗಿ ನಿನ್ನ ಅಪಚಾರವೂ ದೊಡ್ಡದಾಗಿದೆ.

ಯದಾ ಜಾನೀತ ತಾಂ ಶಕ್ತಿಮೇಕಘ್ನೀಂ ಸತತಂ ರಣೇ ।
ಅನಿವಾರ್ಯಾಮಸಹ್ಯಾಂ ಚ ದೇವೈರಪಿ ಸವಾಸವೈಃ ॥ ೨ ॥

ಸಾ ಕಿಮರ್ಥಂ ನ ಕರ್ಣೇನ ಪ್ರವೃತ್ತೇ ಸಮರೇ ಪುರಾ ।
ನ ದೇವಕೀಸುತೇ ಮುಕ್ತಾ ಫಲ್ಗುನೇ ವಾಪಿ ಸಂಜಯ ॥ ೩ ॥

ಎಲೈ ಸಂಜಯನೇ, ಶಕ್ತಿಯು ರಣರಂಗದಲ್ಲಿ ಒಬ್ಬನನ್ನು ನಿಶ್ಚಿತವಾಗಿ ಕೊಲ್ಲುವುದೆಂದೂ, ಇಂದ್ರನಿಂದ ಸಹಿತರಾದ ದೇವತೆಗಳಿಂದಲೂ ಅದನ್ನು ನಿವಾರಿಸಲು ಸಾಧ್ಯವಿಲ್ಲವೆಂದೂ, ಅದು ಅಸಹ್ಯವಾದುದೆಂದೂ, ಸತತವಾಗಿ ತಿಳಿದಿದ್ದರೂ ಯುದ್ಧವು

ಪ್ರವೃತ್ತವಾದಾಗ ಕರ್ಣನು ದೇವಕೀ ಪುತ್ರನಾದ ಕೃಷ್ಣನ ಮೇಲೆ ಅಥವಾ ಅರ್ಜುನನ ಮೇಲೆ ಆ ಶಕ್ತಿಯನ್ನು ಏಕೆ ಪ್ರಯೋಗಿಸಲಿಲ್ಲ?

ಸಂಜಯಃ

ಸಂಗ್ರಾಮಾದ್ ವಿನಿವೃತ್ತಾನಾಂ ಸರ್ವೇಷಾಂ ನೋ ವಿಶಾಂಪತೇ ।
ರಾತ್ರೌ ಕುರುಕುಲಶ್ರೇಷ್ಠ ಮಂತ್ರೋಽಯಂ ಸಮಜಾಯತ ॥ ೪ ॥

ಸಂಜಯ– ಎಲೈ ರಾಜನೇ, ಕುರುಕುಲಶ್ರೇಷ್ಠನೇ, ಸಂಗ್ರಾಮದಿಂದ ಹಿಂದಿರುಗಿದ ನಾವೆಲ್ಲರೂ ಪ್ರತಿರಾತ್ರಿಯೂ ಮಂತ್ರಾಲೋಚನೆಯನ್ನು ಮಾಡಿದೆವು.

ಪ್ರಭಾತಮಾತ್ರೇ ಶ್ವೋಭೂತೇ ಕೇಶವಾಯಾರ್ಜುನಾಯ ವಾ ।
ಶಕ್ತಿರೇಷಾ ವಿಮೋಕ್ತವ್ಯಾ ಕರ್ಣ ಕರ್ಣೇತಿ ನಿತ್ಯಶಃ ॥ ೫ ॥

ಎಲೈ ಕರ್ಣನೇ, ಕರ್ಣನೇ, ನಾವು ಬೆಳಗಿನ ಸಮಯದಲ್ಲಿ ತಕ್ಷಣವೇ ಕೃಷ್ಣನ ಮೇಲೆ ಅಥವಾ ಅರ್ಜುನನ ಮೇಲೆ ಈ ಶಕ್ತಿಯನ್ನು ಪ್ರಯೋಗಿಸಬೇಕು ಎಂದು ನಿತ್ಯವೂ ಹೇಳಿದೆವು.

ತತಃ ಪ್ರಭಾತಸಮಯೇ ರಾಜನ್ ಕರ್ಣಸ್ಯ ದೈವತೈಃ ।
ಅನ್ಯೇಷಾಂ ಚೈವ ಯೋಧಾನಾಂ ಸಾ ಬುದ್ಧಿರ್ನಿಶ್ಯತೇ ಪುನಃ ॥ ೬ ॥

ಎಲೈ ರಾಜನೇ, ಆದರೆ ಪ್ರಭಾತ ಸಮಯದಲ್ಲಿ ದೇವತೆಗಳಿಂದ ಕರ್ಣನಿಗೂ ಮತ್ತು ಇತರ ಯೋಧರಿಗೂ ಆ ಬುದ್ಧಿಯು ನಾಶಪಡಿಸಲ್ಪಡುತ್ತಿದ್ದಿತು.

ದೈವಮೇವ ಪರಂ ಮನ್ಯೇ ಯತ್ ಕರ್ಣೋ ಹಸ್ತಸಂಸ್ಥಯಾ ।
ನ ಜಘಾನ ರಣೇ ಪಾರ್ಥಂ ಕೃಷ್ಣಂ ವಾ ದೇವಕೀಸುತಮ್ ॥ ೭ ॥

ಕೈಯಲ್ಲಿದ್ದ ಶಕ್ತಿಯಿಂದ ಕರ್ಣನು ರಣರಂಗದಲ್ಲಿ ಅರ್ಜುನನ್ನಾಗಲೀ, ದೇವಕೀ ಪುತ್ರನಾದ ಕೃಷ್ಣನನ್ನಾಗಲೀ ಕೊಲ್ಲದಿರುವುದಕ್ಕೆ ದೈವವೇ ಶ್ರೇಷ್ಠ ಕಾರಣವೆಂದು ತಿಳಿಯುತ್ತೇನೆ.

ತಸ್ಯ ಹಸ್ತಸ್ಥಿತಾ ಶಕ್ತಿಃ ಕಾಳರಾತ್ರಿರಿವೋದ್ಯತಾ ।
ದೈವೋಪಹತಬುದ್ಧಿತ್ವಾನ್ನ ತಾಂ ಕರ್ಣೋ ವಿಮುಕ್ತವಾನ್ ॥ ೮ ॥

ಕೃಷ್ಣೇ ವಾ ದೇವಕೀಪುತ್ರೇ ಮೋಹಿತೋ ದೇವಮಾಯಯಾ ।
ಪಾರ್ಥೇ ವಾ ಶಕ್ರಕಲ್ಪೇ ವೈ ವಧಾರ್ಥಂ ವಾಸವೀಂ ಪ್ರಭೋ ॥ ೯ ॥

ದೈವದಿಂದ ಬುದ್ಧಿಮೋಹವನ್ನು ಹೊಂದಿದ ಕರ್ಣನು ಕಾಳರಾತ್ರಿಯಂತೆ ಉದ್ಯತವಾದ ಶಕ್ತಿಯು ಕೈಯಲ್ಲಿದ್ದರೂ ಅದನ್ನು ಪ್ರಯೋಗಿಸಲಿಲ್ಲ. ಎಲೈ ಪ್ರಭುವೇ, ದೇವಮಾಯೆಯಿಂದ ಮೋಹಿತನಾದ ಅವನು ದೇವಕೀಪುತ್ರನಾದ ಕೃಷ್ಣನ ಮೇಲಾಗಲೀ ಅಥವಾ ಇಂದ್ರಸಮಾನನಾದ ಅರ್ಜುನನ ಮೇಲಾಗಲೀ ಅವರ ವಧೆಯನ್ನು ಉದ್ದೇಶಿಸಿ ಶಕ್ತಿಯನ್ನು ಪ್ರಯೋಗಿಸಲಿಲ್ಲ.

ಧೃತರಾಷ್ಟ್ರಃ

ದೈವೇನೈವ ಹತಾ ಯೂಯಂ ಸ್ವಬುದ್ಧ್ಯಾ ಕೇಶವಸ್ಯ ಚ ।
ಗತಾ ಹಿ ವಾಸವೀ ಹತ್ವಾ ತೃಣಭೂತಂ ಘಟೋತ್ಕಚಮ್ ॥ ೧೦ ॥

ಧೃತರಾಷ್ಟ್ರ- ನೀವು ದೈವದಿಂದಲೂ, ನಿಮ್ಮ ಬುದ್ಧಿಯಿಂದಲೂ ಮತ್ತು ಕೇಶವನ ಬುದ್ಧಿಯಿಂದಲೂ ಹತರಾಗಿದ್ದೀರಿ. ಅರ್ಜುನನನ್ನು ಹೋಲಿಸಿದರೆ ತೃಣಪ್ರಾಯನಾದ ಘಟೋತ್ಕಚನನ್ನು ಕೊಂದು ಇಂದ್ರದತ್ತವಾದ ಶಕ್ತಿಯು ಹೊರಟು ಹೋಯಿತು.

ಕರ್ಣಶ್ಚ ಮಮ ಪುತ್ರಾಶ್ಚ ಸರ್ವೇ ಚಾನ್ಯೇ ಚ ಪಾರ್ಥಿವಾಃ ।
ಅನೇನ ದುಷ್ಟಣೀತೇನ ಗತಾ ವೈವಸ್ವತಕ್ಷಯಮ್ ॥ ೧೧ ॥

ಕರ್ಣನೂ, ನನ್ನ ಪುತ್ರರೂ ಮತ್ತು ಉಳಿದ ಎಲ್ಲಾ ರಾಜರೂ ಈ ದುರ್ನೀತಿಯಿಂದ ಯಮಲೋಕಕ್ಕೆ ಹೋಗಿದ್ದಾರೆ.

ಭೂಯ ಏವ ತು ಮೇ ಶಂಸ ಯಥಾ ಯುದ್ಧಮವರ್ತತ ।
ಕುರೂಣಾಂ ಪಾಂಡವಾನಾಂ ಚ ಹೈಡಿಂಬೇ ನಿಹತೇ ತದಾ ॥ ೧೨ ॥

ಘಟೋತ್ಕಚನು ಹತನಾಗುತ್ತಿರಲು ಆಗ ಕೌರವರಿಗೂ ಮತ್ತು ಪಾಂಡವರಿಗೂ ಹೇಗೆ ಯುದ್ಧವು ನಡೆಯಿತೆಂದು ಪುನಃ ನನಗೆ ಹೇಳು.

ಯೇ ಚ ತೇಽಭ್ಯದ್ರವನ್ ದ್ರೋಣಂ ವ್ಯೂಢಾನೀಕಾಃ ಪ್ರಹಾರಿಣಃ ।
ಸೃಂಜಯಾಃ ಸಹ ಪಾಂಚಾಲೈಸ್ತೇಽಪ್ಯಕುರ್ವನ್ ಕಥಂ ರಣಮ್ ॥೧೩॥

ವ್ಯೂಹವನ್ನು ರಚಿಸಿದ ಪ್ರಹಾರಶೀಲರಾದ ಸೃಂಜಯ ಮತ್ತು ಪಾಂಚಾಲರಲ್ಲಿ ಯಾರು ದ್ರೋಣರ ಮೇಲೆ ಮುನ್ನುಗ್ಗಿದರು? ಹೇಗೆ ಯುದ್ಧವನ್ನು ಮಾಡಿದರು?

ಸೌಮದತ್ತೇರ್ವಧಾದ್ ದ್ರೋಣಮಾಯಸ್ತಂ ಸೈಂಧವಸ್ಯ ಚ ।
ಅಮರ್ಷಾಜ್ಜೀವಿತಂ ತ್ಯಕ್ತ್ವಾ ಗಾಹಮಾನಂ ವರೂಥಿನೀಮ್ ॥ ೧೪ ॥

ಜೃಂಭಮಾಣಮಿವ ವ್ಯಾಘ್ರಂ ವ್ಯಾತ್ತಾನನಮಿವಾಂತಕಮ್ ।
ಕಥಂ ಪ್ರತ್ಯುದ್ಯಯುರ್ದ್ರೋಣಮಸ್ಯಂತಂ ಪಾಂಡುಸೃಂಜಯಾಃ ॥ ೧೫ ॥

ಭೂರಿಶ್ರವನ ವಧೆಯಿಂದಲೂ, ಸೈಂಧವನ ವಧೆಯಿಂದಲೂ ಕೋಪಗೊಂಡು, ರೋಷದಿಂದ ಕೂಡಿ, ಆಕಳಿಸುವ ವ್ಯಾಘ್ರದಂತೆ, ಬಾಯ್ತೆರೆದ ಯಮನಂತೆ ಪಾಂಡವ ಸೇನೆಯನ್ನು ಪ್ರವೇಶಿಸಿದ, ಸತತವಾಗಿ ಬಾಣಗಳನ್ನು ಪ್ರಯೋಗಿಸುತ್ತಿದ್ದ ದ್ರೋಣರ ಜೊತೆಯಲ್ಲಿ ಪಾಂಡು-ಸೃಂಜಯರು ಹೇಗೆ ಯುದ್ಧವನ್ನು ಮಾಡಿದರು?

ಆಚಾರ್ಯಂ ಯೇ ಚ ತೇಽರಕ್ಷನ್ ದುರ್ಯೋಧನಪುರೋಗಮಾಃ ।
ದ್ರೌಣಿಕರ್ಣಕೃಪಾಸ್ತಾತ ತೇಽಪ್ಯಕುರ್ವನ್ ಕಿಮಾಹವೇ ॥ ೧೬ ॥

ದುರ್ಯೋಧನ ಮೊದಲಾದವರಲ್ಲಿ ಯಾರು ಆಚಾರ್ಯರನ್ನು ರಕ್ಷಿಸಿದರು? ಎಲೈ ಪ್ರೀತಿಪಾತ್ರನೇ, ಅಶ್ವತ್ಥಾಮ-ಕರ್ಣ-ಕೃಪರು ಯುದ್ಧದಲ್ಲಿ ಏನು ಮಾಡಿದರು?

ಭಾರದ್ವಾಜಂ ಜಿಘಾಂಸಂತೌ ಸವ್ಯಸಾಚಿವೃಕೋದರೌ ।
ಸಮಾರ್ಚ್ಛನ್ ಮಾಮಕಾ ಯುದ್ಧೇ ಕಥಂ ಸಂಜಯ ಶಂಸ ಮೇ ॥೧೭॥

ಎಲೈ ಸಂಜಯನೇ, ದ್ರೋಣರನ್ನು ಕೊಲ್ಲಲು ಬಯಸಿದ ಭೀಮಾರ್ಜುನರನ್ನು ನನ್ನವರು ಯುದ್ಧದಲ್ಲಿ ಹೇಗೆ ಸಮೀಪಿಸಿದರು ಎಂಬುದನ್ನು ನನಗೆ ಹೇಳು.

ಸಿಂಧುರಾಜವಧೇನೇಮೇ ಘಟೋತ್ಕಚವಧೇನ ತೇ ।
ಅಮರ್ಷಿತಾಃ ಸುಸಂಕ್ರುದ್ಧಾ ರಣಂ ಚಕ್ರುಃ ಕಥಂ ನಿಶಿ ॥ ೧೮ ॥

ಸೈಂಧವನ ವಧೆಯಿಂದ ಕೋಪಗೊಂಡ ಇವರೂ, ಘಟೋತ್ಕಚನ ವಧೆಯಿಂದ ಕೋಪಗೊಂಡ ಅವರೂ ಸಹ ರಾತ್ರಿಯಲ್ಲಿ ಹೇಗೆ ಯುದ್ಧವನ್ನು ಮಾಡಿದರು?

ಸಂಜಯಃ

ಹತೇ ಘಟೋತ್ಕಚೇ ರಾಜನ್ ಕರ್ಣೇನ ನಿಶಿ ರಾಕ್ಷಸೇ ।
ಪ್ರಣದತ್ಸು ಚ ಹೃಷ್ಟೇಷು ತಾವಕೇಷು ಯುಯುತ್ಸುಷು ॥ ೧೯ ॥

ಆಪತತ್ಸು ಚ ವೇಗೇನ ವಧ್ಯಮಾನೇ ಬಲೇಽಪಿ ಚ ।
ವಿಗಾಢಾಯಾಂ ರಜನ್ಯಾಂ ಚ ರಾಜಾ ದೈನ್ಯಂ ಪರಂ ಗತಃ ॥ ೨೦ ॥

ಸಂಜಯ– ಎಲೈ ರಾಜನೇ, ರಾತ್ರಿಯಲ್ಲಿ ಕರ್ಣನಿಂದ ರಾಕ್ಷಸನಾದ ಘಟೋತ್ಕಚನು ಹತನಾಗುತ್ತಿರಲು ನಿನ್ನ ಯೋಧರು ಸಂತೋಷದಿಂದ ಕೂಡಿದವರಾಗಿ ಸಿಂಹನಾದಗಳನ್ನು ಮಾಡುತ್ತಿರಲು ಯುದ್ಧವನ್ನು ಮಾಡಲು ಬಯಸಿ ವೇಗದಿಂದ ಮುನ್ನುಗ್ಗುತ್ತಿರಲು ನಿನ್ನ ಸೈನ್ಯವೂ ಸಹ ಪಾಂಡವರ ಸೈನ್ಯದಿಂದ ಹೊಡೆಯಲ್ಪಡುತ್ತಿರಲು ಗಾಢವಾದ ರಾತ್ರಿಯಲ್ಲಿ ರಾಜನಾದ ಯುಧಿಷ್ಠಿರನು ಬಹಳ ದೈನ್ಯವನ್ನು ಹೊಂದಿದನು.

ಅಬ್ರವೀಚ್ಚ ಮಹಾಬಾಹುರ್ಭೀಮಸೇನಂ ಪರಂತಪಃ ।
ಆವಾರಯ ಮಹಾಬಾಹೋ ಧಾರ್ತರಾಷ್ಟ್ರಸ್ಯ ವಾಹಿನೀಮ್ ।
ಹೈಡಿಂಬಸ್ಯಾಭಿಘಾತೇನ ಮೋಹೋ ಮಾಮಾವಿಶನ್ಮಹಾನ್ ॥೨೧॥

ಪರಂತಪನೂ, ಮಹಾಬಾಹುವೂ ಆದ ಅವನು ಭೀಮಸೇನನನ್ನು ಕುರಿತು- 'ಮಹಾಬಾಹುವೇ, ಕೌರವರ ಸೇನೆಯನ್ನು ತಡೆ. ಘಟೋತ್ಕಚನ ವಧೆಯಿಂದ ನನಗೆ ಬಹಳ ಮೋಹವು ಉಂಟಾಗಿದೆ' ಎಂದು ಹೇಳಿದನು.

ಏವಂ ಭೀಮಂ ಸಮಾದಿಶ್ಯ ಸ್ವರಥೇ ಸಮುಪಾವಿಶತ್ ।
ಅಶ್ರುಪೂರ್ಣಮುಖೋ ರಾಜಾ ನಿಃಶ್ವಸಂಶ್ಚ ಪುನಃ ಪುನಃ ।
ಕಶ್ಮಲಂ ಪ್ರಾವಿಶದ್ ಘೋರಂ ದೃಷ್ಟ್ವಾ ಕರ್ಣಸ್ಯ ವಿಕ್ರಮಮ್ ॥ ೨೨ ॥

ಭೀಮನಿಗೆ ಹೀಗೆ ಆದೇಶವನ್ನು ನೀಡಿ ಕಣ್ಣೀರಿನಿಂದ ತುಂಬಿದ ಮುಖವುಳ್ಳವನಾಗಿ ರಾಜನು ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಾ ತನ್ನ ರಥದಲ್ಲಿ ಕುಳಿತುಕೊಂಡನು. ಕರ್ಣನ ಘೋರವಾದ ಪರಾಕ್ರಮವನ್ನು ನೋಡಿ ಮನೋಗ್ಲಾನಿಯನ್ನು ಹೊಂದಿದನು.

ತಂ ತಥಾ ವ್ಯಥಿತಂ ದೃಷ್ಟ್ವಾ ಕೃಷ್ಣೋ ವಚನಮಬ್ರವೀತ್ ।
ಮಾ ವ್ಯಥಾಂ ಕುರು ಕೌಂತೇಯ ನೈತತ್ ತ್ವಯ್ಯುಪಪದ್ಯತೇ ।
ವೈಕ್ಲವ್ಯಂ ಭರತಶ್ರೇಷ್ಠ ಯಥಾ ಪ್ರಾಕೃತಪೂರುಷೇ ॥ ೨೩ ॥

ಉತ್ತಿಷ್ಠ ರಾಜನ್ ಯುದ್ಧ್ಯಸ್ವ ವಹ ಗುರ್ವೀಂ ಧುರಂ ವಿಭೋ ।
ತ್ವಯಿ ವೈಕ್ಲವ್ಯಮಾಪನ್ನೇ ಸಂಶಯೋ ವಿಜಯೇ ಭವೇತ್ ॥ ೨೪ ॥

ಅವನು ಹಾಗೆ ವ್ಯಥೆಯಿಂದ ಕೂಡಿರುವುದನ್ನು ನೋಡಿ ಕೃಷ್ಣನು ಅವನನ್ನು ಕುರಿತು- 'ಕೌಂತೇಯನೇ, ವ್ಯಥೆಪಡಬೇಡ. ಭರತಶ್ರೇಷ್ಠನೇ, ಸಾಮಾನ್ಯ ಮನುಷ್ಯನಂತೆ ವೈಕ್ಲವ್ಯವನ್ನು ಹೊಂದುವುದು ನಿನಗೆ ಉಚಿತವಲ್ಲ. ರಾಜನೇ, ಎದ್ದು ಯುದ್ಧವನ್ನು ಮಾಡು. ವಿಭುವೇ, ದೊಡ್ಡ ಭಾರವನ್ನು ಹೊರುವವನಾಗು. ನೀನು ವೈಕ್ಲವ್ಯನಾದರೆ ಯುದ್ಧದಲ್ಲಿ ವಿಜಯವು ಸಂಶಯಗ್ರಸ್ತವಾದೀತು' ಎಂದು ಹೇಳಿದನು.

ಶ್ರುತ್ವಾ ಕೃಷ್ಣಸ್ಯ ವಚನಂ ಧರ್ಮರಾಜೋ ಯುಧಿಷ್ಠಿರಃ ।
ವಿಮೃಜ್ಯ ನೇತ್ರೇ ಪಾಣಿಭ್ಯಾಂ ಕೃಷ್ಣಂ ವಚನಮಬ್ರವೀತ್ ॥ ೨೫ ॥

ಕೃಷ್ಣನ ಮಾತುಗಳನ್ನು ಕೇಳಿ ಧರ್ಮರಾಜನಾದ ಯುಧಿಷ್ಠಿರನು ಹಸ್ತಗಳಿಂದ ನೇತ್ರಗಳನ್ನು ಒರೆಸಿಕೊಂಡು ಕೃಷ್ಣನನ್ನು ಕುರಿತು ಮಾತನಾಡಿದನು.

ವಿದಿತಾ ತೇ ಮಹಾಬಾಹೋ ಧರ್ಮಾಣಾಂ ಪರಮಾ ಗತಿಃ ।
ಬ್ರಹ್ಮಹತ್ಯಾಫಲಂ ತಸ್ಯ ಯಃ ಕೃತಂ ನಾವಬುಧ್ಯತೇ ॥ ೨೬ ॥

ಎಲೈ ಮಹಾಬಾಹುವೇ, ನೀನು ಧರ್ಮಗಳ ಶ್ರೇಷ್ಠವಾದ ಗತಿಯನ್ನು ತಿಳಿದಿದ್ದೀಯೆ. ಇನ್ನೊಬ್ಬರು ಮಾಡುವ ಉಪಕಾರವನ್ನು ಯಾವನು ತಿಳಿದು ಸ್ಮರಿಸುವುದಿಲ್ಲವೋ ಅವನಿಗೆ ಬ್ರಹ್ಮಹತ್ಯೆಯ ಫಲವು ಉಂಟಾಗುತ್ತದೆ.

ಅಸ್ಮಾಕಂ ಹಿ ವನಸ್ಥಾನಾಂ ಹೈಡಿಂಬೇನ ಮಹಾತ್ಮನಾ ।
ಬಾಲೇನಾಪಿ ಸತಾ ತೇನ ಕೃತಂ ಸಾಹ್ಯಂ ಜನಾರ್ದನ ॥ ೨೭ ॥

ಎಲೈ ಜನಾರ್ದನನೇ, ನಾವು ಕಾಡಿನಲ್ಲಿದ್ದಾಗ ಮಹಾತ್ಮನಾದ ಘಟೋತ್ಕಚನು ಬಾಲಕನಾಗಿದ್ದರೂ ಬಹಳ ಸಹಾಯವನ್ನು ಮಾಡಿದನು.

ಅಸ್ತ್ರಹೇತೋರ್ಗತಂ ಜ್ಞಾತ್ವಾ ಪಾಂಡವಂ ಶ್ವೇತವಾಹನಮ್ ।
ಅಸೌ ಕೃಷ್ಣ ಮಹೇಷ್ವಾಸಃ ಕಾಮ್ಯಕೇ ಮಾಮುಪಸ್ಥಿತಃ ।
ಉಷಿತಶ್ಚ ಸಹಾಸ್ಮಾಭಿರ್ಯಾವನ್ನಾಸೀದ್ ಧನಂಜಯಃ ॥ ೨೮ ॥

ಪಾಂಡುಪುತ್ರನಾದ ಅರ್ಜುನನು ಅಸ್ತ್ರಗಳನ್ನು ಸಂಪಾದಿಸಲು ಹೋಗಿದ್ದಾನೆಂದು ತಿಳಿದ ಮಹಾಧನುರ್ಧಾರಿಯಾದ ಅವನು ಕಾಮ್ಯಕವನದಲ್ಲಿ ನಮ್ಮ ಬಳಿಗೆ ಬಂದು ಅರ್ಜುನನು ಹಿಂದಿರುಗುವವರೆಗೂ ನಮ್ಮ ಜೊತೆಯಲ್ಲಿ ವಾಸಿಸಿದನು.

ಗಂಧಮಾದನಯಾತ್ರಾಯಾಂ ದುರ್ಗೇಭ್ಯಶ್ಚ ಸ್ಮ ತಾರಿತಾಃ ।
ಪಾಂಚಾಲೀ ಚ ಪರಿಶ್ರಾಂತಾ ಪೃಷ್ಠೇನೋಢಾ ಮಹಾತ್ಮನಾ ॥ ೨೯ ॥

ಗಂಧಮಾದನ ಪರ್ವತದಲ್ಲಿ ಹೋಗುವ ಸಮಯದಲ್ಲಿ ದುರ್ಗಮವಾದ ಪ್ರದೇಶಗಳಲ್ಲಿ ನಮ್ಮನ್ನು ದಾಟಿಸಿದನು. ಮಹಾತ್ಮನಾದ ಅವನು ದಣಿದ ದ್ರೌಪದಿಯನ್ನು ಬೆನ್ನಿನ ಮೇಲೆ ಹೊತ್ತುಕೊಂಡು ನಡೆದನು.

ಆರಂಭಾಚ್ಚೈವ ಯುದ್ಧಾನಾಂ ಯದೇಷ ಕೃತವಾನ್ ಪ್ರಭೋ ।
ಮದರ್ಥಂ ದುಷ್ಕರಂ ಕರ್ಮ ಕೃತಂ ತೇನ ಮಹಾತ್ಮನಾ ॥ ೩೦ ॥

ಎಲೈ ಪ್ರಭುವೇ, ಯುದ್ಧವು ಆರಂಭವಾದಾಗಿನಿಂದಲೂ ಮಹಾತ್ಮನಾದ ಅವನು ನನ್ನ ಸಲುವಾಗಿ ದುಷ್ಕರವಾದ ಕರ್ಮಗಳನ್ನು ಮಾಡಿದನು.

ಸ್ವಭಾವಾದ್ ಯಾ ಚ ಮೇ ಪ್ರೀತಿಃ ಸಹದೇವೇ ಜನಾರ್ದನ ।
ಸೈವ ಮೇ ದ್ವಿಗುಣಾ ಪ್ರೀತೀ ರಾಕ್ಷಸೇಂದ್ರೇ ಘಟೋತ್ಕಚೇ ॥ ೩೧ ॥

ಎಲೈ ಜನಾರ್ದನನೇ, ನನಗೆ ಸ್ವಾಭಾವಿಕವಾಗಿ ಸಹದೇವನಲ್ಲಿ ಯಾವ ಪ್ರೀತಿ ಇದೆಯೋ ಅದರ ಎರಡರಷ್ಟು ಪ್ರೀತಿಯು ರಾಕ್ಷಸೇಂದ್ರನಾದ ಘಟೋತ್ಕಚನಲ್ಲಿ ಇದೆ.

ಭಕ್ತಶ್ಚ ಮೇ ಮಹಾಬಾಹುಃ ಪ್ರಿಯೋಽಸ್ಮಾಹಂ ಪ್ರಿಯಶ್ಚ ಮೇ ।
ಯೇನ ಏಂದಾಮಿ ವಾರ್ಷ್ಣೇಯ ಕಶ್ಮಲಂ ಶೋಕತಾಪಿತಃ ॥ ೩೨ ॥

ಮಹಾಬಾಹುವಾದ ಅವನು ನಮ್ಮಲ್ಲಿ ಸ್ವಾಮಿನಿಷ್ಠೆಯುಳ್ಳವನು. ನಾನು ಅವನಿಗೆ ಪ್ರಿಯನಾದವನು, ಅವನೂ ನನಗೆ ಪ್ರಿಯನಾದವನು. ಎಲೈ ವಾರ್ಷ್ಣೇಯನೇ, ಆದ್ದರಿಂದ ಶೋಕತಪ್ತನಾಗಿ ಮನಸ್ಸಿನಲ್ಲಿ ಗ್ಲಾನಿಯನ್ನು ಹೊಂದುತ್ತಿದ್ದೇನೆ.

ಪಶ್ಯ ಸೈನ್ಯಾನಿ ವಾರ್ಷ್ಣೇಯ ದ್ರಾವ್ಯಮಾಣಾನಿ ಕೌರವೈಃ ।
ದ್ರೋಣಕರ್ಣೌ ಚ ಸಂಯತ್ತೌ ಪಶ್ಯ ಯುದ್ಧೇ ಮಹಾರಥೌ ॥ ೩೩ ॥

ಎಲೈ ವಾರ್ಷ್ಣೇಯನೇ, ನಮ್ಮ ಸೈನ್ಯಗಳು ಕೌರವರಿಂದ ಓಡಿಸಲ್ಪಡುತ್ತಿರುವುದನ್ನು ನೀನು ನೋಡು. ಮಹಾರಥರಾದ ದ್ರೋಣ-ಕರ್ಣರು ಯುದ್ಧದಲ್ಲಿ ಎಚ್ಚರಿಕೆಯಿಂದ ಪ್ರಯತ್ನಪೂರ್ವಕವಾಗಿರುವುದನ್ನು ನೋಡು.

ನಿಶೀಥೇ ಪಾಂಡವಂ ಸೈನ್ಯಮಾಭ್ಯಾಂ ಪಶ್ಯ ಪ್ರಮರ್ದಿತಮ್ ।
ಗಜಾಭ್ಯಾಮಿವ ಮತ್ತಾಭ್ಯಾಂ ಯಥಾ ನಡವನಂ ಮಹತ್ ॥ ೩೪ ॥

ಈ ರಾತ್ರಿಯಲ್ಲಿ ಎರಡು ಮದಗಜಗಳು ದೊಡ್ಡ ಕಮಲವನವನ್ನು ನಾಶಮಾಡುವಂತೆ ಇವರಿಬ್ಬರಿಂದ ನಾಶಗೊಳಿಸಲ್ಪಡುತ್ತಿರುವ ಪಾಂಡವರ ಸೈನ್ಯವನ್ನು ನೋಡು.

ಅನಾದೃತ್ಯ ಬಲಂ ಬಾಹ್ವೋರ್ಭೀಮಸೇನಸ್ಯ ಮಾಧವ ।
ಚಿತ್ರಾಸ್ತ್ರತಾಂ ಚ ಪಾರ್ಥಸ್ಯ ವಿಕ್ರಮಂತೇ ಸ್ಮ ಕೌರವಾಃ ॥ ೩೫ ॥

ಎಲೈ ಮಾಧವನೇ, ಭೀಮಸೇನನ ಬಾಹುಬಲವನ್ನೂ, ಅರ್ಜುನನ ಆಶ್ಚರ್ಯಕರವಾದ ಅಸ್ತ್ರವಿದ್ಯೆಯನ್ನೂ ಕಡೆಗಣಿಸಿ, ಕೌರವರು ಪರಾಕ್ರಮವನ್ನು ತೋರಿಸುತ್ತಿದ್ದಾರೆ.

ವಿಷ ದ್ರೋಣಶ್ಚ ಕರ್ಣಶ್ಚ ರಾಜಾ ಚೈವ ಸುಯೋಧನಃ ।
ನಿಹತ್ಯ ರಾಕ್ಷಸಂ ಯುದ್ಧೇ ಹೃಷ್ಟಾ ನರ್ದಂತಿ ಸಂಯುಗೇ ॥ ೩೬ ॥

ಈ ದ್ರೋಣ-ಕರ್ಣ ಮತ್ತು ಸುಯೋಧನರು ಯುದ್ಧದಲ್ಲಿ ಘಟೋತ್ಕಚನನ್ನು ಕೊಂದು ಸಿಂಹನಾದವನ್ನು ಮಾಡುತ್ತಿದ್ದಾರೆ.

ಕಥಮಸ್ಮಾಸು ಜೀವತ್ಸು ತ್ವಯಿ ಚೈವ ಜನಾರ್ದನ ।
ಹೈಡಿಂಬಃ ಪ್ರಾಪ್ತವಾನ್ ಮೃತ್ಯುಂ ಸೂತಪುತ್ರೇಣ ಸಂಗತಃ ॥ ೩೭ ॥

ಎಲೈ ಜನಾರ್ದನನೇ, ನಾವು ಬದುಕಿರುವಾಗ, ನೀನು ಬದುಕಿರುವಾಗ ಘಟೋತ್ಕಚನು ಕರ್ಣನಿಂದ ಹೇಗೆ ಮೃತನಾದನು?

ಕದರ್ಥೀಕೃತ್ಯ ನಃ ಸರ್ವಾನ್ ಪಶ್ಯತಃ ಸವ್ಯಸಾಚಿನಃ ।
ನಿಹತೋ ರಾಕ್ಷಸಃ ಕೃಷ್ಣ ಭೈಮಸೇನಿರ್ಮಹಾಬಲಃ ॥ ೩೮ ॥

ನಮ್ಮೆಲ್ಲರನ್ನೂ ತುಚ್ಛೀಕರಿಸಿ ಅರ್ಜುನನು ನೋಡುತ್ತಿರುವಂತೆಯೇ ಎಲೈ ಕೃಷ್ಣನೇ, ಮಹಾಬಲನಾದ ಭೀಮಸೇನನ ಪುತ್ರನಾದ ಘಟೋತ್ಕಚನು ಹತನಾದನು.

ಯದಾऽಭಿಮನ್ಯುರ್ನಿಹತೋ ಧಾರ್ತರಾಷ್ಟ್ರೈರ್ದುರಾತ್ಮಭಿಃ ।
ನಾಸೀತ್ ತತ್ರ ರಣೇ ಕೃಷ್ಣ ಸವ್ಯಸಾಚೀ ಮಹಾರಥಃ ॥ ೩೯ ॥

ದುರಾತ್ಮರಾದ ಧೃತರಾಷ್ಟ್ರಪುತ್ರರು ಅಭಿಮನ್ಯುವನ್ನು ಕೊಂದಾಗ ಎಲೈ ಕೃಷ್ಣನೇ, ಮಹಾರಥನಾದ ಅರ್ಜುನನು ಅಲ್ಲಿ ಇರಲಿಲ್ಲ.

ನಿರುದ್ಧಾಶ್ಚ ವಯಂ ಸರ್ವೇ ಸೈಂಧವೇನ ದುರಾತ್ಮನಾ ।
ನಿಮಿತ್ತಮಭವದ್ ದ್ರೋಣಃ ಸಪುತ್ರಸ್ತತ್ರ ಕರ್ಮಣಿ ॥ ೪೦ ॥

ದುರಾತ್ಮನಾದ ಸೈಂಧವನು ನಮ್ಮೆಲ್ಲರನ್ನೂ ತಡೆದನು. ಅಲ್ಲಿ ಆ ಕಾರ್ಯದಲ್ಲಿ ದ್ರೋಣರು ಮತ್ತು ಅವರ ಪುತ್ರರು ನಿಮಿತ್ತರಾದರು.

ಉಪದಿಷ್ಟೋ ವಧೋಪಾಯಃ ಕರ್ಣಸ್ಯ ಗುರುಣಾ ಸ್ವಯಮ್ ।
ವ್ಯಾಯಚ್ಛತಶ್ಚ ಖಡ್ಗೇನ ದ್ವಿಧಾ ಖಡ್ಗಂ ಚಕಾರ ಹ ॥ ೪೧ ॥

ಗುರುಗಳಾದ ದ್ರೋಣರು ಕರ್ಣನಿಗೆ ಅಭಿಮನ್ಯುವನ್ನು ಕೊಲ್ಲುವ ಉಪಾಯವನ್ನು ಸ್ವತಃ ಉಪದೇಶ ಮಾಡಿದರು. ಖಡ್ಗವನ್ನು ಹಿಡಿದು ಯುದ್ಧವನ್ನು ಮಾಡುತ್ತಿದ್ದ ಅವನ ಖಡ್ಗವನ್ನು ಕರ್ಣನು ಎರಡು ಭಾಗವಾಗಿ ಕತ್ತರಿಸಿದನು.

ವ್ಯಸನೇ ವರ್ತಮಾನಸ್ಯ ಕೃತವರ್ಮಾ ನೃಶಂಸವತ್ ।
ಅಶ್ವಾನ್ ಜಘಾನ ಸಹಸಾ ತಥೋಭೌ ಪಾರ್ಷ್ಣಿಸಾರಥೀ ।
ತಥೇತರೇ ಮಹೇಷ್ವಾಸಾಃ ಸೌಭದ್ರಂ ಯುದ್ಯಪಾತಯನ್ ॥ ೪೨ ॥

ಸಂಕಟದಲ್ಲಿ ಸಿಲುಕಿದ ಅಭಿಮನ್ಯುವಿನ ಅಶ್ವಗಳನ್ನು ಮತ್ತು ಇಬ್ಬರು ಪಾರ್ಷ್ಣಿ ಸಾರಥಿಗಳನ್ನು ಕ್ರೂರನಾದ ಕೃತವರ್ಮನು ಶೀಘ್ರವಾಗಿ ಕೊಂದನು. ಇತರ ಮಹಾರಥರು ಅಭಿಮನ್ಯುವನ್ನು ಕೆಡವಿದರು.

ಅಲ್ಪೇ ಚ ಕಾರಣೇ ಕೃಷ್ಣ ಹತೋ ಗಾಂಡೀವಧನ್ವನಾ ।
ಸೈಂಧವೋ ಯಾದವಶ್ರೇಷ್ಠ ತಚ್ಚ ನಾತಿಪ್ರಿಯಂ ಮಮ ॥ ೪೩ ॥

ಎಲೈ ಕೃಷ್ಣನೇ, ಅಲ್ಪಕಾರಣಕ್ಕಾಗಿ ಸೈಂಧವನು ಅರ್ಜುನನಿಂದ ಕೊಲ್ಲಲ್ಪಟ್ಟನು. ಎಲೈ ಯಾದವಶ್ರೇಷ್ಠನೇ, ಅದೂ ನನಗೆ ಬಹಳ ಪ್ರಿಯವಾಗಲಿಲ್ಲ.

ಯದಿ ಶತ್ರುವಧೇ ನ್ಯಾಯ್ಯೋ ಭವೇತ್ ಕರ್ತುಂ ಚ ಪಾಂಡವೈಃ ।
ದ್ರೋಣಕರ್ಣೌ ರಣೇ ಪೂರ್ವಂ ಹಂತವ್ಯಾವಿತಿ ಮೇ ಮತಿಃ ॥ ೪೪ ॥

ಶತ್ರುವಧೆಯ ವಿಷಯದಲ್ಲಿ ಪಾಂಡವರಿಗೆ ನ್ಯಾಯವನ್ನು ಮಾಡಬೇಕಾಗಿದ್ದರೆ ಯುದ್ಧದಲ್ಲಿ ಮೊದಲು ದ್ರೋಣ-ಕರ್ಣರನ್ನು ಕೊಲ್ಲಬೇಕಾಗಿದ್ದಿತು.

ಏತೌ ಮೂಲಂ ಹಿ ದುಃಖಾನಾಮಸ್ಮಾಕಂ ಪುರುಷರ್ಷಭ ।
ಏತೌ ರಣೇ ಸಮಾಸಾದ್ಯ ಪರಾಶಸ್ತಃ ಸುಯೋಧನಃ ॥ ೪೫ ॥

ಎಲೈ ಪುರುಷಶ್ರೇಷ್ಠನೇ, ನಮ್ಮ ದುಃಖಕ್ಕೆ ಇವರಿಬ್ಬರು ಮೂಲಕಾರಣರು. ಇವರಿಬ್ಬರನ್ನು ಹೊಂದಿ ಸುಯೋಧನನು ರಣರಂಗದಲ್ಲಿ ನೆಮ್ಮದಿಯಿಂದಿದ್ದಾನೆ.

ಯತ್ರ ವಧ್ಯೋ ಭವೇದ್ ದ್ರೋಣಃ ಸೂತಪುತ್ರಶ್ಚ ಸಾನುಗಃ ।
ತತ್ರಾವಧೀನ್ಮಹಾಬಾಹುಃ ಸೈಂಧವಂ ದೂರವಾಸಿನಮ್ ॥ ೪೬ ॥

ದ್ರೋಣರನ್ನೂ, ಅನುಚರರಿಂದ ಸಹಿತನಾದ ಕರ್ಣನನ್ನೂ ಹೊಡೆಯಬೇಕಾದ ಸ್ಥಳದಲ್ಲಿ ಮಹಾಬಾಹುವಾದ ಅರ್ಜುನನು ದೂರದಲ್ಲಿದ್ದ ಸೈಂಧವನನ್ನು ಹೊಡೆದಿದ್ದಾನೆ.

ಅವಶ್ಯಂ ತು ಮಯಾ ಕಾರ್ಯಃ ಸೂತಪುತ್ರಸ್ಯ ನಿಗ್ರಹಃ ।
ತತೋ ಯಾಸ್ಯಾಮ್ಯಹಂ ವೀರ ಸ್ವಯಂ ಕರ್ಣಜಿಘಾಂಸಯಾ ।
ಭೀಮಸೇನೋ ಮಹಾಬಾಹುರ್ದ್ರೋಣಾನೀಕೇನ ಸಂಗತಃ ॥ ೪೭ ॥

ನಾನು ಅವಶ್ಯವಾಗಿ ಕರ್ಣನನ್ನು ನಿಗ್ರಹಿಸಬೇಕು. ಎಲೈ ವೀರನೇ, ಅದಕ್ಕಾಗಿ ನಾನು ಕರ್ಣನನ್ನು ಕೊಲ್ಲಲು ಬಯಸಿ ಸ್ವಯಂ ಯುದ್ಧಕ್ಕೆ ಹೊರಡುವೆನು. ಮಹಾಬಾಹುವಾದ ಭೀಮಸೇನನು ದ್ರೋಣರ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದಾನೆ.

ಏವಮುಕ್ತ್ವಾ ಯಯೌ ತೂರ್ಣಂ ತ್ವರಮಾಣೋ ಯುಧಿಷ್ಠಿರಃ ।
ಸ ವಿಸ್ಫಾರ್ಯ ಮಹಚ್ಚಾಪಂ ಶಂಖಂ ಪ್ರಧ್ಮಾಪ್ಯ ಭೈರವಮ್ ॥ ೪೮ ॥

ಹೀಗೆ ಹೇಳಿ ಯುಧಿಷ್ಠಿರನು ತ್ವರೆಮಾಡುತ್ತಾ, ತನ್ನ ದೊಡ್ಡ ಧನುಸ್ಸನ್ನು ಎಳೆಯುತ್ತಾ, ಭೈರವವಾದ ಶಂಖವನ್ನು ಊದುತ್ತಾ ಹೊರಟನು.

ತತೋ ರಥಸಹಸ್ರೇಣ ಗಜಾನಾಂ ಚ ಶತೈಸ್ತ್ರಿಭಿಃ ।
ವಾಜಿಭಿಃ ಪಂಚಸಾಹಸ್ರೈಸ್ತ್ರಿಸಾಹಸ್ರೈಃ ಪ್ರಭದ್ರಕೈಃ ।
ವೃತಃ ಶಿಖಂಡೀ ತ್ವರಿತೋ ರಾಜಾನಂ ಪೃಷ್ಠತೋಽನ್ವಯಾತ್ ॥ ೪೯ ॥

ಅನಂತರ ಸಹಸ್ರ ರಥಗಳಿಂದಲೂ, ಮುನ್ನೂರು ಗಜಗಳಿಂದಲೂ, ಐದು ಸಹಸ್ರ ಅಶ್ವಗಳಿಂದಲೂ, ಮೂರು ಸಹಸ್ರ ಪ್ರಭದ್ರಕ ಪದಾತಿಗಳಿಂದಲೂ ಪರಿವೃತನಾದ ಶಿಖಂಡಿಯು ಶೀಘ್ರವಾಗಿ ರಾಜನನ್ನು ಹಿಂಬಾಲಿಸಿದನು.

ತತೋ ಭೇರೀಃ ಸಮಾಜಘ್ನುಃ ಶಂಖಾನ್ ದಧ್ಮುಶ್ಚ ದಂಸಿತಾಃ ।
ಪಾಂಚಾಲಾಃ ಪಾಂಡವಾಶ್ಚೈವ ಯುಧಿಷ್ಠಿರಪುರೋಗಮಾಃ ॥ ೫೦ ॥

ಆಗ ಯುಧಿಷ್ಠಿರನನ್ನು ಮುಂದೆ ಮಾಡಿಕೊಂಡು ಪಾಂಡವರು ಮತ್ತು ಪಾಂಚಾಲರು ಭೇರಿಗಳನ್ನು ಬಾರಿಸಿ, ಯುದ್ಧಸನ್ನದ್ಧರಾಗಿ ಶಂಖಗಳನ್ನು ಊದಿದರು.

ತತೋಽಬ್ರವೀನ್ ಮಹಾಬಾಹುರ್ವಾಸುದೇವೋ ಧನಂಜಯಮ್ ।
ಏಷ ಪ್ರಯಾತಿ ತ್ವರಿತೋ ಕ್ರೋಧಾವಿಷ್ಟೋ ಯುಧಿಷ್ಠಿರಃ ।
ಜಿಘಾಂಸುಃ ಸೂತಪುತ್ರಸ್ಯ ತಸ್ಯೋಪೇಕ್ಷಾ ನ ಯುಜ್ಯತೇ ॥ ೫೧ ॥

ಆಗ ಮಹಾಬಾಹುವಾದ ವಾಸುದೇವನು ಅರ್ಜುನನನ್ನು ಕುರಿತು- 'ಕ್ರೋಧಾವಿಷ್ಟನಾದ ಯುಧಿಷ್ಠಿರನು ಕರ್ಣನನ್ನು ಕೊಲ್ಲಲು ಬಯಸಿ ಶೀಘ್ರವಾಗಿ ಹೋಗುತ್ತಿದ್ದಾನೆ. ಅವನನ್ನು ಒಬ್ಬನೇ ಹೋಗುವಂತೆ ಬಿಡುವುದು ಒಳ್ಳೆಯದಲ್ಲ' ಎಂದು ಹೇಳಿದನು.

ಏವಮುಕ್ತ್ವಾ ಹೃಷೀಕೇಶಃ ಶೀಘ್ರಮಶ್ವಾನಚೋದಯತ್ ।
ದೂರಂ ಚ ಯಾತಂ ರಾಜಾನಮನ್ವಗಚ್ಛಜ್ಜನಾರ್ದನಃ ॥ ೫೨ ॥

ಹೀಗೆ ಹೇಳಿ ಹೃಷೀಕೇಶನು ತನ್ನ ಅಶ್ವಗಳನ್ನು ಶೀಘ್ರವಾಗಿ ಪ್ರಚೋದಿಸಿ ದೂರದಲ್ಲಿ ಹೋಗುತ್ತಿದ್ದ ರಾಜನನ್ನು ಹಿಂಬಾಲಿಸಿದನು.

ತಂ ದೃಷ್ಟ್ವಾ ಸಹಸಾ ಯಾಂತಂ ಸೂತಪುತ್ರಜಿಘಾಂಸಯಾ ।
ಶೋಕೋಪಹತಸಂಕಲ್ಪಂ ದಹ್ಯಮಾನಮಿವಾಗ್ನಿನಾ ।
ಅಭಿಗಮ್ಯಾಬ್ರವೀದ್ ವ್ಯಾಸೋ ಧರ್ಮಪುತ್ರಂ ಯುಧಿಷ್ಠಿರಮ್ ॥ ೫೩ ॥

ಸೂತಪುತ್ರನನ್ನು ಕೊಲ್ಲುವ ಇಚ್ಛೆಯಿಂದ ತನ್ನ ಸಂಕಲ್ಪವು ಶೋಕದಿಂದ ಭಗ್ನವಾಗಿ ಅಗ್ನಿಯಿಂದಲೋ ಎಂಬಂತೆ ದಹಿಸಲ್ಪಟ್ಟು ಶೀಘ್ರವಾಗಿ ಹೋಗುತ್ತಿದ್ದ ಧರ್ಮಪುತ್ರನಾದ ಯುಧಿಷ್ಠಿರನ ಬಳಿಗೆ ವ್ಯಾಸರು ಬಂದು ಮಾತನಾಡಿದರು.

ಕರ್ಣಮಾಸಾದ್ಯ ಸಂಗ್ರಾಮೇ ದಿಷ್ಟ್ಯಾ ಜೇವತಿ ಫಲ್ಗುನಃ ।
ಸವ್ಯಸಾಚಿವಧಾಕಾಂಕ್ಷೀ ಶಕ್ತಿಂ ರಕ್ಷಿತವಾನ್ ಹಿ ಸಃ ॥ ೫೪ ॥

ದೇವರ ದಯದಿಂದ ಅರ್ಜುನನು ಯುದ್ಧದಲ್ಲಿ ಕರ್ಣನನ್ನು ಸಂಧಿಸಿ ಬದುಕಿದ್ದಾನೆ. ಅರ್ಜುನನನ್ನು ಕೊಲ್ಲಲು ಬಯಸಿದ ಕರ್ಣನು ಯಾವಾಗಲೂ ಶಕ್ತಿಯನ್ನು ರಕ್ಷಿಸುತ್ತಿದ್ದನು.

ನ ಚಾಗಾದ್ ದ್ವೈರಥಂ ಜಿಷ್ಣುರ್ದಿಷ್ಟ್ಯಾ ತಂ ಭರತರ್ಷಭ ।
ಸೃಜೇತಾಂ ಸ್ಪರ್ಧಿನಾವೇತೌ ದಿವ್ಯಾನ್ಯಸ್ತ್ರಾಣಿ ಸರ್ವಶಃ ॥ ೫೫ ॥

ಎಲೈ ಭರತಶ್ರೇಷ್ಠನೇ, ದೇವರ ದಯದಿಂದ ಅರ್ಜುನನು ಕರ್ಣನ ಜೊತೆಯಲ್ಲಿ ದ್ವಂದ್ವ ಯುದ್ಧಕ್ಕೆ ಹೋಗಲಿಲ್ಲ. ಹಾಗೆ ಹೋಗಿದ್ದರೆ ಸ್ಪರ್ಧಾಳುಗಳಾದ ಅವರಿಬ್ಬರು ದಿವ್ಯಾಸ್ತ್ರಗಳನ್ನು ಎಲ್ಲ ಕಡೆಗಳಲ್ಲಿಯೂ ಸೃಷ್ಟಿಸುತ್ತಿದ್ದರು.

ವಧ್ಯಮಾನೇಷು ಚಾಸ್ತ್ರೇಷು ಪೀಡಿತಃ ಸೂತನಂದನಃ ।
ವಾಸವೀಂ ಸಮರೇ ಶಕ್ತಿಂ ಧ್ರುವಂ ಮುಂಚೇದ್ ಯುಧಿಷ್ಠಿರ ॥ ೫೬ ॥

ತನ್ನ ಅಸ್ತ್ರಗಳು ಅರ್ಜುನನ ಅಸ್ತ್ರಗಳಿಂದ ನಾಶಗೊಳಿಸಲ್ಪಡುತ್ತಿರಲು ಸೂತನಂದನನಾದ ಕರ್ಣನು ಎಲೈ ಯುಧಿಷ್ಠಿರನೇ, ಖಂಡಿತವಾಗಿ ಅರ್ಜುನನ ಮೇಲೆ ಶಕ್ತಿಯನ್ನು ಪ್ರಯೋಗಿಸಿರುತ್ತಿದ್ದನು.

ತತೋ ಭವೇತ್ ತೇ ವ್ಯಸನಂ ಘೋರಂ ಭರತಸತ್ತಮ ।
ದಿಷ್ಟ್ಯಾ ರಕ್ಷೋ ಹತಂ ಯುದ್ಧೇ ಸೂತಪುತ್ರೇಣ ಮಾನದ ॥ ೫೭ ॥

ಎಲೈ ಭರತಶ್ರೇಷ್ಠನೇ, ಆಗ ನಿನಗೆ ಇನ್ನೂ ಘೋರವಾದ ದುಃಖವು ಉಂಟಾಗುತ್ತಿದ್ದಿತು. ಎಲೈ ಮಾನದನೇ, ದೇವರ ದಯದಿಂದ ರಣರಂಗದಲ್ಲಿ ಕರ್ಣನಿಂದ ರಾಕ್ಷಸನಾದ ಘಟೋತ್ಕಚನು ಹತನಾಗಿದ್ದಾನೆ.

ವಾಸವೀಂ ಕಾರಣಂ ಕೃತ್ವಾ ಕಾಲೇನಾಪಹತೋ ಹ್ಯಸೌ ।
ತವೈವ ಕಾರಣಾದ್ ರಕ್ಷೋ ನಿಹತಂ ತಾತ ಸಂಯುಗೇ ॥ ೫೮ ॥

ಇಂದ್ರನು ಕೊಟ್ಟ ಶಕ್ತಿಯನ್ನು ನಿಮಿತ್ತಮಾಡಿಕೊಂಡು ಕಾಲವು ನಿನ್ನ ಸಲುವಾಗಿ ಅವನ ಬುದ್ಧಿಯನ್ನು ಕೆಡಿಸಿದೆ. ಪ್ರೀತಿಪಾತ್ರನೇ, ಯುದ್ಧದಲ್ಲಿ ರಾಕ್ಷಸನು ಹತನಾಗಿದ್ದಾನೆ.

ಮಾ ಕ್ರುಧೋ ಭರತಶ್ರೇಷ್ಠ ಮಾ ಚ ಶೋಕೇ ಮನಃ ಕೃಥಾಃ ।
ಪ್ರಾಣಿನಾಮಿಹ ಸರ್ವೇಷಾಮೇಷಾ ನಿಷ್ಠಾ ಯುಧಿಷ್ಠಿರ ॥ ೫೯ ॥

ಭರತಶ್ರೇಷ್ಠನೇ, ಕೋಪಗೊಳ್ಳಬೇಡ. ಮನಸ್ಸಿನಲ್ಲಿ ಶೋಕಪಡಬೇಡ. ಎಲೈ ಯುಧಿಷ್ಠಿರನೇ, ಎಲ್ಲ ಪ್ರಾಣಿಗಳೂ ಕೊನೆಯಲ್ಲಿ ಇದೇ ಗತಿಯನ್ನು ಹೊಂದಬೇಕಷ್ಟೆ?

ಭ್ರಾತೃಭಿಃ ಸಹಿತಃ ಸರ್ವೈಃ ಪಾರ್ಥಿವೈಶ್ಚ ಮಹಾತ್ಮಭಿಃ ।
ಕೌರವಾನ್ ಸಮರೇ ರಾಜನ್ನಭಯುದ್ಧ್ಯಸ್ವ ಭಾರತ ।
ಪಂಚಮೇ ದಿವಸೇ ಚೈವ ಪೃಥಿವೀ ತೇ ಭವಿಷ್ಯತಿ ॥ ೬೦ ॥

ಎಲೈ ಭಾರತನೇ, ಎಲ್ಲ ಸಹೋದರರಿಂದಲೂ ಮತ್ತು ಮಹಾತ್ಮರಾದ ರಾಜರಿಂದಲೂ ಸಹಿತನಾಗಿ ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡು. ಇವತ್ತಿಗೆ ಐದನೆಯ ದಿನದಲ್ಲಿ ಪೃಥಿವಿಯು ನಿನ್ನ ವಶವಾಗುವುದು.

ನಿತ್ಯಂ ಚ ಪುರುಷವ್ಯಾಘ್ರ ಧರ್ಮಮೇವ ವಿಚಿಂತಯ ।
ಆನೃಶಂಸ್ಯಂ ತಪೋ ದಾನಂ ಕ್ಷಮಾಂ ಸತ್ಯಂ ಚ ಪಾಂಡವ ॥ ೬೧ ॥

ಸೇವೇಥಾಃ ಪರಮಪ್ರೀತೋ ಯತೋ ಧರ್ಮಸ್ತತೋ ಜಯಃ ।
ಇತ್ಯುಕ್ತ್ವಾ ಪಾಂಡವಂ ವ್ಯಾಸಸ್ತತ್ರೈವಾಂತರಧೀಯತ ॥ ೬೨ ॥

ಎಲೈ ಪುರುಷವ್ಯಾಘ್ರನೇ, ಯಾವಾಗಲೂ ಧರ್ಮವನ್ನೇ ಚಿಂತಿಸು. ಎಲೈ ಪಾಂಡವನೇ, ದಯೆ, ತಪಸ್ಸು, ದಾನ, ಸಹನೆ, ಸತ್ಯ - ಇವುಗಳನ್ನು ಸಂತೋಷದಿಂದ

ಅನುಷ್ಠಾನ ಮಾಡು. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ. ಯುಧಿಷ್ಠಿರನನ್ನು ಕುರಿತು ಹೀಗೆ ಹೇಳಿ ವ್ಯಾಸರು ಅಲ್ಲಿಯೇ ಅಂತರ್ಧಾನವನ್ನು ಹೊಂದಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಏಕೋನಸಪ್ತತ್ಯಧಿಕಶತತಮೋಽಧ್ಯಾಯಃ ॥

॥ ದ್ರೋಣವಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

ಅರ್ಜುನನ ಆದೇಶದಂತೆ ನಿದ್ರಿಸಿ ಎದ್ದ ಯೋಧರಿಂದ ಚಂದ್ರೋದಯವಾದ ಮೇಲೆ ಪುನಃ ಯುದ್ಧ.

ಸಂಜಯಃ

ಘಟೋತ್ಕಚೇ ತು ನಿಹತೇ ಸೂತಪುತ್ರೇಣ ತಾಂ ನಿಶಾಮ್ ।
ದುಃಖಾಮರ್ಷವಶಂ ಪ್ರಾಪ್ತೋ ಧರ್ಮಪುತ್ರೋ ಯುಧಿಷ್ಠಿರಃ ॥ ೧ ॥

ಸಂಜಯ– ಕರ್ಣನಿಂದ ಘಟೋತ್ಕಚನು ಹತನಾಗುತ್ತಿರಲು ಧರ್ಮಪುತ್ರನಾದ ಯುಧಿಷ್ಠಿರನು ದುಃಖ ಮತ್ತು ರೋಷಗಳಿಗೆ ಈಡಾದನು.

ದೃಷ್ಟ್ವಾ ಭೀಮೇನ ಮಹತೀಂ ವಾರ್ಯಮಾಣಾಂ ಚಮೂಂ ತವ ।
ಧೃಷ್ಟದ್ಯುಮ್ನಮುವಾಚೇದಂ ಕುಂಭಯೋನಿಂ ನಿವಾರಯ ॥ ೨ ॥

ಭೀಮಸೇನನಿಂದ ನಿವಾರಿಸಲ್ಪಡುತ್ತಿದ್ದ ನಿನ್ನ ದೊಡ್ಡ ಸೈನ್ಯವನ್ನು ನೋಡಿ ಧೃಷ್ಟದ್ಯುಮ್ನನನ್ನು ಕುರಿತು ಹೀಗೆ ಮಾತನಾಡಿದನು- ನೀನು ದ್ರೋಣರನ್ನು ನಿವಾರಿಸು.

ತ್ವಂ ಹಿ ದ್ರೋಣವಿನಾಶಾಯ ಸಮುತ್ಪನ್ನೋ ಹುತಾಶನಾತ್ ।
ಸಶರಃ ಕವಚೀ ಖಡ್ಗೀ ಧನ್ವೀ ಚ ಪರತಾಪನಃ ।
ಅಭಿದ್ರವ ರಣೇ ಹೃಷ್ಟೋ ನ ಚ ತೇ ಭೀಃ ಕಥಂಚನ ॥ ೩ ॥

ಶತ್ರುತಾಪನನಾದ ನೀನು ದ್ರೋಣರ ವಿನಾಶಕ್ಕಾಗಿ ಧನುರ್ಬಾಣಗಳನ್ನು ಹಿಡಿದು, ಕವಚ-ಖಡ್ಗಗಳನ್ನು ಧರಿಸಿ ಅಗ್ನಿಯಿಂದ ಎದ್ದು ಬಂದಿದ್ದೀಯೆ. ರಣರಂಗದಲ್ಲಿ ಸಂತೋಷದಿಂದ ದ್ರೋಣರ ಮೇಲೆ ಎರಗು. ನೀನು ಯಾವ ರೀತಿಯಿಂದಲೂ ಭಯಪಡುವ ಕಾರಣವಿಲ್ಲ.

ಜನಮೇಜಯಃ ಶಿಖಂಡೀ ಚ ದೌರ್ಮುಖಿಶ್ಚ ಯಶೋಧನಃ ।
ಅಭಿದ್ರವಂತು ಸಂಹೃಷ್ಟಾಃ ಕುಂಭಯೋನಿಂ ಸಮಂತತಃ ॥ ೪ ॥

ಜನಮೇಜಯ, ಶಿಖಂಡಿ ಮತ್ತು ದುರ್ಮುಖ ಪುತ್ರನಾದ ಯಶೋಧನ ಇವರೂ ಸಂತೋಷದಿಂದ ಎಲ್ಲ ಕಡೆಗಳಿಂದಲೂ ದ್ರೋಣರ ಮೇಲೆ ಎರಗಲಿ.

ನಕುಲಃ ಸಹದೇವಶ್ಚ ದ್ರೌಪದೇಯಾಃ ಪ್ರಭದ್ರಕಾಃ ।
ದ್ರುಪದಶ್ಚ ವಿರಾಟಶ್ಚ ಪುತ್ರಭ್ರಾತೃಸಮನ್ವಿತೌ ॥ ೫ ॥

ಸಾತ್ಯಕಿಃ ಕೇಕಯಾಶ್ಚೈವ ಪಾಂಡವಶ್ಚ ಧನಂಜಯಃ ।
ಅಭಿದ್ರವಂತು ವೇಗೇನ ಭಾರದ್ವಾಜವಧೇಪ್ಸಯಾ ॥ ೬ ॥

ನಕುಲ-ಸಹದೇವರು, ದ್ರೌಪದಿಯ ಪುತ್ರರು, ಪ್ರಭದ್ರಕರು, ಪುತ್ರ-ಭ್ರಾತೃ ಸಮನ್ವಿತರಾದ ವಿರಾಟ-ದ್ರುಪದರು, ಸಾತ್ಯಕಿ, ಕೇಕಯರು ಮತ್ತು ಪಾಂಡವನಾದ ಅರ್ಜುನ ಎಲ್ಲರೂ ದ್ರೋಣರ ವಧೆಯನ್ನು ಮಾಡಲು ಬಯಸಿ ವೇಗವಾಗಿ ಅವರ ಮೇಲೆ ಎರಗಿ.

ತಥೈವ ರಥಿನಃ ಸರ್ವೇ ಹಸ್ತ್ಯಶ್ವಂ ಯಚ್ಚ ಕಿಂಚನ ।
ಪಾದಾತಾಶ್ಚ ರಣೇ ದ್ರೋಣಂ ಪ್ರಾಪಯಂತು ಮಹಾರಥಮ್ ॥ ೭ ॥

ಹಾಗೆಯೇ ಎಲ್ಲ ರಥಿಕರೂ, ಗಜಾಶ್ವಗಳೂ, ಪದಾತಿಗಳೂ ರಣರಂಗದಲ್ಲಿ ಮಹಾರಥರಾದ ದ್ರೋಣರ ಮೇಲೆ ಮುನ್ನುಗ್ಗಲಿ (ಎಂದು ಹೇಳಿದನು).

ತಥಾಜ್ಞಪ್ತಾಸ್ತು ತೇ ಸರ್ವೇ ಪಾಂಡವೇನ ಮಹಾತ್ಮನಾ ।
ಅಭ್ಯದ್ರವಂತ ವೇಗೇನ ಕುಂಭಯೋನಿಂ ಯುಯುತ್ಸಯಾ ॥ ೮ ॥

ಮಹಾತ್ಮನಾದ ಯುಧಿಷ್ಠಿರನಿಂದ ಆ ರೀತಿಯಲ್ಲಿ ಆಜ್ಞಾಪಿಸಲ್ಪಟ್ಟ ಅವರೆಲ್ಲರೂ ದ್ರೋಣರ ಜೊತೆಯಲ್ಲಿ ಯುದ್ಧವನ್ನು ಮಾಡಲು ವೇಗವಾಗಿ ಸಾಗಿದರು.

ಆಗಚ್ಛತಸ್ತಾನ್ ಸಹಸಾ ಸರ್ವೋದ್ಯೋಗೇನ ಪಾಂಡವಾನ್ ।
ಪ್ರತಿಜಗ್ರಾಹ ಸಮರೇ ದ್ರೋಣಃ ಶಸ್ತ್ರಭೃತಾಂ ವರಃ ॥ ೯ ॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ರಣರಂಗದಲ್ಲಿ ಇದ್ದಕ್ಕಿದ್ದಂತೆಯೇ ತನ್ನ ಕಡೆಗೆ ಬರುತ್ತಿದ್ದ ಆ ಎಲ್ಲ ಪಾಂಡವರನ್ನೂ (ಪಾಂಡವಸೇನೆಯನ್ನು) ಸರ್ವ ಪ್ರಯತ್ನದಿಂದ ಸ್ವೀಕರಿಸಿದರು.

ತತೋ ದುರ್ಯೋಧನೋ ರಾಜಾ ಸರ್ವೋದ್ಯೋಗೇನ ಪಾಂಡವಾನ್ ।
ಅಭ್ಯದ್ರವತ್ ಸುಸಂಕ್ರುದ್ಧ ಇಚ್ಛನ್ ದ್ರೋಣಸ್ಯ ಜೀವಿತಮ್ ॥ ೧೦ ॥

ಆಗ ರಾಜನಾದ ದುರ್ಯೋಧನನು ದ್ರೋಣರ ಜೀವಿತವನ್ನು ರಕ್ಷಿಸಲು ಬಯಸಿ ಬಹಳ ಕೋಪಗೊಂಡವನಾಗಿ ಸರ್ವಪ್ರಯತ್ನದಿಂದ ಪಾಂಡವರಿಗೆ ಎದುರಾಗಿ ನುಗ್ಗಿದನು.

ತತಃ ಪ್ರವವೃತೇ ಯುದ್ಧಂ ಶ್ರಾಂತವಾಹನಸೈನಿಕಮ್ ।
ಪಾಂಡವಾನಾಂ ಕುರೂಣಾಂ ಚ ಗರ್ಜತಾಮಿತರೇತರಮ್ ॥ ೧೧ ॥

ಆಗ ದಣಿದ ವಾಹನ ಮತ್ತು ಯೋಧರನ್ನುಳ್ಳ ಪಾಂಡವರು ಮತ್ತು ಕೌರವರು ಪರಸ್ಪರವಾಗಿ ಗರ್ಜಿಸುತ್ತಾ ಯುದ್ಧವನ್ನು ಮಾಡಿದರು.

ನಿದ್ರಾಂಧಾಸ್ತೇ ಮಹಾರಾಜ ಪರಿಶ್ರಾಂತಾಶ್ಚ ಸಂಯುಗೇ ।
ನಾಭ್ಯಪದ್ಯಂತ ಸಮರೇ ಕಾಂಚಿಚ್ಚೇಷ್ಟಾಂ ಮಹಾರಥಾಃ ॥ ೧೨ ॥

ಎಲೈ ಮಹಾರಾಜನೇ, ನಿದ್ರೆಯಿಂದ ಪೀಡಿತರಾಗಿ ಮತ್ತು ಯುದ್ಧದಲ್ಲಿ ಬಹಳ ದಣಿದ ಮಹಾರಥರಿಗೆ ಯುದ್ಧದಲ್ಲಿ ಏನು ಮಾಡುವುದಕ್ಕೂ ತೋಚಲಿಲ್ಲ.

ತ್ರಿಯಾಮಾ ರಜನೀ ಚೈಷಾ ಘೋರರೂಪಾ ಭಯಾನಕಾ ।
ಸಹಸ್ರಯಾಮಪ್ರತಿಮಾ ಬಭೂವ ಪ್ರಾಣಹಾರಿಣೀ ।
ವಧ್ಯತಾಂ ಚ ತಥಾ ತೇಷಾಂ ಕ್ಷತಾನಾಂ ಚ ವಿಶೇಷತಃ ॥ ೧೩ ॥

ಗಾಯಗೊಂಡು ವಿಶೇಷವಾಗಿ ಶಸ್ತ್ರಗಳಿಂದ ಹೊಡೆಯಲ್ಪಡುತ್ತಿದ್ದ ಅವರಿಗೆ ಮೂರು ಯಾಮದ ಘೋರವಾದ ಭಯಂಕರವಾದ, ಪ್ರಾಣಾಪಹಾರಿಣಿಯಾದ ಆ ರಾತ್ರಿಯು ಸಹಸ್ರಯಾಮಗಳಂತೆ ಕಂಡುಬಂದಿತು.

ಅಹೋ ರಾತ್ರಿಃ ಸಮಾಜಜ್ಞೇ ನಿದ್ರಾಂಧಾನಾಂ ವಿಶೇಷತಃ ।
ಸರ್ವೇ ಹ್ಯಾಸನ್ನಿರುತ್ಸಾಹಾಃ ಕ್ಷತ್ರಿಯಾ ದೀನಚೇತಸಃ ।
ತವ ಚೈವ ಪರೇಷಾಂ ಚ ಗತಾಸ್ತ್ರಾ ವಿಗತೇಷವಃ ॥ ೧೪ ॥

ನಿದ್ರಾಂಧರಾದವರಿಗೆ ಹಗಲೂ ಸಹ ರಾತ್ರಿಯಾಗುತ್ತದೆ. ದೀನ ಮನಸ್ಸುಳ್ಳ ನಿನ್ನ ಮತ್ತು ಪರಕ್ಷತ್ರಿಯರು ತಮ್ಮ ಅಸ್ತ್ರಗಳನ್ನೂ ಮತ್ತು ಬಾಣಗಳನ್ನೂ ಕಳೆದುಕೊಂಡು ಯುದ್ಧದಲ್ಲಿ ಉತ್ಸಾಹವನ್ನು ಕಳೆದುಕೊಂಡರು.

ತೇ ತಥಾ ಪಾರಯಂತಶ್ಚ ಹ್ರೀಮಂತಶ್ಚ ವಿಶೇಷತಃ ।
ಸ್ವಧರ್ಮಮನುಪಶ್ಯಂತೋ ನ ಜಹುಃ ಸ್ವಾಮನೀಕಿನೀಮ್ ॥ ೧೫ ॥

ನಾಚಿಕೆಯುಳ್ಳ ಅವರು ವಿಶೇಷವಾಗಿ ತಮ್ಮ ಧರ್ಮವನ್ನು ಪಾಲಿಸುತ್ತಾ ಆ ರಾತ್ರಿಯನ್ನು ಹಾಗೆಯೇ ಕಳೆಯಲು ನಿರ್ಧರಿಸಿ ತಮ್ಮ ತಮ್ಮ ಸೈನ್ಯಗಳನ್ನು ತ್ಯಜಿಸಲಿಲ್ಲ.

ಶಸ್ತ್ರಾಣ್ಯನ್ಯೇ ಸಮುತ್ಸೃಜ್ಯ ನಿದ್ರಾಂಧಾಃ ಶೇರತೇ ಜನಾಃ ।
ಗಜೇಷ್ವನ್ಯೇ ರಥೇಷ್ವನ್ಯೇ ಹಯೇಷ್ವನ್ಯೇ ಚ ಭಾರತ ॥ ೧೬ ॥

ಎಲೈ ಭಾರತನೇ, ಇನ್ನು ಕೆಲವರು ಶಸ್ತ್ರಗಳನ್ನು ಬಿಸುಟು ನಿದ್ರಾಂಧರಾಗಿ ಮಲಗಿದರು. ಕೆಲವರು ಆನೆಗಳ ಮೇಲೆಯೂ, ಕೆಲವರು ರಥಗಳಲ್ಲಿಯೂ, ಕೆಲವರು ಅಶ್ವಗಳ ಮೇಲೆಯೂ ಮಲಗಿದರು.

ನಿದ್ರಾಂಧಾ ನೋ ಬುಬುಧಿರೇ ಕಾಂಚಿಚ್ಚೇಷ್ಟಾಂ ನರಾಧಿಪಾಃ ।
ತೇऽನ್ಯೋನ್ಯಂ ಸಮರೇ ಯೋಧಾಃ ಪ್ರೇಷಯಂತ ಯಮಕ್ಷಯಮ್ ॥

ನಿದ್ರಾಂಧರಾದ ರಾಜರು ತಮ್ಮ ಸುತ್ತಲೂ ನಡೆಯುತ್ತಿದ್ದ ಯಾವ ಚೇಷ್ಟೆಯನ್ನೂ ತಿಳಿಯಲಿಲ್ಲ. ಹಾಗೆಯೇ ಕೆಲವು ಯೋಧರು ಪರಸ್ಪರವಾಗಿ ಶತ್ರುಗಳನ್ನು ಯಮಲೋಕಕ್ಕೆ ಕಳುಹಿಸಿದರು.

ಸ್ವಪ್ನಾಯಮಾನಾಸ್ತ್ವಪರೇ ಪರಾನಿತಿ ವಿಚೇತಸಃ ।
ಆತ್ಮಾನಂ ಸಮರೇ ಜಘ್ನುಃ ಸ್ವಾನೇವ ಚ ಪರಾನಪಿ ॥ ೧೮ ॥

ನಿದ್ರೆಯ ಮಬ್ಬಿನಲ್ಲಿದ್ದ ಕೌರವರ ಸೈನಿಕರು ವಿವೇಕಶೂನ್ಯರಾಗಿ ಶತ್ರುಗಳೆಂದು ತಿಳಿದು ರಣರಂಗದಲ್ಲಿ ತಮ್ಮವರನ್ನೇ ಕೊಂದರು. ಪಾಂಡವ ಯೋಧರೂ ಸಹ ಶತ್ರುಗಳೆಂದು ತಿಳಿದುಕೊಂಡು ತಮ್ಮವರನ್ನೇ ಕೊಂದರು.

ನಾನಾವಾಚೋ ವಿಮುಂಚಂತೋ ನಿದ್ರಾಂಧಾಸ್ತೇ ಮಹಾರಣೇ ।
ಯೋದ್ಧವ್ಯಮಿತಿ ತಿಷ್ಠಂತೋ ನಿದ್ರಾಸಂಸಕ್ತಲೋಚನಾಃ ॥ ೧೯ ॥

ನಿದ್ರಾಂಧರಾದ ಆ ಯೋಧರು ಮಹಾರಣದಲ್ಲಿ ಯುದ್ಧವನ್ನು ಮಾಡಲೇಬೇಕು ಎಂಬ ಕಾರಣದಿಂದ ನಿಂತು, ನಿದ್ರೆಯಿಂದ ತುಂಬಿದ ಕಣ್ಣುಳ್ಳವರಾಗಿ ಅನೇಕ ವಿಧವಾದ ಮಾತುಗಳನ್ನು ಆಡಿದರು.

ಸಂಮರ್ದ್ಯಾನ್ಯೇ ರಣೇ ಕೇಚಿನ್ನಿದ್ರಾಂಧಾಶ್ಚ ಪರಸ್ಪರಮ್ ।
ಜಘ್ನುಃ ಶೂರಾ ರಣೇ ರಾಜಂಸ್ತಸ್ಮಿಂಸ್ತಮಸಿ ದಾರುಣೇ ॥ ೨೦ ॥

ಎಲೈ ರಾಜನೇ, ನಿದ್ರಾಂಧರಾದ ಕೆಲವು ಶೂರರು ದಾರುಣವಾದ ಆ ಕತ್ತಲೆಯಲ್ಲಿ ಹಾಗೆಯೇ ಪರಸ್ಪರವಾಗಿ ಶತ್ರುಗಳನ್ನು ಮರ್ದಿಸಿದರು.

ಹನ್ಯಮಾನಂ ತಥಾತ್ಮಾನಂ ಪರೇಭ್ಯೋ ಬಹವೋ ಜನಾಃ ।
ನಾಭ್ಯಜಾನಂತ ಸಮರೇ ನಿದ್ರಯಾ ಮೋಹಿತಾ ಭೃಶಮ್ ॥ ೨೧ ॥

ಬಹಳ ಜನರು ನಿದ್ರೆಯಿಂದ ಬಹಳ ಮೋಹಿತರಾಗಿ ಶತ್ರುಗಳು ತಮ್ಮನ್ನು ಹೊಡೆಯುತ್ತಿದ್ದರೂ ಅದನ್ನು ತಿಳಿಯಲಿಲ್ಲ.

ತೇಷಾಮೇತಾದೃಶೀಂ ಚೇಷ್ಟಾಂ ವಿಜ್ಞಾಯ ಪುರುಷರ್ಷಭಃ ।
ಉವಾಚ ವಾಕ್ಯಂ ಬೀಭತ್ಸುರುಚ್ಚೈಃ ಸನ್ನಾದಯನ್ ದಿಶಃ ॥ ೨೨ ॥

ಯೋಧರ ಇಂತಹ ಅವಸ್ಥೆಯನ್ನು ತಿಳಿದ ಪುರುಷಶ್ರೇಷ್ಠನಾದ ಅರ್ಜುನನು ದಿಕ್ಕುಗಳು ಪ್ರತಿಧ್ವನಿಸುವಂತೆ ಗಟ್ಟಿಯಾಗಿ ಮಾತನಾಡಿದನು.

ಶ್ರಾಂತಾ ಭವಂತೋ ನಿದ್ರಾಂಧಾಃ ಸರ್ವ ಏವ ಸವಾಹನಾಃ ।
ತಮಸಾ ಚಾವೃತೇ ಸೈನ್ಯೇ ರಜಸಾ ಬಹುಲೇನ ಚ ॥ ೨೩ ॥

ಸೈನ್ಯವು ಕತ್ತಲೆಯಿಂದಲೂ, ಸೈನ್ಯದಿಂದೆದ್ದ ಧೂಳಿನಿಂದಲೂ ಮುಚ್ಚಲ್ಪಟ್ಟಿರುವಾಗ ನಿಮ್ಮ ವಾಹನ ಸಹಿತರಾದ ನೀವೆಲ್ಲರೂ ದಣಿದು ನಿದ್ರಾಂಧರಾಗಿದ್ದೀರಿ.

ತೇ ಯೂಯಂ ಯದಿ ಮನ್ಯಧ್ವಮುಪಾರಮತ ಸೈನಿಕಾಃ ।
ನಿಮೀಲಯತ ಚಾತ್ಮೈವ ರಣಭೂಮೌ ಮುಹೂರ್ತಕಮ್ ॥ ೨೪ ॥

ಎಲೈ ಸೈನಿಕರೇ, ನಿಮಗೆ ಅಭಿಪ್ರಾಯವಿದ್ದರೆ ಯುದ್ಧವನ್ನು ನಿಲ್ಲಿಸಿ ಇಲ್ಲಿಯೇ ರಣಭೂಮಿಯಲ್ಲಿ ಒಂದು ಮುಹೂರ್ತದ ಕಾಲ ಕಣ್ಣುಮುಚ್ಚಿ ನಿದ್ರೆಯನ್ನು ಮಾಡಿ.

ತತೋ ವಿನಿದ್ರಾ ವಿಶ್ರಾಂತಾಶ್ಚಂದ್ರಮಸ್ಯುದಿತೇ ಪುನಃ ।
ಸಂಸಾಧಯಿಷ್ಯಥಾನ್ಯೋನ್ಯಂ ಸಂಗ್ರಾಮಂ ಕುರುಪಾಂಡವಾಃ ॥ ೨೫ ॥

ಎಲೈ ಕುರು-ಪಾಂಡವಯೋಧರೇ, ಅನಂತರ ನಿದ್ರೆಯನ್ನು ಕಳೆದುಕೊಂಡು, ವಿಶ್ರಾಂತಿಯನ್ನು ಪಡೆದು, ಚಂದ್ರನು ಉದಯಿಸಿದ ಮೇಲೆ ಪರಸ್ಪರ ಸಂಗ್ರಾಮವನ್ನು ಮುಂದುವರಿಸಿ (ಎಂದು ಹೇಳಿದನು).

ತದ್ವಚಃ ಸರ್ವಧರ್ಮಜ್ಞಾ ಧಾರ್ಮಿಕಸ್ಯ ನಿಶಮ್ಯ ತೇ ।
ಅರೋಚಯಂತ ಸೈನ್ಯಾನಿ ತಥಾ ಚಾನ್ಯೋನ್ಯಮಬ್ರುವನ್ ॥ ೨೬ ॥

ಧಾರ್ಮಿಕನಾದ ಅರ್ಜುನನ ಆ ಮಾತುಗಳನ್ನು ಕೇಳಿ ಸರ್ವಧರ್ಮಜ್ಞರಾದ ಎಲ್ಲರೂ ಅದನ್ನು ಇಷ್ಟಪಟ್ಟರು. ಸೈನ್ಯಗಳೂ ಸಹ ಹಾಗೆಯೇ ಪರಸ್ಪರವಾಗಿ ಮಾತನಾಡಿಕೊಂಡವು.

ಚುಕ್ರುಶುಃ ಕರ್ಣ ಕರ್ಣೇತಿ ರಾಜನ್ ದುರ್ಯೋಧನೇತಿ ಚ ।
ಉಪಾರಮತ ಪಾಂಡೂನಾಂ ವಿರತಾ ಹಿ ವರೂಥಿನೀ ॥ ೨೭ ॥

ರಾಜನೇ, ಆಗ ಸೈನ್ಯಗಳು ಪಾಂಡವರ ಸೈನ್ಯವು ಯುದ್ಧದಿಂದ ಹಿಂದೆ ಸರಿದಿವೆ. ಎಲೈ ಕರ್ಣನೇ, ದುರ್ಯೋಧನನೇ, ಯುದ್ಧವನ್ನು ನಿಲ್ಲಿಸಿ ಎಂದು ಕಿರುಚಿದವು.

ತಥಾ ವಿಕ್ರೋಶಮಾನಸ್ಯ ಫಲ್ಗುನಸ್ಯ ತತಸ್ತತಃ ।
ಉಪಾರಮತ ಪಾಂಡೂನಾಂ ಸೇನಾ ತವ ಚ ಭಾರತ ॥ ೨೮ ॥

ಎಲೈ ಭಾರತನೇ, ಅರ್ಜುನನು ಗಟ್ಟಿಯಾಗಿ ಆ ರೀತಿಯಲ್ಲಿ ಘೋಷಿಸುತ್ತಿರಲು ಪಾಂಡವರ ಮತ್ತು ನಿನ್ನ ಸೈನ್ಯಗಳು ಯುದ್ಧವನ್ನು ನಿಲ್ಲಿಸಿದವು.

ತಾಮಸ್ಯ ವಾಚಂ ದೇವಾಶ್ಚ ಋಷಯಶ್ಚ ಮಹಾತ್ಮನಃ ।
ಸರ್ವಸೈನ್ಯಾನಿ ಚಾಕ್ಷುದ್ರಾಃ ಪ್ರಹೃಷ್ಟಾಃ ಪ್ರತ್ಯಪೂಜಯನ್ ॥ ೨೯ ॥

ಮಹಾತ್ಮನಾದ ಅರ್ಜುನನ ಆ ಮಾತುಗಳನ್ನು ದೇವತೆಗಳೂ, ಋಷಿಗಳೂ ಮತ್ತು ಸರ್ವಸೈನ್ಯಗಳೂ ಕ್ಷುದ್ರತನವನ್ನು ಬಿಟ್ಟು ಸಂತೋಷಗೊಂಡು ಪೂಜಿಸಿದವು.

ತತ್ ಸಂಪೂಜ್ಯ ವಚೋಽಕ್ರೂರಂ ಸರ್ವಸೈನ್ಯಾನಿ ಭಾರತ ।
ಮುಹೂರ್ತಮಸ್ವಪನ್ ರಾಜನ್ ಶ್ರಾಂತಾನಿ ಭರತರ್ಷಭ ॥ ೩೦ ॥

ಎಲೈ ರಾಜನೇ, ಭರತಶ್ರೇಷ್ಠನೇ, ಅರ್ಜುನನ ದಯಾಯುತವಾದ ಆ ಮಾತನ್ನು ಪೂಜಿಸಿ ದಣಿದ ಸೈನ್ಯಗಳು ಒಂದು ಮುಹೂರ್ತದ ಕಾಲ ನಿದ್ರೆಯನ್ನು ಮಾಡಿದವು.

ಸಾ ತು ಸಂಪ್ರಾಪ್ಯ ವಿಶ್ರಾಮಂ ಧ್ವಜಿನೀ ತವ ಭಾರತ ।
ಸುಖಮಾಪ್ತವತೀ ವೀರಮರ್ಜುನಂ ಪ್ರತ್ಯಪೂಜಯತ್ ॥ ೩೧ ॥

ಎಲೈ ಭಾರತನೇ, ನಿನ್ನ ಸೈನ್ಯವು ವಿಶ್ರಾಂತಿಯನ್ನು ಪಡೆದು ಸುಖವನ್ನು ಹೊಂದಿ ವೀರನಾದ ಅರ್ಜುನನನ್ನು ಪೂಜಿಸಿದವು.

ತ್ವಯಿ ವೇದಾಸ್ತಥಾಸ್ತ್ರಾಣಿ ತ್ವಯಿ ಬುದ್ಧಿಪರಾಕ್ರಮೌ ।
ಧರ್ಮಸ್ತ್ವಯಿ ಮಹಾಬಾಹೋ ದಯಾ ಭೂತೇಷು ಚಾನಘ ॥ ೩೨ ॥

ಎಲೈ ಅನಘನೇ, ನಿನ್ನಲ್ಲಿ ವೇದಗಳಿವೆ, ಅಸ್ತ್ರಗಳಿವೆ, ಬುದ್ಧಿ-ಪರಾಕ್ರಮಗಳಿವೆ, ಎಲೈ ಮಹಾಬಾಹುವೇ, ನಿನ್ನಲ್ಲಿ ಧರ್ಮವಿದೆ, ಭೂತದಯೆಯಿದೆ.

ಯಚ್ಚಾಶ್ವಸ್ತಾಸ್ತವೇಚ್ಛಾಮಃ ಶರ್ಮ ಪಾರ್ಥ ತದಸ್ತು ತೇ ।
ಮನಸಶ್ಚ ಪ್ರಿಯಾನರ್ಥಾನ್ ವೀರ ಕ್ಷಿಪ್ರಮವಾಪ್ನುಹಿ ॥ ೩೩ ॥

ವಿಶ್ರಾಂತಿಯನ್ನು ಪಡೆದ ನಾವು ನಿನಗೆ ಏನನ್ನು ಬಯಸುತ್ತೀಯೋ ಅಂತಹ ಸುಖವು ನಿನಗಾಗಲಿ. ಎಲೈ ವೀರನೇ, ನೀನು ಮನಸ್ಸಿನಲ್ಲಿ ಬಯಸಿದ ವಸ್ತುಗಳನ್ನು ಶೀಘ್ರವಾಗಿ ಹೊಂದುವವನಾಗು.

ಇತಿ ತೇ ತಂ ನರವ್ಯಾಘ್ರಂ ಪ್ರಶಂಸಂತೋ ಮಹಾರಥಾಃ ।
ನಿದ್ರಯಾ ಸಮವಾಕ್ಷಿಪ್ತಾಸ್ತೂಷ್ಣೀಮಾಸನ್ ವಿಶಾಂಪತೇ ॥ ೩೪ ॥

ಎಲೈ ರಾಜನೇ, ಹೀಗೆ ಆ ಮಹಾರಥರು ನರವ್ಯಾಘ್ರನಾದ ಅರ್ಜುನನನ್ನು ಹೊಗಳಿ ನಿದ್ರಾವಶರಾಗಿ ಸುಮ್ಮನಾದರು.

ಅಶ್ವಪೃಷ್ಠೇಷು ಚಾಪ್ಯನ್ಯೇ ರಥನೀಡೇಷು ಚಾಪರೇ ।
ಗಜಸ್ಕಂಧಗತಾಶ್ಚಾನ್ಯೇ ಶೇರತೇ ಚಾಪರೇ ಕ್ಷಿತೌ ॥ ೩೫ ॥

ಕೆಲವರು ಕುದುರೆಗಳ ಬೆನ್ನಿನಲ್ಲಿಯೂ, ಇನ್ನು ಕೆಲವರು ರಥಪೀಠಗಳಲ್ಲಿಯೂ, ಇನ್ನು ಕೆಲವರು ಆನೆಗಳ ಭುಜಗಳಲ್ಲಿಯೂ, ಇನ್ನು ಕೆಲವರು ಭೂಮಿಯ ಮೇಲೆಯೂ ಮಲಗಿದರು.

ಸಾಯುಧಾಃ ಸಗದಾಶ್ಚೈವ ಸಖಡ್ಗಾಃ ಸಪರಶ್ವಧಾಃ ।
ಸಪ್ರಾಸಕವಚಾಶ್ಚಾನ್ಯೇ ನರಾಃ ಸುಪ್ತಾಃ ಪೃಥಕ್ ಪೃಥಕ್ ॥ ೩೬ ॥

ಆಯುಧಗಳನ್ನೂ, ಗದೆಗಳನ್ನೂ, ಖಡ್ಗಗಳನ್ನೂ, ಪರಶ್ವಧಗಳನ್ನೂ, ಪ್ರಾಸಗಳನ್ನೂ, ಕವಚಗಳನ್ನೂ ಹಿಡಿದ ಯೋಧರು ಬೇರೆ ಬೇರೆಯಾಗಿ ನಿದ್ರೆಯನ್ನು ಮಾಡಿದರು.

ಗಜಾಸ್ತೇ ಪನ್ನಗಾಭೋಗೈರ್ಹಸ್ತೈರ್ಭೂರೇಣುರೂಷಿತೈಃ ।
ನಿದ್ರಾಂಧಾ ವಸುಧಾಂ ಚಕ್ರುಶ್ಚಾರ್ಯಾಣನಿಃಶ್ವಾಸಶೀತಲಾಮ್ ॥ ೩೭ ॥

ನಿದ್ರಾಂಧವಾದ ಗಜಗಳು ಭೂಮಿಯ ಧೂಳಿನಿಂದ ತುಂಬಿದ್ದ ಸರ್ಪಶರೀರದಂತಿದ್ದ ಸೊಂಡಿಲುಗಳಿಂದ ಉಸಿರನ್ನು ಬಿಡುತ್ತಾ ಭೂಮಿಯನ್ನು ಶೀತಲವನ್ನಾಗಿ ಮಾಡಿದವು.

ಗಜಾಃ ಶುಶುಭಿರೇ ತತ್ರ ನಿಶ್ವಸಂತೋ ಮಹೀತಲೇ ।
ವಿಶೀರ್ಣಾ ಗಿರಯೋ ಯದ್ವನ್ನಿಶ್ವಸದ್ಭಿರ್ಮಹೋರಗೈಃ ॥ ೩೮ ॥

ಗಜಗಳು ಗಾಯಗೊಂಡ ಪರ್ವತಗಳಂತೆ ಭೂಮಿಯಲ್ಲಿ ಮಲಗಿ ನಿಃಶ್ವಾಸವನ್ನು ಮಾಡುತ್ತಾ, ನಿಃಶ್ವಾಸವನ್ನು ಮಾಡುವ ಮಹಾಸರ್ಪಗಳಂತೆ ಶೋಭಿಸಿದವು.

ಸಮಾಂ ಚ ವಿಷಮಾಂ ಚಕ್ರುಃ ಖುರಾಗ್ರೈರ್ವಿಕ್ಷತಾಂ ಮಹೀಮ್ ।
ಹಯಾಃ ಕಾಂಚನಯೋಕ್ತ್ರಾಶ್ಚ ಕೇಸರಾಲಂಬಿಭಿರ್ಯುಗೈಃ ।
ಸುಷುಪುಸ್ತತ್ರ ರಾಜೇಂದ್ರ ಯುಕ್ತಾ ವಾಹೇಷು ಸರ್ವಶಃ ॥ ೩೯ ॥

ಗಜಗಳು ತಮ್ಮ ಪಾದದಿಂದ ವಿಷಮವಾದ ಭೂಮಿಯನ್ನು ಸಮವನ್ನಾಗಿ ಮಾಡಿದವು. ಎಲೈ ರಾಜೇಂದ್ರನೇ, ಸುವರ್ಣಮಯವಾದ ಕಡಗೂಟಗಳನ್ನು ಹೊಂದಿದ ಅಶ್ವಗಳು ತಮ್ಮ ಕೇಸರಗಳ ಮೇಲಿದ್ದ ನೊಗಗಳ ಜೊತೆಯಲ್ಲಿಯೇ ವಾಹನಗಳಲ್ಲಿಯೇ ನಿದ್ರಿಸಿದವು.

ತತ್ತಥಾ ನಿದ್ರಯಾ ಭಗ್ನಮವಾಚಮಸ್ವಪದ್ಬಲಮ್ ।
ಕುಶಲೈರಿವ ವಿನ್ಯಸ್ತಂ ಪಟೇ ಚಿತ್ರಮಿವಾದ್ಭುತಮ್ ॥ ೪೦ ॥

ಹಾಗೆ ನಿದ್ರೆಯಿಂದ ಭಗ್ನವಾಗಿ ಮಾತಿಲ್ಲದೆ ಮಲಗಿದ ಆ ಸೈನ್ಯವು ಕುಶಲರಾದ ಕಲಾವಿದರು ವಸ್ತ್ರದಲ್ಲಿ ಬಿಡಿಸಿದ ಅದ್ಭುತವಾದ ಚಿತ್ರದಂತೆ ಇದ್ದಿತು.

ತೇ ಕ್ಷತ್ರಿಯಾಃ ಕುಂಡಲಿನೋ ಯುವಾನಃ
ಪರಸ್ಪರಂ ಸಾಯಕವಿಕ್ಷತಾಂಗಾಃ ।
ಕುಂಭೇಷು ಲೀನಾಃ ಸುಷುಪುರ್ಗಜಾನಾಂ
ಕುಚೇಷು ಲಗ್ನಾ ಇವ ಕಾಮಿನೀನಾಮ್ ॥ ೪೧ ॥

ಕುಂಡಲಗಳನ್ನು ಧರಿಸಿದ ಯುವಕರಾದ ಕ್ಷತ್ರಿಯರು ಪರಸ್ಪರವಾಗಿ ಬಾಣಗಳಿಂದ ಗಾಯಗೊಂಡ ಶರೀರವುಳ್ಳವರಾಗಿ, ಕಾಮಿನಿಯರ ಕುಚಗಳಲ್ಲಿ ಮುಖವಿಟ್ಟು ಮಲಗಿದಂತೆ ಗಜಗಳ ಕುಂಭಸ್ಥಲದಲ್ಲಿ ತಲೆಯಿಟ್ಟು ಮಲಗಿದರು.

ತತಃ ಕುಮುದನಾಥೇನ ಕಾಮಿನೀಗಂಡಪಾಂಡುನಾ ।
ನೇತ್ರಾನಂದೇನ ಚಂದ್ರೇಣ ಮಾಹೇಂದ್ರೀ ದಿಗಲಂಕೃತಾ ॥ ೪೨ ॥

ಅನಂತರ ಕುಮುದನಾಥನಾದ ವಿರಹವುಳ್ಳ ಕಾಮಿನಿಯ ಕೆನ್ನೆಯಂತೆ ಬಿಳಿಯಾದ, ನೇತ್ರಾನಂದಕನಾದ ಚಂದ್ರನು ಪೂರ್ವದಿಕ್ಕನ್ನು ಅಲಂಕರಿಸಿದನು.

ತತೋ ಮುಹೂರ್ತಾದ್‌ಭಗವಾನ್ ಪುರಸ್ತಾಚ್ಛಶಲಕ್ಷಣಃ ।
ಅರುಣಂ ದರ್ಶಯಾಮಾಸ ಗ್ರಸನ್ ಜ್ಯೋತಿಃಪ್ರಭಂ ಪ್ರಭುಃ ॥ ೪೩ ॥

ಅನಂತರ ಒಂದು ಮುಹೂರ್ತದಲ್ಲಿ ಶಶಾಂಕನಾದ ಚಂದ್ರನು ರಣರಂಗದ ದೀಪದ ಕಾಂತಿಗಳನ್ನು ಮಂಕುಗೊಳಿಸುತ್ತಾ ತನ್ನ ಉದಯಕ್ಕಿಂತ ಮೊದಲಿನ ಅರುಣ ವರ್ಣವನ್ನು ತೋರಿಸಿದನು.

ಅರುಣಸ್ಯ ತು ತಸ್ಯಾನು ಜಾತರೂಪಸಮಪ್ರಭಮ್ ।
ರಶ್ಮಿಜಾಲಂ ಮಹಚ್ಚಂದ್ರೋ ಮಂದಂ ಮಂದಮವಾಸೃಜತ್ ॥ ೪೪ ॥

ಅರುಣನ ಉದಯವಾದ ನಂತರ ಚಂದ್ರನು ಚಿನ್ನದ ಸಮಾನ ಕಾಂತಿಯುಳ್ಳ ತನ್ನ ದೊಡ್ಡ ರಶ್ಮಿ ಸಮೂಹವನ್ನು ಮೆಲ್ಲಮೆಲ್ಲನೆ ಸೃಷ್ಟಿಸಿದನು.

ಉತ್ಸಾರಯಂತಃ ಪ್ರಭಯಾ ತಮಸ್ತೇ ಚಂದ್ರರಶ್ಮಯಃ ।
ಪರ್ಯಗಚ್ಛನ್ ಶನೈಃ ಸರ್ವಾ ದಿಶಃ ಖಂ ಚ ಕ್ಷಿತಿಂ ತಥಾ ॥ ೪೫ ॥

ಆ ಚಂದ್ರರಶ್ಮಿಗಳು ತಮ್ಮ ಕಾಂತಿಯಿಂದ ತಮಸ್ಸನ್ನು ಹೊರದೂಡುತ್ತಾ ನಿಧಾನವಾಗಿ ಎಲ್ಲ ದಿಕ್ಕುಗಳನ್ನೂ, ಆಕಾಶವನ್ನೂ ಮತ್ತು ಭೂಮಿಯನ್ನೂ ಆವರಿಸಿದವು.

ತತೋ ಮುಹೂರ್ತಾದ್ ಭುವನಂ ಜ್ಯೋತಿರ್ಭೂತಮಿವಾಭವತ್ ।
ಅಪ್ರಖ್ಯಮಪ್ರಕಾಶಂ ಚ ಜಗಾಮಾಶು ತಮಸ್ತಥಾ ॥ ೪೬ ॥

ಅನಂತರ ಒಂದು ಮುಹೂರ್ತದಲ್ಲಿ ಎಲ್ಲ ಭೂಮಿಯೂ ಜ್ಯೋತಿರ್ಮಯವಾಯಿತು. ಅಲ್ಲಿಯವರೆಗೆ ಇದ್ದ ಕತ್ತಲೆಯು ಹೆಸರಿಲ್ಲದಂತೆ ಶೀಘ್ರವಾಗಿ ನಾಶವನ್ನು ಹೊಂದಿತು.

ಪ್ರತಿಪ್ರಕಾಶಿತೇ ಲೋಕೇ ದಿವಾಭೂತೇ ನಿಶಾಕರೇ ।
ವಿಚೇರುರ್ನ ವಿಚೇರುಶ್ಚ ರಾಜನ್ಕಂಚರಾಸ್ತತಃ ॥ ೪೭ ॥

ಚಂದ್ರನು ಹಗಲಿನಂತೆ ಬೆಳಕನ್ನು ನೀಡಿ ಪ್ರಪಂಚವನ್ನು ಪ್ರಕಾಶಿಸುತ್ತಿರಲು ಎಲೈ ರಾಜನೇ, ರಾತ್ರಿಯಲ್ಲಿ ಸಂಚರಿಸುವ ಚಕೋರಾದಿ ಪಕ್ಷಿಗಳು ಸಂಚರಿಸಿದವು. ಕತ್ತಲೆಯನ್ನು ಬಯಸುವ ಗೂಬೆ ಮೊದಲಾದ ಪಕ್ಷಿಗಳು ಸಂಚರಿಸಲಿಲ್ಲ.

ಬೋಧ್ಯಮಾನಂ ತು ತತ್ ಸೈನ್ಯಂ ರಾಜಂಶ್ಚಂದ್ರಸ್ಯ ರಶ್ಮಿಭಿಃ ।
ಬುಬುಧೇ ಶತಪತ್ರಾಣಾಂ ವನಂ ಮಹದಿವಾಂಭಸಿ ॥ ೪೮ ॥

ಎಲೈ ರಾಜನೇ, ಚಂದ್ರನ ಕಿರಣಗಳಿಂದ ಎಚ್ಚರಿಸಲ್ಪಟ್ಟ ಸೈನ್ಯವು ನೀರಿನಲ್ಲಿರುವ ದೊಡ್ಡ ಕಮಲಗಳ ವನದಂತೆ ಎಚ್ಚರಗೊಂಡಿತು.

ಯಥಾ ಚಂದ್ರೋದಯೋದ್ಧೂತಃ ಕ್ಷುಭಿತಃ ಸಾಗರೋ ಭವೇತ್ ।
ತಥಾ ಚಂದ್ರೋದಯೋದ್ಧೂತಃ ಸ ಬಭೂವ ಬಲಾರ್ಣವಃ ॥ ೪೯ ॥

ಚಂದ್ರೋದಯದಿಂದ ಸಾಗರವು ಉಕ್ಕೇರಿದಂತೆ ಇಲ್ಲಿ ಚಂದ್ರೋದಯದಿಂದ ಆ ಸೈನ್ಯ ಸಾಗರವು ಉಕ್ಕೇರಿತು.

ತತಃ ಪ್ರವವೃತೇ ಯುದ್ಧಂ ಪುನರೇವ ವಿಶಾಂಪತೇ ।
ಲೋಕೇ ಲೋಕವಿನಾಶಾಯ ಪರಂ ಲೋಕಮಭೀಪ್ಸತಾಮ್ ॥ ೫೦ ॥

ಎಲೈ ರಾಜನೇ, ಆಗ ಪರಲೋಕವನ್ನು ಬಯಸುವ ಯೋಧರಿಗೆ ಲೋಕ ವಿನಾಶಕರವಾದ ಯುದ್ಧವು ಪುನಃ ಪ್ರಾರಂಭವಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತತ್ಯಧಿಕಶತತಮೋऽಧ್ಯಾಯಃ ॥

॥ ದ್ರೋಣವಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂದನೆಯ ಅಧ್ಯಾಯ

ದುರ್ಯೋಧನನಿಂದ ದ್ರೋಣರ ನಿಂದೆ. ಅರ್ಜುನನನ್ನು ಪ್ರಶಂಸಿಸಿ ದುರ್ಯೋಧನನನ್ನು ಕುರಿತು ದ್ರೋಣರ ಉಗ್ರವಚನಗಳು.

ಸಂಜಯಃ

ತತೋ ದುರ್ಯೋಧನೋ ದ್ರೋಣಮಭಿಗಮ್ಯೇದಮಬ್ರವೀತ್ ।
ಅಮರ್ಷವಶಮಾಪನ್ನೋ ಜನಯನ್ ಹರ್ಷತೇಜಸೀ ॥ ೧ ॥

ಸಂಜಯ– ಅನಂತರ ದುರ್ಯೋಧನನು ರೋಷಾವಿಷ್ಟನಾಗಿ ದ್ರೋಣರ ಸಮೀಪಕ್ಕೆ ಬಂದು ಅವರಿಗೆ ಸಂತೋಷವನ್ನುಂಟು ಮಾಡುತ್ತಾ ಹಾಗೆ ಅವರ ತೇಜಸ್ಸನ್ನು ಹೆಚ್ಚಿಸುತ್ತಾ ಈ ಮಾತುಗಳನ್ನು ಆಡಿದನು.

ನ ಮರ್ಷಣೀಯಾಃ ಸಂಗ್ರಾಮೇ ವಿಶ್ರಮಂತಃ ಶ್ರಮಾನ್ವಿತಾಃ ।
ಸಪತ್ನಾ ಗ್ಲಾನಮನಸೋ ಲಬ್ಧಲಕ್ಷ್ಯಾ ವಿಶೇಷತಃ ॥ ೨ ॥

ಮನೋಗ್ಲಾನಿಯನ್ನು ಹೊಂದಿದ, ವಿಶೇಷವಾಗಿ ಗುರಿಯನ್ನು ಸಾಧಿಸಿ ದಣಿದ ಶತ್ರುಗಳು ರಣರಂಗದಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುವಾಗ ಅವರನ್ನು ಕ್ಷಮಿಸಬಾರದು.

ತತ್ ತು ಮರ್ಷಿತಮಸ್ಮಾಭಿರ್ಭವತಃ ಪ್ರಿಯಕಾಮ್ಯಯಾ ।
ತ ಏತೇ ಪರಿವಿಶ್ರಾಂತಾಃ ಪಾಂಡವಾ ಬಲವತ್ತರಾಃ ॥ ೩ ॥

ನಿಮಗೆ ಪ್ರಿಯವನ್ನು ಉಂಟುಮಾಡುವುದಕ್ಕಾಗಿ ನಾವು ಪಾಂಡವರನ್ನು ಸಹಿ(ಕ್ಷಮಿ)ಸಿದೆವು. ಈಗ ಪಾಂಡವರು ವಿಶ್ರಾಂತಿಯನ್ನು ಪಡೆದು ಇನ್ನೂ ಬಲಿಷ್ಠರಾಗಿದ್ದಾರೆ.

ಸರ್ವಥಾ ಪರಿಹೀನಾಃ ಸ್ಮ ತೇಜಸಾ ಚ ಬಲೇನ ಚ ।
ಭವತಾ ಪಾಲ್ಯಮಾನಾಸ್ತೇ ವಿವರ್ಧಂತೇ ಪುನಃ ಪುನಃ ॥ ೪ ॥

ನಾವು ನಮ್ಮ ಬಲದಿಂದಲೂ ಮತ್ತು ತೇಜಸ್ಸಿನಿಂದಲೂ ಸರ್ವಥಾ ಕ್ಷೀಣರಾಗಿದ್ದೇವೆ. ನಿಮ್ಮಿಂದ ರಕ್ಷಿತರಾದ ಪಾಂಡವರು ಪುನಃ ಪುನಃ ಅಭ್ಯುದ್ಧಿಯನ್ನು ಹೊಂದುತ್ತಿದ್ದಾರೆ.

ದಿವ್ಯಾನ್ಯಸ್ತ್ರಾಣಿ ಸರ್ವಾಣಿ ಬ್ರಹ್ಮಾಸ್ತ್ರಾದೀನಿ ಯಾನ್ಯಪಿ ।
ತಾನಿ ಸರ್ವಾಣಿ ತಿಷ್ಠಂತಿ ಭವತ್ಯೇವ ವಿಶೇಷತಃ ॥ ೫ ॥

ಬ್ರಹ್ಮಾಸ್ತ್ರವೇ ಮೊದಲಾದ ಯಾವ ದಿವ್ಯಾಸ್ತ್ರಗಳು ಇವೆಯೋ ಅವೆಲ್ಲವೂ ನಿಮ್ಮಲ್ಲಿಯೇ ವಿಶೇಷವಾಗಿ ನೆಲೆಸಿವೆ.

ನ ಪಾಂಡವೇಯಾ ನ ವಯಂ ನಾನ್ಯೇ ಲೋಕೇ ಧನುರ್ಧರಾಃ ।
ಯುಧ್ಯಮಾನಸ್ಯ ತೇ ತುಲ್ಯಾಃ ಸತ್ಯಮೇತದ್ ಬ್ರವೀಮಿ ತೇ ॥ ೬ ॥

ಪಾಂಡವರಾಗಲೀ, ನಾವಾಗಲೀ, ಲೋಕದ ಬೇರೆ ಧನುರ್ಧರರಾಗಲೀ ಯುದ್ಧ ಮಾಡುವ ನಿಮಗೆ ಸಮರಲ್ಲ. ಇದನ್ನು ಸತ್ಯವಾಗಿ ನಿಮಗೆ ಹೇಳುತ್ತಿದ್ದೇನೆ.

ಸಸುರಾಸುರಗಂಧರ್ವಾನಿಮಾಂಲ್ಲೋಕಾನ್ ದ್ವಿಜೋತ್ತಮ ।
ಸರ್ವಾಸ್ತ್ರವಿದ್ ಭವಾನ್ ಹನ್ಯಾದ್ ದಿವ್ಯೈರಸ್ತ್ರೈರ್ನ ಸಂಶಯಃ ॥ ೭ ॥

ಎಲೈ ದ್ವಿಜಶ್ರೇಷ್ಠರೇ, ಸುರಾಸುರಗಂಧರ್ವಸಹಿತರಾದ ಈ ಲೋಕಗಳನ್ನು ಸರ್ವಾಸ್ತ್ರ ವೇತ್ತರಾದ ನೀವು ನಿಮ್ಮ ದಿವ್ಯಾಸ್ತ್ರಗಳಿಂದ ಕೊಲ್ಲಬಹುದು ಎಂಬುದರಲ್ಲಿ ಸಂಶಯವಿಲ್ಲ.

ಸ ಭವಾನ್ ಮರ್ಷಯತ್ಯೇನಾಂಸ್ತ್ವತ್ತೋ ಭೀತಾನ್ ವಿಶೇಷತಃ ।
ಶಿಷ್ಯತ್ವಂ ವಾ ಪುರಸ್ಕೃತ್ಯ ಮಮ ವಾ ಮಂದಭಾಗ್ಯತಾಮ್ ॥ ೮ ॥

ಅಂತಹ ನೀವು ನಿಮಗೆ ವಿಶೇಷವಾಗಿ ಹೆದರಿದ ಪಾಂಡವರನ್ನು ಅವರು ಶಿಷ್ಯರೆಂಬ ಕಾರಣದಿಂದಲೋ ಅಥವಾ ನನ್ನ ದುರದೃಷ್ಟದ ಕಾರಣದಿಂದಲೋ ಸಹಿಸಿಕೊಂಡಿದ್ದೀರಿ (ಕ್ಷಮಿಸಿಕೊಂಡಿದ್ದೀರಿ) (ಎಂದು ಹೇಳಿದನು).

ಏವಮುದ್ಧರ್ಷಿತೋ ದ್ರೋಣಃ ಕೋಪಿತಶ್ಚಾತ್ಮಜೇನ ತೇ ।
ಸಮನ್ಯುರಬ್ರವೀದ್ ರಾಜನ್ ದುರ್ಯೋಧನಮಿದಂ ವಚಃ ॥ ೯ ॥

ಎಲೈ ರಾಜನೇ, ಹೀಗೆ ದ್ರೋಣರು ನಿನ್ನ ಪುತ್ರನಿಂದ ಹರ್ಷ-ತೇಜಸ್ಸಿನಿಂದ ಕೂಡಿದವರಾಗಿ ಮಾಡಲ್ಪಡುತ್ತಿರಲು ಅವರು ದುರ್ಯೋಧನನನ್ನು ಕುರಿತು ಕೋಪದಿಂದ ಈ ಮಾತುಗಳನ್ನು ಆಡಿದರು.

ಸ್ಥವಿರಃ ಸನ್ ಪರಂ ಶಕ್ತ್ಯಾ ಘಟೇ ದುರ್ಯೋಧನಾಹವೇ ।
ಅತಃ ಪರಂ ಮಯಾ ಕಾರ್ಯಂ ಕ್ಷುದ್ರಂ ವಿಜಯಗೃದ್ಧಿನಃ ।
ಅನಸ್ತ್ರವಿದಯಂ ಸರ್ವೋ ಹಂತವ್ಯೋಽಸ್ತ್ರವಿದಾ ಜನಃ ॥ ೧೦ ॥

ಎಲೈ ದುರ್ಯೋಧನನೇ, ವೃದ್ಧನಾದರೂ ನಾನು ರಣರಂಗದಲ್ಲಿ ಪೂರ್ಣ ಶಕ್ತಿಯಿಂದ ಯುದ್ಧಮಾಡುತ್ತಿದ್ದೇನೆ. ಇನ್ನು ಇಲ್ಲಿಂದ ಮುಂದೆ ಜಯವನ್ನು ಅಪೇಕ್ಷಿಸುವ ನಾನು ಕ್ಷುದ್ರ ಕಾರ್ಯವನ್ನು ಮಾಡಬೇಕಾದಿತು. ಅಸ್ತ್ರವನ್ನು ತಿಳಿದ ನಾನು ಅಸ್ತ್ರವನ್ನು ತಿಳಿಯದ ಇವರೆಲ್ಲರನ್ನೂ ಕೊಲ್ಲಬೇಕು.

ಯದ್ಭವಾನ್ ಮನ್ಯತೇ ಚಾಪಿ ಶುಭಂ ವಾ ಯದಿ ವಾऽಶುಭಮ್ ।
ತದ್ವೈ ಕರ್ತಾಸ್ಮಿ ಕೌರವ್ಯ ವಚನಾತ್ ತವ ನಾನ್ಯಥಾ ॥ ೧೧ ॥

ಶುಭವಾಗಲೀ ಅಥವಾ ಅಶುಭವಾಗಲೀ ನಾನು ಏನು ಮಾಡಬೇಕೆಂದು ನೀನು ಭಾವಿಸುವೆಯೋ ಎಲೈ ಕೌರವ್ಯನೇ, ನಿನ್ನ ಮಾತಿನಂತೆ ನಾನು ಅದನ್ನು ಮಾಡುವೆನು. ಅನ್ಯಥಾ ಮಾಡುವುದಿಲ್ಲ.

ನಿಹತ್ಯ ಸರ್ವಪಾಂಚಾಲಾನ್ ಯುದ್ಧೇ ಕೃತ್ವಾ ಪರಾಕ್ರಮಮ್ ।
ವಿಮೋಕ್ಷ್ಯೇ ಕವಚಂ ರಾಜನ್ ಸತ್ಯೇನಾಯುಧಮಾಲಭೇ ॥ ೧೨ ॥

ಎಲೈ ರಾಜನೇ, ಯುದ್ಧದಲ್ಲಿ ಪರಾಕ್ರಮವನ್ನು ಆಶ್ರಯಿಸಿ ಎಲ್ಲ ಪಾಂಚಾಲರನ್ನೂ ಕೊಂದು, ಅನಂತರ ನನ್ನ ಕವಚವನ್ನು ಬಿಚ್ಚುತ್ತೇನೆ. ಎಲೈ ರಾಜನೇ, ಇದನ್ನು ನನ್ನ ಆಯುಧವನ್ನು ಮುಟ್ಟಿ ಶಪಥವನ್ನು ಮಾಡಿ ಹೇಳುತ್ತಿದ್ದೇನೆ.

ಮನ್ಯಸೇ ಯಚ್ಚ ಕೌಂತೇಯಮರ್ಜುನಂ ಶ್ರಾಂತಮಾಹವೇ ।
ತಸ್ಯ ವೀರ್ಯಂ ಮಹಾಬಾಹೋ ಶೃಣು ಸತ್ಯೇನ ಕೌರವ ॥ ೧೩ ॥

ನೀನು ಕೌಂತೇಯನಾದ ಅರ್ಜುನನು ಯುದ್ಧದಲ್ಲಿ ದಣದಿರುವನೆಂದು ತಿಳಿದಿರುವಿಯಷ್ಟೆ? ಎಲೈ ಮಹಾಬಾಹುವೇ, ಕೌರವನೇ, ಅವನ ಪರಾಕ್ರಮವನ್ನು ನಿಜವಾಗಿ ಕೇಳು.

ತಂ ನ ದೇವಾ ನ ಗಂಧರ್ವಾ ನ ಯಕ್ಷಾ ನ ಚ ರಾಕ್ಷಸಾಃ ।
ಉತ್ಸಹಂತೇ ರಣೇ ಸೋಢುಂ ಕುಪಿತಂ ಸವ್ಯಸಾಚಿನಮ್ ॥ ೧೪ ॥

ಕೋಪಗೊಂಡ ಅರ್ಜುನನ ಜೊತೆಯಲ್ಲಿ ರಣರಂಗದಲ್ಲಿ ಯುದ್ಧವನ್ನು ಮಾಡಲು ದೇವತೆಗಳಾಗಲೀ, ಗಂಧರ್ವರಾಗಲೀ, ಯಕ್ಷರಾಗಲೀ, ರಾಕ್ಷಸರಾಗಲೀ ಬಯಸುವುದಿಲ್ಲ. ಅವನನ್ನು ಯಾರೂ ಸಹಿಸಲಾರರು.

ಖಾಂಡವೇ ಯೇನ ಭಗವಾನ್ ಪ್ರತ್ಯುದ್ಯಾತಃ ಸುರೇಶ್ವರಃ ।
ಸಾಯಕೈರ್ವಾರಿತಶ್ಚಾಪಿ ವರ್ಷಮಾಣೋ ಮಹಾತ್ಮನಾ ॥ ೧೫ ॥

ಖಾಂಡವ ವನದಲ್ಲಿ ಪೂಜ್ಯನಾದ ದೇವೇಂದ್ರನು ಬಂದು ಬಾಣಗಳ ಮಳೆಯನ್ನು ಸುರಿಸಿದರೂ ಮಹಾತ್ಮನಾದ ಅರ್ಜುನನು ತನ್ನ ಬಾಣಗಳಿಂದ ಅವನನ್ನು ನಿವಾರಿಸಿದನು.

ಯಕ್ಷಾ ನಾಗಾಸ್ತಥಾ ದೈತ್ಯಾ ಯೇ ಚಾನ್ಯೇ ಬಲಗರ್ವಿತಾಃ ।
ನಿಹತಾಃ ಪುರುಷೇಂದ್ರೇಣ ತಚ್ಚಾಪಿ ವಿದಿತಂ ತವ ॥ ೧೬ ॥

ಯಕ್ಷರು, ಸರ್ಪಗಳು, ದೈತ್ಯರು, ಬಲಗರ್ವಿತರಾದ ಉಳಿದವರು ಪುರುಷೇಂದ್ರನಾದ ಅರ್ಜುನನಿಂದ ನಿಹತರಾಗಿರುವ ವಿಷಯವು ನಿನಗೂ ತಿಳಿದಿದೆ.

ಗಂಧರ್ವಾ ಘೋಷಯಾತ್ರಾಯಾಂ ಚಿತ್ರಸೇನಾದಯೋ ಜಿತಾಃ ।
ಯೂಯಂ ತೈರ್ಹ್ರಿಯಮಾಣಾಶ್ಚ ಮೋಕ್ಷಿತಾ ದೃಢಧನ್ವನಾ ॥ ೧೭ ॥

ಘೋಷಯಾತ್ರೆಯ ಸಮಯದಲ್ಲಿ ಚಿತ್ರಸೇನ ಮೊದಲಾದ ಗಂಧರ್ವರು ಅವನಿಂದ ಪರಾಜಿತರಾದರು. ಅವರಿಂದ ಎಳೆದುಕೊಂಡು ಹೋಗಲ್ಪಡುತ್ತಿದ್ದ ನಿಮ್ಮನ್ನು ದೃಢವಾದ ಧನುಸ್ಸುಳ್ಳ ಅರ್ಜುನನು ಬಿಡಿಸಿದನು.

ನಿವಾತಕವಚಾಶ್ಚಾಪಿ ದೇವಾನಾಂ ಶತ್ರವಸ್ತಥಾ ।
ಸುರೈರವಧ್ಯಾಃ ಸಂಗ್ರಾಮೇ ತೇನ ವೀರೇಣ ನಿರ್ಜಿತಾಃ ॥ ೧೮ ॥

ದೇವತೆಗಳಿಂದ ಅವಧ್ಯರಾದ, ದೇವತೆಗಳ ಶತ್ರುಗಳಾದ ನಿವಾತಕವಚರೂ ಸಹ ಯುದ್ಧದಲ್ಲಿ ಆ ವೀರನಿಂದ ಪರಾಜಿತರಾದರು.

ದಾನವಾನಾಂ ಸಹಸ್ರಾಣಿ ಹಿರಣ್ಯಪುರವಾಸಿನಾಮ್ ।
ವಿಜಿಗ್ಯೇ ಪುರುಷವ್ಯಾಘ್ರಃ ಸ ಶಕ್ಯೋ ಮಾನುಷೈಃ ಕಥಮ್ ॥ ೧೯ ॥

ಪುರುಷವ್ಯಾಘ್ರನಾದ ಅರ್ಜುನನು ಹಿರಣ್ಯಪುರವಾಸಿಗಳಾದ ಸಹಸ್ರಾರು ದಾನವರನ್ನು ಗೆದ್ದನು. ಅವನ ಜೊತೆಯಲ್ಲಿ ಮನುಷ್ಯರು ಹೇಗೆ ಯುದ್ಧವನ್ನು ಮಾಡಿಯಾರು?

ಪ್ರತ್ಯಕ್ಷಂ ಚೈವ ತೇ ಸರ್ವಂ ಯಥಾ ಬಲಮಿದಂ ತವ ।
ಕ್ಷಪಿತಂ ಪಾಂಡುಪುತ್ರೇಣ ಚೇಷ್ಟತಾಂ ನೋ ವಿಶಾಂಪತೇ ॥ ೨೦ ॥

ಎಲೈ ರಾಜನೇ, ಈ ನಮ್ಮ ಸೈನ್ಯವೆಲ್ಲವೂ ನಾವು ಎಷ್ಟು ಪ್ರಯತ್ನಪಡುತ್ತಿದ್ದರೂ ಪಾಂಡುಪುತ್ರನಾದ ಅರ್ಜುನನಿಂದ ನಾಶವನ್ನು ಹೊಂದುತ್ತಿರುವುದು ನಿನ್ನ ಕಣ್ಣೆದುರಿಂಗೇ ನಡೆಯುತ್ತಿದೆ (ಎಂದು ಹೇಳಿದರು).

ಸಂಜಯಃ

ತಂ ತಥಾऽಭಿಪ್ರಶಂಸಂತಮರ್ಜುನಂ ಕುಪಿತಸ್ತದಾ ।
ದ್ರೋಣಂ ತವ ಸುತೋ ರಾಜನ್ ಪುನರೇವೇದಮಬ್ರವೀತ್ ॥ ೨೧ ॥

ಅಹಂ ದುಃಶಾಸನಃ ಕರ್ಣಃ ಶಕುನಿರ್ಮಾತುಲಶ್ಚ ಮೇ ।
ಹನಿಷ್ಯಾಮೋऽರ್ಜುನಂ ಸಂಖೇ ದ್ವೈಧೀಕೃತ್ಯಾದ್ಯ ಭಾರತೀಮ್ ॥೨೨॥

ಸಂಜಯ– ಹಾಗೆ ಅರ್ಜುನನನ್ನು ಪ್ರಶಂಸೆ ಮಾಡುತ್ತಿದ್ದ ದ್ರೋಣರನ್ನು ಕುರಿತು ಎಲೈ ರಾಜನೇ, ನಿನ್ನ ಪುತ್ರನು ಕೋಪಗೊಂಡು ಪುನಃ ನಾನು, ದುಶ್ಶಾಸನ, ಕರ್ಣ ಮತ್ತು ನನ್ನ ಸೋದರ ಮಾವನಾದ ಶಕುನಿ, ನಮ್ಮ ಸೈನ್ಯವನ್ನು ಎರಡು ಭಾಗವನ್ನಾಗಿ ಮಾಡಿ, ರಣರಂಗದಲ್ಲಿ ಅರ್ಜುನನನ್ನು ಕೊಲ್ಲುವೆವು ಎಂದು ಹೇಳಿದನು.

ತಸ್ಯ ತದ್ವಚನಂ ಶ್ರುತ್ವಾ ಭಾರದ್ವಾಜೋ ಹಸನ್ನಿವ ।
ಅನ್ವಮರ್ತತ ರಾಜಾನಂ ಸ್ವಸ್ತಿ ತೇऽಸ್ತ್ವಿತಿ ಚಾಬ್ರವೀತ್ ॥ ೨೩॥

ಅವನ ಮಾತನ್ನು ಕೇಳಿದ ದ್ರೋಣರು ನಗುವವರಂತೆ ರಾಜನನ್ನು ಅನುಮೋದಿಸಿ 'ನಿನಗೆ ಕ್ಷೇಮವಾಗಲಿ' ಎಂದು ಹೇಳಿದರು.

ಕೋ ಹಿ ಗಾಂಡೀವಧನ್ವಾನಂ ಜ್ವಲಂತಮಿವ ತೇಜಸಾ ।
ಅಕ್ಷಯಂ ಕ್ಷಪಯೇತ್ ಕಶ್ಚಿತ್ ಕ್ಷತ್ರಿಯಃ ಕ್ಷತ್ರಿಯರ್ಷಭಮ್ ॥ ೨೪ ॥

ತನ್ನ ತೇಜಸ್ಸಿನಿಂದ ಜ್ವಲಿಸುವ ಅಕ್ಷಯನಾದ, ಕ್ಷತ್ರಿಯಶ್ರೇಷ್ಠನಾದ, ಗಾಂಡೀವ ಧನುರ್ಧಾರಿಯಾದ ಅರ್ಜುನನನ್ನು ಯಾವ ಕ್ಷತ್ರಿಯನು ನಾಶಮಾಡಿಯಾನು?

ತಂ ನ ವಿತ್ತಪತಿರ್ನೇಂದ್ರೋ ನ ಯಮೋ ನ ಜಲೇಶ್ವರಃ ।
ನಾಸುರೋರಗರಕ್ಷಾಂಸಿ ಕ್ಷಪಯೇಯುಃ ಸಹಾಯುಧಮ್ ॥ ೨೫ ॥

ಕೈಯಲ್ಲಿ ಆಯುಧವನ್ನು ಹಿಡಿದ ಅರ್ಜುನನನ್ನು ವಿತ್ತಪತಿಯಾದ ಕುಬೇರನಾಗಲೀ, ಇಂದ್ರನಾಗಲೀ, ಯಮನಾಗಲೀ, ಜಲೇಶ್ವರನಾದ ವರುಣನಾಗಲೀ, ಅಸುರೋರಗ ರಾಕ್ಷಸರಾಗಲೀ ನಾಶಪಡಿಸಲಾರರು.

ಮೂಢಾಸ್ತೇ ತ್ವೇತಾನಿ ಭಾಷಂತೇ ಯಾನೀಮಾನ್ಯಾತ್ಥ ಭಾರತ ।
ಯುದ್ಧೇ ಹ್ಯರ್ಜುನಮಾಸಾದ್ಯ ಸ್ವಸ್ತಿಮಾನ್ ಕೋ ವ್ರಜೇದ್ ಗೃಹಾನ್ ॥

ಎಲೈ ಭಾರತನೇ, ಮೂಢರಾದವರು ಮಾತ್ರ ನೀನು ಆಡಿದಂತೆ ಮಾತುಗಳನ್ನು ಆಡುತ್ತಾರೆ. ಅರ್ಜುನನನ್ನು ರಣರಂಗದಲ್ಲಿ ಸಮೀಪಿಸಿ ಯಾವನು ತಾನೇ ಕ್ಷೇಮದಿಂದ ಮನೆಗೆ ಹಿಂದಿರುಗಿಯಾನು?

ತ್ವಂ ತು ಸರ್ವಾತಿಶಂಕಿತ್ವಾನ್ನಿಷ್ಠುರಃ ಪಾಪನಿಶ್ಚಯಃ ।
ಶ್ರೇಯಸಸ್ತ್ವದ್ಧಿತೇ ಯುಕ್ತಾಂಸ್ತತ್ತದ್ ವಕ್ತುಮಿಹೇಚ್ಛಸಿ ॥ ೨೭ ॥

ನೀನಾದರೋ ಎಲ್ಲರನ್ನೂ ಶಂಕಿಸುವವನು, ನಿಷ್ಠುರಿ, ಪಾಪನಿಶ್ಚಯವನ್ನು ಹೊಂದಿದವನು. ನಿನ್ನ ಹಿತದಲ್ಲಿ ಆಸಕ್ತರಾದ ದೊಡ್ಡವರನ್ನು ಬಾಯಿಗೆ ಬಂದಂತೆ ಮಾತನಾಡಿ (ನಿಂದಿಸಲು) ನೀನು ಬಯಸುತ್ತಿದ್ದೀಯೆ.

ಗಚ್ಛ ತ್ವಮಪಿ ಕೌಂತೇಯಮಾತ್ಮಾರ್ಥೇಭ್ಯೋ ಹಿ ಮಾಚಿರಮ್ ।
ತ್ವಮಪ್ಯಾಶಂಸಸೇ ಯೋದ್ಧುಂ ಕುಲಜಃ ಕ್ಷತ್ರಿಯೋ ಹ್ಯಸಿ ॥ ೨೮ ॥

ಎಲೈ ದುರ್ಯೋಧನನೇ, ಇಲ್ಲಿಂದ ಹೊರಡು. ನಿನ್ನ ಸಲುವಾಗಿಯೇ ಅರ್ಜುನನ ಮೇಲೆ ಎರಗುವವನಾಗು. ನೀನೂ ಸಹ ಯುದ್ಧವನ್ನು ಮಾಡಲು ಬಯಸುತ್ತೀಯೆ. ನೀನೂ ಸಹ ಒಳ್ಳೆಯ ಕುಲದಲ್ಲಿ ಜನಿಸಿದ ಕ್ಷತ್ರಿಯನಷ್ಟೆ?

ಇಮಾನ್ ಕಿಂ ಪಾರ್ಥಿವಾನ್ ಸರ್ವಾನ್ ಘಾತಯಿಷ್ಯಸ್ಯನಾಗಸಃ ।
ತ್ವಮಸ್ಯ ಮೂಲಂ ವೈರಸ್ಯ ತಸ್ಮಾದಾಸಾದಯಾರ್ಜುನಮ್ ॥ ೨೯ ॥

ಈ ನಿರಪರಾಧಿಗಳಾದ ಎಲ್ಲ ರಾಜರನ್ನು ಏಕೆ ಕೊಲ್ಲಿಸುವಿ? ಈ ವೈರಕ್ಕೆ ನೀನೇ ಮೂಲಕಾರಣನಾದವನು. ಆದ್ದರಿಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡು.

ಏಷ ತೇ ಮಾತುಲಃ ಪ್ರಾಜ್ಞಃ ಕ್ಷತ್ರಧರ್ಮಮನುವ್ರತಃ ।
ದೂದ್ಯೋತದೇವೀ ಗಾಂಧಾರಿಃ ಪ್ರಯಾತ್ವರ್ಜುನಮಾಹವೇ ॥ ೩೦ ॥

ಕ್ಷತ್ರಧರ್ಮರತನಾದ, ಪ್ರಾಜ್ಞನಾದ, ಕೆಟ್ಟಜೂಜನ್ನು ಆಡುವ, ನಿನ್ನ ಸೋದರಮಾವನಾದ ಗಾಂಧಾರ ದೇಶದ ಶಕುನಿಯು ರಣರಂಗದಲ್ಲಿ ಅರ್ಜುನನನ್ನು ಸಮೀಪಿಸಲಿ.

ಏಷೋಽಕ್ಷಕುಶಲೋ ಜಿಹ್ಮೋ ದ್ಯೂತಕೃತ್ ಕಿತವಃ ಶಠಃ ।
ದೇವಿತಾ ನಿಕೃತಿಪ್ರಜ್ಞೋ ಯುಧಿ ಜೇಷ್ಯತಿ ಪಾಂಡವಾನ್ ॥ ೩೧ ॥

ಅಕ್ಷಕುಶಲನೂ, ಕಪಟಿಯೂ, ದ್ಯೂತಕಾರಿಯೂ, ಮೋಸಗಾರನೂ, ಶಠನೂ, ಮೋಸದ ಪ್ರಜ್ಞೆಯನ್ನು ಉಳ್ಳವನೂ ಆದ ಈ ಶಕುನಿಯು ಯುದ್ಧದಲ್ಲಿ ಪಾಂಡವರನ್ನು ಗೆಲ್ಲುವನು!

ತ್ವಯಾ ಕಥಿತಮತ್ಯಂತಂ ಕರ್ಣೇನ ಸಹ ಹೃಷ್ಟವತ್ ।
ಅಸಕೃಚ್ಚೂರವನ್ಮೋಹಾದ್ ಧೃತರಾಷ್ಟ್ರಸ್ಯ ಶೃಣ್ವತಃ ॥ ೩೨ ॥

ನೀನು ಮತ್ತು ಕರ್ಣನು ಧೃತರಾಷ್ಟ್ರನು ಕೇಳುವಂತೆ ಮೋಹದಿಂದ ನಿಮ್ಮ ಪ್ರತಾಪಗಳನ್ನು ಅನೇಕಬಾರಿ ಶೂರರಂತೆ ಕೊಚ್ಚಿಕೊಂಡಿದ್ದೀರಿ.

ಅಹಂ ಚ ತಾತ ಕರ್ಣಶ್ಚ ಭ್ರಾತಾ ದುಃಶಾಸನಶ್ಚ ಮೇ ।
ಪಾಂಡುಪುತ್ರಾನ್ ಹನಿಷ್ಯಾಮಃ ಸಹಿತಾಃ ಸಮರೇ ತ್ರಯಃ ॥ ೩೩ ॥

ಇತಿ ತೇ ಕತ್ಥಮಾನಸ್ಯ ಶ್ರುತಂ ಸಂಸದಿ ಸಂಸದಿ ।
ಅನುತಿಷ್ಠ ಪ್ರತಿಜ್ಞಾಂ ತಾಂ ಸತ್ಯವಾಗ್ ಭವ ತೈಃ ಸಹ ॥ ೩೪ ॥

ಎಲೈ ತಂದೆಯೇ, ನಾನೂ, ಕರ್ಣನೂ ಮತ್ತು ನನ್ನ ತಮ್ಮನಾದ ದುಶ್ಶಾಸನನೂ ಮೂರು ಜನರು ಸೇರಿ ಒಟ್ಟಾಗಿ ಯುದ್ಧದಲ್ಲಿ ಪಾಂಡುಪುತ್ರರನ್ನು ಗೆಲ್ಲುವೆವು ಎಂಬ ನಿನ್ನ ಜಂಭದ ಮಾತುಗಳನ್ನು ಪ್ರತಿಯೊಂದು ಸಭೆಯಲ್ಲಿಯೂ ಕೇಳಿದ್ದೇವೆ. ಆ ಪ್ರತಿಜ್ಞೆಯನ್ನು ನೆರವೇರಿಸು. ಅವರ ಜೊತೆಯಲ್ಲಿ ಯುದ್ಧವನ್ನು ಮಾಡಿ ಸತ್ಯವಚನನಾಗು.

ಏಷ ತೇ ಪಾಂಡವಃ ಶತ್ರುರವಿಷಹ್ಯೋಽಗ್ರತಃ ಸ್ಥಿತಃ ।
ಕ್ಷತ್ರಧರ್ಮಮವೇಕ್ಷಸ್ವ ಶ್ಲಾಘ್ಯಸ್ತವ ವಧೋ ಜಯಾತ್ ॥ ೩೫ ॥

ನಿನ್ನ ಶತ್ರುವೂ, ಸಹಿಸಲು ಅಸಾಧ್ಯನಾದವನೂ ಆದ ಈ ಅರ್ಜುನನು ನಿನ್ನ ಎದುರಿಗೇ ಇದ್ದಾನೆ. ಕ್ಷತ್ರಿಯ ಧರ್ಮವನ್ನು ನೋಡು. ನಿನ್ನ ಜಯಕ್ಕಿಂತಲೂ ವಧೆಯೇ ಶ್ಲಾಘ್ಯವಾದುದು.

ದತ್ತಂ ಭುಕ್ತಮಧೀತಂ ಚ ಪ್ರಾಪ್ತಮೈಶ್ವರ್ಯಮೀಪ್ಸಿತಮ್ ।
ಕೃತಕೃತ್ಯೋಽನೃಣಶ್ಚಾಸಿ ಮಾ ಭೈರ್ಯುಧ್ಯಸ್ವ ಪಾಂಡವಮ್ ॥ ೩೬ ॥

ನೀನು ದಾನವನ್ನು ಮಾಡಿರುವಿ, ಅಧ್ಯಯನವನ್ನು ಮಾಡಿದ್ದೀಯೆ, ಅಪೇಕ್ಷಿತವಾದ ಐಶ್ವರ್ಯವನ್ನು ಪಡೆದಿದ್ದೀಯೆ, ಭೋಗಗಳನ್ನು ಭೋಗಿಸಿದ್ದೀಯೆ, ಜೀವನದಲ್ಲಿ ಕೃತಕೃತ್ಯನಾಗಿ ಋಣಮುಕ್ತನಾಗಿದ್ದೀಯೆ. ಹೆದರಬೇಡ, ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡು (ಎಂದು ಹೇಳಿದರು).

ಇತ್ಯುಕ್ತ್ವಾ ಸಮರೇ ದ್ರೋಣೋ ನ್ಯವರ್ತತ ಯತಃ ಪರೇ ।
ದ್ವೈಧೀಕೃತ್ಯ ತತಃ ಸೇನಾಂ ಯುದ್ಧಂ ಸಮಭವತ್ತದಾ ॥ ೩೭ ॥

ಹೀಗೆ ಹೇಳಿ ದ್ರೋಣರು ರಣರಂಗದಲ್ಲಿ ಶತ್ರುವಿದ್ದ ಕಡೆಗೆ ಹೊರಟರು. ಸೈನ್ಯವನ್ನು ಎರಡು ಭಾಗವನ್ನಾಗಿ ಮಾಡಿ ಅನಂತರ ಯುದ್ಧವು ಪ್ರಾರಂಭವಾಯಿತು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಸಪ್ತ್ಯಧಿಕಶತತಮೋಽಧ್ಯಾಯಃ ॥

॥ ದ್ರೋಣವಧಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

ದ್ರೋಣರಿಂದ ದ್ರುಪದ-ವಿರಾಟಾದಿಗಳ ವಧೆ. ಭೀಮನಿಂದ ಧೃಷ್ಟದ್ಯುಮ್ನನನ್ನು ಕುರಿತು ಉಗ್ರವಚನಗಳು. ಹದಿನಾಲ್ಕನೆಯ ದಿವಸದಲ್ಲಿ ರಾತ್ರಿಯುದ್ಧದ ಸಮಾಪ್ತಿ.

ಸಂಜಯಃ

ತ್ರಿಭಾಗಮಾತ್ರಶೇಷಾಯಾಂ ರಾತ್ರ್ಯಾಂ ಯುದ್ಧಮವರ್ತತ ।
ಕುರೂಣಾಂ ಪಾಂಡವಾನಾಂ ಚ ಸಂರಬ್ಧಾನಾಂ ವಿಶಾಂಪತೇ ॥ ೧ ॥

ಸಂಜಯ– ಎಲೈ ರಾಜನೇ, ರಾತ್ರಿಯ ಮೂರನೆಯ ಒಂದು ಭಾಗವು ಮಾತ್ರ ಉಳಿದಿರಲು ಕ್ರುದ್ಧರಾದ ಕೌರವರಿಗೂ ಮತ್ತು ಪಾಂಡವರಿಗೂ ಯುದ್ಧವು ನಡೆಯಿತು.

ಅಥ ಚಂದ್ರಪ್ರಭಾಂ ಮುಷ್ಣನ್ನಾದಿತ್ಯಸ್ಯ ಪುರಃಸರಃ ।
ಅರುಣೋಽಭ್ಯುದಯಾಂಚಕ್ರೇ ತಾಮ್ರೀಕುರ್ವನ್ನಿವಾಂಬರಮ್ ॥ ೨ ॥

ಅನಂತರ ಆದಿತ್ಯ ಪುರಸ್ಸರನಾದ ಅರುಣನು ಆಕಾಶವನ್ನು ಕೆಂಪಾಗಿ ಮಾಡುತ್ತಾ ಚಂದ್ರನ ಪ್ರಭೆಯನ್ನು ಅಪಹರಿಸಿ ಉದಯಿಸಿದನು.

ತತೋ ದ್ವೈಧೀಕೃತೇ ಸೈನ್ಯೇ ದ್ರೋಣಃ ಸೋಮಕಪಾಂಡವಾನ್ ।
ಅಭ್ಯದ್ರವತ್ ಸಪಾಂಚಾಲಾನ್ ದುರ್ಯೋಧನಪುರೋಗಮಃ ॥ ೩ ॥

ಆಗ ದ್ರೋಣರು ದುರ್ಯೋಧನನನ್ನು ಮುಂದೆ ಮಾಡಿಕೊಂಡು ತಮ್ಮ ಸೈನ್ಯವನ್ನು ಎರಡು ಭಾಗವನ್ನಾಗಿ ಮಾಡಿ, ಸೋಮಕ-ಪಾಂಡವರ ಮೇಲೆ ಮತ್ತು ಪಾಂಚಾಲರ ಮೇಲೆ ನುಗ್ಗಿದರು.

ದ್ವೈಧೀಭೂತಾನ್ ಕುರೂನ್ ದೃಷ್ಟ್ವಾ ಮಾಧವೋಽರ್ಜುನಮಬ್ರವೀತ್।
ಸಪತ್ನಾನ್ ಸವ್ಯತಃ ಕುರ್ಮಿ ಸವ್ಯಸಾಚಿನ್ನಿಮಾನ್ ಕುರೂನ್ ॥ ೪ ।

ಕುರುಸೈನ್ಯವು ಎರಡು ಭಾಗವಾದುದನ್ನು ನೋಡಿ ಕೃಷ್ಣನು ಅರ್ಜುನನನ್ನು ಕುರಿತು- 'ಎಲೈ ಸವ್ಯಸಾಚಿಯೇ, ಶತ್ರುಗಳಾದ ಈ ಕುರುಗಳನ್ನು ಎಡಭಾಗಕ್ಕೆ ತೆಗೆದುಕೊಂಡು ಹೋಗುತ್ತೇನೆ' ಎಂದು ಹೇಳಿದನು.

ಸ ಮಾಧವಮನುಜ್ಞಾಯ ಕುರುಷ್ವೇತಿ ಧನಂಜಯಃ ।
ದ್ರೋಣಕರ್ಣೌ ಮಹೇಷ್ವಾಸೌ ಸವ್ಯತಃ ಪರ್ಯವರ್ತತ ॥ ೫ ॥

ಧನಂಜಯನು ಕೃಷ್ಣನಿಗೆ ಅನುಮತಿಯನ್ನು ನೀಡಿ, ಹಾಗೆ ಮಾಡು ಎಂದು ಹೇಳಿ, ಮಹಾಧನುರ್ಧಾರಿಯಾದ ದ್ರೋಣ-ಕರ್ಣರನ್ನು ಎಡಭಾಗದಲ್ಲಿಟ್ಟು ಮುಂದೆ ಸಾಗಿದನು.

ಅಭಿಪ್ರಾಯಂ ತು ಕೃಷ್ಣಸ್ಯ ಜ್ಞಾತ್ವಾ ಪರಪುರಂಜಯಃ ।
ಆಜಿಶೀರ್ಷಗತಂ ದೃಷ್ಟ್ವಾ ಭೀಮಸೇನಂ ಸಮಾಸದತ್ ॥ ೬ ॥

ಕೃಷ್ಣನ ಅಭಿಪ್ರಾಯವನ್ನು ತಿಳಿದ ಪರಪುರಂಜಯನಾದ ಅರ್ಜುನನು ರಣರಂಗದ ಮೇಲ್ಭಾಗದಲ್ಲಿ (ಶಿರಃಸ್ಥಾನದಲ್ಲಿ) ಭೀಮಸೇನನನ್ನು ನೋಡಿ ಅವನ ಬಳಿ ಹೋದನು.

ಭೀಮಃ

ಅರ್ಜುನಾರ್ಜುನ ಬೀಭತ್ಸೋ ಶೃಣು ಮೇ ತತ್ತ್ವತೋ ವಚಃ ।
ಯದರ್ಥಂ ಕ್ಷತ್ರಿಯಾ ಸೂತೇ ತಸ್ಯ ಕಾಲೋಯಮಾಗತಃ ॥ ೭ ॥

ಭೀಮ– ಅರ್ಜುನನೇ, ಅರ್ಜುನನೇ, ಬೀಭತ್ಸುವೇ, ನನ್ನ ಸತ್ಯವಾದ ಮಾತನ್ನು ಕೇಳು. ಕ್ಷತ್ರಿಯ ವನಿತೆಯು ಯಾವುದಕ್ಕಾಗಿ ಪುತ್ರನನ್ನು ಪಡೆಯುತ್ತಾಳೆಯೋ ಅಂತಹ ಕಾಲವು ಈಗ ಪ್ರಾಪ್ತವಾಗಿದೆ.

ಅಸ್ಮಿಂಶ್ಚೇದಾಗತೇ ಕಾಲೇ ಶ್ರೇಯೋ ನ ಪ್ರತಿಪತ್ಸ್ಯಸೇ ।
ಅಸಂಭಾವಿತರೂಪಃ ಸನ್ನಾನೃಶಂಸ್ಯಂ ಕರಿಷ್ಯಸಿ ॥ ೮ ॥

ಅಂತಹ ಕಾಲವು ಪ್ರಾಪ್ತವಾದಾಗ ನೀನು ಶ್ರೇಯಸ್ಸನ್ನು ಸಾಧಿಸದಿದ್ದರೆ ಅಪಕೀರ್ತಿಯನ್ನು ಹೊಂದಿ ಕ್ರೂರನಾಗುವಿ.

ಸತ್ಯಶ್ರೀಧರ್ಮಯಶಸಾಂ ಏಯೈರ್ಣಾನೃಣ್ಯಮಾಪ್ನುಹಿ ।
ಭಿಂಧ್ಯನೀಕಂ ಯುಧಾಂಶ್ರೇಷ್ಠ ಪ್ರತಿಜ್ಞಾಂ ಸಫಲಾಂ ಕುರು ॥ ೯ ॥

ನಿನ್ನ ಪರಾಕ್ರಮದಿಂದ ಸತ್ಯ , ಸಂಪತ್ತು , ಧರ್ಮ ಮತ್ತು ಕೀರ್ತಿಗಳ ಋಣದಿಂದ ಮುಕ್ತನಾಗು. ಎಲೈ ಯುದ್ಧಮಾಡುವವರಲ್ಲಿ ಶ್ರೇಷ್ಠನೇ, ಕೌರವರನ್ನು ಭೇದಿಸು. ನಿನ್ನ ಪ್ರತಿಜ್ಞೆಯನ್ನು ಸಫಲವನ್ನಾಗಿ ಮಾಡು.

ಸಂಜಯಃ

ಸ ಸವ್ಯಸಾಚೀ ಭೀಮೇನ ಚೋದಿತಃ ಕೇಶವೇನ ಚ ।
ಕರ್ಣದ್ರೋಣಾವತಿಕ್ರಮ್ಯ ಸಮಂತಾತ್ ಪರ್ಯವಾರಯತ್ ॥ ೧೦ ॥

ಸಂಜಯ– ಸವ್ಯಸಾಚಿಯಾದ ಅರ್ಜುನನು ಭೀಮನಿಂದಲೂ ಮತ್ತು ಕೃಷ್ಣನಿಂದಲೂ ಹೀಗೆ ಪ್ರೇರಿಸಲ್ಪಟ್ಟವನಾಗಿ ಕರ್ಣ-ದ್ರೋಣರನ್ನು ದಾಟಿ ಕೌರವ ಸೇನೆಯನ್ನು ಎಲ್ಲ ಕಡೆಯಲ್ಲಿಯೂ ತಡೆದನು.

ತಮಾಜಿಶೀರ್ಷಮಾಯಾಂತಂ ದಹಂತಂ ಕ್ಷತ್ರಿಯರ್ಷಭಾನ್ ।
ಪರಾಕ್ರಾಂತಂ ಪರಾಕ್ರಮ್ಯ ಯತಂತಃ ಕ್ಷತ್ರಿಯರ್ಷಭಾಃ ।
ನಾಶಕ್ನುವನ್ ವಾರಯಿತುಂ ವರ್ಧಮಾನಮಿವಾನಲಮ್ ॥ ೧೧ ॥

ರಣರಂಗದಲ್ಲಿ ಶಿರಸ್ಸಿನಲ್ಲಿ ಕ್ಷತ್ರಿಯ ಶ್ರೇಷ್ಠರನ್ನು ಭೇದಿಸುತ್ತಾ ತನ್ನ ಪರಾಕ್ರಮವನ್ನು ತೋರಿಸಿ ಮುಂದೆ ಬರುತ್ತಿದ್ದ ಅವನನ್ನು ಕ್ಷತ್ರಿಯಶ್ರೇಷ್ಠರು ಪ್ರಯತ್ನಪಟ್ಟರೂ ಹಬ್ಬುವ ಅಗ್ನಿಯನ್ನು ತಡೆಯಲು ಸಾಧ್ಯವಿಲ್ಲದಂತೆ ಅವನನ್ನು ತಡೆಯಲಾರದಾದರು.

ಅಥ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ಅಭ್ಯವರ್ಷನ್ ಶರವ್ರಾತೈಃ ಕುಂತೀಪುತ್ರಂ ಧನಂಜಯಮ್ ॥ ೧೨ ॥

ಅನಂತರ ದುರ್ಯೋಧನನೂ, ಕರ್ಣನೂ, ಸೌಬಲನಾದ ಶಕುನಿಯೂ ಕುಂತೀಪುತ್ರನಾದ ಅರ್ಜುನನ ಮೇಲೆ ಬಾಣಗಳ ಸಮೂಹದ ಮಳೆಯನ್ನು ಕರೆದರು.

ತೇಷಾಮಸ್ತ್ರಾಣಿ ಸರ್ವೇಷಾಮುತ್ತಮಾಸ್ತ್ರವಿದಾಂ ವರಃ ।
ಕದರ್ಥೀಕೃತ್ಯ ರಾಜೇಂದ್ರ ಶರವರ್ಷೈರವಾಕಿರತ್ ॥ ೧೩ ॥

ಎಲೈ ರಾಜೇಂದ್ರನೇ, ಉತ್ತಮಾಸ್ತ್ರವೇತ್ತರಲ್ಲಿ ಶ್ರೇಷ್ಠನಾದ ಅರ್ಜುನನು ಅವರೆಲ್ಲರ ಅಸ್ತ್ರಗಳನ್ನು ತೃಣೀಕರಿಸಿ ಬಾಣಗಳ ಸಮೂಹದಿಂದ ಅವರನ್ನು ಹೊಡೆದನು.

ಅಸ್ತ್ರೈರಸ್ತ್ರಾಣಿ ಸಂವಾರ್ಯ ಲಘುಹಸ್ತೋ ಧನಂಜಯಃ ।
ಸರ್ವಾನವಿಧ್ಯನ್ನಿಶಿತೈರ್ದಶಭಿರ್ದಶಭಿಃ ಶರೈಃ ॥ ೧೪ ॥

ಕ್ಷಿಪ್ರಹಸ್ತನಾದ ಧನಂಜಯನು ತನ್ನ ಅಸ್ತ್ರಗಳಿಂದ ಅವರ ಅಸ್ತ್ರಗಳನ್ನು ನಿವಾರಿಸಿ ಅವರಲ್ಲಿ ಒಬ್ಬೊಬ್ಬರನ್ನೂ ತೀಕ್ಷ್ಣವಾದ ಹತ್ತು-ಹತ್ತು ಬಾಣಗಳಿಂದ ಹೊಡೆದನು.

ಉದ್ಧೂತಾ ರಜಸೋ ವೃಷ್ಟಿಃ ಶರವೃಷ್ಟಿಸ್ತಥೈವ ಚ ।
ತಮಶ್ಚ ಘೋರಂ ಶಬ್ದಶ್ಚ ತದಾ ಸಮಭವನ್ ಮಹಾನ್ ॥ ೧೫ ॥

ಆಗ ಧೂಳಿನ ವೃಷ್ಟಿಯೂ, ಬಾಣಗಳ ವೃಷ್ಟಿಯೂ, ಘೋರವಾದ ತಮಸ್ಸು (ಕತ್ತಲು) ಮತ್ತು ದೊಡ್ಡ ಶಬ್ದಗಳೂ ಉಂಟಾದವು.

ನ ದ್ಯೌರ್ನ ಭೂಮಿರ್ನ ದಿಶಃ ಪ್ರಾಜ್ಞಾಯಂತ ತಥಾ ಗತೇ ।
ಸೈನ್ಯೇನ ರಜಸಾ ಮೂಢಂ ಸರ್ವಮಂಧಮಿವಾಭವತ್ ॥ ೧೬ ॥

ಆ ಸ್ಥಿತಿಯಲ್ಲಿ ಆಕಾಶವಾಗಲೀ, ಭೂಮಿಯಾಗಲೀ, ದಿಕ್ಕುಗಳಾಗಲೀ ಕಾಣಲಿಲ್ಲ. ಸೈನ್ಯದಿಂದ ಎದ್ದ ಧೂಳಿನಿಂದ ಮುಚ್ಚಲ್ಪಟ್ಟ ಎಲ್ಲವೂ ಅಂಧಕಾರಮಯವಾಯಿತು.

ನೈವ ತೇ ನ ವಯಂ ರಾಜನ್ ಪ್ರಾಜ್ಞಾಸಿಷ್ಮ ಪರಸ್ಪರಮ್ ।
ಉದ್ದೇಶೇನ ಹಿ ತೇನ ಸ್ಮ ಸಮಯುದ್ಧ್ಯಂತ ಪಾರ್ಥಿವಾಃ ॥ ೧೭ ॥

ಎಲೈ ರಾಜನೇ, ನಾವಾಗಲೀ ಅಥವಾ ಅವರಾಗಲೀ ಪರಸ್ಪರವಾಗಿ ಯಾರೆಂದು ತಿಳಿಯಲಿಲ್ಲ. ಕೇವಲ ಉದ್ದೇಶದಿಂದ (ಅಂದಾಜಿನಿಂದ) ರಾಜರು ಯುದ್ಧವನ್ನು ಮಾಡಿದರು.

ವಿರಥಾ ರಥಿನೋ ರಾಜನ್ ಸಮಾಸಾದ್ಯ ಪರಸ್ಪರಮ್ ।
ಕೇಶೇಷು ಸಮಸಜ್ಜಂತ ಕವಚೇಷು ಭುಜೇಷು ಚ ॥ ೧೮ ॥

ಎಲೈ ರಾಜನೇ, ರಥಿಕರು ರಥಗಳನ್ನು ಕಳೆದುಕೊಂಡು ಪರಸ್ಪರವಾಗಿ ಸಮೀಪಿಸಿ ಕೇಶಗಳನ್ನು, ಕವಚಗಳನ್ನು ಮತ್ತು ಭುಜಗಳನ್ನು ಹಿಡಿದು ಯುದ್ಧವನ್ನು ಮಾಡಿದರು.

ಹತಾಶ್ವಾ ಹತಸೂತಾಶ್ಚ ನಿಶ್ಚೇಷ್ಟಾ ರಥಿನಸ್ತದಾ ।
ಜೀವಂತ ಇವ ತತ್ರ ಸ್ಮ ವ್ಯದೃಶ್ಯಂತ ಭಯಾರ್ದಿತಾಃ ॥ ೧೯ ॥

ಅಶ್ವ-ಸೂತರನ್ನು ಕಳೆದುಕೊಂಡು ಮೃತರಾಗಿ ನಿಶ್ಚೇಷ್ಟರಾದ ರಥಿಕರು ಭಯಪೀಡಿತರಾಗಿ ಬದುಕಿರುವವರಂತೆ ಅಲ್ಲಿ ಕಂಡುಬಂದರು.

ಹತಾನ್ ಗಜಾನ್ ಸಮಾಶ್ಲಿಷ್ಯ ಪರ್ವತಾನಿವ ವಾಜಿನಃ ।
ಗತಸತ್ತ್ವಾ ವ್ಯದೃಶ್ಯಂತ ತಥೈವ ಸಹ ಸಾದಿಭಿಃ ॥ ೨೦ ॥

ಭಯಪೀಡಿತರಾದ ಅಶ್ವಾರೋಹಿಗಳು ಪರ್ವತದಂತಹ ಗಜಗಳನ್ನು ಆಲಿಂಗಿಸಿ ಹತರಾಗಿ ಬದುಕಿರುವವರಂತೆ ಕಂಡುಬಂದರು. ಮೃತವಾದ ಅಶ್ವಗಳೂ ಸಹ ಅಶ್ವಾರೋಹಿಗಳ ಸಹಿತವಾಗಿ ಹಾಗೆಯೇ ಕಂಡುಬಂದವು.

ತತಸ್ತ್ವಭ್ಯವಸೃತ್ಯೈವ ಸಂಗ್ರಾಮಾದುತ್ತರಾಂ ದಿಶಮ್ ।
ಅತಿಷ್ಠದಾಹವೇ ದ್ರೋಣೋ ವಿಧೂಮ ಇವ ಪಾವಕಃ ॥ ೨೧ ॥

ಆಗ ದ್ರೋಣರು ರಣರಂಗದಿಂದ ಉತ್ತರದಿಕ್ಕನ್ನು ತಲುಪಿ ಧೂಮವಿಲ್ಲದ ಅಗ್ನಿಯಂತೆ ರಣರಂಗದಲ್ಲಿ ನಿಂತರು.

ತಮಾಜಿಶೀರ್ಷಾದೇಕಾಂತಮಪಕ್ರಾಂತಂ ನಿಶಾಮ್ಯ ತು ।
ಸಮಕಂಪಂತ ಸೈನ್ಯಾನಿ ಪಾಂಡವಾನಾಂ ವಿಶಾಂಪತೇ ॥ ೨೨ ॥

ಎಲೈ ರಾಜನೇ, ರಣರಂಗದ ತುದಿಯಿಂದ ಅವರೊಬ್ಬರೇ ಹೋದುದನ್ನು ನೋಡಿ ಪಾಂಡವರ ಸೈನ್ಯಗಳು ನಡುಗಿದವು.

ಭ್ರಾಜಮಾನಂ ಶ್ರಿಯಾ ಯುಕ್ತಂ ಜ್ವಲಂತಮಿವ ತೇಜಸಾ ।
ದ್ರೋಣಂ ದೃಷ್ಟ್ವಾ ರಯಸ್ತ್ರೇಸುಶ್ಚೇಲುರ್ಮಮ್ಲುಶ್ಚ ಮಾರಿಷ ॥ ೨೩ ॥

ಎಲೈ ಶ್ರೇಷ್ಠನೇ, ತೇಜಸ್ಸಿನಿಂದ ಜ್ವಲಿಸುತ್ತಾ ಕಾಂತಿಯಿಂದ ಕೂಡಿದ ದ್ರೋಣರನ್ನು ನೋಡಿ ಶತ್ರುಗಳು ಹೆದರಿದರು, ನಡುಗಿದರು ಮತ್ತು ಮ್ಲಾನರಾದರು.

ಆಹ್ವಯಂತಂ ಪರಾನೀಕಂ ಪ್ರಭಿನ್ನಮಿವ ವಾರಣಮ್ ।
ನೈನಂ ಶಶಂಸಿರೇ ಜೇತುಂ ದಾನವಾ ವಾಸವಂ ಯಥಾ ॥ ೨೪ ॥

ಮದೋದಕವನ್ನು ಸುರಿಸುವ ಗಜದಂತೆ ಶತ್ರುಸೈನ್ಯವನ್ನು ಆಹ್ವಾನಿಸುತ್ತಿದ್ದ ಅವರನ್ನು ದಾನವರು ಇಂದ್ರನನ್ನು ಗೆಲ್ಲಲು ಬಯಸದಂತೆ ಗೆಲ್ಲಲು ಯಾರೂ ಬಯಸಲಿಲ್ಲ.

ಕೇಚಿದಾಸನ್ನಿರುತ್ಸಾಹಾಃ ಕೇಚಿತ್ ಕ್ರುದ್ಧಾ ಮನಸ್ವಿನಃ ।
ವಿಸ್ಮಿತಾಶ್ಚಾಭವನ್ ಕೇಚಿತ್ ಕೇಚಿದಾಸನ್ನಮರ್ಷಿತಾಃ ॥ ೨೫ ॥

ಕೆಲವರು ಉತ್ಸಾಹಶೂನ್ಯರಾದರು, ಕೆಲವು ಧೈರ್ಯಶಾಲಿಗಳು ಕೋಪಗೊಂಡರು, ಕೆಲವರು ವಿಸ್ಮಿತರಾದರು, ಇನ್ನು ಕೆಲವರು ರೋಷಾವಿಷ್ಟರಾದರು.

ಹಸ್ತೈರ್ಹಸ್ತಾಗ್ರಮಪರೇ ಪ್ರತ್ಯಪಿಂಷನ್ ನರಾಧಿಪಾಃ ।
ಅಪರೇ ದಶನೈರೋಷ್ಠಾನದಶನ್ ಕ್ರೋಧಮೂರ್ಚ್ಛಿತಾಃ ॥ ೨೬ ॥

ಕೆಲವು ರಾಜರು ಕೈಗಳಿಂದ ಕೈಗಳನ್ನು ಉಜ್ಜಿದರು. ಇನ್ನು ಕೆಲವರು ಕ್ರೋಧ ಮೂರ್ಛಿತರಾಗಿ ಹಲ್ಲುಗಳಿಂದ ತುಟಿಯನ್ನು ಕಚ್ಚಿದರು.

ವ್ಯಾಕ್ಷಿಪನ್ನಾಯುಧಾನನ್ಯೇ ಮಮೃದುಶ್ಚಾಪರೇ ಭುಜಾನ್ ।
ಅನ್ಯೇ ಚಾನ್ವಪತನ್ ದ್ರೋಣಂ ತ್ಯಕ್ತಾತ್ಮಾನೋ ಮಹೌಜಸಃ ॥ ೨೭ ॥

ಜೀವದ ಹಂಗನ್ನು ತೊರೆದ ಮಹಾಸಾಮರ್ಥ್ಯವುಳ್ಳ ಕೆಲವರು ದ್ರೋಣರ ಮೇಲೆ ಆಯುಧಗಳನ್ನು ಎಸೆದರು. ಇನ್ನು ಕೆಲವರು ತಮ್ಮ ಭುಜಗಳನ್ನು ತಟ್ಟಿದರು. ಇನ್ನು ಕೆಲವರು ದ್ರೋಣರ ಮೇಲೆ ಎರಗಿದರು.

ಪಾಂಚಾಲಾಸ್ತು ವಿಶೇಷೇಣ ದ್ರೋಣಸಾಯಕಪೀಡಿತಾಃ ।
ಸಮಸಜ್ಜಂತ ರಾಜೇಂದ್ರ ಸಮರೇ ಭೃಶವೇದನಾಃ ॥ ೨೮ ॥

ಎಲೈ ರಾಜೇಂದ್ರನೇ, ಪಾಂಚಾಲರಾದರೋ ವಿಶೇಷವಾಗಿ ದ್ರೋಣರ ಬಾಣಗಳಿಂದ ಪೀಡಿತರಾಗಿ ಬಹಳ ವೇದನೆಯನ್ನು ಹೊಂದಿದರೂ ರಣರಂಗದಲ್ಲಿ ದ್ರೋಣರ ಜೊತೆಯಲ್ಲಿ ಸಂಶಕ್ತರಾದರು.

ತತೋ ವಿರಾಟದ್ರುಪದೌ ದ್ರೋಣಂ ಪ್ರತಿಯಯೂ ರಣೇ ।
ತಥಾ ಚರಂತಂ ಸಂಗ್ರಾಮೇ ಭೃಶಂ ಸಮರದುರ್ಜಯಮ್ ॥ ೨೯ ॥

ಆಗ ರಣರಂಗದಲ್ಲಿ ಅತ್ಯಂತ ದುರ್ಜಯರಾದ, ಆ ರೀತಿಯಲ್ಲಿ ಸಂಚರಿಸುವ ದ್ರೋಣರ ಕಡೆಗೆ ವಿರಾಟ-ದ್ರುಪದರು ಹೋದರು.

ದ್ರುಪದಸ್ಯ ತತಃ ಪೌತ್ರಾಸ್ತ್ರಯ ಏವ ವಿಶಾಂಪತೇ ।
ಚೇದಯಶ್ಚ ಮಹೇಷ್ವಾಸಾ ದ್ರೋಣಮೇವಾಭ್ಯಯುರ್ಯುಧಿ ॥ ೩೦ ॥

ಎಲೈ ರಾಜನೇ, ದ್ರುಪದನ ಮೂರು ಪೌತ್ರರು ಮತ್ತು ಮಹಾಧನುರ್ಧಾರಿಗಳಾದ ಚೇದಿಗಳು ರಣರಂಗದಲ್ಲಿ ದ್ರೋಣರ ಕಡೆಗೇ ಸಾಗಿದರು.

ತೇಷಾಂ ದ್ರುಪದಪೌತ್ರಾಣಾಂ ತ್ರಯಾಣಾಂ ನಿಶಿತೈಃ ಶರೈಃ ।
ತ್ರಿಭಿರ್ದ್ರೋಣೋಹರತ್ ಪ್ರಾಣಾಂಸ್ತೇ ಹತಾ ನ್ಯಪತನ್ ಭುವಿ ॥೩೧॥

ದ್ರೋಣರು ಮೂರು ತೀಕ್ಷ್ಣವಾದ ಬಾಣಗಳಿಂದ ಮೂರು ಜನ ದ್ರುಪದ ಪೌತ್ರರ ಪ್ರಾಣಗಳನ್ನು ಅಪಹರಿಸಿದರು. ಅವರು ಹತರಾಗಿ ಭೂಮಿಯ ಮೇಲೆ ಬಿದ್ದರು.

ತತೋ ದ್ರೋಣೋऽಜಯದ್ ಯುದ್ಧೇ ಚೇದಿಕೇಕಯಸೃಂಜಯಾನ್ ।
ಮತ್ಸ್ಯಾಂಶ್ಚೈವಾಜಯತ್ ಸರ್ವಾನ್ ಭಾರದ್ವಾಜೋ ಮಹಾರಥಃ ॥೩೨॥

ಅನಂತರ ಮಹಾರಥರೂ, ಭಾರದ್ವಾಜರೂ ಆದ ದ್ರೋಣರು ಯುದ್ಧದಲ್ಲಿ ಚೇದಿ-ಕೇಕಯ-ಸೃಂಜಯರನ್ನು ಮತ್ತು ಎಲ್ಲ ಮತ್ಸ್ಯಯೋಧರನ್ನೂ ಗೆದ್ದರು.

ತತಸ್ತು ದ್ರುಪದಃ ಕ್ರೋಧಾಚ್ಛರವರ್ಷಮವಾಕಿರತ್ ।
ದ್ರೋಣಂ ಪ್ರತಿ ಮಹಾರಾಜ ವಿರಾಟಶ್ಚೈವ ಸಂಯುಗೇ ॥ ೩೩ ॥

ಎಲೈ ಮಹಾರಾಜನೇ, ಆಗ ದ್ರುಪದನೂ ಮತ್ತು ವಿರಾಟನೂ ಬಹಳ ಕೋಪಗೊಂಡು ರಣರಂಗದಲ್ಲಿ ಬಾಣಗಳ ಮಳೆಯನ್ನು ಸುರಿಸಿದರು.

ತತೋ ದ್ರೋಣಃ ಸುಪೀತಾಭ್ಯಾಂ ಭಲ್ಲಾಭ್ಯಾಮರಿಮರ್ದನಃ ।
ದ್ರುಪದಂ ಚ ವಿರಾಟಂ ಚ ಪ್ರೈಷೀದ್ ವೈವಸ್ವತಕ್ಷಯಮ್ ॥ ೩೪ ॥

ಆಗ ಶತ್ರುಮರ್ದನರಾದ ದ್ರೋಣರು ಚೆನ್ನಾಗಿ ನೀರುಕುಡಿಸಿ ಹದಮಾಡಿದ ಎರಡು ಭಲ್ಲಗಳಿಂದ ದ್ರುಪದನನ್ನು ಮತ್ತು ವಿರಾಟನನ್ನು ಯಮಸದನಕ್ಕೆ ಕಳುಹಿಸಿದರು.

ಹತೇ ವಿರಾಟೇ ದ್ರುಪದೇ ಕೇಕಯೇಷು ತಥೈವ ಚ ।
ತಥೈವ ಚೇದಿಮತ್ಸ್ಯೇಷು ಪಾಂಚಾಲೇಷು ತಥೈವ ಚ ।
ಹತೇಷು ತ್ರಿಷು ವೀರೇಷು ದ್ರುಪದಸ್ಯ ಚ ನಪ್ತೃಷು ॥ ೩೫ ॥

ದ್ರೋಣಸ್ಯ ಕರ್ಮ ತದ್ ದೃಷ್ಟ್ವಾ ಕೋಪದುಃಖಸಮನ್ವಿತಃ ।
ಶಶಾಪ ರಥಿನಾಂ ಮಧ್ಯೇ ಧೃಷ್ಟದ್ಯುಮ್ನೋ ಮಹಾಮನಾಃ ॥ ೩೬ ॥

ವಿರಾಟನೂ, ದ್ರುಪದನೂ ಮತ್ತು ಕೇಕಯರೂ ಕೊಲ್ಲಲ್ಪಡುತ್ತಿರಲು, ಹಾಗೆಯೇ ಚೇದಿಗಳು, ಮತ್ಸ್ಯರು, ಪಾಂಚಾಲರು ಕೊಲ್ಲಲ್ಪಡುತ್ತಿರಲು ಮತ್ತು ವೀರರಾದ ದ್ರುಪದನ ಮೂರು ಪೌತ್ರರು ಕೊಲ್ಲಲ್ಪಡುತ್ತಿರಲು, ದ್ರೋಣರ ಆ ಕಾರ್ಯವನ್ನು ನೋಡಿ ಕೋಪ ಮತ್ತು ದುಃಖದಿಂದ ಕೂಡಿದ ಧೈರ್ಯಶಾಲಿಯಾದ ಧೃಷ್ಟದ್ಯುಮ್ನನು ರಥಿಕರ ಮಧ್ಯದಲ್ಲಿ ಶಪಥಪೂರ್ವಕವಾಗಿ ಶಾಪರೂಪವಾದ ಮಾತನ್ನು ಆಡಿದನು.

ಇಷ್ಟಾಪೂರ್ತಾತ್ತಥಾ ಕ್ಷಾತ್ರಾದ್ ಬ್ರಾಹ್ಮಣ್ಯಾಚ್ಚ ಸ ನಶ್ಯತು ।
ದ್ರೋಣೋ ಯಸ್ಯಾದ್ಯ ಮುಚ್ಯೇತ ಯೋ ವಾ ದ್ರೋಣಾತ್ ಪರಾಙ್ಮುಖಃ ॥

ಯಾವನು ಈ ದಿನ ದ್ರೋಣರು ತನ್ನಿಂದ ಬಿಡುಗಡೆ ಹೊಂದುವಂತೆ ಮಾಡುತ್ತಾನೆಯೋ ಅಥವಾ ಯಾವನು ದ್ರೋಣರಿಗೆ ವಿಮುಖನಾಗುತ್ತಾನೆಯೋ, ಅಂತಹವನು ತಾನು ಮಾಡಿದ ಇಷ್ಟಾಪೂರ್ತದಿಂದಲೂ, ಕ್ಷತ್ರಿಯ ಮತ್ತು ಬ್ರಾಹ್ಮಣ ಜಾತಿಗಳಿಂದಲೂ ರಹಿತನಾಗಲಿ.

ಇತಿ ತೇಷಾಂ ಪ್ರತಿಶ್ರುತ್ಯ ಮಧ್ಯೇ ಸರ್ವಧನುಷ್ಮತಾಮ್ ।
ಆಯಾದ್ ದ್ರೋಣಂ ಸಹಾನೀಕಃ ಪಾಂಚಾಲ್ಯಃ ಪರವೀರಹಾ ।
ಪಾಂಚಾಲಾಸ್ತ್ವೇಕತೋ ದ್ರೋಣಮಭ್ಯಘ್ನನ್ ಪಾಂಡವಾನ್ಯತಃ ॥ ೩೮ ॥

ಹೀಗೆ ಪರವೀರಘಾತಕನಾದ ಪಾಂಚಾಲನು ಎಲ್ಲ ಧನುರ್ಧಾರಿಗಳ ಮಧ್ಯದಲ್ಲಿ ಶಪಥವನ್ನು ಮಾಡಿ, ದ್ರೋಣರ ಬಳಿಗೆ ಬಂದನು. ಪಾಂಚಾಲರು ಒಂದು ಕಡೆಯಿಂದಲೂ, ಪಾಂಡವ ಸೇನೆಗಳು ಇನ್ನೊಂದು ಕಡೆಯಿಂದಲೂ ದ್ರೋಣರನ್ನು ಹೊಡೆದವು.

ದುರ್ಯೋಧನಶ್ಚ ಕರ್ಣಶ್ಚ ಶಕುನಿಶ್ಚಾಪಿ ಸೌಬಲಃ ।
ಸೋದರ್ಯಾಶ್ಚ ಯಥಾ ಮುಖ್ಯಾಸ್ತೇಽರಕ್ಷನ್ ದ್ರೋಣಮಾಹವೇ ॥

ದುರ್ಯೋಧನ, ಕರ್ಣ, ಸೌಬಲನಾದ ಶಕುನಿ ಮತ್ತು ಮುಖ್ಯರಾದ ದುರ್ಯೋಧನ ಸಹೋದರರು ರಣರಂಗದಲ್ಲಿ ದ್ರೋಣರನ್ನು ರಕ್ಷಿಸಿದರು.

ರಕ್ಷ್ಯಮಾಣಂ ತಥಾ ದ್ರೋಣಂ ಸಮರೇ ತೈರ್ಮಹಾತ್ಮಭಿಃ ।
ಯತಮಾನಾಪಿ ಪಾಂಚಾಲಾ ನ ಶೇಕುಃ ಪ್ರತಿವೀಕ್ಷಿತುಮ್ ॥ ೪೦ ॥

ರಣರಂಗದಲ್ಲಿ ಆ ಮಹಾತ್ಮರಿಂದ ದ್ರೋಣರು ಆ ರೀತಿಯಲ್ಲಿ ರಕ್ಷಿಸಲ್ಪಡುತ್ತಿರಲು ಪಾಂಚಾಲರು ಪ್ರಯತ್ನಪಟ್ಟರೂ ಅವರನ್ನು ಪ್ರತಿಯಾಗಿ ನೋಡಲು ಸಾಧ್ಯವಾಗಲಿಲ್ಲ.

ತತ್ರಾಕ್ರುಧ್ಯದ್ ಭೀಮಸೇನೋ ಧೃಷ್ಟದ್ಯುಮ್ನಸ್ಯ ಮಾರಿಷ ।
ಸ ಏನಂ ವಾಗ್ಭಿರುಗ್ರಾಭಿಸ್ತತಕ್ಷ ಪುರುಷರ್ಷಭಮ್ ॥ ೪೧ ॥

ಆಗ ಎಲೈ ಶ್ರೇಷ್ಠನೇ, ಭೀಮಸೇನನು ಧೃಷ್ಟದ್ಯುಮ್ನನ ಮೇಲೆ ಕೋಪಗೊಂಡನು. ಅವನು ಪುರುಷಶ್ರೇಷ್ಠನಾದ ಧೃಷ್ಟದ್ಯುಮ್ನನನ್ನು ಉಗ್ರವಾದ ಮಾತುಗಳಿಂದ ಗಾಯಗೊಳಿಸಿದನು.

ದ್ರುಪದಸ್ಯ ಕುಲೇ ಜಾತಃ ಸರ್ವಾಸ್ತ್ರೇಷ್ವಸ್ತ್ರವಿತ್ತಮಃ ।
ಕಃ ಕ್ಷತ್ರಿಯೋ ಮನ್ಯಮಾನಃ ಪ್ರೇಕ್ಷೇತಾರಿಮವಸ್ಥಿತಮ್ ॥ ೪೨ ॥

ದ್ರುಪದನ ಕುಲದಲ್ಲಿ ಜನಿಸಿ, ಎಲ್ಲ ಅಸ್ತ್ರವೇತ್ತರಲ್ಲೂ ಶ್ರೇಷ್ಠನಾದ ತನ್ನನ್ನು ಕ್ಷತ್ರಿಯನೆಂದು ತಿಳಿಯುವ ಯಾವನು ತಾನೇ ಯುದ್ಧದಲ್ಲಿ ಶತ್ರುವನ್ನು ನೋಡಿಕೊಂಡು ಸುಮ್ಮನಿರುತ್ತಾನೆ?

ಪಿತೃಪುತ್ರವಧಂ ಪ್ರಾಪ್ಯ ಪುಮಾನ್ ಕಃ ಪರಿಹಾಪಯೇತ್ ।
ವಿಶೇಷತಸ್ತು ಶಪಥಂ ಶಪಿತ್ವಾ ರಾಜಸಂಸದಿ ॥ ೪೩ ॥

ಪಿತೃ-ಪುತ್ರ ವಧೆಯನ್ನು ಹೊಂದಿ ರಾಜಸಭೆಯಲ್ಲಿ ವಿಶೇಷವಾಗಿ ಶಪಥ ಪೂರ್ವಕ ಶಾಪವನ್ನು ನೀಡಿದ ಯಾವನು ತಾನೇ ಹೀಗೆ ನಿರೀಕ್ಷಿಸಿಕೊಂಡಿರುತ್ತಾನೆ? (ಅಥವಾ ತನ್ನ ಪ್ರತಿಜ್ಞೆಯನ್ನು ಕಳೆದುಕೊಳ್ಳುತ್ತಾನೆ).

ಏಷ ವೈಶ್ವಾನರ ಇವ ಸಮಿದ್ಧಃ ಸ್ವೇನ ತೇಜಸಾ ।
ಶರಚಾಪೇಂಧನೋ ದ್ರೋಣಃ ಕ್ಷತ್ರಂ ದಹತಿ ತೇಜಸಾ ॥ ೪೪ ॥

ಈ ದ್ರೋಣರು ತನ್ನ ತೇಜಸ್ಸಿನಿಂದ ಚೆನ್ನಾಗಿ ಜ್ವಲಿಸುವ ಅಗ್ನಿಯಂತೆ ಬಿಲ್ಲು-ಬಾಣ ರೂಪವಾದ ಇಂಧನವನ್ನು ಹೊಂದಿ ಕ್ಷತ್ರಿಯರನ್ನು ತಮ್ಮ ತೇಜಸ್ಸಿನಿಂದ ದಹಿಸುತ್ತಿದ್ದಾರೆ.

ಪುರಾ ಕರೋತಿ ನಿಃಶೇಷಾಂ ಪಾಂಡವಾನಾಮನೀಕಿನೀಮ್ ।
ಸ್ಥಿತಾಃ ಪಶ್ಯತ ಮೇ ಕರ್ಮ ದ್ರೋಣಮೇವ ವ್ರಜಾಮ್ಯಹಮ್ ॥ ೪೫ ॥

ಅವರು ಪಾಂಡವರ ಸೈನ್ಯವನ್ನು ನಿಃಶೇಷಗೊಳಿಸುವುದಕ್ಕಿಂತ ಮೊದಲೇ ನಾನು ದ್ರೋಣರ ಮೇಲೆ ಎರಗುತ್ತೇನೆ. ನೀನು ನಿಂತು ನನ್ನ ಕಾರ್ಯವನ್ನು ನೋಡು (ಎಂದು ಹೇಳಿದನು).

ಸಂಜಯಃ

ಇತ್ಯುಕ್ತ್ವಾ ಪ್ರಾವಿಶತ್ ಕ್ರುದ್ಧೋ ದ್ರೋಣಾನೀಕಂ ವೃಕೋದರಃ ।
ದೃಢೈಃ ಪೂರ್ಣಾಯತೋತ್ಸೃಷ್ಟೈರ್ದ್ರಾವಯಂಸ್ತವ ವಾಹಿನೀಮ್ ॥

ಸಂಜಯ– ಹೀಗೆ ಹೇಳಿ ವೃಕೋದರನು ಕೋಪಗೊಂಡು ದೃಢವಾದ ಮತ್ತು ಪೂರ್ಣವಾಗಿ ಎಳೆದು ಪ್ರಯೋಗಿಸಿದ ಬಾಣಗಳಿಂದ ಶತ್ರುಸೈನ್ಯವನ್ನು ಎದುರಿಸುತ್ತಾ ದ್ರೋಣರ ಸೈನ್ಯವನ್ನು ಪ್ರವೇಶಿಸಿದನು.

ಧೃಷ್ಟದ್ಯುಮ್ನೋಽಪಿ ಪಾಂಚಾಲ್ಯಃ ಪ್ರವಿಶ್ಯ ಮಹತೀಂ ಚಮೂಮ್ ।
ಆಸಸಾದ ರಣೇ ದ್ರೋಣಂ ತದಾಸೀತ್ ತುಮುಲಂ ಮಹತ್ ॥ ೪೭ ॥

ಪಾಂಚಾಲದೇಶದ ಧೃಷ್ಟದ್ಯುಮ್ನನೂ ಸಹ ಕೌರವರ ದೊಡ್ಡ ಸೈನ್ಯವನ್ನು ಪ್ರವೇಶಿಸಿ ರಣರಂಗದಲ್ಲಿ ದ್ರೋಣರನ್ನು ಸಮೀಪಿಸಿದನು. ಆಗ ತೀವ್ರವಾದ ಯುದ್ಧವು ನಡೆಯಿತು.

ನೈವ ನಸ್ತಾದೃಶಂ ಯುದ್ಧಂ ದೃಷ್ಟಪೂರ್ವಂ ನ ಚ ಶ್ರುತಮ್ ।
ಯಥಾ ಸೂರ್ಯೋದಯೇ ರಾಜನ್ ಸಮುತ್ಪಿಂಜೋಽಭವತ್ ಮಹಾನ್ ॥

ಅಂತಹ ಯುದ್ಧವನ್ನು ನಾವು ಕೇಳಿರಲಿಲ್ಲ, ನೋಡಿರಲಿಲ್ಲ. ಎಲೈ ರಾಜನೇ, ಆಗ ಸೂರ್ಯೋದಯ ಸಮಯದಲ್ಲಿ ಪಶು-ಪಕ್ಷಿಗಳ ಮತ್ತು ಯೋಧರ ದೊಡ್ಡ ಕೋಲಾಹಲ ಶಬ್ದವುಂಟಾಯಿತು.

ಸಂಸಕ್ತಾನಿ ವ್ಯದೃಶ್ಯಂತ ರಥವೃಂದಾನಿ ಮಾರಿಷ ।
ಹತಾನಿ ಚ ವಿಕೀರ್ಣಾನಿ ಶರೀರಾಣಿ ಶರೀರಿಣಾಮ್ ॥ ೪೯ ॥

ಎಲೈ ಶ್ರೇಷ್ಠನೇ, ರಥಸಮೂಹಗಳು ಒಂದಕ್ಕೊಂದು ಸೇರಿಕೊಂಡಂತೆ ಕಂಡುಬಂದವು. ಯೋಧರ ಚೆಲ್ಲಾಡಿದ ಮೃತಶರೀರಗಳೂ ಸಹ ಪರಸ್ಪರವಾಗಿ ಸೇರಿಕೊಂಡಿರುವಂತೆ ಕಂಡುಬದವು.

ಕೇಚಿದನ್ಯತ್ರ ಗಚ್ಛಂತಃ ಪಥಿ ಚಾನ್ಯೈರುಪದ್ರುತಾಃ ।
ವಿಮುಖಾಃ ಪೃಷ್ಠತಶ್ಚಾನ್ಯೇ ತಾಡ್ಯಂತೇ ಪಾರ್ಶ್ವತೋಽಪರೇ ॥ ೫೦ ॥

ಬೇರೆ ಕಡೆಗೆ ಹೋಗುವ ಕೆಲವು ಯೋಧರು ಮಾರ್ಗದಲ್ಲಿ ಬೇರೆಯವರಿಂದ ಹಿಂಸಿಸಲ್ಪಟ್ಟರು. ಯುದ್ಧದಿಂದ ವಿಮುಖರಾಗಿ ಹೋಗುವವರು ಹಿಂಭಾಗದಿಂದಲೂ, ಪಾರ್ಶ್ವಗಳಿಂದಲೂ ಹೊಡೆಯಲ್ಪಟ್ಟರು.

ತಥಾ ಸಂಸಕ್ತಯುದ್ಧಂ ತದಭವದ್ ಭೃಶದಾರುಣಮ್ ।
ಅಥ ಸಂಧ್ಯಾಗತಃ ಸೂರ್ಯಃ ಕ್ಷಣೇನ ಸಮಪದ್ಯತ ॥ ೫೧ ॥

ಹಾಗೆ ಪರಸ್ಪರವಾಗಿ ಸಂಕುಲಯುದ್ಧವು ತೀವ್ರವಾಗಿ, ದಾರುಣವಾಗಿ ನಡೆಯಿತು. ಆಗ ಸ್ವಲ್ಪ ಸಮಯದಲ್ಲಿ ಸೂರ್ಯನು ಸಂಧ್ಯಾಕಾಲಗತನಾದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವಿಸಪ್ತ್ಯಧಿಕಶತತಮೋಧ್ಯಾಯಃ ॥

॥ ದ್ರೋಣವಧಪರ್ವಣಿ ಸಪ್ತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೂರನೆಯ ಅಧ್ಯಾಯ

ಹದಿನೈದನೆಯ ದಿವಸದ ಯುದ್ಧದ ಪ್ರಾರಂಭ.
ಸಂಕುಲ ಯುದ್ಧದಲ್ಲಿ ನಕುಲನಿಂದ ದುರ್ಯೋಧನನ ಪರಾಜಯ.

ಸಂಜಯಃ

ತೇ ತಥೈವ ಮಹಾರಾಜ ದಂಸಿತಾ ರಣಮೂರ್ಧನಿ ।
ಸಂಧ್ಯಾಗತಂ ಸಹಸ್ರಾಂಶುಮಾದಿತ್ಯಮುಪತಸ್ಥಿರೇ ॥ ೧ ॥

ಸಂಜಯ– ಎಲೈ ಮಹಾರಾಜನೇ, ಅವರು ರಣರಂಗದಲ್ಲಿ ಹಾಗೆಯೇ ಕವಚಗಳನ್ನು ಧರಿಸಿ, ಸಂಧ್ಯಾಗತನಾದ ಸಹಸ್ರಾಂಶುವಾದ ಸೂರ್ಯನ ಉಪಸ್ಥಾನವನ್ನು ಮಾಡಿದರು.

ಉದಿತೇ ತು ಸಹಸ್ರಾಂಶೌ ತಪ್ತಕಾಂಚನಸಪ್ರಭೇ ।
ಪ್ರಕಾಶಿತೇಷು ಲೋಕೇಷು ಪುನರ್ಯುದ್ಧಮವರ್ತತ ॥ ೨ ॥

ತಪ್ತಕಾಂಚನ ಕಾಂತಿಯುಳ್ಳ ಸಹಸ್ರಾಂಶುವು ಉದಯಿಸಿ ಲೋಕವು ಪ್ರಕಾಶಗೊಂಡಿರಲು ಪುನಃ ಯುದ್ಧವು ಜರುಗಿತು.

ದ್ವಂದ್ವಾನಿ ಯಾನಿ ತತ್ರಾಸನ್ ಸಂಸಕ್ತಾನಿ ಪುರೋದಯಾತ್ ।
ತಾನ್ಯೇವಾಭ್ಯುದಿತೇ ಸೂರ್ಯೇ ಸಮಸಜ್ಜಂತ ಭಾರತ ॥ ೩ ॥

ಎಲೈ ಭಾರತನೇ, ಸೂರ್ಯೋದಯಕ್ಕಿಂತ ಮೊದಲೇ ಯಾರು-ಯಾರಿಗೆ ದ್ವಂದ್ವ ಯುದ್ಧವು ನಡೆಯುತ್ತಿದ್ದವೋ ಸೂರ್ಯೋದಯವಾದ ಮೇಲೆ ಅವೇ ಮುಂದುವರೆದವು.

ರಥೈರ್ಹಯಾ ಹಯೈರ್ನಾಗಾಃ ಪಾದಾತಾಶ್ಚಾಪಿ ಕುಂಜರೈಃ ।
ಹಯಾ ಹಯೈಃ ಸಮಾಜಗ್ಮುಃ ಪಾದಾತಾಶ್ಚ ಪದಾತಿಭಿಃ ।
ಸಂಸಕ್ತಾಶ್ಚ ವಿಯುಕ್ತಾಶ್ಚ ಯೋಧಾಃ ಸನ್ನ್ಯಪತನ್ ರಣೇ ॥ ೪ ॥

ರಥಗಳ ಜೊತೆಯಲ್ಲಿ ಅಶ್ವಗಳು, ಅಶ್ವಗಳ ಜೊತೆಯಲ್ಲಿ ಗಜಗಳು, ಗಜಗಳ ಜೊತೆಯಲ್ಲಿ ಪದಾತಿಗಳು, ಅಶ್ವಗಳ ಜೊತೆಯಲ್ಲಿ ಅಶ್ವಗಳು, ಪದಾತಿಗಳ ಜೊತೆಯಲ್ಲಿ ಪದಾತಿಗಳು ಸಮೀಪಿಸಿ ಸಂಯುಕ್ತರಾಗಿ, ಪುನಃ ವಿಯುಕ್ತರಾಗಿ ಯೋಧರು ರಣರಂಗದಲ್ಲಿ ಯುದ್ಧವನ್ನು ಮಾಡಿದರು.

ತೇ ರಾತ್ರೌ ಕೃತಕರ್ಮಾಣಃ ಶ್ರಾಂತಾಃ ಸೂರ್ಯಸ್ಯ ತೇಜಸಾ ।
ಕ್ಷುತ್ಪಿಪಾಸಾಪರೀತಾಂಗಾ ವಿಸಂಜ್ಞಾ ಬಹವೋಽಭವನ್ ॥ ೫ ॥

ರಾತ್ರಿಯೆಲ್ಲಾ ಯುದ್ಧಕರ್ಮವನ್ನು ಮಾಡಿ ಬಳಲಿ ಸೂರ್ಯನ ತೇಜಸ್ಸಿನಿಂದ ಬಳಲಿದ ಆ ಯೋಧರಲ್ಲಿ ಅನೇಕರು ಹಸಿವು-ನೀರಡಿಕೆಗಳಿಂದ ಬಳಲಿ ಮೂರ್ಛೆಯನ್ನು ಹೊಂದಿದರು.

ಶಂಖಭೇರೀಮೃದಂಗಾನಾಂ ಕುಂಜರಾಣಾಂ ಚ ಗರ್ಜತಾಮ್ ।
ವಿಸ್ಫಾರಿತವಿಕೃಷ್ಟಾನಾಂ ಕಾರ್ಮುಕಾಣಾಂ ಚ ಕೂಜತಾಮ್ ॥ ೬ ॥

ಶಬ್ದಃ ಸಮಭವದ್ ರಾಜನ್ ದಿವಿಸ್ಪೃಗ್ ಭರತರ್ಷಭ ।

ಶಂಖ-ಭೇರೀ-ಮೃದಂಗಗಳ, ಗರ್ಜಿಸುವ ಗಜಗಳ, ಎಳೆದು ಹಿಂದಕ್ಕೆ ಬಿಡುವ ಧನುಸ್ಸುಗಳ ಶಬ್ದವು ಎಲೈ ರಾಜನೇ, ಭರತರ್ಷಭನೇ, ಆಕಾಶವನ್ನು ಮುಟ್ಟಿತು.

ದ್ರವತಾಂ ಚ ಪದಾತೀನಾಂ ಶಸ್ತ್ರಾಣಾಂ ನಿಪಾತ್ಯತಾಮ್ ॥ ೭ ॥

ಹಯಾನಾಂ ಹೇಷತಾಂ ಚೈವ ರಥಾನಾಂ ಚ ನಿವರ್ತತಾಮ್ ।
ಕ್ರೋಶತಾಂ ಗರ್ಜತಾಂ ಚೈವ ತದಾಸೀತ್ ತುಮುಲಂ ಮಹತ್ ॥ ೮ ॥

ಓಡುವ ಪದಾತಿಗಳ, ಹೊಡೆಯಲ್ಪಡುವ ಶಸ್ತ್ರಗಳ, ಹೇಷಾರವವನ್ನು ಮಾಡುವ ಅಶ್ವಗಳ, ತಿರುಗುವ ರಥಗಳ, ಕಿರುಚುವ ಮತ್ತು ಗರ್ಜಿಸುವ ಯೋಧರ ಶಬ್ದಗಳು ಆಗ ಬಹಳ ತೀವ್ರವಾಗಿದ್ದವು.

ವಿವೃದ್ಧಸ್ತುಮುಲಃ ಶಬ್ದೋ ದ್ಯಾಮಗಚ್ಛನ್ಮಹಾಸ್ವನಃ ।
ನಾನಾಯುಧನಿಕೃತ್ತಾನಾಂ ಚೇಷ್ಟತಾಮಾತುರಃ ಸ್ವನಃ ॥ ೯ ॥

ಭೂಮಾವಶ್ರೂಯತ ಮಹಾಂಸ್ತದಾಸೀತ್ ಕೃಪಣಂ ಮಹತ್ ।
ಪತತಾಂ ಪತಿತಾನಾಂ ಚ ಪತ್ತ್ಯಶ್ವರಥಹಸ್ತಿನಾಮ್ ॥ ೧೦ ॥

ದೊಡ್ಡದಾಗಿ ಬೆಳೆದ ಆ ತೀವ್ರವಾದ ಶಬ್ದವು ಆಕಾಶವನ್ನು ಮುಟ್ಟಿತು. ನಾನಾ ವಿಧವಾದ ಆಯುಧಗಳಿಂದ ಕತ್ತರಿಸಲ್ಪಟ್ಟು ಹೊರಳಾಡುವ ವೇದನೆಯ ಮಹಾಧ್ವನಿಯು ಭೂಮಿಯಲ್ಲಿ ಕೇಳಿಬಂದಿತು. ಕೆಳಗೆ ಬಿದ್ದ ಮತ್ತು ಬೀಳುತ್ತಿದ್ದ ಪದಾತಿ-ಅಶ್ವ-ರಥ-ಗಜಗಳ ಕರುಣಾಜನಕವಾದ ದೊಡ್ಡ ಶಬ್ದವೂ ಕೇಳಿಬಂದಿತು.

ತೇಷು ಸರ್ವೇಷ್ವನೀಕೇಷು ವ್ಯತಿಷಕ್ತೇಷ್ವನೇಕಶಃ ।
ಸ್ವೇ ಸ್ವಾನ್ಜಘ್ನುಃ ಪರೇ ಸ್ವಾಂಶ್ಚ ಸ್ವೇ ಪರಾಂಶ್ಚ ಪರಾನ್ ಪರೇ ॥ ೧೧ ।

ಆ ಎಲ್ಲ ಸೈನ್ಯಗಳು ಪರಸ್ಪರವಾಗಿ ಸಂಸಕ್ತವಾದಾಗ ತಮ್ಮವರು ತಮ್ಮವರನ್ನೂ ಮತ್ತು ಶತ್ರುಗಳನ್ನೂ, ಪರರು ತಮ್ಮವರನ್ನೂ ಮತ್ತು ಶತ್ರುಗಳನ್ನೂ ಕೊಂದರು.

ವೀರಬಾಹುವಿಸೃಷ್ಟಾಶ್ಚ ಯೋಧೇಷು ಚ ಗಜೇಷು ಚ ।
ಅಸಯಃ ಪ್ರತ್ಯದೃಶ್ಯಂತ ವಿದ್ಯುತಃ ಪ್ರಾವೃಷೀವ ಹಿ ॥ ೧೨ ॥

ವೀರರ ಬಾಹುಗಳಿಂದ ಯೋಧರ ಮೇಲೆಯೂ ಮತ್ತು ಗಜಗಳ ಮೇಲೆಯೂ ಎಸೆಯಲ್ಪಟ್ಟ ಖಡ್ಗಗಳು ಮಳೆಗಾಲದ ಮಿಂಚುಗಳಂತೆ ತೋರಿಬಂದವು.

ಉದ್ಯತಪ್ರತಿಪಿಷ್ಟಾನಾಂ ಖಡ್ಗಾನಾಂ ವೀರಬಾಹುಭಿಃ ।
ಸ ಏವ ಶಬ್ದಸ್ತದ್ರೂಪೋ ವಾಸಸಾಂ ನಿಜ್ಯತಾಮಿವ ॥ ೧೩ ॥

ಎತ್ತಿದ ಖಡ್ಗಗಳು ವೀರರ ಬಾಹುಗಳಿಂದ, ಖಡ್ಗಗಳಿಂದ ಪುಡಿಮಾಡಲ್ಪಟ್ಟು ಅದೇ ವಸ್ತ್ರಗಳು ಒಗೆಯುವ ಶಬ್ದದಂತೆಯೇ ಕೇಳಿಬಂದವು.

ಅರ್ಧಾಸಿಭಿಸ್ತಥಾ ಖಡ್ಗೈಸ್ತೋಮರೈಃ ಸಪರಶ್ವಧೈಃ ।
ನಿಕೃಷ್ಟಯುದ್ಧಂ ಸಂಸಕ್ತಂ ಮಹದಾಸೀತ್ ಸುದಾರುಣಮ್ ॥ ೧೪ ॥

ಅರ್ಧಖಡ್ಗಗಳಿಂದಲೂ, ತೋಮರಗಳಿಂದಲೂ, ಪರಶ್ವಧಗಳಿಂದಲೂ ಸಂಸಕ್ತವಾಗಿ ಮಾಡಿದ ಯುದ್ಧವು ಬಹಳ ದಾರುಣವಾಗಿದ್ದಿತು.

ಗಜಾಶ್ವಕಾಯಪ್ರಭವಾಂ ನರದೇಹಪ್ರವಾಹಿನೀಮ್ ।
ಶಸ್ತ್ರಮತ್ಸ್ಯಸುಸಂಪೂರ್ಣಾಂ ಮಾಂಸಶೋಣಿತಕರ್ದಮಾಮ್ ॥ ೧೫ ॥

ಆರ್ತನಾದಸ್ವನವತೀಂ ಪತಾಕಾವಸ್ತ್ರಫೇನಿಲಾಮ್ ।
ನದೀಂ ಪ್ರಾವರ್ತಯನ್ ವೀರಾಃ ಪರಲೋಕಪ್ರವಾಹಿನೀಮ್ ॥ ೧೬ ॥

ಗಜಾಶ್ವ ಶರೀರಗಳಿಂದ ಉಂಟಾದ, ಸೈನಿಕರ ದೇಹಗಳನ್ನು ಕೊಚ್ಚಿಕೊಂಡು ಹೋಗುವ, ಶಸ್ತ್ರಗಳೆಂಬ ಮತ್ಸ್ಯಗಳಿಂದ ಪೂರ್ಣವಾದ, ಮಾಂಸ-ರಕ್ತವೆಂಬ ಕೆಸರಿನಿಂದ ಕೂಡಿದ, ಆರ್ತನಾದರೂಪವಾದ ಶಬ್ದವುಳ್ಳ, ಪತಾಕೆಗಳು ಮತ್ತು ವಸ್ತ್ರಗಳೆಂಬ ನೊರೆಗಳಿಂದ ಕೂಡಿದ, ಪರಲೋಕದ ಕಡೆಗೆ ಸೆಳೆದುಕೊಂಡು ಹೋಗುವ ನದಿಯನ್ನು ವೀರರು ಪ್ರವರ್ತಿಸಿದರು.

ಶರಶಕ್ತ್ಯರ್ದಿತಾಃ ಕ್ಲಾಂತಾ ರಾತ್ರಿಮೂಢಾಲ್ಪಚೇತಸಃ ।
ವಿಷ್ಟಭ್ಯ ಸರ್ವಗಾತ್ರಾಣಿ ವ್ಯತಿಷ್ಠನ್ ಗಜವಾಜಿನಃ ।
ಸಂಶುಷ್ಕವದನಾ ವೀರಾಃ ಶಿರೋಭಿಶ್ಚಾರುಕುಂಡಲೈಃ ॥ ೧೭ ॥

ಶರ-ಶಕ್ತಿಗಳಿಂದ ಪೀಡಿತರಾಗಿ ದಣಿದು, ರಾತ್ರಿಯುದ್ಧದಿಂದ ಮೂಢರಾಗಿ ಅಲ್ಪ ಪ್ರಜ್ಞೆಯುಳ್ಳ ಅಶ್ವ-ಗಜಗಳು ತಮ್ಮ ಶರೀರವನ್ನು ಗಟ್ಟಿಮಾಡಿಕೊಂಡು ರಣರಂಗದಲ್ಲಿ ನಿಂತವು. ವೀರರೂ ಸಹ ಒಣಗಿದ ಮುಖವುಳ್ಳವರಾಗಿ ಒಳ್ಳೆಯ ಕುಂಡಲಗಳನ್ನು ಧರಿಸಿದ ಶಿರಸ್ಸುಗಳನ್ನು ಹೊಂದಿ ತಮ್ಮ ದೇಹವನ್ನು ಸ್ತಂಭಿಸಿ ನಿಂತರು.

ಯುದ್ಧೋಪಕರಣೈಶ್ಚಾನ್ಯೈ ಸ್ತತ್ರ ತತ್ರ ಪ್ರಕಾಶಿತೈಃ ।
ಕ್ರವ್ಯಾದಸಂಘೈರಾಕೀರ್ಣಂ ಮೃತೈರರ್ಧಮೃತೈರಪಿ ।
ನಾಸೀದ್ ರಥಪಥಸ್ತತ್ರ ಸರ್ವಮಾಯೋಧನಂ ಪ್ರತಿ ॥ ೧೮ ॥

ಯುದ್ಧೋಪಕರಣಗಳಿಂದಲೂ, ಅಲ್ಲಲ್ಲಿ ಪ್ರಕಾಶಿತವಾದ ಮಾಂಸಾಹಾರಿ ಪಶು-ಪಕ್ಷಿಗಳ ಸಮೂಹದಿಂದಲೂ, ಮೃತರೂ-ಅರ್ಧಮೃತರೂ ಆದ ಯೋಧರಿಂದಲೂ, ನಿಬಿಡವಾದ ಆ ರಣರಂಗದಲ್ಲಿ ಎಲ್ಲಿಯೂ ರಥದ ಗಮನಕ್ಕೆ ಯೋಗ್ಯವಾದ ಮಾರ್ಗವಿರಲಿಲ್ಲ.

ಮಜ್ಜತ್ಸು ಚಕ್ರೇಷು ರಥಾನ್ ಸತ್ತ್ವಮಾಸ್ಥಾಯ ವಾಜಿನಃ ।
ಕಥಂಚಿದವಹನ್ ಶ್ರಾಂತಾ ವೇಪಮಾನಾಃ ಶರಾರ್ದಿತಾಃ ।
ಕುಲಸತ್ತ್ವಬಲೋಪೇತಾ ವಾಜಿನೋ ವಾರಣೋಪಮಾಃ ॥ ೧೯ ॥

ರಥದ ಚಕ್ರಗಳು ಹೂತುಹೋಗುತ್ತಿರಲು ಕುಲ-ಸತ್ತ್ವ-ಬಲಗಳಿಂದ ಕೂಡಿದ ಗಜಗಳಂತಿದ್ದ ಅಶ್ವಗಳೂ ಸಹ ಧೈರ್ಯವನ್ನು ಹೊಂದಿ, ಬಳಲಿ, ಬಾಣಗಳಿಂದ ಪೀಡಿತಗಳಾಗಿ ನಡುಗುತ್ತಾ ರಥಗಳನ್ನು ಹೇಗೋ ಮುಂದೆ ಎಳೆದವು.

ವಿಹ್ವಲಂ ತತ್ ಸಮುದ್ಭ್ರಾಂತಂ ಸಭಯಂ ಭಾರತಾತುರಮ್ ।
ಬಲಮಾಸೀತ್ ತದಾ ಸರ್ವಮೃತೇ ದ್ರೋಣಾರ್ಜುನಾವುಭೌ ॥ ೨೦ ॥

ಎಲೈ ಭಾರತನೇ, ಆಗ ವಿಹ್ವಲವೂ, ದಿಗ್ಭ್ರಾಂತವೂ, ಭಯದಿಂದ ಕೂಡಿದುದೂ ಆದ ಸೈನ್ಯವೆಲ್ಲವೂ ದ್ರೋಣಾರ್ಜುನ ಇಬ್ಬರನ್ನು ಬಿಟ್ಟು ರೋಗಗ್ರಸ್ಥವಾದಂತೆ ಆಯಿತು.

ತಾವೇವಾಸ್ತಾಂ ನಿಲಯನಂ ತಾವಾರ್ತಾಯನಮೇವ ಚ ।
ತಾವೇವಾನ್ಯೇ ಸಮಾಸಾದ್ಯ ಜಗ್ಮುರ್ವೈವಸ್ವತಕ್ಷಯಮ್ ॥ ೨೧ ॥

ಅವರಿಬ್ಬರೇ ಎಲ್ಲರೂ ಅಡಗುವ ತಾಣಗಳಾದರು. ಸತ್ಯವಾದ ಆಶ್ರಯರಾದರು. ಇನ್ನು ಕೆಲವರು ಅವರಿಬ್ಬರನ್ನು ಸಮೀಪಿಸಿ ಯಮಸದನಕ್ಕೆ ಹೋದರು.

ಆವಿಗ್ನಮಭವತ್ ಸರ್ವಂ ಕೌರವಾಣಾಂ ಮಹದ್ಬಲಮ್ ।
ಪಾಂಚಾಲಾನಾಂ ಚ ಸಂಸಕ್ತಂ ನ ಪ್ರಾಜ್ಞಾಯತ ಕಿಂಚನ ॥ ೨೨ ॥

ಪಾಂಚಾಲರಿಂದ ಸಂಸಕ್ತವಾದ ಕೌರವರ ದೊಡ್ಡ ಸೈನ್ಯವೆಲ್ಲವೂ ದುಃಖಭರಿತವಾಯಿತು. ಯಾವುದೂ ಕಾಣಲಿಲ್ಲ.

ಅಂತಕಾಕ್ರೀಡಸದೃಶೇ ಭೀರೂಣಾಂ ಭಯವರ್ಧನೇ ।
ಪೃಥಿವ್ಯಾಂ ರಾಜವಂಶಾನಾಮುತ್ಥಿತೇ ಮಹತಿ ಕ್ಷಯೇ ॥ ೨೩ ॥

ನ ತತ್ರ ಕರ್ಣಂ ನ ದ್ರೋಣಂ ನಾರ್ಜುನಂ ನ ಯುಧಿಷ್ಠಿರಮ್ ।
ನ ಭೀಮಸೇನಂ ನ ಯಮೌ ನ ಪಾಂಚಾಲ್ಯಂ ನ ಸಾತ್ಯಕಿಮ್॥ ೨೪ ॥

ನ ಚ ದುಃಶಾಸನಂ ದ್ರೌಣಿಂ ನ ದುರ್ಯೋಧನಸೌಬಲೌ ।
ನ ಕೃಪಂ ಮದ್ರರಾಜಂ ವಾ ಕೃತವರ್ಮಾಣಮೇವ ಚ ॥ ೨೫ ॥

ನ ಚಾನ್ಯಾನ್ನೈವ ಚಾತ್ಮಾನಂ ನ ಕ್ಷಿತಿಂ ನ ದಿಶಸ್ತಥಾ ।
ಪಶ್ಯಾಮ ರಾಜನ್ ಸಂಸಕ್ತಾನ್ ಸೈನ್ಯೇನ ರಜಸಾವೃತಾನ್ ॥ ೨೬ ॥

ಯಮನ ಕ್ರೀಡಾಂಗಣ ಸದೃಶವಾದ, ಹೇಡಿಗಳಿಗೆ ಭಯವನ್ನು ಹೆಚ್ಚಿಸುವ, ದೊಡ್ಡ ಕ್ಷಯವು ಭೂಮಿಯಲ್ಲಿರುವ ರಾಜವಂಶಕ್ಕೆ ಉಂಟಾಗುತ್ತಿರಲು ಅಲ್ಲಿ ಕರ್ಣನನ್ನಾಗಲೀ, ದ್ರೋಣರನ್ನಾಗಲೀ, ಅರ್ಜುನನನ್ನಾಗಲೀ, ಯುಧಿಷ್ಠಿರನನ್ನಾಗಲೀ, ಭೀಮನನ್ನಾಗಲೀ, ನಕುಲ-ಸಹದೇವರನ್ನಾಗಲೀ, ಧೃಷ್ಟದ್ಯುಮ್ನನನ್ನಾಗಲೀ, ಸಾತ್ಯಕಿಯನ್ನಾಗಲೀ, ದುಶ್ಶಾಸನನ್ನಾಗಲೀ, ಅಶ್ವತ್ಥಾಮರನ್ನಾಗಲೀ, ದುರ್ಯೋಧನ-ಶಕುನಿಗಳನ್ನಾಗಲೀ, ಕೃಪರನ್ನಾಗಲೀ, ಶಲ್ಯನನ್ನಾಗಲೀ, ಕೃತವರ್ಮನನ್ನಾಗಲೀ, ಬೇರೆಯವರನ್ನಾಗಲೀ, ನಮ್ಮನ್ನೇ ಆಗಲೀ, ಭೂಮಿಯನ್ನಾಗಲೀ, ದಿಕ್ಕುಗಳನ್ನಾಗಲೀ ನಾವು ಕಾಣಲಿಲ್ಲ. ಎಲೈ ರಾಜನೇ, ಎಲ್ಲರೂ ಸೈನ್ಯದಿಂದ ಎದ್ದ ಧೂಳಿನಿಂದ ಆವೃತರಾಗಿ ಪರಸ್ಪರವಾಗಿ ಸಂಸಕ್ತರಾಗಿದ್ದರು.

ಸಂಭ್ರಾಂತೇ ತುಮುಲೇ ಘೋರೇ ರಜೋಮೇಘೇ ಸಮುತ್ಥಿತೇ ।
ದ್ವಿತೀಯಾಮಿವ ಸಂಪ್ರಾಪ್ತಾಮಮನ್ಯಂತ ನಿಶಾಂ ತದಾ ॥ ೨೭ ॥

ದಿಗ್ಭ್ರಾಂತಿಗೊಳಿಸುವ ತೀವ್ರವೂ, ಘೋರವೂ ಆದ ಧೂಳಿನ ಮೇಘವು ಉಂಟಾಗುತ್ತಿರಲು ಯೋಧರು ಆಗ ಎರಡನೆಯ ಬಾರಿಗೆ ರಾತ್ರಿಯು ಪ್ರಾಪ್ತವಾಗಿದೆ ಎಂದು ತಿಳಿದರು.

ನ ಜ್ಞಾಯಂತೇ ಕೌರವೇಯಾ ನ ಪಾಂಚಾಲಾ ನ ಪಾಂಡವಾಃ ।
ನ ದಿಶೋ ನ ದಿವಂ ನೋರ್ವೀಂ ನ ಸಮಂ ವಿಷಮಂ ತಥಾ॥ ೨೮ ॥

ಕೌರವರಾಗಲೀ, ಪಾಂಚಾಲರಾಗಲೀ, ಪಾಂಡವರಾಗಲೀ, ದಿಕ್ಕುಗಳಾಗಲಿ, ಅಂತರಿಕ್ಷವಾಗಲೀ, ಭೂಮಿಯಾಗಲೀ, ಸಮಪ್ರದೇಶವಾಗಲೀ, ವಿಷಮ ಪ್ರದೇಶವಾಗಲೀ ಯಾವುದೂ ತಿಳಿಯಲಿಲ್ಲ.

ಹಸ್ತಸಂಸ್ಪರ್ಶಮಾಪನ್ನಾನ್ ಪರಾನ್ ವಾಪ್ಯಥ ವಾ ಸ್ವಕಾನ್ ।
ನ್ಯಪಾತಯಂಸ್ತದಾ ಯುದ್ಧೇ ನರಾಃ ಸ್ಮ ವಿಜಯೈಷಿಣಃ ॥ ೨೯ ॥

ಆಗ ವಿಜಯವನ್ನು ಬಯಸುವ ಯೋಧರು ಹಸ್ತಸ್ಪರ್ಶಕ್ಕೆ ಸಿಕ್ಕಿದ ಶತ್ರುವನ್ನಾಗಲೀ ಅಥವಾ ತಮ್ಮವರನ್ನೇ ಆಗಲಿ ಹೊಡೆದು ಉರುಳಿಸಿದರು.

ಉದ್ಧೂತತ್ವಾತ್ ತು ರಜಸಃ ಪ್ರಸೇಕಾಚ್ಚೋಣಿತಸ್ಯ ಚ ।
ಪ್ರಶಶಾಮ ರಜೋ ಭೌಮಂ ಶೀಘ್ರತ್ವಾದನಿಲಸ್ಯ ಚ ॥ ೩೦ ॥

ಎಷ್ಟೋ ಧೂಳು ಮೇಲೆ ಎದ್ದುದರಿಂದ, ಗಾಳಿಯು ಶೀಘ್ರವಾಗಿ ಬೀಸುತ್ತಿದುದರಿಂದ ಭೂಮಿಯ ಮೇಲಿದ್ದ ಧೂಳು ರಕ್ತದಿಂದ ತೋಯಿಸಲ್ಪಟ್ಟುದ್ದರಿಂದ ಭೂಮಿಯ ಮೇಲಿದ್ದ ಧೂಳು ಶೀಘ್ರವಾಗಿ ಅಡಗಿತು.

ತತ್ರ ನಾಗಾ ಹಯಾ ಯೋಧಾ ರಥಿನೋऽಥ ಪದಾತಯಃ ।
ಪಾರಿಜಾತವನಾನೀವ ವ್ಯರೋಚನ್ ರುಧಿರೋಕ್ಷಿತಾಃ ॥ ೩೧ ॥

ಅಲ್ಲಿ ರಕ್ತಸಿಕ್ತರಾದ ಗಜಗಳೂ, ಅಶ್ವಗಳೂ, ಯೋಧರೂ, ರಥಿಕರೂ, ಪದಾತಿಗಳೂ ಪಾರಿಜಾತ ವನದಂತೆ ಶೋಭಿಸಿದರು.

ತತೋ ದುರ್ಯೋಧನಃ ಕರ್ಣೋ ದ್ರೋಣೋ ದುಃಶಾಸನಸ್ತಥಾ ।
ಪಾಂಡವೈಃ ಸಮಸಜ್ಜಂತ ಚತುರ್ಭಿಶ್ಚತುರೋ ರಥಾಃ ॥ ೩೨ ॥

ಆಗ ಮಹಾರಥರಾದ ದುರ್ಯೋಧನ, ಕರ್ಣ, ದ್ರೋಣ ಮತ್ತು ದುಶ್ಶಾಸನ- ಈ ನಾಲ್ವರು ನಾಲ್ಕು ರಥಗಳಿಂದ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಂಸಕ್ತರಾದರು.

ದುರ್ಯೋಧನಃ ಸಹ ಭ್ರಾತ್ರಾ ಯಮಾಭ್ಯಾಂ ಸಮಸಜ್ಜತ ।
ವೃಕೋದರೇಣ ರಾಧೇಯೋ ಭಾರದ್ವಾಜೇನ ಚಾರ್ಜುನಃ ॥ ೩೩ ॥

ದುರ್ಯೋಧನನು ದುಶ್ಶಾಸನನೊಂದಿಗೆ ನಕುಲ-ಸಹದೇವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಸಂಸಕ್ತರಾದನು. ಭೀಮಸೇನನು ಕರ್ಣನ ಜೊತೆಯಲ್ಲಿಯೂ, ಅರ್ಜುನನು ದ್ರೋಣರ ಜೊತೆಯಲ್ಲಿಯೂ ಸಂಸಕ್ತರಾದರು.

ತದ್ ಘೋರಂ ಮಹದಾಶ್ಚರ್ಯಂ ಸರ್ವೇ ಪ್ರೈಕ್ಷನ್ ಸಮಂತತಃ ।
ರಥರ್ಷಭಾಣಾಮುಗ್ರಾಣಾಂ ಸನ್ನಿಪಾತಮಮಾನುಷಮ್ ॥ ೩೪ ॥

ಉಗ್ರರಾದ ರಥಶ್ರೇಷ್ಠರ ಅಮಾನುಷವಾದ, ಬಹಳ ಆಶ್ಚರ್ಯಕರವಾದ, ಘೋರವಾದ ಆ ಸಂಘರ್ಷವನ್ನು ಎಲ್ಲರೂ ಎಲ್ಲ ಕಡೆಯಿಂದಲೂ ನೋಡಿದರು.

ರಥಮಾರ್ಗೈರ್ವಿಚಿತ್ರೈಶ್ಚ ವಿಚಿತ್ರರಥಸಂಕುಲಮ್ ।
ಅಪಶ್ಯನ್ ರಥಿನೋ ಯುದ್ಧಂ ವಿಚಿತ್ರಂ ಚಿತ್ರಯೋಧಿನಾಮ್ ॥ ೩೫ ॥

ರಥಿಕರು ವಿಚಿತ್ರವಾದ ರಥಮಾರ್ಗಗಳಿಂದ ಸಂಚರಿಸುವ, ವಿಚಿತ್ರವಾಗಿ ಮತ್ತು ಆಶ್ಚರ್ಯಕರವಾಗಿ ಯುದ್ಧವನ್ನು ಮಾಡುವ ಆ ಯುದ್ಧವನ್ನು ವಿಚಿತ್ರ ರಥಗಳಿಂದ ನಿಬಿಡವಾದ ರಣರಂಗದಲ್ಲಿ ನೋಡಿದರು.

ಯತಮಾನಾಃ ಪರಾಕ್ರಾಂತಾಃ ಪರಸ್ಪರಜಿಗೀಷವಃ ।
ಜೀಮೂತಾ ಇವ ಘರ್ಮಾಂತೇ ಶರವರ್ಷೈರವಾಕಿರನ್ ॥ ೩೬ ॥

ಪರಾಕ್ರಮವನ್ನು ತೋರಿಸುತ್ತಾ, ಪ್ರಯತ್ನಪಡುತ್ತಾ, ಒಬ್ಬರನ್ನೊಬ್ಬರು ಗೆಲ್ಲುವ ಆಸೆಯನ್ನು ಹೊಂದಿ, ಬೇಸಿಗೆಯು ಕಳೆದು ಬಂದ ಮಳೆಗಾಲದಲ್ಲಿನ ಮೋಡಗಳಂತೆ ಪರಸ್ಪರವಾಗಿ ಬಾಣಗಳ ಮಳೆಯನ್ನು ಸುರಿಸಿದರು.

ತೇ ರಥಾನ್ ಸೂರ್ಯಸಂಕಾಶಾನಾಸ್ಥಿತಾಃ ಪುರುಷರ್ಷಭಾಃ ।
ಅಶೋಭಂತ ಯಥಾ ಮೇಘಾಃ ಶಾರದಾಃ ಸಮುಪಸ್ಥಿತಾಃ ॥ ೩೭ ॥

ಸೂರ್ಯಕಾಂತಿಯನ್ನು ಹೊಂದಿದ ರಥಗಳನ್ನು ಏರಿದ್ದ ಆ ಪುರುಷಶ್ರೇಷ್ಠರು ಶರತ್ಕಾಲದ ಮೇಘಗಳಂತೆ ಶೋಭಿಸಿದರು.

ಸ್ಪರ್ಧಿನಸ್ತೇ ಮಹೇಷ್ವಾಸಾಃ ಕೃತಯತ್ನಾ ಧನುರ್ಧರಾಃ ।
ಅಭ್ಯಗಚ್ಛಂಸ್ತಥಾನ್ಯೋನ್ಯಂ ಮತ್ತಾ ಗಜವೃಷಾ ಇವ ॥ ೩೮ ॥

ಸ್ಪರ್ಧಿಗಳೂ, ಮಹಾಧನುರ್ಧಾರಿಗಳೂ, ಮಹಾಪ್ರಯತ್ನವನ್ನು ಮಾಡುವವರೂ ಆದ ಆ ಧನುರ್ಧರರು ಮದಿಸಿದ ಗಜ-ವೃಷಭಗಳಂತೆ ಪರಸ್ಪರವಾಗಿ ಸೆಣಸಿದರು.

ನ ನೂನಂ ದೇಹಭೇದೋಽಸ್ತಿ ಕಾಲೇ ತಸ್ಮಿನ್ ಸಮಾಗತೇ ।
ಯತ್ರ ಸರ್ವೇ ನ ಯುಗಪದ್ ವ್ಯಶೀರ್ಯಂತ ಮಹಾರಥಾಃ ॥ ೩೯ ॥

ಆ ಕಾಲದಲ್ಲಿ ಉಂಟಾದ ಸಮಾಗಮದಲ್ಲಿ ಎಲ್ಲಿ ಎಲ್ಲಾ ಮಹಾರಥರೂ ಒಂದೇ ಕಾಲದಲ್ಲಿ ನಾಶವನ್ನು ಹೊಂದಿದರೋ ಆಗ ಇದು ಪಾಂಡವಯೋಧರ ದೇಹ, ಇದು ಕೌರವ ಯೋಧರ ದೇಹ ಎಂಬ ವ್ಯತ್ಯಾಸವು ತಿಳಿಯುತ್ತಿರಲಿಲ್ಲ.

ಬಾಹುಭಿಶ್ಚರಣೈಶ್ಚಿನ್ನೈಃ ಶಿರೋಭಿಶ್ಚಾರುಕುಂಡಲೈಃ ।
ಕಾರ್ಮುಕೈರ್ವಿಶಿಖೈಃ ಪ್ರಾಸೈಃ ಖಡ್ಗೈಃ ಪರಶುಪಟ್ಟಿಶೈಃ ॥ ೪೦ ॥

ನಾಲೀಕಕ್ಷುರನಾರಾಚೈರ್ನಖರೈಃ ಶಕ್ತಿತೋಮರೈಃ ।
ಅನ್ಯೈಶ್ಚ ವಿವಿಧಾಕಾರೈರ್ಘೋರೈಃ ಪ್ರಹರಣೋತ್ತಮೈಃ ॥ ೪೧ ॥

ಚಿತ್ರೈಶ್ಚ ವಿವಿಧಾಕಾರೈಃ ಶರೀರಾವರಣೈರಪಿ ।
ವಿಚಿತ್ರೈಶ್ಚ ರಥೈರ್ಭಗ್ನೈರ್ಹತೈಶ್ಚ ಗಜವಾಜಿಭಿಃ ॥ ೪೨ ॥

ಶೂನ್ಯೈಶ್ಚ ನಗರಾಕಾರೈರ್ಹತಯೋಧಧ್ವಜೈ ರಥೈಃ ।
ಅಮನುಷ್ಯೈರ್ಹಯೈಸ್ತ್ರಸ್ತೈಃ ಕೃಷ್ಯಮಾಣೈಸ್ತತಸ್ತತಃ ॥ ೪೩ ॥

ವಾತಾಯಮಾನೈರಸಕೃದ್ಧತವೀರೈರಲಂಕೃತೈಃ ।
ವ್ಯಜನೈಃ ಕಂಕಟೈಶ್ಚೈವ ಧ್ವಜೈಶ್ಚ ವಿನಿಪಾತಿತೈಃ ॥ ೪೪ ॥

ಛತ್ರೈರಾಭರಣೈರ್ವಸ್ತ್ರೈರ್ಮಾಲ್ಯೈಶ್ಚ ಸುಸುಗಂಧಿಭಿಃ ।
ಹಾರೈಃ ಕಿರೀಟೈರ್ಮುಕುಟೈರುಷ್ಣೀಷೈಃ ಕಂಕಟೈರ್ಗಣೈಃ ॥ ೪೫ ॥

ಉರಸ್ಯೈರ್ಮಣಿಭಿರ್ನಿಷ್ಕೈಶ್ಚೂಡಾಮಣಿಭಿರೇವ ಚ ।
ಆಸೀದಾಯೋಧನಂ ತತ್ರ ನಭಸ್ತಾರಾಗಣೈರಿವ ॥ ೪೬ ॥

ಕತ್ತರಿಸಲ್ಪಟ್ಟ ಬಾಹುಗಳಿಂದಲೂ, ಪಾದಗಳಿಂದಲೂ, ಮನೋಹರವಾದ ಕುಂಡಲವನ್ನು ಧರಿಸಿದ ಶಿರಸ್ಸಿನಿಂದಲೂ, ಬಿಲ್ಲುಗಳಿಂದಲೂ, ಬಾಣಗಳಿಂದಲೂ, ಪ್ರಾಸಗಳಿಂದಲೂ, ಖಡ್ಗಗಳಿಂದಲೂ, ಪರಶು-ಪಟ್ಟಿಸಗಳಿಂದಲೂ, ನಾಲೀಕ-ಕ್ಷುರ-ನಾರಾಚಗಳಿಂದಲೂ, ನಖರಗಳಿಂದಲೂ, ಶಕ್ತಿ-ತೋಮರಗಳಿಂದಲೂ, ವಿವಿಧಾಕಾರದ ಪ್ರಕಾಶಮಾನವಾದ ಶ್ರೇಷ್ಠವಾದ ಆಯುಧಗಳಿಂದಲೂ, ಆಶ್ಚರ್ಯಕರವೂ, ವಿವಿಧಾಕಾರವುಳ್ಳವೂ ಆದ ಕವಚಗಳಿಂದಲೂ, ವಿಚಿತ್ರವಾದ ಭಗ್ನ ರಥಗಳಿಂದಲೂ, ಹತವಾದ ಗಜಾಶ್ವಗಳಿಂದಲೂ, ನಗರಾಕಾರದಂತಿದ್ದ ಹತರಾದ ಸಾರಥಿ-ರಥಿಕ-ಧ್ವಜಗಳನ್ನು ಹೊಂದಿ ಶೂನ್ಯವಾದ ರಥಗಳಿಂದಲೂ, ಇಲ್ಲಿಂದಲ್ಲಿಗೆ ಎಳೆದಾಡುವ ಮನುಷ್ಯರಹಿತವಾದ ಅಶ್ವಗಳಿಂದಲೂ, ಅಲಂಕೃತವಾದ ಬಹಳ ಗಾಯಗಳನ್ನು ಹೊಂದಿದ ಅನೇಕ ವೀರರಿಂದಲೂ, ವ್ಯಜನಗಳಿಂದಲೂ, ರಥೋಪಕರಣಗಳಿಂದಲೂ, ಕೆಳಗೆ ಬಿದ್ದ ಧ್ವಜಗಳಿಂದಲೂ, ಛತ್ರಗಳಿಂದಲೂ, ಆಭರಣಗಳಿಂದಲೂ, ವಸ್ತ್ರ-ಮಾಲ್ಯಗಳಿಂದಲೂ ಸುಗಂಧಯುಕ್ತವಾದ ಹಾರಗಳಿಂದಲೂ, ಕಿರೀಟಗಳಿಂದಲೂ, ರುಮಾಲುಗಳಿಂದಲೂ, ಸಣ್ಣಘಂಟೆಯ ಸಮೂಹದಿಂದಲೂ, ಎದೆಯಲ್ಲಿ ಧರಿಸಿದ ಮಣಿಗಳಿಂದಲೂ, ಚಿನ್ನದ ಹಾರಗಳಿಂದಲೂ, ಚೂಡಾಮಣಿಗಳಿಂದಲೂ ತುಂಬಿದ ಆ ರಣಭೂಮಿಯು ತಾರಾ ಗಣದಿಂದ ಕೂಡಿದ ಆಕಾಶದಂತೆ ಇದ್ದಿತು.

ತತೋ ದುರ್ಯೋಧನಸ್ಯಾಸೀನ್ನಕುಲೇನ ಸಮಾಗಮಃ ।
ಅಮರ್ಷಿತೇನ ಕ್ರುದ್ಧಸ್ಯ ಕ್ರುದ್ಧೇನಾಮರ್ಷಿತಸ್ಯ ಚ ॥ ೪೭ ॥

ಆಗ ದುರ್ಯೋಧನ ಮತ್ತು ನಕುಲರ ಸಮಾಗಮವುಂಟಾಯಿತು. ರೋಷಾವಿಷ್ಟನಾದವನಿಂದ ಕ್ರುದ್ಧನಿಗೂ, ಕ್ರುದ್ಧನಿಂದ ರೋಷಾವಿಷ್ಟನಾದವನಿಗೂ (ಸಮಾಗಮ ಉಂಟಾಯಿತು).

ಅಪಸವ್ಯಂ ಚಕಾರಾಥ ಮಾದ್ರೀಪುತ್ರಸ್ತವಾತ್ಮಜಮ್ ।
ಕಿರನ್ ಶರಶತೈರ್ಹೃಷ್ಟಸ್ತತ್ರ ನಾದೋ ಮಹಾನಭೂತ್ ॥ ೪೮ ॥

ಮಾದ್ರೀಪುತ್ರನು ನಿನ್ನ ಪುತ್ರನನ್ನು ಸಂತೋಷದಿಂದ ನೂರಾರು ಬಾಣಗಳಿಂದ ಹೊಡೆಯುತ್ತಾ ಅಪಸವ್ಯಗೊಳಿಸಿದನು. ಆಗ ದೊಡ್ಡ ನಾದವುಂಟಾಯಿತು.

ಅಪಸವ್ಯಂ ಕೃತಃ ಸಂಖೇ ಭ್ರಾತೃವ್ಯೇನಾತ್ಯಮರ್ಷಿಣಾ ।
ಸೋಽಮರ್ಷಿತಸ್ತಮಪ್ಯಾಜೌ ಪ್ರತಿಚಕ್ರೇಽಪಸವ್ಯತಃ ॥ ೪೯ ॥

ಅತ್ಯಂತ ರೋಷಯುಕ್ತನಾದ ಶತ್ರುವಿನಿಂದ ರಣರಂಗದಲ್ಲಿ ಅಪಸವ್ಯವನ್ನು ಮಾಡಲ್ಪಟ್ಟ ನಿನ್ನ ಪುತ್ರನೂ ಸಹ ರಣರಂಗದಲ್ಲಿ ಅವನನ್ನು ಅಪಸವ್ಯ ಮಾಡಿದನು.

ತತಃ ಪ್ರತಿಚಿಕೀರ್ಷಂತಮಪಸವ್ಯಂ ತು ತೇ ಸುತಮ್ ।
ನ್ಯವಾರಯತ ತೇಜಸ್ವೀ ನಕುಲಶ್ಚಿತ್ರಮಾರ್ಗವಿತ್ ॥ ೫೦ ॥

ಆಗ ತನಗೆ ಪ್ರತೀಕಾರವನ್ನು ಮಾಡಿ, ಅಪಸವ್ಯವನ್ನು ಮಾಡಲು ಯತ್ನಿಸುತ್ತಿದ್ದ ನಿನ್ನ ಪುತ್ರನನ್ನು ವಿಚಿತ್ರಮಾರ್ಗಗಳನ್ನು ಬಲ್ಲ ತೇಜಸ್ವಿಯಾದ ನಕುಲನು ತಡೆದನು.

ಸರ್ವತೋ ವಿನಿವಾರ್ಯೈನಂ ಶರಜಾಲೇನ ಪೀಡಯನ್ ।
ವಿಮುಖಂ ನಕುಲಶ್ಚಕ್ರೇ ತತ್ ಸೈನ್ಯಾಃ ಸಮಪೂಜಯನ್ ॥ ೫೧ ॥

ನಕುಲನು ಅವನನ್ನು ಎಲ್ಲ ಕಡೆಗಳಿಂದಲೂ ತಡೆಯುತ್ತಾ, ಬಾಣ ಸಮೂಹದಿಂದ ಪೀಡಿಸಿ ಯುದ್ಧವಿಮುಖನನ್ನಾಗಿ ಮಾಡಿದನು. ಅದನ್ನು ಸೈನಿಕರೆಲ್ಲರೂ ಪೂಜಿಸಿದರು.

ತಿಷ್ಠ ತಿಷ್ಠೇತಿ ನಕುಲೋ ಬಭಾಷೇ ತನಯಂ ತವ ।
ಸಂಸ್ಮೃತ್ಯ ಸರ್ವದುಃಖಾನಿ ತವ ದುರ್ಮಂತ್ರಿತೇನ ಚ ॥ ೫೨ ॥

ನಕುಲನು ನಿನ್ನ ದುರ್ಮಂತ್ರಣದಿಂದ ತಾನು ಅನುಭವಿಸಿದ ಎಲ್ಲ ದುಃಖಗಳನ್ನು ಸ್ಮರಿಸಿ ನಿನ್ನ ಪುತ್ರನನ್ನು ಕುರಿತು 'ನಿಲ್ಲು, ನಿಲ್ಲು' ಎಂದು ಹೇಳಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರಿಸಪ್ತತ್ಯಧಿಕಶತತಮೋಽಧ್ಯಾಯಃ ॥

॥ ದ್ರೋಣವಧಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

ದ್ರೋಣಾರ್ಜುನಾದಿಗಳ ಸಂಕುಲಯುದ್ಧ.

ಸಂಜಯಃ

ತತೋ ದುಃಶಾಸನಃ ಕ್ರುದ್ಧಃ ಸಹದೇವಮುಪಾದ್ರವತ್ ।
ರಥವೇಗೇನ ತೀವ್ರೇಣ ಕಂಪಯನ್ನಿವ ಮೇದಿನೀಮ್ ॥ ೧ ॥

ಸಂಜಯ– ಅನಂತರ ಕ್ರುದ್ಧನಾದ ದುಶ್ಶಾಸನನು ತೀವ್ರವಾದ ರಥವೇಗದಿಂದ ಭೂಮಿಯನ್ನು ನಡುಗಿಸುವವನಂತೆ ಸಹದೇವನ ಕಡೆಗೆ ಧಾವಿಸಿದನು.

ತಸ್ಯಾಪತತ ಏವಾಶು ಭಲ್ಲೇನಾಮಿತ್ರಕರ್ಶನಃ ।
ಮಾದ್ರೀಸುತಃ ಶಿರೋ ಯಂತುಃ ಸಶಿರಸ್ತ್ರಾಣಮಚ್ಛಿನತ್ ॥ ೨ ॥

ಅವನು ಬರುತ್ತಿರುವಂತೆಯೇ ಶತ್ರುಕರ್ಶನನಾದ ಮಾದ್ರೀಪುತ್ರನಾದ ಸಹದೇವನು ಒಂದು ಭಲ್ಲದಿಂದ ಅವನ ಸಾರಥಿಯ ಶಿರಸ್ತ್ರಾಣ ಸಹಿತವಾದ ಶಿರಸ್ಸನ್ನು ಶೀಘ್ರವಾಗಿ ಕತ್ತರಿಸಿದನು.

ನೈನಂ ದುಃಶಾಸನಃ ಸೂತಂ ನಾಪಿ ಕಶ್ಚನ ಸೈನಿಕಃ ।
ಹೃತೋತ್ತಮಾಂಗಮಾಶುತ್ವಾತ್ ಸಹದೇವೇನ ಬುದ್ಧವಾನ್ ॥ ೩ ॥

ದುಶ್ಶಾಸನನಾಗಲೀ ಅಥವಾ ಬೇರೆ ಸೈನಿಕನಾಗಲೀ ಸಹದೇವನು ಶೀಘ್ರವಾಗಿ ಸಾರಥಿಯ ಶಿರಸ್ಸನ್ನು ಕತ್ತರಿಸಿದುದನ್ನು ತಿಳಿಯಲಿಲ್ಲ.

ಯದಾ ತ್ವಸಂಗೃಹೀತತ್ವಾತ್ ಪ್ರಯಾಂತ್ಯಶ್ವಾ ಯಥಾಸುಖಮ್ ।
ತತೋ ದುಃಶಾಸನಃ ಸೂತಂ ಬುದ್ಧವಾನ್ ಗತಚೇತಸಮ್ ॥ ೪ ॥

ಕಡಿವಾಣಗಳನ್ನು ಹಿಡಿಯದ ಕಾರಣದಿಂದ ಕುದುರೆಗಳು ಮನಬಂದಂತೆ ಹೋಗಲು ಪ್ರಾರಂಭಿಸಿದಾಗ ಸಾರಥಿಯು ಮೃತನಾಗಿದ್ದಾನೆಂದು ದುಶ್ಶಾಸನನು ತಿಳಿದನು.

ಸ ಹಯಾನ್ ಸನ್ನಿಗೃಹ್ಯಾಜೌ ಸ್ವಯಂ ಹಯವಿಶಾರದಃ ।
ಯುಯುಧೇ ರಥಿನಾಂ ಶ್ರೇಷ್ಠಶ್ಚಿತ್ರಂ ಲಘು ಚ ಸುಷ್ಠು ಚ ॥ ೫ ॥

ಹಯವಿಶಾರದನೂ, ರಥಿಶ್ರೇಷ್ಠನೂ ಆದ ಅವನು ಅವನು ತಾನೇ ಅಶ್ವಗಳನ್ನು ನಿಯಂತ್ರಿಸುತ್ತಾ, ರಣರಂಗದಲ್ಲಿ ಆಶ್ಚರ್ಯಕರವಾಗಿ, ಶೀಘ್ರವಾಗಿ ಮತ್ತು ಬಹಳ ಚೆನ್ನಾಗಿ ಯುದ್ಧವನ್ನು ಮಾಡಿದನು.

ತದಸ್ಯಾಪೂಜಯನ್ ಕರ್ಮ ಸ್ವೇ ಪರೇ ಚೈವ ಸಂಯುಗೇ ।
ಹತಸೂತರಥೇನಾಜೌ ವ್ಯಚರದ್ ಯದಭೀತವತ್ ॥ ೬ ॥

ಸೂತನನ್ನು ಕಳೆದುಕೊಂಡ ರಥದಿಂದ ಅವನು ನಿರ್ಭಯವಾಗಿ ರಣರಂಗದಲ್ಲಿ ಸಂಚರಿಸುವುದನ್ನು ನೋಡಿ ಅವನ ಆ ಕಾರ್ಯವನ್ನು ರಣರಂಗದಲ್ಲಿ ತನ್ನವರೂ ಮತ್ತು ಪರರೂ ಪೂಜಿಸಿದರು.

ಸಹದೇವಸ್ತು ತಾನಶ್ವಾಂಸ್ತೀಕ್ಷ್ಣೈರ್ಬಾಣೈರವಾಕಿರತ್ ।
ಪೀಡ್ಯಮಾನಾಃ ಶರೈಶ್ಚಾಶು ಪ್ರಾದ್ರವಂಸ್ತೇ ತತಸ್ತತಃ ॥ ೭ ॥

ಸಹದೇವನು ಆ ಅಶ್ವಗಳ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಬಾಣಗಳಿಂದ ಪೀಡಿಸಲ್ಪಟ್ಟ ಆ ಅಶ್ವಗಳು ಶೀಘ್ರವಾಗಿ ಎಲ್ಲೆಲ್ಲೋ ಓಡಿಹೋದವು.

ಸ ರಶ್ಮಿಷು ವಿಷಕ್ತತ್ವಾದುತ್ಸಸರ್ಜ ಶರಾಸನಮ್ ।
ಧನುಷಾ ಕರ್ಮ ಕುರ್ವಂಸ್ತು ರಶ್ಮೀನ್ ಸ ಪುನರುತ್ಸೃಜತ್ ॥ ೮ ॥

ದುಶ್ಶಾಸನನು ಕಡಿವಾಣವನ್ನು ಹಿಡಿದುದ್ದರಿಂದ ಧನುಸ್ಸನ್ನು ಬಿಡುತ್ತಿದ್ದನು. ಧನುಸ್ಸಿನಿಂದ ಕಾರ್ಯವನ್ನು ಮಾಡುತ್ತಾ ಪುನಃ ಕಡಿವಾಣವನ್ನು ಬಿಡುತ್ತಿದ್ದನು.

ಛಿದ್ರೇಷು ತೇಷು ತಂ ಬಾಣೈರ್ಮಾದ್ರೀಪುತ್ರೋಽಭ್ಯವಾಕಿರತ್ ।
ಪರೀಪ್ಸಂಸ್ತ್ವತ್ಸುತಂ ಕರ್ಣಸ್ತದಂತರಮವಾಪತತ್ ॥ ೯ ॥

ಆ ಅಂತರಗಳಲ್ಲಿ ಮಾದ್ರೀಪುತ್ರನು ದುಶ್ಶಾಸನನನ್ನು ಬಾಣಗಳಿಂದ ಹೊಡೆದನು. ಈ ಮಧ್ಯದಲ್ಲಿ ನಿನ್ನ ಪುತ್ರನನ್ನು ರಕ್ಷಿಸಲು ಕರ್ಣನು ಶೀಘ್ರವಾಗಿ ಅಲ್ಲಿಗೆ ಬಂದನು.

ವೃಕೋದರಸ್ತತಃ ಕರ್ಣಂ ತ್ರಿಭಿರ್ಭಲ್ಲೈಃ ಸಮಾಹಿತೈಃ ।
ಆಕರ್ಣಪೂರ್ಣೈರಭ್ಯಘ್ನನ್ ಬಾಹ್ವೋರುರಸಿ ಚಾನದತ್ ॥ ೧೦ ॥

ಆಗ ಭೀಮನು ಕಿವಿಯವರೆಗೂ ಪೂರ್ಣವಾಗಿ ಎಳೆದು ಪ್ರಯೋಗಿಸಿದ ಮೂರು ಭಲ್ಲಗಳಿಂದ ಕರ್ಣನನ್ನು ಬಾಹುಗಳಲ್ಲಿ ಮತ್ತು ಎದೆಯಲ್ಲಿ ಹೊಡೆದು ಸಿಂಹನಾದವನ್ನು ಮಾಡಿದನು.

ಸನ್ನ್ಯವರ್ತತ ತಂ ಕರ್ಣಃ ಸಂಘಟ್ಟತ ಇವೋರಗಃ ।
ತದಭೂತ್ ತುಮುಲಂ ಯುದ್ಧಂ ಭೀಮರಾಧೇಯಯೋಸ್ತದಾ॥ ೧೧ ॥

ಕೋಲಿನಿಂದ ಹೊಡೆದ ಸರ್ಪದಂತೆ ಕರ್ಣನು ಭೀಮನ ಕಡೆಗೆ ತಿರುಗಿದನು. ಆಗ ಭೀಮನಿಗೂ ಮತ್ತು ಕರ್ಣನಿಗೂ ತೀವ್ರವಾದ ಯುದ್ಧವಾಯಿತು.

ತೌ ವೃಷಾವಿವ ಸಂಕ್ರುದ್ಧೌ ವಿವೃತ್ತನಯನಾವುಭೌ ।
ವೇಗೇನ ಮಹತಾನ್ಯೋನ್ಯಂ ಸಂರಬ್ಧಾವಭಿಪೇತತುಃ ॥ ೧೨ ॥

ಅವರಿಬ್ಬರೂ ಕೋಪಗೊಂಡ ವೃಷಭಗಳಂತೆ ಕಣ್ಣುಗಳನ್ನರಳಿಸಿ ಕೋಪದಿಂದ ಒಬ್ಬರ ಮೇಲೊಬ್ಬರು ಬಹಳ ವೇಗದಿಂದ ಬಿದ್ದರು.

ಅಭಿಸಂಶ್ಲಿಷ್ಟಯೋಸ್ತತ್ರ ತಯೋರಾಹವಶೌಂಡಯೋಃ ।
ವಿಚ್ಛಿನ್ನಶರಪಾತತ್ವಾದ್ ಗದಾಯುದ್ಧಮವರ್ತತ ॥ ೧೩ ॥

ಪರಸ್ಪರವಾಗಿ ಸಂಶ್ಲಿಷ್ಟಗೊಂಡ ಯುದ್ಧವಿಶಾರದರಾದ ಅವರಿಬ್ಬರಿಗೆ ಬಾಣಗಳು ವಿಚ್ಛಿನ್ನವಾದ ಕಾರಣದಿಂದ ಗದಾಯುದ್ಧವು ಜರುಗಿತು.

ಗದಯಾ ಭೀಮಸೇನಸ್ತು ಕರ್ಣಸ್ಯ ರಥಕೂಬರಮ್ ।
ಬಿಭೇದಾಶು ತದಾ ರಾಜಂಸ್ತದದ್ಭುತಮಿವಾಭವತ್ ॥ ೧೪ ॥

ಎಲೈ ರಾಜನೇ, ಆಗ ಭೀಮನು ಗದೆಯಿಂದ ಕರ್ಣನ ರಥದ ಕೂಬರವನ್ನು ಭಗ್ನಗೊಳಿಸಿದನು. ಅದು ಅದ್ಭುತವಾಗಿದ್ದಿತು.

ತತೋ ಭೀಮಸ್ಯ ರಾಧೇಯೋ ಗದಾಮಾದಾಯ ವೀರ್ಯವಾನ್ ।
ಅವಾಸೃಜದ್ ರಥೇ ತಾಂ ತು ಬಿಭೇದ ಗದಯಾ ಗದಾಮ್ ॥ ೧೫ ॥

ಆಗ ಪರಾಕ್ರಮಶಾಲಿಯಾದ ಕರ್ಣನು ಗದೆಯನ್ನು ತೆಗೆದುಕೊಂಡು ಅದನ್ನು ಭೀಮನ ರಥದ ಮೇಲೆ ಎಸೆದು ಭೀಮನ ಗದೆಯನ್ನು ಭಗ್ನಗೊಳಿಸಿದನು.

ತತೋ ಭೀಮಃ ಪುನರ್ಗುರ್ವೀಂ ಚಿಕ್ಷೇಪಾಧಿರಥೇರ್ಗದಾಮ್ ।
ತಾಂ ಶರೈರ್ದಶಭಿಃ ಕರ್ಣಃ ಸುಪುಂಖೈಃ ಸುಸಮಾಹಿತೈಃ ।
ಪ್ರತ್ಯವಿಧ್ಯತ್ಪುನಶ್ಚಾನ್ಯೈಃ ಸಾ ಭೀಮಂ ಪುನರಾವ್ರಜತ್ ॥ ೧೬ ॥

ಅನಂತರ ಭೀಮನು ಇನ್ನೊಂದು ಭಾರವಾದ ಗದೆಯನ್ನು ತೆಗೆದುಕೊಂಡು ಕರ್ಣನ ಮೇಲೆ ಎಸೆದನು. ಕರ್ಣನು ಒಳ್ಳೆಯ ಪುಂಖಗಳನ್ನು ಹೊಂದಿದ್ದ, ಚೆನ್ನಾಗಿ ಪ್ರಯೋಗಿಸಲ್ಪಟ್ಟ ಹತ್ತು ಬಾಣಗಳಿಂದ ಹೊಡೆದು, ಪುನಃ ಬೇರೆ ಬಾಣಗಳಿಂದಲೂ ಹೊಡೆದನು. ಆ ಗದೆಯು ಪುನಃ ಭೀಮನ ಬಳಿಗೆ ಬಂದಿತು.

ತಸ್ಯಾಃ ಪ್ರತಿನಿಪಾತೇನ ಭೀಮಸ್ಯ ವಿಪುಲೋ ಧ್ವಜಃ ।
ಪಪಾತ ಸಾರಥಿಶ್ಚಾಸ್ಯ ಮುಮೋಹ ಗದಯಾ ಹತಃ ॥ ೧೭ ॥

ಭೀಮನ ಗದೆಯು ಹಿಂದಿರುಗಿ ಬಂದಾಗ ಭೀಮನ ರಥದ ವಿಸ್ತಾರವಾದ ಧ್ವಜವು ಕೆಳಗೆ ಬಿದ್ದಿತು. ಅವನ ಸಾರಥಿಯು ಗದೆಯಿಂದ ಹೊಡೆಯಲ್ಪಟ್ಟು ಮೂರ್ಛಿತನಾದನು.

ಸ ಕರ್ಣೇ ಸಾಯಕಾನಷ್ಟೌ ವ್ಯಸೃಜತ್ ಕ್ರೋಧಮೂರ್ಚ್ಛಿತಃ ।
ಧ್ವಜೇ ಶರಾಸನೇ ಚೈವ ಶರಾವಾಪೇ ಚ ಭಾರತ ॥ ೧೮ ॥

ಎಲೈ ಭಾರತನೇ, ಕ್ರೋಧಮೂರ್ಛಿತನಾದ ವೃಕೋದರನು ಕರ್ಣನ ಮೇಲೆ ಎಂಟು ಬಾಣಗಳನ್ನು ಪ್ರಯೋಗಿಸಿ, ಅವನ ಧ್ವಜವನ್ನು, ಧನುಸ್ಸನ್ನು ಮತ್ತು ಬತ್ತಳಿಕೆಯನ್ನು ಭಗ್ನಗೊಳಿಸಿದನು.

ತತಃ ಪುನಸ್ತು ರಾಧೇಯೋ ಹಯಾನಸ್ಯ ರಥೇಷುಭಿಃ ।
ಋಷ್ಯವರ್ಣಾನ್ ಜಘಾನಾಶು ತಥೋಭೌ ಪಾರ್ಷ್ಣಿಸಾರಥೀ ॥ ೧೯ ॥

ಆಗ ಪುನಃ ಕರ್ಣನು ರಥಬಾಣಗಳಿಂದ ಭೀಮಸೇನನ ರಥದ ಜಿಂಕೆಯ ಬಣ್ಣದ ಕುದುರೆಗಳನ್ನು ಮತ್ತು ಇಬ್ಬರು ಪಾರ್ಷ್ಣಿಸಾರಥಿಗಳನ್ನು ಶೀಘ್ರವಾಗಿ ಕೊಂದನು.

ಸ ವಿಪನ್ನರಥೋ ಭೀಮೋ ನಕುಲಸ್ಯಾಪ್ಲುತೋ ರಥಮ್ ।
ಹರಿರ್ಯಥಾ ಗಿರೇಃ ಶೃಂಗಂ ಸಮಾಕ್ರಾಮದರಿಂದಮಃ ॥ ೨೦ ॥

ರಥವನ್ನು ಕಳೆದುಕೊಂಡ ಆ ಅರಿಂದಮನಾದ ಭೀಮನು ಸಿಂಹವು ಪರ್ವತದ ಶಿಖರಕ್ಕೆ ಹಾರಿದಂತೆ ನಕುಲನ ರಥಕ್ಕೆ ಹಾರಿದನು.

ತಥಾ ದ್ರೋಣಾರ್ಜುನೌ ಚಿತ್ರಮಯುದ್ಧ್ಯೇತಾಂ ಮಹಾರಥೌ ।
ಆಚಾರ್ಯಶಿಷ್ಯೌ ರಾಜೇಂದ್ರ ಕೃತಪ್ರಹರಣೌ ಯುಧಿ ॥ ೨೧ ॥

ಎಲೈ ರಾಜೇಂದ್ರನೇ, ಆ ರೀತಿಯಲ್ಲಿ ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತೀಕಾರವನ್ನು ಮಾಡುವ ಮಹಾರಥರಾದ ಆಚಾರ್ಯ ಮತ್ತು ಶಿಷ್ಯನಾದ ದ್ರೋಣಾರ್ಜುನರು ಆಶ್ಚರ್ಯಕರವಾಗಿ ಯುದ್ಧವನ್ನು ಮಾಡಿದರು.

ಲಘುಸಂಧಾನಯೋಗಾಭ್ಯಾಂ ರಥಯೋಶ್ಚ ರಣೇನ ಚ ।
ಮೋಹಯಂತೌ ಮನುಷ್ಯಾಣಾಂ ಚಕ್ಷೂಂಷಿ ಚ ಮನಾಂಸಿ ಚ ॥ ೨೨ ॥

ರಥಗಳ ಸಂಚಾರದಿಂದ ಅವರು ಶೀಘ್ರವಾಗಿ ಒಬ್ಬರನ್ನೊಬ್ಬರು ಸಮೀಪಿಸಿ ಸಂಸಕ್ತರಾಗಿ ಮನುಷ್ಯರ ಕಣ್ಣುಗಳನ್ನು ಮತ್ತು ಮನಸ್ಸುಗಳನ್ನು ಮೋಹಗೊಳಿಸಿದರು.

ಉಪಾರಮಂತ ತೇ ಸರ್ವೇ ಯೋಧಾಸ್ಮಾಕಂ ಪರೇ ತಥಾ ।
ಅದೃಷ್ಟಪೂರ್ವಂ ಪಶ್ಯಂತಸ್ತದ್ಯುದ್ಧಂ ಗುರುಶಿಷ್ಯಯೋಃ ॥ ೨೩ ॥

ಹಿಂದೆ ಎಂದೂ ನೋಡದಿದ್ದಂತಹ ಗುರು-ಶಿಷ್ಯರ ಆ ಯುದ್ಧವನ್ನು ನೋಡುತ್ತಾ ನಮ್ಮ ಮತ್ತು ಪರರ ಯೋಧರೆಲ್ಲರೂ ಯುದ್ಧವನ್ನು ನಿಲ್ಲಿಸಿದರು.

ವಿಚಿತ್ರಾನ್ ಪೃತನಾಮಧ್ಯೇ ರಥಮಾರ್ಗಾನುದೀರ್ಯತಃ ।
ಅನ್ಯೋನ್ಯಮಪಸವ್ಯಂ ಚ ಕರ್ತುಂ ವೀರೌ ತದೈಪತುಃ ।
ಪರಾಕ್ರಮಂ ತಯೋರ್ಯೋಧಾ ದದೃಶುಸ್ತಂ ಸುವಿಸ್ಮಿತಾಃ ॥ ೨೪ ॥

ರಣರಂಗದ ಮಧ್ಯದಲ್ಲಿ ವಿಚಿತ್ರವಾದ ರಥಮಾರ್ಗಗಳಲ್ಲಿ ಸಂಚರಿಸುತ್ತಾ ವೀರರಾದ ಅವರಿಬ್ಬರು ಪರಸ್ಪರವಾಗಿ ಅಪಸವ್ಯವನ್ನು ಮಾಡಲು ಬಯಸಿದರು. ಉಳಿದ ಯೋಧರು ಆಶ್ಚರ್ಯಚಕಿತರಾಗಿ ಅವರ ಪರಾಕ್ರಮವನ್ನು ನೋಡಿದರು.

ತಯೋಃ ಸಮಭವದ್ ಯುದ್ಧಂ ದ್ರೋಣಪಾಂಡವಯೋರ್ಮಹತ್ ।
ಆಮಿಷಾರ್ಥಂ ಮಹಾರಾಜ ಗಗನೇ ಶ್ಯೇನಯೋರಿವ ॥ ೨೫ ॥

ಎಲೈ ಮಹಾರಾಜನೇ, ಮಾಂಸದ ತುಂಡಿನ ಸಲುವಾಗಿ ಆಕಾಶದಲ್ಲಿ ಹೋರಾಡುವ ಗಿಡುಗಗಳಂತೆ ದ್ರೋಣಾರ್ಜುನರ ಯುದ್ಧವು ಬಹಳ ದೊಡ್ಡದಾಗಿದ್ದಿತು.

ಯದ್ಯಚ್ಚಕಾರ ದ್ರೋಣಸ್ತು ಕುಂತೀಪುತ್ರಜಿಗೀಷಯಾ ।
ತತ್ತತ್ ಪ್ರತಿಜಘಾನಾಶು ಪ್ರಹಸಂಸ್ತಸ್ಯ ಪಾಂಡವಃ ॥ ೨೬ ॥

ಕುಂತೀಪುತ್ರನಾದ ಅರ್ಜುನನನ್ನು ಗೆಲ್ಲಲು ಬಯಸಿ ದ್ರೋಣರು ಏನೇನು ಮಾಡಿದರೋ ಅದೆಲ್ಲದಕ್ಕೂ ಪಾಂಡುಪುತ್ರನಾದ ಅರ್ಜುನನು ನಗುತ್ತಲೇ ಶೀಘ್ರವಾಗಿ ಪ್ರತಿಘಾತವನ್ನು ಮಾಡಿದನು.

ಯದಾ ದ್ರೋಣೋ ನ ಶಕ್ನೋತಿ ಪಾಂಡವಸ್ಯ ವಿಶೇಷಣೇ ।
ತತಃ ಪ್ರಾದುಶ್ಚಕಾರಾಸ್ತ್ರಮಸ್ತ್ರಮಾರ್ಗವಿಶಾರದಃ ॥ ೨೭ ॥

ದ್ರೋಣರಿಗೆ ಅರ್ಜುನನನ್ನು ಮೀರಿಸಲು ಸಾಧ್ಯವಾಗದಿದ್ದಾಗ ಅಸ್ತ್ರಮಾರ್ಗ ವಿಶಾರದರಾದ ಅವರು ಅಸ್ತ್ರಗಳನ್ನು ಪ್ರಾದುರ್ಭಾವಗೊಳಿಸಿದರು.

ಐಂದ್ರಂ ಪಾಶುಪತಂ ತ್ವಾಷ್ಟ್ರಂ ವಾಯವ್ಯಮಥ ವಾರುಣಮ್ ।
ಮುಕ್ತಂ ಮುಕ್ತಂ ದ್ರೋಣಚಾಪಾತ್ ತಜ್ಜಘಾನ ಧನಂಜಯಃ ॥ ೨೮ ॥

ಐಂದ್ರ, ಪಾಶುಪತ, ತ್ವಾಷ್ಟ್ರ, ವಾಯವ್ಯ, ವಾರುಣ- ಹೀಗೆ ದ್ರೋಣರ ಬಿಲ್ಲಿನಿಂದ ಪ್ರಯೋಗಿಸಲ್ಪಟ್ಟ ಅಸ್ತ್ರಗಳೆಲ್ಲವನ್ನೂ ಧನಂಜಯನು ನಾಶಪಡಿಸಿದನು.

ಅಸ್ತ್ರಾಣ್ಯಸ್ತ್ರೈರ್ಯದಾ ತಸ್ಯ ವಿಧಿವದ್ಧಂತಿ ಪಾಂಡವಃ ।
ತತೋಽಸ್ತ್ರೈಃ ಪರಮೈರ್ದಿವ್ಯೈರ್ದ್ರೋಣಃ ಪಾರ್ಥಮವಾಕಿರತ್ ॥೨೯॥

ತಮ್ಮ ಅಸ್ತ್ರಗಳನ್ನು ಅರ್ಜುನನು ಶಾಸ್ತ್ರೋಕ್ತ ಮಾರ್ಗದಿಂದ ತನ್ನ ಅಸ್ತ್ರಗಳಿಂದ ವಿನಾಶಗೊಳಿಸುತ್ತಿರಲು ದ್ರೋಣರು ಅರ್ಜುನನ ಮೇಲೆ ಅವುಗಳಿಗಿಂತ ಹೆಚ್ಚಿನ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು.

ಯದ್ಯದಸ್ತ್ರಂ ಸ ಪಾರ್ಥಾಯ ಪ್ರಯುಂಕ್ತೇ ವಿಜಿಗೀಷಯಾ ।
ತಸ್ಯಾಸ್ತ್ರಸ್ಯ ವಿಘಾತಾರ್ಥಂ ತತ್ತತ್ ಸ ಕುರುತೇಽರ್ಜುನಃ ॥ ೩೦ ॥

ಅರ್ಜುನನನ್ನು ಗೆಲ್ಲುವ ಆಸೆಯಿಂದ ದ್ರೋಣರು ಯಾವ ಯಾವ ಅಸ್ತ್ರಗಳನ್ನು ಪ್ರಯೋಗಿಸುತ್ತಾರೆಯೋ ಅರ್ಜುನನು ಆಯಾ ಅಸ್ತ್ರಗಳ ವಿಘಾತಕ್ಕಾಗಿ ಮಾಡಬೇಕಾದ ಆಯಾ ಕಾರ್ಯವನ್ನು ಮಾಡಿದನು.

ಸ ವಧ್ಯಮಾನೇಷ್ವಸ್ತ್ರೇಷು ದಿವ್ಯೇಷ್ವಪಿ ಯಥಾವಿಧಿ ।
ಅರ್ಜುನೇನಾರ್ಜುನಂ ದ್ರೋಣೋ ಮನಸೈವಾಭ್ಯಪೂಜಯತ್ ॥೩೧॥

ತಮ್ಮ ದಿವ್ಯಾಸ್ತ್ರಗಳು ಶಾಸ್ತ್ರೋಕ್ತ ರೀತಿಯಿಂದ ಅರ್ಜುನನಿಂದ ನಾಶಿಸಲ್ಪಡುತ್ತಿರಲು ದ್ರೋಣರು ಮನಸ್ಸಿನಿಂದಲೇ ಅರ್ಜುನನನ್ನು ಪೂಜಿಸಿದರು.

ಮೇನೇ ಚಾತ್ಮಾನಮಧಿಕಂ ಪೃಥಿವ್ಯಾಮಪಿ ಭಾರತ ।
ತೇನ ಶಿಷ್ಯೇಣ ಸರ್ವೇಭ್ಯಃ ಶಸ್ತ್ರವಿದ್ಭ್ಯಃ ಸಮಂತತಃ ॥ ೩೨ ॥

ಎಲೈ ಭಾರತನೇ, ಅಂತಹ ಶಿಷ್ಯನನ್ನು ಹೊಂದಿದ ತಾವು ಎಲ್ಲ ಶಸ್ತ್ರಜ್ಞರಿಗಿಂತಲೂ ಭೂಮಿಯಲ್ಲಿ ಅಧಿಕರಾದವರೆಂದು ತಿಳಿದರು.

ವಾರ್ಯಮಾಣಸ್ತು ಪಾರ್ಥೇನ ತಥಾ ಮಧ್ಯೇ ಮಹಾತ್ಮನಾಮ್ ।
ಯತಮಾನೋऽರ್ಜುನಂ ಪ್ರೀತ್ಯಾ ಪ್ರತ್ಯವಾರಯದುತ್ತಮಾನ್ ॥೩೩॥

ಮಹಾತ್ಮರ ಮಧ್ಯದಲ್ಲಿ ಅರ್ಜುನನಿಂದ ಆ ರೀತಿಯಲ್ಲಿ ನಿವಾರಿಸಲ್ಪಡುತ್ತಿದ್ದರೂ ಅವರು ಪ್ರಯತ್ನವನ್ನು ಮಾಡಿ ನಗುತ್ತಾ ಪ್ರೀತಿಯಿಂದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಿ ಅರ್ಜುನನನ್ನು ನಿವಾರಿಸಿದರು.

ತತೋऽಂತರಿಕ್ಷೇ ದೇವಾಶ್ಚ ಗಂಧರ್ವಾಶ್ಚ ಸಹಸ್ರಶಃ ।
ಋಷಯಃ ಸಿದ್ಧಸಂಘಾಶ್ಚ ವ್ಯತಿಷ್ಠಂತ ದಿದೃಕ್ಷಯಾ ॥ ೩೪ ॥

ಆಗ ಆ ಯುದ್ಧವನ್ನು ನೋಡಲು ಅಂತರಿಕ್ಷದಲ್ಲಿ ದೇವತೆಗಳು, ಗಂಧರ್ವರು, ಋಷಿಗಳು, ಸಿದ್ಧರು ಸಹಸ್ರಾರು ಸಂಖ್ಯೆಯಲ್ಲಿ ಬಂದುನಿಂತರು.

ತದಪ್ಸರೋಭಿರಾಕೀರ್ಣಂ ಯಕ್ಷರಾಕ್ಷಸಸಂಕುಲಮ್ ।
ಶ್ರೀಮದಾಕಾಶಮಭವದ್ ಭೂಯೋ ಮೇಘಾಕುಲಂ ಯಥಾ ॥ ೩೫ ॥

ಅಪ್ಸರೆಯರಿಂದ ತುಂಬಿಹೋದ, ಯಕ್ಷ-ರಾಕ್ಷಸರಿಂದ ನಿಬಿಡವಾದ ಕಾಂತಿಯುಕ್ತವಾದ ಆ ಆಕಾಶವು ಬಹಳ ಮೇಘಗಳಿಂದ ತುಂಬಿರುವಂತೆ ಕಂಡುಬಂದಿತು.

ತತ್ರ ಸ್ಮಾಂತರ್ಹಿತಾ ವಾಚೋ ವ್ಯಚರಂತ ಪುನಃ ಪುನಃ ।
ದ್ರೋಣಸ್ಯ ಸ್ತವಸಂಯುಕ್ತಾಃ ಪಾರ್ಥಸ್ಯ ಚ ಮಹಾತ್ಮನಃ ।
ವಿಸೃಜ್ಯಮಾನೇಷ್ವಸ್ತ್ರೇಷು ಜ್ವಾಲಯತ್ಸು ದಿಶೋ ದಶ ॥ ೩೬ ॥

ಆಗ ಅಸ್ತ್ರಗಳು ಪ್ರಯೋಗಿಸಲ್ಪಡುತ್ತಿರಲು, ಹತ್ತುದಿಕ್ಕುಗಳೂ ಜ್ವಲಿಸುತ್ತಿರಲು ದ್ರೋಣರ ಪ್ರಶಂಸಾರೂಪವಾದ, ಹಾಗೆಯೇ ಅರ್ಜುನನ ಪ್ರಶಂಸಾರೂಪವಾದ ಅಂತರ್ಹಿತವಾದ (ಅದೃಶ್ಯವಾದ) ಮಾತುಗಳು ಅಲ್ಲಲ್ಲಿ ಪುನಃ ಕೇಳಿಬಂದವು.

ನೈವೇದಂ ಮಾನುಷಂ ಯುದ್ಧಂ ನಾಸುರಂ ನ ಚ ರಾಕ್ಷಸಮ್ ।
ನ ದೈವಂ ನ ಚ ಗಾಂಧರ್ವಂ ಬ್ರಾಹ್ಮಂ ಧ್ರುವಮಿದಂ ಪರಮ್ ।
ವಿಚಿತ್ರಮಿದಮಾಶ್ಚರ್ಯಂ ನ ನೋ ದೃಷ್ಟಂ ನ ಚ ಶ್ರುತಮ್ ॥ ೩೭ ॥

ಇದು ಮನುಷ್ಯರ ಯುದ್ಧವಲ್ಲ, ಅಸುರ ಯುದ್ಧವಲ್ಲ, ರಾಕ್ಷಸ ಯುದ್ಧವಲ್ಲ, ದೇವಯುದ್ಧವಲ್ಲ, ಗಂಧರ್ವ ಯುದ್ಧವಲ್ಲ, ಬ್ರಹ್ಮ ಯುದ್ಧವಲ್ಲ. ಇದು ಅವೆಲ್ಲವನ್ನೂ ಮೀರಿಸಿದುದೂ, ವಿಚಿತ್ರವೂ ಮತ್ತು ಆಶ್ಚರ್ಯಕರವೂ ಆದುದು. ಇಂತಹ ಯುದ್ಧವನ್ನು ನಾವು ನೋಡಿಯೂ ಇರಲಿಲ್ಲ, ಕೇಳಿಯೂ ಇರಲಿಲ್ಲ.

ಅತಿ ಪಾಂಡವಮಾಚಾರ್ಯೋ ದ್ರೋಣಂ ಚಾಪ್ಯತಿ ಪಾಂಡವಃ ।
ನಾನಯೋರಂತರಂ ದ್ರಷ್ಟುಂ ಶಕ್ಯಮಸ್ತ್ರೇಣ ಕೇನಚಿತ್ ॥ ೩೮ ॥

ಆಚಾರ್ಯರು ಪಾಂಡವನನ್ನು ಮೀರಿಸುತ್ತಾರೆ, ಪಾಂಡವನು ಆಚಾರ್ಯರನ್ನು ಮೀರಿಸುತ್ತಾನೆ. ಅಸ್ತ್ರದ ವಿಷಯದಲ್ಲಿ ಇವರಿಬ್ಬರಲ್ಲಿ ಯಾವನೂ ಯಾವ ಅತಿಶಯವನ್ನು ಕಾಣಲು ಸಾಧ್ಯವಿಲ್ಲ.

ಯದಿ ರುದ್ರೋ ದ್ವಿಧಾಕೃತ್ಯ ಯುದ್ಧ್ಯೇತಾತ್ಮಾನಮಾತ್ಮನಾ ।
ತತ್ರ ಶಕ್ಯೋಪಮಾ ಕರ್ತುಮನ್ಯತ್ರ ತು ನ ವಿದ್ಯತೇ ॥ ೩೯ ॥

ರುದ್ರದೇವರೇ ಎರಡು ಶರೀರಗಳನ್ನು ತೆಗೆದುಕೊಂಡು ತಮ್ಮ ಜೊತೆಯಲ್ಲಿ ತಾವು ಯುದ್ಧವನ್ನು ಮಾಡಿದರೆ ಅದನ್ನು ಇದಕ್ಕೆ ಉಪಮಾನವನ್ನಾಗಿ ಕೊಡಬಹುದು. ಬೇರೆ ಯಾವುದನ್ನೂ ಕೊಡಲು ಸಾಧ್ಯವಿಲ್ಲ.

ಜ್ಞಾನಮೇಕಸ್ಥಮಾಚಾರ್ಯೇ ಜ್ಞಾನಂ ಯೋಗಶ್ಚ ಪಾಂಡವೇ ।
ಶೌರ್ಯಮೇಕಸ್ಥಮಾಚಾರ್ಯೇ ಬಲಂ ಶೌರ್ಯಂ ಚ ಪಾಂಡವೇ ॥೪೦॥

ಆಚಾರ್ಯರಲ್ಲಿ ಜ್ಞಾನವು ಒಂದೇ ಕಡೆಯಲ್ಲಿ ನೆಲೆಸಿದೆ. ಅರ್ಜುನನಲ್ಲಿ ಜ್ಞಾನವು ಮತ್ತು ಯೋಗವು (ಉಪಾಯವು) ನೆಲೆಸಿವೆ. ಶೌರ್ಯವು ಆಚಾರ್ಯರಲ್ಲಿ ಪೂರ್ಣವಾಗಿ ನೆಲೆಸಿದೆ. ಅರ್ಜುನನಲ್ಲಿ ಶೌರ್ಯವು ಮತ್ತು ಬಲವು ನೆಲೆಸಿವೆ.

ನೇಮೌ ಶಕ್ಯೌ ಮಹೇಷ್ವಾಸೌ ರಣೇ ಕ್ಷೇಪಯಿತುಂ ಪರೈಃ ।
ಇಚ್ಛಮಾನೌ ಪುನರಿಮೌ ಹನ್ಯೇತಾಂ ಸಾಮರಂ ಜಗತ್ ॥ ೪೧ ॥

ಯುದ್ಧದಲ್ಲಿ ಇನ್ನೊಬ್ಬರು ಇವರಿಬ್ಬರನ್ನು ಸೋಲಿಸಲು ಸಾಧ್ಯವಿಲ್ಲ. ಇವರಿಬ್ಬರು ಬಯಸಿದರೆ ದೇವತೆಗಳಿಂದ ಸಹಿತವಾದ ಜಗತ್ತನ್ನೇ ಕೊಂದಾರು.

ಇತ್ಯಬ್ರುವನ್ ಮಹಾರಾಜ ದೃಷ್ಟ್ವಾ ತೌ ಪುರುಷರ್ಷಭೌ ।
ಅಂತರ್ಹಿತಾನಿ ಭೂತಾನಿ ಪ್ರಕಾಶಾನಿ ಚ ಸಂಘಶಃ ॥ ೪೨ ॥

ಎಲೈ ಮಹಾರಾಜನೇ, ಆ ಇಬ್ಬರು ಪುರುಷಶ್ರೇಷ್ಠರನ್ನು ನೋಡಿ ಅಂತರ್ಧಾನವನ್ನು ಹೊಂದಿದ ಭೂತಗಳು ಮತ್ತು ಕಣ್ಣಿಗೆ ಕಾಣುವ ದೇವತಾದಿಗಳು ಈ ರೀತಿಯಲ್ಲಿ ಗುಂಪು ಗುಂಪುಗಳಲ್ಲಿ ಮಾತನಾಡಿಕೊಂಡರು.

ತತೋ ದ್ರೋಣೋ ಬ್ರಾಹ್ಮಮಸ್ತ್ರಂ ಪ್ರಾದುಶ್ಚಕ್ರೇ ಮಹಾಮತಿಃ ।
ಸಂತಾಪಯನ್ ರಣೇ ಪಾರ್ಥಂ ಭೂತಾನ್ಯಂತರ್ಹಿತಾನಿ ಚ ॥ ೪೩ ॥

ಆಗ ಮಹಾಬುದ್ಧಿಯುಳ್ಳ ದ್ರೋಣರು ರಣರಂಗದಲ್ಲಿ ಅರ್ಜುನನನ್ನು ಮತ್ತು ಅಂತರ್ಧಾನವನ್ನು ಹೊಂದಿದ ಭೂತಗಳನ್ನು ತಾಪಗೊಳಿಸುತ್ತಾ ಬ್ರಹ್ಮಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದರು.

ತತಶ್ಚಾಲ ಪೃಥಿವೀ ಸಪರ್ವತವನದ್ರುಮಾ ।
ವವೌ ಚ ವಿಷಮೋ ವಾಯುಃ ಸಾಗರಾಶ್ಚಾಪಿ ಚುಕ್ಷುಭುಃ ॥ ೪೪ ॥

ಆಗ ಪರ್ವತ, ವನ, ವೃಕ್ಷಗಳಿಂದ ಕೂಡಿದ ಭೂಮಿಯು ನಡುಗಿತು. ವಾಯುವು ವಿಷಮವಾಗಿ ಬೀಸಿತು. ಸಾಗರಗಳು ಕ್ಷೋಭೆಗೊಂಡವು.

ತತಸ್ತಾಸ್ತೋ ಮಹಾನಾಸೀತ್ ಕುರುಪಾಂಡವಸೇನಯೋಃ ।
ಸರ್ವೇಷಾಂ ಚೈವ ಭೂತಾನಾಮುದ್ಯತೇऽಸ್ತ್ರೇ ಮಹಾತ್ಮನಾ ॥ ೪೫ ॥

ಮಹಾತ್ಮರಾದ ದ್ರೋಣರು ಆ ಅಸ್ತ್ರವನ್ನು ಪ್ರಯೋಗಿಸುತ್ತಿರಲು ಕುರು-ಪಾಂಡವ ಸೈನ್ಯದಲ್ಲಿ ಎಲ್ಲರಿಗೂ ದೊಡ್ಡ ತ್ರಾಸವುಂಟಾಯಿತು.

ತತಃ ಪಾರ್ಥೋಽಪ್ಯಸಂಭ್ರಾಂತಸ್ತದಸ್ತ್ರಂ ಪ್ರತಿಜಘ್ನಿವಾನ್ ।
ಬ್ರಹ್ಮಾಸ್ತ್ರೇಣೈವ ರಾಜೇಂದ್ರ ತತಃ ಸರ್ವಮಶೀಶಮತ್ ॥ ೪೬ ॥

ಎಲೈ ರಾಜೇಂದ್ರನೇ, ಆಗ ಅರ್ಜುನನೂ ಸಹ ಗಾಬರಿಗೊಳ್ಳದೆ ಬ್ರಹ್ಮಾಸ್ತ್ರದಿಂದಲೇ ದ್ರೋಣರ ಅಸ್ತ್ರವನ್ನು ಪ್ರತಿಯಾಗಿ ಹೊಡೆದನು. ಆಗ ಎಲ್ಲವೂ ಶಾಂತವಾಯಿತು.

ಯದಾ ನ ಗಮ್ಯತೇ ಪಾರಂ ತಯೋರನ್ಯತರಸ್ಯ ವಾ ।
ತತಃ ಸಂಕುಲಯುದ್ಧೇನ ತದ್ ಯುದ್ಧಂ ವ್ಯಾಕುಲೀಕೃತಮ್ ॥ ೪೭ ॥

ಅವರಿಬ್ಬರಲ್ಲಿ ಯಾರೊಬ್ಬರೂ ಇನ್ನೊಬ್ಬರನ್ನು ಮೀರಿ ಹೋಗಲು ಸಾಧ್ಯವಿಲ್ಲದಿದ್ದಾಗ ಸಂಕುಲ ಯುದ್ಧದಿಂದ ಎಲ್ಲವೂ ಮಿಶ್ರಿತವಾಯಿತು.

ನಾಜ್ಞಾಯತ ತತಃ ಕಿಂಚಿತ್ ಪುನರೇವ ವಿಶಾಂಪತೇ ।
ಪ್ರವತ್ತೇ ತುಮುಲೇ ಯುದ್ಧೇ ದ್ರೋಣಪಾಂಡವಯೋರ್ಮೃಧೇ॥ ೪೮ ॥

ಎಲೈ ರಾಜನೇ, ರಣರಂಗದಲ್ಲಿ ದ್ರೋಣ-ಪಾಂಡವರಿಗೆ ತೀವ್ರವಾದ ಯುದ್ಧವು ಪ್ರವೃತ್ತವಾದಾಗ ಯಾವುದೂ ತಿಳಿಯಲಿಲ್ಲ.

ಶರಜಾಲೈಃ ಸಮಾಕೀರ್ಣೇ ಮೇಘಜಾಲೈರಿವಾಂಬರೇ ।
ನ ಸ್ಮ ಸಂಪತತೇ ಕಶ್ಚಿದಂತರಿಕ್ಷಚರಸ್ತದಾ ॥ ೪೯ ॥

ಆಕಾಶವು ಮೇಘಜಾಲಗಳಿಂದ ತುಂಬಿದಂತೆ ಬಾಣಗಳ ಜಾಲದಿಂದ ತುಂಬಿದಾಗ ಅಂತರಿಕ್ಷದಲ್ಲಿ ಚಲಿಸುವ ಯಾವ ಪ್ರಾಣಿಯಾಗಲೀ ಅಥವಾ ಪಕ್ಷಿಯಾಗಲೀ ಚಲಿಸಲಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುಃಸಪ್ತತ್ಯಧಿಕಶತತಮೋಽಧ್ಯಾಯಃ ॥

॥ ದ್ರೋಣವಧಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

ಸಾತ್ಯಕಿ-ದುರ್ಯೋಧನಾದಿಗಳ ಯುದ್ಧ.
ಕೃಷ್ಣನ ಪ್ರೇರಣೆಯಂತೆ ಯುಧಿಷ್ಠಿರನಿಂದ 'ಅಶ್ವತ್ಥಾಮಾ ಹತಃ' ಎಂಬ ವಚನ.
ಋಷಿಗಳಿಂದ ದ್ರೋಣರ ಆಹ್ವಾನ. ದ್ರೋಣರಿಗೆ ದಿವ್ಯಾಸ್ತ್ರಗಳ ವಿಸ್ಮರಣೆ.
ದ್ರೋಣರಥಕ್ಕೆ ಬಂದ ಧೃಷ್ಟದ್ಯುಮ್ನನ ಪರಾಕ್ರಮ.

ಸಂಜಯಃ

ತಸ್ಮಿಂಸ್ತಥಾ ವರ್ತಮಾನೇ ನರಾಶ್ವಗಜಸಂಕ್ಷಯೇ ।
ದುಃಶಾಸನೋ ಮಹಾರಾಜ ಧೃಷ್ಟದ್ಯುಮ್ನಮಯೋಧಯತ್ ॥ ೧ ॥

ಸಂಜಯ– ಎಲೈ ಮಹಾರಾಜನೇ, ನರಾಶ್ವ-ಗಜಗಳ ಸಂಕ್ಷಯವು ಹಾಗೆ ನಡೆಯುತ್ತಿರಲು ದುಶ್ಶಾಸನನು ಧೃಷ್ಟದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸ ತು ರುಗ್ಮರಥಾಸಕ್ತೋ ದುಃಶಾಸನಶರಾರ್ದಿತಃ ।
ಅಮರ್ಷಾತ್ ತವ ಪುತ್ರಸ್ಯ ಶರೈರ್ವಾಹಾನವಾಕಿರತ್ ॥ ೨ ॥

ರುಗ್ಮರಥರಾದ ದ್ರೋಣರ ಜೊತೆಯಲ್ಲಿ ಸಂಸಕ್ತನಾಗಿದ್ದ ಧೃಷ್ಟದ್ಯುಮ್ನನು ದುಶ್ಶಾಸನನ ಬಾಣಗಳಿಂದ ಪೀಡಿತನಾಗಿ, ಕೋಪದಿಂದ ನಿನ್ನ ಪುತ್ರನ ರಥದ ಅಶ್ವಗಳನ್ನು ಬಾಣಗಳಿಂದ ಹೊಡೆದನು.

ಕ್ಷಣೇನ ಸ ರಥಸ್ತಸ್ಯ ಸಧ್ವಜಃ ಸಹಸಾರಥಿಃ ।
ನಾದೃಶ್ಯತ ಮಹಾರಾಜ ಪಾರ್ಷತಸ್ಯ ಶರೈಶ್ಚಿತಃ ॥ ೩ ॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನನ ಬಾಣಗಳಿಂದ ತುಂಬಲ್ಪಟ್ಟ ಅವನ ರಥವು ಧ್ವಜ-ಸಾರಥಿಗಳಿಂದ ಸಹಿತವಾಗಿ ಒಂದು ಕ್ಷಣದಲ್ಲಿ ಕಾಣದಾಯಿತು.

ದುಃಶಾಸನಸ್ತು ರಾಜೇಂದ್ರ ಪಾಂಚಾಲ್ಯಸ್ಯ ಮಹಾತ್ಮನಃ ।
ನಾಶಕತ್ ಪ್ರಮುಖೇ ಸ್ಥಾತುಂ ಶರಜಾಲಪ್ರಪೀಡಿತಃ ॥ ೪ ॥

ಎಲೈ ರಾಜೇಂದ್ರನೇ, ದುಶ್ಶಾಸನನಾದರೋ ಮಹಾತ್ಮನಾದ ಧೃಷ್ಟದ್ಯುಮ್ನನ ಬಾಣ ಸಮೂಹಗಳಿಂದ ಪೀಡಿತನಾಗಿ ಅವನ ಎದುರಿಗೆ ನಿಲ್ಲಲು ಶಕ್ತನಾಗಲಿಲ್ಲ.

ಸ ತು ದುಃಶಾಸನಂ ಬಾಣೈರ್ವಿಮುಖೀಕೃತ್ಯ ಪಾರ್ಷತಃ ।
ಕಿರನ್ ಶರಸಹಸ್ರಾಣಿ ದ್ರೋಣಮೇವಾಭ್ಯಯಾದ್ ರಣೇ ॥ ೫ ॥

ಧೃಷ್ಟದ್ಯುಮ್ನನು ತನ್ನ ಬಾಣಗಳಿಂದ ದುಶ್ಶಾಸನನನ್ನು ಯುದ್ಧವಿಮುಖನನ್ನಾಗಿ ಮಾಡಿ, ಸಹಸ್ರಾರು ಬಾಣಗಳನ್ನು ಪ್ರಯೋಗಿಸುತ್ತಾ, ರಣರಂಗದಲ್ಲಿ ದ್ರೋಣರ ಮೇಲೆಯೇ ಸಾಗಿದನು.

ಪ್ರತ್ಯಪದ್ಯತ ಹಾರ್ದಿಕ್ಯಃ ಕೃತವರ್ಮಾ ತದಂತರಮ್ ।
ಸೋದರ್ಯಾಣಾಂ ತ್ರಯಶ್ಚೈವ ತ ಏನಂ ಪರ್ಯವಾರಯನ್ ॥ ೬ ॥

ಈ ಮಧ್ಯದಲ್ಲಿ ಹಾರ್ದಿಕ್ಯನಾದ ಕೃತವರ್ಮನು ಅಲ್ಲಿಗೆ ಬಂದನು. ದುರ್ಯೋಧನನ ಮೂರು ಸಹೋದರರು ಸೇರಿಕೊಂಡು ಧೃಷ್ಟದ್ಯುಮ್ನನನ್ನು ಸುತ್ತುವರಿದರು.

ತಂ ಯಮೌ ಪೃಷ್ಠತೋಽನ್ವೈತಾಂ ರಕ್ಷಂತೌ ಪುರುಷರ್ಷಭೌ ।
ದ್ರೋಣಾಯಾಭಿಮುಖಂ ಯಾಂತಂ ದೀಪ್ಯಮಾನಮಿವಾನಲಮ್ ॥೭॥

ದ್ರೋಣರಿಗೆ ಅಭಿಮುಖವಾಗಿ ಹೋಗುತ್ತಿದ್ದ, ಜ್ವಲಿಸುವ ಅಗ್ನಿಯಂತಿದ್ದ ಧೃಷ್ಟದ್ಯುಮ್ನನನ್ನು ರಕ್ಷಿಸುತ್ತಾ, ಪುರುಷಶ್ರೇಷ್ಠರಾದ ನಕುಲ-ಸಹದೇವರು ಅವನನ್ನು ಹಿಂಬಾಲಿಸಿದರು.

ಸಂಪ್ರಹಾರಮಕುರ್ವಂಸ್ತೇ ಸರ್ವೇ ಸಪ್ತ ಮಹಾರಥಾಃ ।
ಅಮರ್ಷಿತಾಃ ಸತ್ತ್ವವಂತಃ ಕೃತ್ವಾ ಮರಣಮಗ್ರತಃ ॥ ೮ ॥

ಧೈರ್ಯಶಾಲಿಗಳೂ, ರೋಷಾವಿಷ್ಟರೂ ಆದ ಆ ಏಳು ಮಹಾರಥರೆಲ್ಲರೂ ಮರಣವನ್ನು ಮುಂದೆ ಮಾಡಿಕೊಂಡು ಸಂಪ್ರಹಾರವನ್ನು ಮಾಡಿದರು.

ಶುದ್ಧಾತ್ಮಾನಃ ಶುದ್ಧವೃತ್ತಾ ರಾಜನ್ ಸ್ವರ್ಗಪುರಸ್ಕೃತಾಃ ।
ಆರ್ಯಂ ಯುದ್ಧಮಕುರ್ವಂತ ಪರಸ್ಪರಜಿಗೀಷವಃ ॥ ೯ ॥

ಎಲೈ ರಾಜನೇ, ಶುದ್ಧಮನಸ್ಸುಳ್ಳವರೂ, ಶುದ್ಧವಾದ ನಡತೆಯುಳ್ಳವರೂ ಆದ ಅವರು ಸ್ವರ್ಗವನ್ನು ಉದ್ದೇಶಿಸಿ, ಪರಸ್ಪರವಾಗಿ ಗೆಲ್ಲಲು ಬಯಸಿ, ಉದಾತ್ತವಾದ ಯುದ್ಧವನ್ನು ಮಾಡಿದರು.

ಶುಕ್ಲಾಭಿಜನಕರ್ಮಾಣೋ ಮತಿಮಂತೋ ಜನಾಧಿಪಾಃ ।
ಧರ್ಮಯುದ್ಧಮಯುದ್ಧ್ಯಂತ ಪ್ರೇಕ್ಷಂತೋ ಗತಿಮುತ್ತಮಾಮ್ ॥೧೦॥

ಶುದ್ಧವಾದ ವಂಶ ಮತ್ತು ಕರ್ಮಗಳನ್ನು ಹೊಂದಿದ ಮೇಧಾವಿಗಳಾದ ಆ ರಾಜರು ಮುಂದಿನ ಶ್ರೇಷ್ಠವಾದ ಗತಿಯನ್ನು ನೋಡುತ್ತಾ ಧರ್ಮಯುದ್ಧವನ್ನು ಮಾಡಿದರು.

ನ ತತ್ರಾಸೀದಧರ್ಮಿಷ್ಠಮಶಸ್ತ್ರಂ ಯುದ್ಧಮೇವ ಚ ।
ನಾತ್ರ ಕರ್ಣೀ ನ ನಾಲೀಕೋ ನ ಲಿಪ್ತೋ ನ ಚ ವಸ್ತಕಃ ॥ ೧೧॥

ನ ಸೂಚೀ ಕಪಿಶೋ ನಾತ್ರ ನ ಗವಾಸ್ಥಿರ್ಗಜಾಸ್ಥಿಕಃ ।
ಇಷುರಾಸೀನ್ನ ಸಂಶ್ಲಿಷ್ಟೋ ನ ಪೂತಿರ್ನ ಚ ಜಿಹ್ಮಗಃ ॥ ೧೨ ॥

ಅಲ್ಲಿ ಅಧರ್ಮಿಷ್ಠವಾದ ಅಥವಾ ಶಸ್ತ್ರರಹಿತವಾದ ಯುದ್ಧವು ನಡೆಯಲಿಲ್ಲ. ಅಲ್ಲಿ ಕರ್ಣಿಯಾಗಲೀ, ನಾಲೀಕವಾಗಲೀ, ವಿಷಲಿಪ್ತವಾಗಲೀ, ವಸ್ತಕವಾಗಲೀ, ಸೂಚಿಗಳಾಗಲೀ, ಕಪಿಶವಾಗಲೀ, ಗೋವಿನ ಅಸ್ಥಿ ಮತ್ತು ಗಜದ ಅಸ್ಥಿಯಿಂದ ನಿರ್ಮಿತವಾದ ಆಯುಧವಾಗಲೀ, ತ್ರುಟಿತವಾದ ಬಾಣಗಳಾಗಲೀ, ಹಳೆಯವಾದ ಬಾಣಗಳಾಗಲೀ, ಜೋಡಿಸಿದ ಬಾಣಗಳಾಗಲೀ ಇರಲಿಲ್ಲ.

ಋಜೂನ್ಯೇವ ವಿಶುದ್ಧಾನಿ ಸರ್ವೇ ಶಸ್ತ್ರಾಣ್ಯಧಾರಯನ್ ।
ಸುಯುದ್ಧೇನ ಪರಾಂಲ್ಲೋಕಾನೀಪ್ಸಂತಃ ಕೀರ್ತಿಮೇವ ಚ ॥ ೧೩ ॥

ಒಳ್ಳೆಯ ಯುದ್ಧದಿಂದ ಪರಲೋಕವನ್ನೂ, ಕೀರ್ತಿಯನ್ನೂ ಬಯಸುತ್ತಾ ಅವರೆಲ್ಲರೂ ನೇರವಾದ ಮತ್ತು ಶುದ್ಧವಾದ ಶಸ್ತ್ರಗಳನ್ನೇ ಧರಿಸಿದ್ದರು.

ತದಾಸೀತ್ ತುಮುಲಂ ಯುದ್ಧಂ ಸರ್ವದೋಷವಿವರ್ಜಿತಮ್ ।
ಚತುರ್ಣಾಂ ತವ ಯೋಧಾನಾಂ ತೈಸ್ತ್ರಿಭಿಃ ಪಾಂಡವೈಃ ಸಹ ॥ ೧೪ ॥

ನಿನ್ನ ನಾಲ್ಕು ಯೋಧರಿಗೂ ಮತ್ತು ಪಾಂಡವರ ಮೂರು ಯೋಧರಿಗೂ ಸರ್ವದೋಷವಿವರ್ಜಿತವಾದ, ತೀವ್ರವಾದ ಯುದ್ಧವು ನಡೆಯಿತು.

ಧೃಷ್ಟದ್ಯುಮ್ನಸ್ತು ತಾನ್ ಹಿತ್ವಾ ತವ ರಾಜನ್ ರಥರ್ಷಭಾನ್ ।
ಯಮಾಭ್ಯಾಂ ವಾರಿತಾನ್ ದೃಷ್ಟ್ವಾ ಶೀಘ್ರಾಸ್ತ್ರೋ ದ್ರೋಣಮಭ್ಯಯಾತ್ ॥

ಎಲೈ ರಾಜನೇ, ಧೃಷ್ಟದ್ಯುಮ್ನನು ನಿನ್ನ ಯೋಧರಾದ ರಥಶ್ರೇಷ್ಠರು ನಕುಲ-ಸಹದೇವರಿಂದ ತಡೆಯಲ್ಪಟ್ಟುದನ್ನು ನೋಡಿ, ಶೀಘ್ರಾಸ್ತ್ರವನ್ನು ಹೊಂದಿ ದ್ರೋಣರ ಕಡೆಗೇ ಹೋದನು.

ನಿವಾರಿತಾಸ್ತು ತೇ ವೀರಾಸ್ತಯೋಃ ಪುರುಷಸಿಂಹಯೋಃ ।
ಸಮಸಜ್ಜಂತ ಚತ್ವಾರೋ ವಾತಾಃ ಪರ್ವತಯೋರಿವ ॥ ೧೬ ॥

ಪುರುಷಸಿಂಹರಾದ ನಕುಲ-ಸಹದೇವರಿಂದ ತಡೆಯಲ್ಪಟ್ಟ ನಿನ್ನ ನಾಲ್ವರು ವೀರರು ವಾಯುಗಳು ಪರ್ವತದ ಜೊತೆಯಲ್ಲಿ ಸೇರಿದಂತೆ ಅವರೊಡನೆ ಸೆಣಸಿದರು.

ದ್ವಾಭ್ಯಾಂ ದ್ವಾಭ್ಯಾಂ ಯಮೌ ಸಾರ್ಧಂ ರಥಾಭ್ಯಾಂ ರಥಪುಂಗವೌ ।
ಸಮಾಸಕ್ತೌ ತತೋ ದ್ರೋಣಂ ಧೃಷ್ಟದ್ಯುಮ್ನೋಽಭ್ಯವರ್ತತ ॥ ೧೭ ॥

ರಥಪುಂಗವರಾದ ಅವರು ಎರಡೆರಡು ರಥಗಳಿಂದ ನಕುಲ-ಸಹದೇವರಲ್ಲಿ ಒಬ್ಬೊಬ್ಬರ ಜೊತೆಯಲ್ಲಿಯೂ ಯುದ್ಧಕ್ಕೆ ಸಂಸಕ್ತರಾದರು. ಆಗ ಧೃಷ್ಟದ್ಯುಮ್ನನು ದ್ರೋಣರ ಕಡೆಗೆ ಸಾಗಿದನು.

ದೃಷ್ಟ್ವಾ ದ್ರೋಣಾಯ ಪಾಂಚಾಲ್ಯಂ ವ್ರಜಂತಂ ಯುದ್ಧದುರ್ಮದಮ್ ।
ಯಮಾಭ್ಯಾಂ ತಾಂಶ್ಚ ಸಂಸಕ್ತಾಂಸ್ತದಂತರಮುಪಾದ್ರವತ್ ॥ ೧೮ ॥

ದುರ್ಯೋಧನೋ ಮಹಾರಾಜ ಕಿರನ್ ಶೋಣಿತಭೋಜನಾನ್ ।
ತಂ ಸಾತ್ಯಕಿಃ ಶೀಘ್ರತರಂ ಪುನರೇವಾಭ್ಯವರ್ತತ ॥ ೧೯ ॥

ಪಾಂಚಾಲ್ಯನೂ, ಯುದ್ಧದುರ್ಮದನೂ ಆದ ಧೃಷ್ಟದ್ಯುಮ್ನನು ದ್ರೋಣರ ಕಡೆಗೆ ಹೋಗುತ್ತಿರುವುದನ್ನೂ, ತನ್ನ ನಾಲ್ವರು ವೀರರು ನಕುಲ-ಸಹದೇವರ ಜೊತೆಯಲ್ಲಿ ಸೆಣಸುತ್ತಿರುವುದನ್ನು ನೋಡಿದ ದುರ್ಯೋಧನನು ಎಲೈ ಮಹಾರಾಜನೇ, ರಕ್ತ ಭೋಜಿಗಳಾದ ಬಾಣಗಳನ್ನು ಪ್ರಯೋಗಿಸುತ್ತಾ ಈ ಮಧ್ಯದಲ್ಲಿ ಧಾವಿಸಿ ಬಂದನು. ಸಾತ್ಯಕಿಯು ಅವನಿಗಿಂತಲೂ ಶೀಘ್ರವಾಗಿ ಬಂದು ಪುನಃ ಅವನನ್ನು ಎದುರಿಸಿದನು.

ತೌ ಪರಸ್ಪರಮಾಸಾದ್ಯ ಸಮೀಪೇ ಕುರುಮಾಧವೌ ।
ಹಸಮಾನೌ ನೃಶಾರ್ದೂಲಾವಭೀತೌ ಸಮಗಚ್ಛತಾಮ್ ॥ ೨೦ ॥

ಕುರು-ಮಾಧವರಾದ, ನರಶಾರ್ದೂಲರಾದ ಅವರಿಬ್ಬರು ಒಬ್ಬರನ್ನೊಬ್ಬರು ಸಮೀಪಿಸಿ ನಗುತ್ತಾ ನಿರ್ಭಯವಾಗಿ ಯುದ್ಧದಲ್ಲಿ ಸಂಸಕ್ತರಾದರು.

ಬಾಲ್ಯೇ ವೃತ್ತಾನಿ ಸರ್ವಾಣಿ ಪ್ರೀಯಮಾಣೌ ವಿಚಿಂತ್ಯ ತೌ ।
ಅನ್ಯೋನ್ಯಂ ಪ್ರೇಕ್ಷಮಾಣೌ ಚ ಹಸಮಾನೌ ಪುನಃ ಪುನಃ ॥ ೨೧ ॥

ಬಾಲ್ಯದಲ್ಲಿ ನಡೆದ ಎಲ್ಲ ಘಟನೆಗಳನ್ನೂ ಚಿಂತಿಸಿ ಸಂತೋಷಪಡುತ್ತಿದ್ದ ಅವರು ಪರಸ್ಪರವಾಗಿ ನೋಡುತ್ತಾ, ಪುನಃ ಪುನಃ ನಗುತ್ತಾ ಯುದ್ಧವನ್ನು ಮಾಡಿದರು.

ಅಥ ದುರ್ಯೋಧನೋ ರಾಜಾ ಸಾತ್ಯಕಿಂ ಪ್ರತ್ಯಭಾಷತ ।
ಪ್ರಿಯಂ ಸಖಾಯಂ ಸತತಂ ಗರ್ಹಯನ್ ವೃತ್ತಮಾತ್ಮನಃ ॥ ೨೨ ॥

ಆಗ ರಾಜನಾದ ದುರ್ಯೋಧನನು ಪ್ರಿಯಸ್ನೇಹಿತನಾದ ಸಾತ್ಯಕಿಯನ್ನು ಕುರಿತು ತನ್ನ ಕ್ಷತ್ರಿಯಧರ್ಮವನ್ನು ಸತತವಾಗಿ ನಿಂದಿಸುತ್ತಾ ಮಾತನಾಡಿದನು.

ಧಿಕ್ಕ್ರೋಧಂ ಧಿಕ್ಸಖೇ ಲೋಭಂ ಧಿಙ್ಮೋಹಂ ಧಿಗಮರ್ಷಿತಮ್ ।
ಧಿಗಸ್ತು ಕ್ಷಾತ್ರಮಾಚಾರಂ ಧಿಗಸ್ತು ಬಲಮೌರಸಮ್ ॥ ೨೩ ॥

ಯತ್ತ್ವಂ ಮಾಮಭಿಸಂಧತ್ಸೇ ತ್ವಾಂ ಚಾಹಂ ಶಿನಿಪುಂಗವ ।
ತ್ವಂ ಹಿ ಪ್ರಾಣೈಃ ಪ್ರಿಯತರೋ ಮಮಾಹಂ ಚ ಸದಾ ತವ ॥ ೨೪ ॥

ಸ್ಮರಾಮಿ ತಾನಿ ಸರ್ವಾಣಿ ಬಾಲ್ಯೇ ವೃತ್ತಾನಿ ಯಾನಿ ನೌ ।
ತಾನಿ ಸರ್ವಾಣಿ ಜೀರ್ಣಾನಿ ಸಾಂಪ್ರತಂ ನೌ ರಣಾಜಿರೇ ।
ಕಿಮನ್ಯತ್ರೋಧಲೋಭಾಭ್ಯಾಂ ಯುದ್ಧ್ಯಾಮಿ ತ್ವಾದ್ಯ ಸಾತ್ವತ ॥ ೨೫॥

ಸ್ನೇಹಿತನೇ, ಕ್ರೋಧಕ್ಕೆ ಧಿಕ್ಕಾರವಿರಲಿ, ಲೋಭಕ್ಕೆ ಧಿಕ್ಕಾರವಿರಲಿ, ಮೋಹಕ್ಕೆ ಧಿಕ್ಕಾರವಿರಲಿ, ಕ್ಷತ್ರಿಯಧರ್ಮಕ್ಕೆ ಧಿಕ್ಕಾರವಿರಲಿ. ಸಹಜ ಬಲಕ್ಕೆ ಧಿಕ್ಕಾರವಿರಲಿ. ಏಕೆಂದರೆ ಎಲೈ ಶಿನಿಪುಂಗವನೇ ನಿನ್ನನ್ನು ನಾನು ಮತ್ತು ನನ್ನನ್ನು ನೀನು ಕೊಲ್ಲಲು ಉದ್ದೇಶಿಸುತ್ತಿದ್ದೀಯೆ. ನೀನು ನನಗೆ ನನ್ನ ಪ್ರಾಣಗಳಿಗಿಂತಲೂ ಪ್ರಿಯನಾದವನು, ನಾನು ಸಹ ನಿನಗೆ ಹಾಗೆಯೇ. ನಮಗೆ ಬಾಲ್ಯದಲ್ಲಿ ನಡೆದ ಆ ಎಲ್ಲಾ ಘಟನೆಗಳನ್ನು ಸ್ಮರಿಸುತ್ತೇನೆ. ಆದರೆ ಈಗ ರಣರಂಗದಲ್ಲಿ ಅವೆಲ್ಲವೂ ನಶಿಸಿ ಹೋಗಿವೆ. ಮತ್ತೇನೆಂದರೆ

ಕ್ರೋಧ-ಲೋಭಗಳಿಂದ ಕೂಡಿ ಎಲೈ ಸಾತ್ವತನೇ, ಈ ದಿನ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಿದ್ದೇನೆ.

ತಂ ತಥಾವಾದಿನಂ ರಾಜನ್ ಸಾತ್ಯಕಿಃ ಪ್ರತ್ಯಭಾಷತ ।
ಪ್ರಹಸನ್ ವಿಶಿಖಾಂಸ್ತೀಕ್ಷ್ಣಾನುದ್ಯಮ್ಯ ಪರಮಾಸ್ತ್ರವಿತ್ ॥ ೨೬ ॥

ನೇಯಂ ಸಭಾ ರಾಜಪುತ್ರ ನ ಚಾಚಾರ್ಯನಿವೇಶನಮ್ ।
ಯತ್ರ ಕ್ರೀಡಿತಮಸ್ಮಾಭಿಸ್ತದಾ ರಾಜನ್ ಸಮಾಗತೈಃ ॥ ೨೭ ॥

ಎಲೈ ರಾಜನೇ, ಹಾಗೆ ಮಾತನಾಡುತ್ತಿದ್ದ ದುರ್ಯೋಧನನನ್ನು ಕುರಿತು ಪರಮಾಸ್ತ್ರವೇತ್ತನಾದ ಸಾತ್ಯಕಿಯು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಾ ನಗುತ್ತಾ, 'ಇದು ಸಭೆಯಲ್ಲ, ನಾವೆಲ್ಲರೂ ಒಟ್ಟುಸೇರಿ ಆಟವಾಡಿದ ಆಚಾರ್ಯರ ಮನೆಯೂ ಅಲ್ಲ' ಎಂದು ಹೇಳಿದನು.

ದುರ್ಯೋಧನಃ

ಕ್ವ ಸಾ ಕ್ರೀಡಾ ಗತಾಽಸ್ಮಾಕಂ ಬಾಲ್ಯೇ ವೈ ಶಿನಿಪುಂಗವ ।
ಕ್ವ ಚ ಯುದ್ಧಮಿದಂ ಭೂಯಃ ಕಾಲೋ ಹಿ ದುರತಿಕ್ರಮಃ ॥ ೨೮ ॥

ದುರ್ಯೋಧನ– ಎಲೈ ಶಿನಿಪುಂಗವನೇ, ನಾವು ಬಾಲ್ಯದಲ್ಲಿ ಆಡಿದ ಆ ಕ್ರೀಡೆಗಳು ಎಲ್ಲಿ ಹೋದವು ಮತ್ತು ಈ ದಿನ ಪುನಃ ಈ ಯುದ್ಧವು ಎಲ್ಲಿ? ಕಾಲವನ್ನು ಯಾರೂ ಮೀರಲು ಸಾಧ್ಯವಿಲ್ಲ.

ಕಿಂ ನು ನೋ ವಿದ್ಯತೇ ಕೃತ್ಯಂ ಧನೇನ ಧನಲಿಪ್ಸಯಾ ।
ಯತ್ರ ಯುದ್ಧ್ಯಾಮಹೇ ಸರ್ವೇ ಧನಲೋಭಾತ್ ಸಮಾಗತಾಃ ॥೨೯॥

ಎಲ್ಲರೂ ಧನಲೋಭದಿಂದ ಕೂಡಿದವರಾಗಿ ಒಟ್ಟುಸೇರಿ ಯುದ್ಧವನ್ನು ಮಾಡುತ್ತಿರುವೆನಷ್ಟೆ? ಆ ಧನದಿಂದಾಗಲೀ ಅಥವಾ ಧನದ ಆಸೆಯಿಂದಾಗಲೀ ನಮಗೆ ಆಗಬೇಕಾದುದು ಏನಿದೆ?

ಸಂಜಯಃ

ತಂ ತಥಾವಾದಿನಂ ತತ್ರ ರಾಜಾನಂ ಮಾಧವೋಽಬ್ರವೀತ್ ।
ಏವಂವೃತ್ತಂ ಸದಾ ಕ್ಷತ್ರಂ ಯುದ್ಧ್ಯಂತೀಹ ಗುರೂನಪಿ ॥ ೩೦ ॥

ಸಂಜಯ– ಹಾಗೆ ಮಾತನಾಡುತ್ತಿದ್ದ ರಾಜನನ್ನು ಕುರಿತು ಮಾಧವನಾದ ಸಾತ್ಯಕಿಯು ಮಾತನಾಡಿದನು ಕ್ಷತ್ರಿಯರ ನಡತೆಯೇ ಹೀಗೆ. ಗುರುಗಳ ಜೊತೆಯಲ್ಲಿಯೂ ಯುದ್ಧವನ್ನು ಮಾಡುತ್ತಾರೆ.

ಯದಿ ತೇಽಹಂ ಪ್ರಿಯೋ ರಾಜನ್ ಜಹಿ ಮಾಂ ಮಾ ಚಿರಂ ಕೃಥಾಃ ।
ತ್ವತ್ಕೃತೇ ಸುಕೃತಾಲ್ಲೋಕಾನ್ ಗಚ್ಛೇಯಂ ಭರತರ್ಷಭ ॥ ೩೧ ॥

ಎಲೈ ರಾಜನೇ, ನಿನಗೆ ನಾನು ಪ್ರಿಯನಾದರೆ, ಶೀಘ್ರವಾಗಿ ನನ್ನನ್ನು ಕೊಲ್ಲು, ವಿಳಂಬ ಮಾಡಬೇಡ. ಎಲೈ ಭರತರ್ಷಭನೇ, ನಿನ್ನ ನಿಮಿತ್ತದಿಂದಾಗಿ ನಾನು ಪುಣ್ಯಲೋಕಗಳಿಗೆ ಹೋದೇನು!

ಯಾ ತೇ ಶಕ್ತಿರ್ಬಲಂ ಚೈವ ತತ್ಕ್ಷಿಪ್ರಂ ಮಯಿ ದರ್ಶಯ ।
ನೇಚ್ಛಾಮ್ಯೇತದಹಂ ದ್ರಷ್ಟುಂ ಮಿತ್ರಾಣಾಂ ವ್ಯಸನಂ ಮಹತ್ ॥ ೩೨ ॥

ನಿನ್ನ ಶಕ್ತಿ ಮತ್ತು ಬಲಗಳು ಎಷ್ಟಿವೆಯೋ ಅವನ್ನು ಶೀಘ್ರವಾಗಿ ನನ್ನ ಮೇಲೆ ತೋರಿಸು. ಮಿತ್ರರ ಕದನರೂಪವಾದ ದೊಡ್ಡ ವ್ಯಸನವನ್ನು ನಾನು ನೋಡಲು ಇಷ್ಟಪಡುವುದಿಲ್ಲ (ಎಂದು ಹೇಳಿದನು).

ಇತ್ಯೇವಂ ವ್ಯಕ್ತಮಾಭಾಷ್ಯ ಪ್ರತಿಭಾಷ್ಯ ಚ ಸಾತ್ಯಕಿಃ ।
ಅಭ್ಯಯಾತ್ ತೂರ್ಣಮವ್ಯಗ್ರೋ ನಿರಪೇಕ್ಷೋ ವಿಶಾಂಪತೇ ॥ ೩೩ ॥

ಎಲೈ ರಾಜನೇ, ಹೀಗೆ ಸ್ಪಷ್ಟವಾಗಿ ಮಾತನಾಡಿ, ದುರ್ಯೋಧನನ ಮಾತುಗಳಿಗೆ ಉತ್ತರವನ್ನು ನೀಡಿ, ಸಾತ್ಯಕಿಯು ಶೀಘ್ರವಾಗಿ ಯಾವುದನ್ನೂ ಅಪೇಕ್ಷಿಸದೆ, ವ್ಯಗ್ರತೆಯನ್ನು ಹೊಂದದೆ ಮುಂದೆ ಸಾಗಿದನು.

ತಮಾಯಾಂತಮಭಿಪ್ರೇಕ್ಷ್ಯ ಪ್ರತ್ಯಗೃಹ್ಣಾತ್ ತವಾತ್ಮಜಃ ।
ಶರೈಶ್ಚಾವಾಕಿರದ್ ರಾಜನ್ ಶೈನೇಯಂ ತನಯಸ್ತವ ॥ ೩೪ ॥

ಎಲೈ ರಾಜನೇ, ಮುಂದೆ ಬರುತ್ತಿದ್ದ ಸಾತ್ಯಕಿಯನ್ನು ನೋಡಿ ನಿನ್ನ ಪುತ್ರನು ಅವನನ್ನು ಸ್ವೀಕರಿಸಿ, ಅವನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತತಃ ಪ್ರವವೃತೇ ಯುದ್ಧಂ ಕುರುಮಾಧವಸಿಂಹಯೋಃ ।
ಅನ್ಯೋನ್ಯಂ ಕ್ರುದ್ಧಯೋರ್ಘೋರಂ ಯಥಾ ದ್ವಿರದಸಿಂಹಯೋಃ ॥೩೫॥

ಅನಂತರ ಕುರುಸಿಂಹನಿಗೂ ಮತ್ತು ಮಾಧವಸಿಂಹನಿಗೂ ಪರಸ್ಪರವಾಗಿ ಕೋಪಗೊಂಡ ಗಜ-ಸಿಂಹಗಳಿಗೆ ನಡೆಯುವಂತೆ ಘೋರವಾದ ಯುದ್ಧವು ನಡೆಯಿತು.

ತತಃ ಪೂರ್ಣಾಯತೋತ್ಸೃಷ್ಟೈಃ ಸಾತ್ವತಂ ಯುದ್ಧದುರ್ಮದಮ್ ।
ದುರ್ಯೋಧನಃ ಪ್ರತ್ಯವಿದ್ಧ್ಯದ್ ದಶಭಿರ್ನಿಶಿತೈಃ ಶರೈಃ ॥ ೩೬ ॥

ಆಗ ದುರ್ಯೋಧನನು ಪೂರ್ಣವಾಗಿ ಹೆದೆಯನ್ನು ಎಳೆದು ಪ್ರಯೋಗಿಸಿದ ಹತ್ತು ತೀಕ್ಷ್ಣವಾದ ಬಾಣಗಳಿಂದ ಯುದ್ಧದುರ್ಮದನಾದ ಸಾತ್ಯಕಿಯನ್ನು ಹೊಡೆದನು.

ತಂ ಸಾತ್ಯಕಿಃ ಪ್ರತ್ಯವಿದ್ಧತ್ ತಥೈವ ದಶಭಿಃ ಶರೈಃ ।
ಪಂಚಾಶತಾ ಪುನಶ್ಚಾಜೌ ತ್ರಿಂಶತಾ ದಶಭಿಶ್ಚ ಹ ॥ ೩೭ ॥

ಸಾತ್ಯಕಿಯೂ ಸಹ ಹತ್ತು ಬಾಣಗಳಿಂದ ಹಾಗೆಯೇ ಅವನನ್ನು ಪ್ರತಿಯಾಗಿ ಹೊಡೆದು ಪುನಃ ರಣರಂಗದಲ್ಲಿ ಐವತ್ತು ಬಾಣಗಳನ್ನೂ, ಮೂವತ್ತು ಬಾಣಗಳನ್ನೂ ಮತ್ತು ಹತ್ತು ಬಾಣಗಳನ್ನೂ ಪ್ರಯೋಗಿಸಿದನು.

ತಸ್ಯ ಸಂದಧತಶ್ಚೇಷೂನ್ ಸಂಹಿತೇಷುಂ ಚ ಕಾರ್ಮುಕಮ್ ।
ಅಚ್ಛಿನತ್ ಸಾತ್ಯಕಿಸ್ತೂರ್ಣಂ ಶರೈಶ್ಚೈವಾಭ್ಯವೀವೃಷತ್ ॥ ೩೮ ॥

ದುರ್ಯೋಧನನು ಬಾಣವನ್ನು ಧನುಸ್ಸಿನಲ್ಲಿ ಹೂಡುತ್ತಿರುವಂತೆಯೇ ಆ ಧನುಸ್ಸನ್ನು ಮತ್ತು ಅವನ ಬಾಣಗಳನ್ನು ಸಾತ್ಯಕಿಯು ಬಾಣಗಳ ಮಳೆಯನ್ನು ಸುರಿಸಿ ಶೀಘ್ರವಾಗಿ ಕತ್ತರಿಸಿದನು.

ಸ ಗಾಢವಿದ್ಧೋ ವ್ಯಥಿತಃ ಪ್ರತ್ಯಪಾಯಾದ್ರಥಾಂತರಮ್ ।
ದುರ್ಯೋಧನೋ ಮಹಾರಾಜ ದಾಶಾರ್ಹಶರಪೀಡಿತಃ ॥ ೩೯ ॥

ಎಲ್ಲೆ ಮಹಾರಾಜನೇ, ಸಾತ್ಯಕಿಯ ಬಾಣಗಳಿಂದ ಪೀಡಿತನಾದ ದುರ್ಯೋಧನನು ಗಾಢವಾಗಿ ಹೊಡೆಯಲ್ಪಟ್ಟು ವ್ಯಥೆಯನ್ನು ಹೊಂದಿ ಇನ್ನೊಂದು ರಥಕ್ಕೆ ಹೋದನು.

ಸಮಾಶ್ವಸ್ಯ ತು ಪುತ್ರಸ್ತೇ ಸಾತ್ಯಕಿಂ ಪುನರಭ್ಯಯಾತ್ ।
ವಿಸೃಜನ್ನಿಷುಜಾಲಾನಿ ಯುಯುಧಾನರಥಂ ಪ್ರತಿ ॥ ೪೦ ॥

ನಿನ್ನ ಪುತ್ರನು ಸ್ವಲ್ಪ ಸುಧಾರಿಸಿಕೊಂಡು ಪುನಃ ಸಾತ್ಯಕಿಯ ಕಡೆಗೆ ಬಂದು ಸಾತ್ಯಕಿಯ ರಥದ ಮೇಲೆ ಬಾಣಗಳ ಸಮೂಹಗಳನ್ನು ಪ್ರಯೋಗಿಸಿದನು.

ತಥೈವ ಸಾತ್ಯಕಿರ್ಬಾಣಾನ್ ದುರ್ಯೋಧನರಥಂ ಪ್ರತಿ ।
ಪ್ರತತಂ ವ್ಯಸೃಜದ್ ರಾಜಂಸ್ತತ್ ಸಂಕುಲಮವರ್ತತ ॥ ೪೧ ॥

ಎಲೈ ರಾಜನೇ, ಹಾಗೆಯೇ ಸಾತ್ಯಕಿಯೂ ಸಹ ದುರ್ಯೋಧನನ ರಥದ ಮೇಲೆ ಸತತವಾಗಿ ಬಾಣಗಳನ್ನು ಪ್ರಯೋಗಿಸಿದನು. ಆಗ ಎಲ್ಲವೂ ಮಿಶ್ರವಾಯಿತು.

ತತ್ರೇಷುಭಿಃ ಕ್ಷಿಪ್ಯಮಾಣೈಃ ಪತದ್ಭಿಶ್ಚ ಸಮಂತತಃ ।
ಅಗ್ನೇರಿವ ಮಹಾಕಕ್ಷೇ ಶಬ್ದಃ ಸಮಭವನ್ಮಹಾನ್ ॥ ೪೨ ॥

ಧನುಸ್ಸುಗಳಿಂದ ಪ್ರಯೋಗಿಸಲ್ಪಟ್ಟು ಆಕಾಶದಲ್ಲಿ ಸಂಚರಿಸುವ ಆ ಬಾಣಗಳು ದೊಡ್ಡ ಹುಲ್ಲುಗಾವಲಿನಲ್ಲಿ ಅಗ್ನಿಯು ಶಬ್ದ ಮಾಡುವಂತೆ ದೊಡ್ಡ ಶಬ್ದವನ್ನು ಮಾಡಿದವು.

ತತ್ರಾಭ್ಯಧಿಕಮಾಲಕ್ಷ್ಯ ಮಾಧವಂ ರಥಸತ್ತಮಮ್ ।
ಕ್ಷಿಪ್ರಮಭ್ಯಪತತ್ ಕರ್ಣಃ ಪರೀಪ್ಸಂಸ್ತನಯಂ ತವ ॥ ೪೩ ॥

ಅವರಲ್ಲಿ ರಥಶ್ರೇಷ್ಠನಾದ ಸಾತ್ಯಕಿಯು ಶ್ರೇಷ್ಠನಾಗಿರುವುದನ್ನು ಗಮನಿಸಿ, ನಿನ್ನ ಪುತ್ರನನ್ನು ರಕ್ಷಿಸಲು ಬಯಸಿ ಕರ್ಣನು ಶೀಘ್ರವಾಗಿ ಅಲ್ಲಿಗೆ ಬಂದನು.

ನ ತು ತಂ ಮರ್ಷಯಾಮಾಸ ಭೀಮಸೇನೋ ಮಹಾಬಲಃ ।
ಅಭ್ಯಯಾತ್ ತ್ವರಿತಃ ಕರ್ಣಂ ವಿಸೃಜನ್ ಸಾಯಕಾನ್ ಬಹೂನ್ ॥ ೪೪ ॥

ಮಹಾಬಲನಾದ ಭೀಮಸೇನನು ಅವನನ್ನು ನೋಡಿ ಸಹಿಸಲಿಲ್ಲ. ಅವನು ಕರ್ಣನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸುತ್ತಾ ಅಲ್ಲಿಗೆ ಬಂದನು.

ತಸ್ಯ ಕರ್ಣಃ ಶಿತಾನ್ ಬಾಣಾನ್ ಪ್ರತಿಹನ್ಯ ಹಸನ್ನಿವ ।
ಧನುಃ ಶರಾಂಶ್ಚ ಚಿಚ್ಛೇದ ಸೂತಂ ಚಾಭ್ಯಹನಚ್ಛರೈಃ ॥ ೪೫ ॥

ಕರ್ಣನು ಅವನ ತೀಕ್ಷ್ಣವಾದ ಬಾಣಗಳನ್ನು ನಗುತ್ತಲೇ ಪ್ರತಿಯಾಗಿ ಹೊಡೆದು ಅವನ ಧನುಸ್ಸನ್ನೂ, ಬಾಣಗಳನ್ನೂ ಕತ್ತರಿಸಿ ಸಾರಥಿಯನ್ನು ಬಾಣಗಳಿಂದ ಹೊಡೆದನು.

ಭೀಮಸೇನಸ್ತು ಸಂಕ್ರುದ್ಧೋ ಗದಾಮಾದಾಯ ಪಾಂಡವಃ ।
ಧ್ವಜಂ ಧನುಶ್ಚ ಸೂತಂ ಚ ಸಮ್ಮಮರ್ದಾಹವೇ ರಿಪೋಃ ॥ ೪೬ ॥

ಬಹಳ ಕೋಪಗೊಂಡ ಪಾಂಡವನಾದ ಭೀಮಸೇನನಾದರೋ ಗದೆಯನ್ನು ತೆಗೆದುಕೊಂಡು ರಣರಂಗದಲ್ಲಿ ಶತ್ರುವಿನ ರಥದ ಧ್ವಜವನ್ನೂ, ಸಾರಥಿಯನ್ನೂ ಮತ್ತು ಶತ್ರುವಿನ ಧನುಸ್ಸನ್ನೂ ಚೂರ್ಣ(ಪುಡಿ)ಗೊಳಿಸಿದನು.

ಅಮೃಷ್ಯಮಾಣಃ ಕರ್ಣಸ್ತು ಭೀಮಸೇನಮಯುದ್ಧ್ಯತ ।
ವಿವಿಧೈರಿಷುಜಾಲೈಶ್ಚ ನಾನಾಶಸ್ತ್ರೈಶ್ಚ ಸಂಯುಗೇ ॥ ೪೭ ॥

ಅದನ್ನು ಸಹಿಸದ ಕರ್ಣನಾದರೋ ರಣರಂಗದಲ್ಲಿ ತೀವ್ರವಾದ ಬಾಣ ಸಮೂಹಗಳಿಂದಲೂ, ನಾನಾ ಶಸ್ತ್ರಗಳಿಂದಲೂ ಭೀಮಸೇನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ಸಂಕುಲೇ ವರ್ತಮಾನೇ ತು ರಾಜಾ ಧರ್ಮಸುತೋಽಬ್ರವೀತ್ ।
ಪಾಂಚಾಲಾನಾಂ ನರವ್ಯಾಘ್ರಾನ್ ಮತ್ಸ್ಯಾನಾಂ ಚ ನರರ್ಷಭಾನ್ ॥೪೮॥

ಯೇ ನಃ ಪ್ರಾಣಾಃ ಶಿರೋ ಯೇ ನೋ ಯೇ ನೋ ಯೋಧಾ ಮಹಾಬಲಾಃ ।
ತ ಏತೇ ಧಾರ್ತರಾಷ್ಟ್ರೇಷು ವಿಷಕ್ತಾಃ ಪುರುಷರ್ಷಭಾಃ ॥೪೯॥

ಕಿಂ ತಿಷ್ಠತ ಯಥಾ ಮೂಢಾಃ ಸರ್ವೇ ವಿಗತಚೇತಸಃ ।
ತತ್ರ ಗಚ್ಛತ ಯತ್ರೈತೇ ಯುದ್ಧ್ಯಂತೇ ಮಾಮಕಾ ರಥಾಃ ॥೫೦॥

ಹಾಗೆ ಸಂಕೀರ್ಣವಾದ ಯುದ್ಧವು ನಡೆಯುತ್ತಿರುವಾಗ ರಾಜನಾದ ಧರ್ಮಸುತನು ಪಾಂಚಾಲರ ಮತ್ತು ಮತ್ಸ್ಯರ ನರಶ್ರೇಷ್ಠರನ್ನು ಕುರಿತು- 'ಎಲೈ ಪುರುಷರ್ಷರೇ, ನಮಗೆ ಪ್ರಾಣದಂತೆ, ಶಿರಸ್ಸಿನಂತೆ ಇರುವ ಮಹಾಬಲರಾದ ಈ ಯೋಧರು ಧೃತರಾಷ್ಟ್ರ ಪುತ್ರರ ಜೊತೆಯಲ್ಲಿ ಯುದ್ಧದಲ್ಲಿ ಸಂಸಕ್ತರಾಗಿದ್ದಾರೆ. ಎಲ್ಲರೂ ಪ್ರಜ್ಞಾಹೀನರಾಗಿ ಏಕೆ ಮೂಢರಂತೆ ನಿಂತಿದ್ದೀರಿ? ನನ್ನ ಮಹಾರಥರು ಯುದ್ಧ ಮಾಡುವ ಸ್ಥಳಕ್ಕೆ ಹೋಗಿ' ಎಂದು ಹೇಳಿದನು.

ಕ್ಷತ್ರಧರ್ಮಂ ಪುರಸ್ಕೃತ್ಯ ಸರ್ವ ಏವ ಗತಜ್ವರಾಃ ।
ಜಯಂತೋ ವಧ್ಯಮಾನಾ ವಾ ಗತಿಮಿಷ್ಟಾಂ ಗಮಿಷ್ಯಥ ॥ ೫೧ ॥

ಜಿತ್ವಾ ಚ ಬಹುಭಿರ್ಯಜ್ಞೈರ್ಯಕ್ಷ್ಯಧ್ವಂ ಭೂರಿದಕ್ಷಿಣೈಃ ।
ಹತಾ ವಾ ದೇವಸಾದ್ಭೂತ್ವಾ ಲೋಕಾನ್ ಪ್ರಾಪ್ಸ್ಯಥ ಪುಷ್ಕಲಾನ್ ॥೫೨॥

ಕ್ಷತ್ರಿಯ ಧರ್ಮವನ್ನು ಪುರಸ್ಕರಿಸಿ ಎಲ್ಲರೂ ಯಾವ ಆತಂಕವನ್ನೂ ಪಡದೆ, ಜಯಿಸಿ ಅಥವಾ ಹತರಾಗಿ, ಇಷ್ಟವಾದ ಗತಿಯನ್ನು ಹೊಂದಿ. ಗೆದ್ದು ಅನೇಕ ದಕ್ಷಿಣೆಯಿಂದ ಕೂಡಿದ ಯಾಗಗಳನ್ನು ಆಚರಿಸಿ ಅಥವಾ ಹತರಾಗಿ ದೇವತೆಗಳಿಗೆ ವಶರಾಗಿ ಪುಷ್ಕಳವಾದ ಲೋಕಗಳನ್ನು ಹೊಂದಿ (ಎಂದು ಹೇಳಿದನು).

ತೇ ರಾಜ್ಞಾ ಚೋದಿತಾ ವೀರಾ ಯೋತ್ಸ್ಯಮಾನಾ ಮಹಾರಥಾಃ ।
ಚತುರ್ಧಾ ವಾಹಿನೀಂ ಕೃತ್ವಾ ತ್ವರಿತಾ ದ್ರೋಣಮಭ್ಯಯುಃ ॥ ೫೩ ॥

ರಾಜನಿಂದ ಪ್ರೇರಿತರಾದ ವೀರರಾದ ಆ ಮಹಾರಥರು ಯುದ್ಧವನ್ನು ಮಾಡಲು ಸಿದ್ಧರಾಗಿ ಸೈನ್ಯವನ್ನು ನಾಲ್ಕು ಭಾಗವನ್ನಾಗಿ ಮಾಡಿ ಶೀಘ್ರವಾಗಿ ದ್ರೋಣರ ಕಡೆಗೆ ನುಗ್ಗಿದರು.

ಪಾಂಚಾಲಾಸ್ತ್ವೇಕತೋ ದ್ರೋಣಮಭ್ಯಘ್ನನ್ ಬಹುಭಿಃ ಶರೈಃ ।
ಭೀಮಸೇನಪುರೋಗಾಶ್ಚ ಏಕತಃ ಪರ್ಯವಾರಯನ್ ॥ ೫೪ ॥

ಪಾಂಚಾಲರು ಒಂದು ಕಡೆಯಿಂದ ಅನೇಕ ಬಾಣಗಳಿಂದ ದ್ರೋಣರನ್ನು ಹೊಡೆದರು. ಭೀಮಸೇನ ಮೊದಲಾದವರು ಇನ್ನೊಂದು ಕಡೆಯಿಂದ ದ್ರೋಣರನ್ನು ತಡೆದರು.

ಆಸಂಸ್ತು ಪಾಂಡುಪುತ್ರಾಣಾಂ ತ್ರಯೋऽಜಿಹ್ಮಾ ಮಹಾರಥಾಃ ।
ಯಮೌ ಚ ಭೀಮಸೇನಶ್ಚ ಪ್ರಾಕ್ರೋಶಂತ ಧನಂಜಯಮ್ ॥ ೫೫ ॥

ಅಭಿದ್ರವಾರ್ಜುನ ಕ್ಷಿಪ್ರಂ ಕುರೂನ್ ದ್ರೋಣಾದಪಾನುದ ।
ತತ ಏನಂ ಹನಿಷ್ಯಂತಿ ಪಾಂಚಾಲಾ ಹತರಕ್ಷಿಣಮ್ ॥ ೫೬ ॥

ಪಾಂಡುಪುತ್ರರ ಕಡೆಯಲ್ಲಿ ಕಪಟವನ್ನು ಮಾಡದ ಮೂರು ಮಹಾರಥರಿದ್ದರು - ನಕುಲ-ಸಹದೇವರು ಮತ್ತು ಭೀಮಸೇನ. ಅವರು ಅರ್ಜುನನನ್ನು ಕುರಿತು- 'ಅರ್ಜುನನೇ, ಇಲ್ಲಿಗೆ ಓಡಿ ಬಾ. ಶೀಘ್ರವಾಗಿ ಕುರುಗಳನ್ನು ದ್ರೋಣರಿಂದ ದೂರ

ಸರಿಸು. ಅನಂತರ ರಕ್ಷಣೆಯಿಲ್ಲದ ದ್ರೋಣರನ್ನು ಪಾಂಚಾಲರು ಕೊಲ್ಲುವರು' ಎಂದು ಕಿರುಚಿದರು.

ಕೌರವೇಯಾಂಸ್ತತಃ ಪಾರ್ಥಃ ಸಹಸಾ ಸಮುಪಾದ್ರವತ್ ।
ಪಾಂಚಾಲಾನೇವ ತು ದ್ರೋಣೋ ಧೃಷ್ಟದ್ಯುಮ್ನಪುರೋಗಮಾನ್ ॥೫೭॥

ಆಗ ಪಾರ್ಥನು ಕೌರವರ ಮೇಲೆ ಶೀಘ್ರವಾಗಿ ಮುನ್ನುಗ್ಗಿದನು. ದ್ರೋಣರಾದರೋ ಧೃಷ್ಟದ್ಯುಮ್ನ ಮೊದಲಾದ ಪಾಂಚಾಲರ ಮೇಲೆ ಎರಗಿದರು.

ಸಸೃಜುಸ್ತರಸಾ ವೀರಾನ್ ಪಂಚಮೇಽಹನಿ ಭಾರತ ।
ಪಾಂಚಾಲಾನಾಂ ತತೋ ದ್ರೋಣೋಽಪ್ಯಕರೋತ್ ಕದನಂ ಮಹತ್ ।
ಯಥಾ ಕ್ರುದ್ಧೋ ರಣೇ ಶಕ್ರೋ ದಾನವಾನಾಂ ಕ್ಷಯಂ ಪುರಾ ॥ ೫೮ ॥

ಎಲೈ ಭಾರತನೇ, (ದ್ರೋಣರ ಸೇನಾಪತ್ಯದ) ಐದನೆಯ ದಿವಸದಲ್ಲಿ ವೀರರು ತಮ್ಮ ಸಾಮರ್ಥ್ಯದಿಂದ ಪರಸ್ಪರವಾಗಿ ಮರ್ದಿಸಿದರು. ಹಿಂದೆ ಇಂದ್ರನು ಕ್ರುದ್ಧನಾಗಿ ದಾನವರ ಜೊತೆಯಲ್ಲಿ ಯುದ್ಧವನ್ನು ಮಾಡಿ ವಿನಾಶಗೊಳಿಸಿದಂತೆ ದ್ರೋಣರು ಪಾಂಚಾಲರ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡಿದರು.

ದ್ರೋಣಾಸ್ತ್ರೇಣ ಮಹಾರಾಜ ವಧ್ಯಮಾನಾಃ ಪರೇ ಯುಧಿ ।
ನಾತ್ರಸಂತ ರಣೇ ದ್ರೋಣಾತ್ ಸತ್ತ್ವವಂತೋ ಮಹಾರಥಾಃ ॥ ೫೯ ॥

ಎಲೈ ಮಹಾರಾಜನೇ, ದ್ರೋಣರ ಅಸ್ತ್ರಗಳಿಂದ ವಧಿಸಲ್ಪಡುತ್ತಿದ್ದ ಧೈರ್ಯಶಾಲಿಗಳಾದ, ಮಹಾರಥರಾದ ಪರರು ರಣರಂಗದಲ್ಲಿ ದ್ರೋಣರಿಗೆ ಹೆದರಲಿಲ್ಲ.

ವಧ್ಯಮಾನಾ ಮಹಾರಾಜ ಪಾಂಚಾಲಾಃ ಸೃಂಜಯಾಸ್ತಥಾ ।
ದ್ರೋಣಮೇವಾಭ್ಯಯುರ್ಯುದ್ಧೇ ಮೋಹಯಂತೋ ಮಹಾರಥಮ್ ॥

ಎಲೈ ಮಹಾರಾಜನೇ, ದ್ರೋಣರಿಂದ ಹೊಡೆಯಲ್ಪಡುತ್ತಿದ್ದ ಪಾಂಚಾಲರು ಮತ್ತು ಸೃಂಜಯರು ಮಹಾರಥರಾದ ದ್ರೋಣರಿಗೆ ಆಶ್ಚರ್ಯವನ್ನುಂಟು ಮಾಡುತ್ತಾ ಯುದ್ಧದಲ್ಲಿ ದ್ರೋಣರ ಕಡೆಗೇ ವೇಗದಿಂದ ಮುನ್ನುಗ್ಗಿದರು.

ತೇಷಾಂ ತೂತ್ಪಾದ್ಯಮಾನಾನಾಂ ಪಾಂಚಾಲಾನಾಂ ಸಮಂತತಃ ।
ಅಭವದ್ ಭೈರವೋ ನಾದೋ ವಧ್ಯತಾಂ ಶರಶಕ್ತಿಭಿಃ ॥ ೬೦ ॥

ಹೀಗೆ ಶರ-ಶಕ್ತಿಗಳಿಂದ ಹೊಡೆಯಲ್ಪಟ್ಟು ಎಲ್ಲ ಕಡೆಗಳಲ್ಲಿಯೂ ನಾಶಗೊಳಿಸಲ್ಪಡುತ್ತಿದ್ದಂತಹ ಪಾಂಚಾಲರಿಗೆ ಭೈರವ ನಾದವುಂಟಾಯಿತು.

ವಧ್ಯಮಾನೇಷು ಸಂಗ್ರಾಮೇ ಪಾಂಚಾಲೇಷು ಮಹಾತ್ಮನಾ ।
ಉದೀರ್ಯಮಾಣೇ ದ್ರೋಣಾಸ್ತ್ರೇ ಪಾಂಡವಾನ್ ಭಯಮಾವಿಶತ್ ॥

ಮಹಾತ್ಮರಾದ ದ್ರೋಣರು ಯುದ್ಧದಲ್ಲಿ ಪಾಂಚಾಲರನ್ನು ನಾಶಪಡಿಸುತ್ತಿರಲು ದ್ರೋಣರ ಅಸ್ತ್ರಗಳು ವಿಜೃಂಭಿಸುತ್ತಿರಲು ಪಾಂಡವರಿಗೆ ಭಯವುಂಟಾಯಿತು.

ದೃಷ್ಟ್ವಾಶ್ವನರಸಂಘಾನಾಂ ವಿಪುಲಂ ಚ ಕ್ಷಯಂ ಯುಧಿ ।
ಪಾಂಡವೇಯಾ ಮಹಾರಾಜ ನಾಶಂಸುರ್ವಿಜಯಂ ತದಾ ॥ ೬೩ ॥

ಎಲೈ ಮಹಾರಾಜನೇ, ಯುದ್ಧದಲ್ಲಿ ಅಶ್ವ-ನರ ಸಮೂಹಗಳ ವಿಪುಲವಾದ ಕ್ಷಯವನ್ನು ನೋಡಿ, ಪಾಂಡವರು ಆಗ ವಿಜಯದ ಆಸೆಯನ್ನು ಹೊಂದಲಿಲ್ಲ.

ಕಚ್ಚಿದ್ ದ್ರೋಣೋ ನ ನಃ ಸರ್ವಾನ್ ಕ್ಷಪಯೇತ್ ಪರಮಾಸ್ತ್ರವಿತ್ ।
ಸಮಿದ್ಧಃ ಶಿಶಿರಾಪಾಯೇ ದಹನ್ ಕಕ್ಷಮಿವಾನಲಃ ॥ ೬೪ ॥

ಪರಮಾಸ್ತ್ರವೇತ್ತರಾದ ಈ ದ್ರೋಣರು ಶಿಶಿರಋತುವಿನ ನಂತರ ಅಗ್ನಿಯು ಹುಲ್ಲುಗಾವಲನ್ನು ಸುಡುವಂತೆ ಪ್ರಜ್ವಲಿತರಾಗಿ ನಮ್ಮೆಲ್ಲರನ್ನೂ ನಾಶಪಡಿಸುವುದಿಲ್ಲವೇ?

ನ ಚೈನಂ ಸಂಯುಗೇ ಕಶ್ಚಿತ್ ಸಮರ್ಥಃ ಪ್ರತಿವೀಕ್ಷಿತುಮ್ ।
ನ ಚೈನಮರ್ಜುನೋ ಜಾತು ಪ್ರತಿಯುದ್ಧ್ಯೇತ ಧರ್ಮವಿತ್ ॥ ೬೫ ॥

ಇವರನ್ನು ಪ್ರತಿಯಾಗಿ ನೋಡಲು ಯುದ್ಧದಲ್ಲಿ ಯಾರೂ ಸಮರ್ಥರಾಗಿಲ್ಲ. ಧಾರ್ಮಿಕನಾದ ಅರ್ಜುನನು ಇವರ ಜೊತೆಯಲ್ಲಿ ಎಂದೂ ಯುದ್ಧವನ್ನು ಮಾಡಲಾರನು (ಎಂದು ಚಿಂತಿಸಿದರು).

ತ್ರಸ್ತಾನ್ ಕುಂತೀಸುತಾನ್ ದೃಷ್ಟ್ವಾ ದ್ರೋಣಸಾಯಕಪೀಡಿತಾನ್ ।
ಮತಿಮಾನ್ ಶ್ರೇಯಸೇ ಯುಕ್ತಃ ಕೇಶವೋಽರ್ಜುನಮಬ್ರವೀತ್ ॥೬೬॥

ದ್ರೋಣರ ಬಾಣಗಳಿಂದ ಪೀಡಿತರಾಗಿ ಹೆದರಿದ ಕುಂತೀಪುತ್ರರನ್ನು ನೋಡಿ ಅವರ ಶ್ರೇಯಸ್ಸಿನಲ್ಲಿ ನಿರತನಾದ ಮೇಧಾವಿಯಾದ ಕೇಶವನು ಅರ್ಜುನನನ್ನು ಕುರಿತು ಹೇಳಿದನು.

ನೈಷ ಯುದ್ಧೇನ ಸಂಗ್ರಾಮೇ ಜೇತುಂ ಶಕ್ಯಃ ಕಥಂಚನ ।
ಅಪಿ ವೃತ್ರಹಣಾ ಯುದ್ಧೇ ರಥಯೂಥಪಯೂಥಪಃ ॥ ೬೭ ॥

ರಥಯೂಥಪಯೂಥಪರಾದ ಇವರನ್ನು ಯುದ್ಧದಲ್ಲಿ ಯಾರೂ ಗೆಲ್ಲಲಾರರು. ಇಂದ್ರನೂ ಸಹ ಗೆಲ್ಲಲಾರ.

ಆಸ್ಥೀಯತಾಂ ಜಯೇ ಯೋಗೋ ಧರ್ಮಮುತ್ಸೃಜ್ಯ ಪಾಂಡವ ।
ಯಥಾ ವಃ ಸಂಯುಗೇ ಸರ್ವಾನ್ ನ ಹನ್ಯಾದ್ ರುಗ್ಮವಾಹನಃ ॥೬೮॥

ಎಲೈ ಪಾಂಡವನೇ, ರುಕ್ಮವಾಹನರಾದ ದ್ರೋಣರು ನಿಮ್ಮೆಲ್ಲರನ್ನೂ ಕೊಲ್ಲದಂತೆ ಧರ್ಮವನ್ನು ಬಿಟ್ಟು ಜಯವನ್ನು ಗಳಿಸುವ ಯಾವುದಾದರೂ ಉಪಾಯವನ್ನು ಆಶ್ರಯಿಸು.

ಅಶ್ವತ್ಥಾಮ್ನಿ ಹತೇ ನೈಷ ಯುದ್ಧ್ಯೇದಿತಿ ಮತಿರ್ಮಮ ।
ತಂ ಹತಂ ಸಂಯುಗೇ ಕಶ್ಚಿದಸ್ಮೈ ಶಂಸತು ಮಾನವಃ ॥ ೬೯ ॥

ಅಶ್ವತ್ಥಾಮರು ಹತರಾದರೆ ಇವರು ಯುದ್ಧ ಮಾಡಲಾರರೆಂದು ನನ್ನ ಅಭಿಪ್ರಾಯ. ಯಾವನಾದರೂ ಮನುಷ್ಯನು ಅವರಿಗೆ ಯುದ್ಧದಲ್ಲಿ ಅಶ್ವತ್ಥಾಮನು ಹತನಾದನೆಂದು ಹೇಳಲಿ (ಎಂದು ಹೇಳಿದನು).

ಏತನ್ನಾರೋಚಯದ್ ರಾಜನ್ ಕುಂತೀಪುತ್ರೋ ಧನಂಜಯಃ ।
ಅನ್ಯೇ ತ್ವರೋಚಯನ್ ಸರ್ವೇ ಕೃಚ್ಛ್ರೇಣ ತು ಯುಧಿಷ್ಠಿರಃ ॥ ೭೦ ॥

ಎಲೈ ರಾಜನೇ, ಕುಂತೀಪುತ್ರನಾದ ಅರ್ಜುನನು ಇದನ್ನು ಇಷ್ಟಪಡಲಿಲ್ಲ. ಉಳಿದವರೆಲ್ಲರೂ ಇಷ್ಟಪಟ್ಟರು. ಯುಧಿಷ್ಠಿರನು ಕಷ್ಟದಿಂದ ಒಪ್ಪಿದನು.

ತತೋ ಭೀಮೋ ಮಹಾಬಾಹುರನೀಕೇ ಸ್ವೇ ಮಹಾಗಜಮ್ ।
ಜಘಾನ ಗದಯಾ ರಾಜನ್ನಶ್ವತ್ಥಾಮಾನಮಿತ್ಯುತ ॥ ೭೧ ॥

ಎಲೈ ರಾಜನೇ, ಅನಂತರ ಮಹಾಬಾಹುವಾದ ಭೀಮನು ತನ್ನ ಸೇನೆಯಲ್ಲಿದ್ದ ಅಶ್ವತ್ಥಾಮ ಎಂಬ ಹೆಸರಿನ ಮಹಾಗಜವನ್ನು ಕೊಂದನು.

ಭೀಮಸೇನಸ್ತು ಸವ್ರೀಡಮುಪೇತ್ಯ ದ್ರೋಣಮಾಹವೇ ।
ಅಶ್ವತ್ಥಾಮಾ ಹತ ಇತಿ ಶಬ್ದಮುಚ್ಚೈಶ್ಚಕಾರ ಹ ॥ ೭೨ ॥

ಭೀಮಸೇನನಾದರೋ ರಣರಂಗದಲ್ಲಿ ನಾಚಿಕೆಯಿಂದ ದ್ರೋಣರನ್ನು ಸಮೀಪಿಸಿ 'ಅಶ್ವತ್ಥಾಮಾ ಹತಃ' ಎಂಬ ಶಬ್ದವನ್ನು ಗಟ್ಟಿಯಾಗಿ ಹೇಳಿದನು.

ಅಶ್ವತ್ಥಾಮೇತಿ ಹಿ ಗಜಃ ಖ್ಯಾತೋ ನಾಮ್ನಾ ಹತೋಽಭವತ್ ।
ಕೃತ್ವಾ ಮನಸಿ ತಂ ಭೀಮೋ ಮಿಥ್ಯಾ ವ್ಯಾಹೃತವಾಂಸ್ತದಾ ॥ ೭೩ ॥

ಅಶ್ವತ್ಥಾಮ ಎಂಬ ಹೆಸರಿನಿಂದ ಪ್ರಖ್ಯಾತವಾದ ಗಜವು ಆಗ ಹತವಾಗಿದ್ದಿತು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಭೀಮನು ಸುಳ್ಳಲ್ಲದ ಮಾತನ್ನೇ ಆಡಿದನು.

ಭೀಮಸೇನವಚಃ ಶ್ರುತ್ವಾ ದ್ರೋಣಸ್ತತ್ಪರಮಪ್ರಿಯಮ್ ।
ಮನಸಾ ಸನ್ನಗಾತ್ರೋಽಭೂದ್ ಯಥಾ ಸೈಕತಮಂಭಸಿ ॥ ೭೪ ॥

ಅತ್ಯಂತ ಅಪ್ರಿಯವಾದ ಭೀಮಸೇನನ ಆ ಮಾತುಗಳನ್ನು ಕೇಳಿ, ದ್ರೋಣರು ಮನಸ್ಸಿನಲ್ಲಿಯೇ ಮರಳು ನೀರಿನಲ್ಲಿ ಕುಗ್ಗಿಹೋಗುವಂತೆ ಕುಗ್ಗಿಹೋದರು.

ಶಂಕಮಾನಃ ಸ ತನ್ಮಿಥ್ಯಾ ವೀರ್ಯಜ್ಞಃ ಸ್ವಸುತಸ್ಯ ವೈ ।
ಹತಃ ಸ ಇತಿ ಚ ಶ್ರುತ್ವಾ ನೈವ ಧೈರ್ಯಾದಕಂಪತ ॥ ೭೫ ॥

ತನ್ನ ಪುತ್ರನ ಪರಾಕ್ರಮವನ್ನು ತಿಳಿದ ಅವರು ಭೀಮಸೇನನ ಮಾತು ಸುಳ್ಳಾಗಿರಬಹುದೆಂದು ಶಂಕಿಸಿ ಅವನು ಹತನಾಗಿದ್ದಾನೆ ಎಂದು ಕೇಳಿದರೂ ಧೈರ್ಯಗೆಡಲಿಲ್ಲ.

ಸ ಲಬ್ಧ್ವಾ ಚೇತನಾಂ ದ್ರೋಣಃ ಕ್ಷಣೇನೈವ ಸಮಾಶ್ವಸತ್ ।
ಅನುಚಿಂತ್ಯಾತ್ಮನಃ ಪುತ್ರಮವಿಷಹ್ಯಮರಾತಿಭಿಃ ॥ ೭೬ ॥

ಅವರು ತಮ್ಮ ಪುತ್ರನು ಶತ್ರುಗಳಿಂದ ಸಹಿಸಲು ಅಸಾಧ್ಯನಾದವನು ಎಂದು ಚಿಂತಿಸಿ, ಒಂದು ಕ್ಷಣದಲ್ಲಿ ವಿವೇಕವನ್ನು ಮರಳಿ ಪಡೆದು ಸಮಾಧಾನವನ್ನು ಹೊಂದಿದರು.

ಸ ಪಾರ್ಷತಮಭಿದ್ರುತ್ಯ ಜಿಘಾಂಸುರ್ಮೃತ್ಯುಮಾತ್ಮನಃ ।
ಅವಾಕಿರತ್ ಸಹಸ್ರೇಣ ತೀಕ್ಷ್ಣಾನಾಂ ಕಂಕಪತ್ರಿಣಾಮ್ ॥ ೭೭ ॥

ಅವರು ತಮ್ಮ ಮೃತ್ಯುವಾದ ಧೃಷ್ಟದ್ಯುಮ್ನನನ್ನು ಕೊಲ್ಲುವ ಉದ್ದೇಶದಿಂದ ಅವನ ಕಡೆಗೆ ಓಡಿ, ಕಂಕಪತ್ರಗಳನ್ನು ಹೊಂದಿದ್ದ ತೀಕ್ಷ್ಣವಾದ ಸಹಸ್ರ ಬಾಣಗಳನ್ನು ಅವನ ಮೇಲೆ ಸುರಿಸಿದರು.

ತಂ ವೈ ವಿಂಶತಿಸಾಹಸ್ರಾಃ ಪಾಂಚಾಲಾನಾಂ ನರರ್ಷಭಾಃ ।
ತಥಾ ಚರಂತಂ ಸಂಗ್ರಾಮೇ ಸರ್ವತೋ ವ್ಯಕಿರನ್ ಶರೈಃ ॥ ೭೮ ॥

ಪಾಂಚಾಲರ ಇಪ್ಪತ್ತು ಸಾವಿರ ನರಶ್ರೇಷ್ಠರು ರಣರಂಗದಲ್ಲಿ ಆ ರೀತಿಯಲ್ಲಿ ಸಂಚರಿಸುತ್ತಿದ್ದ ದ್ರೋಣರನ್ನು ಎಲ್ಲ ಕಡೆಗಳಿಂದಲೂ ಬಾಣಗಳಿಂದ ಹೊಡೆದರು.

ತತಃ ಪ್ರಾದುಷ್ಕರೋದ್ ದ್ರೋಣೋ ಬ್ರಾಹ್ಮಮಸ್ತ್ರಂ ಪರಂತಪಃ ।
ವಧಾಯ ತೇಷಾಂ ಶೂರಾಣಾಂ ಪಾಂಚಲಾನಾಮಮರ್ಷಿತಃ ॥ ೭೯ ॥

ಆಗ ಪರಂತಪರಾದ ದ್ರೋಣರು ರೋಷವನ್ನು ಹೊಂದಿ ಪಾಂಚಾಲ ಶೂರರ ವಧೆಗಾಗಿ ಅವರ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು.

ತತೋ ವ್ಯರೋಚತ ದ್ರೋಣೋ ನಿಘ್ನನ್ ಸರ್ವಸೋಮಕಾನ್ ।
ಶಿರಾಂಸ್ಯಪಾತಯಚ್ಚಾಪಿ ಪಾಂಚಾಲಾನಾಂ ಮಹಾಮೃಧೇ ।
ತಥೈವ ಪರಿಘಾಕಾರಾನ್ ಬಾಹೂನ್ ಕನಕಭೂಷಣಾನ್ ॥ ೮೦ ॥

ಆಗ ದ್ರೋಣರು ಎಲ್ಲಾ ಸೋಮಕರನ್ನೂ ಕೊಲ್ಲುತ್ತಾ ವಿರಾಜಿಸಿದರು. ದೊಡ್ಡ ಯುದ್ಧದಲ್ಲಿ ಪಾಂಚಾಲರ ಶಿರಸ್ಸುಗಳನ್ನು, ಹಾಗೆಯೇ ಕನಕಭೂಷಿತವಾದ ಅವರ ಒನಕೆಯಂತಹ ಬಾಹುಗಳನ್ನು ಕತ್ತರಿಸಿ ಉರುಳಿಸಿದರು.

ತೇ ವಧ್ಯಮಾನಾಃ ಸಮರೇ ಭಾರದ್ವಾಜೇನ ಪಾರ್ಥಿವಾಃ ।
ಮೇದಿನ್ಯಾಮನ್ವಕೀರ್ಯಂತ ವಾತನುನ್ನಾ ಇವ ದ್ರುಮಾಃ ॥ ೮೧ ॥

ಯುದ್ಧದಲ್ಲಿ ದ್ರೋಣರಿಂದ ಹೊಡೆಯಲ್ಪಟ್ಟ ರಾಜರು ಬಿರುಗಾಳಿಗೆ ಸಿಕ್ಕಿ ಬಿದ್ದ ಮರಗಳಂತೆ ಭೂಮಿಯ ಮೇಲೆ ಎಲ್ಲ ಕಡೆಯಲ್ಲಿಯೂ ಹರಡಿಕೊಂಡರು.

ಕುಂಜರಾಣಾಂ ಚ ಪತತಾಂ ಹಯೌಘಾನಾಂ ಚ ಭಾರತ ।
ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ ॥ ೮೨ ॥

ಎಲೈ ಭಾರತನೇ, ಭೂಮಿಯ ಮೇಲೆ ಬೀಳುವ ಗಜಗಳಿಂದಲೂ ಮತ್ತು ಅಶ್ವ ಸಮೂಹಗಳಿಂದಲೂ ಕೂಡಿದ, ಮಾಂಸ-ರಕ್ತವುಳ್ಳ ಭೂಮಿಯು ನಡೆಯಲು ಅಸಾಧ್ಯವಾಗಿದ್ದಿತು.

ಹತ್ವಾ ವಿಂಶತಿಸಾಹಸ್ರಾನ್ ಪಾಂಚಾಲಾನಾಂ ರಥವ್ರಜಾನ್ ।
ಅತಿಷ್ಠದಾಹವೇ ದ್ರೋಣೋ ವಿಧೂಮೋಽಗ್ನಿರಿವ ಜ್ವಲನ್ ॥ ೮೩ ॥

ದ್ರೋಣರು ಪಾಂಚಾಲರ ಇಪ್ಪತ್ತು ಸಹಸ್ರರಥಸಮೂಹಗಳನ್ನು ಕೊಂದು ಯುದ್ಧದಲ್ಲಿ ಧೂಮವಿಲ್ಲದ ಅಗ್ನಿಯಂತೆ ಜ್ವಲಿಸುತ್ತಾ ನಿಂತರು.

ತಥೈವ ಚ ಪುನಃ ಕ್ರುದ್ಧೋ ಭಾರದ್ವಾಜಃ ಪ್ರತಾಪವಾನ್ ।
ವಸುದಾನಸ್ಯ ಭಲ್ಲೇನ ಶಿರಃ ಕಾಯಾದಪಾಹರತ್ ॥ ೮೪ ॥

ಹಾಗೆಯೇ ಪ್ರತಾಪಶಾಲಿಗಳಾದ ದ್ರೋಣರು ಪುನಃ ಕ್ರುದ್ಧರಾಗಿ ಭಲ್ಲದಿಂದ ವಸುದಾನನ ಶಿರಸ್ಸನ್ನು ಅವನ ದೇಹದಿಂದ ಕತ್ತರಿಸಿದರು.

ಪುನಃ ಪಂಚಶತಾನ್ ಮತ್ಸ್ಯಾನ್ ಷಟ್‌ಸಹಸ್ರಾಂಶ್ಚ ಸೃಂಜಯಾನ್ ।
ಹಸ್ತಿನಾಮಯುತಂ ಹತ್ವಾ ಜಘಾನಾಶ್ವಾಯುತಂ ಪುನಃ ॥ ೮೫ ॥

ಪುನಃ ಐದುನೂರು ಮತ್ಸ್ಯರನ್ನೂ, ಆರು ಸಾವಿರ ಸೃಂಜಯರನ್ನೂ, ಹತ್ತು ಸಾವಿರ ಗಜಗಳನ್ನೂ ಕೊಂದು, ಪುನಃ ಹತ್ತು ಸಾವಿರ ಅಶ್ವಗಳನ್ನು ಕೊಂದರು.

ಕ್ಷತ್ರಿಯಾಣಾಮಭಾವಾಯ ದೃಷ್ಟ್ವಾ ದ್ರೋಣಮವಸ್ಥಿತಮ್ ।
ಋಷಯೋಽಭ್ಯಾಗಮಂಸ್ತೂರ್ಣಂ ಹವ್ಯವಾಹಪುರೋಗಮಾಃ ॥ ೮೬ ॥

ಕ್ಷತ್ರಿಯರನ್ನು ವಿನಾಶ ಮಾಡುವುದಕ್ಕಾಗಿ ರಣರಂಗದಲ್ಲಿ ನಿಂತ ದ್ರೋಣರನ್ನು ನೋಡಿ ಋಷಿಗಳು ಅಗ್ನಿಯನ್ನು ಮುಂದೆ ಮಾಡಿಕೊಂಡು ಶೀಘ್ರವಾಗಿ ಅಲ್ಲಿಗೆ ಬಂದರು.

ವಿಶ್ವಾಮಿತ್ರೋ ಜಮದಗ್ನಿರ್ಭಾರದ್ವಾಜೋಽಥ ಗೌತಮಃ ।
ವಸಿಷ್ಠಃ ಕಶ್ಯಪೋಽತ್ರಿಶ್ಚ ಬ್ರಹ್ಮಲೋಕಂ ನಿನೀಷವಃ ॥ ೮೭ ॥

ಸಿಕತಾಃ ಪೃಶ್ನಯೋ ಗರ್ಗಾ ವಾಲಖಿಲ್ಯಾ ಮರೀಚಿಪಾಃ ।
ಭೃಗವೋಽಂಗೀರಸಶ್ಚೈವ ಸೂಕ್ಷ್ಮಾಶ್ಚಾನ್ಯೇ ಮಹರ್ಷಯಃ ॥ ೮೮ ॥

ವಿಶ್ವಾಮಿತ್ರ, ಜಮದಗ್ನಿ, ಭಾರದ್ವಾಜ, ಗೌತಮ, ವಸಿಷ್ಠ, ಕಶ್ಯಪ, ಅತ್ರಿ, ಸಿಕತರು, ಗರ್ಗರು, ವಾಲಖಿಲ್ಯರು, ಮರೀಚಿಪರು, ಭೃಗುಗಳು, ಅಂಗಿರಸರು, ಸೂಕ್ಷ್ಮವಾದ ಇನ್ನೂ ಅನೇಕ ಮಹರ್ಷಿಗಳು ಅವರನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗಲು ಬಯಸಿ ಅಲ್ಲಿಗೆ ಬಂದರು.

ತ ಏನಮಬ್ರುವನ್ ಸರ್ವೇ ದ್ರೋಣಮಾಹವಶೋಭಿನಮ್ ।
ಅಧರ್ಮತಃ ಕೃತಂ ಯುದ್ಧಂ ಸಮಯೋ ನಿಧನಸ್ಯ ತೇ ॥ ೮೯ ॥

ಅವರೆಲ್ಲರೂ ರಣದಲ್ಲಿ ಶೋಭಿಸುವ ದ್ರೋಣರನ್ನು ಕುರಿತು ನೀವು ಅಧರ್ಮದಿಂದ ಯುದ್ಧವನ್ನು ಮಾಡಿದ್ದೀರಿ. ನಿಮ್ಮ ಮರಣಕ್ಕೆ ಇದು ಸಮಯವಾಗಿದೆ ಎಂದು ಹೇಳಿದರು.

ನ್ಯಸ್ಯಾಯುಧಂ ರಣೇ ದ್ರೋಣ ಸಮೇತ್ಯಾಸ್ಮಾನವಸ್ಥಿತಾನ್ ।
ನಾತಃ ಕ್ರೂರತರಂ ಕರ್ಮ ಪುನಃ ಕರ್ತುಂ ತ್ವಮರ್ಹಸಿ ॥ ೯೦ ॥

ವೇದವೇದಾಂಗವಿದುಷಃ ಸತ್ಯಧರ್ಮಪರಸ್ಯ ಚ ।
ಬ್ರಾಹ್ಮಣಸ್ಯ ವಿಶೇಷೇಣ ತವೈತನ್ನೋಪಪದ್ಯತೇ ॥ ೯೧ ॥

ನ್ಯಸ್ಯಾಯುಧಮಮೋಘೇಷೋ ತಿಷ್ಠ ವರ್ತ್ಮನಿ ಶಾಶ್ವತೇ ।
ಪರಿಪೂರ್ಣಶ್ಚ ಕಾಲಸ್ತೇ ವಸ್ತುಂ ಲೋಕೇಽದ್ಯ ಮಾನುಷೇ ॥ ೯೨ ॥

ಎಲೈ ದ್ರೋಣರೇ, ರಣರಂಗದಲ್ಲಿ ಶಸ್ತ್ರನ್ಯಾಸವನ್ನು ಮಾಡಿ ಇಲ್ಲಿಗೆ ಬಂದ ನಮ್ಮ ಜೊತೆಯಲ್ಲಿ ಸೇರಿ, ಇಲ್ಲಿಂದ ಮುಂದೆ ಪುನಃ ಇಂತಹ ಕ್ರೂರಕರ್ಮವನ್ನು ಮಾಡಬಾರದು. ವೇದವೇದಾಂಗ ವಿದ್ವಾಂಸರೂ, ಸತ್ಯಧರ್ಮರತರೂ, ವಿಶೇಷವಾಗಿ ಬ್ರಾಹ್ಮಣರೂ ಆದ ನಿಮಗೆ ಇದು ಯೋಗ್ಯವಲ್ಲ. ಎಲೈ ಅಮೋಘ ಬಾಣವುಳ್ಳವರೇ, ಆಯುಧಗಳನ್ನು ತ್ಯಜಿಸಿ ಶಾಶ್ವತವಾದ ಬ್ರಾಹ್ಮಣಮಾರ್ಗದಲ್ಲಿ ನಿಲ್ಲಿ. ನಿಮಗೆ ಮನುಷ್ಯಲೋಕದಲ್ಲಿ ವಾಸಮಾಡುವ ಕಾಲವು ಪೂರ್ಣವಾಗಿ ತುಂಬಿದೆ (ಎಂದು ಹೇಳಿದರು).

ಇತಿ ತೇಷಾಂ ವಚಃ ಶ್ರುತ್ವಾ ಭೀಮಸೇನವಚಶ್ಚ ತತ್ ।
ಧೃಷ್ಟದ್ಯುಮ್ನಂ ಚ ಸಂಪ್ರೇಕ್ಷ್ಯ ರಣೇ ಸ ವಿಮನಾಽಭವತ್ ॥ ೯೩ ॥

ಹೀಗೆ ಆಡಿದ ಅವರ ಮಾತುಗಳನ್ನು ಕೇಳಿ, ಭೀಮಸೇನನ ಆ ಮಾತನ್ನೂ ಕೇಳಿ ಧೃಷ್ಟದ್ಯುಮ್ನನನ್ನು ನೋಡಿ, ರಣರಂಗದಲ್ಲಿ ದ್ರೋಣರು ಉತ್ಸಾಹಶೂನ್ಯರಾದರು.

ಸ ದಹ್ಯಮಾನೋ ವ್ಯಥಿತಃ ಕುಂತೀಪುತ್ರಂ ಯುಧಿಷ್ಠಿರಮ್ ।
ಅಹತಂ ವಾ ಹತಂ ವೇತಿ ಪಪ್ರಚ್ಛ ಸುತಮಾತ್ಮನಃ ॥ ೯೪ ॥

ಅವರು ಶೋಕದಿಂದ ದಹಿಸಲ್ಪಡುತ್ತಾ, ವ್ಯಥೆಯಿಂದ ಕೂಡಿ, ಕುಂತೀಪುತ್ರನಾದ ಯುಧಿಷ್ಠಿರನನ್ನು ಕುರಿತು ನನ್ನ ಪುತ್ರನು ಹತನಾಗಿದ್ದಾನೆಯೇ, ಇಲ್ಲವೇ ಎಂದು ಪ್ರಶ್ನೆ ಮಾಡಿದರು.

ಸ್ಥಿರಾ ಬುದ್ಧಿರ್ಹಿ ದ್ರೋಣಸ್ಯ ನ ಪಾರ್ಥೋ ವಕ್ಷ್ಯತೇಽನೃತಮ್ ।
ತ್ರಯಾಣಾಮಪಿ ಲೋಕಾನಾಮೈಶ್ವರ್ಯಾರ್ಥೇ ಕಥಂಚನ ॥ ೯೫ ॥

ಮೂರುಲೋಕಗಳ ಐಶ್ವರ್ಯದ ಸಲುವಾಗಿಯೂ ಯುಧಿಷ್ಠಿರನು ಯಾವ ರೀತಿಯಲ್ಲಿಯೂ ಸುಳ್ಳು ಹೇಳುವುದಿಲ್ಲವೆಂಬುದು ದ್ರೋಣರ ದೃಢವಾದ ನಂಬಿಕೆ.

ತಸ್ಮಾತ್ ತಂ ಪರಿಪಪ್ರಚ್ಛ ನಾನ್ಯಂ ಕಂಚಿದ್ವಿಶೇಷತಃ ।
ತಸ್ಮಿಂಸ್ತಸ್ಯ ಹಿ ವಿಶ್ವಾಸೋ ಬಾಲ್ಯಾತ್‌ಪ್ರಭೃತಿ ಪಾಂಡವೇ ॥ ೯೬॥

ಆದ್ದರಿಂದ ಅವನನ್ನೇ ಕೇಳಿದರು, ಬೇರೆ ಯಾರನ್ನೂ ವಿಶೇಷವಾಗಿ ಕೇಳಲಿಲ್ಲ. ಬಾಲ್ಯದಿಂದಲೂ ಯುಧಿಷ್ಠಿರನಲ್ಲಿ ದ್ರೋಣರಿಗೆ ಪರಮ ವಿಶ್ವಾಸವಿದೆ.

ತತೋ ನಿಷ್ಪಾಂಡವಾಮುರ್ವೀಂ ಕರಿಷ್ಯಂತಂ ಯುಧಾಂಪತಿಮ್ ।
ದ್ರೋಣಂ ಜ್ಞಾತ್ವಾ ಧರ್ಮರಾಜಂ ಗೋವಿಂದೋ ವ್ಯಥಿತೋಽಬ್ರವೀತ್ ॥

ಆಗ ಭೂಮಿಯನ್ನು ನಿಷ್ಪಾಂಡವರನ್ನಾಗಿ ಮಾಡಲಿರುವ, ಯುದ್ಧಪತಿಗಳಾದ ದ್ರೋಣರನ್ನು ತಿಳಿದು ಗೋವಿಂದನು ಧರ್ಮರಾಜನನ್ನು ಕುರಿತು ವ್ಯಥೆಯಿಂದ ಹೇಳಿದನು.

ಯದ್ಯರ್ಧದಿವಸಂ ದ್ರೋಣೋ ಯುದ್ಧ್ಯತೇ ಮನ್ಯುಮಾಸ್ಥಿತಃ ।
ಸತ್ಯಂ ಬ್ರವೀಮಿ ತೇ ಸೇನಾ ವಿನಾಶಂ ಸಮುಪೈಷ್ಯತಿ ॥ ೯೮ ॥

ದ್ರೋಣರು ಕೋಪವನ್ನು ಹೊಂದಿ ಇನ್ನು ಅರ್ಧದಿವಸ ಯುದ್ಧವನ್ನು ಮಾಡಿದರೆ ನಿನ್ನ ಸೈನ್ಯವು ವಿನಾಶವನ್ನು ಹೊಂದುವುದು ಎಂದು ಸತ್ಯವನ್ನು ಹೇಳುತ್ತಿದ್ದೇನೆ.

ಸ ಭವಾಂಸ್ತ್ರಾತು ನೋ ದ್ರೋಣಾತ್ ಸತ್ಯಾಜ್ಜ್ಯಾಯೋಽನೃತಂ ಭವೇತ್।
ಅನೃತಂ ಜೀವಿತಸ್ಯಾರ್ಥೇ ವದನ್ನ ಸ್ಪೃಶತೇಽನೃತೈಃ ॥ ೯೯ ॥

ನೀನು ನಮ್ಮನ್ನು ದ್ರೋಣರಿಂದ ರಕ್ಷಿಸುವವನಾಗು. ಸತ್ಯಕ್ಕಿಂತಲೂ ಅನೃತವೇ ಶ್ರೇಷ್ಠವಾದೀತು. ಜೀವನದ ಸಲುವಾಗಿ ಅನೃತವನ್ನು ಹೇಳುವವನು ಅನೃತದ (ಸುಳ್ಳಿನ) ದೋಷದಿಂದ ಲಿಪ್ತನಾಗುವುದಿಲ್ಲ (ಎಂದು ಹೇಳಿದನು).

ತಯೋಃ ಸಂವದತೋರೇವಂ ಭೀಮಸೇನೋಽಬ್ರವೀದಿದಮ್ ।
ಶ್ರುತ್ವೈವ ತಂ ಮಹಾರಾಜ ವಧೋಪಾಯಂ ಮಹಾತ್ಮನಃ ॥ ೧೦೦ ॥

ಗಾಹಮಾನಸ್ಯ ತೇ ಸೇನಾಂ ಮಾಲವಸ್ಯೇಂದ್ರವರ್ಮಣಃ ।
ಅಶ್ವತ್ಥಾಮೇತಿ ವಿಖ್ಯಾತೋ ಗಜಃ ಶಕ್ರಗಜೋಪಮಃ ॥ ೧೦೧ ॥

ನಿಹತೋ ಯುಧಿ ವಿಕ್ರಮ್ಯ ತತೋಽಹಂ ದ್ರೋಣಮಬ್ರುವಮ್ ।
ಅಶ್ವತ್ಥಾಮಾ ಹತೋ ಬ್ರಹ್ಮನ್ ನಿರ್ಮನ್ಯಾಸ್ತ್ವಮವಾದಿತಿ ॥ ೧೦೨ ॥

ಅವರಿಬ್ಬರೂ ಮಾತನಾಡುತ್ತಿರುವಾಗ ಎಲೈ ಮಹಾರಾಜನೇ, ಮಹಾತ್ಮರಾದ ದ್ರೋಣರ ವಧೆಯ ಉಪಾಯವನ್ನು ಕೇಳಿದ ಭೀಮಸೇನನು, ನಿಮ್ಮ ಸೈನ್ಯವನ್ನು ಪ್ರವೇಶಿಸುತ್ತಿದ್ದ ಮಾಲವ ದೇಶದ ಇಂದ್ರವರ್ಮನ ಇಂದ್ರನ ಗಜಕ್ಕೆ ಸಮಾನವಾದ ಅಶ್ವತ್ಥಾಮ ಎಂಬ ಗಜವು ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿ, ನನ್ನಿಂದ ಕೊಲ್ಲಲ್ಪಟ್ಟಿತು. ಆಗ ನಾನು ದ್ರೋಣರನ್ನು ಕುರಿತು 'ಬ್ರಾಹ್ಮಣರೇ, ಅಶ್ವತ್ಥಾಮನು ಹತನಾಗಿದ್ದಾನೆ. ಯುದ್ಧದಿಂದ ಹಿಂದಿರುಗಿ' ಎಂದು ಹೇಳಿದೆನು.

ನೂನಂ ನಾಶ್ರದ್ದಧದ್ ವಾಕ್ಯಮೇಷ ಮೇ ಪುರುಷರ್ಷಭಃ ।
ಸ ತ್ವಂ ಗೋವಿಂದವಾಕ್ಯಾನಿ ಮಾನಯಸ್ವ ಜಯೈಷಿಣಃ ॥ ೧೦೩ ॥

ಪುರುಷಶ್ರೇಷ್ಠರಾದ ದ್ರೋಣರು ನನ್ನ ವಾಕ್ಯವನ್ನು ನಂಬಲಿಲ್ಲ. (ಎಲೈ ಧರ್ಮರಾಜನೇ) ನಮ್ಮ ಜಯವನ್ನು ಬಯಸುವ ಕೃಷ್ಣನ ಮಾತುಗಳನ್ನು ಗೌರವಿಸು.

ದ್ರೋಣಾಯ ನಿಹತಂ ಶಂಸ ರಾಜನ್ ಶಾರದ್ವತೀಸುತಮ್ ।
ತ್ವಯೋಕ್ತೋ ನೈಷ ಯುದ್ಧ್ಯೇತ ಜಾತು ರಾಜನ್ ದ್ವಿಜರ್ಷಭಃ ।
ಸತ್ಯವಾನ್ ಹಿ ನೃಲೋಕೇಽಸ್ಮಿನ್ ಭವಾನ್ ಖ್ಯಾತೋ ಜನಾಧಿಪ ॥

ಎಲೈ ರಾಜನೇ, ಶಾರದ್ವತೀ ಸುತರಾದ ಅಶ್ವತ್ಥಾಮರು ಹತರಾಗಿದ್ದಾರೆಂದು ದ್ರೋಣರಿಗೆ ಹೇಳು. ಎಲೈ ರಾಜನೇ, ದ್ವಿಜಶ್ರೇಷ್ಠರಾದ ಅವರು ನೀನು ಹಾಗೆ ಹೇಳಿದರೆ ಖಂಡಿತವಾಗಿಯೂ ಯುದ್ಧವನ್ನು ಮಾಡಲಾರರು. ಎಲೈ ಜನಾಧಿಪನೇ, ನೀನು ಈ ಮನುಷ್ಯಲೋಕದಲ್ಲಿ ಸತ್ಯವಂತನೆಂದು ಪ್ರಖ್ಯಾತನಾಗಿದ್ದೀಯೆ (ಎಂದು ಹೇಳಿದನು).

ತಸ್ಯ ತದ್ವಚನಂ ಶ್ರುತ್ವಾ ಕೃಷ್ಣವಾಕ್ಯಪ್ರಚೋದಿತಃ ।
ಭಾವಿತ್ವಾಚ್ಚ ಮಹಾರಾಜ ವಕ್ತುಂ ಸಮುಪಚಕ್ರಮೇ ॥ ೧೦೫ ॥

ಭೀಮಸೇನನ ಆ ಮಾತುಗಳನ್ನು ಕೇಳಿ, ಕೃಷ್ಣನ ಮಾತುಗಳಿಂದಲೂ ಪ್ರಚೋದಿತನಾಗಿ ಎಲೈ ಮಹಾರಾಜನೇ, ಮುಂದಿನ ಕಾರ್ಯವು ಹಾಗೆಯೇ ನಡೆಯಬೇಕಾದ ಕಾರಣದಿಂದ ಧರ್ಮರಾಜನು ಮಾತನಾಡಲು ಉಪಕ್ರಮಿಸಿದನು.

ತಮತಥ್ಯಭಯೇ ಮಗ್ನೋ ಜಯೇ ಸಕ್ತೋ ಯುಧಿಷ್ಠಿರಃ ।
ಅವ್ಯಕ್ತಮಬ್ರವೀದ್ ರಾಜನ್ ಹತಃ ಕುಂಜರ ಇತ್ಯುತ ॥ ೧೦೬ ॥

ಎಲೈ ರಾಜನೇ, ಮಿಥ್ಯಾವಚನದ ಭಯದಲ್ಲಿ ಮಗ್ನನಾಗಿ, ಜಯದಲ್ಲೇ ಆಸಕ್ತನಾದ ಯುಧಿಷ್ಠಿರನು ಅಸ್ಪಷ್ಟವಾಗಿ 'ಹತಃ ಕುಂಜರಃ' ಎಂದೂ ಹೇಳಿದನು.

ತಸ್ಯ ಪೂರ್ವಂ ರಥಃ ಪೃಥ್ವ್ಯಾಶ್ಚತುರಂಗುಲ ಉತ್ತರಃ ।
ಬಭೂವೈವಂ ತು ತೇನೋಕ್ತೇ ತಸ್ಯ ವಾಹಾಸ್ಪೃಶನ್ ಮಹೀಮ್ ॥

ಅವರ ರಥವು ಮೊದಲು ಭೂಮಿಗಿಂತ ನಾಲ್ಕು ಅಂಗುಲ ಎತ್ತರವಾಗಿದ್ದಿತು. ಧರ್ಮರಾಜನು ಹೀಗೆ ಹೇಳುತ್ತಿರಲು ಅವನ ಅಶ್ವಗಳು ಭೂಮಿಯನ್ನು ಸ್ಪರ್ಶಿಸಿದವು.

ಯುದ್ಧಸನ್ನದ್ಧರಾದ ದ್ರೋಣರು ಹ್ರಸ್ವಕಾಯರಾದುದರಿಂದ ನೊಗಕ್ಕೆ ಹೂಡಿದ ಅಶ್ವಗಳು ಎತ್ತರವಾಗಿದ್ದಿದುದರಿಂದ ರಥವು ಭೂಮಿಗಿಂತ ನಾಲ್ಕು ಅಂಗುಲದಷ್ಟು

ಮೇಲಿದ್ದಿತು. 'ಅಶ್ವತ್ಥಾಮಾ ಹತಃ' ಎಂಬ ಮಾತನ್ನು ಕೇಳಿದ ಮೇಲೆ ದುಃಖದಿಂದ ಸಾರಥಿಯು ಕಡಿವಾಣಗಳನ್ನು ಬಿಡುತ್ತಿರಲು, ಕುದುರೆಗಳು ಕತ್ತನ್ನು ಬಗ್ಗಿಸಿದ್ದರಿಂದ ದುಃಖದಿಂದಲೂ ಮತ್ತು ದ್ರೋಣರಿಗೆ ಅತಿಭಾರವಾದ ಕಾರಣದಿಂದಲೂ, ಅವರು ರಥಪೀಠದಲ್ಲಿಯೇ ಕುಳಿತಿದ್ದರಿಂದಲೂ ಅವರ ರಥವು ಭೂಮಿಯನ್ನು ಸ್ಪರ್ಶಿಸಿತು ಎಂದು ಯೋಜನೆಯನ್ನು ಮಾಡಬೇಕು - ಲಕ್ಷಾಲಂಕಾರ.

ಯುಧಿಷ್ಠಿರಾತ್ ತು ತದ್ವಾಕ್ಯಂ ಶ್ರುತ್ವಾ ದ್ರೋಣೋ ಮಹಾರಥಃ ।
ಪುತ್ರವ್ಯಸನಸಂತಪ್ತೋ ನಿರಾಶೋ ಜೀವಿತೇಽಭವತ್ ॥ ೧೦೮ ॥

ಯುಧಿಷ್ಠಿರನಿಂದ ಆ ಮಾತನ್ನು ಕೇಳಿದ ಮಹಾರಥರಾದ ದ್ರೋಣರು ಪುತ್ರಶೋಕದಿಂದ ಸಂತಪ್ತರಾಗಿ ತಮ್ಮ ಜೀವಿತದಲ್ಲಿ ಆಸೆಯನ್ನು ತೊರೆದರು.

ಆಗಸ್ಕೃತಮಿವಾತ್ಮಾನಂ ಪಾಂಡವಾನಾಂ ಮಹಾತ್ಮನಾಮ್ ।
ಋಷಿವಾಕ್ಯಂ ಚ ಮನ್ವಾನಃ ಶ್ರುತ್ವಾ ಚ ನಿಹತಂ ಸುತಮ್ ॥ ೧೦೯॥

ವಿಚೇತಾಃ ಪರಮೋದ್ವಿಗ್ನೋ ಧೃಷ್ಟದ್ಯುಮ್ನಮವೇಕ್ಷ್ಯ ಚ ।
ಯೋದ್ಧುಂ ನಾಶಕ್ನುವದ್ರಾಜನ್ ಯಥಾಪೂರ್ವಮರಿಂದಮ ॥ ೧೧೦ ॥

ಎಲೈ ಅರಿಂದಮನೇ, ತಾವು ಮಹಾತ್ಮರಾದ ಪಾಂಡವರಿಗೆ ಅಪಚಾರವನ್ನು ಮಾಡಿದವರೆಂದು ತಿಳಿದು, ಋಷಿವಾಕ್ಯಗಳನ್ನು ಕೇಳಿ ತಿಳಿದು, ಪುತ್ರನು ನಿಹತನಾದನೆಂದೂ ಕೇಳಿ, ಚೇತನವನ್ನು ಕಳೆದುಕೊಂಡು, ಬಹಳ ಉದ್ವಿಗ್ನರಾಗಿ ಧೃಷ್ಟದ್ಯುಮ್ನನನ್ನು ನೋಡಿದರೂ ಎಲೈ ರಾಜನೇ, ಮೊದಲಿನಂತೆ ಯುದ್ಧವನ್ನು ಮಾಡಲು ಸಮರ್ಥರಾಗಲಿಲ್ಲ.

ತಂ ದೃಷ್ಟ್ವಾ ಪರಮೋದ್ವಿಗ್ನಂ ಶೋಕೋಪಹತಚೇತಸಮ್ ।
ಪಾಂಚಾಲರಾಜಸ್ಯ ಸುತೋ ಧೃಷ್ಟದ್ಯುಮ್ನಃ ಸಮಾದ್ರವತ್ ॥ ೧೧೧ ॥

ಅವರು ದುಃಖದಿಂದ ಪೀಡಿತವಾದ ಮನಸ್ಸುಳ್ಳವರಾಗಿ ಬಹಳ ಉದ್ವಿಗ್ನರಾಗಿರುವುದನ್ನು ನೋಡಿ ಪಾಂಚಾಲರಾಜನ ಪುತ್ರನಾದ ಧೃಷ್ಟದ್ಯುಮ್ನನು ಅವರ ಕಡೆಗೆ ಓಡಿದನು.

ಯ ಇಷ್ಟ್ವಾ ಮನುಜೇಂದ್ರೇಣ ದ್ರುಪದೇನ ಮಹಾಮಖೇ ।
ಲಬ್ಧೋ ದ್ರೋಣವಿನಾಶಾಯ ಸಮಿದ್ಧಾದ್ಧವ್ಯವಾಹನಾತ್ ॥ ೧೧೨ ॥

ಸ ಧನುರ್ಜ್ಯೈತ್ರಮಾದಾಯ ಘೋರಂ ಜಲದನಿಸ್ವನಮ್ ।
ದೃಢಜ್ಯಮಜರಂ ದಿವ್ಯಂ ಶರಾಂಶ್ಚಾಶೀವಿಷೋಪಮಾನ್ ॥ ೧೧೩ ॥

ಸಂದಧೇ ಕಾರ್ಮುಕೇ ತಸ್ಮಿನ್ ಶರಮಾಶೀವಿಷೋಪಮಮ್ ।
ದ್ರೋಣಂ ಜಿಘಾಂಸುಃ ಪಾಂಚಾಲ್ಯೋ ಮಹಾಜ್ವಾಲಮಿವಾನಲಮ್ ॥

ಮನುಷ್ಯೇಂದ್ರನಾದ ದ್ರುಪದನು ದೊಡ್ಡ ಯಾಗವನ್ನು ಮಾಡಿ ಅಗ್ನಿಯನ್ನು ಪೂಜಿಸಿ ಸಮಿದ್ಧವಾದ ಅಗ್ನಿಯಿಂದ ದ್ರೋಣವಿನಾಶಕ್ಕಾಗಿ ಧೃಷ್ಟದ್ಯುಮ್ನನನ್ನು ಮಗನಾಗಿ ಪಡೆದನು. ಪಾಂಚಾಲ ಪುತ್ರನಾದ ಅವನು ಮಹಾಜ್ವಾಲೆಯಿಂದ ಕೂಡಿದ ಅಗ್ನಿಯಂತೆ ಇರುವ ದ್ರೋಣರನ್ನು ಕೊಲ್ಲಲು ಬಯಸಿ ಜಯಶೀಲವೂ, ಘೋರವೂ, ಮೇಘ ನಾದವನ್ನು ಹೊಂದಿದುದೂ, ದೃಢವೂ, ಅಜರವೂ, ದಿವ್ಯವೂ ಆದ ಧನುಸ್ಸನ್ನು ತೆಗೆದುಕೊಂಡು, ಆ ಧನುಸ್ಸಿನಲ್ಲಿ ಸರ್ಪಗಳಂತಿದ್ದ ಬಾಣಗಳನ್ನು ಹೂಡಿದನು.

ತಸ್ಯ ರೂಪಂ ಶರಸ್ಯಾಸೀದ್ಧನುರ್ಜ್ಯಾಮಂಡಲಾಂತರೇ ।
ದ್ಯೋತತೋ ಭಾಸ್ಕರಸ್ಯೇವ ಘನಾಂತೇ ಪರಿವೇಶಿನಃ ॥ ೧೧೫ ॥

ಧನುಸ್ಸಿನ ಹೆದೆಯ ಮಂಡಲದ ಮಧ್ಯದಲ್ಲಿ ಇದ್ದ ಆ ಬಾಣದ ರೂಪವು ಮೋಡಗಳ ಕೊನೆಯಲ್ಲಿ ಪರಿವೇಷದಿಂದ ಕೂಡಿ ಬೆಳಗುವ ಸೂರ್ಯನಂತೆ ಇದ್ದಿತು.

ಪಾರ್ಷತೇನ ಪರಾಮೃಷ್ಟಂ ಜ್ವಲಂತಮಿವ ತದ್ಧನುಃ ।
ಅಂತಕಾಲಮಿವ ಪ್ರಾಪ್ತಂ ಮೇನಿರೇ ವೀಕ್ಷ್ಯ ಸೈನಿಕಾಃ ॥ ೧೧೬ ॥

ಧೃಷ್ಟದ್ಯುಮ್ನನು ಹಿಡಿದ ಜ್ವಲಿಸುವ ಆ ಧನುಸ್ಸನ್ನು ನೋಡಿ ಸೈನಿಕರು ಮೃತ್ಯುವು ಪ್ರಾಪ್ತವಾಗಿದೆ ಎಂದು ತಿಳಿದರು.

ತಮಿಷುಂ ಸಂಹಿತಂ ತೇನ ಭಾರದ್ವಾಜಃ ಪ್ರತಾಪವಾನ್ ।
ದೃಷ್ಟ್ವಾತ್ಮನ್ಯತ ದೇಹಸ್ಯ ಕಾಲಪರ್ಯಾಯಮಾಗತಮ್ ॥ ೧೧೭ ॥

ಪ್ರತಾಪಶಾಲಿಗಳಾದ ದ್ರೋಣರು ಧೃಷ್ಟದ್ಯುಮ್ನನು ಆ ಬಾಣವನ್ನು ಹೂಡಿದುದನ್ನು ನೋಡಿ, ತಮ್ಮ ದೇಹವನ್ನು ತ್ಯಜಿಸುವ ಕಾಲವು ಒದಗಿದೆ ಎಂದು ತಿಳಿದರು.

ತತಃ ಸ ಯತ್ನಮಾತಿಷ್ಠದಾಚಾರ್ಯಸ್ತಸ್ಯ ವಾರಣೇ ।
ನ ಚಾಸ್ಯಾಸ್ತ್ರಾಣಿ ರಾಜೇಂದ್ರ ಪ್ರಾದುರಾಸನ್ ಮಹಾತ್ಮನಃ ॥ ೧೧೮ ॥

ಆಗ ಆಚಾರ್ಯರು ಧೃಷ್ಟದ್ಯುಮ್ನನ ಬಾಣಗಳನ್ನು ತಡೆಯಲು ಪ್ರಯತ್ನ ಪಟ್ಟರೂ ಎಲ್ಲೆ ರಾಜೇಂದ್ರನೇ, ಮಹಾತ್ಮರಾದ ಅವರಿಗೆ ಅಸ್ತ್ರಗಳು ಸ್ಫುರಿಸಲಿಲ್ಲ.

ತಸ್ಯ ತ್ವಹಾನಿ ಚತ್ವಾರಿ ಕ್ಷಪಾ ಚೈಕಾಸ್ಯತೋ ಗತಾ ।
ತಸ್ಯ ಬಾಹ್ವಸ್ತ್ರಿಭಾಗೇನ ಕ್ಷಯಂ ಜಗ್ಮುಃ ಪತತ್ರಿಣಃ ॥ ೧೧೯ ॥

ಅವರು ಯುದ್ಧವನ್ನು ಮಾಡುತ್ತಾ ನಾಲ್ಕು ಹಗಲುಗಳು ಮತ್ತು ಒಂದು ರಾತ್ರಿಯನ್ನು ಕಳೆದಿದ್ದರು. ಆ ಹಗಲಿನ ಮೂರನೆಯ ಭಾಗದಲ್ಲಿ ಅವರ ಬಾಣಗಳು ಮುಗಿದು ಹೋದವು.

ಸ ಶರಕ್ಷಯಮಾಸಾದ್ಯ ಪುತ್ರಶೋಕೇನ ಚಾರ್ದಿತಃ ।
ವಿವಿಧಾನಾಂ ಚ ದಿವ್ಯಾನಾಮಸ್ತ್ರಾಣಾಮಪ್ರಸನ್ನತಾಮ್ ॥ ೧೨೦ ॥

ಉತ್ಸಿಷ್ಟುಕಾಮಃ ಶಸ್ತ್ರಾಣಿ ವಿಪ್ರವಾಕ್ಯಾಭಿಚೋದಿತಃ ।
ತೇಜಸಾ ಪ್ರೇರ್ಯಮಾಣಶ್ಚ ಯುಯುಧೇ ಸೋಽತಿಮಾನುಷಮ್ ॥

ಅವರು ತಮ್ಮ ಬಾಣಗಳ ವಿನಾಶವನ್ನು ಹೊಂದಿ, ಪುತ್ರಶೋಕದಿಂದ ಪೀಡಿತರಾಗಿ, ವಿವಿಧವಾದ ದಿವ್ಯಾಸ್ತ್ರಗಳು ಪ್ರಸನ್ನವಾಗದೆ ಸ್ಫುರಿಸದಿರುವುದನ್ನು ನೋಡಿ, ಋಷಿಗಳ ವಾಕ್ಯದಿಂದಲೂ ಪ್ರಚೋದಿತರಾಗಿ ಶಸ್ತ್ರಗಳನ್ನು ಪರಿತ್ಯಾಗ ಮಾಡಲು ಬಯಸಿ, ಆದರೂ ತಮ್ಮ ಪರಾಕ್ರಮದಿಂದ ಪ್ರೇರಿತರಾಗಿ ಅತಿಮಾನುಷ ಯುದ್ಧವನ್ನು ಮಾಡಿದರು.

ಅಥಾನ್ಯತ್ ಸ ಸಮಾದಾಯ ದಿವ್ಯಮಾಂಗೀರಸಂ ಧನುಃ ।
ಶರಾಂಶ್ಚ ಬ್ರಹ್ಮದಂಡಾಭಾನ್ ಧೃಷ್ಟದ್ಯುಮ್ನಮಯೋಧಯತ್ ॥ ೧೨೨ ॥

ಆಗ ಅವರು ಇನ್ನೊಂದು ದಿವ್ಯವಾದ ಆಂಗೀರಸ ಧನುಸ್ಸನ್ನು ತೆಗೆದುಕೊಂಡು ಬ್ರಹ್ಮದಂಡದಂತಿದ್ದ ಬಾಣಗಳನ್ನೂ ತೆಗೆದುಕೊಂಡು ಧೃಷ್ಟದ್ಯುಮ್ನನ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತಸ್ತಂ ಶರವರ್ಷೇಣ ಮಹತಾ ಸಮವಾಕಿರತ್ ।
ವ್ಯಶಾತಯಚ್ಚ ಸಂಕ್ರುದ್ಧೋ ಧೃಷ್ಟದ್ಯುಮ್ನಮಮರ್ಷಣಃ ॥ ೧೨೩ ॥

ಅನಂತರ ರೋಷಾವಿಷ್ಟರಾದ ಅವರು ದೊಡ್ಡ ಬಾಣಗಳ ವೃಷ್ಟಿಯಿಂದ ಧೃಷ್ಟದ್ಯುಮ್ನನನ್ನು ಹೊಡೆದು ಅವನನ್ನು ಘಾಸಿಗೊಳಿಸಿದರು.

ತಂ ಶರಂ ಶತಧಾ ಚಾಸ್ಯ ದ್ರೋಣಶ್ಚಿಚ್ಛೇದ ಸಾಯಕೈಃ ।
ಧ್ವಜಂ ಧನುಶ್ಚ ನಿಶಿತೈಃ ಸಾರಥಿಂ ಚಾಪ್ಯಪಾತಯತ್ ॥ ೧೨೪ ॥

ಧೃಷ್ಟದ್ಯುಮ್ನನು ಬಿಲ್ಲಿನಲ್ಲಿ ಹೂಡಿದ ಆ ಬಾಣವನ್ನು ತನ್ನ ಬಾಣಗಳಿಂದ ನೂರಾರು ಭಾಗಗಳಾಗಿ ಕತ್ತರಿಸಿದರು. ದ್ರೋಣರು ತೀಕ್ಷ್ಣವಾದ ಬಾಣಗಳಿಂದ ಅವನ ಧ್ವಜವನ್ನೂ, ಧನುಸ್ಸನ್ನೂ ಮತ್ತು ಸಾರಥಿಯನ್ನೂ ಕೆಡವಿದರು.

ಧೃಷ್ಟದ್ಯುಮ್ನಃ ಪ್ರಹಸ್ಯಾನ್ಯತ್ ಪುನರಾದಾಯ ಕಾರ್ಮುಕಮ್ ।
ಶಿತೇನ ಚೈನಂ ಬಾಣೇನ ಪ್ರತ್ಯವಿಧ್ಯತ್ ಸ್ತನಾಂತರೇ ॥ ೧೨೫ ॥

ಧೃಷ್ಟದ್ಯುಮ್ನನು ನಕ್ಕು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತೀಕ್ಷ್ಣವಾದ ಒಂದು ಬಾಣದಿಂದ ದ್ರೋಣರನ್ನು ಅವರ ಸ್ತನಗಳ ಮಧ್ಯದಲ್ಲಿ ಹೊಡೆದನು.

ಸೋಽತಿವಿದ್ಧೋ ಮಹೇಷ್ವಾಸಃ ಸಂಭ್ರಾಂತ ಇವ ಸಂಯುಗೇ ।
ಭಲ್ಲೇನ ಶಿತಧಾರೇಣ ಚಿಚ್ಛೇದಾಸ್ಯ ಮಹದ್ಧನುಃ ॥ ೧೨೬ ॥

ಗಾಢವಾಗಿ ಹೊಡೆಯಲ್ಪಟ್ಟ ಮಹಾಧನುರ್ಧಾರಿಗಳಾದ ದ್ರೋಣರು ರಣರಂಗದಲ್ಲಿ ದಿಗ್ಭ್ರಾಂತರಾದಂತೆ ತೀಕ್ಷ್ಣವಾದ ಅಲುಗುಳ್ಳ ಭಲ್ಲದಿಂದ ಧೃಷ್ಟದ್ಯುಮ್ನನ ದೊಡ್ಡ ಧನುಸ್ಸನ್ನು ಕತ್ತರಿಸಿದರು.

ಯಚ್ಚಾಸ್ಯ ಬಾಣಂ ವಿಕೃತಂ ಧನೂಂಷಿ ಚ ವಿಶಾಂಪತೇ ।
ಸರ್ವಂ ಸಂಚ್ಛಿದ್ಯ ದುರ್ಧರ್ಷೋ ಗದಾಂ ಖಡ್ಗಮಥಾಪಿ ಚ ॥ ೧೨೭ ॥

ಧೃಷ್ಟದ್ಯುಮ್ನಂ ತತೋಽವಿಧ್ಯನ್ನವಭಿರ್ನಿಶಿತೈಃ ಶರೈಃ ।
ಜೀವಿತಾಂತಕರೈಃ ಕ್ರುದ್ಧಃ ಕ್ರುದ್ಧರೂಪಂ ಪರಂತಪಃ ॥ ೧೨೮ ॥

ಎಲೈ ರಾಜನೇ, ಅವನ ಸುವರ್ಣಭೂಷಿತವಾದ ಬಾಣಗಳನ್ನೂ, ಧನುಸ್ಸುಗಳನ್ನೂ ಎಲ್ಲವನ್ನೂ ಕತ್ತರಿಸಿ, ಅನಂತರ ಗದೆಯನ್ನೂ, ಖಡ್ಗವನ್ನೂ ಕತ್ತರಿಸಿ, ದುರ್ಧರ್ಷರೂ, ಪರಂತಪರೂ, ಕ್ರುದ್ಧರೂ ಆದ ದ್ರೋಣರು ಕ್ರುದ್ಧನಾದ ಧೃಷ್ಟದ್ಯುಮ್ನನನ್ನು ತೀಕ್ಷ್ಣವಾದ ಜೀವಿತಾಂತಕರವಾದ ಒಂಬತ್ತು ಬಾಣಗಳಿಂದ ಹೊಡೆದರು.

ಧೃಷ್ಟದ್ಯುಮ್ನರಥಸ್ಯಾಶ್ವಾನ್ ಸ್ವರಥಾಶ್ವೈರ್ಮಹಾರಥಃ ।
ಅಮಿಶ್ರಯದಮೇಯಾತ್ಮಾ ಬ್ರಾಹ್ಮಮಸ್ತ್ರಮುದೀರಯನ್ ॥ ೧೨೯ ॥

ಅಚಿಂತ್ಯವಾದ ಸಾಮರ್ಥ್ಯವುಳ್ಳ ಮಹಾರಥರಾದ ಅವರು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾ ಧೃಷ್ಟದ್ಯುಮ್ನನ ರಥದ ಅಶ್ವಗಳ ಜೊತೆಯಲ್ಲಿ ತಮ್ಮ ರಥದ ಅಶ್ವಗಳನ್ನು ಮಿಶ್ರಣ ಮಾಡಿದರು.

ತೇ ಮಿಶ್ರಾ ಬಹ್ವಶೋಭಂತ ಜವನಾ ವಾತರಂಹಸಃ ।
ಪಾರಾವತಸವರ್ಣಾಶ್ಚ ಶೋಣಾಶ್ಚ ಭರತರ್ಷಭ ॥ ೧೩೦ ॥

ಎಲೈ ಭರತರ್ಷಭನೇ, ವೇಗಶಾಲಿಗಳೂ, ವಾಯುವೇಗವುಳ್ಳವೂ ಆದ ಪಾರಿವಾಳದ ಬಣ್ಣದ ಅಶ್ವಗಳು ಮತ್ತು ಕೆಂಪುಬಣ್ಣದ ಅಶ್ವಗಳು ಮಿಶ್ರಣಗೊಂಡು ಬಹಳವಾಗಿ ಶೋಭಿಸಿದವು.

ಯಥಾ ಸವಿದ್ಯುತೋ ಮೇಘಾ ನದಂತೋ ಜಲದಾಗಮೇ ।
ತಥಾ ರೇಜುರ್ಮಹಾರಾಜ ಮಿಶ್ರಿತಾ ರಣಮೂರ್ಧನಿ ॥ ೧೩೧ ॥

ವರ್ಷಾಕಾಲದ ಆರಂಭದಲ್ಲಿ ಮಿಂಚುಗಳಿಂದ ಕೂಡಿದ ಮೇಘಗಳು ಶೋಭಿಸುವಂತೆ ಎಲೈ ಮಹಾರಾಜನೇ, ರಣರಂಗದಲ್ಲಿ ಮಿಶ್ರಿತವಾದ ಆ ಅಶ್ವಗಳು ಶೋಭಿಸಿದವು.

ಈಷಾಬಂಧಂ ಚಕ್ರಬಂಧಂ ರಥಬಂಧಂ ತಥೈವ ಚ ।
ಪ್ರಣಾಶಯದಮೇಯಾತ್ಮಾ ಧೃಷ್ಟದ್ಯುಮ್ನಸ್ಯ ಸ ದ್ವಿಜಃ ॥ ೧೩೨ ॥

ಅಚಿಂತ್ಯ ಸಾಮರ್ಥ್ಯವುಳ್ಳ ಬ್ರಾಹ್ಮಣರಾದ ದ್ರೋಣರು ಧೃಷ್ಟದ್ಯುಮ್ನನ ರಥದ ಮೂಕಿಯ ಬಂಧವನ್ನೂ, ಚಕ್ರಬಂಧವನ್ನೂ, ರಥಬಂಧವನ್ನೂ ಭಗ್ನಗೊಳಿಸಿದರು.

ಸ ಛಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ ।
ಉತ್ತಮಾಮಾಪದಂ ಪ್ರಾಪ್ಯ ಗದಾಂ ವೀರಃ ಪರಾಮೃಶತ್ ॥ ೧೩೩ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟು ರಥಾಶ್ವ-ಸಾರಥಿಗಳಿಂದ ಹೀನನಾದ, ವೀರನಾದ ಧೃಷ್ಟದ್ಯುಮ್ನನು ದೊಡ್ಡ ಆಪತ್ತಿಗೆ ಸಿಲುಕಿ ಗದೆಯನ್ನು ತೆಗೆದುಕೊಂಡನು.

ತಾಮಸ್ಯ ವಿಶಿಖೈಸ್ತೀಕ್ಷ್ಣೈಃ ಕ್ಷಿಪ್ಯಮಾಣಾಂ ಮಹಾರಥಃ ।
ನಿಜಘಾನ ಶರೈದ್ರೋಣಃ ಕ್ರುದ್ಧಃ ಸತ್ಯಪರಾಕ್ರಮಃ ॥ ೧೩೪ ॥

ತಮ್ಮ ರಥದ ಮೇಲೆ ಎಸೆದ ಆ ಗದೆಯನ್ನು ಮಹಾರಥರೂ, ಕ್ರುದ್ಧರೂ, ಸತ್ಯಪರಾಕ್ರಮರೂ ಆದ ದ್ರೋಣರು ತೀಕ್ಷ್ಣವಾದ ಬಾಣಗಳಿಂದ ಹೊಡೆದು ನಾಶಗೊಳಿಸಿದರು.

ತಾಂ ದೃಷ್ಟ್ವಾ ತು ನರವ್ಯಾಘ್ರೋ ದ್ರೋಣೇನ ನಿಹತಾಂ ಶರೈಃ ।
ವಿಮಲಂ ಖಡ್ಗಮಾದತ್ತ ಶತಚಂದ್ರಂ ಚ ಭಾನುಮತ್ ॥ ೧೩೫ ॥

ನರವ್ಯಾಘ್ರನಾದ ಧೃಷ್ಟದ್ಯುಮ್ನನು ದ್ರೋಣರ ಬಾಣಗಳಿಂದ ವಿನಾಶವನ್ನು ಹೊಂದಿದ ಆ ಗದೆಯನ್ನು ನೋಡಿ, ವಿಮಲವಾದ ಖಡ್ಗವನ್ನು ಮತ್ತು ಶತಚಂದ್ರಗಳಿಂದ ಕೂಡಿ ಪ್ರಕಾಶಮಾನವಾದ ಗುರಾಣಿಯನ್ನು ತೆಗೆದುಕೊಂಡನು.

ಅಸಂಶಯಂ ತಥಾಭೂತೇ ಪಾಂಚಾಲ್ಯಃ ಸಾಧ್ವಮನ್ಯತ ।
ವಧಮಾಚಾರ್ಯಮುಖ್ಯಸ್ಯ ಪ್ರಾಪ್ತಕಾಲಂ ಮಹಾತ್ಮನಃ ॥ ೧೩೬ ॥

ಪರಿಸ್ಥಿತಿಯು ಹಾಗಿರುವಾಗ ಮಹಾತ್ಮರಾದ, ಶ್ರೇಷ್ಠರಾದ ಆಚಾರ್ಯರನ್ನು ವಧಿಸುವ ಕಾಲವು ಪ್ರಾಪ್ತವಾಗಿದೆ ಮತ್ತು ಸಾಧು ಎಂದು ಯಾವ ಸಂಶಯವೂ ಇಲ್ಲದೆ ಪಾಂಚಾಲ್ಯನಾದ ಧೃಷ್ಟದ್ಯುಮ್ನನು ತಿಳಿದನು.

ತತಃ ಸ್ವರಥನೀಡಸ್ಥಃ ಸ್ವರಥಸ್ಯ ರಥೇಷಯಾ ।
ಅಗಚ್ಛದಸಿಮುದ್ಯಮ್ಯ ಶತಚಂದ್ರಂ ಚ ಭಾನುಮತ್ ॥ ೧೩೭ ॥

ಅನಂತರ ತನ್ನ ರಥದ ಪೀಠದಲ್ಲಿದ್ದ ಅವನು ತನ್ನ ರಥದ ಮೂಕಿಯಿಂದ ಖಡ್ಗವನ್ನು ಹಿಡಿದು ಶತಚಂದ್ರಗಳನ್ನು ಮತ್ತು ಸೂರ್ಯಚಿಹ್ನೆಗಳನ್ನು ಹೊಂದಿದ ಗುರಾಣಿಯನ್ನು ಹಿಡಿದು ಹೊರಟನು.

ಚಿಕೀರ್ಷುರ್ದುಷ್ಕರಂ ಕರ್ಮ ಧೃಷ್ಟದ್ಯುಮ್ನೋ ಮಹಾರಥಃ ।
ಇಯೇಷ ವಕ್ಷೋ ಭೇತ್ತುಂ ಚ ಭಾರದ್ವಾಜಸ್ಯ ಸಂಯುಗೇ ॥ ೧೩೮ ॥

ಮಹಾರಥನಾದ ಧೃಷ್ಟದ್ಯುಮ್ನನು ರಣರಂಗದಲ್ಲಿ ದುಷ್ಕರವಾದ ಕರ್ಮವನ್ನು ಮಾಡಲು ಬಯಸಿ, ದ್ರೋಣರ ವಕ್ಷಃಸ್ಥಲವನ್ನು ಭೇದಿಸಲು ಬಯಸಿದನು.

ಸೋಽತಿಷ್ಠದ್ ಯುಗಮಧ್ಯೇ ವೈ ಯುಗಬನ್ಧನೇಷು ಚ ।
ಶೋಣಾನಾಂ ಜಘನಾರ್ಧೇಷು ತತ್ ಸೈನ್ಯಾಃ ಸಮಪೂಜಯನ್ ॥

ಅವನು ದ್ರೋಣರ ರಥಕ್ಕೆ ಹಾರಿ ನೊಗದ ಮಧ್ಯದಲ್ಲಿ, ನೊಗದ ಬಂಧನಗಳಲ್ಲಿಯೂ ಶೋಣಾಶ್ವಗಳ ಹಿಂದಿನ ಅರ್ಧಭಾಗದಲ್ಲಿಯೂ ನಿಂತನು. ಅದನ್ನು ಸೈನ್ಯಗಳು ಪೂಜಿಸಿದವು.

ತಿಷ್ಠತೋ ಯುಗಪಾಲೇಷು ಶೋಣಾನಪ್ಯಧಿತಿಷ್ಠತಃ ।
ನಾಪಶ್ಯದಂತರಂ ದ್ರೋಣಸ್ತದದ್ಭುತಮಿವಾಭವತ್ ॥ ೧೪೦ ॥

ಅವನು ಯುಗಪಾಲಿಗಳಲ್ಲಿ ನಿಂತು ಶೋಣಾಶ್ವಗಳನೂ ನಿಯಂತ್ರಿಸುತ್ತಿರಲು ಅವನಲ್ಲಿ, ಅವನನ್ನು ಹೊಡೆಯಲು ದ್ರೋಣರು ಯಾವ ಸೂಕ್ಷ್ಮ ಅವಕಾಶವನ್ನೂ ಪಡೆಯಲಿಲ್ಲ. ಅದು ಅದ್ಭುತವಾಗಿದ್ದಿತು.

ಕ್ಷಿಪ್ರಂ ಶ್ಯೇನಸ್ಯ ಚರತೋಯಥೈವಾಮಿಷಗೃದ್ಧಿನಃ ।
ತದ್ವದಾಸೀದಭೀಸಾರೋ ದ್ರೋಣಂ ಪ್ರಾರ್ಥಯತೋ ರಣೇ ॥ ೧೪೧ ॥

ಮಾಂಸ-ರಕ್ತವನ್ನು ಬಯಸುವ ಹದ್ದಿನ ಸಂಚಾರವು ಕ್ಷಿಪ್ರವಾಗಿರುವಂತೆ ರಣರಂಗದಲ್ಲಿ ದ್ರೋಣರನ್ನು ಕೊಲ್ಲಲು ಬಯಸುವ ಧೃಷ್ಟದ್ಯುಮ್ನನ ಅಭೀಸಾರವು (ದ್ರೋಣರ ಕಡೆಗೆ ಗಮನವು) ಹಾಗೆ ಇದ್ದಿತು.

ತಸ್ಯಾಶ್ವಾನ್ ರಥಶಕ್ತ್ಯಾಽಸೌ ತದಾ ಕ್ರುದ್ಧಃ ಪರಾಕ್ರಮೀ ।
ಸರ್ವಾನೇಕೈಕಶೋ ದ್ರೋಣಃ ಕಪೋತಾಭಾನಜೀಘನತ್ ॥ ೧೪೨ ॥

ಆಗ ಪರಾಕ್ರಮಶಾಲಿಗಳಾದ ದ್ರೋಣರು ಕೋಪಗೊಂಡು ಧೃಷ್ಟದ್ಯುಮ್ನನ ರಥದ ಕಪೋತಬಣ್ಣದ ಕುದುರೆಗಳನ್ನು ಒಂದೊಂದಾಗಿ ರಥಶಕ್ತಿಯಿಂದ ಕೊಂದರು.

ತೇ ಹತಾ ನ್ಯಪತನ್ ಭೂಮೌ ಧೃಷ್ಟದ್ಯುಮ್ನಸ್ಯ ವಾಜಿನಃ ।
ಶೋಣಾಶ್ಚ ಪರ್ಯಮುಚ್ಯಂತ ರಥಬಂಧಾದ್ ಏಷಾಂ ಪತೇ ॥ ೧೪೩ ॥

ಧೃಷ್ಟದ್ಯುಮ್ನನ ರಥದ ಕುದುರೆಗಳು ಮೃತವಾಗಿ ಭೂಮಿಯಲ್ಲಿ ಬಿದ್ದವು. ಎಲೈ ರಾಜನೇ, ದ್ರೋಣರ ರಥದ ಕೆಂಪು ಕುದುರೆಗಳು ರಥಬಂಧದಿಂದ ಬಿಡಿಸಿಕೊಂಡವು.

ತಾನ್ ಹಯಾನ್ ನಿಹತಾನ್ ದೃಷ್ಟ್ವಾ ದ್ವಿಜಾಗ್ರೇಣ ಸ ಪಾರ್ಷತಃ ।
ನಾಮೃಷ್ಯತ ಯುಧಾಂ ಶ್ರೇಷ್ಠೋ ಯಾಜ್ಞಸೇನಿರ್ಮಹಾರಥಃ ॥ ೧೪೪ ॥

ತನ್ನ ರಥದ ಆ ಅಶ್ವಗಳು ಶ್ರೇಷ್ಠ ಬ್ರಾಹ್ಮಣರಾದ ದ್ರೋಣರಿಂದ ಹತವಾದುದನ್ನು ನೋಡಿ ಮಹಾರಥನೂ, ಯಜ್ಞಸೇನನ ಪುತ್ರನೂ ಯುದ್ಧ ಮಾಡುವರಲ್ಲಿ ಶ್ರೇಷ್ಠನೂ ಆದ ಧೃಷ್ಟದ್ಯುಮ್ನನು ಅದನ್ನು ಸಹಿಸಲಿಲ್ಲ.

ವಿರಥಃ ಸ ಗೃಹೀತ್ವಾ ತು ಖಡ್ಗಂ ಖಡ್ಗಭೃತಾಂ ವರಃ ।
ದ್ರೋಣಮಭ್ಯಪತದ್ ರಾಜನ್ ವೈನತೇಯ ಇವೋರಗಮ್ ॥ ೧೪೫ ॥

ಖಡ್ಗಧಾರಿಗಳಲ್ಲಿ ಶ್ರೇಷ್ಠನಾದ ಅವನು ರಥವನ್ನು ಕಳೆದುಕೊಂಡು, ಖಡ್ಗವನ್ನು ಹಿಡಿದು, ಎಲೈ ರಾಜನೇ, ಗರುಡನು ಸರ್ಪದ ಕಡೆಗೆ ಬರುವಂತೆ ದ್ರೋಣರ ಕಡೆಗೆ ಧಾವಿಸಿ ಬಂದನು.

ತಸ್ಯ ರೂಪಂ ಬಭೌ ರಾಜನ್ ಭಾರದ್ವಾಜಂ ಜಿಘಾಂಸತಃ ।
ಯಥಾ ರೂಪಂ ಪರಂ ವಿಷ್ಣೋರ್ಹಿರಣ್ಯಕಶಿಪೋರ್ವಧೇ ॥ ೧೪೬ ॥

ಎಲೈ ರಾಜನೇ, ದ್ರೋಣರನ್ನು ವಧಿಸಲು ಇಚ್ಛಿಸಿದ ಅವನ ರೂಪವು ಹಿರಣ್ಯ ಕಶಿಪುವಿನ ವಧೆಗೆ ಉದ್ಯುಕ್ತನಾದ ವಿಷ್ಣುವಿನ ಶ್ರೇಷ್ಠವಾದ ರೂಪದಂತೆ ಶೋಭಿಸಿತು.

ಸೋಽಚರದ್ವಿವಿಧಾನ್ ಮಾರ್ಗಾನ್ ಪ್ರಕಾರಾನೇಕವಿಂಶತಿಮ್ ।
ಭ್ರಾಂತಮುದ್ಭ್ರಾಂತಮಾವಿದ್ಧಮಾಪ್ಲುತಂ ಪ್ರಸೃತಂ ಸೃತಮ್ ॥ ೧೪೭ ॥

ಪರಿವೃತ್ತಂ ನಿವೃತ್ತಂ ಚ ಖಡ್ಗಂ ಚರ್ಮ ಚ ಧಾರಯನ್ ।
ಸಂಪಾತಂ ಸಮುದೀರ್ಣಂ ಚ ದರ್ಶಯಾಮಾಸ ಪಾರ್ಷತಃ ॥ ೧೪೮ ॥

ಧೃಷ್ಟದ್ಯುಮ್ನನು ಖಡ್ಗ-ಚರ್ಮಗಳನ್ನು ಹಿಡಿದು ಭ್ರಾಂತ, ಉದ್ಭ್ರಾಂತ, ಆವಿದ್ಧ, ಆಪ್ಲುತ, ಪ್ರಸೃತ, ಸೃತ, ಪರಿವೃತ್ತ, ನಿವೃತ್ತ, ಸಂಪಾತ, ಸಮುದೀರ್ಣ ಮೊದಲಾದ ಇಪ್ಪತ್ತೊಂದು ಖಡ್ಗಯುದ್ಧದ ಪ್ರಕಾರಗಳನ್ನು ಪ್ರದರ್ಶಿಸಿದನು.

ತತಃ ಶರಸಹಸ್ರೇಣ ಶತಚಂದ್ರಮಪಾತಯತ್ ।
ಖಡ್ಗಂ ಚರ್ಮ ಚ ಸಂಬಾಧೇ ಧೃಷ್ಟದ್ಯುಮ್ನಸ್ಯ ಸ ದ್ವಿಜಃ ॥ ೧೪೯ ॥

ಆಗ ಆ ಯುದ್ಧದಲ್ಲಿ ಬ್ರಾಹ್ಮಣರಾದ ದ್ರೋಣರು ಧೃಷ್ಟದ್ಯುಮ್ನನ ಶತಚಂದ್ರ ಸಹಿತವಾದ ಚರ್ಮವನ್ನು ಮತ್ತು ಖಡ್ಗವನ್ನು ಸಹಸ್ರ ಬಾಣಗಳಿಂದ ಕೆಡವಿದರು.

ತೇ ತು ವೈತಸ್ತಿಕಾ ನಾಮ ಶರಾ ಹ್ಯಾಸನ್ನಘಾತಿನಃ ।
ನಿಕೃಷ್ಟಯುದ್ಧೇ ದ್ರೋಣಸ್ಯ ನಾನ್ಯೇಷಾಂ ಸಂತಿ ತೇ ಶರಾಃ ॥ ೧೫೦ ॥

ಅವು ಹತ್ತಿರದಿಂದ ಹೊಡೆಯುವ ವೈತಸ್ತಿಕ ಎಂಬ ಬಾಣಗಳು. ಸಮೀಪದ ಯುದ್ಧದಲ್ಲಿ ಮಾತ್ರ ಉಪಯೋಗಿಸುವ ಆ ಬಾಣಗಳು ದ್ರೋಣರ ಬಳಿ ಮಾತ್ರ ಇದ್ದವು. ಉಳಿದವರ ಬಳಿ ಇರಲಿಲ್ಲ.

ಶಾರದ್ವತಸ್ಯ ಪಾರ್ಥಸ್ಯ ದ್ರೌಣೇರ್ವೈಕರ್ತನಸ್ಯ ಚ ।
ಪ್ರದ್ಯುಮ್ನಯುಯುಧಾನಾಭ್ಯಾಮಭಿಮನ್ಯೋಶ್ಚ ತೇ ಶರಾಃ ॥ ೧೫೧ ॥

ಶಾರದ್ವತರಾದ ಕೃಪರ, ಅರ್ಜುನನ, ಅಶ್ವತ್ಥಾಮರ, ಕರ್ಣನ, ಪ್ರದ್ಯುಮ್ನನ, ಸಾತ್ಯಕಿಯ ಮತ್ತು ಅಭಿಮನ್ಯುವಿನ ಬಳಿಯಲ್ಲಿಯೂ ಆ ಬಾಣಗಳು ಇವೆ.

ಅಥಾಸ್ಯೇಷುಂ ಸಮಾಧತ್ತ ದೃಢಂ ಪರಮಸಂಶಿತಮ್ ।
ಅಂತೇವಾಸಿನಮಾಚಾರ್ಯೋ ಜಿಘಾಂಸುಃ ಪುತ್ರಸಮ್ಮಿತಮ್ ॥ ೧೫೨ ॥

ಆಗ ಆಚಾರ್ಯರು ಪುತ್ರಸದೃಶನಾದ ಶಿಷ್ಯನನ್ನು ಕೊಲ್ಲಲು ಬಯಸಿ ದೃಢವೂ, ಅತ್ಯಂತ ತೀಕ್ಷ್ಣವೂ ಆದ ಒಂದು ಬಾಣವನ್ನು ಹೂಡಿದರು.

ತಂ ಶರೈರ್ದಶಭಿಸ್ತೀಕ್ಷ್ಣೈಶ್ಚಿಚ್ಛೇದ ಶಿನಿಪುಂಗವಃ ।
ಪಶ್ಯತಸ್ತವ ಪುತ್ರಸ್ಯ ಕರ್ಣಸ್ಯ ಚ ಮಹಾತ್ಮನಃ ।
ಗ್ರಸ್ತಮಾಚಾರ್ಯಮುಖ್ಯೇನ ಧೃಷ್ಟದ್ಯುಮ್ನಮಮೋಚಯತ್ ॥ ೧೫೩ ॥

ಶಿನಿಪುಂಗವನಾದ ಸಾತ್ಯಕಿಯು ಆ ಬಾಣವನ್ನು ತೀಕ್ಷ್ಣವಾದ ಹತ್ತು ಬಾಣಗಳಿಂದ ಕತ್ತರಿಸಿದನು. ನಿನ್ನ ಪುತ್ರನು ಮತ್ತು ಮಹಾತ್ಮನಾದ ಕರ್ಣನು ನೋಡುತ್ತಿರುವಂತೆಯೇ ಆಚಾರ್ಯಮುಖ್ಯರಾದ ದ್ರೋಣರಿಂದ ಗ್ರಸ್ತನಾದ ಧೃಷ್ಟದ್ಯುಮ್ನನನ್ನು ವಿಮೋಚನೆಗೊಳಿಸಿದನು.

ಚರಂತಂ ರಥಮಾರ್ಗೇಷು ಸಾತ್ಯಕಿಂ ಸತ್ಯವಿಕ್ರಮಮ್ ।
ದ್ರೋಣಕರ್ಣಾಂತರಗತಂ ಕೃಪಸ್ಯಾಪಿ ಚ ಭಾರತ ।
ಅಪಶ್ಯೇತಾಂ ಮಹಾತ್ಮಾನೌ ವಿಷ್ವಕ್ಸೇನಧನಂಜಯೌ ॥ ೧೫೪ ॥

ರಥಮಾರ್ಗಗಳಲ್ಲಿ ಸಂಚರಿಸುವ ಪರಾಕ್ರಮಶಾಲಿಯಾದ ಸಾತ್ಯಕಿಯು ಎಲೈ ಭಾರತನೇ, ದ್ರೋಣ-ಕರ್ಣರ ಮಧ್ಯದಲ್ಲಿಯೂ, ಕೃಪರ ಮಧ್ಯದಲ್ಲಿಯೂ ಇರುವುದನ್ನು ಮಹಾತ್ಮರಾದ ಕೃಷ್ಣಾರ್ಜುನರು ನೋಡಿದರು.

ಅಪೂಜಯೇತಾಂ ವಾಷ್ಣೇಯಂ ಬ್ರುವಾಣೌ ಸಾಧು ಸಾಧ್ವಿತಿ ।
ದಿವ್ಯಾನ್ಯಸ್ತ್ರಾಣಿ ಸರ್ವೇಷಾಂ ಯುಧಿ ನಿಘ್ನಂತಮಚ್ಯುತಮ್ ।
ಅಭಿಪತ್ಯ ತತಃ ಸೇನಾಂ ವಿಷ್ವಕ್ಸೇನಧನಂಜಯೌ ॥ ೧೫೫ ॥

ಆಗ ಕೃಷ್ಣಾರ್ಜುನರು ಆ ಸೇನೆಯ ಮೇಲೆ ಎರಗಿ ದಿವ್ಯಾಸ್ತ್ರವನ್ನು ಪ್ರಯೋಗಿಸುತ್ತಾ ಎಲ್ಲರನ್ನೂ ಯುದ್ಧದಲ್ಲಿ ಕೊಲ್ಲುತ್ತಿದ್ದ, ತನ್ನ ಮನೋಬಲದಿಂದ ಚ್ಯುತನಾಗದ ಸಾತ್ಯಕಿಯನ್ನು 'ಸಾಧು, ಸಾಧು' ಎಂದು ಹೇಳುತ್ತಾ ಪೂಜಿಸಿದರು.

ಧನಂಜಯಸ್ತತಃ ಕೃಷ್ಣಮಬ್ರವೀತ್ ಪಶ್ಯ ಕೇಶವ ।
ಆಚಾರ್ಯವರಮುಖ್ಯಾನಾಂ ಮಧ್ಯೇ ಕ್ರೀಡನ್ ಮಧೂದ್ವಹಃ ॥೧೫೬॥

ಆನಂದಯತಿ ಮಾಂ ಭೂಯಃ ಸಾತ್ಯಕಿಃ ಸತ್ಯವಿಕ್ರಮಃ ।
ಮಾದ್ರೀಪುತ್ರೌ ಚ ಭೀಮಂ ಚ ರಾಜಾನಂ ಚ ಯುಧಿಷ್ಠಿರಮ್ ॥೧೫೭॥

ಆಗ ಅರ್ಜುನನು ಕೃಷ್ಣನನ್ನು ಕುರಿತು ಕೃಷ್ಣನೇ ನೋಡು, ಶ್ರೇಷ್ಠರಾದ ಆಚಾರ್ಯರ ಮಧ್ಯದಲ್ಲಿ ಆಟವಾಡುತ್ತಿರುವ ಮಧುಕುಲೋತ್ಪನ್ನನಾದ, ಸತ್ಯಪರಾಕ್ರಮಿಯಾದ ಈ ಸಾತ್ಯಕಿಯು ನನಗೂ, ಮಾದ್ರೀಪುತ್ರನಿಗೂ, ಭೀಮನಿಗೂ ಮತ್ತು ರಾಜನಾದ ಯುಧಿಷ್ಠಿರನಿಗೂ ಹೆಚ್ಚು ಸಂತೋಷವನ್ನುಂಟು ಮಾಡುತ್ತಿದ್ದಾನೆ.

ಯಚ್ಚಿಕ್ಷಯಾನುದ್ಧತಃ ಸನ್ ರಣೇ ಚರತಿ ಸಾತ್ಯಕಿಃ ।
ಮಹಾರಥಾನುಪಕ್ರೀಡನ್ ವೃಷ್ಣೀನಾಂ ಕೀರ್ತಿವರ್ಧನಃ ।
ತಮೇತೇ ಪ್ರತಿನಂದಂತಿ ಸಿದ್ಧಾಃ ಸೈನ್ಯಾಶ್ಚ ವಿಸ್ಮಿತಾಃ ॥ ೧೫೮ ॥

ಯಾರ ಶಿಕ್ಷಣದಿಂದ ಅನುದ್ಧತನಾದ ಸಾತ್ಯಕಿಯು ಮಹಾರಥರ ಜೊತೆಯಲ್ಲಿ ಆಡುತ್ತಾ ವೃಷ್ಣಿಗಳ ಕೀರ್ತಿಯನ್ನು ಹೆಚ್ಚಿಸುತ್ತಿದ್ದಾನೆಯೋ ಅಂತಹ ಅವನನ್ನು ಸಿದ್ಧರು ಮತ್ತು ವಿಸ್ಮಿತರಾದ ಸೈನಿಕರು ಅಭಿನಂದಿಸುತ್ತಿದ್ದಾರೆ (ಎಂದು ಹೇಳಿದನು).

ಸಂಜಯಃ

ಅಜಯ್ಯಂ ಸಮರೇ ದೃಷ್ಟ್ವಾ ಸಾಧು ಸಾಧ್ವಿತಿ ಸಾತ್ವತಮ್ ।
ಯೋಧಾಶ್ಚೋಭಯತಃ ಸರ್ವೇ ಕರ್ಮಭಿಃ ಸಮಪೂಜಯನ್ ॥೧೫೯॥

ಸಂಜಯ– ಸಾತ್ಯಕಿಯು ಯುದ್ಧದಲ್ಲಿ ಅಜೇಯನಾಗಿರುವುದನ್ನು ನೋಡಿ ಎರಡೂ ಪಕ್ಷದ ಯೋಧರು 'ಸಾಧು-ಸಾಧು' ಎಂದು ಹೇಳುತ್ತಾ ಅವನು ಮಾಡಿದ ಕರ್ಮದ ನಿಮಿತ್ತದಿಂದಾಗಿ ಅವನನ್ನು ಪೂಜಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಸಪ್ತ್ಯಧಿಕಶತತಮೋಧ್ಯಾಯಃ ॥

॥ ದ್ರೋಣವಧಪರ್ವಣಿ ದಶಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತಾರನೆಯ ಅಧ್ಯಾಯ

ದ್ರೋಣರ ಪ್ರಯಾಣ. ಧೃಷ್ಟದ್ಯುಮ್ನನಿಂದ ಅವರ ಶಿರಶ್ಛೇದ.

ಸಂಜಯಃ

ಸಾತ್ವತಸ್ಯ ತು ತತ್ಕರ್ಮ ದೃಷ್ಟ್ವಾ ದುರ್ಯೋಧನಾದಯಃ ।
ಶೈನೇಯಂ ಸರ್ವತಃ ಕ್ರುದ್ಧಾ ವಾರಯಾಮಾಸುರಂಜಸಾ ॥ ೧ ॥

ಸಂಜಯ– ಸಾತ್ಯಕಿಯ ಆ ಕರ್ಮವನ್ನು ನೋಡಿ ಕ್ರುದ್ಧರಾದ ದುರ್ಯೋಧನಾದಿಗಳು ಅವನನ್ನು ಎಲ್ಲ ಕಡೆಗಳಿಂದಲೂ ಚೆನ್ನಾಗಿ ಸುತ್ತುವರಿದರು.

ಕೃಪಕರ್ಣೌ ಚ ಸಮರೇ ಪುತ್ರಾಶ್ಚ ತವ ಮಾರಿಷ ।
ಶೈನೇಯಂ ತ್ವರಯಾಽಭ್ಯೇತ್ಯ ಏಸಿಘ್ನನ್ ನಿಶಿತೈಃ ಶರೈಃ ॥ ೨ ॥

ಎಲೈ ಶ್ರೇಷ್ಠನೇ, ಕೃಪ-ಕರ್ಣರು ಮತ್ತು ನಿನ್ನ ಪುತ್ರರು ಶೀಘ್ರವಾಗಿ ಶೈನೇಯನ ಬಳಿಗೆ ಬಂದು ಅವನನ್ನು ತೀಕ್ಷ್ಣವಾದ ಬಾಣಗಳಿಂದ ಹೊಡೆದರು.

ಯುಧಿಷ್ಠಿರಸ್ತತೋ ರಾಜಾ ಮಾದ್ರೀಪುತ್ರೌ ಚ ಪಾಂಡವೌ ।
ಭೀಮಸೇನಶ್ಚ ಬಲವಾನ್ ಸಾತ್ವತಂ ಪರ್ಯವಾರಯನ್ ॥ ೩ ॥

ಆಗ ರಾಜನಾದ ಯುಧಿಷ್ಠಿರನೂ, ಮಾದ್ರೀಪುತ್ರರಾದ ನಕುಲ-ಸಹದೇವರೂ, ಬಲಿಷ್ಠನಾದ ಭೀಮಸೇನನೂ ಸಾತ್ಯಕಿಯ ರಕ್ಷಣೆಗೆ ಬಂದರು.

ಕರ್ಣಶ್ಚ ಶರವರ್ಷೇಣ ಗೌತಮಶ್ಚ ಮಹಾರಥಃ ।
ದುರ್ಯೋಧನಾದಯಸ್ತೇ ಚ ಶೈನೇಯಂ ಪರ್ಯವಾರಯನ್ ॥ ೪ ॥

ಕರ್ಣನೂ, ಮಹಾರಥರಾದ ಕೃಪರೂ ಮತ್ತು ದುರ್ಯೋಧನಾದಿಗಳೂ ಸಾತ್ಯಕಿಯ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಅವನನ್ನು ಸುತ್ತುವರಿದರು.

ತಾಂ ವೃಷ್ಟಿಂ ಸಹಸಾ ರಾಜನ್ನುತ್ಥಿತಾ ಘೋರರೂಪಿಣೀಮ್ ।
ವಾರಯಾಮಾಸ ಶೈನೇಯೋ ಯೋಧಯಂಸ್ತಾನ್ ಮಹಾರಥಾನ್ ॥೫॥

ಎಲೈ ರಾಜನೇ, ತಕ್ಷಣದಲ್ಲಿಯೇ ಉಂಟಾದ ಘೋರವಾದ ಮಹಾರಥರ ಆ ಬಾಣಗಳ ವೃಷ್ಟಿಯನ್ನು ಆ ಮಹಾರಥರ ಜೊತೆಯಲ್ಲಿ ಯುದ್ಧ ಮಾಡುತ್ತಾ ಸಾತ್ಯಕಿಯು ತಡೆದನು.

ತೇಷಾಮಸ್ತ್ರಾಣಿ ದಿವ್ಯಾನಿ ಸಹಿತಾನಿ ಮಹಾತ್ಮನಾಮ್ ।
ವಾರಯಾಮಾಸ ವಿಧಿವದ್ ದಿವ್ಯೈರಸ್ತ್ರೈರ್ಮಹಾಮೃಧೇ ॥ ೬ ॥

ಮಹಾತ್ಮರಾದ ಅವರೆಲ್ಲರೂ ಸಹಿತರಾಗಿ ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನು ಸಾತ್ಯಕಿಯು ದೊಡ್ಡ ಯುದ್ಧದಲ್ಲಿ ಶಾಸ್ತ್ರೋಕ್ತವಾದ ದಿವ್ಯಾಸ್ತ್ರಗಳಿಂದ ನಿವಾರಿಸಿದನು.

ಕ್ರೂರಮಾಯೋಧನಂ ಜಜ್ಞೇ ತಸ್ಮಿನ್ ರಾಜಸಮಾಗಮೇ ।
ರುದ್ರಸ್ಯೇವ ಹಿ ಕ್ರುದ್ಧಸ್ಯ ನಿಘ್ನತಸ್ತು ಪಶೂನ್ ಯಥಾ ॥ ೭ ॥

ಆ ರಾಜರ ಸಮಾಗಮ ಉಂಟಾದಾಗ ಪಶುಗಳನ್ನು ಸಂಹರಿಸುವ ಕ್ರುದ್ಧರಾದ ರುದ್ರದೇವರ ಕ್ಷೇತ್ರದಂತೆ ರಣರಂಗವು ಕ್ರೂರವಾಯಿತು.

ಹಸ್ತಾನಾಮುತ್ತಮಾಂಗಾನಾಂ ಕಾರ್ಮುಕಾಣಾಂ ಚ ಭಾರತ ।
ಛತ್ರಾಣಾಂ ಚಾಪವಿದ್ಧಾನಾಂ ಚಾಮರಾಣಾಂ ಚ ಸಂಯುಗೇ ॥ ೮ ॥

ಭಗ್ನಚಕ್ರೈ ರಥೈಶ್ಚಾಪಿ ಪಾತಿತೈಶ್ಚ ಮಹಾಧ್ವಜೈಃ ।
ಸಾದಿಭಿಶ್ಚ ಹತೈಃ ಶೂರೈಃ ಸಂಕೀರ್ಣಾ ವಸುಧಾऽಭವತ್ ॥ ೯ ॥

ಎಲೈ ಭಾರತನೇ, ಕತ್ತರಿಸಲ್ಪಟ್ಟ ಹಸ್ತಗಳಿಂದಲೂ, ಶಿರಸ್ಸುಗಳಿಂದಲೂ, ಧನುಸ್ಸುಗಳಿಂದಲೂ, ಛತ್ರಗಳಿಂದಲೂ, ಎಸೆಯಲ್ಪಟ್ಟ ಚಾಮರಗಳಿಂದಲೂ, ಚಕ್ರಗಳು ಮುರಿದ ರಥಗಳಿಂದಲೂ, ಕೆಳಗೆ ಬಿದ್ದ ಮಹಾಧ್ವಜಗಳಿಂದಲೂ, ಹತರಾದ ಶೂರರಾದ ಅಶ್ವಾರೋಹಿಗಳಿಂದಲೂ ರಣರಂಗವು ತುಂಬಿಹೋಯಿತು.

ಬಾಣಪಾತನಿಕೃತ್ತಾಸ್ತು ಯೋಧಾಸ್ತೇ ಕುರುಸತ್ತಮ ।
ಚೇಷ್ಟಂತೋ ವಿವಿಧಾಶ್ಚೇಷ್ಟಾ ವ್ಯದೃಶ್ಯಂತ ಮಹಾಹವೇ ॥ ೧೦ ॥

ಎಲೈ ಕುರುಶ್ರೇಷ್ಠನೇ, ಬಾಣಗಳ ಆಘಾತದಿಂದ ಕತ್ತರಿಸಲ್ಪಟ್ಟ ದೇಹವುಳ್ಳ ಯೋಧರು ಬಹುವಿಧವಾಗಿ ಹೊರಳಾಡುವುದು ಕಂಡುಬಂದಿತು.

ವರ್ತಮಾನೇ ತಥಾ ಯುದ್ಧೇ ಘೋರೇ ದೇವಾಸುರೋಪಮೇ ।
ಅಬ್ರವೀತ್ ಕ್ಷತ್ರಿಯಾಂಸ್ತತ್ರ ಧರ್ಮರಾಜೋ ಯುಧಿಷ್ಠಿರಃ ।
ಅಭಿದ್ರವತ ಸಂಯತ್ತಾಃ ಕುಂಭಯೋನಿಂ ಮಹಾರಥಾಃ ॥ ೧೧ ॥

ದೇವಾಸುರ ಯುದ್ಧಕ್ಕೆ ಸಮವಾದ ಘೋರವಾದ ಯುದ್ಧವು ಹಾಗೆ ನಡೆಯುತ್ತಿರಲು ಧರ್ಮರಾಜನಾದ ಯುಧಿಷ್ಠಿರನು ಕ್ಷತ್ರಿಯರನ್ನು ಕುರಿತು- 'ಎಲೈ ಮಹಾರಥರೇ, ದ್ರೋಣರನ್ನು ಕುರಿತು ಪ್ರಯತ್ನಶೀಲರಾಗಿ ಎಲ್ಲರೂ ಮುನ್ನುಗ್ಗಿ' ಎಂದು ಹೇಳಿದನು.

ಏಷ ವೈ ಪಾರ್ಷತೋ ವೀರೋ ಭಾರದ್ವಾಜೇನ ಸಂಗತಃ ।
ಘಟತೇ ಚ ಯಥಾಶಕ್ತಿ ಭಾರದ್ವಾಜಸ್ಯ ನಾಶನೇ ॥ ೧೨ ॥

ದ್ರುಪದನ ಪುತ್ರನಾದ ಈ ವೀರನು ದ್ರೋಣರ ಜೊತೆಯಲ್ಲಿ ಸಂಸಕ್ತನಾಗಿ ತನ್ನ ಶಕ್ತಿಗೆ ಅನುಗುಣವಾಗಿ ದ್ರೋಣರನ್ನು ನಾಶಮಾಡಲು ಪ್ರಯತ್ನಪಡುತ್ತಿದ್ದಾನೆ.

ಯಾದೃಶಾನಿ ಹಿ ರೂಪಾಣಿ ದೃಶ್ಯಂತೇ ನೋ ಮಹಾರಣೇ ।
ಅದ್ಯ ದ್ರೋಣಂ ರಣೇ ಕ್ರುದ್ಧಃ ಪಾತಯಿಷ್ಯತಿ ಪಾರ್ಷತಃ ॥
ತೇ ಯೂಯಂ ಸಹಿತಾ ಭೂತ್ವಾ ಕುಂಭಯೋನಿಂ ಪರೀಪ್ಸತ ॥ ೧೩ ॥

ಈ ರಣರಂಗದಲ್ಲಿ ನಮಗೆ ತೋರುತ್ತಿರುವ ಸೂಚನೆಗಳನ್ನು ನೋಡಿದರೆ ಈ ದಿನ ಧೃಷ್ಟದ್ಯುಮ್ನನು ಕ್ರುದ್ಧನಾಗಿ ರಣರಂಗದಲ್ಲಿ ದ್ರೋಣರನ್ನು ಸಂಹರಿಸುವನು. ಆದ್ದರಿಂದ ನೀವೆಲ್ಲರೂ ಒಟ್ಟಾಗಿ ದ್ರೋಣರ ಮೇಲೆ ಎರಗಿ (ಎಂದು ಹೇಳಿದನು).

ಯುಧಿಷ್ಠಿರಸಮಾಜ್ಞಪ್ತಾಃ ಸೃಂಜಯಾನಾಂ ಮಹಾರಥಾಃ ।
ಅಭ್ಯದ್ರವಂತ ಸಂಯತ್ತಾ ಭಾರದ್ವಾಜಂ ಜಿಘಾಂಸವಃ ॥ ೧೪ ॥

ಯುಧಿಷ್ಠಿರನಿಂದ ಆಜ್ಞಪ್ತರಾದ ಸೃಂಜಯರ ಮಹಾರಥರು ದ್ರೋಣರನ್ನು ಕೊಲ್ಲಲು ಬಯಸಿ ಎಚ್ಚರಿಕೆಯಿಂದ ಮುನ್ನುಗ್ಗಿದರು.

ತಾನ್ ಸಮಾಪತತಃ ಸರ್ವಾನ್ ಭಾರದ್ವಾಜೋ ಮಹಾರಥಃ ।
ಅಭ್ಯದ್ರವತ ವೇಗೇನ ಮರ್ತವ್ಯಮಿತಿ ನಿಶ್ಚಿತಃ ॥ ೧೫ ॥

ಮಹಾರಥರಾದ ದ್ರೋಣರು ಮರಣವನ್ನು ಹೊಂದಬೇಕೆಂದು ನಿಶ್ಚಯಿಸಿ ತನ್ನ ಕಡೆಗೆ ಬರುತ್ತಿದ್ದ ಅವರೆಲ್ಲರ ಕಡೆಗೆ ವೇಗದಿಂದ ಧಾವಿಸಿದರು.

ಪ್ರಯಾತೇ ಸತ್ಯಸಂಧೇ ತು ಸಮಕಂಪತ ಮೇದಿನೀ ।
ವವುರ್ವಾತಾಃ ಸನಿರ್ಘಾತಾಸ್ತ್ರಯಂತೋ ವರೂಥಿನೀಮ್ ॥ ೧೬ ॥

ಸತ್ಯಸಂಧರಾದ ಅವರು ಹಾಗೆ ಧಾವಿಸುತ್ತಿರಲು ಭೂಮಿಯು ನಡುಗಿತು. ವಾಯುವು ಒರಟಾಗಿ ಬೀಸಿ ಸೈನ್ಯವನ್ನು ಭಯಗೊಳಿಸಿತು.

ಪಪಾತ ಮಹತೀ ಚೋಲ್ಕಾ ಆದಿತ್ಯಾನ್ನಿರ್ಗತೇವ ಹ ।
ದೀಪಯಂತೀವ ತಾಪೇನ ಶಂಸಂತೀವ ಮಹದ್ಭಯಮ್ ॥ ೧೭ ॥

ದೊಡ್ಡ ಉಲ್ಕೆಯು ಸೂರ್ಯನಿಂದ ಹೊರಬಂದಂತೆ ತನ್ನ ತಾಪದಿಂದ ಎಲ್ಲ ಕಡೆಯಲ್ಲಿಯೂ ಪ್ರಕಾಶವನ್ನು ಉಂಟುಮಾಡುತ್ತಾ, ದೊಡ್ಡ ಭಯವನ್ನು ಸೂಚಿಸುವಂತೆ ಕೆಳಗೆ ಬಿದ್ದಿತು.

ಜಜ್ವಲುಶ್ಚೈವ ಶಸ್ತ್ರಾಣಿ ಭಾರದ್ವಾಜಸ್ಯ ಮಾರಿಷ ।
ರಥಾಃ ಸ್ವನಂತಿ ಚಾತ್ಯರ್ಥಂ ಹಯಾಶ್ಚಾಶ್ರೂಣ್ಯವಾಸೃಜನ್ ॥ ೧೮ ॥

ಎಲೈ ಶ್ರೇಷ್ಠನೇ, ದ್ರೋಣರ ಶಸ್ತ್ರಗಳು ಜ್ವಲಿಸಿದವು. ರಥಗಳು ಹಾಗೆಯೇ ಮೊರೆದವು. ಅಶ್ವಗಳು ಕಣ್ಣೀರನ್ನು ಸುರಿಸಿದವು.

ಹತೌಜಾ ಇವ ಚಾಪ್ಯಾಸೀದ್ ಭಾರದ್ವಾಜೋ ಮಹಾರಥಃ ।
ಋಷೀಣಾಂ ಬ್ರಹ್ಮವಾದಾನಾಂ ಸ್ವರ್ಗಸ್ಯ ಗಮನಂ ಪ್ರತಿ ।
ಸುಯುದ್ಧೇನ ತತಃ ಪ್ರಾಣಾನುತ್ಸ್ಮೃಷ್ಟುಮುಪಚಕ್ರಮೇ ॥ ೧೯ ॥

ಮಹಾರಥರಾದ ದ್ರೋಣರು ಸಾಮರ್ಥ್ಯಹೀನರಂತೆ ಆದರು. ಬ್ರಹ್ಮವಾದಿಗಳಾದ ಋಷಿಗಳ ತಮ್ಮ ಸ್ವರ್ಗಗಮನದ ವಿಷಯದ ಮಾತುಗಳನ್ನು ಕೇಳಿ, ಒಳ್ಳೆಯ ಯುದ್ಧವನ್ನು ಮಾಡಿ ಪ್ರಾಣಗಳನ್ನು ತ್ಯಜಿಸಲು ಉಪಕ್ರಮಿಸಿದರು.

ತತಶ್ಚತುರ್ದಿಶಂ ಸೈನ್ಯೈ ರ್ದ್ರುಪದಸ್ಯಾಭಸಂವೃತಃ ।
ನಿರ್ದಹನ್ ಕ್ಷತ್ರಿಯವ್ರಾತಾನ್ ದ್ರೋಣಃ ಪರ್ಯಚರದ್ ರಣೇ ॥೨೦॥

ಆಗ ನಾಲ್ಕು ದಿಕ್ಕುಗಳಲ್ಲಿಯೂ ದ್ರುಪದನ ಸೈನ್ಯದಿಂದ ಸುತ್ತುವರಿಯಲ್ಪಟ್ಟ ದ್ರೋಣರು ಕ್ಷತ್ರಿಯರ ಸಮೂಹವನ್ನು ದಹಿಸುತ್ತಾ ರಣರಂಗದಲ್ಲಿ ಸಂಚರಿಸಿದರು.

ಹತ್ವಾ ವಿಂಶತಿಸಾಹಸ್ರಾನ್ ಕ್ಷತ್ರಿಯಾನರಿಮರ್ದನಃ ।
ದಶಾಯುತಾನಿ ತೀಕ್ಷ್ಣಾಗ್ರೈರವಧೀದ್ ವಿಶಿಖೈಃ ಶತೈಃ ॥ ೨೧ ॥

ಶತ್ರುಮರ್ದನರಾದ ದ್ರೋಣರು ಇಪ್ಪತ್ತು ಸಾವಿರ ಕ್ಷತ್ರಿಯರನ್ನು ಕೊಂದು, ಅನಂತರ ತೀಕ್ಷ್ಣವಾದ ತುದಿಯುಳ್ಳ ಬಾಣಗಳಿಂದ ಒಂದು ಲಕ್ಷ ಯೋಧರನ್ನು ಕೊಂದರು.

ಸೋಽತಿಷ್ಠದಾಹವೇ ಯತ್ತೋ ವಿಧೂಮ ಇವ ಪಾವಕಃ ।
ಕ್ಷತ್ರಿಯಾಣಾಮಭಾವಾಯ ಬ್ರಾಹ್ಮಮಸ್ತ್ರಂ ಸಮಾಸ್ಥಿತಃ ॥ ೨೨ ॥

ರಣರಂಗದಲ್ಲಿ ಧೂಮವಿಲ್ಲದ ಅಗ್ನಿಯಂತೆ ನಿಂತು ಅವರು ಕ್ಷತ್ರಿಯರ ವಿನಾಶಕ್ಕಾಗಿ ಬ್ರಹ್ಮಾಸ್ತ್ರವನ್ನು ಕೈಯಲ್ಲಿ ಹಿಡಿದರು.

ಪಾಂಚಾಲ್ಯಂ ವಿರಥಂ ಭೀಮೋ ಹತಸರ್ವಾಯುಧಂ ವಶೀ ।
ಸುವಿಷಣ್ಣಂ ಮಹಾತ್ಮಾನಂ ತ್ವರಮಾಣಃ ಸಮಭ್ಯಯಾತ್ ॥ ೨೩ ॥

ರಥವನ್ನು ಕಳೆದುಕೊಂಡು, ತನ್ನ ಎಲ್ಲಾ ಆಯುಧಗಳನ್ನೂ ಕಳೆದುಕೊಂಡು ಬಹಳ ವಿಷಣ್ಣನಾದ ಮಹಾತ್ಮನಾದ ಧೃಷ್ಟದ್ಯುಮ್ನನ ಕಡೆಗೆ ಸಮರ್ಥನಾದ ಭೀಮನು ತ್ವರೆಯಿಂದ ಬಂದನು.

ತತಃ ಸ್ವರಥಮಾರೋಪ್ಯ ಪಾಂಚಾಲ್ಯಮರಿಮರ್ದನಃ ।
ಅಬ್ರವೀದಭಿಸಂಪ್ರೇಕ್ಷ್ಯ ದ್ರೋಣಮಸ್ಯಂತಮಂತಿಕಾತ್ ॥ ೨೪ ॥

ಅರಿಮರ್ದನನಾದ ಭೀಮಸೇನನು ಧೃಷ್ಟದ್ಯುಮ್ನನನ್ನು ತನ್ನ ರಥಕ್ಕೆ ಏರಿಸಿಕೊಂಡು ಸಮೀಪದಿಂದಲೇ ಬಾಣಪ್ರಯೋಗವನ್ನು ಮಾಡುತ್ತಿದ್ದ ದ್ರೋಣರನ್ನು ನೋಡಿ ಧೃಷ್ಟದ್ಯುಮ್ನನಿಗೆ ಹೇಳಿದನು.

ನ ತ್ವದನ್ಯ ಇಹಾಚಾರ್ಯಂ ಯೋದ್ಧುಮುತ್ಸಹತೇ ಪುಮಾನ್ ।
ತ್ವರಸ್ವ ಪ್ರಾಗ್ ವಧಾಯೈವ ತ್ವಯಿ ಭಾರಃ ಸಮಾಹಿತಃ ॥ ೨೫ ॥

ನಿನ್ನನ್ನು ಬಿಟ್ಟು ಬೇರೆ ಯಾವ ಯೋಧನೂ ಆಚಾರ್ಯರ ಜೊತೆಯಲ್ಲಿ ಯುದ್ಧವನ್ನು ಮಾಡಲಾರ. ನೀನು ಆಚಾರ್ಯರ ವಧೆಗಾಗಿಯೇ ತ್ವರೆಮಾಡು. ಈ ಭಾರವು ನಿನ್ನ ಮೇಲೆಯೇ ಇದೆ (ಎಂದು ಹೇಳಿದನು).

ಸ ತಥೋಕ್ತೋ ಮಹಾಬಾಹುಃ ಸರ್ವಭಾರಸಹಂ ನವಮ್ ।
ಅಭಿಪತ್ಯಾದದೇ ಕ್ಷಿಪ್ರಮಾಯುಧಪ್ರವರಂ ದೃಢಮ್ ॥ ೨೬ ॥

ಹೀಗೆ ಹೇಳಲ್ಪಟ್ಟ ಮಹಾಬಾಹುವಾದ ಧೃಷ್ಟದ್ಯುಮ್ನನು ಶೀಘ್ರವಾಗಿ ದೃಢವಾದ, ಹೊಸದಾದ, ಕಾರ್ಯಸಮರ್ಥವಾದ ಒಂದು ಆಯುಧವನ್ನು (ಧನುಸ್ಸನ್ನು) ತೆಗೆದುಕೊಂಡನು.

ಸಂರಬ್ಧಶ್ಚ ಶರಾನಸ್ಯನ್ ದ್ರೋಣಂ ದುರ್ವಾರಣಂ ರಣೇ ।
ವಿವಾರಯಿಷುರಾಚಾರ್ಯಂ ಶರವರ್ಷೈರವಾಕಿರತ್ ॥ ೨೭ ॥

ಕೋಪಗೊಂಡು ನಿವಾರಿಸಲು ಸಾಧ್ಯವಿಲ್ಲದ ದ್ರೋಣರನ್ನು ನಿವಾರಿಸಲು ಇಚ್ಛಿಸಿ ಬಾಣಗಳನ್ನು ಪ್ರಯೋಗಿಸುತ್ತಾ ದ್ರೋಣರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತೌ ನ್ಯವಾರಯತಾಂ ಶ್ರೇಷ್ಠೌ ಸಂರಬ್ಧೌ ರಣಶೋಭಿನೌ ।
ಉದೀರಯೇತಾಂ ಬ್ರಾಹ್ಮಾಣಿ ದಿವ್ಯಾನ್ಯಸ್ತ್ರಾಣ್ಯನೇಕಶಃ ॥ ೨೮ ॥

ಶ್ರೇಷ್ಠರೂ, ಕ್ರುದ್ಧರೂ, ರಣಶೋಭಿಗಳೂ ಆದ ಅವರಿಬ್ಬರೂ ಪರಸ್ಪರವಾಗಿ ನಿವಾರಿಸಿ ದಿವ್ಯವಾದ ಅನೇಕ ಬ್ರಹ್ಮಾಸ್ತ್ರಗಳನ್ನು ಪ್ರಯೋಗಿಸಿದರು.

ಸ ಮಹಾಸ್ತ್ರೈರ್ಮಹಾರಾಜ ದ್ರೋಣಮಾಚ್ಛಾದಯದ್ ರಣೇ ।
ನಿಹತ್ಯ ಸರ್ವಾಣ್ಯಸ್ತ್ರಾಣಿ ಭಾರದ್ವಾಜಸ್ಯ ಪಾರ್ಷತಃ ॥ ೨೯ ॥

ಎಲೈ ಮಹಾರಾಜನೇ, ಧೃಷ್ಟದ್ಯುಮ್ನನು ದ್ರೋಣರ ಎಲ್ಲ ಅಸ್ತ್ರಗಳನ್ನೂ ವಿನಾಶಗೊಳಿಸಿ ಮಹಾಸ್ತ್ರಗಳಿಂದ ರಣರಂಗದಲ್ಲಿ ಅವರನ್ನು ಮುಚ್ಚಿಹಾಕಿದನು.

ಸ ವಸಾತೀನ್ ಶಿಬೀಂಶ್ಚೈವ ಬಾಹ್ಲೀಕಾನ್ ಕೌರವಾನಪಿ ।
ರಕ್ಷಿಷ್ಯಮಾಣಾನ್ ಸಂಗ್ರಾಮೇ ದ್ರೋಣಂ ವ್ಯಧಮದಚ್ಯುತಃ ॥ ೩೦ ॥

ಅವನು ತನ್ನ ಪರಾಕ್ರಮದಿಂದ ಚ್ಯುತನಾಗದೆ ದ್ರೋಣರನ್ನು ರಣರಂಗದಲ್ಲಿ ರಕ್ಷಿಸುವ ವಸಾತಿಗಳನ್ನೂ, ಶಿಬಿಗಳನ್ನೂ, ಬಾಹ್ಲೀಕರನ್ನೂ ಮತ್ತು ಕೌರವರನ್ನೂ ನಾಶಗೊಳಿಸಿದನು.

ಧೃಷ್ಟದ್ಯುಮ್ನಸ್ತದಾ ರಾಜನ್ ಗಭಸ್ತಿಭಿರಿವಾಂಶುಮಾನ್ ।
ಬಭೌ ಪ್ರಚ್ಛಾದಯನ್ನಾಶಾಃ ಶರಜಾಲೈಃ ಸಮಂತತಃ ॥ ೩೧ ॥

ಎಲೈ ರಾಜನೇ, ಧೃಷ್ಟದ್ಯುಮ್ನನು ಆಗ ಸೂರ್ಯನು ತನ್ನ ಕಿರಣಗಳಿಂದ ತುಂಬಿದಂತೆ ಎಲ್ಲ ದಿಕ್ಕುಗಳನ್ನೂ ತನ್ನ ಬಾಣಗಳ ಸಮೂಹದಿಂದ ತುಂಬಿ ಶೋಭಿಸಿದನು.

ತಸ್ಯ ದ್ರೋಣೋ ಧನುಶ್ಚಿತ್ತ್ವಾ ವಿದ್ವಾ ಚೈನಂ ಶಿಲೀಮುಖೈಃ ।
ಮರ್ಮಾಣ್ಯಭ್ಯಹನದ್ ಭೂಯಃ ಸ ವ್ಯಥಾಂ ಪರಮಾಮಗಾತ್ ॥೩೨॥

ದ್ರೋಣರು ಅವನ ಧನುಸ್ಸನ್ನು ಕತ್ತರಿಸಿ ತೀಕ್ಷ್ಣವಾದ ಬಾಣಗಳಿಂದ ಹೊಡೆದು, ಅವನ ಮರ್ಮಗಳನ್ನು ಭೇದಿಸಿ ಅವನಿಗೆ ಬಹಳ ವ್ಯಥೆಯನ್ನು ಉಂಟುಮಾಡಿದರು.

ತತೋ ಭೀಮೋ ದೃಢಕ್ರೋಧೋ ದ್ರೋಣಸ್ಯಾಶ್ಲಿಷ್ಯ ತಂ ರಥಮ್ ।
ಶನಕೈರಿವ ರಾಜೇಂದ್ರ ದ್ರೋಣಂ ವಚನಮಬ್ರವೀತ್ ॥ ೩೩ ॥

ಆಗ ದೃಢವಾದ ಕ್ರೋಧವುಳ್ಳ ಭೀಮನು ದ್ರೋಣರ ಸಮೀಪಕ್ಕೆ ಬಂದು ದ್ರೋಣರ ರಥವನ್ನು ಹಿಡಿದು, ಎಲೈ ರಾಜೇಂದ್ರನೇ, ದ್ರೋಣರನ್ನು ಕುರಿತು ಮೆಲ್ಲನೆ ಮಾತನಾಡಿದನು.

ಯದಿ ನಾಮ ನ ಯುದ್ಧ್ಯೇರನ್ ಶಿಕ್ಷಿತಾ ಬ್ರಹ್ಮಬಂಧವಃ ।
ಸ್ವಕರ್ಮಭಿರಸಂತುಷ್ಟಾ ನ ಸ್ಮ ಕ್ಷತ್ರಂ ಕ್ಷಯಂ ವ್ರಜೇತ್ ॥ ೩೪ ॥

ಅಹಿಂಸಾ ಸರ್ವಭೂತೇಷು ಧರ್ಮಂ ಜ್ಯಾಯಸ್ತರಂ ವಿದುಃ ।
ತಸ್ಯ ಚ ಬ್ರಾಹ್ಮಣೋ ಮೂಲಂ ಭವಾಂಶ್ಚ ಬ್ರಹ್ಮವಿತ್ತಮಃ ॥ ೩೫ ॥

ಶ್ವಪಾಕವನ್ಮ್ಲೇಚ್ಛಗಣಾನ್ ಹತ್ವಾ ಚಾನ್ಯಾನ್ ಪೃಥಗ್ವಿಧಾನ್ ।
ಅಜ್ಞಾನಾನ್ಮೂಢವದ್ ಬ್ರಹ್ಮನ್ ಪುತ್ರದಾರಧನೇಪ್ಸಯಾ ॥ ೩೬ ॥

ಏಕಸ್ಯಾರ್ಥೇ ಬಹೂನ್ ಹತ್ವಾ ಪುತ್ರಸ್ಯಾಧರ್ಮವಿದ್ಯಥಾ ।
ಸ್ವಕರ್ಮಸ್ಥಾನ್ ವಿಕರ್ಮಸ್ಥೋ ನ ವ್ಯಪತ್ರಪಸೇ ಕಥಮ್ ॥ ೩೭ ॥

ಸ ಚಾದ್ಯ ಪತಿತಃ ಶೇತೇ ಪೃಷ್ಟೇನಾವೇದಿತಸ್ತವ ।
ಧರ್ಮರಾಜೇನ ತದ್ವಾಕ್ಯಂ ನಾತಿಶಂಕಿತುಮರ್ಹಸಿ ॥ ೩೮ ॥

ಸುಶಿಕ್ಷಿತರಾದ ಬ್ರಹ್ಮಬಂಧುಗಳು ತಮ್ಮ ಕರ್ಮಗಳಲ್ಲಿ ಸಂತೋಷರಹಿತರಾಗಿ ಯುದ್ಧವನ್ನು ಮಾಡದಿದ್ದರೆ ಕ್ಷತ್ರಿಯ ಕುಲವು ನಾಶವನ್ನು ಹೊಂದುತ್ತಿರಲಿಲ್ಲ. ಎಲ್ಲ ಧರ್ಮಗಳಲ್ಲಿಯೂ ಸರ್ವಭೂತಗಳ ಅಹಿಂಸೆಯು ಅತ್ಯಂತ ಶ್ರೇಷ್ಠವಾದ ಧರ್ಮವೆಂದು ಜ್ಞಾನಿಗಳು ತಿಳಿಯುತ್ತಾರೆ. ಆ ಧರ್ಮಕ್ಕೆ ಬ್ರಾಹ್ಮಣನೇ ಮೂಲ. ನೀವಾದರೂ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರು. ಎಲೈ ಬ್ರಾಹ್ಮಣರೇ, ಶ್ವಪಾಕರಂತೆ ಮ್ಲೇಚ್ಛಸಮೂಹಗಳನ್ನು ಮತ್ತು ಬೇರೆ ಬೇರೆ ಕ್ಷತ್ರಿಯರನ್ನು ಮೂಢರಂತೆ ಅಜ್ಞಾನದಿಂದ

ಪುತ್ರ-ದಾರ-ಧನಗಳನ್ನು ಪಡೆಯಲು ಬಯಸಿ ಒಬ್ಬ ಪುತ್ರನ ಸಲುವಾಗಿ ಧರ್ಮಜ್ಞಾನ ಶೂನ್ಯರಾಗಿ ಸ್ವಕರ್ಮನಿರತರಾದ ಕ್ಷತ್ರಿಯರನ್ನು ವಿಕರ್ಮಸ್ಥರಾದ ನೀವು ಕೊಂದು, ಏಕೆ ನಾಚಿಕೆ ಪಡುವುದಿಲ್ಲ? ಅಂತಹ ನಿಮ್ಮ ಪುತ್ರನು ಈ ದಿನ ರಣರಂಗದಲ್ಲಿ ಮಲಗಿದ್ದಾನೆ ನೀವು ಕೇಳಿದ ಪ್ರಶ್ನೆಗೆ ಉತ್ತರವಾಗಿ ಹೇಳಿದ ಧರ್ಮರಾಜನ ಮಾತನ್ನು ನೀವು ಶಂಕಿಸುವ ಕಾರಣವಿಲ್ಲ ಎಂದು ಹೇಳಿದನು.

ಏವಮುಕ್ತಸ್ತತೋ ದ್ರೋಣೋ ಭೀಮೇನೋತ್ಸೃಜ್ಯ ತದ್ಧನುಃ ।
ಸರ್ವಾಣ್ಯಸ್ತ್ರಾಣಿ ಧರ್ಮಾತ್ಮಾ ಹಾತುಕಾಮೋಽಭ್ಯಭಾಷತ ।
ಕರ್ಣ ಕರ್ಣ ಮಹೇಷ್ವಾಸ ಕೃಪ ದುರ್ಯೋಧನೇತಿ ಚ ॥ ೩೯ ॥

ಸಂಗ್ರಾಮೇ ಕ್ರಿಯತಾಂ ಯತ್ನೋ ಬ್ರವೀಮ್ಯೇಷ ಪುನಃ ಪುನಃ ।
ಪಾಂಡವೇಭ್ಯಃ ಶಿವಂ ವೋಽಸ್ತು ಶಸ್ತ್ರಮುತ್ಸೃಜಾಮ್ಯಹಮ್ ॥ ೪೦ ॥

ಹೀಗೆ ಭೀಮಸೇನನಿಂದ ಹೇಳಲ್ಪಟ್ಟ ದ್ರೋಣರು ತಮ್ಮ ಕೈಯಲ್ಲಿದ್ದ ಧನುಸ್ಸನ್ನು ಪರಿತ್ಯಜಿಸಿ, ಧರ್ಮಾತ್ಮರಾದ ಅವರು ಎಲ್ಲ ಅಸ್ತ್ರಗಳನ್ನೂ ಪರಿತ್ಯಜಿಸಲು ಬಯಸಿ ಮಾತನಾಡಿದರು, ಮಹಾಧನುರ್ಧಾರಿಯಾದ ಕರ್ಣನೇ, ಕೃಪರೇ, ದುರ್ಯೋಧನನೇ, ನೀವು ಯುದ್ಧದಲ್ಲಿ ಪ್ರಯತ್ನಪಡಿ. ನಾನು ಈ ಮಾತನ್ನು ಪುನಃ ಪುನಃ ಹೇಳುತ್ತಿದ್ದೇನೆ. ನಿಮಗೆ ಪಾಂಡವರಿಂದ ಕ್ಷೇಮವುಂಟಾಗಲಿ. ನಾನು ಶಸ್ತ್ರಗಳನ್ನು ಪರಿತ್ಯಜಿಸುತ್ತಿದ್ದೇನೆ (ಎಂದು ಹೇಳಿದರು).

ಇತಿ ತತ್ರ ಮಹಾರಾಜ ಪ್ರಾಕ್ರೋಶದ್ ದ್ರೋಣಮೇವ ಚ ।
ಉತ್ಸೃಜ್ಯ ಚ ರಣೇ ಶಸ್ತ್ರಂ ರಥೋಪಸ್ಥೇ ನಿವೇಶ್ಯ ಚ ।
ಅಭಯಂ ಸರ್ವಭೂತಾನಾಂ ಪ್ರದದೌ ಯೋಗಮಾಸ್ಥಿತಃ ॥ ೪೧ ॥

ಎಲೈ ಮಹಾರಾಜನೇ, ಹೀಗೆ ಅಶ್ವತ್ಥಾಮರನ್ನೂ ಕುರಿತು ಕಿರುಚಿ ಹೇಳಿದರು. ಅನಂತರ ರಣರಂಗದಲ್ಲಿ ರಥಪೀಠದಲ್ಲಿ ಶಸ್ತ್ರಗಳೆಲ್ಲವನ್ನೂ ಇಟ್ಟುತ್ಯಜಿಸಿ ಯೋಗವನ್ನು ಆಶ್ರಯಿಸಿ ಎಲ್ಲ ಪ್ರಾಣಿಗಳಿಗೂ ಅಭಯವನ್ನು ನೀಡಿದರು.

ತಸ್ಯ ತಚ್ಚಿದ್ರಮಾಜ್ಞಾಯ ಧೃಷ್ಟದ್ಯುಮ್ನಃ ಸಮುತ್ಥಿತಃ ।
ಖಡ್ಗೀ ರಥಾದವಪ್ಲುತ್ಯ ಸಹಸಾ ದ್ರೋಣಮಭ್ಯಯಾತ್ ॥ ೪೨ ॥

ಅವರ ಆ ಒಂದು ಅಲ್ಪ ಅವಕಾಶವನ್ನು ನೋಡಿದ ಧೃಷ್ಟದ್ಯುಮ್ನನು ಎದ್ದು ಖಡ್ಗವನ್ನು ಓಡಿದು ರಥದಿಂದ ಹಾರಿ ಶೀಘ್ರವಾಗಿ ದ್ರೋಣರ ಬಳಿಗೆ ಓಡಿದನು.

ಹಾಹಾಕೃತಾನಿ ಭೂತಾನಿ ಮಾನುಷಾಣೇತರಾಣಿ ಚ ।
ದ್ರೋಣಂ ತಥಾಗತಂ ದೃಷ್ಟ್ವಾ ಧೃಷ್ಟದ್ಯುಮ್ನವಶಂ ಗತಮ್ ॥ ೪೩ ॥

ಶಸ್ತ್ರಸಂನ್ಯಾಸವನ್ನು ಮಾಡಿದ ದ್ರೋಣರು ಆ ರೀತಿಯಲ್ಲಿ ಧೃಷ್ಟದ್ಯುಮ್ನನಿಗೆ ವಶವಾಗಿರುವುದನ್ನು ನೋಡಿ ಮನುಷ್ಯರು ಮತ್ತು ಭೂತಗಳು ಹಾಹಾಕಾರವನ್ನು ಮಾಡಿದವು.

ಹಾಹಾಕಾರಂ ಭೃಶಂ ಚಕ್ರುರಹೋ ಧಿಗಿತಿ ಚಾಬ್ರುವನ್ ।
ದ್ರೋಣೋಽಪಿ ಶಸ್ತ್ರಾಣ್ಯುತ್ಸೃಜ್ಯ ಪರಮಂ ಸಾಮ್ಯಮಾಸ್ಥಿತಃ ॥ ೪೪ ॥

ತೀವ್ರವಾದ ಹಾಹಾಕಾರವನ್ನು ಮಾಡಿ 'ಅಯ್ಯೋ ಧಿಕ್ಕಾರವಿರಲಿ' ಎಂದು ಹೇಳಿದರು. ದ್ರೋಣರಾದರೋ ಶಸ್ತ್ರಗಳನ್ನು ವಿಸರ್ಜಿಸಿ ಪರಮ ಸಮಾಧಾನದಿಂದ ಕುಳಿತಿದ್ದರು.

ತಥೋಕ್ತ್ವಾ ಯೋಗಮಾಸ್ಥಾಯ ಜ್ಯೋತಿರ್ಭೂತೋ ಮಹಾತಪಾಃ ।
ದಿವಮಾಕ್ರಾಮದಾಚಾರ್ಯಃ ಸದ್ಭಿಃ ಸಹ ದುರಾಕ್ರಮಮ್ ॥ ೪೫ ॥

ಮಹಾತಪಸ್ವಿಗಳಾದ ಆಚಾರ್ಯರು ಹಾಗೆ ಮಾತನಾಡಿ ಯೋಗವನ್ನು ಆಶ್ರಯಿಸಿ ಜ್ಯೋತೀರೂಪರಾಗಿ ಸಜ್ಜನರ ಜೊತೆಯಲ್ಲಿ ಹೊಂದಲು ಅಸಾಧ್ಯವಾದ ಸ್ವರ್ಗವನ್ನು ಸೇರಿದರು.

ದ್ವೌ ಸೂರ್ಯಾವಿತಿ ನೋ ಬುದ್ಧಿರಾಸೀತ್ ತಸ್ಮಿಂಸ್ತಥಾ ಗತೇ ।
ಏಕಾಗ್ರಮಿವ ಚಾಸೀದ್ದ್ಯೌರ್ಜ್ಯೋತಿರ್ಭಿಃ ಪೂರಿತಂ ನಭಃ ।
ಸಮಪದ್ಯತ ಚಾರ್ಕಾಭೇ ಭಾರದ್ವಾಜನಿಶಾಕರೇ ॥ ೪೬ ॥

ಅವರು ಜ್ಯೋತೀರೂಪರಾಗಿ ಮೇಲೆ ಹೋಗುತ್ತಿದ್ದಾಗ ನಮ್ಮೆಲ್ಲರಿಗೂ ಆಕಾಶದಲ್ಲಿ ಇಬ್ಬರು ಸೂರ್ಯರಿದ್ದಾರೆ ಎಂಬ ಬುದ್ಧಿಯು ಉಂಟಾಯಿತು. ದ್ರೋಣರೆಂಬ ಚಂದ್ರನು ಸೂರ್ಯನ ಪ್ರಕಾಶವನ್ನು ಹೊಂದಿ ಪ್ರಯಾಣ ಮಾಡುತ್ತಿರುವಾಗ ಆಕಾಶವು ಪ್ರಕಾಶದಿಂದ ಸಾಂದ್ರವಾಗಿ ತುಂಬಿಹೋಯಿತು.

ನಿಮೇಷಮಾತ್ರೇಣ ಚ ತಜ್ಜ್ಯೋತಿರಂತರಧೀಯತ ।
ಆಸೀತ್ಕಿಲಕಿಲಾಶಬ್ದಃ ಪ್ರಹೃಷ್ಟಾನಾಂ ದಿವೌಕಸಾಮ್ ।
ಬ್ರಹ್ಮಲೋಕಂ ಗತೇ ದ್ರೋಣೇ ಧೃಷ್ಟದ್ಯುಮ್ನೇ ಚ ಮೋಹಿತೇ ॥ ೪೭ ॥

ಒಂದು ನಿಮಿಷದಲ್ಲಿ ಆ ಜ್ಯೋತಿಸ್ಸು ಅಂತರ್ಧಾನವನ್ನು ಹೊಂದಿತು. ದ್ರೋಣರು ಬ್ರಹ್ಮಲೋಕವನ್ನು ತಲುಪಿ ಧೃಷ್ಟದ್ಯುಮ್ನನು ಮೋಹಗೊಂಡಿರುವಾಗ ಸಂತೋಷಗೊಂಡ ದೇವತೆಗಳ ಸಂತೋಷದ ಕಿಲಕಿಲ ಶಬ್ದವು ಉಂಟಾಯಿತು.

ವಯಮೇವ ತದಾದ್ರಾಕ್ಷ್ಮ ಪಂಚ ಮಾನುಷಯೋನಯಃ ।
ಯೋಗಯುಕ್ತಂ ಮಹಾತ್ಮಾನಂ ಗಚ್ಛಂತಂ ಪರಮಾಂ ಗತಿಮ್ ॥ ೪೮ ॥

ಅಹಂ ಧನಂಜಯಃ ಪಾರ್ಥಃ ಕೃಪಃ ಶಾರದ್ವತೋ ದ್ವಿಜಃ ।
ವಾಸುದೇವಶ್ಚ ವಾರ್ಷ್ಣೇಯೋ ಧರ್ಮರಾಜಶ್ಚ ಪಾಂಡವಃ ॥ ೪೯ ॥

ಮನುಷ್ಯಯೋನಿಯಲ್ಲಿ ಜನಿಸಿದ ನಾನು, ಕುಂತೀಪುತ್ರನಾದ ಅರ್ಜುನ, ಶಾರದ್ವತರಾದ ಬ್ರಾಹ್ಮಣರಾದ ಕೃಪರು, ವಾರ್ಷ್ಣೇಯನಾದ ಕೃಷ್ಣ ಮತ್ತು ಪಾಂಡುಪುತ್ರನಾದ ಧರ್ಮರಾಜ - ಈ ಐದುಜನರು ಮಾತ್ರ ಮಹಾತ್ಮರಾದ ಯೋಗಯುಕ್ತರಾದ ಅವರು ಶ್ರೇಷ್ಠವಾದ ಗತಿಯನ್ನು ಹೊಂದುವುದನ್ನು ನೋಡಿದೆವು.

ಅನ್ಯೇ ತು ಸರ್ವೇ ನಾಪಶ್ಯನ್ ಭಾರದ್ವಾಜಸ್ಯ ಧೀಮತಃ ।
ಮಹಿಮಾನಂ ಮಹಾರಾಜ ಯೋಗಯುಕ್ತಸ್ಯ ಗಚ್ಛತಃ ॥ ೫೦ ॥

ಎಲೈ ಮಹಾರಾಜನೇ, ಮೇಧಾವಿಗಳಾದ ದ್ರೋಣರು ಯೋಗಯುಕ್ತರಾಗಿ ಪ್ರಯಾಣ ಮಾಡುವ ಅವರ ಮಹಿಮೆಯನ್ನು ಉಳಿದವರು ಯಾರೂ ನೋಡಲಿಲ್ಲ.

ಗತಿಂ ಪರಮಿಕಾಂ ಪ್ರಾಪ್ತಮಜಾನಂತೋ ನೃಯೋನಯಃ ।
ನಾಪಶ್ಯನ್ ಗಚ್ಛಮಾನಂ ಹಿ ತಂ ಸಾರ್ಧಮೃಷಿಪುಂಗವೈಃ ।
ಆಚಾರ್ಯಂ ಯೋಗಮಾಸ್ಥಾಯ ಬ್ರಹ್ಮಲೋಕಮರಿಂದಮಮ್ ॥೫೧॥

ಮನುಷ್ಯಯೋನಿಯಲ್ಲಿ ಹುಟ್ಟಿದ ಉಳಿದ ಯೋಧರು ಆಚಾರ್ಯರ ಪರಮ ಗತಿಯನ್ನು ತಿಳಿಯದೆ ಯೋಗವನ್ನು ಧರಿಸಿ ಋಷಿಶ್ರೇಷ್ಠರ ಜೊತೆಯಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಿದ್ದ ಅರಿಂದಮರಾದ ಆ ಆಚಾರ್ಯರನ್ನು ಕಾಣಲಿಲ್ಲ.

ಅವರ ಆ ಒಂದು ಅಲ್ಪ ಅವಕಾಶವನ್ನು ನೋಡಿದ ಧೃಷ್ಟದ್ಯುಮ್ನನು ಎದ್ದು ಖಡ್ಗವನ್ನು ಓಡಿದು ರಥದಿಂದ ಹಾರಿ ಶೀಘ್ರವಾಗಿ ದ್ರೋಣರ ಬಳಿಗೆ ಓಡಿದನು.

ಹಾಹಾಕೃತಾನಿ ಭೂತಾನಿ ಮಾನುಷಾಣೀತರಾಣಿ ಚ ।
ದ್ರೋಣಂ ತಥಾಗತಂ ದೃಷ್ಟ್ವಾ ಧೃಷ್ಟದ್ಯುಮ್ನವಶಂ ಗತಮ್ ॥ ೪೩ ॥

ಶಸ್ತ್ರಸಂನ್ಯಾಸವನ್ನು ಮಾಡಿದ ದ್ರೋಣರು ಆ ರೀತಿಯಲ್ಲಿ ಧೃಷ್ಟದ್ಯುಮ್ನನಿಗೆ ವಶವಾಗಿರುವುದನ್ನು ನೋಡಿ ಮನುಷ್ಯರು ಮತ್ತು ಭೂತಗಳು ಹಾಹಾಕಾರವನ್ನು ಮಾಡಿದವು.

ಹಾಹಾಕಾರಂ ಭೃಶಂ ಚಕ್ರುರಹೋ ಧಿಗಿತಿ ಚಾಬ್ರುವನ್ ।
ದ್ರೋಣೋಽಪಿ ಶಸ್ತ್ರಾಣ್ಯುತ್ಸೃಜ್ಯ ಪರಮಂ ಸಾಮ್ಯಮಾಸ್ಥಿತಃ ॥ ೪೪ ॥

ತೀವ್ರವಾದ ಹಾಹಾಕಾರವನ್ನು ಮಾಡಿ 'ಅಯ್ಯೋ ಧಿಕ್ಕಾರವಿರಲಿ' ಎಂದು ಹೇಳಿದರು. ದ್ರೋಣರಾದರೋ ಶಸ್ತ್ರಗಳನ್ನು ವಿಸರ್ಜಿಸಿ ಪರಮ ಸಮಾಧಾನದಿಂದ ಕುಳಿತಿದ್ದರು.

ತಥೋಕ್ತ್ವಾ ಯೋಗಮಾಸ್ಥಾಯ ಜ್ಯೋತಿರ್ಭೂತೋ ಮಹಾತಪಾಃ ।
ದಿವಮಾಕ್ರಾಮದಾಚಾರ್ಯಃ ಸದ್ಭಿಃ ಸಹ ದುರಾಕ್ರಮಮ್ ॥ ೪೫ ॥

ಮಹಾತಪಸ್ವಿಗಳಾದ ಆಚಾರ್ಯರು ಹಾಗೆ ಮಾತನಾಡಿ ಯೋಗವನ್ನು ಆಶ್ರಯಿಸಿ ಜ್ಯೋತೀರೂಪರಾಗಿ ಸಜ್ಜನರ ಜೊತೆಯಲ್ಲಿ ಹೊಂದಲು ಅಸಾಧ್ಯವಾದ ಸ್ವರ್ಗವನ್ನು ಸೇರಿದರು.

ದ್ವೌ ಸೂರ್ಯಾವಿತಿ ನೋ ಬುದ್ಧಿರಾಸೀತ್ ತಸ್ಮಿಂಸ್ತಥಾ ಗತೇ ।
ಏಕಾಗ್ರಮಿವ ಚಾಸೀದ್ದ್ಯೌರ್ಜ್ಯೋತಿರ್ಭಿಃ ಪೂರಿತಂ ನಭಃ ।
ಸಮಪದ್ಯತ ಚಾರ್ಕಾಭೇ ಭಾರದ್ವಾಜನಿಶಾಕರೇ ॥ ೪೬ ॥

ಅವರು ಜ್ಯೋತೀರೂಪರಾಗಿ ಮೇಲೆ ಹೋಗುತ್ತಿದ್ದಾಗ ನಮ್ಮೆಲ್ಲರಿಗೂ ಆಕಾಶದಲ್ಲಿ ಇಬ್ಬರು ಸೂರ್ಯರಿದ್ದಾರೆ ಎಂಬ ಬುದ್ಧಿಯು ಉಂಟಾಯಿತು. ದ್ರೋಣರೆಂಬ ಚಂದ್ರನು ಸೂರ್ಯನ ಪ್ರಕಾಶವನ್ನು ಹೊಂದಿ ಪ್ರಯಾಣ ಮಾಡುತ್ತಿರುವಾಗ ಆಕಾಶವು ಪ್ರಕಾಶದಿಂದ ಸಾಂದ್ರವಾಗಿ ತುಂಬಿಹೋಯಿತು.

ನಿಮೇಷಮಾತ್ರೇಣ ಚ ತಜ್ಜ್ಯೋತಿರಂತರಧೀಯತ ।
ಆಸೀತ್ಕಿಲಕಿಲಾಶಬ್ದಃ ಪ್ರಹೃಷ್ಟಾನಾಂ ದಿವೌಕಸಾಮ್ ।
ಬ್ರಹ್ಮಲೋಕಂ ಗತೇ ದ್ರೋಣೇ ಧೃಷ್ಟದ್ಯುಮ್ನೇ ಚ ಮೋಹಿತೇ ॥ ೪೭ ॥

ಒಂದು ನಿಮಿಷದಲ್ಲಿ ಆ ಜ್ಯೋತಿಸ್ಸು ಅಂತರ್ಧಾನವನ್ನು ಹೊಂದಿತು. ದ್ರೋಣರು ಬ್ರಹ್ಮಲೋಕವನ್ನು ತಲುಪಿ ಧೃಷ್ಟದ್ಯುಮ್ನನು ಮೋಹಗೊಂಡಿರುವಾಗ ಸಂತೋಷಗೊಂಡ ದೇವತೆಗಳ ಸಂತೋಷದ ಕಿಲಕಿಲ ಶಬ್ದವು ಉಂಟಾಯಿತು.

ವಯಮೇವ ತದಾದ್ರಾಕ್ಷ್ಮ ಪಂಚ ಮಾನುಷಯೋನಯಃ ।
ಯೋಗಯುಕ್ತಂ ಮಹಾತ್ಮಾನಂ ಗಚ್ಛಂತಂ ಪರಮಾಂ ಗತಿಮ್ ॥ ೪೮ ॥

ಅಹಂ ಧನಂಜಯಃ ಪಾರ್ಥಃ ಕೃಪಃ ಶಾರದ್ವತೋ ದ್ವಿಜಃ ।
ವಾಸುದೇವಶ್ಚ ವಾರ್ಷ್ಣೇಯೋ ಧರ್ಮರಾಜಶ್ಚ ಪಾಂಡವಃ ॥ ೪೯ ॥

ಮನುಷ್ಯಯೋನಿಯಲ್ಲಿ ಜನಿಸಿದ ನಾನು, ಕುಂತೀಪುತ್ರನಾದ ಅರ್ಜುನ, ಶಾರದ್ವತರಾದ ಬ್ರಾಹ್ಮಣರಾದ ಕೃಪರು, ವಾರ್ಷ್ಣೇಯನಾದ ಕೃಷ್ಣ ಮತ್ತು ಪಾಂಡುಪುತ್ರನಾದ ಧರ್ಮರಾಜ - ಈ ಐದುಜನರು ಮಾತ್ರ ಮಹಾತ್ಮರಾದ ಯೋಗಯುಕ್ತರಾದ ಅವರು ಶ್ರೇಷ್ಠವಾದ ಗತಿಯನ್ನು ಹೊಂದುವುದನ್ನು ನೋಡಿದೆವು.

ಅನ್ಯೇ ತು ಸರ್ವೇ ನಾಪಶ್ಯನ್ ಭಾರದ್ವಾಜಸ್ಯ ಧೀಮತಃ ।
ಮಹಿಮಾನಂ ಮಹಾರಾಜ ಯೋಗಯುಕ್ತಸ್ಯ ಗಚ್ಛತಃ ॥ ೫೦ ॥

ಎಲೈ ಮಹಾರಾಜನೇ, ಮೇಧಾವಿಗಳಾದ ದ್ರೋಣರು ಯೋಗಯುಕ್ತರಾಗಿ ಪ್ರಯಾಣ ಮಾಡುವ ಅವರ ಮಹಿಮೆಯನ್ನು ಉಳಿದವರು ಯಾರೂ ನೋಡಲಿಲ್ಲ.

ಗತಿಂ ಪರಮಿಕಾಂ ಪ್ರಾಪ್ತಮಜಾನಂತೋ ನೃಯೋನಯಃ ।
ನಾಪಶ್ಯನ್ ಗಚ್ಛಮಾನಂ ಹಿ ತಂ ಸಾರ್ಧಮೃಷಿಪುಂಗವೈಃ ।
ಆಚಾರ್ಯಂ ಯೋಗಮಾಸ್ಥಾಯ ಬ್ರಹ್ಮಲೋಕಮರಿಂದಮಮ್ ॥೫೧॥

ಮನುಷ್ಯಯೋನಿಯಲ್ಲಿ ಹುಟ್ಟಿದ ಉಳಿದ ಯೋಧರು ಆಚಾರ್ಯರ ಪರಮ ಗತಿಯನ್ನು ತಿಳಿಯದೆ ಯೋಗವನ್ನು ಧರಿಸಿ ಋಷಿಶ್ರೇಷ್ಠರ ಜೊತೆಯಲ್ಲಿ ಬ್ರಹ್ಮಲೋಕಕ್ಕೆ ಹೋಗುತ್ತಿದ್ದ ಅರಿಂದಮರಾದ ಆ ಆಚಾರ್ಯರನ್ನು ಕಾಣಲಿಲ್ಲ.

ವಿತುನ್ನಾಂಗಂ ಶರಶತೈರ್ನ್ಯಸ್ತಾಯುಧಮಸೃಕ್ಪ್ಲವಮ್ ।
ಧಿಕೃತಃ ಪಾರ್ಷತಸ್ತಂ ತು ಸರ್ವಭೂತೈಃ ಪರಾಮೃಶತ್ ॥ ೫೨ ॥

ದೇಹವೆಲ್ಲವೂ ನೂರಾರು ಬಾಣಗಳಿಂದ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಶಸ್ತ್ರಸಂನ್ಯಾಸವನ್ನು ಮಾಡಿದ ಅವರನ್ನು (ಅವರ ದೇಹವನ್ನು) ಸರ್ವಪ್ರಾಣಿಗಳಿಂದಲೂ ಧಿಕ್ಕೃತನಾದ ಧೃಷ್ಟದ್ಯುಮ್ನನು ಕೈಯಲ್ಲಿ ಹಿಡಿದನು.

ತಸ್ಯ ಮೂರ್ಧಾನಮಾಲಂಬ್ಯ ಗತಸತ್ತ್ವಸ್ಯ ದೇಹಿನಃ ।
ಕಿಂಚಿದಬ್ರುವತಃ ಕಾಯಾದ್ ವಿಚಕರ್ತಾಸಿನಾ ಶಿರಃ ॥ ೫೩ ॥

ಮೃತರಾದ ಅವರ ದೇಹದಲ್ಲಿ ತಲೆಯನ್ನು ಹಿಡಿದು ಏನೂ ಮಾತನಾಡದಿದ್ದ ಅವರ ಶಿರಸ್ಸನ್ನು ಖಡ್ಗದಿಂದ ಕತ್ತರಿಸಿದನು.

ಹರ್ಷೇಣ ಮಹತಾ ಯುಕ್ತೋ ಭಾರದ್ವಾಜೇ ನಿಪಾತಿತೇ ।
ಸಿಂಹನಾದರವಂ ಚಕ್ರೇ ಭ್ರಾಮಯನ್ ಖಡ್ಗಮಾಹವೇ ॥ ೫೪ ॥

ದ್ರೋಣರು ಅಂತಹ ಪಾತವನ್ನು ಹೊಂದುತ್ತಿರಲು ಬಹಳ ಹರ್ಷದಿಂದ ಕೂಡಿದವನಾಗಿ ರಣರಂಗದಲ್ಲಿ ಖಡ್ಗವನ್ನು ತಿರುಗಿಸುತ್ತಾ ಸಿಂಹನಾದವನ್ನು ಮಾಡಿದನು.

ಆಕರ್ಣಪಲಿತಃ ಶ್ಯಾಮೋ ವಯಸಾಶೀತಿಪಂಚಕಃ ।
ತತ್ಕೃತೇ ವ್ಯಚರತ್ ಸಂಖೇ ಸ ತು ಷೋಡಶವರ್ಷವತ್ ॥ ೫೫ ॥

ಕಿವಿಯವರೆಗೂ ನರೆತ ಶ್ಯಾಮವರ್ಣದ, ವಯಸ್ಸಿನಲ್ಲಿ ನಾಲ್ನೂರು ವರ್ಷಗಳನ್ನು ದಾಟಿದ ದ್ರೋಣರು ನಿನ್ನ ಸಲುವಾಗಿ ಹದಿನಾರು ವರ್ಷದ ಯುವಕನಂತೆ ಸಂಚರಿಸಿದರು (ಲಕ್ಷಾಲಂಕಾರ).

ಉಕ್ತವಾಂಶ್ಚ ಮಹಾಬಾಹುಃ ಕುಂತೀಪುತ್ರೋ ಧನಂಜಯಃ ।
ಜೀವಂತಮಾನಯಾಚಾರ್ಯಂ ಮಾ ವಧೀರ್ದ್ರುಪದಾತ್ಮಜ ॥ ೫೬ ॥

ಮಹಾಬಾಹುವಾದ ಕುಂತೀಪುತ್ರನಾದ ಧನಂಜಯನು ಎಲೈ ದ್ರುಪದಾತ್ಮಜನೇ, ಜೀವಂತವಾಗಿರುವ ಆಚಾರ್ಯರನ್ನು ಕರೆದುಕೊಂಡು ಬಾ, ಕೊಲ್ಲಬೇಡ ಎಂದು ಹೇಳಿದನು.

ನ ಹಂತವ್ಯೋ ನ ಹಂತವ್ಯ ಇತಿ ತೇ ಸೈನಿಕಾಶ್ಚ ಹ ।
ಉತ್ಕೋಶನ್ನರ್ಜುನಶ್ಚೈವ ಸಾನುಕ್ರೋಶಸ್ತಮಾದ್ರವತ್ ॥ ೫೬ ॥

ಸೈನಿಕರೂ ಸಹ ಕೊಲ್ಲಬಾರದು, ಕೊಲ್ಲಬಾರದು ಎಂದು ಕಿರುಚಿದರು. ಅರ್ಜುನನು ಹಾಗೇ ಕಿರುಚುತ್ತಾ ಮೃದುವಾದ ಹೃದಯವುಳ್ಳವನಾಗಿ ಧೃಷ್ಟದ್ಯುಮ್ನನನ್ನು ಹಿಂಬಾಲಿಸಿ ಓಡಿಬಂದನು.

ಕ್ರೋಶಮಾನೇಽರ್ಜುನೇ ಚೈವ ಪಾರ್ಥಿವೇಷು ಚ ಸರ್ವಶಃ ।
ಧೃಷ್ಟದ್ಯುಮ್ನೋಽವಧೀದ್ ದ್ರೋಣಂ ರಥತಲ್ಪೇ ನರರ್ಷಭಮ್ ॥ ೫೭ ॥

ಅರ್ಜುನನೂ ಮತ್ತು ಉಳಿದ ರಾಜರೂ ಎಲ್ಲ ಕಡೆಗಳಿಂದಲೂ ಕಿರುಚುತ್ತಿದ್ದರೂ ಧೃಷ್ಟದ್ಯುಮ್ನನು ರಥಪೀಠದಲ್ಲಿ ಕುಳಿತಿದ್ದ ಪುರುಷಶ್ರೇಷ್ಠರಾದ ದ್ರೋಣರನ್ನು ಕೊಂದನು.

ಶೋಣಿತೇನ ಪರಿಕ್ಲಿನ್ನೋ ರಥಾದ್ಭೂಮಿಮರಿಂದಮಃ ।
ಲೋಹಿತಾಂಗ ಇವಾದಿತ್ಯೋ ದುರ್ದರ್ಶಃ ಸಮಪದ್ಯತ ।
ಏವಂ ತಂ ನಿಹತಂ ಸಂಖ್ಯೇ ದದೃಶೇ ಸೈನಿಕೋ ಜನಃ ॥ ೫೮ ॥

ರಕ್ತದಿಂದ ತೊಯ್ದ ದೇಹವುಳ್ಳವರಾಗಿ, ರಥದಿಂದ ಭೂಮಿಯ ಮೇಲೆ ಲೋಹಿತ ಶರೀರರಾಗಿ ಆದಿತ್ಯನಂತೆ ಬಿದ್ದ ಅರಿಂದಮರಾದ (ದ್ರೋಣರ ಶರೀರವು) ನೋಡಲು ಅಸಾಧ್ಯವಾಯಿತು. ಹೀಗೆ ರಣರಂಗದಲ್ಲಿ ಕೊಲ್ಲಲ್ಪಟ್ಟ ಅವರನ್ನು ಸೈನಿಕ ಜನರು ನೋಡಿದರು.

ಧೃಷ್ಟದ್ಯುಮ್ನಸ್ತು ತದ್ರಾಜನ್ ಭಾರದ್ವಾಜಶಿರೋ ಮಹತ್ ।
ತಾವಕಾನಾಂ ಮಹೇಷ್ವಾಸಃ ಪ್ರಮುಖೇ ತತ್ ಸಮಾಕ್ಷಿಪತ್ ॥ ೫೯ ॥

ಎಲೈ ರಾಜನೇ, ಮಹಾಧನುರ್ಧಾರಿಯಾದ ಧೃಷ್ಟದ್ಯುಮ್ನನಾದರೋ ದ್ರೋಣರ ಆ ದೊಡ್ಡ ಶಿರಸ್ಸನ್ನು ನಿನ್ನವರ ಮುಂದೆ ಎಸೆದನು.

ತೇ ತು ದೃಷ್ಟ್ವಾ ಶಿರೋ ರಾಜನ್ ಭಾರದ್ವಾಜಸ್ಯ ತಾವಕಾಃ ।
ಪಲಾಯನಕೃತೋತ್ಸಾಹಾ ದುದ್ರುವುಃ ಸರ್ವತೋ ದಿಶಮ್ ॥ ೬೦ ॥

ಎಲೈ ರಾಜನೇ, ನಿನ್ನವರು ದ್ರೋಣರ ಆ ಶಿರಸ್ಸನ್ನು ನೋಡಿ ಪಲಾಯನವನ್ನು ಮಾಡಲು ಬಯಸಿ ಎಲ್ಲ ದಿಕ್ಕುಗಳಲ್ಲಿಯೂ ಓಡಿಹೋದರು.

ದ್ರೋಣಸ್ತು ದಿವಮಾಸ್ಥಾಯ ನಕ್ಷತ್ರಪಥಮಾವಿಶತ್ ।
ಅಹಮೇವ ತದದ್ರಾಕ್ಷಂ ದ್ರೋಣಸ್ಯ ನಿಧನಂ ನೃಪ ।
ಋಷೇಃ ಪ್ರಸಾದಾತ್ ಕೃಷ್ಣಸ್ಯ ಸತ್ಯವತ್ಯಾಃ ಸುತಸ್ಯ ಚ ॥ ೬೧ ॥

ದ್ರೋಣರಾದರೋ ಆಕಾಶವನ್ನು ಸೇರಿ ನಕ್ಷತ್ರಮಾರ್ಗವನ್ನು ಪ್ರವೇಶಿಸಿದರು. ಎಲೈ ರಾಜನೇ, ದ್ರೋಣರ ಆ ನಿಧನವನ್ನು ಋಷಿಗಳಾದ ಸತ್ಯವತೀಸುತರಾದ, ವಾಸಿಷ್ಠಕೃಷ್ಣರಾದ ವೇದವ್ಯಾಸರ ಅನುಗ್ರಹದಿಂದ ನಾನೇ ನೋಡಿದೆನು.

ವಿಧೂಮಾಮಿವ ಸಂಯಾಂತೀಮುಲ್ಕಾಂ ಪ್ರಜ್ವಲಿತಾಮಿವ ।
ಅಪಶ್ಯಾಮ ದಿವಂ ಸ್ತಬ್ಧ್ವಾ ಗಚ್ಛಂತಂ ತಂ ಮಹಾದ್ಯುತಿಮ್ ॥ ೬೨ ।

ಆ ಮಹಾತೇಜಸ್ವಿಗಳು ಧೂಮವಿಲ್ಲದೆ ಪ್ರಜ್ವಲಿಸುವ ಉಲ್ಕೆಯಂತೆ ಅಂತರಿಕ್ಷವನ್ನು ಸ್ತಂಭಿಸಿ ಹೋಗುವುದನ್ನು ನಾವು (ಐದು ಜನರು) ನೋಡಿದೆವು.

ಹತೇ ದ್ರೋಣೇ ನಿರುತ್ಸಾಹಾನ್ ಕುರೂನ್ ಪಾಂಡವಸೃಂಜಯಾಃ ।
ಅಭ್ಯದ್ರವನ್ ಮಹಾವೇಗಾಸ್ತತಃ ಸೈನ್ಯಂ ವ್ಯದೀರ್ಯತ ॥ ೬೩ ॥

ದ್ರೋಣರು ಹತರಾಗುತ್ತಿರಲು ಪಾಂಡವ-ಸೃಂಜಯರು ಮಹಾವೇಗದಿಂದ ನಿರುತ್ಸಾಹರಾದ ಕುರುಗಳ ಮೇಲೆ ಎರಗಿದರು. ಆಗ ಕೌರವ ಸೈನ್ಯವು ಭಗ್ನವಾಯಿತು.

ನಿಹತಾ ಹಯಭೂಯಿಷ್ಠಾಃ ಸಂಗ್ರಾಮೇ ನಿಶಿತೈಃ ಶರೈಃ ।
ತಾವಕಾ ನಿಹತೇ ದ್ರೋಣೇ ಗತಾಸವ ಇವಾಭವನ್ ॥ ೬೪ ॥

ಅಶ್ವಗಳು ಪ್ರಧಾನವಾಗಿದ್ದ ನಿನ್ನ ಸೈನಿಕರು ರಣರಂಗದಲ್ಲಿ ತೀಕ್ಷ್ಣವಾದ ಬಾಣಗಳಿಂದ ಹತರಾದರು. ದ್ರೋಣರು ಹತರಾಗುತ್ತಿರಲು ನಿನ್ನವರು ಪ್ರಾಣಗಳನ್ನು ಕಳೆದುಕೊಂಡಂತಾದರು.

ಪರಾಜಯಮಥಾವಾಪ್ಯ ಪರತ್ರ ಚ ಮಹದ್ಭಯಮ್ ।
ಉಭಯೇನೈವ ತೇ ಹೀನಾ ನಾವಿಂದನ್ ಧೃತಿಮಾತ್ಮನಃ ॥ ೬೫ ॥

ಕೌರವರು ಪರಾಜಯವನ್ನು ಹೊಂದಿ ಈ ಲೋಕದಲ್ಲಿ ಸುಖವನ್ನು ಕಳೆದುಕೊಂಡು ಮಹದ್ಭಯವನ್ನು ಹೊಂದಿ, ಪರಲೋಕದ ಸುಖವನ್ನೂ ಕಳೆದುಕೊಂಡು ಎಲ್ಲದರಿಂದಲೂ ಹೀನರಾಗಿ ಧೈರ್ಯವನ್ನು ಹೊಂದಲಿಲ್ಲ.

ಅನ್ವಿಚ್ಛಂತಃ ಶರೀರಂ ತು ಭಾರದ್ವಾಜಸ್ಯ ಪಾರ್ಥಿವಾಃ ।
ನಾಧ್ಯಗಚ್ಛಂಸ್ತದಾ ರಾಜನ್ ಕಬಂಧಾಯುತಸಂಕುಲೇ ॥ ೬೬ ॥

ಎಲೈ ರಾಜನೇ, ರಾಜರು ದ್ರೋಣರ ಶರೀರವನ್ನು ಹುಡುಕಿದರೂ ಹತ್ತಾರು ಸಾವಿರ ರುಂಡಗಳಿಂದ ನಿಬಿಡವಾದ ರಣರಂಗದಲ್ಲಿ ಅದನ್ನು ಕಾಣಲಿಲ್ಲ.

ಪಾಂಡವಾಸ್ತು ಜಯಂ ಲಬ್ಧ್ವಾ ಪರತ್ರ ಚ ಮಹದ್ಯಶಃ ।
ಬಾಣಶಬ್ದರವಾಂಶ್ಚಕ್ರುಃ ಸಿಂಹನಾದಾಂಶ್ಚ ಪುಷ್ಕಳಾನ್ ॥ ೬೭ ॥

ಪಾಂಡವರಾದರೋ ಈ ಲೋಕದಲ್ಲಿ ಜಯವನ್ನೂ, ಪರಲೋಕದಲ್ಲಿ ಮಹಾಕೀರ್ತಿಯನ್ನೂ ಪಡೆದು ಬಾಣಗಳ ಶಬ್ದಗಳಿಂದಲೂ ಮತ್ತು ಪುಷ್ಕಳ ಸಿಂಹನಾದಗಳಿಂದಲೂ ದೊಡ್ಡ ಶಬ್ದವನ್ನು ಉಂಟುಮಾಡಿದರು.

ಭೀಮಸೇನಸ್ತತೋ ರಾಜನ್ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ವರೂಥಿನ್ಯಾಮನೃತ್ಯೇತಾಂ ಪರಿಷ್ವಜ್ಯ ಪರಸ್ಪರಮ್ ॥ ೬೮ ॥

ಎಲೈ ರಾಜನೇ, ಆಗ ಭೀಮಸೇನನೂ ಮತ್ತು ಪಾರ್ಷತನಾದ ಧೃಷ್ಟದ್ಯುಮ್ನನೂ ಪರಸ್ಪರವಾಗಿ ಆಲಿಂಗಿಸಿ ಸೈನ್ಯಮಧ್ಯದಲ್ಲಿ ನರ್ತನವನ್ನು ಮಾಡಿದರು.

ಅಬ್ರವೀಚ್ಚ ತದಾ ಭೀಮಃ ಪಾರ್ಷತಂ ಶತ್ರುತಾಪನಮ್ ।
ಭೂಯೋಽಹಂ ತ್ವಾಂ ವಿಜಯಿನಂ ಪರಿಷ್ವಕ್ಷ್ಯಾಮಿ ಪಾರ್ಷತ ।
ಸೂತಪುತ್ರೇ ಹತೇ ಪಾಪೇ ಧಾರ್ತರಾಷ್ಟ್ರೇ ಚ ಸಂಯುಗೇ ॥ ೬೯ ॥

ಆಗ ಭೀಮಸೇನನು ಶತ್ರುತಾಪನನಾದ ಧೃಷ್ಟದ್ಯುಮ್ನನನ್ನು ಕುರಿತು- 'ಎಲೈ ಧೃಷ್ಟದ್ಯುಮ್ನನೇ, ಸೂತಪುತ್ರನಾದ ಕರ್ಣನು ಹತನಾದ ಮೇಲೆ, ಪಾಪಿಯಾದ ದುರ್ಯೋಧನನೂ ಯುದ್ಧದಲ್ಲಿ ಹತನಾದ ಮೇಲೆ ನಾನು ಪುನಃ ವಿಜಯಶಾಲಿಯಾದ ನಿನ್ನನ್ನು ಆಲಿಂಗಿಸುವೆನು' ಎಂದು ಹೇಳಿದನು.

ಏತಾವದುಕ್ತ್ವಾ ಭೀಮಸ್ತು ಹರ್ಷೇಣ ಮಹತಾ ಯುತಃ ।
ಬಾಹುಶಬ್ದೇನ ಪೃಥಿವೀಂ ಕಂಪಯಾಮಾಸ ಪಾಂಡವಃ ॥ ೭೦ ॥

ಈ ಮಾತುಗಳನ್ನು ಹೇಳಿ ಭೀಮಸೇನನು ಬಹಳ ಸಂತೋಷದಿಂದ ಕೂಡಿದವನಾಗಿ ತನ್ನ ಭುಜಗಳನ್ನು ತಟ್ಟಿ ಭೂಮಿಯನ್ನು ನಡುಗಿಸಿದನು.

ತಸ್ಯ ಶಬ್ದೇನ ವಿತ್ರಸ್ತಾಃ ಪ್ರಾದ್ರವಂಸ್ತಾವಕಾ ಯುಧಿ ।
ಕ್ಷತ್ರಧರ್ಮಂ ಸಮುತ್ಸೃಜ್ಯ ಪಲಾಯನಪರಾಯಣಾಃ ॥ ೭೧ ॥

ಆ ಶಬ್ದವನ್ನು ಕೇಳಿದ ನಿನ್ನವರು ಯುದ್ಧದಲ್ಲಿ ಹೆದರಿ, ಕ್ಷತ್ರಿಯಧರ್ಮವನ್ನು ತ್ಯಜಿಸಿ ಪಲಾಯನಪರಾಯಣರಾಗಿ ಓಡಿಹೋದರು.

ಪಾಂಡವಾಸ್ತು ಜಯಂ ಲಬ್ಧ್ವಾ ಹೃಷ್ಟಾ ಹ್ಯಾಸನ್ ವಿಶಾಂಪತೇ ।
ಅರಿಕ್ಷಯಂ ಚ ಸಂಗ್ರಾಮೇ ತೇನ ತೇ ಸುಖಮಾಪ್ನುವನ್ ॥ ೭೨ ॥

ಎಲೈ ರಾಜನೇ, ಪಾಂಡವರು ಜಯವನ್ನೂ, ಯುದ್ಧದಲ್ಲಿ ಶತ್ರುಕ್ಷಯವನ್ನೂ ಸಂಪಾದಿಸಿ ಹರ್ಷಗೊಂಡರು. ಅದರಿಂದ ಅವರು ಸುಖವನ್ನು ಪಡೆದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಷಟ್‌ಸಪ್ತತ್ಯಧಿಕಶತತಮೋऽಧ್ಯಾಯಃ ॥

॥ ದ್ರೋಣವಧಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತಾರನೆಯ
ಅಧ್ಯಾಯ ಮುಗಿಯಿತು.

॥ ದ್ರೋಣವಧಪರ್ವವು ಮುಗಿಯಿತು ॥

★ ★ ★ ★ ★

೮. ನಾರಾಯಣಾಸ್ತ್ರಮೋಕ್ಷಪರ್ವ

ನೂರ ಎಪ್ಪತ್ತೇಳನೆಯ ಅಧ್ಯಾಯ

ಕೃಪರಿಂದ ಅಶ್ವತ್ಥಾಮರನ್ನು ಕುರಿತು ದ್ರೋಣರ ವಧೆಯ ಪ್ರಕಾರದ ಕಥನ. ನಾರಾಯಣಾಸ್ತ್ರದಿಂದ ಪಾಂಡವರ ವಧೆಯನ್ನು ಮಾಡಲು ಅಶ್ವತ್ಥಾಮರ ಪ್ರತಿಜ್ಞೆ.

ಸಂಜಯಃ

ತತೋ ದ್ರೋಣೇ ಹತೇ ರಾಜನ್ ಕುರವಃ ಶಸ್ತ್ರಪೀಡಿತಾಃ ।
ಹತಪ್ರವೀರಾ ವಿಧ್ವಸ್ತಾ ಭೃಶಂ ಶೋಕಪರಾಯಣಾಃ ॥ ೧ ॥

ವಿಚೇತಸೋ ಹತೋತ್ಸಾಹಾಃ ಕಶ್ಮಲಾಭಿಹತೌಜಸಃ ।
ಆರ್ತಸ್ವರೇಣ ಮಹತಾ ಪುತ್ರಂ ತೇ ಪರ್ಯವಾರಯನ್ ॥ ೨ ॥

ರಜಸ್ವಲಾ ವೇಪಮಾನಾ ವೀಕ್ಷಮಾಣಾ ದಿಶೋ ದಶ ।
ಅಶ್ರುಕಂಠಾ ಯಥಾ ದೈತ್ಯಾ ಹಿರಣ್ಯಾಕ್ಷೇ ಪುರಾ ಹತೇ ॥ ೩ ॥

ಸಂಜಯ– ಎಲೈ ರಾಜನೇ, ದ್ರೋಣರು ಹತರಾಗಲು ಶಸ್ತ್ರಪೀಡಿತರೂ, ಶ್ರೇಷ್ಠರಾದ ವೀರರನ್ನು ಕಳೆದುಕೊಂಡವರೂ, ನಷ್ಟವನ್ನು ಅನುಭವಿಸಿದವರೂ, ಬಹಳ ಶೋಕದಿಂದ ಕೂಡಿದವರೂ, ವಿವೇಕಶೂನ್ಯರಾದವರೂ, ಉತ್ಸಾಹವನ್ನು ಕಳೆದುಕೊಂಡವರೂ, ಮನೋವಿಷಾದದಿಂದ ಪರಾಕ್ರಮವನ್ನು ಕಳೆದುಕೊಂಡವರೂ ಆದ ಕೌರವರು ದೊಡ್ಡ ಆರ್ತಸ್ವರದಿಂದ ನಿನ್ನ ಪುತ್ರನನ್ನು ಸುತ್ತುವರಿದರು. ಕೌರವ ಸೈನ್ಯವು

ಧೂಳಿನಿಂದ ಕೂಡಿ ನಡುಗುತ್ತಾ, ಹತ್ತುದಿಕ್ಕುಗಳನ್ನು ನೋಡುತ್ತಾ ಬಾಷ್ಪಕಂಠದಿಂದ ಕೂಡಿ, ಹಿಂದೆ ಹಿರಣ್ಯಾಕ್ಷನು ಹತನಾದಾಗ ಇದ್ದ ದೈತ್ಯರಂತಾದರು.

ಸ ತೈಃ ಪರಿವೃತೋ ರಾಜಾ ತ್ರಸ್ತೈಃ ಕ್ಷುದ್ರಮೃಗೈರಿವ ।
ಅಶಕ್ನುವನ್ನವಸ್ಥಾತುಮಪಾಯಾತ್ ತನಯಸ್ತವ ॥ ೪ ॥

ಕ್ಷುದ್ರಮೃಗಗಳಂತೆ ಹೆದರಿದ ಅವರಿಂದ ಸುತ್ತುವರಿಯಲ್ಪಟ್ಟ ನಿನ್ನ ಪುತ್ರನು ಅಲ್ಲಿ ನಿಲ್ಲಲು ಸಾಧ್ಯವಾಗದೆ ಅಲ್ಲಿಂದ ಹೊರಟು ಹೋದನು.

ಕ್ಷುತ್ತಿಪಾಸಾಪರಿಶ್ರಾಂತಾಸ್ತೇ ಯೋಧಾಸ್ತವ ಭಾರತ ।
ಆದಿತ್ಯೇನ ಚ ಸಂತಪ್ತಾ ಭೃಶಂ ವಿಮನಸೋಽಭವನ್ ॥ ೫ ॥

ಎಲೈ ಭಾರತನೇ, ಹಸಿವು- ನೀರಡಿಕೆಗಳಿಂದ ಬಳಲಿದ ಮತ್ತು ಸೂರ್ಯನ ಬಿಸಿಲಿನಿಂದ ಸಂತಪ್ತರಾದ ನಿನ್ನ ಯೋಧರು ಬಹಳ ವಿಷಾದವನ್ನು ಹೊಂದಿದರು.

ಭಾಸ್ಕರಸ್ಯೇವ ಪತನಂ ಸಮುದ್ರಸ್ಯೇವ ಶೋಷಣಮ್ ।
ವಿಪರ್ಯಾಸಂ ಯಥಾ ಮೇರೋರ್ವಾಸವಸ್ಯೇವ ನಿರ್ಜಯಮ್ ॥ ೬ ॥

ಅಮರ್ಷಣೀಯಂ ತದ್ ದೃಷ್ಟ್ವಾ ಭಾರದ್ವಾಜಸ್ಯ ಪಾತನಮ್ ।
ತ್ರಸ್ತರೂಪತರಾ ರಾಜನ್ ಕೌರವಾಃ ಪ್ರಾದ್ರವನ್ ಭಯಾತ್ ॥ ೭ ॥

ಎಲೈ ರಾಜನೇ, ಸೂರ್ಯನ ಪತನದಂತೆ, ಸಮುದ್ರದ ಶೋಷಣದಂತೆ, ಮೇರು ಪರ್ವತವನ್ನು ಮಗುಚಿಹಾಕಿದಂತೆ, ಇಂದ್ರನನ್ನು ಸೋಲಿಸಿದಂತೆ ಇದ್ದ, ಸಹಿಸಲು ಅಸಾಧ್ಯವಾದ ದ್ರೋಣರ ಪತನವನ್ನು ನೋಡಿ ಅತ್ಯಂತ ಹೆದರಿಕೆಯಿಂದ ಕೂಡಿದವರಾಗಿ ಕೌರವರು ಭಯದಿಂದ ಓಡಿಹೋದರು.

ಗಾಂಧಾರರಾಜಃ ಶಕುನಿಸ್ತ್ರಸ್ತತ್ರಸ್ತತರೈಃ ಸಹ ।
ಹತಂ ರುಗ್ಮರಥಂ ದೃಷ್ಟ್ವಾ ಪ್ರಾದ್ರವತ್ ಸಹಿತೋ ರಥೈಃ ॥ ೮ ॥

ಹೆದರಿದ ಗಾಂಧಾರರಾಜನಾದ ಶಕುನಿಯು ರುಗ್ಮರಥರಾದ ದ್ರೋಣರು ಹತರಾದುದನ್ನು ನೋಡಿ ತನಗಿಂತಲೂ ಹೆಚ್ಚಾಗಿ ಹೆದರಿದ ರಥಿಕರ ಜೊತೆಯಲ್ಲಿ ಓಡಿ ಹೋದನು.

ವರೂಥಿನೀಂ ವೇಗವತೀಂ ವಿದ್ರುತಾಂ ಸಪತಾಕಿನೀಮ್ ।
ಪರಿಗೃಹ್ಯ ಮಹಾಸೇನಾಂ ಸೂತಪುತ್ರೋಽಪಯಾದ್ ಭಯಾತ್ ॥ ೯ ॥

ಪತಾಕೆಗಳಿಂದ ಕೂಡಿದ ವೇಗವಾಗಿ ಓಡುತ್ತಿದ್ದ ದೊಡ್ಡ ಸೈನ್ಯದ ಜೊತೆಯಲ್ಲಿ ಸೇರಿ ಸೂತಪುತ್ರನಾದ ಕರ್ಣನು ಭಯದಿಂದ ಓಡಿಹೋದನು.

ರಥನಾಗಾಶ್ವಕಲಿಲಾಂ ಪುರಸೃತ್ಯ ತು ವಾಹಿನೀಮ್ ।
ಮದ್ರಾಣಾಮೀಶ್ವರಃ ಶಲ್ಯೋ ವೀಕ್ಷಮಾಣೋಽಪಯಾದ್ ಭಯಾತ್ ॥

ದ್ರೋಣರ ವಧೆಯನ್ನು ನೋಡಿದ ಮದ್ರಾಧಿಪತಿಯಾದ ಶಲ್ಯನು ರಥ-ಗಜಾಶ್ವಗಳಿಂದ ನಿಬಿಡವಾದ ತನ್ನ ಸೈನ್ಯವನ್ನು ಮುಂದೆ ಮಾಡಿಕೊಂಡು ಭಯದಿಂದ ಹೊರಟುಹೋದನು.

ಹತಪ್ರವೀರೈರ್ಭೂಯಿಷ್ಠಂ ದ್ವಿಪೈರ್ಬಹುಪದಾತಿಭಿಃ ।
ವೃತಃ ಶಾರದ್ವತೋಽಗಚ್ಛತ್ ಕಷ್ಟಂ ಕಷ್ಟಮಿತಿ ಬ್ರುವನ್ ॥ ೧೧ ॥

ಗಜ ಮತ್ತು ಅನೇಕ ಪದಾತಿಗಳಿಂದ ಕೂಡಿದ ಗಾಯಗೊಂಡ ಅನೇಕ ವೀರರಿಂದ ಪರಿವೃತರಾದ ಕೃಪರು 'ಕಷ್ಟ-ಕಷ್ಟ' ಎಂದು ಹೇಳುತ್ತಾ ಹೊರಟು ಹೋದರು.

ಭೋಜಾನೀಕೇನ ಶಿಷ್ಟೇನ ಕಳಿಂಗಾರಟ್ಟಬಾಹ್ಲಿಕೈಃ ।
ಕೃತವರ್ಮಾ ವೃತೋ ರಾಜನ್ ಪ್ರಾಯಾತ್ ಸುಜವನೈರ್ಹಯೈಃ ॥೧೨॥

ಎಲೈ ರಾಜನೇ, ಕೃತವರ್ಮನು ಉಳಿದ ಭೋಜ ಸೈನ್ಯದಿಂದಲೂ, ಕಳಿಂಗ-ಅರಟ್ಟ-ಬಾಹ್ಲಿಕ ಸೈನ್ಯದಿಂದಲೂ ಕೂಡಿ ವೇಗವುಳ್ಳ ಅಶ್ವಗಳಿಂದ ಹೊರಟು ಹೋದನು.

ಪದಾತಿಗಣಸಂಯುಕ್ತಸ್ತ್ವರೋ ರಾಜನ್ ಭಯಾರ್ದಿತಃ ।
ಉಲೂಕಃ ಪ್ರಾದ್ರವತ್ ತತ್ರ ದೃಷ್ಟ್ವಾ ದ್ರೋಣಂ ನಿಪಾತಿತಮ್ ॥ ೧೩ ॥

ಎಲೈ ರಾಜನೇ, ದ್ರೋಣರ ಪತನವನ್ನು ನೋಡಿ ಭಯಾರ್ದಿತನಾದ ಶಕುನಿ ಪುತ್ರನಾದ ಉಲೂಕನು ಪದಾತಿ ಸಮೂಹಗಳಿಂದ ಯುಕ್ತನಾಗಿ ಹೆದರಿ ಓಡಿ ಹೋದನು.

ದರ್ಶನೀಯೋ ಯುವಾ ಚೈವ ಶೌರ್ಯೇ ಚ ಕೃತಲಕ್ಷಣಃ ।
ದುಃಶಾಸನೋ ಭೃಶೋದ್ವಿಗ್ನಃ ಪ್ರಾದ್ರವದ್ ಗಜಸಂವೃತಃ ॥ ೧೪ ॥

ಯುವಕನೂ, ಮನೋಹರನೂ ಮತ್ತು ಶೌರ್ಯದ ವಿಷಯದಲ್ಲಿ ಹೆಸರು ಮಾಡಿದವನೂ ಆದ ದುಶ್ಶಾಸನನು ಬಹಳ ಹೆದರಿ ಗಜಗಳಿಂದ ಸಂವೃತನಾಗಿ ಓಡಿಹೋದನು.

ಗಜಾಶ್ವರಥಸಂಯುಕ್ತೋ ವೃತಶ್ಚೈವ ಪದಾತಿಭಿಃ ।
ದುರ್ಯೋಧನೋ ಮಹಾರಾಜ ಪ್ರಾಯಾತ್ ತತ್ರ ಮಹಾರಥಃ ॥೧೫॥

ಎಲೈ ಮಹಾರಾಜನೇ, ಗಜಾಶ್ವ-ರಥ ಸಂಯುಕ್ತನಾಗಿ, ಪದಾತಿಗಳಿಂದ ಕೂಡಿ ಮಹಾರಥನಾದ ದುರ್ಯೋಧನನು ಅಲ್ಲಿಂದ ಹೊರಟು ಹೋದನು.

ಗಜಾನ್ ರಥಾನ್ ಸಮಾರುಹ್ಯ ಪರಸ್ಯಾಪಿ ಹಯಾನ್ ಜನಾಃ ।
ಪ್ರಕೀರ್ಣಕೇಶಾ ವಿಧ್ವಸ್ತಾ ನ ದ್ವಾವೇಕತ್ರ ಧಾವತಃ ॥ ೧೬ ॥

ಗಜಗಳನ್ನೂ, ರಥಗಳನ್ನೂ ಏರಿ ಅಥವಾ ಇನ್ನೊಬ್ಬರ ಅಶ್ವಗಳನ್ನು ಏರಿ, ಯೋಧರು ತಲೆಕೂದಲನ್ನು ಕೆದರಿಕೊಂಡು ವಿಧ್ವಸ್ತರಾಗಿ ಓಡಿದರು. ಇಬ್ಬರು ಜೊತೆಯಲ್ಲಿ ಓಡಲಿಲ್ಲ.

ನೇದಮಸ್ತೀತಿ ಪುರುಷಾ ಹತೋತ್ಸಾಹಾ ಹತೌಜಸಃ ।
ಉತ್ಸೃಜ್ಯ ಕವಚಾನನ್ಯೇ ಪ್ರಾದ್ರವಂಸ್ತಾವಕಾ ವಿಭೋ ॥ ೧೭ ॥

ಎಲೈ ವಿಭುವೇ, ಇದು ಸರಿಯಲ್ಲ (ಇದು ಅಲ್ಲ) ಎಂದು ಹೇಳುತ್ತಾ, ಉತ್ಸಾಹವನ್ನು ಮತ್ತು ಪರಾಕ್ರಮವನ್ನು ಕಳೆದುಕೊಂಡ ನಿನ್ನ ಕೆಲವು ಪುರುಷರು ಕವಚಗಳನ್ನು ಬಿಚ್ಚಿ ಓಡಿಹೋದರು.

ಅನ್ಯೋನ್ಯಂ ತೇ ಸಮಾಕ್ರೋಶನ್ ಸೈನಿಕಾ ಭರತರ್ಷಭ ।
ತಿಷ್ಠ ತಿಷ್ಠೇತಿ ನ ಚ ತೇ ಸ್ವಯಂ ತತ್ರಾವತಸ್ಥಿರೇ ॥ ೧೮ ॥

ಎಲೈ ಭರತರ್ಷಭನೇ, ಸೈನಿಕರು ಪರಸ್ಪರವಾಗಿ 'ನಿಲ್ಲು-ನಿಲ್ಲು' ಎಂದು ಕಿರುಚುತ್ತಿದ್ದರು. ಆದರೆ ತಾವೂ ಅಲ್ಲಿ ನಿಲ್ಲುತ್ತಿರಲಿಲ್ಲ.

ಧುರ್ಯಾನ್ ಪ್ರಮುಚ್ಯ ತು ರಥಾದ್ಧತಸೂತಾನ್ ಸ್ವಲಂಕೃತಾನ್ ।
ಅಧಿರುಹ್ಯ ಹಯಾನ್ ಯೋಧಾಃ ಕ್ಷಿಪ್ರಂ ಪದ್ಭಿರಚೋದಯನ್ ॥೧೯॥

ರಥಕ್ಕೆ ಹೂಡಿದ ಭಾರವನ್ನು ಹೊರುವ ಅಲಂಕೃತವಾದ ಕುದುರೆಗಳನ್ನು, ಸೂತರಿಲ್ಲದ ರಥದಿಂದ ಬಿಚ್ಚಿ ಅವುಗಳನ್ನು ಏರಿ ಪಾದದಿಂದಲೇ ಅವುಗಳನ್ನು ಪ್ರಚೋದಿಸುತ್ತಾ ಓಡಿದರು.

ದ್ರವಮಾಣೇ ತಥಾ ಸೈನ್ಯೇ ತ್ರಸ್ತರೂಪೇ ಹತೌಜಸಿ ।
ಪ್ರತಿಸ್ರೋತ ಇವ ಗ್ರಾಹೋ ದ್ರೋಣಪುತ್ರಃ ಪರಾನಿಯಾತ್ ॥ ೨೦ ॥

ಅತ್ಯಂತ ಹೆದರಿಕೆಯಿಂದ ಕೂಡಿ, ಪರಾಕ್ರಮಹೀನವಾಗಿ ನಿನ್ನ ಸೈನ್ಯವು ಓಡುತ್ತಿರಲು ಮೊಸಳೆಯು ಪ್ರವಾಹದ ವಿರುದ್ಧವಾಗಿ ಹೋಗುವಂತೆ ದ್ರೋಣಪುತ್ರರಾದ ಅಶ್ವತ್ಥಾಮರು ಪಾಂಡವರ ಮೇಲೆ ನುಗ್ಗಿದರು.

ಹತ್ವಾ ಬಹುವಿಧಾಂ ಸೇನಾಂ ಪಾಂಡೂನಾಂ ಯುದ್ಧದುರ್ಮದಃ ।
ಕಥಂಚಿತ್ ಸಂಕಟಾನ್ಮುಕ್ತೋ ಮತ್ತದ್ವಿರದವಿಕ್ರಮಃ ॥ ೨೧ ॥

ದ್ರವಮಾಣಂ ಬಲಂ ದೃಷ್ಟ್ವಾ ಪಲಾಯನಕೃತಕ್ಷಣಮ್ ।
ದುರ್ಯೋಧನಂ ಸಮಾಸಾದ್ಯ ದ್ರೋಣಪುತ್ರೋಽಬ್ರವೀದಿದಮ್ ॥೨೨॥

ಯುದ್ಧದುರ್ಮದರೂ, ಮದಗಜ ಪರಾಕ್ರಮವುಳ್ಳವರೂ ಆದ ಅಶ್ವತ್ಥಾಮರು ಪಾಂಡವರ ಬಹುವಿಧವಾದ ಸೈನ್ಯವನ್ನು ಸಂಹರಿಸಿ ಹೇಗೋ ಸಂಕಟದಿಂದ ಮುಕ್ತರಾಗಿ, ಪಲಾಯನದ ಅವಕಾಶವನ್ನು ಹೊಂದಿ ಓಡುತ್ತಿದ್ದ ಸೈನ್ಯವನ್ನು ನೋಡಿ ದುರ್ಯೋಧನನನ್ನು ಸಮೀಪಿಸಿ ಹೀಗೆ ಮಾತನಾಡಿದರು.

ಕಿಮಿಯಂ ದ್ರವತೇ ಸೇನಾ ತ್ರಸ್ತರೂಪೇವ ಭಾರತ ।
ದ್ರವಮಾಣಾಂ ಚ ರಾಜೇಂದ್ರ ನಾವಸ್ಥಾಪಯಸೇ ರಣೇ ॥ ೨೩ ॥

ಎಲೈ ಭಾರತನೇ, ಈ ಸೈನ್ಯವು ಹೆದರಿದಂತೆ ಏಕೆ ಓಡುತ್ತಿದೆ? ಎಲೈ ರಾಜೇಂದ್ರನೇ, ರಣರಂಗದಲ್ಲಿ ಓಡುತ್ತಿರುವ ಈ ಸೈನ್ಯವನ್ನು ನೀನು ಏಕೆ ನಿಲ್ಲಿಸುತ್ತಿಲ್ಲ?

ತ್ವಂ ಚಾಪಿ ನ ಯಥಾಪೂರ್ವಂ ಪ್ರಕೃತಿಸ್ಥೋ ನರಾಧಿಪ ।
ಕರ್ಣಪ್ರಭೃತಯಶ್ಚೈಮೇ ನಾವತಿಷ್ಠಂತಿ ಪಾರ್ಥಿವಾಃ ॥ ೨೪ ॥

ಎಲೈ ರಾಜನೇ, ನೀನೂ ಸಹ ಹಿಂದಿನಂತೆ ಸ್ವಾಭಾವಿಕವಾಗಿಲ್ಲ. ಈ ಕರ್ಣ ಮೊದಲಾದ ರಾಜರು ರಣರಂಗದಲ್ಲಿ ನಿಲ್ಲುತ್ತಿಲ್ಲ.

ಅನ್ಯೇಷ್ವಪಿ ಚ ಯುದ್ಧೇಷು ನೈವ ಸೇನಾऽದ್ರವತ್ ತದಾ ।
ಕಚ್ಚಿತ್ ಕ್ಷೇಮಂ ಮಹಾಬಾಹೋ ತವ ಸೈನ್ಯಸ್ಯ ಭಾರತ ॥ ೨೫ ॥

ಬೇರೆ ಯುದ್ಧಗಳಲ್ಲಿ ಸೈನ್ಯವು ಓಡಿಹೋಗಲಿಲ್ಲ. ಎಲೈ ಭಾರತನೇ, ಮಹಾಬಾಹುವೇ, ನಿನ್ನ ಸೈನ್ಯಕ್ಕೆ ಕ್ಷೇಮವಷ್ಟೆ?

ಕಸ್ಮಿನ್ನಿದಂ ಹತೇ ರಾಜನ್ ರಥಸಿಂಹೇ ಬಲಂ ತವ ।
ಏತಾಮವಸ್ಥಾಂ ಸಂಪ್ರಾಪ್ತಂ ತನ್ಮಮಾಚಕ್ಷ್ವ ಕೌರವ ॥ ೨೬ ॥

ಎಲೈ ರಾಜನೇ, ಯಾವ ರಥಸಿಂಹನು ಹತವಾದ ಕಾರಣದಿಂದ ನಿನ್ನ ಸೈನ್ಯಕ್ಕೆ ಇಂತಹ ಅವಸ್ಥೆಯು ಪ್ರಾಪ್ತವಾಗಿದೆ? ಎಲೈ ಕೌರವನೇ, ಅದನ್ನು ನನಗೆ ಹೇಳು.

ತತ್ತು ದುರ್ಯೋಧನಃ ಶ್ರುತ್ವಾ ದ್ರೋಣಪುತ್ರಸ್ಯ ಭಾಷಿತಮ್ ।
ಘೋರಮಪ್ರಿಯಮಾಖ್ಯಾತುಂ ನಾಶಕತ್ ಪಾರ್ಥಿವರ್ಷಭಃ ॥ ೨೭ ॥

ಪಾರ್ಥಿವಶ್ರೇಷ್ಠನಾದ ದುರ್ಯೋಧನನು ದ್ರೋಣಪುತ್ರರ ಆ ಮಾತನ್ನು ಕೇಳಿ ಘೋರವಾದ ಅಪ್ರಿಯವನ್ನು ಹೇಳಲು ಶಕ್ತನಾಗಲಿಲ್ಲ.

ಭಿನ್ನಾ ನೌರಿವ ತೇ ಪುತ್ರೋ ನಿಮಗ್ನಃ ಶೋಕಸಾಗರೇ ।
ಬಾಷ್ಪೇಣ ಪಿಹಿತೋ ದೃಷ್ಟ್ವಾ ದ್ರೋಣಪುತ್ರಂ ರಥೇ ಸ್ಥಿತಮ್ ॥ ೨೮ ॥

ತತಃ ಶಾರದ್ವತಂ ರಾಜಾ ಸವ್ರೀಡಮಿದಮಬ್ರವೀತ್ ।
ಶಂಸೇಹ ಸರ್ವಂ ಭದ್ರಂ ತೇ ಯಥಾ ಸೈನ್ಯಮಿದಂ ದ್ರುತಮ್ ॥ ೨೯ ॥

ಸಾಗರದಲ್ಲಿ ಒಡೆದುಹೋದ ಹಡಗಿನಂತೆ ನಿನ್ನ ಪುತ್ರನು ಶೋಕಸಾಗರದಲ್ಲಿ ಮುಳುಗಿ ಬಾಷ್ಪಪೂರಿತನೇತ್ರನಾಗಿ ರಥದಲ್ಲಿದ್ದ ಅಶ್ವತ್ಥಾಮರನ್ನು ನೋಡಿ ನಾಚಿಕೆಯಿಂದ,

ಕೃಪರನ್ನು ಕುರಿತು ನಿಮಗೆ ಕ್ಷೇಮವಾಗಲಿ, ಈ ಸೈನ್ಯವು ಏತಕ್ಕೆ ಓಡುತ್ತಿದೆ ಎಂದು ಎಲ್ಲವನ್ನೂ ಹೇಳಿ ಎಂದು ಹೇಳಿದನು.

ಅಥ ಶಾರದ್ವತೋ ರಾಜನ್ನಾರ್ತಿಂ ಗಚ್ಛನ್ ಪುನಃ ಪುನಃ ।
ಶಶಂಸ ದ್ರೋಣಪುತ್ರಾಯ ಯಥಾ ದ್ರೋಣೋ ನಿಪಾತಿತಃ ॥ ೩೦ ॥

ಎಲೈ ರಾಜನೇ, ಆಗ ಕೃಪರು ಪುನಃ ಪುನಃ ದುಃಖಕ್ಕೆ ತುತ್ತಾಗಿ ಅಶ್ವತ್ಥಾಮರಿಗೆ ದ್ರೋಣರನ್ನು ವಧೆ ಮಾಡಿದ ಪ್ರಕಾರವನ್ನು ತಿಳಿಸಿದರು.

ಕೃಪಃ

ವಯಂ ದ್ರೋಣಂ ಪುರಸ್ಕೃತ್ಯ ಪೃಥಿವ್ಯಾಂ ಪ್ರವರಂ ರಥಮ್ ।
ಪ್ರಾವರ್ತಯಾಮ ಸಂಗ್ರಾಮಂ ಪಾಂಚಾಲೈರೇವ ಕೇವಲೈಃ ॥ ೩೧ ॥

ಕೃಪ– ನಾವು ಪೃಥಿವಿಯಲ್ಲಿ ಶ್ರೇಷ್ಠರಥರಾದ ದ್ರೋಣರನ್ನು ಮುಂದೆ ಮಾಡಿಕೊಂಡು ಕೇವಲ ಪಾಂಚಾಲರ ಜೊತೆಯಲ್ಲಿ ಯುದ್ಧವನ್ನು ಪ್ರವರ್ತಿಸಿದೆವು.

ತತಃ ಪ್ರವೃತ್ತೇ ಸಂಗ್ರಾಮೇ ವಿಮಿಶ್ರಾಃ ಕುರುಸೋಮಕಾಃ ।
ಅನ್ಯೋನ್ಯಮಭಿಗರ್ಜಂತಃ ಶಸ್ತ್ರೈರ್ದೇಹಾನಪಾತಯನ್ ॥ ೩೨ ॥

ಆ ಯುದ್ಧವು ನಡೆಯುತ್ತಿರಲು ಕೌರವರು ಮತ್ತು ಸೋಮಕರು ಮಿಶ್ರಗೊಂಡು ಪರಸ್ಪರವಾಗಿ ಗರ್ಜಿಸುತ್ತಾ ಶಸ್ತ್ರಗಳಿಂದ ದೇಹಗಳನ್ನು ಹೊಡೆದು ಕೆಡವಿದರು.

ತತೋ ದ್ರೋಣೋ ಬ್ರಾಹ್ಮಮಸ್ತ್ರಂ ವಿಕುರ್ವಾಣೋ ನರರ್ಷಭಃ ।
ಅಹನಚ್ಛತ್ರವಾನ್ ಭಲ್ಲೈಃ ಶತಶೋಽಥ ಸಹಸ್ರಶಃ ॥ ೩೩ ॥

ಅನಂತರ ಪುರುಷಶ್ರೇಷ್ಠರಾದ ದ್ರೋಣರು ಬ್ರಹ್ಮಾಸ್ತ್ರಗಳನ್ನು ಪ್ರಯೋಗಿಸುತ್ತಾ ಭಲ್ಲಗಳಿಂದ ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ಶತ್ರುಗಳನ್ನು ಕೊಂದರು.

ಪಾಂಡವಾಃ ಕೇಕಯಾ ಮತ್ಸ್ಯಾಃ ಪಾಂಚಾಲಾಶ್ಚ ವಿಶೇಷತಃ ।
ಸಂಖೇ ದ್ರೋಣರಥಂ ಪ್ರಾಪ್ಯ ವ್ಯನಶನ್ ಕಾಲಚೋದಿತಾಃ ॥ ೩೪ ॥

ಪಾಂಡವರು, ಕೇಕಯರು, ಮತ್ಸ್ಯರು ಮತ್ತು ವಿಶೇಷವಾಗಿ ಪಾಂಚಾಲರು ಮೃತ್ಯುಚೋದಿತರಾಗಿ ದ್ರೋಣರನ್ನು ಸಮೀಪಿಸಿ ನಾಶವನ್ನು ಹೊಂದಿದರು.

ಸಹಸ್ರಂ ರಥಸಿಂಹಾನಾಂ ದ್ವಿಸಾಹಸ್ರಂ ಚ ದಂತಿನಾಮ್ ।
ದ್ರೋಣೋ ಬ್ರಹ್ಮಾಸ್ತ್ರನಿರ್ದಗ್ಧಂ ಪ್ರೇಷಯಾಮಾಸ ಮೃತ್ಯವೇ ॥ ೩೫ ॥

ದ್ರೋಣರು ಬ್ರಹ್ಮಾಸ್ತ್ರದಿಂದ ದಹಿಸಲ್ಪಟ್ಟ ಸಹಸ್ರ ಶ್ರೇಷ್ಠರಥರನ್ನೂ, ಎರಡು ಸಾವಿರ ಗಜಗಳನ್ನೂ ಮೃತ್ಯುಲೋಕಕ್ಕೆ ಕಳುಹಿಸಿದರು.

ಆಕರ್ಣಪಲಿತಃ ಶ್ಯಾಮೋ ವಯಸಾಶೀತಿಪಂಚಕಃ ।
ರಣೇ ಪರ್ಯಚರದ್ ದ್ರೋಣೋ ವೃದ್ಧಃ ಷೋಡಶವರ್ಷವತ್ ॥೩೬॥

ಕಿವಿಯವರೆಗೂ ನೆರೆಕೂದಲನ್ನು ಹೊಂದಿದ, ಶ್ಯಾಮವರ್ಣದ, ವಯಸ್ಸಿನಿಂದ ನಾಲ್ನೂರು ವರ್ಷವನ್ನು ದಾಟಿದ ವೃದ್ಧರಾದ ದ್ರೋಣರು ರಣರಂಗದಲ್ಲಿ ಹದಿನಾರು ವರ್ಷದವರಂತೆ ಸಂಚರಿಸಿದರು.

ಕ್ಲಿಶ್ಯಮಾನೇಷು ಸೈನ್ಯೇಷು ವಧ್ಯಮಾನೇಷು ರಾಜಸು ।
ಅಮರ್ಷವಶಮಾಪನ್ನಾಃ ಪಾಂಚಾಲಾ ವಿಮುಖಾಭವನ್ ॥ ೩೭ ॥

ಪಾಂಚಾಲರ ಸೈನ್ಯಗಳು ಕ್ಲೇಶಕ್ಕೆ ಒಳಗಾಗುತ್ತಿರಲು, ರಾಜರು ದಹಿಸಲ್ಪಡುತ್ತಿರಲು, ರೋಷಗೊಂಡ ಪಾಂಚಾಲರು ಯುದ್ಧವಿಮುಖರಾದರು.

ತೇಷು ಕಿಂಚತ್ ಪ್ರಭಗ್ನೇಷು ವಿಮುಖೇಷು ಸಪತ್ನಜಿತ್ ।
ದಿವ್ಯಮಸ್ತ್ರಂ ವಿಕುರ್ವಾಣೋ ಬಭೂವಾರ್ಕ ಇವೋದಿತಃ ॥ ೩೮ ॥

ಅವರಲ್ಲಿ ಕೆಲವು ಯೋಧರು ಭಗ್ನರಾಗಿ ಯುದ್ಧವಿಮುಖರಾಗುತ್ತಿರಲು ಶತ್ರು ಸಂಹಾರಕರಾದ ನಿನ್ನ ತಂದೆಯು ಅಶ್ವತ್ಥಾಮರು ಹತರಾದರು ಎಂದು ತಿಳಿದರು (ಅಶ್ವತ್ಥಾಮರು ಹತರಾದರು, ಯುದ್ಧಮಾಡಬೇಡಿ ಎಂಬ ಮಾತನ್ನು ಕೇಳಿದರು).

ಸ ಮಧ್ಯಂ ಪ್ರಾಪ್ಯ ಪಾಂಡೂನಾಂ ಶರರಶ್ಮಿಃ ಪ್ರತಾಪವಾನ್ ।
ಮಧ್ಯಂಗತ ಇವಾದಿತ್ಯೋ ದುಷ್ಪ್ರೇಕ್ಷ್ಯಸ್ತೇ ಪಿತಾऽಭವತ್ ॥ ೩೯ ॥

ತೇ ದಹ್ಯಮಾನಾ ದ್ರೋಣೇನ ಸೂರ್ಯೇಣೇವ ವಿರಾಜತಾ ।
ದಗ್ಧವೀರ್ಯಾ ನಿರುತ್ಸಾಹಾ ಬಭೂವುರ್ಗತಚೇತಸಃ ॥ ೪೦ ॥

ಸೂರ್ಯನಂತೆ ವಿರಾಜಿಸುವ ದ್ರೋಣರಿಂದ ದಹಿಸಲ್ಪಡುತ್ತಿದ್ದ ಪಾಂಡವವೀರರು ತಮ್ಮ ಪರಾಕ್ರಮವನ್ನೂ, ಯುದ್ಧದಲ್ಲಿ ಉತ್ಸಾಹವನ್ನೂ ಕಳೆದುಕೊಂಡು ವಿಮನಸ್ಕರಾದರು.

ತಾನ್ ದೃಷ್ಟ್ವಾ ಪೀಡಿತಾನ್ ಬಾಣೈರ್ದ್ರೋಣೇನ ಮಧುಸೂದನಃ ।
ಜಯೈಷೀ ಪಾಂಡುಪುತ್ರಾಣಾಮಿದಂ ವಚನಮಬ್ರವೀತ್ ॥ ೪೧ ॥

ದ್ರೋಣರ ಬಾಣಗಳಿಂದ ಪೀಡಿತರಾದ ಆ ವೀರರನ್ನು ನೋಡಿ, ಪಾಂಡುಪುತ್ರರ ಜಯವನ್ನು ಆಶಿಸುವ ಮಧುಸೂದನನು ಪಾಂಡುಪುತ್ರರನ್ನು ಕುರಿತು ಈ ಮಾತನ್ನು ಆಡಿದನು.

ನೈಷ ಜಾತು ಪರೈಃ ಶಕ್ಯೋ ಜೇತುಂ ಶಸ್ತ್ರಭೃತಾಂ ವರಃ ।
ಅಪಿ ವೃತ್ರಹಣಾ ಸಂಖ್ಯೇ ರಥಯೂಥಪಯೂಥಪಃ ॥ ೪೨ ॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ, ರಥಯೂಥಪಯೂಥಪರಾದ ದ್ರೋಣರನ್ನು ಯುದ್ಧದಲ್ಲಿ ಸಾಕ್ಷಾತ್ ಇಂದ್ರನೇ ಬಂದರೂ ಇನ್ನೊಬ್ಬನು ಸೋಲಿಸಲಾರ.

ತೇ ಯೂಯಂ ಧರ್ಮಮುತ್ಸೃಜ್ಯ ಜಯಂ ರಕ್ಷತ ಪಾಂಡವಾಃ ।
ಯಥಾ ವಃ ಸಂಯುಗೇ ಸರ್ವಾನ್ ನ ಹನ್ಯಾದ್ ರುಗ್ಮವಾಹನಃ ॥೪೩॥

ಎಲೈ ಪಾಂಡವರೇ, ನೀವು ಧರ್ಮವನ್ನು ಒಟ್ಟು ಜಯದ ಮೇಲೆ ದೃಷ್ಟಿ ಇಡಿ. ರುಗ್ಮವಾಹನರಾದ ದ್ರೋಣರು ಯುದ್ಧದಲ್ಲಿ ನಿಮ್ಮೆಲ್ಲರನ್ನೂ ಕೊಲ್ಲದಂತೆ ನೋಡಿಕೊಳ್ಳಿ.

ಅಶ್ವತ್ಥಾಮ್ನಿ ಹತೇ ನೈಷ ಯುದ್ಧ್ಯೇದಿತಿ ಮತಿರ್ಮಮ ।
ಹತಂ ತಂ ಸಂಯುಗೇ ಕಶ್ಚಿದಾಖ್ಯಾತ್ವಸ್ಮೈ ಮೃಷಾ ನರಃ ॥ ೪೪ ॥

ಅಶ್ವತ್ಥಾಮರು ಹತರಾದರೆ ಅವರು ಯುದ್ಧಮಾಡಲಾರರೆಂದು ನನ್ನ ಅಭಿಪ್ರಾಯ. ಯಾವನಾದರೂ ಮನುಷ್ಯನು ಅವರ ಬಳಿಗೆ ಹೋಗಿ ಅಶ್ವತ್ಥಾಮರು ಹತರಾಗಿದ್ದಾರೆಂದು ಸುಳ್ಳನ್ನು ಹೇಳಲಿ (ಎಂದು ಹೇಳಿದನು).

ಏತನ್ನಾರೋಚಯದ್ ವಾಕ್ಯಂ ಕುಂತೀಪುತ್ರೋ ಧನಂಜಯಃ ।
ಅರೋಚಯಂಸ್ತು ಸರ್ವೇಽನ್ಯೇ ಕೃಚ್ಛ್ರೇಣ ತು ಯುಧಿಷ್ಠಿರಃ ॥ ೪೫ ॥

ಕುಂತೀಪುತ್ರನಾದ ಧನಂಜಯನು ಈ ಮಾತನ್ನು ಒಪ್ಪಲಿಲ್ಲ. ಉಳಿದವರೆಲ್ಲರೂ ಒಪ್ಪಿದರು ಯುಧಿಷ್ಠಿರನು ಕಷ್ಟದಿಂದ ಒಪ್ಪಿದನು.

ಭೀಮಸೇನಸ್ತು ಸವ್ರೀಡಮಬ್ರವೀತ್ ಪಿತರಂ ತವ ।
ಅಶ್ವತ್ಥಾಮಾ ಹತ ಇತಿ ತಚ್ಛ್ರುಧ್ಯತ ತೇ ಪಿತಾ ॥ ೪೬ ॥

ಭೀಮಸೇನನು ನಿನ್ನ ತಂದೆಯ ಬಳಿಗೆ ಹೋಗಿ ನಾಚಿಕೆಯಿಂದ, ಅಶ್ವತ್ಥಾಮರು ಹತರಾಗಿದ್ದಾರೆ ಎಂದು ಹೇಳಿದನು. ನಿನ್ನ ತಂದೆಯು ಅದನ್ನು ಹಾಗೆಯೇ ತಿಳಿದರು.

ಸ ಶಂಕಮಾನಸ್ತನ್ಮಿಥ್ಯಾ ಧರ್ಮರಾಜಮಪೃಚ್ಛತ ।
ಹತಂ ವಾಪ್ಯಹತಂ ವಾಜೌ ತ್ವಾಂ ಪಿತಾ ಪುತ್ರವತ್ಸಲಃ ॥ ೪೭ ॥

ಪುತ್ರವತ್ಸಲರಾದ ನಿನ್ನ ತಂದೆಯು ಅದನ್ನು ಸುಳ್ಳು ಎಂದು ಶಂಕಿಸಿ, ಧರ್ಮರಾಜನನ್ನು ಕುರಿತು 'ಯುದ್ಧದಲ್ಲಿ ನೀನು ಹತನಾಗಿದ್ದೀಯಾ, ಇಲ್ಲವೆ' ಎಂದು ಪ್ರಶ್ನೆಯನ್ನು ಮಾಡಿದರು.

ತದತಥ್ಯಭಯೇ ಮಗ್ನೋ ಜಯೇ ಸಕ್ತೋ ಯುಧಿಷ್ಠಿರಃ ।
ಅಶ್ವತ್ಥಾಮಾನಮಾಹೇದಂ ಹತಃ ಕುಂಜರ ಇತ್ಯುತ ।
ಭೀಮೇನ ಗಿರಿವರ್ಷ್ಮಾಣಂ ಮಾಲವಸ್ಯೇಂದ್ರವರ್ಮಣಃ ॥ ೪೮ ॥

ಸುಳ್ಳಿನ ಭಯದಲ್ಲಿ ಮಗ್ನನಾದ ಮತ್ತು ಜಯದಲ್ಲಿ ಆಸಕ್ತನಾದ ಯುಧಿಷ್ಠಿರನು 'ಅಶ್ವತ್ಥಾಮಾ ಹತಃ' ಎಂದು ಹೇಳಿ ಭೀಮಸೇನನಿಂದ ಮಾಲವರಾಜನಾದ ಇಂದ್ರವರ್ಮನ ಪರ್ವತದ ಸ್ವರೂಪವನ್ನು ಹೊಂದಿದ್ದ 'ಕುಂಜರಃ' ಎಂದೂ ಹೇಳಿದನು.

ಉಪಸೃತ್ಯ ತದಾ ದ್ರೋಣಮುಚ್ಚೈರಿದಮಭಾಷತ ।
ಯಸ್ಯಾರ್ಥೇ ಶಸ್ತ್ರಮಾಧತ್ಸೇ ಯಮವೇಕ್ಷ್ಯ ಚ ಜೀವಸಿ ।
ಪುತ್ರಸ್ತೇ ದಯಿತೋ ನಿತ್ಯಂ ಸೋಽಶ್ವತ್ಥಾಮಾ ನಿಪಾತಿತಃ ॥ ೪೯ ॥

ಆಗ ಭೀಮಸೇನನು ದ್ರೋಣರನ್ನು ಸಮೀಪಿಸಿ ಗಟ್ಟಿಯಾದ ಸ್ವರದಿಂದ, ಯಾರ ಸಲುವಾಗಿ ನೀವು ಶಸ್ತ್ರವನ್ನು ಹಿಡಿದಿದ್ದೀರೋ, ಯಾರನ್ನು ನೋಡಿಕೊಂಡು ಜೀವಿಸುತ್ತಿದ್ದೀರೋ ಅಂತಹ ನಿತ್ಯವೂ ನಿಮಗೆ ಪ್ರಿಯರಾದ ಪುತ್ರರಾದ ಅಶ್ವತ್ಥಾಮರು ಹತರಾಗಿದ್ದಾರೆ ಎಂದು ಹೇಳಿದನು.

ತಚ್ಛ್ರುತ್ವಾ ವಿಮನಾಸ್ತತ್ರ ಆಚಾರ್ಯೋ ಮಹದಪ್ರಿಯಮ್ ।
ನಿಯಮ್ಯ ದಿವ್ಯಾನ್ಯಸ್ತ್ರಾಣಿ ನಾಯುದ್ಧ್ಯತ ಯಥಾ ಪುರಾ ॥ ೫೦ ॥

ಆ ದೊಡ್ಡ ಅಪ್ರಿಯ ಸುದ್ದಿಯನ್ನು ಕೇಳಿದ ಆಚಾರ್ಯರು ಯುದ್ಧದ ಮನಸ್ಸನ್ನು ತೊರೆದು, ಎಲ್ಲ ಅಸ್ತ್ರಗಳನ್ನು ಎಸೆದು ಮೊದಲಿನಂತೆ ಯುದ್ಧವನ್ನು ಮಾಡಲಿಲ್ಲ.

ತಂ ದೃಷ್ಟ್ವಾ ಪರಮೋದ್ವಿಗ್ನಂ ಶೋಕೋಪಹತಚೇತಸಮ್ ।
ಪಾಂಚಾಲರಾಜಸ್ಯ ಸುತಃ ಕ್ರೂರಕರ್ಮಾ ಸಮಾದ್ರವತ್ ॥ ೫೧ ॥

ಅತ್ಯಂತ ದುಃಖದಿಂದ ಬಳಲಿ ಶೋಕದಿಂದ ಕೂಡಿದ ಮನಸ್ಸುಳ್ಳ ದ್ರೋಣರನ್ನು ನೋಡಿ ಕ್ರೂರಕರ್ಮವನ್ನು ಮಾಡುವ ಪಾಂಚಾಲ ಪುತ್ರನಾದ ಧೃಷ್ಟದ್ಯುಮ್ನನು ಓಡಿ ಬಂದನು.

ತಂ ದೃಷ್ಟ್ವಾ ವಿಹಿತಂ ಮೃತ್ಯುಂ ಲೋಕತತ್ತ್ವವಿಚಕ್ಷಣಃ ।
ದಿವ್ಯಾನ್ಯಸ್ತ್ರಾಣ್ಯಥೋತ್ಸೃಜ್ಯ ರಣೇ ಪ್ರಾಯ ಉಪಾವಿಶತ್ ॥ ೫೨ ॥

ಲೋಕತತ್ತ್ವವಿಚಕ್ಷಣರಾದ ದ್ರೋಣರು ಅವನನ್ನು ತನಗೆ ವಿಹಿತನಾದ ಮೃತ್ಯುವೆಂದು ತಿಳಿದು ದಿವ್ಯಾಸ್ತ್ರಗಳನ್ನು ಪರಿತ್ಯಜಿಸಿ ರಣರಂಗದಲ್ಲಿ ಪ್ರಾಯೋಪವೇಶಕ್ಕೆ ಕುಳಿತರು.

ತತೋಽಸ್ಯ ಕೇಶಾನ್ ಸವ್ಯೇನ ಗೃಹೀತ್ವಾ ಪಾಣಿನಾ ತದಾ ।
ಪಾರ್ಷತಃ ಕ್ರೋಶಮಾನಾನಾಂ ವೀರಾಣಾಮಚ್ಯುತಚ್ಛರಃ ॥ ೫೩ ॥

ಆಗ ಧೃಷ್ಟದ್ಯುಮ್ನನು ಅವರ ತಲೆಕೂದಲುಗಳನ್ನು ಎಡಗೈಯಿಂದ ಹಿಡಿದು ವೀರರು ಬೇಡವೆಂದು ಕಿರುಚುತ್ತಿದ್ದರೂ ಅವರ ಶಿರಸ್ಸನ್ನು ಕತ್ತರಿಸಿದನು.

ನ ಹಂತವ್ಯೋ ನ ಹಂತವ್ಯ ಇತಿ ತೇ ಸರ್ವತೋಽಬ್ರುವನ್ ।
ತಥೈವ ಚಾರ್ಜುನೋ ವಾಹಾದವರುಹ್ಯೈನಮಾದ್ರವತ್ ॥ ೫೪ ॥

ಉದ್ಯಮ್ಯ ಬಾಹೂ ತ್ವರಿತೋ ಬ್ರುವಾಣಶ್ಚ ಪುನಃ ಪುನಃ ।
ಜೀವಂತಮಾನಯಾಚಾರ್ಯಂ ಮಾ ವಧೀರಿತಿ ಧರ್ಮವಿತ್ ॥ ೫೫ ॥

ಕೊಲ್ಲಬಾರದು, ಕೊಲ್ಲಬಾರದು ಎಂದು ಯೋಧರು ಎಲ್ಲ ಕಡೆಗಳಿಂದಲೂ ಹೇಳಿದರು. ಹಾಗೆಯೇ ಧರ್ಮಜ್ಞನಾದ ಅರ್ಜುನನೂ ಸಹ ತನ್ನ ರಥದಿಂದ ಇಳಿದು ಬಾಹುಗಳನ್ನು ಎತ್ತಿ, ಅವನ ಕಡೆಗೆ ಓಡುತ್ತಾ ಪುನಃ ಪುನಃ 'ಆಚಾರ್ಯರನ್ನು ಜೀವ ಸಹಿತವಾಗಿ ಕರೆದುಕೊಂಡು ಬಾ, ಕೊಲ್ಲಬೇಡ' ಎಂದು ಹೇಳಿದನು.

ತಥಾಪಿ ವಾರ್ಯಮಾಣೇನ ಕೌರವೈರರ್ಜುನೇನ ಚ ।
ಹತ ಏವ ನೃಶಂಸೇನ ಪಿತಾ ತವ ನರರ್ಷಭ ॥ ೫೬ ॥

ಎಲೈ ನರಶ್ರೇಷ್ಠನೇ, ಅರ್ಜುನನಿಂದಲೂ, ಕೌರವರಿಂದಲೂ ತಡೆಯಲ್ಪಡುತ್ತಿದ್ದರೂ ಕ್ರೂರಿಯಾದ ಧೃಷ್ಟದ್ಯುಮ್ನನು ನಿನ್ನ ತಂದೆಯನ್ನು ಕೊಂದನು.

ಸೈನಿಕಾಶ್ಚ ತತಃ ಸರ್ವೇ ಪ್ರಾದ್ರವಂತ ಭಯಾರ್ದಿತಾಃ ।
ವಯಂ ಚಾಪಿ ನಿರುತ್ಸಾಹಾ ಹತೇ ಪಿತರಿ ತೇಽನಘ ॥ ೫೭ ॥

ಆಗ ಸೈನಿಕರೆಲ್ಲರೂ ಭಯದಿಂದ ಪೀಡಿತರಾಗಿ ಓಡಿಹೋದರು. ಎಲೈ ಅನಘನೇ, ನಿನ್ನ ತಂದೆಯು ಹತನಾಗುತ್ತಿರಲು ನಾವೂ ಯುದ್ಧದಲ್ಲಿ ಉತ್ಸಾಹವನ್ನು ಕಳೆದುಕೊಂಡೆವು.

ಸಂಜಯಃ

ತಚ್ಛ್ರುತ್ವಾ ದ್ರೋಣಪುತ್ರಸ್ತು ನಿಧನಂ ಪಿತುರಾಹವೇ ।
ಕ್ರೋಧಮಾಹಾರಯತ್ತೀವ್ರಂ ಪದಾಹತ ಇವೋರಗಃ ॥ ೫೮ ॥

ಸಂಜಯ– ರಣರಂಗದಲ್ಲಿ ತಂದೆಯ ಆ ನಿಧನವನ್ನು ತಿಳಿದ ದ್ರೋಣಪುತ್ರರಾದ ಅಶ್ವತ್ಥಾಮರು ಕಾಲಿನಿಂದ ತುಳಿದ ಸರ್ಪದಂತೆ ತೀವ್ರವಾದ ಕ್ರೋಧವನ್ನು ತಂದುಕೊಂಡರು.

ಧೃತರಾಷ್ಟ್ರಃ

ಅಧರ್ಮೇಣ ಹತಂ ಶ್ರುತ್ವಾ ಧೃಷ್ಟದ್ಯುಮ್ನೇನ ಸಂಜಯ ।
ಬ್ರಾಹ್ಮಣಂ ಪಿತರಂ ವೃದ್ಧಮಶ್ವತ್ಥಾಮಾ ಕಿಮಬ್ರವೀತ್ ॥ ೫೯ ॥

ಧೃತರಾಷ್ಟ್ರ- ಎಲೈ ಸಂಜಯನೇ, ಬ್ರಾಹ್ಮಣರೂ, ತಂದೆಯೂ, ವೃದ್ಧರೂ ಆದ ದ್ರೋಣರು ಧೃಷ್ಟದ್ಯುಮ್ನನಿಂದ ಅಧರ್ಮದಿಂದ ಹತರಾದುದನ್ನು ಕೇಳಿ ಅಶ್ವತ್ಥಾಮರು ಏನು ಹೇಳಿದರು?

ಮಾನುಷಂ ವಾರುಣಾಗ್ನೇಯಂ ಬ್ರಾಹ್ಮಮಸ್ತ್ರಂ ಚ ವೀರ್ಯವಾನ್ ।
ಐಂದ್ರಂ ನಾರಾಯಣಂ ಚೈವ ಯಸ್ಮಿನ್ನಿತ್ಯಂ ಪ್ರತಿಷ್ಠಿತಮ್ ॥ ೬೦ ॥

ತಮಧರ್ಮೇಣ ಧರ್ಮಿಷ್ಠಂ ಧೃಷ್ಟದ್ಯುಮ್ನೇನ ಸಂಜಯ ।
ಶ್ರುತ್ವಾ ನಿಹತಮಾಚಾರ್ಯಮಶ್ವತ್ಥಾಮಾ ಕಿಮಬ್ರವೀತ್ ॥ ೬೧ ॥

ಮಾನುಷಾಸ್ತ್ರಗಳು, ವಾರುಣಾಸ್ತ್ರ, ಆಗ್ನೇಯಾಸ್ತ್ರ, ಬ್ರಹ್ಮಾಸ್ತ್ರ, ಐಂದ್ರಾಸ್ತ್ರ, ನಾರಾಯಣಾಸ್ತ್ರ - ಇವು ಯಾರಲ್ಲಿ ನಿತ್ಯವೂ ಪ್ರತಿಷ್ಠಿತವಾಗಿದ್ದವೋ ಅಂತಹ ಧರ್ಮಿಷ್ಠರಾದ ದ್ರೋಣರು ಧೃಷ್ಟದ್ಯುಮ್ನನಿಂದ ಅಧರ್ಮದಿಂದ ಹತರಾದುದನ್ನು ಕೇಳಿ ಪರಾಕ್ರಮಶಾಲಿಗಳಾದ ಅಶ್ವತ್ಥಾಮರು ಏನು ಹೇಳಿದರು?

ಯೇನ ರಾಮಾದವಾಪ್ಯೇಹ ಧನುರ್ವೇದಂ ಮಹಾತ್ಮನಾ ।
ಪ್ರೋಕ್ತಾನ್ಯಸ್ತ್ರಾಣಿ ದಿವ್ಯಾನಿ ಪುತ್ರಾಯ ಗುರುಕಾಂಕ್ಷಿಣೇ ॥ ೬೨ ॥

ಯಾವ ದ್ರೋಣರು ಮಹಾತ್ಮನಾದ ಪರಶುರಾಮನಿಂದ ಧನುರ್ವೇದವನ್ನು ಕಲಿತು ಆ ಎಲ್ಲ ದಿವ್ಯಾಸ್ತ್ರಗಳನ್ನೂ ಗುರುಭಕ್ತಿಯುಳ್ಳ ಪುತ್ರನಿಗೆ ನೀಡಿದ್ದರೋ (ಅಂತಹ ಅಶ್ವತ್ಥಾಮರು ಏನು ಹೇಳಿದರು?)

ಏಕಮೇವ ಹಿ ಲೋಕೇಽಸ್ಮಿನ್ನಾತ್ಮನೋ ಗುಣವತ್ತರಮ್ ।
ಇಚ್ಛಂತಿ ಪುತ್ರಂ ಪುರುಷಾ ಲೋಕೇ ನಾನ್ಯಂ ಕಥಂಚನ ॥ ೬೩ ॥

ಪುರುಷರು ಈ ಲೋಕದಲ್ಲಿ ತಮ್ಮ ಪುತ್ರನೊಬ್ಬನೇ ಎಲ್ಲರಿಗಿಂತಲೂ ಗುಣಗಳಲ್ಲಿ ಶ್ರೇಷ್ಠನಾಗಿರಬೇಕು ಎಂದು ಬಯಸುತ್ತಾರೆ. ಲೋಕದಲ್ಲಿ ಇನ್ನೊಬ್ಬನು ಹಾಗಿರಬೇಕೆಂದು ಬಯಸುವುದಿಲ್ಲ.

ಆಚಾರ್ಯಾಣಾಂ ಭವಂತ್ಯೇವ ರಹಸ್ಯಾನಿ ಮಹಾತ್ಮನಾಮ್ ।
ತಾನಿ ಪುತ್ರಾಯ ವಾ ದದ್ಯುಃ ಶಿಷ್ಯಾಯಾನುಗತಾಯ ವಾ ॥ ೬೪ ॥

ಮಹಾತ್ಮರಾದ ಆಚಾರ್ಯರ ಬಳಿ ವಿದ್ಯೆಯ ಅನೇಕ ರಹಸ್ಯಗಳಿರುತ್ತವೆ. ಅದನ್ನು ಪುತ್ರನಿಗಾಗಲೀ, ಶಿಷ್ಯನಿಗಾಗಲೀ ಅಥವಾ ಅತ್ಯಂತ ಆಪ್ತನಿಗಾಗಲೀ ಹೇಳುತ್ತಾರೆ.

ಸ ಶಿಲ್ಪಂ ಪ್ರಾಪ್ಯ ತತ್ ಸರ್ವಂ ಸವಿಶೇಷಂ ಚ ಸಂಜಯ ।
ಶೂರಃ ಶಾರದ್ವತೀಪುತ್ರಃ ಸಂಖೇ ದ್ರೋಣಾದನಂತರಃ ॥ ೬೫ ॥

ರಾಮಸ್ಯಾನುಮತಃ ಶಸ್ತ್ರೇ ಪುರಂದರಸಮೋ ಯುಧಿ ।
ಕಾರ್ತವೀರ್ಯಸಮೋ ವೀರ್ಯೇ ಬೃಹಸ್ಪತಿಸಮೋ ಮತೌ ॥ ೬೬ ॥

ಮಹೀಧರಸಮೋ ಧೃತ್ಯಾ ತೇಜಸಾಽಗ್ನಿಸಮೋ ಯುವಾ ।
ಸಮುದ್ರ ಇವ ಗಾಂಭೀರ್ಯೇ ಕ್ರೋಧೇ ಸರ್ಪವಿಷೋಪಮಃ ॥ ೬೭ ॥

ಶೂರರಾದ ಶಾರದ್ವತೀಪುತ್ರರಾದ ಅಶ್ವತ್ಥಾಮರು ಅದೆಲ್ಲ ಕೌಶಲವನ್ನೂ ಅತಿಶಯಗಳೊಡನೆ ತಂದೆಯಿಂದ ಕಲಿತು- ಎಲೈ ಸಂಜಯನೇ, ಯುದ್ಧದಲ್ಲಿ ದ್ರೋಣರಿಗೆ ಅನಂತರರಾದವರೂ, ಶಸ್ತ್ರದಲ್ಲಿ ಪರಶುರಾಮನಿಗೆ ಸಮ್ಮತರಾದವರೂ, ಯುದ್ಧದಲ್ಲಿ ಇಂದ್ರನಿಗೆ ಸಮರಾದವರೂ, ಪರಾಕ್ರಮದಲ್ಲಿ ಕಾರ್ತವೀರ್ಯನಿಗೆ ಸಮರಾದವರೂ, ಬುದ್ಧಿಶಕ್ತಿಯಲ್ಲಿ ಬೃಹಸ್ಪತಿಗೆ ಸಮರಾದವರೂ, ಧೈರ್ಯದಲ್ಲಿ ಪರ್ವತಕ್ಕೆ ಸಮರಾದವರೂ, ತೇಜಸ್ಸಿನಲ್ಲಿ ಅಗ್ನಿಸಮರಾದ ಯುವಕರೂ, ಗಾಂಭೀರ್ಯದಲ್ಲಿ ಸಮುದ್ರಕ್ಕೆ ಸಮರಾದಂತೆ ಇರುವವರೂ, ಕ್ರೋಧದಲ್ಲಿ ಸರ್ಪವಿಷಕ್ಕೆ ಸದೃಶರಾದವರೂ (ಆದ ಅಶ್ವತ್ಥಾಮರು ಆಗ ಏನು ಹೇಳಿದರು?)

ಸ ರಥೀ ಪ್ರಥಮೋ ಲೋಕೇ ದೃಢಧನ್ವಾ ಜಿತಕ್ಲಮಃ ।
ಶೀಘ್ರೋಽನಿಲ ಇವಾಕ್ರಂದೇ ಚರನ್ ಕ್ರುದ್ಧ ಇವಾಂತಕಃ ॥ ೬೮ ॥

ಅಸ್ಯತಾ ಯೇನ ಸಂಗ್ರಾಮೇ ಧರಣ್ಯಭಿನಿಪೀಡಿತಾ ।
ಯೋ ನ ವ್ಯಥತಿ ಸಂಗ್ರಾಮೇ ವೀರಃ ಸತ್ಯಪರಾಕ್ರಮಃ ॥ ೬೯ ॥

ವೇದಸ್ನಾತೋ ವ್ರತಸ್ನಾತೋ ಧನುರ್ವೇದೇ ಚ ಪಾರಗಃ ।
ಮಹೋದಧಿರಿವಾಕ್ಷೋಭ್ಯೋ ರಾಮೋ ದಾಶರಥಿರ್ಯಥಾ ॥ ೭೦ ॥

ತಮುಧರ್ಮೇಣ ಧರ್ಮಜ್ಞಂ ಧೃಷ್ಟದ್ಯುಮ್ನೇನ ಸಂಯುಗೇ ।
ಶ್ರುತ್ವಾ ನಿಹತಮಾಚಾರ್ಯಮಶ್ವತ್ಥಾಮಾ ಕಿಮಬ್ರವೀತ್ ॥ ೭೧ ॥

ಅವರು ಲೋಕದಲ್ಲಿ ಪ್ರಥಮ ಮಹಾರಥರು, ದೃಢವಾದ ಧನುಸ್ಸುಳ್ಳವರು, ದಣಿವನ್ನು ಗೆದ್ದವರು, ವಾಯುವಿನಂತೆ ತೀಕ್ಷ್ಣಗತಿಯುಳ್ಳವರು, ರಣರಂಗದಲ್ಲಿ ಕ್ರುದ್ಧನಾದ ಯಮನಂತೆ ಸಂಚರಿಸುವವರು. ರಣರಂಗದಲ್ಲಿ ಬಾಣಗಳನ್ನು ಪ್ರಯೋಗಿಸುವಾಗ ಅವರು ನಿಂತ ಭೂಮಿಯು ಪೀಡಿತವಾಗುತ್ತಿದ್ದಿತು. ವೀರರೂ, ಸತ್ಯಪರಾಕ್ರಮರೂ ಆದ ಅವರು ಯುದ್ಧದಲ್ಲಿ ವ್ಯಥೆಯನ್ನು ಹೊಂದುತ್ತಿರಲಿಲ್ಲ. ಅವರು ವೇದಸ್ನಾತರು, ವ್ರತಸ್ನಾತರು, ಧನುರ್ವೇದದಲ್ಲಿ ಪಾರಂಗತರು, ಮಹಾಸಮುದ್ರದಂತೆ, ದಾಶರಥಿ ರಾಮನಂತೆ ಅಲುಗಾಡಿಸಲು ಸಾಧ್ಯವಿಲ್ಲದವರು. ಅಂತಹ ಧರ್ಮಜ್ಞರಾದ ದ್ರೋಣಾಚಾರ್ಯರು ಯುದ್ಧದಲ್ಲಿ ಧೃಷ್ಟದ್ಯುಮ್ನನಿಂದ ಅಧರ್ಮದಿಂದ ಹತರಾದುದನ್ನು ಕೇಳಿ ಅಶ್ವತ್ಥಾಮರು ಏನು ಹೇಳಿದರು?

ಧೃಷ್ಟದ್ಯುಮ್ನಸ್ಯ ಯೋ ಮೃತ್ಯುಃ ಸೃಷ್ಟಸ್ತೇನ ಮಹಾತ್ಮನಾ ।
ಯಥಾ ದ್ರೋಣಸ್ಯ ಪಾಂಚಾಲ್ಯೋ ಯಜ್ಞಸೇನಸುತೋಽಭವತ್ ॥೭೨॥

ತಂ ನೃಶಂಸೇನ ಪಾಪೇನ ಕ್ರೂರೇಣಾತ್ಮಲಘರ್ಷಿಣಾ ।
ಶ್ರುತ್ವಾ ನಿಹತಮಾಚಾರ್ಯಮಶ್ವತ್ಥಾಮಾ ಕಿಮಬ್ರವೀತ್ ॥ ೭೩ ॥

ದ್ರೋಣರಿಗೆ ಯಜ್ಞಸುತನಾದ ಪಾಂಚಾಲ್ಯನಾದ ಧೃಷ್ಟದ್ಯುಮ್ನನು ಮೃತ್ಯುವಾದಂತೆ ಧೃಷ್ಟದ್ಯುಮ್ನನಿಗೆ ಮಹಾತ್ಮರಾದ ದ್ರೋಣರಿಂದ ಯಾವ ಅಶ್ವತ್ಥಾಮರು ಮೃತ್ಯುವಾಗಿ ಸೃಷ್ಟಿಸಲ್ಪಟ್ಟಿದ್ದರೋ ಅಂತಹ ದ್ರೋಣರು ಕ್ರೂರನೂ, ಪಾಪಕರ್ಮದಲ್ಲಿ ರತನಾದವನೂ, ಅಲ್ಪದರ್ಶಿಯೂ ಆದ ಧೃಷ್ಟದ್ಯುಮ್ನನಿಂದ ಹತರಾದುದನ್ನು ಕೇಳಿ ಅಶ್ವತ್ಥಾಮರು ಏನು ಹೇಳಿದರು?

ಸಂಜಯಃ

ಧೃಷ್ಟದ್ಯುಮ್ನೇನ ನಿಹತಂ ಶ್ರುತ್ವಾ ಪಿತರಂ ಪಾಪಕರ್ಮಣಾ ।
ಬಾಷ್ಪೇಣಾಪೂರ್ಯತ ದ್ರೌಣೇ ರೋಷೇಣ ಚ ನರರ್ಷಭ ॥ ೭೪ ॥

ಆಚಾರ್ಯಾಣಾಂ ಭವಂತ್ಯೇವ ರಹಸ್ಯಾನಿ ಮಹಾತ್ಮನಾಮ್ ।
ತಾನಿ ಪುತ್ರಾಯ ವಾ ದದ್ಯುಃ ಶಿಷ್ಯಾಯಾನುಗತಾಯ ವಾ ॥ ೬೪ ॥

ಮಹಾತ್ಮರಾದ ಆಚಾರ್ಯರ ಬಳಿ ವಿದ್ಯೆಯ ಅನೇಕ ರಹಸ್ಯಗಳಿರುತ್ತವೆ. ಅದನ್ನು ಪುತ್ರನಿಗಾಗಲೀ, ಶಿಷ್ಯನಿಗಾಗಲೀ ಅಥವಾ ಅತ್ಯಂತ ಆಪ್ತನಿಗಾಗಲೀ ಹೇಳುತ್ತಾರೆ.

ಸ ಶಿಲ್ಪಂ ಪ್ರಾಪ್ಯ ತತ್ ಸರ್ವಂ ಸವಿಶೇಷಂ ಚ ಸಂಜಯ ।
ಶೂರಃ ಶಾರದ್ವತೀಪುತ್ರಃ ಸಂಖೇ ದ್ರೋಣಾದನಂತರಃ ॥ ೬೫ ॥

ರಾಮಸ್ಯಾನುಮತಃ ಶಸ್ತ್ರೇ ಪುರಂದರಸಮೋ ಯುಧಿ ।
ಕಾರ್ತವೀರ್ಯಸಮೋ ವೀರ್ಯೇ ಬೃಹಸ್ಪತಿಸಮೋ ಮತೌ ॥ ೬೬ ॥

ಮಹೀಧರಸಮೋ ಧೃತ್ಯಾ ತೇಜಸಾऽಗ್ನಿಸಮೋ ಯುವಾ ।
ಸಮುದ್ರ ಇವ ಗಾಂಭೀರ್ಯೇ ಕ್ರೋಧೇ ಸರ್ಪವಿಷೋಪಮಃ ॥ ೬೭ ॥

ಶೂರರಾದ ಶಾರದ್ವತೀಪುತ್ರರಾದ ಅಶ್ವತ್ಥಾಮರು ಅದೆಲ್ಲ ಕೌಶಲವನ್ನೂ ಅತಿಶಯಗಳೊಡನೆ ತಂದೆಯಿಂದ ಕಲಿತು- ಎಲೈ ಸಂಜಯನೇ, ಯುದ್ಧದಲ್ಲಿ ದ್ರೋಣರಿಗೆ ಅನಂತರರಾದವರೂ, ಶಸ್ತ್ರದಲ್ಲಿ ಪರಶುರಾಮನಿಗೆ ಸಮ್ಮತರಾದವರೂ, ಯುದ್ಧದಲ್ಲಿ ಇಂದ್ರನಿಗೆ ಸಮರಾದವರೂ, ಪರಾಕ್ರಮದಲ್ಲಿ ಕಾರ್ತವೀರ್ಯನಿಗೆ ಸಮರಾದವರೂ, ಬುದ್ಧಿಶಕ್ತಿಯಲ್ಲಿ ಬೃಹಸ್ಪತಿಗೆ ಸಮರಾದವರೂ, ಧೈರ್ಯದಲ್ಲಿ ಪರ್ವತಕ್ಕೆ ಸಮರಾದವರೂ, ತೇಜಸ್ಸಿನಲ್ಲಿ ಅಗ್ನಿಸಮರಾದ ಯುವಕರೂ, ಗಾಂಭೀರ್ಯದಲ್ಲಿ ಸಮುದ್ರಕ್ಕೆ ಸಮರಾದಂತೆ ಇರುವವರೂ, ಕ್ರೋಧದಲ್ಲಿ ಸರ್ಪವಿಷಕ್ಕೆ ಸದೃಶರಾದವರೂ (ಆದ ಅಶ್ವತ್ಥಾಮರು ಆಗ ಏನು ಹೇಳಿದರು?)

ಸ ರಥೀ ಪ್ರಥಮೋ ಲೋಕೇ ದೃಢಧನ್ವಾ ಜಿತಕ್ಲಮಃ ।
ಶೀಘ್ರೋऽನಿಲ ಇವಾಕ್ರಂದೇ ಚರನ್ ಕ್ರುದ್ಧ ಇವಾಂತಕಃ ॥ ೬೮ ॥

ಅಸ್ಯತಾ ಯೇನ ಸಂಗ್ರಾಮೇ ಧರಣ್ಯಭಿನಿಪೀಡಿತಾ ।
ಯೋ ನ ವ್ಯಥತಿ ಸಂಗ್ರಾಮೇ ವೀರಃ ಸತ್ಯಪರಾಕ್ರಮಃ ॥ ೬೯ ॥

ವೇದಸ್ನಾತೋ ವ್ರತಸ್ನಾತೋ ಧನುರ್ವೇದೇ ಚ ಪಾರಗಃ ।
ಮಹೋದಧಿರಿವಾಕ್ಷೋಭ್ಯೋ ರಾಮೋ ದಾಶರಥಿರ್ಯಥಾ ॥ ೭೦ ॥

ತಮಧರ್ಮೇಣ ಧರ್ಮಿಷ್ಠಂ ಧೃಷ್ಟದ್ಯುಮ್ನೇನ ಸಂಯುಗೇ ।
ಶ್ರುತ್ವಾ ನಿಹತಮಾಚಾರ್ಯಮಶ್ವತ್ಥಾಮಾ ಕಿಮಬ್ರವೀತ್ ॥ ೭೧ ॥

ಅವರು ಲೋಕದಲ್ಲಿ ಪ್ರಥಮ ಮಹಾರಥರು, ದೃಢವಾದ ಧನುಸ್ಸುಳ್ಳವರು, ದಣಿವನ್ನು ಗೆದ್ದವರು, ವಾಯುವಿನಂತೆ ಶೀಘ್ರಗತಿಯುಳ್ಳವರು, ರಣರಂಗದಲ್ಲಿ ಕ್ರುದ್ಧನಾದ ಯಮನಂತೆ ಸಂಚರಿಸುವವರು. ರಣರಂಗದಲ್ಲಿ ಬಾಣಗಳನ್ನು ಪ್ರಯೋಗಿಸುವಾಗ ಅವರು ನಿಂತ ಭೂಮಿಯು ಪೀಡಿತವಾಗುತ್ತಿದ್ದಿತು. ವೀರರೂ, ಸತ್ಯಪರಾಕ್ರಮರೂ ಆದ ಅವರು ಯುದ್ಧದಲ್ಲಿ ವ್ಯಥೆಯನ್ನು ಹೊಂದುತ್ತಿರಲಿಲ್ಲ. ಅವರು ವೇದಸ್ನಾತರು, ವ್ರತಸ್ನಾತರು, ಧನುರ್ವೇದದಲ್ಲಿ ಪಾರಂಗತರು, ಮಹಾಸಮುದ್ರದಂತೆ, ದಾಶರಥಿ ರಾಮನಂತೆ ಅಲುಗಾಡಿಸಲು ಸಾಧ್ಯವಿಲ್ಲದವರು. ಅಂತಹ ಧರ್ಮಿಷ್ಠರಾದ ದ್ರೋಣಾಚಾರ್ಯರು ಯುದ್ಧದಲ್ಲಿ ಧೃಷ್ಟದ್ಯುಮ್ನನಿಂದ ಅಧರ್ಮದಿಂದ ಹತರಾದುದನ್ನು ಕೇಳಿ ಅಶ್ವತ್ಥಾಮರು ಏನು ಹೇಳಿದರು?

ಧೃಷ್ಟದ್ಯುಮ್ನಸ್ಯ ಯೋ ಮೃತ್ಯುಃ ಸೃಷ್ಟಸ್ತೇನ ಮಹಾತ್ಮನಾ ।
ಯಥಾ ದ್ರೋಣಸ್ಯ ಪಾಂಚಾಲ್ಯೋ ಯಜ್ಞಸೇನಸುತೋಽಭವತ್ ॥೭೨॥

ತಂ ನೃಶಂಸೇನ ಪಾಪೇನ ಕ್ರೂರೇಣಾತ್ಮಲಬ್ಧರ್ಶಿನಾ ।
ಶ್ರುತ್ವಾ ನಿಹತಮಾಚಾರ್ಯಮಶ್ವತ್ಥಾಮಾ ಕಿಮಬ್ರವೀತ್ ॥ ೭೩ ॥

ದ್ರೋಣರಿಗೆ ಯಜ್ಞಸುತನಾದ ಪಾಂಚಾಲ್ಯನಾದ ಧೃಷ್ಟದ್ಯುಮ್ನನು ಮೃತ್ಯುವಾದಂತೆ ಧೃಷ್ಟದ್ಯುಮ್ನನಿಗೆ ಮಹಾತ್ಮರಾದ ದ್ರೋಣರಿಂದ ಯಾವ ಅಶ್ವತ್ಥಾಮರು ಮೃತ್ಯುವಾಗಿ ಸೃಷ್ಟಿಸಲ್ಪಟ್ಟಿದ್ದರೋ ಅಂತಹ ದ್ರೋಣರು ಕ್ರೂರನೂ, ಪಾಪಕರ್ಮದಲ್ಲಿ ರತನಾದವನೂ, ಅಲ್ಪದರ್ಶಿಯೂ ಆದ ಧೃಷ್ಟದ್ಯುಮ್ನನಿಂದ ಹತರಾದುದನ್ನು ಕೇಳಿ ಅಶ್ವತ್ಥಾಮರು ಏನು ಹೇಳಿದರು?

ಸಂಜಯಃ

ಧೃಷ್ಟದ್ಯುಮ್ನೇನ ನಿಹತಂ ಶ್ರುತ್ವಾ ಪಿತರಂ ಪಾಪಕರ್ಮಣಾ ।
ಬಾಷ್ಪೇಣಾಪೂರ್ಯತ ದ್ರೌಣೇ ರೋಷೇಣ ಚ ನರರ್ಷಭ ॥ ೭೪ ॥

ಸಂಜಯ- ಎಲೈ ನರಶ್ರೇಷ್ಠನೇ, ತನ್ನ ತಂದೆಯು ಪಾಪಕರ್ಮವನ್ನು ಮಾಡುವ ಧೃಷ್ಟದ್ಯುಮ್ನನಿಂದ ಮೋಸದಿಂದ ಹತನಾದನೆಂದು ಕೇಳಿ ಅಶ್ವತ್ಥಾಮರು ರೋಷದಿಂದ ಕಣ್ಣೀರಿನಿಂದ ತುಂಬಿದ ಮುಖವುಳ್ಳವರಾಗಿ ರೋಷಗೊಂಡರು.

ತಸ್ಯ ಕ್ರುದ್ಧಸ್ಯ ರಾಜೇಂದ್ರ ವಪುರ್ದಿವ್ಯಮದೃಶ್ಯತ ।
ಅಂತಕಸ್ಯೇವ ಭೂತಾನಿ ಜಿಹೀರ್ಷೋಃ ಕಾಲಪರ್ಯಯೇ ॥ ೭೫ ॥

ಎಲೈ ರಾಜೇಂದ್ರನೇ, ಕೋಪಗೊಂಡ ಅವರ ದಿವ್ಯವಾದ ಶರೀರವು ಸರ್ವ ಸಂಹಾರ ಕಾಲದಲ್ಲಿ ಎಲ್ಲ ಪ್ರಾಣಿಗಳನ್ನೂ ಸಂಹರಿಸುವ ಯಮನ ದೇಹದಂತಿದ್ದಿತು.

ಅಶ್ರುಪೂರ್ಣೇ ತತೋ ನೇತ್ರೇ ಅಪಮೃಜ್ಯ ಪುನಃ ಪುನಃ ।
ಉವಾಚ ಕೋಪಾನ್ನಿಃಶ್ವಸ್ಯ ದುರ್ಯೋಧನಮಿದಂ ವಚಃ ॥ ೭೬ ॥

ನೀರು ತುಂಬಿದ ಕಣ್ಣುಗಳನ್ನು ಪುನಃ ಪುನಃ ಒರೆಸಿಕೊಂಡು, ಕೋಪಗೊಂಡು ನಿಟ್ಟುಸಿರನ್ನು ಬಿಡುತ್ತಾ, ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಪಿತಾ ಮಮ ಯಥಾ ಕ್ಷುದ್ರೈರ್ನ್ಯಸ್ತಶಸ್ತ್ರೋ ನಿಪಾತಿತಃ ।
ಧರ್ಮಧ್ವಜವತಾ ಪಾಪಂ ಕೃತಂ ತದ್ ವಿದಿತಂ ಮಮ ।
ಅನಾರ್ಯಂ ಸುನೃಶಂಸಸ್ಯ ಧರ್ಮಪುತ್ರಸ್ಯ ಮೇ ಶ್ರುತಮ್ ॥ ೭೭ ॥

ಶಸ್ತ್ರಸಂನ್ಯಾಸವನ್ನು ಮಾಡಿದ ನನ್ನ ತಂದೆಯು ಕ್ಷುದ್ರನಿಂದ ಹೇಗೆ ಹತರಾದರೆಂದು ನಾನು ಕೇಳಿದೆನು. ಧರ್ಮಚ್ಛೇದವನ್ನು ಮಾಡಿದ ಧೃಷ್ಟದ್ಯುಮ್ನನು ಮಾಡಿದ ಪಾಪಕೃತ್ಯವನ್ನು ತಿಳಿದೆನು. ಕ್ರೂರನಾದ ಯುಧಿಷ್ಠಿರನು ಮಾಡಿದ ಅನಾರ್ಯ ಕಾರ್ಯವನ್ನೂ ಕೇಳಿದೆನು.

ಯುದ್ಧೇಷ್ವಪಿ ಪ್ರವೃತ್ತಾನಾಂ ಧ್ರುವೌ ಜಯಪರಾಜಯೌ ।
ದ್ವಯಮೇತದ್ ಭವೇದ್ ರಾಜನ್ ವಧಸ್ತತ್ರ ಪ್ರಶಸ್ಯತೇ ॥ ೭೮ ॥

ಎಲೈ ರಾಜನೇ, ಯುದ್ಧದಲ್ಲಿ ಪ್ರವೃತ್ತರಾದವರಿಗೆ ಜಯ-ಪರಾಜಯಗಳೆರಡೂ ನಿತ್ಯವಾದವುಗಳು. ಅವುಗಳಲ್ಲಿ ವಧೆಯು ಶ್ರೇಷ್ಠವಾದುದು.

ನ್ಯಾಯವೃತ್ತೋ ವಧೋ ಯಸ್ತು ಸಂಗ್ರಾಮೇ ಯುದ್ಧ್ಯತೋ ಭವೇತ್ ।
ನ ಸ ದುಃಖಾಯ ಭವತಿ ತಥಾ ದೃಷ್ಟೋ ಹಿ ಸ ದ್ವಿಜಃ ॥ ೭೯ ॥

ಸಂಜಯ– ಎಲೈ ನರಶ್ರೇಷ್ಠನೇ, ತನ್ನ ತಂದೆಯು ಪಾಪಕರ್ಮವನ್ನು ಮಾಡುವ ಧೃಷ್ಟದ್ಯುಮ್ನನಿಂದ ಮೋಸದಿಂದ ಹತನಾದನೆಂದು ಕೇಳಿ ಅಶ್ವತ್ಥಾಮರು ರೋಷದಿಂದ ಕಣ್ಣೀರಿನಿಂದ ತುಂಬಿದ ಮುಖವುಳ್ಳವರಾಗಿ ರೋಷಗೊಂಡರು.

ತಸ್ಯ ಕ್ರುದ್ಧಸ್ಯ ರಾಜೇಂದ್ರ ವಪುರ್ದಿವ್ಯಮದೃಶ್ಯತ ।
ಅಂತಕಸ್ಯೇವ ಭೂತಾನಿ ಜಿಹೀರ್ಷೋಃ ಕಾಲಪರ್ಯಯೇ ॥ ೭೫ ॥

ಎಲೈ ರಾಜೇಂದ್ರನೇ, ಕೋಪಗೊಂಡ ಅವರ ದಿವ್ಯವಾದ ಶರೀರವು ಸರ್ವ ಸಂಹಾರ ಕಾಲದಲ್ಲಿ ಎಲ್ಲ ಪ್ರಾಣಿಗಳನ್ನೂ ಸಂಹರಿಸುವ ಯಮನ ದೇಹದಂತಿದ್ದಿತು.

ಅಶ್ರುಪೂರ್ಣೇ ತತೋ ನೇತ್ರೇ ಅಪಮೃಜ್ಯ ಪುನಃ ಪುನಃ ।
ಉವಾಚ ಕೋಪಾನ್ನಿಃಶ್ವಸ್ಯ ದುರ್ಯೋಧನಮಿದಂ ವಚಃ ॥ ೭೬ ॥

ನೀರು ತುಂಬಿದ ಕಣ್ಣುಗಳನ್ನು ಪುನಃ ಪುನಃ ಒರೆಸಿಕೊಂಡು, ಕೋಪಗೊಂಡು ನಿಟ್ಟುಸಿರನ್ನು ಬಿಡುತ್ತಾ, ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಪಿತಾ ಮಮ ಯಥಾ ಕ್ಷುದ್ರೈರ್ನ್ಯಸ್ತಶಸ್ತ್ರೋ ನಿಪಾತಿತಃ ।
ಧರ್ಮಧ್ವಜವತಾ ಪಾಪಂ ಕೃತಂ ತದ್ ವಿದಿತಂ ಮಮ ।
ಅನಾರ್ಯಂ ಸುನೃಶಂಸಸ್ಯ ಧರ್ಮಪುತ್ರಸ್ಯ ಮೇ ಶ್ರುತಮ್ ॥ ೭೭ ॥

ಶಸ್ತ್ರಸಂನ್ಯಾಸವನ್ನು ಮಾಡಿದ ನನ್ನ ತಂದೆಯು ಕ್ಷುದ್ರನಿಂದ ಹೇಗೆ ಹತರಾದರೆಂದು ನಾನು ಕೇಳಿದೆನು. ಧರ್ಮಚ್ಛೇದವನ್ನು ಮಾಡಿದ ಧೃಷ್ಟದ್ಯುಮ್ನನು ಮಾಡಿದ ಪಾಪಕೃತ್ಯವನ್ನು ತಿಳಿದೆನು. ಕ್ರೂರನಾದ ಯುಧಿಷ್ಠಿರನು ಮಾಡಿದ ಅನಾರ್ಯ ಕಾರ್ಯವನ್ನೂ ಕೇಳಿದೆನು.

ಯುದ್ಧೇಷ್ವಪಿ ಪ್ರವೃತ್ತಾನಾಂ ಧ್ರುವೌ ಜಯಪರಾಜಯೌ ।
ದ್ವಯಮೇತದ್ ಭವೇದ್ ರಾಜನ್ ವಧಸ್ತತ್ರ ಪ್ರಶಸ್ಯತೇ ॥ ೭೮ ॥

ಎಲೈ ರಾಜನೇ, ಯುದ್ಧದಲ್ಲಿ ಪ್ರವೃತ್ತರಾದವರಿಗೆ ಜಯ-ಪರಾಜಯಗಳೆರಡೂ ನಿತ್ಯವಾದವುಗಳು. ಅವುಗಳಲ್ಲಿ ವಧೆಯು ಶ್ರೇಷ್ಠವಾದುದು.

ನ್ಯಾಯವೃತ್ತೋ ವಧೋ ಯಸ್ತು ಸಂಗ್ರಾಮೇ ಯುದ್ಧ್ಯತೋ ಭವೇತ್ ।
ನ ಸ ದುಃಖಾಯ ಭವತಿ ತಥಾ ದೃಷ್ಟೋ ಹಿ ಸ ದ್ವಿಜಃ ॥ ೭೯ ॥

ರಣರಂಗದಲ್ಲಿ ಯುದ್ಧ ಮಾಡುವವನಿಗೆ ನ್ಯಾಯವಾದ ವಧೆಯು ಏನು ಉಂಟಾಗುವುದೋ ಅದು ದುಃಖವನ್ನುಂಟು ಮಾಡುವುದಿಲ್ಲ. ನನ್ನ ತಂದೆಯೂ ಹಾಗೆಯೇ ತಿಳಿದಿದ್ದರು.

ಗತಃ ಸ ವೀರಲೋಕಾಯ ಪಿತಾ ಮಮ ನ ಸಂಶಯಃ ।
ನ ಶೋಚ್ಯಃ ಪುರುಷವ್ಯಾಘ್ರಸ್ತಥಾ ಸ ನಿಧನಂ ಗತಃ ॥ ೮೦ ॥

ನನ್ನ ತಂದೆಯು ವೀರಲೋಕಕ್ಕೆ ಹೋಗಿದ್ದಾರೆ ಎಂಬುದರಲ್ಲಿ ನನಗೆ ಸಂಶಯವಿಲ್ಲ. ಅಂತಹ ನಿಧನ ಹೊಂದಿದ ಪುರುಷವ್ಯಾಘ್ರರು ಶೋಚನೀಯರಲ್ಲ.

ಯತ್ತು ಧರ್ಮಪ್ರವೃತ್ತಃ ಸನ್ ಕೇಶಗ್ರಹಣಮಾಪ್ತವಾನ್ ।
ಪಶ್ಯತಾಂ ಸರ್ವಸೈನ್ಯಾನಾಂ ತನ್ಮೇ ಮರ್ಮಾಣಿ ಕೃಂತತಿ ॥ ೮೧ ॥

ಆದರೆ ಧರ್ಮನಿಷ್ಠರಾದ ಅವರು ಎಲ್ಲ ಸೇನೆಗಳೂ ನೋಡುತ್ತಿದ್ದಂತೆಯೇ ಕೇಶಗ್ರಹಣ ಹೊಂದಿದುದು ನನ್ನ ಮರ್ಮಗಳನ್ನು ಕತ್ತರಿಸುತ್ತಿದೆ.

ಕಾಮಾತ್ ಕ್ರೋಧಾದವಜ್ಞಾನಾದ್ ದರ್ಪಾದ್ ಬಾಲ್ಯೇನ ವಾ ಪುನಃ ।
ವೈಧರ್ಮಿಕಾನಿ ಕುರ್ವಂತಿ ತಥಾ ಪರಿಭವೇನ ಚ ॥ ೮೨ ॥

ಕಾಮದಿಂದ, ಕ್ರೋಧದಿಂದ, ತಿರಸ್ಕಾರದಿಂದ, ದರ್ಪದಿಂದ ಅಥವಾ ಬಾಲ್ಯದಿಂದ ಅಥವಾ ಸೋಲಿನಿಂದ ಪುರುಷರು ಅಧಾರ್ಮಿಕವಾದ ಕಾರ್ಯಗಳನ್ನು ಮಾಡುತ್ತಾರೆ.

ತದಿದಂ ಪಾರ್ಷತೇನೇಹ ಮಹದಧಾರ್ಮಿಕಂ ಕೃತಮ್ ।
ಅವಜ್ಞಾಯ ಚ ಮಾಂ ನೂನಂ ನೃಶಂಸೇನ ದುರಾತ್ಮನಾ ॥ ೮೩ ॥

ತಸ್ಯಾನುಬಂಧಂ ಸ ದೃಷ್ಟ್ವಾ ಧೃಷ್ಟದ್ಯುಮ್ನಃ ಸುದಾರುಣಮ್ ।
ಅನಾರ್ಯಂ ಪರಮಂ ಕೃತ್ವಾ ಮಿಥ್ಯಾವಾದೀ ಚ ಪಾಂಡವಃ ॥ ೮೪ ॥

ಇಲ್ಲಿ ಕ್ರೂರಿಯೂ, ದುರಾತ್ಮನೂ ಆದ ಧೃಷ್ಟದ್ಯುಮ್ನನು ನನ್ನನ್ನು ಅವಮಾನಗೊಳಿಸಿ ದೊಡ್ಡ ಅಧಾರ್ಮಿಕ ಕಾರ್ಯವನ್ನು ಮಾಡಿದ್ದಾನೆ. ಮಿಥ್ಯಾವಾದಿಯಾದ ಧರ್ಮರಾಜನು ಕ್ಷುದ್ರನಾದ ಧೃಷ್ಟದ್ಯುಮ್ನನ ಸ್ನೇಹವನ್ನು ಮಾಡಿ ಅನಾರ್ಯನೂ ಮತ್ತು ಅತ್ಯಂತ ದಾರುಣನೂ ಆಗಿದ್ದಾನೆ (ಲಕ್ಷಾಲಂಕಾರ).

ಯೋ ಹ್ಯಸೌ ಛದ್ಮನಾऽऽಚಾರ್ಯಂ ಶಸ್ತ್ರಂ ಸಂನ್ಯಾಸಯತ್ ತದಾ ।
ತಸ್ಯಾದ್ಯ ಧರ್ಮರಾಜಸ್ಯ ಭೂಮಿಃ ಪಾಸ್ಯತಿ ಶೋಣಿತಮ್ ॥ ೮೫ ॥

ಯಾವ ಈ ಧರ್ಮರಾಜನು ಕಪಟವನ್ನು ಮಾಡಿ ಆಚಾರ್ಯರು ಶಸ್ತ್ರಸಂನ್ಯಾಸವನ್ನು ಮಾಡುವಂತೆ ಮಾಡಿದನೋ ಅಂತಹ ಧರ್ಮರಾಜನ ರಕ್ತವನ್ನು ಈ ಭೂಮಿಯು ಕುಡಿಯುವುದು.

ಸರ್ವೋಪಾಯೈರ್ಯತಿಷ್ಯಾಮಿ ಪಾಂಚಾಲಾನಾಮಹಂ ವಧೇ ।
ಧೃಷ್ಟದ್ಯುಮ್ನಂ ಚ ಸಮರೇ ಹಂತಾऽಹಂ ಪಾಪಕಾರಿಣಮ್ ॥ ೮೬ ॥

ನಾನು ಪಾಂಚಾಲರನ್ನು ವಧೆಮಾಡಲು ಎಲ್ಲ ಉಪಾಯಗಳಿಂದಲೂ ಪ್ರಯತ್ನಪಡುವೆನು. ಪಾಪಕರ್ಮವನ್ನು ಮಾಡಿದ ಧೃಷ್ಟದ್ಯುಮ್ನನನ್ನು ಯುದ್ಧದಲ್ಲಿ ಕೊಲ್ಲುವೆನು.

ಕರ್ಮಣಾ ಯೇನ ತೇನೇಹ ಮೃದುನಾ ದಾರುಣೇನ ವಾ ।
ಪಾಂಚಾಲಾನಾಂ ವಧಂ ಕೃತ್ವಾ ಶಾಂತಿಂ ಲಬ್ಧಾಸ್ಮಿ ಕೌರವ ॥ ೮೭॥

ಎಲೈ ಕೌರವನೇ, ಮೃದುವಾಗಲೀ ಅಥವಾ ಘೋರವಾಗಲೀ ಯಾವುದಾದರೂ ಕರ್ಮವನ್ನು ಮಾಡಿ, ಪಾಂಚಾಲರ ವಧೆಯನ್ನು ಮಾಡಿ ನಾನು ಶಾಂತಿಯನ್ನು ಪಡೆಯುವೆನು.

ಯದರ್ಥಂ ಪುರುಷವ್ಯಾಘ್ರ ಪುತ್ರಮಿಚ್ಛಂತಿ ಮಾನವಾಃ ।
ಪ್ರೇತ್ಯ ಚೇಹ ಚ ಸಂಪ್ರಾಪ್ತಂ ತ್ರಾಣಾಯ ಮಹತೋ ಭಯಾತ್ ॥೮೮॥

ಎಲೈ ಪುರುಷವ್ಯಾಘ್ರನೇ, ಮಾನವರು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ತಮ್ಮನ್ನು ದೊಡ್ಡ ಭಯದಿಂದ ರಕ್ಷಿಸಲು ಪುತ್ರನು ಪ್ರಾಪ್ತನಾಗುವನೆಂದು ಪುತ್ರನನ್ನು ಇಚ್ಛಿಸುತ್ತಾರೆ.

ಪಿತ್ರಾ ತು ಮಮ ಸಾವಸ್ಥಾ ಪ್ರಾಪ್ತಾ ನಿರ್ಬಂಧುನಾ ಯಥಾ ।
ಮಯಿ ಶೈಲಪ್ರತೀಕಾಶೇ ಪುತ್ರೇ ಶಿಷ್ಯೇ ಚ ಜೀವತಿ ॥ ೮೯ ॥

ಪುತ್ರನೂ, ಶಿಷ್ಯನೂ ಆದ ನಾನು ಪರ್ವತಸದೃಶನಾಗಿ ಬದುಕಿರುವಾಗ ನನ್ನ ತಂದೆಯು ಯಾವ ಬಂಧುವೂ ಇಲ್ಲದಂತಹ ಅವಸ್ಥೆಯನ್ನು ಹೊಂದಿದರು.

ಧಿಙ್ಮಮಾಸ್ತ್ರಾಣಿ ದಿವ್ಯಾನಿ ಧಿಗ್‌ಬಾಹೂ ಧಿಕ್ಪರಾಕ್ರಮಮ್ ।
ಯನ್ಮಾಂ ದ್ರೋಣಃ ಸುತಂ ಪ್ರಾಪ್ಯ ಕೇಶಗ್ರಹಣಮಾಪ್ತವಾನ್ ॥ ೯೦ ॥

ನನ್ನ ದಿವ್ಯಾಸ್ತ್ರಗಳಿಗೆ ಧಿಕ್ಕಾರವಿರಲಿ, ನನ್ನ ಬಾಹುಗಳಿಗೆ ಧಿಕ್ಕಾರವಿರಲಿ. ನನ್ನನ್ನು ಪುತ್ರನಾಗಿ ಪಡೆದು, ದ್ರೋಣರ ಕೇಶಗ್ರಹಣವಾದ್ದರಿಂದ ನನ್ನ ಪರಾಕ್ರಮಕ್ಕೆ ಧಿಕ್ಕಾರವಿರಲಿ.

ಸ ತಥಾಽಹಂ ಕರಿಷ್ಯಾಮಿ ಯಥಾ ಭರತಸತ್ತಮ ।
ಪರಲೋಕಗತಸ್ಯಾಪಿ ಗಮಿಷ್ಯಾಮ್ಯನೃಣಃ ಪಿತುಃ ॥ ೯೧ ॥

ಎಲೈ ಭರತಶ್ರೇಷ್ಠನೇ, ನಾನು ನನ್ನ ತಂದೆಯು ಪರಲೋಕಕ್ಕೆ ಹೋಗಿದ್ದರೂ ಅವರ ಋಣವನ್ನು ತೀರಿಸುವಂತಹ ಕಾರ್ಯವನ್ನು ಮಾಡುವೆನು.

ಆರ್ಯೇಣ ತು ನ ವಕ್ತವ್ಯಾ ಕದಾಚಿತ್ ಸ್ತುತಿರಾತ್ಮನಃ ।
ಪಿತುರ್ವಧಮಮೃಷ್ಯಂಸ್ತು ವಕ್ಷ್ಯಾಮ್ಯದ್ಯೇಹ ಪೌರುಷಮ್ ॥ ೯೨ ॥

ಆರ್ಯಸ್ವಭಾವವುಳ್ಳವನು ಎಂದೂ ತನ್ನ ಸ್ತುತಿಯನ್ನು ಮಾಡಿಕೊಳ್ಳಬಾರದು. ಆದರೆ ತಂದೆಯ ವಧೆಯಿಂದ ರೋಷಗೊಂಡವನಾಗಿ ನಾನು ಇಲ್ಲಿ ಈ ದಿನ ನನ್ನ ಪೌರುಷವನ್ನು ಹೇಳುವೆನು.

ಅದ್ಯ ಪಶ್ಯಂತು ಮೇ ವೀರ್ಯಂ ಪಾಂಡವಾಃ ಸಜನಾರ್ದನಾಃ ।
ಮೃದ್ನತಃ ಸರ್ವಸೈನ್ಯಾನಿ ಯುಗಾಂತಮಿವ ಕುರ್ವತಃ ॥ ೯೩ ॥

ಎಲ್ಲ ಸೈನ್ಯಗಳನ್ನೂ ಮರ್ದಿಸಿ ಯುಗಾಂತದಂತೆ ಮಾಡುವ ನನ್ನ ಪರಾಕ್ರಮನ್ನು ಈ ದಿನ ಕೃಷ್ಣನಿಂದ ಸಹಿತರಾದ ಪಾಂಡವರು ನೋಡಲಿ.

ನ ಹಿ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ಅದ್ಯ ಶಕ್ತಾ ರಣೇ ಜೇತುಂ ರಥಸ್ಥಂ ಮಾಂ ನರರ್ಷಭ ॥ ೯೪ ॥

ಎಲೈ ನರರ್ಷಭನೇ, ಈ ದಿನ ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ರಾಕ್ಷಸರಾಗಲೀ, ರಥದಲ್ಲಿ ನಿಂತು ಯುದ್ಧವನ್ನು ಮಾಡುವ ನನ್ನನ್ನು ರಣರಂಗದಲ್ಲಿ ಜಯಿಸಲು ಶಕ್ತರಲ್ಲ.

ಮದನ್ಯೋ ನಾಸ್ತಿ ಲೋಕೇಽಸ್ಮಿನ್ನರ್ಜುನಾದ್ವಾಽಸ್ತ್ರವಿತ್ತಮಃ ।
ಅಹಂ ಹಿ ಜ್ವಲತಾಂ ಮಧ್ಯೇ ಮಯೂಖಾನಾಮಿವಾಂಶುಮಾನ್ ।
ಪ್ರಯೋಕ್ತಾ ದೇವಸೃಷ್ಟಾನಾಮಸ್ತ್ರಾಣಾಂ ಪೃತನಾಗತಃ ॥ ೯೫ ॥

ನನ್ನನ್ನು ಮತ್ತು ಅರ್ಜುನನನ್ನು ಬಿಟ್ಟು ಲೋಕದಲ್ಲಿ ಶ್ರೇಷ್ಠನಾದ ಅಸ್ತ್ರಜ್ಞರಾದವನು ಯಾವನೂ ಇಲ್ಲ. ನಾನು ಜ್ವಲಿಸುವವರಲ್ಲಿ ಕಿರಣಗಳ ಮಧ್ಯೆ ಇರುವ ಸೂರ್ಯನಂತೆ ಇದ್ದು, ಈ ದಿನ ಸೈನ್ಯದ ಮಧ್ಯದಲ್ಲಿ ನಿಂತು ದೇವಸೃಷ್ಟವಾದ ಅಸ್ತ್ರಗಳನ್ನು ಪ್ರಯೋಗಿಸುವೆನು.

ಕೃಶಾಶ್ವತನಯಾ ಹ್ಯದ್ಯ ಮತ್‌ಪ್ರಯುಕ್ತಾ ಮಹಾಮೃಧೇ ।
ದರ್ಶಯಂತೋ ತ್ಮನೋ ವೀರ್ಯಂ ಪ್ರಮಥಿಷ್ಯಂತಿ ಪಾಂಡವಾನ್ ॥

ಈ ದಿನ ದೊಡ್ಡ ಯುದ್ಧದಲ್ಲಿ ನನ್ನಿಂದ ಪ್ರಯೋಗಿಸಲ್ಪಡುವ ಅಗ್ನಿಪುರರಂತಿರುವ ಅಸ್ತ್ರಗಳು ತಮ್ಮ ಸಾಮರ್ಥ್ಯವನ್ನು ತೋರಿಸುತ್ತಾ ಪಾಂಡವರನ್ನು ಮರ್ದಿಸುವವು.

ಅದ್ಯ ಸರ್ವಾ ದಿಶೋ ರಾಜನ್ ಧಾರಾಭಿರಿವ ಸಂಕುಲಾಃ ।
ಆವೃತಾಃ ಪತ್ರಿಭಿಸ್ತೀಕ್ಷ್ಣೈರ್ದ್ರಷ್ಟಾರೋ ಮಾಮಕೈರಿಹ ॥ ೯೭ ॥

ಎಲೈ ರಾಜನೇ, ಈ ದಿನ ಎಲ್ಲ ದಿಕ್ಕುಗಳೂ ಮಳೆಗಾಲದಲ್ಲಿ ಜಲಧಾರೆಗಳಿಂದ ನಿಬಿಡವಾದಂತೆ ನನ್ನ ತೀಕ್ಷ್ಣವಾದ ಅಸ್ತ್ರಗಳಿಂದ ಆವೃತವಾಗುವುದನ್ನು ಯೋಧರು ನೋಡುವರು.

ಕಿರನ್ ಹಿ ಶರಜಾಲಾನಿ ಸರ್ವತೋ ಭೈರವಸ್ವರಮ್ ।
ಶತ್ರೂನ್ ನಿಪಾತಯಿಷ್ಯಾಮಿ ಮಹಾವಾತ ಇವ ದ್ರುಮಾನ್ ॥ ೯೮ ॥

ಭಯಂಕರವಾದ ಸ್ವನವುಳ್ಳ ಅಸ್ತ್ರಸಮೂಹಗಳನ್ನು ಎಲ್ಲ ಕಡೆಗಳಲ್ಲಿಯೂ ಪ್ರಯೋಗಿಸುತ್ತಾ, ಬಿರುಗಾಳಿಯು ಮರಗಳನ್ನು ಉರುಳಿಸುವಂತೆ ನಾನು ಶತ್ರುಗಳನ್ನು ಉರುಳಿಸುವೆನು.

ನ ಚ ಜಾನಾತಿ ಬೀಭತ್ಸುಸ್ತದಸ್ತ್ರಂ ನ ಜನಾರ್ದನಃ ।
ನ ಭೀಮಸೇನೋ ನ ಯಮೌ ನ ಚ ರಾಜಾ ಯುಧಿಷ್ಠಿರಃ ॥ ೯೯ ॥

ನ ಪಾರ್ಷತೋ ದುರಾತ್ಮಾಽಸೌ ನ ಶಿಖಂಡೀ ನ ಸಾತ್ಯಕಿಃ ।
ಯದಿದಂ ಮಯಿ ಕೌರವ್ಯ ಸಕಲ್ಯಂ ಸನಿವರ್ತನಮ್ ॥ ೧೦೦ ॥

ಎಲೈ ಕೌರವ್ಯನೇ, ನನ್ನಲ್ಲಿ ಪ್ರಯೋಗನಿವರ್ತನ ಸಹಿತವಾದ ಯಾವ ಅಸ್ತ್ರವಿದೆಯೋ, ಅದನ್ನು ಅರ್ಜುನನಾಗಲೀ, ಕೃಷ್ಣನಾಗಲೀ, ಭೀಮಸೇನನಾಗಲೀ, ನಕುಲ- ಸಹದೇವರಾಗಲೀ, ರಾಜನಾದ ಯುಧಿಷ್ಠಿರನಾಗಲೀ, ದುರಾತ್ಮನಾದ ಈ ಧೃಷ್ಟದ್ಯುಮ್ನನಾಗಲೀ, ಶಿಖಂಡಿಯಾಗಲೀ ಅಥವಾ ಸಾತ್ಯಕಿಯಾಗಲೀ ತಿಳಿದಿಲ್ಲ.

ನಾರಾಯಣಾಯ ಮೇ ಪಿತ್ರಾ ಪ್ರಣಮ್ಯ ವಿಧಿಪೂರ್ವಕಮ್ ।
ಉಪಹಾರಃ ಪುರಾ ದತ್ತೋ ಬ್ರಹ್ಮರೂಪ ಉಪಸ್ಥಿತೇ ॥ ೧೦೧ ॥

ಹಿಂದೆ ಬ್ರಾಹ್ಮಣ ರೂಪವನ್ನು ಧರಿಸಿದ ನಾರಾಯಣನಿಗೆ ನನ್ನ ತಂದೆಯು ವಿಧಿ ಪೂರ್ವಕವಾಗಿ ಪ್ರಣಾಮವನ್ನು ಮಾಡಿ ಪೂಜೆಯನ್ನು ಮಾಡಿದರು.

ತಂ ಸ್ವಯಂ ಪ್ರತಿಗೃಹ್ಯಾಥ ಭಗವಾನ್ ಸ ವರಂ ದದೌ ।
ವವ್ರೇ ಪಿತಾ ಮೇ ಪರಮಮಸ್ತ್ರಂ ನಾರಾಯಣಂ ತತಃ ॥ ೧೦೨ ॥

ಆ ಪೂಜೆಯನ್ನು ಸ್ವತಃ ಸ್ವೀಕರಿಸಿ ಭಗವಂತನು ನನ್ನ ತಂದೆಗೆ ವರವನ್ನು ನೀಡಿದನು. ನನ್ನ ತಂದೆಯು ಶ್ರೇಷ್ಠವಾದ ನಾರಾಯಣಾಸ್ತ್ರವನ್ನು ವರವಾಗಿ ಬೇಡಿದರು.

ಅಥೈನಮಬ್ರವೀದ್ ರಾಜನ್ ಭಗವಾನ್ ದೇವಸತ್ತಮಃ ।
ಭವಿತಾ ತ್ವತ್ಸಮೋ ನಾನ್ಯಃ ಕಶ್ಚಿದ್ಯುಧಿ ನರಃ ಕ್ವಚಿತ್ ॥ ೧೦೩ ॥

ಎಲೈ ರಾಜನೇ, ದೇವಶ್ರೇಷ್ಠನಾದ ಭಗವಂತನು ಆಗ ನನ್ನ ತಂದೆಯನ್ನು ಕುರಿತು ಯುದ್ಧದಲ್ಲಿ ಬೇರೆ ಯಾವ ಮನುಷ್ಯನೂ ನಿನಗೆ ಸಮಾನನಾಗುವುದಿಲ್ಲ ಎಂದು ಹೇಳಿದನು.

ನ ತ್ವಿದಂ ಸಹಸಾ ಬ್ರಹ್ಮನ್ ಪ್ರಯೋಕ್ತವ್ಯಂ ಕಥಂಚನ ।
ನ ಹ್ಯೇತದಸ್ತ್ರಮನ್ಯತ್ರ ವಧಾಚ್ಛತ್ರೋರ್ನಿವರ್ತತೇ ॥ ೧೦೪ ॥

ಎಲೈ ಬ್ರಾಹ್ಮಣನೇ, ಇದನ್ನು ಇದಕ್ಕಿದ್ದಂತೆಯೇ ಪ್ರಯೋಗಿಸಬಾರದು. ಈ ಅಸ್ತ್ರವು ಶತ್ರುವಿನ ವಧೆಯನ್ನು ಮಾಡದೆ ಹಿಂದೆ ಬರುವುದಿಲ್ಲ.

ನ ಚೈತಚ್ಛಕ್ಯತೇ ಜ್ಞಾತುಂ ಕೋ ನ ವಧ್ಯೇದಿತಿ ಪ್ರಭೋ ।
ಅವಧ್ಯಮಪಿ ಹನ್ಯಾದ್ಧಿ ತಸ್ಮಾನ್ನೈತತ್ ಪ್ರಯೋಜಯೇತ್ ॥ ೧೦೫ ॥

ಎಲೈ ಪ್ರಭುವೇ, ಈ ಅಸ್ತ್ರವು ಯಾರನ್ನು ವಧಿಸೀತು ಎಂದು ತಿಳಿಯಲು ಸಾಧ್ಯವಿಲ್ಲ. ಇದು ಅವಧ್ಯರಾದವರನ್ನೂ ಕೊಂದೀತು. (ಆದ್ದರಿಂದ ಇದನ್ನು ಸುಮ್ಮನೆ ಪ್ರಯೋಗಿಸಬಾರದು).

ವಧಃ ಸಂಖೇ ದ್ರವಶ್ಚೈವ ಶಸ್ತ್ರಾಣಾಂ ಚ ವಿಸರ್ಜನಮ್ ।
ಪ್ರಯಾಚನಂ ಚ ಶತ್ರೂಣಾಂ ಗಮನಂ ಶರಣಸ್ಯ ಚ ॥ ೧೦೬ ॥

ಏತೇ ಪ್ರಶಮನೇ ಯೋಗಾ ಮಹಾಸ್ತ್ರಸ್ಯ ಪರಂತಪ ।
ಸರ್ವಥಾ ಪೀಡಿತೋ ಹಿ ಸ್ಯಾದವಧ್ಯಾನ್ ಪೀಡಯನ್ ರಣೇ॥ ೧೦೭॥

ಶತ್ರುಗಳ ವಧೆ, ರಣರಂಗದಿಂದ ಓಡುವುದು, ಶಸ್ತ್ರವನ್ನು ತ್ಯಾಗ ಮಾಡುವುದು, ಅಸ್ತ್ರವನ್ನು ಬೇಡುವುದು, ಶತ್ರುವಿಗೆ ಶರಣಾಗುವುದು - ಇವು ಈ ಮಹಾಸ್ತ್ರದ ಉಪಶಮನಕ್ಕೆ ಉಪಾಯಗಳು. ಅವಧ್ಯರಾದವರನ್ನು ಪೀಡಿಸಿದರೆ ರಣರಂಗದಲ್ಲಿ ಈ ಅಸ್ತ್ರವು ಪ್ರಯೋಗ ಮಾಡುವವನನ್ನೇ ಸರ್ವಥಾ ಪೀಡಿಸುವುದು (ಎಂದು ಹೇಳಿದನು).

ತಜ್ಜಗ್ರಾಹ ಪಿತಾ ಮಹ್ಯಮಬ್ರವೀಚ್ಚೈವ ಸ ಪ್ರಭುಃ ।
ತ್ವಂ ವರ್ಷಿಷ್ಯಸಿ ದಿವ್ಯಾನಿ ಶಸ್ತ್ರವರ್ಷಾಣ್ಯನೇಕಶಃ ।
ಅನೇನಾಸ್ತ್ರೇಣ ಸಂಗ್ರಾಮೇ ತೇಜಸಾ ಚ ಜ್ವಲಿಷ್ಯಸಿ ॥ ೧೦೮ ॥

ಅದನ್ನು ನನ್ನ ತಂದೆಯು ತೆಗೆದುಕೊಂಡರು. ಆಗ ಪ್ರಭುವಾದ ನಾರಾಯಣನು, ನೀನು ಈ ಅಸ್ತ್ರದ ಸಾಮರ್ಥ್ಯದಿಂದ ಅನೇಕ ದಿವ್ಯಾಸ್ತ್ರಗಳ ವರ್ಷವನ್ನು ಉಂಟುಮಾಡುವಿ. ರಣರಂಗದಲ್ಲಿ ತೇಜಸ್ಸಿನಿಂದ ಜ್ವಲಿಸುವಿ ಎಂದು ಹೇಳಿದನು.

ಏವಮುಕ್ತ್ವಾ ಸ ಭಗವಾನ್ ದಿವಮಾಚಕ್ರಮೇ ಪ್ರಭುಃ ।
ಏತನ್ನಾರಾಯಣಾದಸ್ತ್ರಂ ತತ್ ಪ್ರಾಪ್ತಂ ಮಮ ಬಂಧುನಾ ॥ ೧೦೯ ॥

ಹೀಗೆ ಹೇಳಿ ಭಗವಂತನೂ, ಪ್ರಭುವೂ ಆದ ನಾರಾಯಣನು ಸ್ವರ್ಗಕ್ಕೆ ಹೊರಟು ಹೋದನು. ಈ ಅಸ್ತ್ರವು ನಾರಾಯಣನಿಂದ ನನ್ನ ತಂದೆಗೆ ಬಂದಿತು.

ತೇನಾಹಂ ಪಾಂಡವಾಂಶ್ಚೈವ ಪಾಂಚಾಲಾನ್ ಮತ್ಸ್ಯಕೇಕಯಾನ್ ।
ವಿದ್ರಾವಯಿಷ್ಯಾಮಿ ರಣೇ ಶಚೀಪತಿರಿವಾಸುರಾನ್ ॥ ೧೧೦ ॥

ಆ ಅಸ್ತ್ರದಿಂದ ನಾನು ಶಚೀಪತಿಯಾದ ಇಂದ್ರನು ದಾನವರನ್ನು ಓಡಿಸಿದಂತೆ, ಪಾಂಡವರನ್ನೂ, ಪಾಂಚಾಲರನ್ನೂ, ಮತ್ಸ್ಯ- ಕೇಕಯರನ್ನೂ ರಣರಂಗದಿಂದ ಓಡಿಸುವೆನು.

ಯಥಾ ಯಥಾಹಮಿಚ್ಛೇಯಂ ತಥಾ ಭೂತ್ವಾ ಶರಾ ಮಮ ।
ನಿಪತೇಯುಃ ಸಪತ್ನೇಷು ಏಕ್ರಮತ್ಸ್ವಪಿ ಭಾರತ ॥ ೧೧೧ ॥

ಎಲೈ ಭಾರತನೇ, ನಾನು ಹೇಗೆ ಹೇಗೆ ಬಯಸುತ್ತೇನೆಯೋ ಬಾಣಗಳು ಅಂತಹ ಆಕಾರವನ್ನು ತಳೆದು, ಶತ್ರುಗಳು ಪರಾಕ್ರಮವನ್ನು ಮಾಡುತ್ತಿದ್ದರೂ ಅವರ ಮೇಲೆ ಬೀಳುವವು.

ಯಥೇಷ್ಟಮಶ್ಮವರ್ಷೇಣ ಪ್ರವರ್ಷಿಷ್ಯೇ ರಣೇ ಸ್ಥಿತಃ ।
ಅಯೋಮುಖೈಶ್ಚ ವಿಹಗೈರ್ದ್ರಾವಯಿಷ್ಯೇ ಮಹಾರಥಾನ್ ।
ಪರಶ್ವಧಾಂಶ್ಚ ವಿವಿಧಾನ್ ಪ್ರಸ್ರಕ್ಷ್ಯೇಽಹಮಸಂಶಯಮ್ ॥ ೧೧೨ ॥

ನಾನು ನನ್ನ ಮನಸ್ಸಿಗೆ ಬಂದಂತೆ ರಣರಂಗದಲ್ಲಿ ನಿಂತು ಕಲ್ಲಿನ ಮಳೆಯನ್ನು ಸುರಿಸುವೆನು. ಕಬ್ಬಿಣದ ಮುಖವುಳ್ಳ ಪಕ್ಷಿಗಳಿಂದ ಮಹಾರಥರನ್ನು ಓಡಿಸುವೆನು. ವಿವಿಧವಾದ ಪರಶ್ವಧಗಳನ್ನು ನಾನು ನಿಸ್ಸಂಶಯವಾಗಿ ಸೃಷ್ಟಿಸುವೆನು.

ಸೋಽಹಂ ನಾರಾಯಣಾಸ್ತ್ರೇಣ ಮಹತಾ ಶತ್ರುತಾಪನ ।
ಶತ್ರೂನ್ ವಿಧ್ವಂಸಯಿಷ್ಯಾಮಿ ಕದರ್ಥೀಕೃತ್ಯ ಪಾಂಡವಾನ್ ॥ ೧೧೩ ॥

ಎಲೈ ಶತ್ರುತಾಪನನೇ, ಅಂತಹ ನಾನು ಶ್ರೇಷ್ಠವಾದ ನಾರಾಯಣಾಸ್ತ್ರದಿಂದ ಪಾಂಡವರನ್ನು ತೃಣೀಕರಿಸಿ ಶತ್ರುಗಳನ್ನು ಧ್ವಂಸಗೊಳಿಸುವೆನು.

ಮಿತ್ರಬ್ರಹ್ಮಗುರುದ್ವೇಷೀ ಜಾಲ್ಮಕಃ ಸುವಿಗರ್ಹಿತಃ ।
ಪಾಂಚಾಲಾಪಸದಶ್ಚಾದ್ಯ ನ ಮೇ ಜೀವನ್ ವಿಮೋಕ್ಷ್ಯತೇ ॥ ೧೧೪ ॥

ಮಿತ್ರ-ಬ್ರಹ್ಮ-ಗುರು ದ್ವೇಷಿಯೂ, ಕ್ಷುಲ್ಲಕನೂ, ಅತ್ಯಂತ ನಿಂದನೀಯನೂ ಆದ ಪಾಂಚಾಲಾಪಸದನು ಈ ದಿನ ನನ್ನಿಂದ ಜೀವಸಹಿತನಾಗಿ ಬಿಡುಗಡೆಯನ್ನು ಹೊಂದುವುದಿಲ್ಲ (ಎಂದು ಹೇಳಿದನು).

ತಚ್ಛ್ರುತ್ವಾ ದ್ರೋಣಪುತ್ರಸ್ಯ ಪರ್ಯವರ್ತತ ವಾಹಿನೀ ।
ತತಃ ಸರ್ವೇ ಮಹಾಶಂಖಾನ್ ದಧ್ಮುಃ ಪುರುಷಸತ್ತಮಾಃ ॥ ೧೧೫ ॥

ಸಂಜಯ– ದ್ರೋಣಪುತ್ರರಾದ ಅಶ್ವತ್ಥಾಮರ ಆ ಮಾತುಗಳನ್ನು ಕೇಳಿ ಸೈನ್ಯವು ಹಿಂದಿರುಗಿತು. ಆಗ ಎಲ್ಲ ಪುರುಷಶ್ರೇಷ್ಠರೂ ಮಹಾಶಂಖಗಳನ್ನು ಊದಿದರು.

ಭೇರೀಶ್ಚಾಭ್ಯಹನನ್ ಹೃಷ್ಟಾ ಡಿಂಡಿಮಾಂಶ್ಚ ಸಹಸ್ರಶಃ ।
ತಥಾ ನನಾದ ವಸುಧಾ ಖುರನೇಮಿಪ್ರಪೀಡಿತಾ ।
ಸ ಶಬ್ದಸ್ತುಮುಲಃ ಖಂ ದ್ಯಾಂ ಪೃಥಿವೀಂ ಚ ವ್ಯನಾದಯತ್ ॥ ೧೧೬॥

ಸಂತೋಷಗೊಂಡು ಸೈನಿಕರು ಭೇರಿಗಳನ್ನೂ ಮತ್ತು ಡಿಂಡಿಮಗಳನ್ನೂ ಬಾರಿಸಿದರು. ಹಾಗೆಯೇ ಅಶ್ವಗಳ ಖುರಗಳಿಂದಲೂ, ರಥದ ಚಕ್ರಗಳಿಂದಲೂ ಪೀಡಿತವಾದ ಭೂಮಿಯು ಶಬ್ದವನ್ನುಂಟು ಮಾಡಿತು. ತೀವ್ರವಾದ ಆ ಶಬ್ದವು ಆಕಾಶದಲ್ಲಿಯೂ, ಅಂತರಿಕ್ಷದಲ್ಲಿಯೂ ಮತ್ತು ಭೂಮಿಯಲ್ಲಿಯೂ ಪ್ರತಿಧ್ವನಿಸಿತು.

ತಂ ಶಬ್ದಂ ಪಾಂಡವಾಃ ಶ್ರುತ್ವಾ ಪರ್ಜನ್ಯನಿನದೋಪಮಮ್ ।
ಸಮೇತ್ಯ ರಥಿನಾಂ ಶ್ರೇಷ್ಠಾಃ ಸಹಿತಾಃ ಸನ್ನ್ಯಮಂತ್ರಯನ್ ॥ ೧೧೭ ॥

ಪಾಂಡವರು ಪರ್ಜನ್ಯಘೋಷದಂತಿದ್ದ ಆ ಶಬ್ದವನ್ನು ಕೇಳಿ ರಥಿಶ್ರೇಷ್ಠರಾದ ಅವರು ಒಟ್ಟಾಗಿ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

ತಥೋಕ್ತ್ವಾ ದ್ರೋಣಪುತ್ರೋಽಪಿ ತದೋಪಸ್ಪೃಶ್ಯ ಭಾರತ ।
ಪ್ರಾದುಶ್ಚಕಾರ ತದ್ ದಿವ್ಯಮಸ್ತ್ರಂ ನಾರಾಯಣಂ ತದಾ ॥ ೧೧೮ ॥

ಎಲೈ ಭಾರತನೇ, ಆಗ ದ್ರೋಣಪುತ್ರರಾದ ಅಶ್ವತ್ಥಾಮರು ಆ ರೀತಿಯಲ್ಲಿ ಮಾತನಾಡಿ, ನೀರನ್ನು ಮುಟ್ಟಿ ಶುಚಿಯಾಗಿ ದಿವ್ಯವಾದ ನಾರಾಯಣಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಸಪ್ತಸಪ್ತತ್ಯಧಿಕಶತತಮೋಽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆಂಟನೆಯ ಅಧ್ಯಾಯ

ಕೌರವಸೇನೆಯ ದೊಡ್ಡ ಶಬ್ದವನ್ನು ಕೇಳಿ ಯುಧಿಷ್ಠಿರನ ಪ್ರಶ್ನೆ.
ಅರ್ಜುನನಿಂದ ಕಾರಣನಿರೂಪಣೆ ಮತ್ತು ದ್ರೋಣರ
ವಧೆಯನ್ನು ಉಪೇಕ್ಷಿಸುದುದಕ್ಕೆ ಆತ್ಮನಿಂದೆ.

ಸಂಜಯಃ

ಪ್ರಾದುರ್ಭೂತೇ ತತಸ್ತಸ್ಮಿನ್ನಸ್ತ್ರೇ ನಾರಾಯಣೇ ತದಾ ।
ಪ್ರಾವಾತ್ ಸುಪ್ರಹಿತೋ ವಾಯುರನಭ್ರೇ ಸ್ತನಯಿತ್ನುಮಾನ್ ॥ ೧ ॥

ಸಂಜಯ– ನಾರಾಯಣಾಸ್ತ್ರವು ಪ್ರಾದುರ್ಭಾವಗೊಳಿಸಲ್ಪಡುತ್ತಿರಲು ಆಗ ಮೋಡವಿಲ್ಲದ ಆಕಾಶದಲ್ಲಿ ಗುಡುಗುಗಳಿಂದ ಕೂಡಿದ ಚಂಡಮಾರುತವು ಬೀಸಿತು.

ಚಚಾಲ ಪೃಥಿವೀ ಚಾಪಿ ಚುಕ್ಷುಭೇ ಚ ಮಹೋದಧಿಃ ।
ಪ್ರತಿಸ್ರೋತಃ ಪ್ರವೃತ್ತಾಶ್ಚ ಗಂತುಂ ತತ್ರ ಸಮುದ್ರಗಾಃ ॥ ೨ ॥

ಭೂಮಿಯು ನಡುಗಿತು. ಸಾಗರವು ಕ್ಷೋಭೆಗೊಂಡಿತು. ಸಮುದ್ರಗಾಮಿನಿಗಳಾದ ನದಿಗಳು ಪ್ರವಾಹಕ್ಕೆ ವಿರುದ್ಧವಾಗಿ ಹರಿಯಲು ಪ್ರಾರಂಭಿಸಿದವು.

ಶಿಖರಾಣಿ ವ್ಯದೀರ್ಯಂತ ಗಿರೀಣಾಂ ತತ್ರ ಭಾರತ ।
ಅಪಸವ್ಯಂ ಮೃಗಾಶ್ಚೈವ ಪಾಂಡುಪುತ್ರಾನ್ ಪ್ರಚಕ್ರಿರೇ ॥ ೩ ॥

ಎಲೈ ಭಾರತನೇ, ಪರ್ವತದ ಶಿಖರಗಳು ಬಿರಿದವು. ಮೃಗಗಳು ಪಾಂಡುಪುತ್ರರಿಗೆ ಅಪಸವ್ಯದಲ್ಲಿ ಬಂದವು.

ತಮಸಾ ಚಾವಕೀರ್ಯಂತ ಸೂರ್ಯಶ್ಚ ಕಲುಷೋऽಭವತ್ ।
ಸಂಪತಂತಿ ಚ ಭೂತಾನಿ ಕ್ರವ್ಯಾದಾನಿ ಪ್ರಹೃಷ್ಟವತ್ ॥ ೪ ॥

ಕತ್ತಲೆಯು ಹಬ್ಬಿತು. ಸೂರ್ಯನು ಮಂಕಾದನು. ಮಾಂಸಾಹಾರಿ ಪ್ರಾಣಿಗಳು ಸಂತೋಷದಿಂದ ಓಡಾಡಿದವು.

ದೇವದಾನವಗಂಧರ್ವಾಸ್ತ್ರಸ್ತಾ ಆಸನ್ ಏಶಾಂಪತೇ ।
ಕಥಂಕಥಾಭವತ್ ತೀವ್ರಾ ದೃಷ್ಟ್ವಾ ತದ್ ವ್ಯಾಕುಲಂ ಮಹತ್ ॥ ೫ ॥

ಎಲೈ ರಾಜನೇ, ದೇವ-ದಾನವ-ಗಂಧರ್ವರು ಹೆದರಿದರು. ಆ ದೊಡ್ಡ ವ್ಯತ್ಯಾಸವನ್ನು ನೋಡಿ ಜನರು ಏನು ಮಾಡುವುದು, ಏನು ಮಾಡುವುದು ಎಂದು ತೀವ್ರವಾಗಿ ಮಾತನಾಡಿದರು.

ವ್ಯಥಿತಾಃ ಸರ್ವರಾಜಾನಸ್ತದಾ ಹ್ಯಾಸನ್ ವಿಚೇತಸಃ ।
ತದ್ ದೃಷ್ಟ್ವಾ ಘೋರರೂಪಂ ತು ದ್ರೌಣೇರಸ್ತ್ರಂ ಭಯಾವಹಮ್ ॥೬॥

ಅಶ್ವತ್ಥಾಮರ ಘೋರವೂ, ಭಯಂಕರವೂ ಆದ ಆ ಅಸ್ತ್ರವನ್ನು ನೋಡಿ ಎಲ್ಲ ರಾಜರೂ ತಮ್ಮ ವಿವೇಕವನ್ನು ಕಳೆದುಕೊಂಡು ವ್ಯಥೆಯಿಂದ ಕೂಡಿದರು.

ಧೃತರಾಷ್ಟ್ರಃ

ನಿವರ್ತಿತೇಷು ಸೈನ್ಯೇಷು ದ್ರೋಣಪುತ್ರೇಣ ಸಂಯುಗೇ ।
ಭೃಶಂ ಶೋಕಾಭಿತಪ್ತೇನ ಪಿತುರ್ವಧಮಮೃಷ್ಯತಾ ॥ ೭ ॥

ಕುರೂನಾಪತತೋ ದೃಷ್ಟ್ವಾ ಧೃಷ್ಟದ್ಯುಮ್ನಸ್ಯ ರಕ್ಷಣೇ ।
ಕೋ ಮಂತ್ರಃ ಪಾಂಡವೇಷ್ವಾಸೀತ್ ತನ್ಮಮಾಚಕ್ಷ್ವ ಸಂಜಯ ॥ ೮ ॥

ಧೃತರಾಷ್ಟ್ರ– ತಂದೆಯ ವಧೆಯನ್ನು ಕೇಳಿ ಸಹಿಸದೆ ಶೋಕಾಭಿತಕ್ತರಾಗಿ ದ್ರೋಣಪುತ್ರರಿಂದ ರಣರಂಗದಲ್ಲಿ ಸೈನ್ಯಗಳು ಹಿಂದಿರುಗಿಸಲ್ಪಡುತ್ತಿರಲು ಕುರುಗಳು ತಮ್ಮ ಮೇಲೆ ಎರಗುವುದನ್ನು ನೋಡಿದ ಪಾಂಡವರು ಧೃಷ್ಟದ್ಯುಮ್ನನನ್ನು ರಕ್ಷಿಸುವ ವಿಷಯದಲ್ಲಿ ಏನು ಮಂತ್ರಾಲೋಚನೆಯನ್ನು ಮಾಡಿದರೆಂದು ಎಲೈ ಸಂಜಯನೇ, ನನಗೆ ಹೇಳು.

ಸಂಜಯಃ

ಪ್ರಾಗೇವ ವಿದ್ರುತಾನ್ ದೃಷ್ಟ್ವಾ ಧಾರ್ತರಾಷ್ಟ್ರಾನ್ ಯುಧಿಷ್ಠಿರಃ ।
ಪುನಶ್ಚ ತುಮುಲಂ ಶಬ್ದಂ ಶ್ರುತ್ವಾರ್ಜುನಮಭಾಷತ ॥ ೯ ॥

ಸಂಜಯ– ಮೊದಲೇ ಓಡಿಹೋಗಿದ್ದ ಕೌರವ ಸೇನೆಯು ಪುನಃ ದೊಡ್ಡ ಶಬ್ದವನ್ನು ಮಾಡುವುದನ್ನು ಕೇಳಿದ ಯುಧಿಷ್ಠಿರನು ಅರ್ಜುನನನ್ನು ಕುರಿತು ಹೇಳಿದನು.

ಆಚಾರ್ಯೇ ನಿಹತೇ ದ್ರೋಣೇ ಧೃಷ್ಟದ್ಯುಮ್ನೇನ ಸಂಯುಗೇ ।
ನಿಹತೇ ವಜ್ರಹಸ್ತೇನ ಯಥಾ ವೃತ್ರೇ ಮಹಾಸುರೇ ॥ ೧೦ ॥

ನಾಶಂಸಂತ ಜಯಂ ಯುದ್ಧೇ ದೀನಾತ್ಮಾನೋ ಧನಂಜಯ ।
ಆತ್ಮತ್ರಾಣೇ ಮತಿಂ ಕೃತ್ವಾ ಪ್ರಾದ್ರವನ್ ಕುರವೋ ಯಥಾ ॥ ೧೧ ॥

ಎಲೈ ಧನಂಜಯನೇ, ದ್ರೋಣಾಚಾರ್ಯರು ರಣರಂಗದಲ್ಲಿ ವಜ್ರಾಯುಧಧಾರಿಯಾದ ಇಂದ್ರನಿಂದ ವೃತ್ರಾಸುರನು ಹತನಾದಂತೆ ಧೃಷ್ಟದ್ಯುಮ್ನನಿಂದ ಹತರಾಗುತ್ತಿರಲು, ದೀನಮನಸ್ಸುಳ್ಳ ಕೌರವರು ಯುದ್ಧದಲ್ಲಿ ಜಯವನ್ನು ಆಶಿಸಲಿಲ್ಲ. ಅವರು ತಮ್ಮನ್ನು ರಕ್ಷಿಸಿಕೊಳ್ಳುವುದರಲ್ಲಿ ಆಸಕ್ತರಾಗಿ ಸಿಕ್ಕಿದ ದಾರಿಯಲ್ಲಿ ಓಡಿಹೋದರು.

ಕೇಚಿದ್ ಭ್ರಾಂತೈ ರಥೈಸ್ತೂರ್ಣಂ ನಿಹತೈಃ ಪಾರ್ಷ್ಣಿಯಂತೃಭಿಃ ।
ವಿಪತಾಕಧ್ವಜಚ್ಛತ್ರೈಃ ಪಾರ್ಥಿವಾಃ ಶೀರ್ಣಕೂಬರೈಃ ॥ ೧೨ ॥

ಭಗ್ನನೀಡೈರಾಕುಲಾಶ್ವೈರಾರುಹ್ಯಾನ್ಯೇ ವಿಚೇತಸಃ ।
ಭೀತಾಃ ಪಾದೈರ್ಹಯಾನ್ ಕೇಚಿತ್ ತ್ವರಯಂತಃ ಸ್ವಯಂ ರಥೈಃ ॥
ಯುಗಚಕ್ರಾಕ್ಷಭಗ್ನೈಶ್ಚ ದ್ರುತಾಃ ಕೇಚಿದ್ ಭಯಾತುರಾಃ ॥ ೧೩ ॥

ಕೆಲವರು ಪಾರ್ಷ್ಣಿಸಾರಥಿಗಳು ಮೃತರಾದ ಪತಾಕೆ-ಧ್ವಜ-ಚಕ್ರಗಳಿಂದ ಹೀನವಾದ, ಕೂಬರಗಳು ಭಗ್ನವಾದ, ಪೀಠಗಳು ಭಗ್ನವಾದ ರಥಗಳಿಂದ ದಿಗ್ಭ್ರಾಂತರಾಗಿ ಓಡಿಹೋದರು. ಇನ್ನು ಕೆಲವರು ಅಶ್ವಗಳನ್ನು ಏರಿ ವಿಚೇತಸರಾಗಿ ಓಡಿಹೋದರು. ಭೀತರಾದ ಕೆಲವರು ಅಶ್ವಗಳನ್ನು ತಮ್ಮ ಪಾದಗಳಿಂದಲೇ ಪ್ರಚೋದಿಸುತ್ತಾ ಶೀಘ್ರವಾಗಿ ಓಡಿಹೋದರು. ಭಯಾತುರರಾದ ಕೆಲವರು ನೊಗ, ಚಕ್ರ ಮತ್ತು ಅಕ್ಷಗಳು ಮುರಿದ ರಥದಲ್ಲಿ ಓಡಿದರು.

ಗಜಸ್ಕಂಧೇಷು ಸಂಸ್ಥಿತಾ ನಾರಾಚೈಶ್ಚಲಿತಾಸನಾಃ ।
ಶರಾರ್ತೈರ್ವಿದ್ರುತೈರ್ನಾಗೈರ್ಹೃತಾಃ ಕೇಚಿದ್ ದಿಶೋ ದಶ ॥ ೧೪ ॥

ಆನೆಗಳ ಕೊರಳುಗಳಲ್ಲಿ ಗಟ್ಟಿಯಾಗಿ ಕುಳಿತ ಕೆಲವರು ನಾರಾಚಗಳಿಂದ ಹೊಡೆಯಲ್ಪಟ್ಟು (ನಾರಾಚಗಳಿಂದ ತಮ್ಮ ಆಸನಗಳು ನಾಶಗೊಳ್ಳುತ್ತಿರಲು) ಬಾಣಗಳಿಂದ ಪೀಡಿತವಾದ ಗಜಗಳಿಂದ ದಿಕ್ಕು-ದಿಕ್ಕುಗಳಿಗೆ ಎಳೆದೊಯ್ಯಲ್ಪಟ್ಟರು.

ವಿಶಸ್ತ್ರಕವಚಾಶ್ಚಾನ್ಯೇ ವಾಹನೇಭ್ಯಃ ಕ್ಷಿತಿಂ ಗತಾಃ ।
ಸಂಛಿನ್ನಾ ನೇಮಿಷು ಗತಾ ಮೃದಿತಾಶ್ಚ ಹಯದ್ವಿಪೈಃ ॥ ೧೫ ॥

ಇನ್ನು ಕೆಲವರು ಶಸ್ತ್ರ-ಕವಚಗಳಿಲ್ಲದೆ ತಮ್ಮ ವಾಹನಗಳಿಂದ ಕೆಳಗೆ ಹಾರಿ ಓಡುತ್ತಾ, ರಥಚಕ್ರಗಳಿಂದಲೂ, ಗಜಾಶ್ವಗಳಿಂದಲೂ ಮರ್ದಿತರಾದರು.

ಕ್ರೋಶಂತಸ್ತಾತ ಪುತ್ರೇತಿ ಪಲಾಯಂತೋऽಪರೇ ಭಯಾತ್ ।
ನಾಭಿಜಾನಂತಿ ಚಾನ್ಯೋನ್ಯಂ ಕಶ್ಮಲಾಭಿಹತೌಜಸಃ ॥ ೧೬ ॥

ಎಲೈ ತಂದೆಯೇ, ಎಲೈ ಪುತ್ರನೇ ಎಂದು ಕಿರುಚುತ್ತಾ ಭಯದಿಂದ ಓಡುತ್ತಿದ್ದ ಕೆಲವರು ವಿಷಾದದಿಂದ ತಮ್ಮ ಪರಾಕ್ರಮವನ್ನು ಕಳೆದುಕೊಂಡು ಓಡುತ್ತಿರುವವರು ಯಾರೆಂದು ಪರಸ್ಪರವಾಗಿ ತಿಳಿಯಲಿಲ್ಲ.

ಪುತ್ರಾನ್ ಪಿತ್ರೂನ್ ಸಖೀನ್ ಭ್ರಾತ್ರೂನ್ ಸಮಾರೋಪ್ಯ ದೃಢಕ್ಷತಾನ್ ।
ಜಲೇನ ಕ್ಲೇದಯಂತ್ಯನ್ಯೇ ವಿಮುಚ್ಯ ಕವಚಾನ್ಯಪಿ ॥ ೧೭ ॥

ಬಹಳ ಗಾಯಗೊಂಡ ಪುತ್ರರನ್ನೂ, ಪಿತೃಗಳನ್ನೂ, ಸ್ನೇಹಿತರನ್ನೂ, ಸಹೋದರರನ್ನೂ ತೊಡೆಯ ಮೇಲಿಟ್ಟುಕೊಂಡು ಅವರ ಕವಚಗಳನ್ನು ತೆಗೆದುಕೊಂಡು ಇನ್ನು ಕೆಲವರು ನೀರನ್ನು ಚುಮುಕಿಸುತ್ತಿದ್ದರು.

ಅವಸ್ಥಾಂ ತಾದೃಶೀಂ ಪ್ರಾಪ್ಯ ಹತೇ ದ್ರೋಣೇ ದ್ರುತಂ ಬಲಮ್ ।
ಪುನರಾವರ್ತಿತಂ ಕೇನ ಯದಿ ಜಾನಾಸಿ ಶಂಸ ಮೇ ॥ ೧೮ ॥

ದ್ರೋಣರು ಹತರಾದಾಗ ಅಂತಹ ಅವಸ್ಥೆಯನ್ನು ಹೊಂದಿ ಓಡಿಹೋದ ಸೈನ್ಯವು ಯಾರಿಂದ ಹಿಂದಿರುಗಿಸಲ್ಪಟ್ಟಿತು ಎಂದು ನಿನಗೆ ತಿಳಿದಿದ್ದರೆ ನನಗೆ ಹೇಳು.

ಹಯಾನಾಂ ಹೇಷತಾಂ ಶಬ್ದಃ ಕುಂಜರಾಣಾಂ ಚ ಬೃಂಹತಾಮ್ ।
ರಥನೇಮಿಸ್ವನಶ್ಚಾತ್ರ ವಿಮಿಶ್ರಃ ಶ್ರೂಯತೇ ಮಹಾನ್ ॥ ೧೯ ॥

ಏತೇ ಶಬ್ದಾ ಭೃಶಂ ತೀವ್ರಾಃ ಪ್ರವೃತ್ತಾಃ ಕುರುಸಾಗರೇ ।
ಮುಹುರ್ಮುಹುರುದೀರ್ಯಂತಃ ಕಂಪಯಂತಿ ಹಿ ಮಾಮಕಾನ್ ॥

ಹೇಷಾರವವನ್ನು ಮಾಡುವ ಅಶ್ವಗಳ, ಬೃಂಹಣವನ್ನು ಮಾಡುವ ಗಜಗಳ, ಚಲಿಸುವ ರಥದ ಚಕ್ರಗಳ ನಾದಗಳು ಮಿಶ್ರಿತವಾಗಿ ದೊಡ್ಡದಾಗಿ ಕೇಳಿಬರುತ್ತಿವೆ. ಕೌರವ ಸೈನ್ಯಸಾಗರದಲ್ಲಿ ಉಂಟಾಗಿರುವ ಅತ್ಯಂತ ತೀವ್ರವಾದ ಈ ಶಬ್ದಗಳು ಪುನಃ ಪುನಃ ಕೇಳಿಬರುತ್ತಾ ನನ್ನ ಯೋಧರನ್ನು ನಡುಗಿಸುತ್ತಿವೆ.

ಯ ಏಷ ತುಮುಲಃ ಶಬ್ದಃ ಶ್ರೂಯತೇ ಲೋಮಹರ್ಷಣಃ ।
ಸೇಂದ್ರಾನಪ್ಯೇಷ ಲೋಕಾಂಸ್ತ್ರೀನ್ ಭಂಜ್ಯಾದಿತಿ ಮತಿರ್ಮಮ ॥ ೨೧ ॥

ಕೇಳಿಬರುತ್ತಿರುವ ರೋಮಾಂಚಕಾರಿಯಾದ ಈ ತೀವ್ರವಾದ ಶಬ್ದವು ಇಂದ್ರನಿಂದ ಸಹಿತವಾದ ಮೂರುಲೋಕಗಳನ್ನೂ ಭಗ್ನಗೊಳಿಸೀತು ಎಂದು ನನ್ನ ಅಭಿಪ್ರಾಯ.

ಮನ್ಯೇ ವಜ್ರಧರಸ್ಯೈಷ ನಿನಾದೋ ಭೈರವಸ್ವನಃ ।
ದ್ರೋಣೇ ಹತೇ ಕೌರವಾರ್ಥಂ ವ್ಯಕ್ತಮಭ್ಯೇತಿ ವಾಸವಃ ॥ ೨೨ ॥

ಈ ಭೈರವನಾದವು ಇಂದ್ರನದೆಂದು ನಾನು ತಿಳಿಯುತ್ತೇನೆ. ದ್ರೋಣರು ಹತರಾದುದರಿಂದ ಕೌರವರ ಸಲುವಾಗಿ ಇಂದ್ರನೇ ಸ್ಪಷ್ಟವಾಗಿ ಬರುತ್ತಿದ್ದಾನೆ.

ಪ್ರಹೃಷ್ಟರೋಮಕೂಪಾಃ ಸ್ಮ ಸಂವಿಗ್ನರಥಕುಂಜರಾಃ ।
ಧನಂಜಯ ಗುರುಂ ಶ್ರುತ್ವಾ ತತ್ರ ನಾದಂ ಸುಭೀಷಣಮ್ ॥ ೨೩ ॥

ಕ ಏಷ ಕೌರವಾನ್ ದೀರ್ಣಾನವಸ್ಥಾಪ್ಯ ಮಹಾರಥಃ ।
ನಿವರ್ತಯತಿ ಯುದ್ಧಾರ್ಥಂ ಮೃಧೇ ದೇವೇಶ್ವರೋ ಯಥಾ ॥ ೨೪ ॥

ಎಲೈ ಅರ್ಜುನನೇ, ಭಯಂಕರವಾದ ಈ ದೊಡ್ಡದಾದ ನಾದವನ್ನು ಕೇಳಿ ನನ್ನ ರೋಮಕೂಪಗಳು ಹೆದರಿಕೆಯಿಂದ ರೋಮಾಂಚಗೊಂಡಿವೆ. ರಥದ ಅಶ್ವಗಳು ಮತ್ತು ಗಜಗಳು ಭಯದಿಂದ ಕೂಡಿವೆ. ಯಾವ ಮಹಾರಥನು ಭಗ್ನವಾದ ಈ ಕೌರವರನ್ನು ದೇವೇಶ್ವರನಂತೆ ಯುದ್ಧಕ್ಕೆ ಹಿಂದಿರುಗಿಸಿ ರಣರಂಗದಲ್ಲಿ ಬರುತ್ತಿದ್ದಾನೆ?

ಅರ್ಜುನಃ

ಉದ್ಯಮ್ಯಾತ್ಮಾನಮುಗ್ರಾಯ ಕರ್ಮಣೇ ಧೈರ್ಯಮಾಸ್ಥಿತಾಃ ।
ಧಮಂತಿ ಕೌರವಾಃ ಶಂಖಾನ್ಯಸ್ಯ ವೀರ್ಯಮುಪಾಶ್ರಿತಾಃ ॥ ೨೫ ॥

ಯತ್ರ ತೇ ಸಂಶಯೋ ರಾಜನ್ನಸ್ತಶಸ್ತ್ರೇ ಗುರೌ ಹತೇ ।
ಧಾರ್ತರಾಷ್ಟ್ರಾನವಸ್ಥಾಪ್ಯ ಕ ಏಷ ನದತೀತಿ ಹ ॥ ೨೬ ॥

ಹ್ರೀಮಂತಂ ತಂ ಮಹಾಬಾಹುಂ ಮತ್ತದ್ವಿರದಗಾಮಿನಮ್ ।
ವ್ಯಾಖ್ಯಾಸ್ಯಾಮ್ಯುಗ್ರಕರ್ಮಾಣಂ ಕುರೂಣಾಮಭಯಂಕರಮ್ ॥ ೨೭ ॥

ಅರ್ಜುನ– ತಮ್ಮನ್ನು ಉಗ್ರವಾದ ಕಾರ್ಯವನ್ನು ಮಾಡುವುದಕ್ಕೆ ಸಿದ್ಧರನ್ನಾಗಿ ಮಾಡಿಕೊಂಡು ಧೈರ್ಯವನ್ನು ಅವಲಂಬಿಸಿ, ಯಾರ ಪರಾಕ್ರಮವನ್ನು ಆಶ್ರಯಿಸಿ ಕೌರವರು ಶಂಖವನ್ನು ಊದುತ್ತಿದ್ದಾರೆಯೋ, ಎಲೈ ರಾಜನೇ, ಶಸ್ತ್ರವನ್ನು ಹಿಡಿದ ಗುರುಗಳು ಹತರಾದ ಮೇಲೆ ಕೌರವರನ್ನು ನಿಲ್ಲಿಸಿ ಯಾವನು ಗರ್ಜನೆಯನ್ನು ಮಾಡುತ್ತಿದ್ದಾನೆ ಎಂಬ ನಿನ್ನ ಸಂಶಯವು ಎಲ್ಲಿದೆಯೋ ಅಂತಹ ಮತ್ತಗಜಗಾಮಿಯಾದ, ನಾಚಿಕೆಯಿಂದ ಕೂಡಿದ, ಉಗ್ರಕರ್ಮನಾದ, ಕುರುಗಳಿಗೆ ಅಭಯಂಕರನಾದ ಪುರುಷನನ್ನು ನಿನಗೆ ಹೇಳುವೆನು.

ಯಸ್ಮಿನ್ ಜಾತೇ ದದೌ ದ್ರೋಣೋ ಗವಾಂ ದಶಶತಂ ಧನಮ್ ।
ಬ್ರಾಹ್ಮಣೇಭ್ಯೋ ಮಹಾರ್ಹೇಭ್ಯಃ ಸೋಽಶ್ವತ್ಥಾಮೈಷ ಗರ್ಜತಿ ॥ ೨೮ ॥

ಯಾರು ಜನಿಸಿದಾಗ ದ್ರೋಣರು ಬಹಳ ಯೋಗ್ಯರಾದ ಬ್ರಾಹ್ಮಣರಿಗೆ ಸಾವಿರ ಗೋವುಗಳನ್ನು ಮತ್ತು ಧನವನ್ನು ನೀಡಿದರೋ ಅಂತಹ ಅಶ್ವತ್ಥಾಮರು ಗರ್ಜಿಸುತ್ತಿದ್ದಾರೆ.

ಜಾತಮಾತ್ರೇಣ ವೀರೇಣ ಯೇನೋಚ್ಚೈಃಶ್ರವಸಾ ಇವ ।
ಹೇಷತಾ ಕಂಪಿತಾ ಭೂಮಿರ್ಲೋಕಾಶ್ಚ ಸಕಲಾಸ್ತ್ರಯಃ ॥ ೨೯ ॥

ತಚ್ಛ್ರುತ್ವಾಂತರ್ಹಿತಂ ಭೂತಂ ನಾಮ ಚಾಸ್ಯಾಕರೋತ್ತದಾ ।
ಅಶ್ವತ್ಥಾಮೇತಿ ಸೋಽದ್ಯೈಷ ಶೂರೋ ನದತಿ ಪಾಂಡವ ॥ ೩೦ ॥

ಯಾವ ವೀರರಾದ ಅವರು ಜನಿಸಿದ ತಕ್ಷಣವೇ ಉಚ್ಚೈಃಶ್ರವಸ್ಸಿನಂತೆ ಹೇಷಾರವವನ್ನು ಮಾಡಿ ಭೂಕಂಪವನ್ನು ಮತ್ತು ಮೂರುಲೋಕಗಳ ಕಂಪವನ್ನು ಉಂಟುಮಾಡಿದರೋ, ಯಾವ ಆ ಶಬ್ದವನ್ನು ಕೇಳಿ ಅದೃಶ್ಯವಾದ ಭೂತಗಳು ಅಶ್ವತ್ಥಾಮರೆಂದು ನಾಮಕರಣ ಮಾಡಿದವೋ, ಎಲೈ ಪಾಂಡವನೇ, ಅಂತಹ ಶೂರರಾದ ಅಶ್ವತ್ಥಾಮರು ಈ ದಿನ ಗರ್ಜಿಸುತ್ತಿದ್ದಾರೆ.

ಯೋಽದ್ಯಾನಾಥ ಇವಾಕ್ರಮ್ಯ ಪಾರ್ಷತೇನ ಹತಸ್ತಥಾ ।
ಕರ್ಮಣಾ ಸುನೃಶಂಸೇನ ತಸ್ಯ ನಾಥೋ ವ್ಯವಸ್ಥಿತಃ ॥ ೩೧ ॥

ಯಾವ ದ್ರೋಣರು ಅನಾಥರಂತೆ ಧೃಷ್ಟದ್ಯುಮ್ನನಿಂದ ಆಕ್ರಮಿಸಲ್ಪಟ್ಟು ಹತರಾದರೋ ಅಂತಹ ಅತ್ಯಂತ ಕ್ರೂರಕರ್ಮದ ಫಲವಾಗಿ ಈ ದಿನ ನಾಥರಾದ ಅಶ್ವತ್ಥಾಮರು ಬರುತ್ತಿದ್ದಾರೆ.

ಗುರುಂ ಮೇ ಯತ್ರ ಪಾಂಚಾಲ್ಯಃ ಕೇಶಪಕ್ಷೇ ಪರಾಮೃಶತ್ ।
ತನ್ನ ಜಾತು ಕ್ಷಮೇದ್ ದ್ರೌಣಿರ್ಜಾನನ್ ಪೌರುಷಮಾತ್ಮನಃ ॥ ೩೨ ॥

ನನ್ನ ಗುರುಗಳಾದ ದ್ರೋಣರನ್ನು ಪಾಂಚಾಲ್ಯನಾದ ಧೃಷ್ಟದ್ಯುಮ್ನನು ಕೇಶಪಕ್ಷಗಳಲ್ಲಿ ಏನು ಹಿಡಿದನೋ ಅದನ್ನು, ತಮ್ಮ ಪರಾಕ್ರಮವನ್ನು ತಿಳಿದ ಅಶ್ವತ್ಥಾಮರು ಎಂದೂ ಕ್ಷಮಿಸಲಾರರು.

ಉಪಚೀರ್ಣೋ ಗುರುರ್ಮಿಥ್ಯಾ ಭವತಾ ರಾಜ್ಯಕಾರಣಾತ್ ।
ಧರ್ಮಜ್ಞೇನ ಸತಾ ನಾಮ ಸೋಽಧರ್ಮಃ ಸುಮಹಾನ್ ಕೃತಃ ॥೩೩॥

ರಾಜ್ಯದ ಪ್ರಾಪ್ತಿಯ ಕಾರಣದಿಂದ ನೀನು ಗುರುಗಳಿಗೆ ಮಿಥ್ಯಾವಚನವನ್ನು ಮಾತನಾಡಿದೆ. ಧರ್ಮಜ್ಞನಾದ ನೀನು ದೊಡ್ಡ ಅಧರ್ಮವನ್ನು ಮಾಡಿದೆ.

ಸರ್ವಧರ್ಮೋಪಪನ್ನೋಽಯಂ ಮಮ ಶಿಷ್ಯಶ್ಚ ಪಾಂಡವಃ ।
ನಾಯಂ ವಕ್ಷ್ಯತಿ ಮಿಥ್ಯೇತಿ ಪ್ರತ್ಯಯಂ ಕೃತವಾಂಸ್ತ್ವಯಿ ॥ ೩೪ ॥

ಗುರುಗಳು, ಧರ್ಮರಾಜನು ಸರ್ವಧರ್ಮೋಪಪನ್ನನಾದವನು. ನನ್ನ ಶಿಷ್ಯನಾದವನು. ಅವನು ಸುಳ್ಳನ್ನು ಹೇಳುವುದಿಲ್ಲ ಎಂದು ನಿನ್ನನ್ನು ನಂಬಿದರು.

ಸ ಸತ್ಯಕಂಚುಕಂ ನಾಮ ಪ್ರವಿಷ್ಟೇನ ತತೋಽನೃತಮ್ ।
ಆಚಾರ್ಯ ಉಕ್ತೋ ಭವತಾ ಹತಃ ಕುಂಜರ ಇತ್ಯುತ ॥ ೩೫ ॥

ಅಂತಹ ನೀನು ಆಚಾರ್ಯರನ್ನು ಕುರಿತು ಸತ್ಯದ ಕಂಚುಕವನ್ನು ಧರಿಸಿದ ಅನೃತ(ಸುಳ್ಳು)ವನ್ನು ಹೇಳಿದೆ. ಹತಃ ಕುಂಜರಃ ಎಂದೂ ಹೇಳಿದೆ.

ತತಃ ಶಸ್ತ್ರಂ ಸಮುತ್ಸೃಜ್ಯ ನಿರ್ಮಮೋ ಗತಚೇತನಃ ।
ಆಸೀತ್ ಸ ವಿಹ್ವಲೋ ರಾಜನ್ ಯಥಾ ದೃಷ್ಟ್ವಾಯಾ ವಿಭುಃ ॥ ೩೬॥

ಎಲೈ ರಾಜನೇ, ಆಗ ಶಸ್ತ್ರವನ್ನು ಬಿಸುಟು, ಅಹಂಕಾರವನ್ನು ತೊರೆದು, ವಿಹ್ವಲರಾಗಿ, ಲೋಕಜ್ಞಾನವನ್ನು ತೊರೆದು ಅವರು ಕುಳಿತರು. ಗುರುಗಳಾದ ಅವರು ಹಾಗೆ ಕುಳಿತಿದುದನ್ನು ನೀನು ನೋಡಿದ್ದೀಯೆ?

ಸ ತು ಶೋಕೇನ ಚಾವಿಷ್ಟೋ ವಿಮುಖಃ ಪುತ್ರವತ್ಸಲಃ ।
ಶಾಶ್ವತಂ ಧರ್ಮಮುತ್ಸೃಜ್ಯ ಗುರುಃ ಶಿಷ್ಯೇಣ ಘಾತಿತಃ ॥ ೩೭ ॥

ಪುತ್ರವತ್ಸಲರಾದ ಅವರು ಶೋಕದಿಂದ ಕೂಡಿ ಯುದ್ಧವಿಮುಖರಾದರು. ಶಿಷ್ಯನಾದ ಧೃಷ್ಟದ್ಯುಮ್ನನು ಶಾಶ್ವತವಾದ ಧರ್ಮವನ್ನು ತ್ಯಜಿಸಿ ಅವರನ್ನು ಕೊಂದನು.

ನ್ಯಸ್ತಶಸ್ತ್ರಮಧರ್ಮೇಣ ಘಾತಯಿತ್ವಾ ಗುರುಂ ಭವಾನ್ ।
ರಕ್ಷತ್ವಿದಾನೀಂ ಸಾಮಾತ್ಯೋ ಯದಿ ಶಕ್ನೋಷಿ ಪಾರ್ಷತಮ್ ॥ ೩೮ ॥

ಶಸ್ತ್ರಸಂನ್ಯಾಸವನ್ನು ಮಾಡಿದ ಗುರುಗಳನ್ನು ಅಧರ್ಮದಿಂದ ಕೊಲ್ಲಿಸಿದ ನೀನು ಈಗ ನಿನ್ನ ಮಂತ್ರಿಗಳ ಜೊತೆಯಲ್ಲಿ ಸಾಧ್ಯವಾದರೆ ಧೃಷ್ಟದ್ಯುಮ್ನನನ್ನು ರಕ್ಷಿಸುವವನಾಗು.

ಗ್ರಸ್ತಮಾಚಾರ್ಯಪುತ್ರೇಣ ಕ್ರುದ್ಧೇನ ಹತಬಂಧುನಾ ।
ಸರ್ವೇ ವಯಂ ಪರಿತ್ರಾತುಂ ನ ಶಕ್ಷ್ಯಾಮೋಽದ್ಯ ಪಾರ್ಷತಮ್ ॥೩೯॥

ತಮ್ಮ ತಂದೆಯನ್ನು ಕಳೆದುಕೊಂಡು ಕ್ರುದ್ಧರಾದ, ಆಚಾರ್ಯಪುತ್ರರಾದ ಅಶ್ವತ್ಥಾಮರಿಂದ ಗ್ರಸ್ತನಾದ ಧೃಷ್ಟದ್ಯುಮ್ನನನ್ನು ನಾವೆಲ್ಲರೂ ಸೇರಿದರೂ ರಕ್ಷಿಸಲಾರೆವು.

ಸೌಹಾರ್ದಂ ಸರ್ವಭೂತೇಷು ಯಃ ಕರೋತ್ಯತಿಮಾತ್ರಶಃ ।
ಸೋಽದ್ಯ ಕೇಶಗ್ರಹಂ ಶ್ರುತ್ವಾ ಪಿತುರ್ಧಕ್ಷ್ಯತಿ ನೋ ರಣೇ ॥ ೪೦ ॥

ಯಾವ ಅಶ್ವತ್ಥಾಮರು ಎಲ್ಲ ಭೂತಗಳಲ್ಲಿಯೂ ಅತ್ಯಂತ ಸೌಹಾರ್ದವನ್ನು ಮಾಡುತ್ತಾರೆಯೋ ಅಂತಹ ಅವರು ತನ್ನ ತಂದೆಯು ಕೇಶಗ್ರಹವನ್ನು ಹೊಂದಿದರೆಂದು ತಿಳಿದು ಈ ದಿನ ನಮ್ಮನ್ನು ಯುದ್ಧದಲ್ಲಿ ದಹಿಸುವರು.

ವಿಕ್ರೋಶಮಾನೇ ಹಿ ಮಯಿ ಭೃಶಮಾಚಾರ್ಯಗೃದ್ಧಿನಿ ।
ಅವಕೀರ್ಯ ಸ್ವಧರ್ಮಂ ಹಿ ಶಿಷ್ಯೇಣ ನಿಹತೋ ಗುರುಃ ॥ ೪೧ ॥

ಆಚಾರ್ಯರ ಮೇಲೆ ಭಕ್ತಿಯುಳ್ಳ ನಾನು ತೀವ್ರವಾಗಿ ಕಿರುಚುತ್ತಿದ್ದರೂ ತನ್ನ ಕ್ಷತ್ರಿಯಧರ್ಮವನ್ನು ಚೆಲ್ಲಿ ಶಿಷ್ಯನಾದ ಧೃಷ್ಟದ್ಯುಮ್ನನು ಗುರುಗಳನ್ನು ಕೊಂದನು.

ಯದಾ ಗತಂ ವಯೋ ಭೂಯಃ ಶಿಷ್ಟಮಲ್ಪತರಂ ಚ ನಃ ।
ತಸ್ಯೇದಾನೀಂ ವಿಕಾರೋಽಯಮಧರ್ಮೋ ಯತ್ಕೃತೋ ಮಹಾನ್ ॥

ನಮ್ಮ ಆಯುಸ್ಸಿನಲ್ಲಿ ಬಹಳ ಭಾಗವು ಕಳೆದುಹೋಗಿ ಸ್ವಲ್ಪವೇ ಭಾಗ ಉಳಿದಿದೆ. ನಾವು ಮಾಡಿದ ಈ ದೊಡ್ಡ ಅಧರ್ಮವು ಉಳಿದ ಅಲ್ಪವಾದ ಆಯುಸ್ಸಿಗೆ ವಿರುದ್ಧವಾದುದು (ವಿರುದ್ಧವಾದ ಆಕಾರವನ್ನು ಹೊಂದಿದುದು).

ಪಿತೇವ ನಿತ್ಯಂ ಸೌಹಾರ್ದಾತ್ ಪಿತೇವ ಸ ಹಿ ಧರ್ಮತಃ ।
ಸೋಽಲ್ಪಕಾಲಸ್ಯ ರಾಜ್ಯಸ್ಯ ಕಾರಣಾನ್ನಿಹತೋ ಗುರುಃ ॥ ೪೩ ॥

ದ್ರೋಣರು ತಮ್ಮ ಸೌಹಾರ್ದದಿಂದ ನಮಗೆ ತಂದೆಯಂತೆ ಇದ್ದರು. ಧರ್ಮದಿಂದಲೂ ಸಹ ಅವರು ತಂದೆಯಂತಿದ್ದರು. ಅಂತಹವರನ್ನು ಅಲ್ಪಕಾಲದ ರಾಜ್ಯದ ಕಾರಣದಿಂದ ಕೊಲ್ಲಿಸಲಾಯಿತು.

ಧೃತರಾಷ್ಟ್ರೇಣ ಭೀಷ್ಮಾಯ ದ್ರೋಣಾಯ ಚ ವಿಶಾಂಪತೇ ।
ವಿಸೃಷ್ಟಾ ಪೃಥಿವೀ ಸರ್ವಾ ಸಹ ಪುತ್ರೈಶ್ಚ ತತ್ಪರೈಃ ॥ ೪೪ ॥

ಎಲೈ ರಾಜನೇ, ಧೃತರಾಷ್ಟ್ರನು ಭೀಷ್ಮರಿಗೆ ಮತ್ತು ದ್ರೋಣರಿಗೆ ತನ್ನ ಪುತ್ರನಿಂದ ಸಹಿತವಾದ ಎಲ್ಲಾ ಭೂಮಿಯನ್ನು ಕೊಟ್ಟಿದ್ದನು.

ಸ ಪ್ರಾಪ್ಯ ತಾದೃಶೀಂ ವೃತ್ತಿಂ ಸತ್ಕೃತಃ ಸತತಂ ಪರೈಃ ।
ಅವೃಣೀತ ಸದಾ ಪುತ್ರಾನ್ಮಮೇವಾಭ್ಯಧಿಕಂ ಗುರುಃ ॥ ೪೫ ॥

ದ್ರೋಣರು ಅಂತಹ ವೃತ್ತಿಯನ್ನು ಪಡೆದು, ಸತತವಾಗಿ ಪರರಿಂದ ಸತ್ಕೃತರಾಗಿ ಯಾವಾಗಲೂ ಅವರ ಪುತ್ರರಿಗಿಂತ ನನ್ನನ್ನೇ ಅಧಿಕವಾಗಿ ಪ್ರೀತಿಸುತ್ತಿದ್ದರು.

ಅಕ್ಷೀಯಮಾಣೋ ನ್ಯಸ್ತಾಸ್ತ್ರ ದ್ವಾಕ್ಯೇನಾಹವೇ ಹತಃ ।
ನ ತ್ವೇನಂ ಯುದ್ಧ್ಯಮಾನಂ ವೈ ಹನ್ಯಾದಪಿ ಶತಕ್ರತುಃ ॥ ೪೬ ॥

ತಮ್ಮ ಬಲವನ್ನು ಎಂದೂ ಕಳೆದುಕೊಳ್ಳದ ಅವರು ಶಸ್ತ್ರಸಂನ್ಯಾಸವನ್ನು ಮಾಡಿ ನಿನ್ನ ಮಾತಿನಿಂದ ರಣರಂಗದಲ್ಲಿ ಹತರಾದರು. ಅವರು ಯುದ್ಧವನ್ನೇ ಮಾಡಿರುತ್ತಿದ್ದರೆ ಇಂದ್ರನೂ ಅವರನ್ನು ಕೊಲ್ಲಲು ಸಾಧ್ಯವಿರುತ್ತಿರಲಿಲ್ಲ.

ತಸ್ಯಾಚಾರ್ಯಸ್ಯ ವೃದ್ಧಸ್ಯ ದ್ರೋಹೋ ನಿತ್ಯೋಪಕಾರಿಣಃ ।
ಕೃತೋ ಹ್ಯನಾರ್ಯೈರಸ್ಮಾಭೀ ರಾಜ್ಯಾರ್ಥೇ ಲಘುಬುದ್ಧಿಭಿಃ ॥ ೪೭ ॥

ರಾಜ್ಯದ ಆಸೆಯಿಂದ ಅಲ್ಪಬುದ್ಧಿಯುಳ್ಳವರಾದ, ಅನಾರ್ಯರೂ ಆದ ನಾವು ನಿತ್ಯವೂ ನಮಗೆ ಉಪಕಾರವನ್ನು ಮಾಡುವ, ವೃದ್ಧರಾದ ಆಚಾರ್ಯರಿಗೆ ದ್ರೋಹವನ್ನು ಮಾಡಿದ್ದೇವೆ.

ಪುತ್ರಾನ್ ಭ್ರಾತೄನ್ ಪಿತೄನ್ ದಾರಾನ್ ಜೀವಿತಂ ಚೈವ ವಾಸವಿಃ ।
ತ್ಯಜೇತ್ ಸರ್ವಂ ಮಮ ಪ್ರೇಮ್ಣಾ ಜಾನಾತ್ಯೇವಂ ಹಿ ಮೇ ಗುರುಃ ॥

ಇಂದ್ರನ ಪುತ್ರನಾದ ಅರ್ಜುನನು ನನ್ನ ಮೇಲಿನ ಪ್ರೀತಿಯಿಂದ ಪುತ್ರರನ್ನೂ, ಸಹೋದರರನ್ನೂ, ಪಿತೃಗಳನ್ನೂ, ಪತಿಗಳನ್ನೂ, ಸಹೋದರರನ್ನೂ, ತನ್ನ ಜೀವಿತವನ್ನೂ ತೊರೆದಾನು ಎಂದು ನನ್ನ ಗುರುಗಳು ತಿಳಿದಿದ್ದರು.

ಸ ಮಯಾ ರಾಜ್ಯಕಾಮೇನ ಹನ್ಯಮಾನೋಽಪ್ಯುಪೇಕ್ಷಿತಃ ।
ತಸ್ಮಾದವಾಕ್ಶಿರಾ ರಾಜನ್ ಪ್ರಾಪ್ತೋಽಸ್ಮಿ ನರಕಂ ವಿಭೋ ॥ ೪೯ ॥

ಅಂತಹ ಅವರು ಹತರಾಗುತ್ತಿದ್ದಾಗ ರಾಜ್ಯದ ಆಸೆಯಿಂದ ನಾನು ಉದಾಸೀನ ಮಾಡಿದೆ. ಆದ್ದರಿಂದ ಎಲೈ ರಾಜನೇ, ವಿಭುವೇ, ನಾನು ತಲೆಕೆಳಗಾಗಿ ನರಕವನ್ನು ಸೇರಿದ್ದೇನೆ.

ಬ್ರಾಹ್ಮಣಂ ವೃದ್ಧಮಾಚಾರ್ಯಂ ನ್ಯಸ್ತಶಸ್ತ್ರಂ ಯಥಾ ಮುನಿಮ್ ।
ಘಾತಯಿತ್ವಾದ್ಯ ರಾಜ್ಯಾರ್ಥೇ ಮೃತಂ ಶ್ರೇಯೋ ನ ಜೀವಿತಮ್ ॥೫೦॥

ಬ್ರಾಹ್ಮಣರೂ, ವೃದ್ಧರೂ, ಆಚಾರ್ಯರೂ, ಶಸ್ತ್ರಸಂನ್ಯಾಸವನ್ನು ಮಾಡಿದವರೂ, ಋಷಿಗಳಂತೆ ಇದ್ದವರೂ ಆದ ದ್ರೋಣರನ್ನು ರಾಜ್ಯದ ಸಲುವಾಗಿ ಕೊಲ್ಲಿಸಿ ಬದುಕಿರುವುದಕ್ಕಿಂತ ಮರಣವೇ ಶ್ರೇಯಸ್ಕರವಾದುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಅಷ್ಟಸಪ್ತತ್ಯಧಿಕಶತತಮೋಽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ಭೀಮಸೇನನಿಂದ ಅರ್ಜುನನನ್ನು ನಿಂದಿಸಿ ಧರ್ಮರಾಜನ ಸಮಾಶ್ವಾಸನೆ. ಧೃಷ್ಟದ್ಯುಮ್ನನಿಂದ ತನ್ನ ಸಮರ್ಥನೆ.

ಸಂಜಯಃ

ಅರ್ಜುನಸ್ಯ ವಚಃ ಶ್ರುತ್ವಾ ನೋಚುಸ್ತತ್ರ ಮಹಾರಥಾಃ ।
ಅಪ್ರಿಯಂ ವಾ ಪ್ರಿಯಂ ವಾಪಿ ಮಹಾರಾಜ ಧನಂಜಯಮ್ ॥ ೧ ॥

ಸಂಜಯ– ಎಲೈ ಮಹಾರಾಜನೇ, ಅರ್ಜುನನ ಮಾತುಗಳನ್ನು ಕೇಳಿ ಅಲ್ಲಿ ಮಹಾರಥರು ಅರ್ಜುನನನ್ನು ಕುರಿತು ಪ್ರಿಯವಾಗಲೀ, ಅಪ್ರಿಯವಾಗಲೀ ಏನನ್ನೂ ಮಾತನಾಡಲಿಲ್ಲ.

ತತಃ ಕ್ರುದ್ಧೋ ಮಹಾಬಾಹುರ್ಭೀಮಸೇನೋऽಭ್ಯಭಾಷತ ।
ಉತ್ಸ್ಮಯನ್ನಿವ ಕೌಂತೇಯಮರ್ಜುನಂ ಭರತರ್ಷಭ ॥ ೨ ॥

ಆಗ ಎಲೈ ಭರತರ್ಷಭನೇ, ಕೋಪಗೊಂಡ ಮಹಾಬಾಹುವಾದ ಭೀಮಸೇನನು ಅರ್ಜುನನನ್ನು ನೋಡಿ ನಗುತ್ತಾ ಮಾತನಾಡಿದನು.

ಮುನಿರ್ಯಥಾऽರಣ್ಯಗತೋ ಭಾಷಸೇ ಧರ್ಮಸಂಹಿತಮ್ ।
ನ್ಯಸ್ತದಂಡೋ ಯಥಾ ಪಾರ್ಥ ಬ್ರಾಹ್ಮಣಃ ಸಂಶಿತವ್ರತಃ ॥ ೩ ॥

ಎಲೈ ಪಾರ್ಥನೇ, ಅರಣ್ಯಗತನಾದ ಮುನಿಯಂತೆ, ಸಂನ್ಯಾಸವನ್ನು ತೆಗೆದುಕೊಂಡ ವ್ರತಶೀಲನಾದ ಬ್ರಾಹ್ಮಣನಂತೆ, ಧರ್ಮದ ಮಾತುಗಳನ್ನು ಆಡುತ್ತಿದ್ದೀಯೆ.

ಕ್ಷತಾತ್ ತ್ರಾತಾ ಕ್ಷತಾಜ್ಜೀವನ್ ಕ್ಷಾಂತಃಸ್ತ್ರೀಷ್ವಪಿ ಸಾಧುಷು ।
ಕ್ಷತ್ರಿಯಃ ಕ್ಷಿತಿಮಾಪ್ನೋತಿ ಕ್ಷಿಪ್ರಂ ಧರ್ಮಂ ಯಶಃ ಶ್ರಿಯಮ್ ॥ ೪ ॥

ತನ್ನ ಸೈನ್ಯವನ್ನು ಗಾಯದಿಂದ ರಕ್ಷಿಸುತ್ತಾನೆ. ಪರಸೈನ್ಯದಲ್ಲಿ ಗಾಯವನ್ನು ಮಾಡುತ್ತಾನೆ. ಸ್ತ್ರೀಯರಲ್ಲಿ ಮತ್ತು ಸಜ್ಜನರಲ್ಲಿ ಸಹನೆಯನ್ನು ರಕ್ಷಿಸುತ್ತಾನೆ ಎಂಬ ವ್ಯುತ್ಪತ್ತಿಯಿಂದ ಕ್ಷತ್ರಿಯ ಎಂಬ ಶಬ್ದವು ಹೇಳಲ್ಪಡುತ್ತದೆ. (ಕ್ಷತದಿಂದ ಜೀವಿಸುತ್ತಾನೆ ಎಂಬುದು ಒಟ್ಟು ಅಭಿಪ್ರಾಯ).

ಸ ಭವಾನ್ ಕ್ಷತ್ರಿಯಗುಣೈರ್ಯುಕ್ತಃ ಸರ್ವೈಃ ಕುಲೋದ್ವಹಃ ।
ಅವಿಪಶ್ಚಿತ್ ಯಥಾ ವಾಕ್ಯಂ ವ್ಯಾಹರನ್ ನಾದ್ಯ ಶೋಭಸೇ ॥ ೫ ॥

ಅಂತಹ ಕ್ಷತ್ರಿಯನು ಶೀಘ್ರವಾಗಿ ಭೂಮಿಯನ್ನೂ, ಧರ್ಮವನ್ನೂ, ಯಶಸ್ಸನ್ನೂ ಮತ್ತು ಸಂಪತ್ತನ್ನೂ ಪಡೆಯುತ್ತಾನೆ. ನೀನು ಅಂತಹ ಎಲ್ಲ ಕ್ಷತ್ರಿಯಗುಣಗಳಿಂದ ಯುಕ್ತನಾಗಿ ನಮ್ಮ ಕುಲೋದ್ಧಾರಕನಾಗಿ, ಈ ದಿನ ಅಜ್ಞಾನಿಯಂತೆ ಮಾತನಾಡುವುದು ಶೋಭಿಸುವುದಿಲ್ಲ.

ಪರಾಕ್ರಮಸ್ತೇ ಕೌಂತೇಯ ಶಕ್ರಸ್ಯೇವ ಶಚೀಪತೇಃ ।
ನ ಚಾತಿವರ್ತಸೇ ಧರ್ಮಂ ವೇಲಾಮಿವ ಮಹೋದಧಿಃ ॥ ೬ ॥

ಎಲೈ ಕೌಂತೇಯನೇ, ನಿನ್ನ ಪರಾಕ್ರಮವು ಶಚೀಪತಿಯಾದ ಇಂದ್ರನ ಪರಾಕ್ರಮದಂತಿದೆ. ಸಮುದ್ರವು ತೀರವನ್ನು ಮೀರದಂತೆ ನೀನು ಧರ್ಮವನ್ನು ಮೀರುವವನಲ್ಲ.

ನ ಪೂಜಯೇತ್ತ್ವಾ ಕೋನ್ವದ್ಯ ಯತ್ ತ್ರಯೋದಶವಾರ್ಷಿಕಮ್ ।
ಅಮರ್ಷಂ ಪೃಷ್ಠತಃ ಕೃತ್ವಾ ಧರ್ಮಮೇವಾಭಿಕಾಂಕ್ಷಸೇ ॥ ೭ ॥

ಹದಿಮೂರು ವರ್ಷಗಳ ಕಾಲ ಅನುಭವಿಸಿದ ಕ್ಲೇಶವನ್ನು ಹಿಂದೆ ಮಾಡಿ ಧರ್ಮವನ್ನೇ ಬಯಸುವ ನಿನ್ನನ್ನು ಯಾವನೂ ಪೂಜಿಸುವುದಿಲ್ಲ.

ದಿಷ್ಟ್ಯಾ ತಾತ ಮನಸ್ತೇऽದ್ಯ ಸ್ವಧರ್ಮಮನುವರ್ತತೇ ।
ಅನೃಶಂಸ್ಯೇ ಚ ತೇ ದಿಷ್ಟ್ಯಾ ಬುದ್ಧಿಃ ಸತತಮಚ್ಯುತ ॥ ೮ ॥

ಎಲೈ ಪ್ರೀತಿಪಾತ್ರನೇ, ದೇವರ ದಯದಿಂದ ಈ ದಿನ ನಿನ್ನ ಮನಸ್ಸು ಧರ್ಮವನ್ನು ಅನುಸರಿಸುತ್ತಿದೆ. ದೇವರ ದಯದಿಂದಲೇ ನಿನ್ನ ಬುದ್ಧಿಯು ಎಲೈ ಅಚ್ಯುತನೇ, ಯಾವಾಗಲೂ ಮಾರ್ದವದಲ್ಲಿ ರತವಾಗಿದೆ.

ಯತ್ತು ಧರ್ಮಪ್ರವತ್ತಸ್ಯ ಹೃತಂ ರಾಜ್ಯಮಧರ್ಮತಃ ।
ದ್ರೌಪದೀ ಚ ಪರಾಮೃಷ್ಟಾ ಸಭಾಮಾನೀಯ ಶತ್ರುಭಿಃ ॥ ೯ ॥

ವನಂ ಪ್ರವ್ರಾಜಿತಾಶ್ಚಾಸ್ಮ ವಲ್ಕಲಾಜಿನವಾಸಸಃ ।
ಅನರ್ಹಮಾಣಾಸ್ತಂ ಭಾವಂ ತ್ರಯೋದಶ ಸಮಾಃ ಪರೈಃ ॥ ೧೦ ॥

ಏತಾನ್ಯಮರ್ಷಸ್ಥಾನಾನಿ ಮರ್ಷಿತಾನಿ ತ್ವಯಾऽನಘ ।
ಕ್ಷತ್ರಧರ್ಮಪ್ರಸಕ್ತೇನ ಸರ್ವಮೇತದನುಷ್ಠಿತಮ್ ॥ ೧೧ ॥

ಧರ್ಮನಿಷ್ಠರಾದ ನಾವು ಅಧರ್ಮದಿಂದ ಏನು ರಾಜ್ಯವನ್ನು ಕಳೆದುಕೊಂಡೆವೋ, ಶತ್ರುಗಳು ಸಭೆಗೆ ಎಳೆದುತಂದು ದ್ರೌಪದಿಯನ್ನು ಏನು ಅವಮಾನಗೊಳಿಸಿದರೋ, ಅರಣ್ಯವಾಸಕ್ಕೆ ಅನರ್ಹರಾದ ನಾವು ಕೃಷ್ಣಾಜಿನ-ನಾರುಮಡಿಗಳನ್ನುಟ್ಟು ಹದಿಮೂರು ವರ್ಷಗಳ ಕಾಲ ಶತ್ರುಗಳಿಂದ ಏನು ಕಾಡಿಗೆ ಕಳುಹಿಸಲ್ಪಟ್ಟೆವೋ, ಎಲೈ ಅನಘನೇ, ಅಂತಹ ರೋಷದ ಕಾರಣಗಳನ್ನು ನೀನು ಸಹಿಸಿದೆ. ಕ್ಷತ್ರಿಯಧರ್ಮನಿರತನಾದ ನೀನು ಇದೆಲ್ಲವನ್ನೂ ಅನುಷ್ಠಾನ ಮಾಡಿದೆ.

ತಮಧರ್ಮಮಪಾಕ್ರಷ್ಟುಮಾರಬ್ಧಃ ಸಹಿತಸ್ತ್ವಯಾ ।
ಸಾನುಬಂಧಾನ್ ಹನಿಷ್ಯಾಮಿ ಕ್ಷುದ್ರಾನ್ ರಾಜ್ಯಹರಾನಹಮ್ ॥ ೧೨ ॥

ತ್ವಯಾ ತು ಕಥಿತಂ ಪೂರ್ವಂ ಯುದ್ಧಾಯಾಭ್ಯಾಗತಾ ವಯಮ್ ।
ಘಟಾಮಶ್ಚ ಯಥಾಶಕ್ತಿ ತ್ವಂ ತು ನೋऽದ್ಯ ಜುಗುಪ್ಸಸೇ ॥ ೧೩ ॥

ಆ ಅಧರ್ಮವನ್ನು ಅಳಿಸಿಹಾಕಲು ನಿನ್ನಿಂದ ಸಹಿತನಾಗಿ ನಾನು ಕ್ಷುದ್ರರಾದ ನಮ್ಮ ರಾಜ್ಯಾಪಹಾರಕರಾದ ಶತ್ರುಗಳನ್ನು ಅವರ ಪರಿವಾರ ಸಹಿತರಾಗಿ ಕೊಲ್ಲುವೆನು ಎಂದು ನೀನೇ ಮೊದಲು ಹೇಳಿದೆ. ಅದಕ್ಕಾಗಿ ನಾವು ಯುದ್ಧಕ್ಕೆ ಬಂದು ನಮ್ಮ ಶಕ್ತಿ ಇದ್ದಷ್ಟು ಪ್ರಯತ್ನಪಡುತ್ತಿದ್ದೇವೆ. ಆದರೆ ಈ ದಿನ ನೀನು ನಮ್ಮನ್ನು ರಕ್ಷಿಸಲು ಬಯಸುತ್ತಿಲ್ಲ.

ಸ್ವಧರ್ಮಂ ನೇಚ್ಛಸೇ ಜ್ಞಾತುಂ ಮಿಥ್ಯಾ ವಚನಮೇವ ತೇ ।
ಭಯಾರ್ದಿತಾನಾಮಸ್ಮಾಕಂ ವಾಚಾ ಮರ್ಮಾಣಿ ಕೃಂತಸಿ ॥ ೧೪ ॥

ನಿನ್ನ ಧರ್ಮವನ್ನು ತಿಳಿಯಲು ನೀನು ಬಯಸುತ್ತಿಲ್ಲ. ನೀನು ಈಗ ಆಡಿದ ಮಾತುಗಳು ಸುಳ್ಳುಮಾತುಗಳು. ಭಯದಿಂದ ಪೀಡಿತರಾದ ನಮಗೆ ಅಂತಹ ಮಾತುಗಳಿಂದ ನೀನು ಮರ್ಮಸ್ಥಾನಗಳನ್ನು ಕತ್ತರಿಸುತ್ತಿದ್ದೀಯೆ.

ವಪನ್ ವ್ರಣೇ ಕ್ಷಾರಮಿವ ಕ್ಷತಾನಾಂ ಶತ್ರುಕರ್ಶನ ।
ವಿದೀರ್ಯತೇ ಮೇ ಹೃದಯಂ ತ್ವಯಾ ವಾಕ್ಯಲ್ಯಪೀಡಿತಮ್ ॥ ೧೫ ॥

ಎಲೈ ಶತ್ರುಕರ್ಶನನೇ, ಹುಣ್ಣಿನ ಮೇಲೆ ಉಪ್ಪನ್ನು ಹಾಕಿದಂತೆ ಮೊದಲೇ ಗಾಯಗೊಂಡ ನನ್ನ ಹೃದಯವು ನಿನ್ನ ವಾಗ್ಬಾಣಗಳಿಂದ ಪೀಡಿತವಾಗಿ ಬಿರಿದುಹೋಗುತ್ತಿದೆ.

ಅಧರ್ಮಮೇತದ್ ವಿಪುಲಂ ಧಾರ್ಮಿಕಃ ಸನ್ನ ಬುಧ್ಯಸೇ ।
ಯತ್ತ್ವಮಾತ್ಮಾನಮಸ್ಮಾಂಶ್ಚ ಪ್ರಶಂಸ್ಯಾನ್ ನ ಪ್ರಶಂಸಸಿ ।
ಯಃ ಕಲಾಂ ಷೋಡಶೀಂ ತ್ವತ್ತೋ ನಾರ್ಹತೇ ತಂ ಪ್ರಶಂಸಸಿ ॥ ೧೬ ॥

ಧಾರ್ಮಿಕನಾಗಿ ನೀನು ಈ ವಿಸ್ತಾರವಾದ ಅಧರ್ಮವನ್ನು ತಿಳಿಯುತ್ತಿಲ್ಲ. ಏಕೆಂದರೆ ನೀನು ಪ್ರಶಂಸೆಗೆ ಯೋಗ್ಯರಾದ ನಮ್ಮನ್ನು ಮತ್ತು ನಿನ್ನನ್ನು ಪ್ರಶಂಸಿಸುತ್ತಿಲ್ಲ. ಯಾವನು ನಿನ್ನ ಗುಣಗಳ ಹದಿನಾರನೆಯ ಒಂದು ಭಾಗಕ್ಕೆ ಯೋಗ್ಯನಲ್ಲವೋ ಅಂತಹವನನ್ನು ಪ್ರಶಂಸಿಸುತ್ತಿದ್ದೀಯೆ.

ಸ್ವಯಮೇವಾತ್ಮನೋ ವಕ್ತುಂ ನ ಯುಕ್ತಂ ಗುಣಸಂಸ್ತವಮ್ ।
ದಾರಯೇಯಂ ಮಹೀಂ ಕ್ರೋಧಾದ್ ವಿಕಿರೇಯಂ ಚ ಪರ್ವತಾನ್ ॥
ಆವಿಧ್ಯ ಚ ಗದಾಂ ಗುರ್ವೀಂ ಭೀಮಾಂ ಕಾಂಚನಮಾಲಿನೀಮ್ ।
ಗಿರಿಪ್ರಕಾಶಾನ್ ಕ್ಷಿತಿಜಾನ್ ಭಂಜೇಯಮನಿಲೋ ಯಥಾ ॥ ೧೮ ॥

ತಾನೇ ತನ್ನ ಗುಣವನ್ನು ಹೇಳಿಕೊಳ್ಳುವುದು ಯೋಗ್ಯವಲ್ಲ. ಆದರೆ ಕೋಪದಿಂದ ಹೇಳಿಕೊಳ್ಳುತ್ತೇನೆ. ನಾನು ಭೂಮಿಯನ್ನು ಸೀಳಿಯೇನು. ಪರ್ವತವನ್ನು ಒಡೆದೇನು. ನನ್ನ ಕಾಂಚನಭೂಷಿತವಾದ, ಭಯಂಕರವಾದ, ಭಾರವಾದ ಗದೆಯಿಂದ ಹೊಡೆದು ವಾಯುವಿನಂತೆ ಪರ್ವತದಂತಹ ಎತ್ತರವಾದ ವೃಕ್ಷಗಳನ್ನು ಮುರಿದೇನು.

ಸ ತ್ವಮೇವಂವಿಧಂ ಜಾನನ್ ಭ್ರಾತರಂ ಮಾಂ ನರರ್ಷಭ ।
ದ್ರೋಣಪುತ್ರಾದ್ ಭಯಂ ಕರ್ತುಂ ನಾರ್ಹಸ್ಯಮಿತವಿಕ್ರಮ ॥ ೧೯ ॥

ಎಲೈ ನರಶ್ರೇಷ್ಠನೇ, ಅಮಿತವಿಕ್ರಮನೇ, ನೀನು ಅಂತಹ ನಿನ್ನ ಸಹೋದರನಾದ ನನ್ನನ್ನು ತಿಳಿದು ದ್ರೋಣಪುತ್ರರಿಂದ ಭಯಪಡುವುದು ಯೋಗ್ಯವಲ್ಲ.

ಅಥ ವಾ ತಿಷ್ಠ ಬೀಭತ್ಸೋ ಸಹ ಸರ್ವೈರ್ನರರ್ಷಭೈಃ ।
ಅಹಮೇನಂ ಗದಾಪಾಣಿರ್ಜೇಷ್ಯಾಮ್ಯೇಕೋ ಮಹಾಹವೇ ॥ ೨೦ ॥

ಅಥವಾ ಎಲೈ ಬೀಭತ್ಸುವೇ, ಎಲ್ಲ ರಾಜರ ಜೊತೆಯಲ್ಲಿ ನೀನು ಇಲ್ಲಿಯೇ ನಿಲ್ಲು. ನಾನು ಗದೆಯನ್ನು ಹಿಡಿದು ರಣರಂಗದಲ್ಲಿ ಒಬ್ಬನೇ ಅಶ್ವತ್ಥಾಮರನ್ನು ಜಯಿಸುವೆನು (ಎಂದು ಹೇಳಿದನು).

ಸಂಜಯಃ

ತತಃ ಪಾಂಚಾಲರಾಜಸ್ಯ ಪುತ್ರಃ ಪಾರ್ಥಮಥಾಬ್ರವೀತ್ ।
ಸಂಕ್ರುದ್ಧಮಿವ ನರ್ದಂತಂ ಹಿರಣ್ಯಕಶಿಪುಂ ಹರಿಃ ॥ ೨೧ ॥

ಸಂಜಯ– ಆಗ ಪಾಂಚಾಲ ರಾಜಪುತ್ರನಾದ ಧೃಷ್ಟದ್ಯುಮ್ನನು ಹಿರಣ್ಯಕಶಿಪುವನ್ನು ನೋಡಿ ಗರ್ಜಿಸುವ ನರಹರಿಯಂತೆ ಕೋಪದಿಂದ ಅರ್ಜುನನನ್ನು ಕುರಿತು ಹೇಳಿದನು.

ಬೀಭತ್ಸೋ ವಿಪ್ರಕರ್ಮಾಣಿ ವಿದಿತಾನಿ ಮನೀಷಿಣಾಮ್ ।
ಯಾಜನಾಧ್ಯಾಪನೇ ದಾನಂ ತಥಾ ಯಜ್ಞಪ್ರತಿಗ್ರಹೌ ॥ ೨೨ ॥

ಷಷ್ಠಮಧ್ಯಯನಂ ನಾಮ ತೇಷಾಂ ಕಸ್ಮಿನ್ ಪ್ರತಿಷ್ಠಿತಃ ।
ಹತೋ ದ್ರೋಣೋ ಮಯಾ ಯತ್ ತತ್ ಕಂ ಮಾಂ ಪಾರ್ಥ ವಿಗರ್ಹಸೇ ॥ ೨೩ ॥

ಎಲೈ ಅರ್ಜುನನೇ, ವಿವೇಕಿಗಳಾದವರಿಗೆ ಬ್ರಾಹ್ಮಣರ ಕರ್ಮಗಳು ತಿಳಿದಿವೆ. ಯಾಜನ, ಅಧ್ಯಾಪನ, ದಾನ, ಯಜ್ಞ, ಪ್ರತಿಗ್ರಹ ಮತ್ತು ಆರನೆಯದಾದ ಅಧ್ಯಯನ. ನನ್ನಿಂದ ಹತರಾದ ದ್ರೋಣರು ಇವುಗಳಲ್ಲಿ ಯಾವುದರಲ್ಲಿ ಪ್ರತಿಷ್ಠಿತರಾಗಿದ್ದಾರೆ ಎಂದು, ಎಲೈ ಅರ್ಜುನನೇ, ನೀನು ನನ್ನನ್ನು ನಿಂದಿಸುತ್ತಿದ್ದೀಯೆ?

ಅಪಕ್ರಾಂತಃ ಸ್ವಧರ್ಮಾಚ್ಚ ಕ್ಷತ್ರಧರ್ಮಮುಪಾಶ್ರಿತಃ ।
ಅಮಾನುಷೇಣ ಹಂತ್ಯಸ್ಮಾನಸ್ತ್ರೇಣ ಕ್ಷುದ್ರಕರ್ಮಕೃತ್ ॥ ೨೪ ॥

ತಮ್ಮ ಧರ್ಮದಿಂದ ಚ್ಯುತರಾಗಿ, ಕ್ಷತ್ರಿಯಧರ್ಮವನ್ನು ಆಶ್ರಯಿಸಿ, ಕ್ಷುದ್ರಕರ್ಮವನ್ನು ಮಾಡುವವರಾಗಿ ಅಮಾನುಷವಾದ ಅಸ್ತ್ರಗಳಿಂದ ನಮ್ಮನ್ನು ಕೊಲ್ಲುತ್ತಿದ್ದಾರೆ.

ತಥಾ ಮಾಯಾಂ ಪ್ರಯುಂಜಾನಮಸಹ್ಯಂ ಬ್ರಾಹ್ಮಣಬ್ರುವಮ್ ।
ಮಾಯಯೈವ ನಿಹನ್ಯಾದ್ ಯೋ ನ ಯುಕ್ತಂ ಪಾರ್ಥ ತತ್ರ ಕಿಮ್ ॥

ಎಲೈ ಪಾರ್ಥನೇ, ಆ ರೀತಿಯಲ್ಲಿ ತಾನು ಬ್ರಾಹ್ಮಣ ಎಂದು ಹೇಳಿಕೊಂಡು ಸಹಿಸಲು ಅಸಾಧ್ಯವಾದ ಮಾಯೆಯನ್ನು ಸೃಷ್ಟಿಸುವ ಅವರನ್ನು ಯಾವನು ಮಾಯೆಯಿಂದಲೇ ಕೊಲ್ಲುತ್ತಾನೆಯೋ ಅದರಲ್ಲಿ ಅಯುಕ್ತವಾದುದು ಏನಿದೆ?

ತಸ್ಮಿಂಸ್ತಥಾ ಮಯಾ ಶಸ್ತೇ ಯದಿ ದ್ರೌಣಾಯನೀ ರುಷಾ ।
ಕುರುತೇ ಭೈರವಂ ನಾದಂ ತತ್ರ ಕಿಂ ಮಮ ಹೀಯತೇ ॥ ೨೬ ॥

ನಾನು ಅವರನ್ನು ಹಾಗೆ ಕೊಂದಿರುವಾಗ ದ್ರೋಣರ ಪುತ್ರರಾದ ಅಶ್ವತ್ಥಾಮರು ಭೈರವನಾದವನ್ನು ಮಾಡಿದರೆ ನನ್ನದೇನು ಹೋಗುತ್ತದೆ?

ನ ಚಾದ್ಭುತಮಿದಂ ಮನ್ಯೇ ಯದ್ ದ್ರೌಣಿಃ ಶುದ್ಧಗರ್ಜಯಾ ।
ಘಾತಯಿಷ್ಯತಿ ಕೌರವ್ಯಾನ್ ಪರಿತ್ರಾತುಮಶಕ್ನುವನ್ ॥ ೨೭ ॥

ಕೌರವ್ಯರನ್ನು ರಕ್ಷಿಸಲು ಸಮರ್ಥರಾಗದೆ ಅಶ್ವತ್ಥಾಮರು ಯುದ್ಧಗರ್ಜನೆಯನ್ನು ಮಾಡಿ ಅವರನ್ನೇ ಕೊಲ್ಲುತ್ತಿರುವುದರಲ್ಲಿ ನಾನು ಯಾವ ಅದ್ಭುತವನ್ನೂ ಕಾಣುತ್ತಿಲ್ಲ. ನಮ್ಮನ್ನು ಕೊಲ್ಲುತ್ತಿದ್ದಾರೆಂಬುದು ಬಹಳ ಅದ್ಭುತವಾದುದು.

ಯಚ್ಚ ಮಾಂ ಧಾರ್ಮಿಕೋ ಭೂತ್ವಾ ಬ್ರವೀಷಿ ಗುರುಘಾತಿನಮ್ ।
ತದರ್ಥಮಹಮುತ್ಪನ್ನಃ ಪಾಂಚಾಲ್ಯಸ್ಯ ಸುತೋಽನಲಾತ್ ॥ ೨೮ ॥

ನೀನು ಧಾರ್ಮಿಕನಾಗಿ ನನ್ನನ್ನು ಗುರುಘಾತಕನೆಂದು ಕರೆಯುವಿಯಷ್ಟೆ? ದ್ರೋಣರನ್ನು ವಧೆ ಮಾಡುವುದಕ್ಕಾಗಿಯೇ ನಾನು ಪಾಂಚಾಲರಾಜನ ಕುಮಾರನಾಗಿ ಅಗ್ನಿಯಿಂದ ಜನಿಸಿದ್ದೇನೆ.

ಯಸ್ಯ ಕಾರ್ಯಮಕಾರ್ಯಂ ವಾ ಯುದ್ಧ್ಯತಃ ಸ್ಯಾತ್ ಸಮಂ ರಣೇ ।
ತಂ ಕಥಂ ಬ್ರಾಹ್ಮಣಂ ಬ್ರೂಯಾಃ ಕ್ಷತ್ರಿಯಂ ವಾ ಧನಂಜಯ ॥ ೨೯ ॥

ಯುದ್ಧವನ್ನು ಮಾಡುವವನಿಗೆ ಕಾರ್ಯವೂ, ಅಕಾರ್ಯವೂ ಸಮವಾಗುತ್ತದೆ. ಅವನು ಕಾರ್ಯವನ್ನೂ ಮಾಡುತ್ತಾನೆ, ಅಕಾರ್ಯವನ್ನೂ ಮಾಡುತ್ತಾನೆ. ಅಂತಹವನನ್ನು ಬ್ರಾಹ್ಮಣನೆಂದು ಹೇಗೆ ಹೇಳುತ್ತೀಯೆ? ಅಥವಾ ಕ್ಷತ್ರಿಯನೆಂದು ಹೇಗೆ ಹೇಳುತ್ತೀಯೆ? (ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿರುವುದರಿಂದ ಕ್ಷತ್ರಿಯನಲ್ಲ, ಅಸ್ತ್ರದಿಂದ ಯುದ್ಧವನ್ನು

ಮಾಡುವುದರಿಂದ ಬ್ರಾಹ್ಮಣನೂ ಅಲ್ಲ. ಉಭಯಭ್ರಷ್ಟನಾದುದರಿಂದ ಪತಿತನಾದವನು. ಅವನನ್ನು ವಧೆ ಮಾಡಿದರೆ ಏನು ದೋಷ ಎಂದು ಅಭಿಪ್ರಾಯ).

ಯೋ ಹ್ಯನಸ್ತ್ರವಿದೋ ಹನ್ಯಾದ್ ಬ್ರಹ್ಮಾಸ್ತ್ರೈಃ ಕ್ರೋಧಮೂರ್ಚ್ಛಿತಃ ।
ಸರ್ವೋಪಾಯೈರ್ನ ಸ ಕಥಂ ವಧ್ಯಃ ಪುರುಷಸತ್ತಮ ॥ ೩೦ ॥

ಎಲೈ ಪುರುಷಶ್ರೇಷ್ಠನೇ, ಯಾವನು ಕ್ರೋಧಮೂರ್ಛಿತನಾಗಿ ಅಸ್ತ್ರಜ್ಞರಲ್ಲದವರನ್ನು ಬ್ರಹ್ಮಾಸ್ತ್ರಗಳಿಂದ ಕೊಲ್ಲುವನೋ ಅವನು ಸರ್ವೋಪಾಯಗಳಿಂದಲೂ ವಧ್ಯನಾಗಲು ಏಕೆ ಅರ್ಹನಾಗುವುದಿಲ್ಲ?

ವಿಧರ್ಮಿಣೋ ಧರ್ಮವಿದಿಃ ಪ್ರೋಕ್ತಂ ತೇಷಾಂ ವಿಷೋಪಮಾಃ ।
ಜಾನನ್ ಧರ್ಮಾರ್ಥತತ್ತ್ವಜ್ಞಃ ಕಿಮರ್ಜುನ ವಿಗರ್ಹಸೇ ॥ ೩೧ ॥

ಎಲೈ ಅರ್ಜುನನೇ, ಧರ್ಮಹೀನರಾದ ಪುರುಷರನ್ನು ನೀನು ಧರ್ಮಜ್ಞನೆಂದು ಹೇಳುತ್ತಿದ್ದೀಯೆ. ಅಧರ್ಮವನ್ನು ಮಾಡುವ ಅಂತಹ ಪುರುಷರು ವಿಷಪ್ರಾಯರೆ? (ವಿಷದಂತೆ ನಿನ್ನನ್ನು ಕೊಲ್ಲುವರೇ? ಇಲ್ಲ. ಆದ್ದರಿಂದ ಅವರಿಗೆ ಏಕೆ ಹೆದರುವಿ ಎಂದು ಅಭಿಪ್ರಾಯ) ಧರ್ಮಾರ್ಥತತ್ತ್ವವನ್ನು ತಿಳಿದ ನೀನು ಏತಕ್ಕೆ ನನ್ನನ್ನು ನಿಂದಿಸುತ್ತಿದ್ದೀಯೆ?

ನೃಶಂಸಃ ಸ ಮಯಾऽऽಕ್ರಮ್ಯ ರಥ ಏವ ನಿಪಾತಿತಃ ।
ತನ್ಮಾऽಭಿನಂದ್ಯಂ ಬೀಭತ್ಸೋ ಕಿಮರ್ಥಂ ನಾಭಿನಂದಸೇ ॥ ೩೨ ॥

ಕ್ರೂರರಾದ ಅವರನ್ನು ನಾನು ರಥದಲ್ಲಿಯೇ ಕೆಡವಿದೆ. ಎಲೈ ಅರ್ಜುನನೇ, ಅಭಿನಂದಿಸಲ್ಪಡಬೇಕಾದ ನನ್ನನ್ನು ನೀನು ಏಕೆ ಅಭಿನಂದಿಸುತ್ತಿಲ್ಲ?

ಕೃತೇ ರಣೇ ಕಥಂ ಪಾರ್ಥ ಜ್ವಲನಾರ್ಕವಿಷೋಪಮಮ್ ।
ಭೀಮಂ ದ್ರೋಣಶಿರಶ್ಛೇದೇ ಪ್ರಶಸ್ಯಂ ನ ಪ್ರಶಂಸಸಿ ॥ ೩೩ ॥

ಎಲೈ ಅರ್ಜುನನೇ, ರಣರಂಗದಲ್ಲಿ ದ್ರೋಣರ ಶಿರಶ್ಛೇದವನ್ನು ಮಾಡಿದಾಗ (ಅದಕ್ಕೆ ಸಹಾಯಕನಾದ) ಸೂರ್ಯಾಗ್ನಿಗೆ ಸದೃಶನಾದ, ಪ್ರಶಂಸೆಗೆ ಅರ್ಹನಾದ ಭೀಮನನ್ನು ನೀನು ಏಕೆ ಪ್ರಶಂಸಿಸುವುದಿಲ್ಲ?

ಯೋಸೌ ಮಮೈವ ನಾನ್ಯಸ್ಯ ಬಾಂಧವಾನ್ ಯುಧಿ ಜಘ್ನಿವಾನ್ ।
ಛಿತ್ತ್ವಾऽಪಿ ತಸ್ಯ ಮೂರ್ಧಾನಂ ನೈವಾಸ್ಮಿ ವಿಗತಜ್ವರಃ ॥ ೩೪ ॥

ಯಾವನು ನನ್ನ ಬಂಧುಗಳನ್ನು - ಇನ್ನೊಬ್ಬರ ಬಂಧುಗಳನ್ನಲ್ಲ - ಯುದ್ಧದಲ್ಲಿ ಕೊಂದನೋ, ಅವನ ಶಿರಸ್ಸನ್ನು ಕತ್ತರಿಸಿದರೂ ನನ್ನ ಬಂಧುಶೋಕದಿಂದ ಉಂಟಾದ ಜ್ವರವು ಹೋಗುತ್ತಿಲ್ಲ.

ತಚ್ಚ ಮೇ ಕೃಂತತೇ ಮರ್ಮ ಯನ್ನ ತಸ್ಯ ಶಿರೋ ಮಯಾ ।
ನಿಷಾದವಿಷಯೇ ಕ್ಷಿಪ್ತಂ ಜಯದ್ರಥಶಿರೋ ಯಥಾ ॥ ೩೫ ॥

ಅವರ ಶಿರಸ್ಸನ್ನು ಜಯದ್ರಥನ ಶಿರಸ್ಸಿನಂತೆ ನಿಷಾದದೇಶದಲ್ಲಿ ಎಸೆಯಲಿಲ್ಲ ಎಂಬುದು ನನಗೆ ಮರ್ಮಭೇದಕವಾಗಿದೆ.

ಅವಧಶ್ಚಾಪಿ ಶತ್ರೂಣಾಮಧರ್ಮಃ ಶಿಷ್ಯತೇऽರ್ಜುನ ।
ಕ್ಷತ್ರಿಯಸ್ಯ ಹ್ಯಯಂ ಧರ್ಮೋ ಹನ್ಯಾದ್ವಧ್ಯೇತ ವಾ ಪುನಃ ॥ ೩೬ ॥

ಎಲೈ ಅರ್ಜುನನೇ, ಶತ್ರುಗಳನ್ನು ಕೊಲ್ಲದಿರುವುದು ಅಧರ್ಮ ಎಂದು ಹೇಳಲ್ಪಡುತ್ತದೆ. ಕೊಲ್ಲಬೇಕು ಅಥವಾ ವಧಿಸಲ್ಪಡಬೇಕು. ಇದು ಕ್ಷತ್ರಿಯ ಧರ್ಮ.

ಸ ಶತ್ರುರ್ನಿಹತಃ ಸಂಖೇ ಮಯಾ ಧರ್ಮೇಣ ಪಾಂಡವ ।
ಯಥಾ ತ್ವಯಾ ಹತಃ ಶೂರೋ ಭಗದತ್ತಃ ಪಿತುಃ ಸಖಾ ॥ ೩೭ ॥

ಎಲೈ ಪಾಂಡವನೇ, ಶೂರನೂ, ನಿನ್ನ ತಂದೆಯ ಸ್ನೇಹಿತನಾದ ಭಗದತ್ತನನ್ನು ನೀನು ಕೊಂದಂತೆ ನಾನು ಯುದ್ಧದಲ್ಲಿ ಧರ್ಮದಿಂದಲೇ ಶತ್ರುವಾದ ದ್ರೋಣರನ್ನು ಕೊಂದಿದ್ದೇನೆ.

ಪಿತಾಮಹಂ ರಣೇ ಹತ್ವಾ ಮನ್ಯಸೇ ಧರ್ಮಮಾತ್ಮನಃ ।
ಮಯಾ ಶತ್ರೌ ಹತೇ ಕಸ್ಮಾತ್ ಪಾಪೇ ಧರ್ಮಂ ನ ಮನ್ಯಸೇ ॥ ೩೮ ॥

ಪಿತಾಮಹರಾದ ಭೀಷ್ಮರನ್ನು ರಣರಂಗದಲ್ಲಿ ಕೊಂದು ಅದನ್ನು ನೀನು ನಿನ್ನ ಧರ್ಮವೆಂದು ತಿಳಿಯುತ್ತೀಯೆ. ನಾನು ಪಾಪಿಯಾದ ಶತ್ರುವನ್ನು ಕೊಂದರೆ ಅದನ್ನು ಧರ್ಮವೆಂದು ತಿಳಿಯುವುದಿಲ್ಲ.

ನಾನೃತಃ ಪಾಂಡವೋ ಜ್ಯೇಷ್ಠೋ ನಾಹಂ ವಾऽಧಾರ್ಮಿಕೋऽರ್ಜುನ ।
ಶಿಷ್ಯಧ್ರುಕ್ ನಿಹತಃ ಪಾಪೋ ಯುದ್ಧ್ಯಸ್ವ ವಿಜಯಸ್ತವ ॥ ೩೯ ॥

ಎಲೈ ಅರ್ಜುನನೇ, ಪಾಂಡವರ ಹಿರಿಯಣ್ಣನಾದ ಯುಧಿಷ್ಠಿರನು ಸುಳ್ಳು ಮಾತನಾಡುವವನಲ್ಲ. ನಾನೂ ಅಧಾರ್ಮಿಕನಲ್ಲ. ನಿರಪರಾಧಿ ಶಿಷ್ಯರಾದ ನಮ್ಮಂತಹವರಿಗೆ ದ್ರೋಹವನ್ನು ಮಾಡುವ ಪಾಪಾಚರಣೆಯ ಗುರುಗಳು ಹತರಾದರು (ನಿರಪರಾಧಿಗಳಾದ ಶಿಷ್ಯರಿಗೆ ದ್ರೋಹವನ್ನು ಮಾಡುವುದು ಅದು ಪಾಪವೇ ಎಂಬುದು ಅಂಬರೀಷನಿಗೆ ದ್ರೋಹವನ್ನು ಮಾಡಿದ ದುರ್ವಾಸರ ದೃಷ್ಟಾಂತದಲ್ಲಿ ತಿಳಿದಿದೆ). ಯುದ್ಧವನ್ನು ಮಾಡು. ನಿನಗೆ ವಿಜಯವುಂಟಾಗುವುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ದ್ರೋಣಪರ್ವಣಿ ಏಕೋನಾಶೀತ್ಯಧಿಕಶತತಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತನೆಯ ಅಧ್ಯಾಯ

ಅರ್ಜುನ-ಧೃಷ್ಟದ್ಯುಮ್ನರ ವಿರಸ. ಕೃಷ್ಣ ಪ್ರೇರಣೆಯಂತೆ ಭೀಮನಿಂದ ಸಮಾಧಾನ ಪುನಃ ಯುದ್ಧಸನ್ನಾಹ.

ಧೃತರಾಷ್ಟ್ರಃ

ಸಾಂಗಾ ವೇದಾ ಯಥಾನ್ಯಾಯಂ ಯೇನಾಧೀತಾ ಮಹಾತ್ಮನಾ ।
ಯಸ್ಮಿನ್ ಸಾಕ್ಷಾದ್ ಧನುರ್ವೇದೋ ಹ್ರೀನಿಷೇಧೇ ಪ್ರತಿಷ್ಠಿತಃ ॥ ೧ ॥

ತಸ್ಮಿನ್ನಾಕ್ರುಶ್ಯತಿ ದ್ರೋಣೇ ಮಹರ್ಷಿತನಯೇ ತದಾ ।
ನೀಚಾತ್ಮನಾ ನೃಶಂಸೇನ ಕ್ಷುದ್ರೇಣ ಗುರುಘಾತಿನಾ ॥ ೨ ॥

ಯಸ್ಯ ಪ್ರಸಾದಾತ್ ಕರ್ಮಾಣಿ ಕುರ್ವಂತಿ ಪುರುಷರ್ಷಭಾಃ ।
ಅಮಾನುಷಾಣಿ ಸಂಗ್ರಾಮೇ ದೇವೈರಸುಕರಾಣಿ ಚ ॥ ೩ ॥

ತಸ್ಮಿನ್ನಾಕ್ರುಶ್ಯತಿ ದ್ರೋಣೇ ಸಮಕ್ಷಂ ಪಾಪಕರ್ಮಿಣಃ ।
ನಾಮರ್ಷಂ ತತ್ರ ಕುರ್ವಂತಿ ಧಿಕ್ ಕ್ಷತ್ರಂ ಧಿಗಮರ್ಷಿತಮ್ ॥ ೪ ॥

ಧೃತರಾಷ್ಟ್ರ- ಯಾವ ಮಹಾತ್ಮರಾದ ದ್ರೋಣರು ಸಾಂಗವಾದ ವೇದಗಳನ್ನು ವಿಧಿ ಪೂರ್ವಕವಾಗಿ ಅಧ್ಯಯನವನ್ನು ಮಾಡಿದರೋ, ಪಾಪಕರ್ಮಗಳನ್ನು ಮಾಡಲು ನಾಚ ನಿಷೇಧಿಸುವ ಯಾರಲ್ಲಿ ಧನುರ್ವೇದವು ಸಾಕ್ಷಾತ್ತಾಗಿ ಪ್ರತಿಷ್ಠಿತವಾಗಿದ್ದಿತೋ, ಯಾರ ಅನುಗ್ರಹದಿಂದ ಪುರುಷಶ್ರೇಷ್ಠರಾದವರು ಯುದ್ಧದಲ್ಲಿ ದೇವತೆಗಳೂ ಮಾಡಲು ಸಾಧ್ಯವಿಲ್ಲದ ಅತಿಮಾನುಷಕರ್ಮವನ್ನು ಮಾಡುತ್ತಾರೆಯೋ ಅಂತಹ ಮಹರ್ಷಿ ಪುತ್ರರಾದ ದ್ರೋಣರು ಕ್ಷುದ್ರನೂ, ಕ್ರೂರನೂ, ನೀಚವಾದ ಮನಸ್ಸುಳ್ಳವನೂ, ಗುರು ಘಾತಕನೂ ಆದ ಧೃಷ್ಟದ್ಯುಮ್ನನಿಂದ ಪಾಪಕರ್ಮವನ್ನು ಮಾಡುವವರ ಎದುರಿನಲ್ಲಿ ನಿಂದಿಸಲ್ಪಡುತ್ತಿರಲು ಅಲ್ಲಿ ಯಾರೂ ಅವನ ಮೇಲೆ ರೋಷವನ್ನು ಹೊಂದಲಿಲ್ಲ. ಕ್ಷತ್ರಿಯರಿಗೆ ಧಿಕ್ಕಾರವಿರಲಿ. ರೋಷಕ್ಕೂ ಧಿಕ್ಕಾರವಿರಲಿ.

ಪಾರ್ಥಾಃ ಸರ್ವೇ ಚ ರಾಜಾನಃ ಪೃಥಿವ್ಯಾಂ ಯೇ ಧನುರ್ಧರಾಃ ।
ಶ್ರುತ್ವಾ ಕಿಮಾಹುಃ ಪಾಂಚಾಲ್ಯಂ ತನ್ಮಮಾಚಕ್ಷ್ವ ಸಂಜಯ ॥ ೫ ॥

ಎಲೈ ಸಂಜಯನೇ, ಪಾಂಡವರೂ ಭೂಮಿಯಲ್ಲಿ ಇರುವ ಧನುರ್ಧಾರಿಗಳಾದ ರಾಜರೂ ಧೃಷ್ಟದ್ಯುಮ್ನನ ಮಾತುಗಳನ್ನು ಕೇಳಿ ಏನು ಹೇಳಿದರೆಂದು ನನಗೆ ಹೇಳು.

ಸಂಜಯಃ

ಶ್ರುತ್ವಾ ದ್ರುಪದಪುತ್ರಸ್ಯ ತಾ ವಾಚಃ ಕ್ರೂರಕರ್ಮಣಃ ।
ತೂಷ್ಣೀಂ ಬಭೂವುಃ ರಾಜಾನಃ ಸರ್ವ ಏವ ವಿಶಾಂಪತೇ ॥ ೬ ॥

ಸಂಜಯ- ಎಲೈ ರಾಜನೇ, ಕ್ರೂರಕರ್ಮವನ್ನು ಮಾಡಿದ ದ್ರುಪದ ಪುತ್ರನ ಆ ಮಾತುಗಳನ್ನು ಕೇಳಿ ಎಲ್ಲ ರಾಜರೂ ಸುಮ್ಮನಾದರು.

ಅರ್ಜುನಸ್ತು ಕಟಾಕ್ಷೇಣ ಜಿಹ್ಮಂ ಪ್ರೇಕ್ಷ್ಯ ಚ ಪಾರ್ಷತಮ್ ।
ಸಬಾಷ್ಪಮಭಿನಿಃಶ್ವಸ್ಯ ಧಿಗ್ಧಿಗ್ಧಿತಿ ಚಾಬ್ರವೀತ್ ॥ ೭ ॥

ಅರ್ಜುನನು ಮಾತ್ರ ಧೃಷ್ಟದ್ಯುಮ್ನನನ್ನು ಕಡೆಗಣ್ಣಿನಿಂದ ವಕ್ರವಾಗಿ ನೋಡಿ ಉಷ್ಣವಾದ ನಿಟ್ಟುಸಿರನ್ನು ಬಿಟ್ಟು 'ಧಿಕ್ಕಾರ, ಧಿಕ್ಕಾರ' ಎಂದು ಹೇಳಿದನು.

ಯುಧಿಷ್ಠಿರಶ್ಚ ಭೀಮಶ್ಚ ಯಮೌ ಕೃಷ್ಣಸ್ತಥಾಪರೇ ।
ಆಸನ್ ಸುವ್ರೀಡಿತಾ ರಾಜನ್ ಸಾತ್ಯಕಿರಿದಮಬ್ರವೀತ್ ॥ ೮ ॥

ಎಲೈ ರಾಜನೇ, ಯುಧಿಷ್ಠಿರ, ಭೀಮಸೇನ, ನಕುಲ-ಸಹದೇವರು, ಕೃಷ್ಣ ಮತ್ತು ಉಳಿದವರು ಬಹಳ ನಾಚಿಕೆಗೊಂಡರು. ಆದರೆ ಸಾತ್ಯಕಿಯು ಮಾತ್ರ ಈ ಮಾತುಗಳನ್ನು ಆಡಿದನು.

ಸಾತ್ಯಕಿಃ

ನೇಹಾಸ್ತಿ ಪುರುಷಃ ಕಶ್ಚಿದ್ಯ ಇಮಂ ಪಾಪಪೂರುಷಮ್ ।
ಭಾಷಮಾಣಮಕಲ್ಯಾಣಂ ಶೀಘ್ರಂ ಹನ್ಯಾನ್ನರಾಧಮಮ್ ॥ ೯ ॥

ಸಾತ್ಯಕಿ– ಅಮಂಗಳವನ್ನು ಮಾತನಾಡುತ್ತಿರುವ ಪಾಪಪುರುಷನಾದ ಈ ನರಾಧಮನನ್ನು ಕೊಲ್ಲುವ ಯಾವ ಪುರುಷನೂ ಈ ದಿನ ಇಲ್ಲಿ ಇಲ್ಲ.

ಕಥಂ ಚ ಶತಧಾ ಜಿಹ್ವಾ ನ ತೇ ಮೂರ್ಧಾ ಚ ದೀರ್ಯತೇ ।
ಗುರುಮಾಕ್ರೋಶತಃ ಕ್ಷುದ್ರ ನ ಚಾಧರ್ಮೇಣ ಪಾತ್ಯಸೇ ॥ ೧೦ ॥

ಎಲೈ ಕ್ಷುದ್ರನೇ, ಗುರುಗಳನ್ನು ನಿಂದಿಸುತ್ತಿರುವ ನಿನ್ನ ನಾಲಿಗೆಯು ಏಕೆ ಸಹಸ್ರ ಹೋಳಾಗುವುದಿಲ್ಲ? ನಿನ್ನ ಶಿರಸ್ಸು ಏಕೆ ಬಿರಿದುಹೋಗುವುದಿಲ್ಲ? ಏಕೆ ನೀನು ಅಧರ್ಮದಿಂದ ನಿಪಾತವನ್ನು ಹೊಂದುತ್ತಿಲ್ಲ?

ಯಾಪ್ಯಸ್ತ್ವಮಸಿ ಪಾರ್ಥೈಶ್ಚ ಸರ್ವೈಶ್ಚಾಂಧಕವೃಷ್ಣಿಭಿಃ ।
ಯತ್ ಕರ್ಮ ಕಲುಷಂ ಕೃತ್ವಾ ಶ್ಲಾಘಸೇ ಜನಸಂಸದಿ ॥ ೧೧ ॥

ನೀಚಕರ್ಮವನ್ನು ಮಾಡಿ ಜನರ ಸಭೆಯ ಮುಂದೆ ನಿನ್ನನ್ನೇ ಹೊಗಳಿಕೊಳ್ಳುತ್ತಿರುವ ನೀನು ಪಾಂಡವರಿಂದಲೂ ಮತ್ತು ಎಲ್ಲ ಅಂಧಕವೃಷ್ಣಿಗಳಿಂದಲೂ ಯಮಲೋಕಕ್ಕೆ ಕಳುಹಿಸಲ್ಪಡಬೇಕು.

ಅಕಾರ್ಯಂ ತಾದೃಶಂ ಕೃತ್ವಾ ಪುನರೇವ ಗುರುಂ ಕ್ಷಿಪನ್ ।
ವಧ್ಯಸ್ತ್ವಂ ನ ತ್ವಯಾರ್ಥೋऽಸ್ತಿ ಮುಹೂರ್ತಮಪಿ ಜೀವತಾ ॥ ೧೨ ॥

ಅಂತಹ ಅಕಾರ್ಯವನ್ನು ಮಾಡಿ ಪುನಃ ಗುರುಗಳನ್ನು ನಿಂದಿಸುವ ನೀನು ವಧ್ಯನಾದವನು. ನೀನು ಒಂದು ಮುಹೂರ್ತ ಜೀವಿಸಿದರೂ ನಿನ್ನಿಂದ ಯಾವ ಪ್ರಯೋಜನವೂ ಇಲ್ಲ.

ಕಸ್ತೇ ತ್ವೇತದ್ ವ್ಯವಸೇದಾರ್ಯಸ್ತ್ವದನ್ಯಃ ಪುರುಷಾಧಮಃ ।
ನಿಗೃಹ್ಯ ಕೇಶೇಷು ವಧಂ ಗುರೋರ್ಧರ್ಮಾತ್ಮನಃ ಸತಃ ॥ ೧೩ ॥

ಎಲೈ ಪುರುಷಾಧಮನೇ, ನಿನ್ನನ್ನು ಬಿಟ್ಟು ಯಾವ ಶ್ರೇಷ್ಠ ಪುರುಷನು ತಾನೇ ಧರ್ಮಾತ್ಮನಾದ ಗುರುಗಳನ್ನು ಕೇಶಗಳಲ್ಲಿ ಹಿಡಿದು ವಧೆಯನ್ನು ಮಾಡಲು ನಿರ್ಧರಿಸಿಯಾನು?

ಸಪ್ತಾವರೇ ತಥಾ ಪೂರ್ವೇ ಬಾಂಧವಾಸ್ತೇ ನಿಪಾತಿತಾಃ ।
ಯಶಸಾ ಚ ಪರಿತ್ಯಕ್ತಾಸ್ತ್ವಂ ಪ್ರಾಪ್ಯ ಕುಲಪಾಂಸನಮ್ ॥ ೧೪ ॥

ನಿನ್ನಂತಹ ಕುಲಾಧಮನನ್ನು ಹೊಂದಿ ನಿನ್ನ ಕುಲದಲ್ಲಿ ನಿನ್ನ ಹಿಂದಿನ ಏಳು ಬಾಂಧವರು ಪತಿತರಾಗಿದ್ದಾರೆ, ಮುಂದಿನ ಏಳು ಬಾಂಧವರು ಪತಿತರಾಗುವರು ಮತ್ತು ಕೀರ್ತಿಯಿಂದಲೂ ಚ್ಯುತರಾಗುವರು.

ಉಕ್ತವಾಂಶ್ಚಾಪಿ ಯತ್ ಪಾರ್ಥಂ ಭೀಷ್ಮಂ ಪ್ರತಿ ನರರ್ಷಭಮ್ ।
ತಥಾಂತೋ ವಿಹಿತಸ್ತೇನ ಸ್ವಯಮೇವ ಮಹಾತ್ಮನಾ ॥ ೧೫ ॥

ನರಶ್ರೇಷ್ಠರಾದ ಭೀಷ್ಮರ ವಿಷಯದಲ್ಲಿ ಅರ್ಜುನನನ್ನು ಕುರಿತು ಮಹಾತ್ಮರಾದ ಭೀಷ್ಮರು ತಮ್ಮ ನಾಶವನ್ನು ತಾವೇ ತಂದುಕೊಂಡರು ಎಂದು ಹೇಳಿದೆಯಷ್ಟೆ?

ತಸ್ಯಾಪಿ ತವ ಸೋದರ್ಯೋ ನಿಹಂತಾ ಪಾಪಕೃತ್ತಮಃ ।
ನಾನ್ಯಃ ಪಾಂಚಾಲಪುತ್ರೇಭ್ಯೋ ವಿದ್ಯತೇ ಭುವಿ ಪಾಪಕೃತ್ ॥ ೧೬ ॥

ಆ ಕಾರ್ಯವನ್ನು ಮಾಡಿದವನೂ ಸಹ ನಿನ್ನ ಸಹೋದರನಾದ ಶಿಖಂಡಿಯೇ. ಪಾಪವನ್ನು ಮಾಡಲು ಅಗ್ರಗಣ್ಯನಾದ ಅವನೇ ಭೀಷ್ಮರನ್ನು ಕೊಂದವನು. ಪಾಂಚಾಲ ಪುತ್ರರಿಗಿಂತಲೂ ಅಧಿಕವಾದ ಪಾಪವನ್ನು ಮಾಡುವ ಯಾವನೂ ಭೂಮಿಯಲ್ಲಿ ಇಲ್ಲ.

ಸ ಚಾಪಿ ಸೃಷ್ಟಃ ಪಿತ್ರಾ ತೇ ಭೀಷ್ಮಸ್ಯಾಂತಕರಃ ಕಿಲ ।
ಶಿಖಂಡೀ ರಕ್ಷಿತಸ್ತೇನ ಸ ಚ ಮೃತ್ಯುರ್ಮಹಾತ್ಮನಃ ॥ ೧೭ ॥

ಶಿಖಂಡಿಯೂ ಸಹ ಭೀಷ್ಮರ ವಿನಾಶಕ್ಕಾಗಿ ನಿನ್ನ ತಂದೆಯಿಂದ ಸೃಷ್ಟಿಸಲ್ಪಟ್ಟು, ರಕ್ಷಿಸಲ್ಪಟ್ಟನಷ್ಟೆ? ಆ ಶಿಖಂಡಿಯೇ ಮಹಾತ್ಮರಾದ ಭೀಷ್ಮರ ಮರಣಕ್ಕೆ ಕಾರಣನಾದವನು.

ಪಾಂಚಾಲಾಶ್ಚಲಿತಾ ಧರ್ಮಾತ್ ಕ್ಷುದ್ರಾ ಮಿತ್ರಗುರುದ್ರುಹಃ ।
ತ್ವಾಂ ಪ್ರಾಪ್ಯ ಸಹಸೋದರ್ಯಂ ಧಿಕೃತಂ ಸರ್ವಸಾಧುಭಿಃ ॥ ೧೮ ॥

ಸರ್ವಸಜ್ಜನರಿಂದ ಧಿಕ್ಕೃತರಾದ ನಿನ್ನನ್ನು ಮತ್ತು ನಿನ್ನ ಸಹೋದರನನ್ನು ಪಡೆದು, ಮಿತ್ರದ್ರೋಹಿಗಳೂ, ಗುರುದ್ರೋಹಿಗಳೂ, ಕ್ಷುದ್ರರೂ ಆದ ಪಾಂಚಾಲರು ಧರ್ಮಭ್ರಷ್ಟರಾಗಿದ್ದಾರೆ.

ಪುನಶ್ಚೇದೀದೃಶೀಂ ವಾಚಂ ಮತ್ಸಮೀಪೇ ವದಿಷ್ಯಸಿ ।
ಶಿರಸ್ತೇ ಪಾತಯಿಷ್ಯಾಮಿ ಗದಯಾ ವಜ್ರಕಲ್ಪಯಾ ॥ ೧೯ ॥

ನೀನು ನನ್ನ ಬಳಿಯಲ್ಲಿ ಪುನಃ ಇಂತಹ ಮಾತನ್ನಾಡಿದರೆ ವಜ್ರದಂತಹ ಗದೆಯಿಂದ ನಿನ್ನ ಶಿರಸ್ಸನ್ನು ಹೊಡೆದು ಉರುಳಿಸುವೆನು.

ಸಾತ್ವತೇನೈವಮಾಕ್ಷಿಪ್ತಃ ಪಾರ್ಷತಃ ಪರುಷಾಕ್ಷರಮ್ ।
ಸಂರಬ್ಧಃ ಸಾತ್ಯಕಿಂ ಪ್ರಾಹ ಸಂಕ್ರುದ್ಧಃ ಪ್ರಹಸನ್ನಿವ ॥ ೨೦ ॥

ಸಾತ್ಯಕಿಯಿಂದ ಉಗ್ರವಾದ ಮಾತುಗಳಿಂದ ಹೀಗೆ ನಿಂದಿಸಲ್ಪಟ್ಟ ಧೃಷ್ಟದ್ಯುಮ್ನನು ಕೋಪಗೊಂಡು ನಗುವವನಂತೆ ಸಾತ್ಯಕಿಯನ್ನು ಕುರಿತು ಮಾತನಾಡಿದನು.

ಧೃಷ್ಟದ್ಯುಮ್ನಃ

ಶ್ರೂಯತೇ ಶ್ರೂಯತೇ ಚೇತಿ ಕ್ಷಮ್ಯತೇ ಚೇತಿ ಮಾಧವ ।
ನ ಚಾನಾರ್ಯ ಶುಭಂ ಸಾಧುಂ ಪುರುಷಂ ಕ್ಷೇಪ್ತುಮರ್ಹಸಿ ॥ ೨೧ ॥

ಧೃಷ್ಟದ್ಯುಮ್ನ– ಎಲೈ ಮಧುಕುಲೋತ್ಪನ್ನನಾದ ಸಾತ್ಯಕಿಯೇ, ಎಲೈ ಅನಾರ್ಯನೇ, ಕೇಳುತ್ತಿದ್ದೇನೆ, ಕೇಳುತ್ತಿದ್ದೇನೆ, ಕ್ಷಮಿಸುತ್ತಿದ್ದೇನೆ ಎಂದು ಸಜ್ಜನನಾದ ಪವಿತ್ರನಾದ ಪುರುಷನನ್ನು ನೀನು ನಿಂದಿಸಬೇಡ.

ಕ್ಷಮಾ ಪ್ರಶಸ್ಯತೇ ಲೋಕೇ ನ ತು ಪಾಪೋऽರ್ಹತಿ ಕ್ಷಮಾಮ್ ।
ಕ್ಷಮಾವಂತಂ ಹಿ ಪಾಪಾತ್ಮಾ ಜಿತೋऽಯಮಿತಿ ಮನ್ಯತೇ ॥ ೨೨ ॥

ಲೋಕದಲ್ಲಿ ಕ್ಷಮೆಯು ಪ್ರಶಂಸನೀಯವಾದುದು. ಆದರೆ ಪಾಪಿಯು ಕ್ಷಮೆಗೆ ಅರ್ಹನಲ್ಲ. ಕ್ಷಮಿಸುವವನನ್ನು ಪಾಪಾತ್ಮನು ಇವನು ಪರಾಜಿತನಾಗಿದ್ದಾನೆಂದು ತಿಳಿಯುತ್ತಾನೆ.

ಸ ತ್ವಂ ಕ್ಷುದ್ರಸಮಾಚಾರೋ ನೀಚಾತ್ಮಾ ಪಾಪನಿಶ್ಚಯಃ ।
ಆಕೇಶಾಗ್ರಾನ್ನಖಾಗ್ರಾಚ್ಚ ವಕ್ತವ್ಯೋ ವಕ್ತುಮಿಚ್ಛಸಿ ॥ ೨೩ ॥

ನೀನೇ ಕ್ಷುದ್ರವಾದ ಆಚಾರವುಳ್ಳವನು, ನೀಚನಾದವನು ಮತ್ತು ಪಾಪ ನಿರ್ಧಾರಗಳುಳ್ಳವನು. ನಖದ ತುದಿಯಿಂದ ಶಿರಸ್ಸಿನ ಕೇಶದ ತುದಿಯವರೆಗೂ ನಿಂದಿಸಲ್ಪಡಬೇಕಾದವನು. ನೀನು ನನ್ನನ್ನು ನಿಂದಿಸಲು ಇಚ್ಛಿಸುತ್ತಿದ್ದೀಯೆ.

ಯಃ ಸ ಭೂರಿಶ್ರವಾಶ್ಚಿನ್ನೇ ಭುಜೇ ಪ್ರಾಯಗತಸ್ತ್ವಯಾ ।
ವಾರ್ಯಮಾಣೇನ ನಿಹತಸ್ತತಃ ಪಾಪತರಂ ನು ಕಿಮ್ ॥ ೨೪ ॥

ಭುಜವು ಕತ್ತರಿಸಲ್ಪಟ್ಟ ಭೂರಿಶ್ರವನು ರಣರಂಗದಲ್ಲಿ ಪ್ರಾಯೋಪ್ರವೇಶಕ್ಕೆ ಕುಳಿತಾಗ ಎಲ್ಲರೂ ನಿಷೇಧಿಸಿದರೂ ಅವನನ್ನು ಕೊಂದೆಯಷ್ಟೆ? ಅದಕ್ಕಿಂತ ಹೆಚ್ಚಿನ ಪಾಪಕರ್ಮವು ಯಾವುದಿದೆ?

ವ್ಯೂಹಮಾನೋ ಮಯಾ ದ್ರೋಣೋ ದಿವ್ಯೇನಾಸ್ತ್ರೇಣ ಸಂಯುಗೇ ।
ವಿಸೃಷ್ಟಶಸ್ತ್ರೋ ನಿಹತಃ ಕಿಂ ತತ್ರ ಕ್ರೂರ ದುಷ್ಕೃತಮ್ ॥ ೨೫ ॥

ನಾನಾದರೆ ರಣರಂಗದಲ್ಲಿ ವ್ಯೂಹವನ್ನು ಮಾಡುತ್ತಿದ್ದ, ಶಸ್ತ್ರವನ್ನು ತ್ಯಜಿಸಿದ ದ್ರೋಣರನ್ನು ದಿವ್ಯಾಸ್ತ್ರದಿಂದ ಕೊಂದೆನು. ಎಲೈ ಕ್ರೂರನೇ, ಅದರಲ್ಲಿ ಪಾಪವೇನು?

ಅಯುಧ್ಯಮಾನಂ ಯಸ್ತ್ವಾಜೌ ತಥಾ ಪ್ರಾಯಗತಂ ಮುನಿಮ್ ।
ಛಿನ್ನಬಾಹುಂ ಪರೈರ್ಹನ್ಯಾತ್ ಸಾತ್ಯಕೇ ಸ ಕಥಂ ಭವೇತ್ ॥ ೨೬ ॥

ಎಲೈ ಸಾತ್ಯಕಿಯೇ, ರಣರಂಗದಲ್ಲಿ ಯುದ್ಧವನ್ನು ಮಾಡದ, ಪ್ರಾಯೋಪ್ರವೇಶಕ್ಕೆ ಕುಳಿತ, ಇನ್ನೊಬ್ಬರಿಂದ ಬಾಹುವು ಕತ್ತರಿಸಲ್ಪಟ್ಟ ಪುರುಷನನ್ನು ಕೊಲ್ಲುವುದು ಹೇಗೆ ಸರಿಯಾದೀತು?

ನಿಹತ್ಯ ತ್ವಾಂ ಯದಾ ಭೂಮೌ ಸ ವಿಕ್ರಾಮತಿ ವೀರ್ಯವಾನ್ ।
ಕಿಂ ತದಾ ನ ನಿಹಂಸ್ಯೇನಂ ಭೂತ್ವಾ ಪುರುಷಸತ್ತಮಃ ॥ ೨೭ ॥

ಪರಾಕ್ರಮಶಾಲಿಯಾದ ಭೂರಿಶ್ರವನು ನಿನ್ನನ್ನು ಹೊಡೆದು, ಭೂಮಿಯ ಮೇಲೆ ಕೆಡವಿ ಆಕ್ರಮಿಸಿದಾಗ ನೀನು ಶ್ರೇಷ್ಠ ಪುರುಷನಾಗಿ ಏಕೆ ಅವನನ್ನು ಕೊಲ್ಲಲಿಲ್ಲ?

ತ್ವಯಾ ಪುನರನಾರ್ಯೇಣ ಪೂರ್ವಂ ಪಾರ್ಥೇನ ನಿರ್ಜಿತಃ ।
ಯದಾ ತದಾ ಹತಃ ಶೂರಃ ಸೌಮದತ್ತಿಃ ಪ್ರತಾಪವಾನ್ ॥ ೨೮ ॥

ಮೊದಲು ಅರ್ಜುನನಿಂದ ಪರಾಜಿತನಾದ ಮೇಲೆ ಪುನಃ ಅನಾರ್ಯನಾದ ನಿನ್ನಿಂದ ಪ್ರತಾಪಶಾಲಿಯಾದ, ಶೂರನಾದ, ಸೋಮದತ್ತಪುತ್ರನಾದ ಭೂರಿಶ್ರವನು ಹತನಾದನು.

ಯತ್ರ ಯತ್ರ ತು ಪಾಂಡೂನಾಂ ದ್ರೋಣೋ ದ್ರಾವಯತೇ ಚಮೂಮ್ ।
ಕಿರನ್ ಶರಸಹಸ್ರಾಣಿ ತತ್ರ ತತ್ರ ಪ್ರಯಾಮ್ಯಹಮ್ ॥ ೨೯ ॥

ನಾನಾದರೆ ಎಲ್ಲೆಲ್ಲಿ ದ್ರೋಣರು ಪಾಂಡವರ ಸೇನೆಯನ್ನು ಸಾವಿರಾರು ಬಾಣಗಳನ್ನು ಪ್ರಯೋಗಿಸಿ ಚದುರಿಸುತ್ತಾರೆಯೋ ಅಲ್ಲೆಲ್ಲ ಹೋಗುತ್ತೇನೆ.

ಸ ತ್ವಮೇವಂವಿಧಂ ಕೃತ್ವಾ ಕರ್ಮ ಚಾಂಡಾಲವತ್ ಸ್ವಯಮ್ ।
ವಕ್ತುಮಿಚ್ಛಸಿ ವಕ್ತವ್ಯಃ ಕಸ್ಮಾನ್ಮಾಂ ಪರುಷಾಣ್ಯಥ ॥ ೩೦ ॥

ನೀನು ಅಂತಹ ಕರ್ಮವನ್ನು ಮಾಡದೆ ಸ್ವತಃ ಚಂಡಾಲರಿಗೆ ಯೋಗ್ಯವಾದ ಕರ್ಮವನ್ನು ಮಾಡಿ ನಿಂದಿಸಲ್ಪಡಬೇಕಾದ ನೀನು ನನಗೆ ಏಕೆ ಉಗ್ರವಾದ ಮಾತುಗಳನ್ನು ಆಡಲು ಬಯಸುತ್ತಿದ್ದೀಯೆ?

ಕರ್ತಾ ತ್ವಂ ಕರ್ಮಣೋಗ್ರಸ್ಯ ನಾಹಂ ವೃಷ್ಣಿಕುಲಾಧಮ ।
ಪಾಪಾನಾಂ ಚ ತ್ವಮಾವಾಸಃ ಕರ್ಮಣಾಂ ಮಾ ಪುನರ್ವದ ॥ ೩೧ ॥

ಎಲೈ ವೃಷ್ಣಿಕುಲಾಧಮನೇ, ಉಗ್ರವಾದ ಕರ್ಮವನ್ನು ಮಾಡುವವನು ನೀನು, ನಾನಲ್ಲ. ಪಾಪಕರ್ಮಗಳಿಗೆ ಆಶ್ರಯನಾದವನು ನೀನು. ಪುನಃ ನನ್ನ ಜೊತೆಯಲ್ಲಿ ಮಾತನಾಡಬೇಡ.

ಜೋಷಮಾಸ್ಸ್ವ ನ ಮಾಂ ಭೂಯೋ ವಕ್ತುಮರ್ಹಸ್ಯತಃ ಪರಮ್ ।
ಅಧರೋತ್ತರಮೇತದ್ಧಿ ಯನ್ಮಾ ತ್ವಂ ವಕ್ತುಮಿಚ್ಛಸಿ ॥ ೩೨ ॥

ಸುಮ್ಮನಿರು. ಇನ್ನು ಮುಂದೆ ನನ್ನ ಜೊತೆಯಲ್ಲಿ ಪುನಃ ಮಾತನಾಡಬೇಡ. ನೀನು ನನ್ನನ್ನು ನಿಂದಿಸಲು ಬಯಸುವುದು ತಲೆಕೆಳಗಾದ ವ್ಯಾಪಾರ.

ಅಥ ವಕ್ಷ್ಯಸಿ ಮಾಂ ಮೌರ್ಖ್ಯಾದ್ ಭೂಯಃ ಪರುಷಮೀದೃಶಮ್ ।
ಗಮಯಿಷ್ಯಾಮಿ ಬಾಣೈಸ್ತಾ ತ್ವಂ ಯುಧಿ ವೈವಸ್ವತಕ್ಷಯಮ್ ॥ ೩೩ ॥

ಅಥವಾ ಮೂರ್ಖತನದಿಂದ ಪುನಃ ನೀನು ಇದೇ ರೀತಿಯ ಒರಟು ಮಾತುಗಳಿಂದ ನಿಂದಿಸಿದರೆ ಯುದ್ಧದಲ್ಲಿ ಬಾಣಗಳಿಂದ ನಿನ್ನನ್ನು ಯಮಲೋಕಕ್ಕೆ ಕಳುಹಿಸುವೆನು.

ನ ಚೈವ ಮೂರ್ಖ ಧರ್ಮೇಣ ಕೇವಲೇನೈವ ಶಕ್ಯತೇ ।
ತೇಷಾಮಪಿ ಹ್ಯಧರ್ಮೇಣ ಚೇಷ್ಟಿತಂ ಶೃಣು ಯಾದೃಶಮ್ ॥ ೩೪ ॥

ಎಲೈ ಮೂರ್ಖನೇ, ಕೇವಲ ಧರ್ಮದಿಂದ ಎಲ್ಲವನ್ನೂ ಸಾಧಿಸಲು ಸಾಧ್ಯವಿಲ್ಲ. ಕೌರವರು ಮಾಡಿದ ಅಧರ್ಮಗಳು ಎಂತಹವುಗಳೆಂದು ಕೇಳು.

ವಂಚಿತಃ ಪಾಂಡವಃ ಪೂರ್ವಮಧರ್ಮೇಣ ಯುಧಿಷ್ಠಿರಃ ।
ದ್ರೌಪದೀ ಚ ಪರಿಕ್ಲಿಷ್ಟಾ ತಥಾऽಧರ್ಮೇಣ ಸಾತ್ಯಕೇ ॥ ೩೫ ॥

ಪಾಂಡವನಾದ ಯುಧಿಷ್ಠಿರನು ಮೊದಲು ಅಧರ್ಮದಿಂದ ದ್ಯೂತದಲ್ಲಿ ವಂಚಿಸಲ್ಪಟ್ಟನು. ಎಲೈ ಸಾತ್ಯಕಿಯೇ, ಹಾಗೆಯೇ ಅಧರ್ಮದಿಂದಲೇ ದ್ರೌಪದಿಯು ಕ್ಲೇಶಗೊಳಿಸಲ್ಪಟ್ಟಳು.

ಪ್ರವ್ರಾಜಿತಾ ವನಂ ಸರ್ವೇ ಪಾಂಡವಾಃ ಸಹ ಕೃಷ್ಣಯಾ ।
ಸರ್ವಸ್ವಮಪಕೃಷ್ಟಂ ಚ ತಥಾऽಧರ್ಮೇಣ ಬಾಲಿಶ ॥ ೩೬ ॥

ಎಲೈ ಬಾಲಿಶನೇ, ಎಲ್ಲ ಪಾಂಡವರೂ ದ್ರೌಪದಿಯ ಜೊತೆಯಲ್ಲಿ ಅಧರ್ಮದಿಂದಲೇ ವನಕ್ಕೆ ಕಳುಹಿಸಲ್ಪಟ್ಟರು. ಅಧರ್ಮದಿಂದಲೇ ಅವರ ಸರ್ವಸ್ವವೂ ಅಪಹೃತವಾಯಿತು.

ಅಧರ್ಮೇಣಾಪಕೃಷ್ಟಶ್ಚ ಮದ್ರರಾಜಃ ಪರೈರಿತಃ ।
ಇತೋऽಪ್ಯಧರ್ಮೇಣ ಹತೋ ಭೀಷ್ಮಃ ಕುರುಪಿತಾಮಹಃ ।
ಭೂರಿಶ್ರವಾ ಹ್ಯಧರ್ಮೇಣ ತ್ವಯಾ ಧರ್ಮವಿದಾ ಹತಃ ॥ ೩೭ ॥

ನಮ್ಮ ಬಳಿಗೆ ಬರುತ್ತಿದ್ದ ಮದ್ರರಾಜನಾದ ಶಲ್ಯನನ್ನು ಅವರು ಅಧರ್ಮದಿಂದಲೇ ಅಪಹರಿಸಿದರು. ಇದಕ್ಕಿಂತ ಹೆಚ್ಚಿನ ಅಧರ್ಮದಿಂದ ಕುರುಪಿತಾಮಹರಾದ ಭೀಷ್ಮರು ಹತರಾದರು. ಧರ್ಮಜ್ಞನಾದ ನಿನ್ನಿಂದ ಭೂರಿಶ್ರವನು ಹತನಾದನು.

ಏವಂ ಪರೈರಾಚರಿತಂ ಪಾಂಡವೇಯೈಶ್ಚ ಸಂಯುಗೇ ।
ರಕ್ಷಮಾಣೈರ್ಜಯಂ ವೀರೈರ್ಧರ್ಮಜ್ಞೈರಪಿ ಸಾತ್ವತ ॥ ೩೮ ॥

ಎಲೈ ಸಾತ್ವತನೇ, ಜಯವನ್ನು ಬಯಸುವ ವೀರರೂ, ಧರ್ಮಜ್ಞರೂ ಆದ ಪಾಂಡವರೂ ಮತ್ತು ಪರರೂ ಯುದ್ಧದಲ್ಲಿ ಅಧರ್ಮವನ್ನು ಆಚರಿಸಿದ್ದಾರೆ.

ದುಜ್ಞೇಯಃ ಪರಮೋ ಧರ್ಮಸ್ತಥಾऽಧರ್ಮಃ ಸುದುರ್ವಿದಃ ।
ಯುದ್ಧ್ಯಸ್ವ ಕೌರವೈಃ ಸಾರ್ಧಂ ಮಾ ಗಾಃ ಪಿತೃನಿವೇಶನಮ್ ॥ ೩೯ ॥

ಶ್ರೇಷ್ಠವಾದ ಧರ್ಮವು ತಿಳಿಯಲು ಅಸಾಧ್ಯವಾದುದು. ಅಧರ್ಮವನ್ನು ತಿಳಿಯುವುದು ಅದಕ್ಕಿಂತಲೂ ಅಸಾಧ್ಯವಾದುದು. ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡು, ಪಿತೃಲೋಕಕ್ಕೆ ಹೋಗಬೇಡ.

ಸಂಜಯಃ

ಏವಮಾದೀನಿ ವಾಕ್ಯಾನಿ ಕ್ರೂರಾಣಿ ಪರುಷಾಣಿ ಚ ।
ಶ್ರಾವಿತಃ ಸಾತ್ಯಕಿಃ ಶ್ರೀಮಾನಾಕಂಪಿತ ಇವಾಭವತ್ ॥ ೪೦ ॥

ಸಂಜಯ– ಇಂತಹ ಕ್ರೂರವಾದ ಮತ್ತು ಒರಟಾದ ಅನೇಕ ಮಾತುಗಳನ್ನು ಕೇಳಿದ ಕಾಂತಿಯುಕ್ತನಾದ ಸಾತ್ಯಕಿಯು ನಡುಗುವಂತಾದನು.

ತಚ್ಛ್ರುತ್ವಾ ಕ್ರೋಧತಾಮ್ರಾಕ್ಷಃ ಸಾತ್ಯಕಿಸ್ತ್ವದದೇ ಗದಾಮ್ ।
ವಿನಿಃಶ್ವಸ್ಯ ಯಥಾ ಸರ್ಪಃ ಪ್ರಣಿಧಾಯ ರಥೇ ಧನುಃ ॥ ೪೧ ॥

ಆ ಮಾತುಗಳನ್ನು ಕೇಳಿದ ಸಾತ್ಯಕಿಯು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಸರ್ಪದಂತೆ ನಿಟ್ಟುಸಿರನ್ನು ಬಿಟ್ಟು, ರಥದಲ್ಲಿ ಧನುಸ್ಸನ್ನು ಇಟ್ಟು ಕೈಯಲ್ಲಿ ಗದೆಯನ್ನು ತೆಗೆದುಕೊಂಡನು.

ತತೋಽಭಿಪತ್ಯ ಪಾಂಚಾಲ್ಯಂ ಸಂರಂಭೇಣೇದಮಬ್ರವೀತ್ ।
ನ ತ್ವಾಂ ವಕ್ಷ್ಯಾಮಿ ಪರುಷಂ ಹನಿಷ್ಯೇ ತ್ವಾಂ ವಧಕ್ಷಮಮ್ ॥ ೪೨ ॥

ಅನಂತರ ವೇಗವಾಗಿ ಕೋಪದಿಂದ ಧೃಷ್ಟದ್ಯುಮ್ನನ ಕಡೆಗೆ ಸಾಗಿ ನಿನ್ನ ಜೊತೆಯಲ್ಲಿ ಮಾತನಾಡುವುದಿಲ್ಲ. ಕ್ರೂರನೂ, ವಧೆಗೆ ಯೋಗ್ಯನಾದವನೂ ಆದ ನಿನ್ನನ್ನು ಕೊಲ್ಲುವೆನು ಎಂದು ಹೇಳಿದನು.

ತಮಾಪತಂತಂ ಸಹಸಾ ಮಹಾಬಲಮಮರ್ಷಣಮ್ ।
ಪಾಂಚಾಲ್ಯಾಯಾಭಿಸಂಕ್ರುದ್ಧಮಂತಕಾಯಾಂತಕೋಪಮಮ್ ॥ ೪೩ ॥

ಚೋದಿತೋ ವಾಸುದೇವೇನ ಭೀಮಸೇನೋ ಮಹಾಬಲಃ ।
ಅವಪ್ಲುತ್ಯ ರಥಾತ್ ತೂರ್ಣಂ ಬಾಹುಭ್ಯಾಂ ಸಮವಾರಯತ್ ॥ ೪೪ ॥

ಮಹಾಬಲನೂ, ರೋಷವುಳ್ಳವನೂ, ಗದೆಯನ್ನು ಹಿಡಿದು ವೇಗವಾಗಿ ಸಾಗುತ್ತಿರುವವನೂ, ಅಂತಕನ ಕಡೆಗೆ ಅಂತಕನು ಬಂದಂತೆ ಧೃಷ್ಟದ್ಯುಮ್ನನ ಕಡೆಗೆ ಬರುತ್ತಿರುವವನೂ ಆದ ಸಾತ್ಯಕಿಯನ್ನು ಕೃಷ್ಣನಿಂದ ಪ್ರೇರಿಸಲ್ಪಟ್ಟ ಮಹಾಬಲನಾದ ಭೀಮಸೇನನು ಶೀಘ್ರವಾಗಿ ತನ್ನ ರಥದಿಂದ ಕೆಳಗೆ ಹಾರಿ ತನ್ನ ಬಾಹುಗಳಿಂದ ತಡೆದನು.

ದ್ರವಮಾಣಂ ತಥಾ ಕ್ರುದ್ಧಂ ಸಾತ್ಯಕಿಂ ಪಾಂಡವೋ ಬಲೀ ।
ಪ್ರಸ್ಕಂದಮಾನಮಾದಾಯ ಜಗಾಮ ಬಲಿನಂ ಬಲಾತ್ ॥ ೪೫ ॥

ಆ ರೀತಿಯಲ್ಲಿ ಕ್ರೋಧಗೊಂಡು ವೇಗವಾಗಿ ಸಾಗುತ್ತಿದ್ದ ಸಾತ್ಯಕಿಯನ್ನು ಅವನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೂ ಬಲಿಷ್ಠನಾದ ಪಾಂಡವನಾದ ಭೀಮನು ಬಾಹುಗಳಲ್ಲಿ ಹಿಡಿದುಕೊಂಡೇ ಹೆಜ್ಜೆಗಳನ್ನು ಹಾಕಿದನು.

ಸ್ಥಿತ್ವಾ ವಿಷ್ಟಭ್ಯ ಚರಣೌ ಭೀಮೇನ ಶಿನಿಪುಂಗವಃ ।
ನಿಗೃಹೀತಃ ಪದೇ ಷಷ್ಠೇ ಬಲೇನ ಬಲಿನಾಂ ವರಃ ॥ ೪೬ ॥

ನಿಂತು, ತನ್ನ ಪಾದಗಳನ್ನು ಭದ್ರವಾಗಿ ಊರಿ ಬಲಿಷ್ಠರಲ್ಲಿ ಶ್ರೇಷ್ಠನಾದ ಭೀಮನು ಆರನೆಯ ಹೆಜ್ಜೆಯಲ್ಲಿ ಶಿನಿಪುಂಗವನಾದ ಸಾತ್ಯಕಿಯನ್ನು ನಿಲ್ಲಿಸಿದನು.

ಅವರುಹ್ಯ ರಥಾತ್ ತಂ ತು ಹ್ರಿಯಮಾಣಂ ಬಲೀಯಸಾ ।
ಉವಾಚ ಶ್ಲಕ್ಷ್ಣಯಾ ವಾಚಾ ಸಹದೇವೋ ವಿಶಾಂಪತೇ ॥ ೪೭ ॥

ಎಲೈ ರಾಜನೇ, ಬಲಿಷ್ಠನಾದ ಸಾತ್ಯಕಿಯಿಂದ ಎಳೆದುಕೊಂಡು ಹೋಗಲ್ಪಡುತ್ತಿದ್ದ ಭೀಮನನ್ನು ನೋಡಿ ಸಹದೇವನು ತನ್ನ ರಥದಿಂದ ಇಳಿದು ವಿವೇಕದಿಂದ ಮಾತುಗಳನ್ನು ಆಡಿದನು.

ಅಸ್ಮಾಕಂ ಪುರುಷವ್ಯಾಘ್ರ ಮಿತ್ರಮನ್ಯನ್ನ ವಿದ್ಯತೇ ।
ಪರಮಂಧಕವೃಷ್ಣಿಭ್ಯಃ ಪಾಂಚಾಲೇಭ್ಯಶ್ಚ ಮಾಧವ ॥ ೪೮ ॥

ಎಲೈ ಪುರುಷವ್ಯಾಘ್ರನೇ, ಮಾಧವನೇ, ನಮಗೆ ಅಂಧಕ-ವೃಷ್ಣಿಗಳನ್ನು ಮತ್ತು ಪಾಂಚಾಲರನ್ನು ಬಿಟ್ಟು ಬೇರೆ ಯಾರೂ ಮಿತ್ರರಿಲ್ಲ.

ತಥೈವಾಂಧಕವೃಷ್ಣೀನಾಂ ತವ ಚೈವ ವಿಶೇಷತಃ ।
ಕೃಷ್ಣಸ್ಯ ಚ ತಥಾಸ್ಮತ್ತೋ ಮಿತ್ರಮನ್ಯನ್ನ ವಿದ್ಯತೇ ॥ ೪೯ ॥

ಹಾಗೆಯೇ ಅಂಧಕ-ವೃಷ್ಣಿಗಳಿಗೂ ಮತ್ತು ವಿಶೇಷವಾಗಿ ನಿನಗೂ ಮತ್ತು ಕೃಷ್ಣನಿಗೂ ನಮ್ಮನ್ನು ಬಿಟ್ಟು ಬೇರೆ ಮಿತ್ರರಿಲ್ಲ.

ಪಾಂಚಾಲಾನಾಂ ಚ ವಾರ್ಷ್ಣೇಯ ಸಮುದ್ರಾಂತಾಂ ವಿಚಿನ್ವತಾಮ್ ।
ನಾನ್ಯದಸ್ತಿ ಪರಂ ಮಿತ್ರಂ ಯಥಾ ಪಾಂಡವವೃಷ್ಣಯಃ ॥ ೫೦ ॥

ಎಲೈ ವಾರ್ಷ್ಣೇಯನೇ, ಪಾಂಚಾಲರಿಗೂ ಸಹ ಸಮುದ್ರದ ಕೊನೆಯವರೆಗೂ ಹುಡುಕಿದರೂ ಪಾಂಡವರಿಗಿಂತ ಮತ್ತು ವೃಷ್ಣಿಗಳಿಗಿಂತ ಅಧಿಕರಾದ ಮಿತ್ರರು ಇನ್ನೊಬ್ಬರಿಲ್ಲ.

ಸ ಭವಾನೀದೃಶಂ ಮಿತ್ರಂ ಮನ್ಯತೇ ಚ ಯಥಾ ಭವಾನ್ ।
ಭವಂತಶ್ಚ ಯಥಾಸ್ಮಾಕಂ ಭವತಾಂ ಚ ತಥಾ ವಯಮ್ ॥ ೫೧ ॥

ನೀನು ಇಂತಹ ಮಿತ್ರನನ್ನು ಬೇರೆ ರೀತಿಯಲ್ಲಿ ನೋಡುತ್ತಿದ್ದೀಯೆ. ನೀನು ನಮಗೆ ಹೇಗೆಯೋ, ನಾವೂ ನಿನಗೆ ಹಾಗೆಯೇ ಸರಿ.

ಸ ಏವಂ ಸರ್ವಧರ್ಮಜ್ಞೋ ಮಿತ್ರಧರ್ಮಮನುಸ್ಮರನ್ ।
ನಿಯಚ್ಛ ಮನ್ಯುಂ ಪಾಂಚಾಲ್ಯಾತ್ ಪ್ರಶಾಮ್ಯ ಶಿನಿಪುಂಗವ ॥ ೫೨ ॥

ಎಲೈ ಶಿನಿಪುಂಗವನೇ, ಎಲ್ಲ ಧರ್ಮವನ್ನೂ ತಿಳಿದ ನೀನು ಮಿತ್ರಧರ್ಮವನ್ನು ಸ್ಮರಿಸಿ, ಧೃಷ್ಟದ್ಯುಮ್ನನ ಮೇಲಿರುವ ಸಿಟ್ಟನ್ನು ನಿಯಂತ್ರಿಸಿ ಶಾಂತಿಯನ್ನು ಹೊಂದು.

ಪಾರ್ಷತಸ್ಯ ಕ್ಷಮ ತ್ವಂ ವೈ ಕ್ಷಮತಾಂ ತವ ಪಾರ್ಷತಃ ।
ವಯಂ ಕ್ಷಮಯಿತಾರಶ್ಚ ಕಿಮನ್ಯತ್ರ ಶಮಾದ್ ಭವೇತ್ ॥ ೫೩ ॥

ಧೃಷ್ಟದ್ಯುಮ್ನನ ಅಪರಾಧವನ್ನು ನೀನು ಕ್ಷಮಿಸು, ನಿನ್ನನ್ನೂ ಧೃಷ್ಟದ್ಯುಮ್ನನು ಕ್ಷಮಿಸಲಿ. ನಾವು ಕ್ಷಮಿಸುವವರು. ಕ್ಷಮೆಯನ್ನು ಬಿಟ್ಟು ಬೇರೆ ಯಾವುದರಿಂದ ಏನಾದೀತು? (ಎಂದು ಹೇಳಿದನು).

ಸಂಜಯಃ

ಪ್ರಶಾಮ್ಯಮಾನೇ ಶೈನೇಯೇ ಸಹದೇವೇನ ಮಾರಿಷ ।
ಪಾಂಚಾಲರಾಜಸ್ಯ ಸುತಃ ಪ್ರಹಸನ್ನಿದಮಬ್ರವೀತ್ ॥ ೫೪ ॥

ಸಂಜಯ– ಎಲೈ ಶ್ರೇಷ್ಠನೇ, ಸಹದೇವನ ಮಾತುಗಳಿಂದ ಸಾತ್ಯಕಿಯು ಶಾಂತನಾಗುತ್ತಿರಲು ಪಾಂಚಾಲರಾಜನ ಪುತ್ರನಾದ ಧೃಷ್ಟದ್ಯುಮ್ನನು ನಗುತ್ತಾ ಈ ಮಾತನ್ನು ಆಡಿದನು.

ಧೃಷ್ಟದ್ಯುಮ್ನಃ

ಮುಂಚ ಮುಂಚ ಶನೇಃ ಪೌತ್ರಂ ಭೀಮ ಯುದ್ಧಮದಾನ್ವಿತಮ್ ।
ಆಸಾದಯತು ಮಾಮೇಷ ಧರಾಧರಮಿವಾನಿಲಃ ॥ ೫೫ ॥

ಧೃಷ್ಟದ್ಯುಮ್ನ– ಎಲೈ ಭೀಮಸೇನನೇ, ಯುದ್ಧಮದಾನ್ವಿತನಾದ ಶಿನಿಯ ಮೊಮ್ಮಗನಾದ ಸಾತ್ಯಕಿಯನ್ನು ಬಿಡು, ಬಿಡು. ವಾಯುವು ಪರ್ವತವನ್ನು ಅಪ್ಪಳಿಸಿದಂತೆ ನನ್ನನ್ನು ಇವನು ಹೊಂದಲಿ.

ಯಾವದಸ್ಯ ಶಿತೈರ್ಬಾಣೈಃ ಸಂರಂಭಂ ವಿನಯಾಮ್ಯಹಮ್ ।
ಯುದ್ಧಶ್ರದ್ಧಾಂ ಚ ಕೌಂತೇಯ ಜೀವಿತಸ್ಯ ಚ ಸಂಯುಗೇ ॥ ೫೬ ॥

ಎಲೈ ಕೌಂತೇಯನೇ, ನಾನು ತೀಕ್ಷ್ಣವಾದ ಬಾಣಗಳಿಂದ ಅವನ ಕೋಪವನ್ನೂ, ಯುದ್ಧಶ್ರದ್ಧೆಯನ್ನೂ ಮತ್ತು ಜೀವಿತವನ್ನೂ ವಿನಾಶಗೊಳಿಸುತ್ತೇನೆ.

ಕಿಂ ನು ಶಕ್ಯಂ ಮಯಾ ಕರ್ತುಂ ಕಾರ್ಯಂ ಯದಿದಮುದ್ಯತಮ್ ।
ಸುಮಹತ್ಪಾಂಡುಪುತ್ರಾಣಾಮಾಯಾಂತ್ಯೇತೇ ಹಿ ಕೌರವಾಃ ॥ ೫೭ ॥

ಆದರೆ ಏನು ಮಾಡಲಿ, ಪಾಂಡವರಿಗೆ ದೊಡ್ಡ ಕಾರ್ಯವು ಈಗ ಪ್ರಾಪ್ತವಾಗಿದೆ. ಈ ಕೌರವರು ಯುದ್ಧಕ್ಕಾಗಿ ಬರುತ್ತಿದ್ದಾರೆ.

ಅಥ ವಾ ಫಲ್ಗುನಃ ಸರ್ವಾನ್ ವಾರಯಿಷ್ಯತಿ ಸಂಯುಗೇ ।
ಅಹಮಪ್ಯಸ್ಯ ಮೂರ್ಧಾನಂ ಪಾತಯಿಷ್ಯಾಮಿ ಸಾಯಕೈಃ ॥ ೫೮ ॥

ಅಥವಾ ಅರ್ಜುನನು ಯುದ್ಧದಲ್ಲಿ ಅವರೆಲ್ಲರನ್ನೂ ತಡೆಯುವನು. ನಾನು ಬಾಣಗಳಿಂದ ಇವನ ತಲೆಯನ್ನು ಕೆಡವುವೆನು.

ಮನ್ಯತೇ ಛಿನ್ನಬಾಹುಂ ಮಾಂ ಭೂರಿಶ್ರವಸಮಾಹವೇ ।
ಉತ್ಸೃಜೈನಮಹಂ ವೈನಮೇಷ ಮಾಂ ವಾ ಹನಿಷ್ಯತಿ ॥ ೫೯ ॥

ಇವನು ನನ್ನನ್ನು ಬಾಹುವು ಕತ್ತರಿಸಲ್ಪಟ್ಟ ಭೂರಿಶ್ರವನೆಂದು ತಿಳಿದಿದ್ದಾನೆ. ಅವನನ್ನು ಬಿಡು. ನಾನು ಅವನನ್ನಾಗಲೀ, ಅವನು ನನ್ನನ್ನಾಗಲೀ ಕೊಲ್ಲುವೆವು (ಎಂದು ಹೇಳಿದನು).

ಸಂಜಯಃ

ಶೃಣ್ವನ್ ಪಾಂಚಾಲವಾಕ್ಯಾನಿ ಸಾತ್ಯಕಿಃ ಸರ್ಪವಚ್ಚ್ವಸನ್ ।
ಭೀಮಬಾಹ್ವಂತರೇ ಸಕ್ತೋ ವಿಸ್ಫುರತ್ಯನಿಶಂ ಬಲೀ ॥ ೬೦ ॥

ಸಂಜಯ– ಧೃಷ್ಟದ್ಯುಮ್ನನ ಮಾತುಗಳನ್ನು ಕೇಳಿ ಸಾತ್ಯಕಿಯು ಭೀಮನ ಭುಜದ ಮಧ್ಯದಲ್ಲಿಯೇ ಇದ್ದು ಸರ್ಪದಂತೆ ಉಸಿರನ್ನು ಬಿಡುತ್ತಾ ಬಲಿಷ್ಠನಾದ ಅವನು ಬಿಡಿಸಿಕೊಳ್ಳಲು ಸತತ ಪ್ರಯತ್ನವನ್ನು ಮಾಡಿದನು.

ತ್ವರಯಾ ವಾಸುದೇವಶ್ಚ ಧರ್ಮರಾಜಶ್ಚ ಮಾರಿಷ ।
ಯತ್ನೇನ ಮಹತಾ ವೀರೌ ವಾರಯಾಮಾಸತುಸ್ತತಃ ॥ ೬೧ ॥

ಎಲೈ ಶ್ರೇಷ್ಠನೇ, ಆಗ ವೀರರಾದ ಕೃಷ್ಣ ಮತ್ತು ಯುಧಿಷ್ಠಿರರು ದೊಡ್ಡ ಪ್ರಯತ್ನವನ್ನು ಮಾಡಿ ತ್ವರೆಯಿಂದ ಅವನನ್ನು ತಡೆದರು.

ನಿವಾರ್ಯ ಪರಮೇಷ್ವಾಸೌ ಕ್ರೋಧಸಂರಕ್ತಲೋಚನೌ ।
ಯುಯುತ್ಸವಃ ಪರಾನ್ ಸಂಖ್ಯೇ ಪ್ರತೀಯುಃ ಕ್ಷತ್ರಿಯರ್ಷಭಾಃ ॥ ೬೨ ॥

ಕ್ರೋಧದಿಂದ ರಕ್ತಲೋಚನರಾದ ಮಹಾಧನುರ್ಧಾರಿಗಳಾದ ಆ ಇಬ್ಬರನ್ನು ತಡೆದು ಕ್ಷತ್ರಿಯರ್ಷಭರು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೊರಟರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಅಶೀತ್ಯಧಿಕಶತತಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಅಶ್ವತ್ಥಾಮರಿಂದ ನಾರಾಯಣಾಸ್ತ್ರ ಪ್ರಯೋಗ.
ಕೃಷ್ಣನ ವಚನದಂತೆ ಯೋಧರ ಆತ್ಮರಕ್ಷಣೆ.
ಭೀಮಸೇನನ ಶಿರಸ್ಸಿನಲ್ಲಿ ಅಸ್ತ್ರದ ಪ್ರಜ್ವಲನ.

ಸಂಜಯಃ

ತತಃ ಸ ಕದನಂ ಚಕ್ರೇ ರಿಪೂಣಾಂ ದ್ರೋಣನಂದನಃ ।
ಯುಗಾಂತೇ ಸರ್ವಭೂತಾನಾಂ ಕಾಲಸೃಷ್ಟ ಇವಾಂತಕಃ ॥ ೧ ॥

ಸಂಜಯ– ಅನಂತರ ದ್ರೋಣಪುತ್ರರಾದ ಅಶ್ವತ್ಥಾಮರು ಯುಗಾಂತಕಾಲದಲ್ಲಿ ಸೃಷ್ಟನಾದ ಯಮನು ಸರ್ವಭೂತಗಳನ್ನು ಸಂಹರಿಸುವಂತೆ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ಧ್ವಜದ್ರುಮಂ ಶಸ್ತ್ರಶೃಂಗಂ ಹತನಾಗಮಹಾಶಿಲಮ್ ।
ಅಶ್ವಕಿಂಪುರುಷಾಕೀರ್ಣಂ ಶರಾಸನಲತಾವೃತಮ್ ॥ ೨ ॥

ಶೂಲಕ್ರವ್ಯಾದಸಂಘುಷ್ಟಂ ಭೂತಯಕ್ಷಗಣಾಕುಲಮ್ ।
ನಿಹತ್ಯ ಶಾತ್ರವಾನ್ ಭಲ್ಲೈಃ ಸೋಽಚಿನೋದ್ ದೇಹಪರ್ವತಮ್ ॥೩॥

ತಮ್ಮ ಭಲ್ಲಗಳಿಂದ ಶತ್ರುಗಳನ್ನು ಕೊಂದು ಅಶ್ವತ್ಥಾಮರು ಧ್ವಜಗಳೆಂಬ ವೃಕ್ಷಗಳಿಂದ ಕೂಡಿದ, ಶಸ್ತ್ರಗಳೆಂಬ ಶಿಖರದಿಂದ ಕೂಡಿದ, ಮೃತವಾದ ಗಜಗಳೆಂಬ ಕೋಡುಗಲ್ಲುಗಳಿಂದ ಕೂಡಿದ, ಅಶ್ವಗಳೆಂಬ ಕಿಂಪುರುಷರಿಂದ ಕೂಡಿದ, ಧನುಸ್ಸುಗಳೆಂಬ ರಥಗಳಿಂದ ಕೂಡಿದ, ಶೂರರೆಂಬ ಮಾಂಸಾಹಾರಿ ಪ್ರಾಣಿಗಳಿಂದ ಕೂಡಿದ, ಭೂತ-ಯಕ್ಷಗಣದಿಂದ ನಿಬಿಡವಾದ ದೇಹಪರ್ವತವನ್ನು ರಾಶಿ ಮಾಡಿದರು.

ತತೋ ವೇಗೇನ ಮಹತಾ ವಿನದ್ಯ ಸ ನರರ್ಷಭಃ ।
ಪ್ರತಿಜ್ಞಾಂ ಶ್ರಾವಯಾಮಾಸ ಪುನರೇವ ತವಾತ್ಮಜಮ್ ॥ ೪ ॥

ಅನಂತರ ಪುರುಷ ಶ್ರೇಷ್ಠರಾದ ಅವರು ವೇಗದಿಂದ ದೊಡ್ಡ ನಾದವನ್ನು ಮಾಡಿ ಪುನಃ ನಿನ್ನ ಪುತ್ರನಿಗೆ ತಮ್ಮ ಪ್ರತಿಜ್ಞೆಯನ್ನು ತಿಳಿಸಿದರು.

ಯಸ್ಮಾದ್ಯುಧ್ಯನ್ ತಮಾಚಾರ್ಯಂ ಧರ್ಮಕಂಚುಕಮಾಸ್ಥಿತಃ ।
ಮುಂಚ ಶಸ್ತ್ರಮಿತಿ ಪ್ರಾಹ ಕುಂತೀಪುತ್ರೋ ಯುಧಿಷ್ಠಿರಃ ॥ ೫ ॥

ತಸ್ಮಾತ್ ಸಂಪಶ್ಯತಸ್ತಸ್ಯ ದ್ರಾವಯಿಷ್ಯಾಮಿ ವಾಹಿನೀಮ್ ।
ವಿದ್ರಾವ್ಯ ಸತ್ಯಂ ಹಂತಾಸ್ಮಿ ಪಾಪಂ ಪಾಂಚಾಲ್ಯಮೇವ ತು ॥ ೬ ॥

ಸರ್ವಾನೇತಾನ್ ಹನಿಷ್ಯಾಮಿ ಯದಿ ಯೋತ್ಸ್ಯಂತಿ ಮಾಂ ರಣೇ ।
ಸತ್ಯಂ ತೇ ಪ್ರತಿಜಾನಾಮಿ ಪರಾವರ್ತಯ ವಾಹಿನೀಮ್ ॥ ೭ ॥

ಯಾವ ಕಾರಣದಿಂದ ಕುಂತೀಪುತ್ರನಾದ ಯುಧಿಷ್ಠಿರನು ಯುದ್ಧವನ್ನು ಮಾಡುತ್ತಾ ಧರ್ಮದ ಸೋಗನ್ನು ಧರಿಸಿ ಆಚಾರ್ಯರನ್ನು ಕುರಿತು- 'ಶಸ್ತ್ರತ್ಯಾಗವನ್ನು ಮಾಡಿ. ಎಂದು ಹೇಳಿದನೋ ಆ ಕಾರಣದಿಂದ ಅವನು ನೋಡುತ್ತಿರುವಂತೆಯೇ ಅವನ ಸೈನ್ಯವನ್ನು ಚದುರಿಸುವೆನು. ಅವನ ಸೈನ್ಯವನ್ನು ಚದುರಿಸಿ ಸತ್ಯವಾಗಿ ಪಾಪಿಯಾದ ಧೃಷ್ಟದ್ಯುಮ್ನನನ್ನು ಕೊಲ್ಲುವೆನು. ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಿದರೆ ಇವರೆಲ್ಲರನ್ನೂ ನಾನು ಕೊಲ್ಲುವೆನು. ಎಲೈ ದುರ್ಯೋಧನನೇ, ನಿನಗೆ ಸತ್ಯ

ಪ್ರತಿಜ್ಞೆಯನ್ನು ಮಾಡಿ ಹೇಳುತ್ತಿದ್ದೇನೆ, ಸೈನ್ಯವನ್ನು ಹಿಂದಿರುಗಿಸು' (ಎಂದು ಹೇಳಿದರು).

ತಚ್ಛ್ರುತ್ವಾ ತವ ಪುತ್ರಸ್ತು ವಾಹಿನೀಂ ಪರ್ಯವರ್ತಯತ್ ।
ಸಿಂಹನಾದೇನ ಮಹತಾ ವ್ಯಪೋಹ್ಯ ಸುಮಹದ್ಭಯಮ್ ॥ ೮ ॥

ಅದನ್ನು ಕೇಳಿದ ನಿನ್ನ ಪುತ್ರನು ಉಂಟಾದ ದೊಡ್ಡ ಭಯವನ್ನು ತ್ಯಜಿಸಿ ದೊಡ್ಡ ಸಿಂಹನಾದದಿಂದ ಸೈನ್ಯವನ್ನು ಹಿಂದಿರುಗಿಸಿದನು.

ತತಃ ಸಮಾಗಮೋ ರಾಜನ್ ಕುರುಪಾಂಡವಸೇನಯೋಃ ।
ಪುನರೇವಾಭವತ್ ತೀವ್ರಃ ಪೂರ್ಣಸಾಗರಯೋರಿವ ॥ ೯ ॥

ಎಲೈ ರಾಜನೇ, ಅನಂತರ ಕುರು-ಪಾಂಡವರ ಸೇನೆಗಳಿಗೆ ಎರಡು ಸಾಗರಗಳಿಗೆ ಉಂಟಾಗುವಂತೆ ತೀವ್ರವಾದ ಸಮಾಗಮವುಂಟಾಯಿತು.

ಸಂರಬ್ಧಾ ಹಿ ಸ್ಥಿರೀಭೂತಾ ದ್ರೋಣಪುತ್ರೇಣ ಕೌರವಾಃ ।
ಉದಗ್ರಾಃ ಪಾಂಡುಪಾಂಚಾಲಾ ದ್ರೋಣಸ್ಯ ನಿಧನೇನ ಚ ॥ ೧೦ ॥

ಕೋಪಗೊಂಡ ಕೌರವರು ದ್ರೋಣಪುತ್ರರಾದ ಅಶ್ವತ್ಥಾಮರ ಮಾತುಗಳಿಂದ ಸ್ಥಿರವಾಗಿ ನಿಂತರು. ಪಾಂಡು-ಪಾಂಚಾಲರು ದ್ರೋಣರ ವಧೆಯಿಂದ ಸನ್ನದ್ಧರಾಗಿ ನಿಂತರು.

ತೇಷಾಂ ಪರಮಹೃಷ್ಟಾನಾಂ ಜಯಮಾತ್ಮನಿ ಪಶ್ಯತಾಮ್ ।
ಸಂರಬ್ಧಾನಾಂ ಮಹಾವೇಗಃ ಪ್ರಾದುರಾಸೀದ್ ರಣಾಜಿರೇ ॥ ೧೧ ॥

ಬಹಳ ಸಂತೋಷಗೊಂಡು ತಮ್ಮ ಜಯವನ್ನು ಕಾಣುವ ಕ್ರುದ್ಧರಾದ ಅವರ ಮಹಾವೇಗವು ರಣಾಂಗಣದಲ್ಲಿ ಕಂಡುಬಂದಿತು.

ಯಥಾ ಶಿಲೋಚ್ಚಯೇ ಶೈಲಃ ಸಾಗರೇ ಸಾಗರೋ ಯಥಾ ।
ಪ್ರತಿಹನ್ಯೇತ ರಾಜೇಂದ್ರ ತಥಾऽऽಸನ್ ಕುರುಪಾಂಡವಾಃ ॥ ೧೨ ॥

ಎಲೈ ರಾಜೇಂದ್ರನೇ, ಪರ್ವತದಿಂದ ಪರ್ವತವನ್ನು ಹೊಡೆದಂತೆ, ಸಾಗರದಿಂದ ಸಾಗರವನ್ನು ಹೊಡೆದಂತೆ ಕುರು-ಪಾಂಡವರು ಹೊಡೆದಾಡಿದರು.

ತತಃ ಶಂಖಸಹಸ್ರಾಣಿ ಭೇರೀಣಾಮಯುತಾನಿ ಚ ।
ಅವಾದಯಂತ ಸಂಹೃಷ್ಟಾಃ ಕುರುಪಾಂಡವಸೈನಿಕಾಃ ॥ ೧೩ ॥

ಆಗ ಕುರು-ಪಾಂಡವ ಯೋಧರು ಸಂತೋಷಗೊಂಡು ಸಹಸ್ರ ಶಂಖಗಳನ್ನು ಊದಿ, ಹತ್ತು-ಸಹಸ್ರ ಭೇರಿಗಳನ್ನು ಬಾರಿಸಿದರು.

ತತೋ ನಿರ್ಮಥ್ಯಮಾನಸ್ಯ ಸಾಗರಸ್ಯೇವ ನಿಸ್ವನಃ ।
ಅಭವತ್ ತಸ್ಯ ಸೈನ್ಯಸ್ಯ ಸುಮಹಾನದ್ಭುತೋಪಮಃ ॥ ೧೪ ॥

ಆಗ ಎರಡು ಸೈನ್ಯಗಳು ಯುದ್ಧ ಮಾಡುತ್ತಿರಲು ಕಡೆಯಲ್ಪಟ್ಟ ಸಾಗರದ ಘೋಷದಂತೆ ಅದ್ಭುತವಾದ ದೊಡ್ಡ ನಾದವು ಉಂಟಾಯಿತು.

ಪ್ರಾದುಶ್ಚಕ್ರೇ ತತೋ ದ್ರೌಣಿರಸ್ತ್ರಂ ನಾರಾಯಣಂ ತದಾ ।
ಅಭಿಸಂಧಾಯ ಪಾಂಡೂನಾಂ ಪಾಂಚಾಲಾನಾಂ ಚ ವಾಹಿನೀಮ್ ॥

ಆಗ ಅಶ್ವತ್ಥಾಮರು ಪಾಂಡವರ ಮತ್ತು ಪಾಂಚಾಲರ ಸೈನ್ಯವನ್ನು ಉದ್ದೇಶಿಸಿ ನಾರಾಯಣಾಸ್ತ್ರವನ್ನು ಪ್ರಯೋಗಿಸಿದರು.

ಪ್ರಾದುರಾಸಂಸ್ತತೋ ಬಾಣಾ ದೀಪ್ತಾಗ್ರಾಃ ಖೇ ಸಹಸ್ರಶಃ ।
ಪಾಂಡವಾನ್ ಭಕ್ಷಯಿಷ್ಯಂತೋ ದೀಪ್ತಾಸ್ಯಾ ಇವ ಪನ್ನಗಾಃ ॥ ೧೬ ॥

ಆಗ ಆಕಾಶದಲ್ಲಿ ಜ್ವಲಿಸುವ ತುದಿಯುಳ್ಳ ಸಹಸ್ರಾರು ಬಾಣಗಳು ಜ್ವಲಿಸುವ ಮುಖವುಳ್ಳ ಸರ್ಪಗಳಂತೆ ಪಾಂಡವರನ್ನು ಭಕ್ಷಿಸುತ್ತಾ ಪ್ರಾದುರ್ಭವಿಸಿದವು.

ತೇ ದಿಶಃ ಖಂ ಚ ಸೈನ್ಯಂ ಚ ಸಮಾವೃಣ್ವನ್ ಮಹಾಹವೇ ।
ಮುಹೂರ್ತಾದ್ ಭಾಸ್ಕರಸ್ಯೇವ ರಾಜಲ್ಲೋಕಂ ಗಭಸ್ತಯಃ ॥ ೧೭ ॥

ಎಲೈ ರಾಜನೇ, ಸೂರ್ಯನ ಕಿರಣಗಳು ವ್ಯಾಪಿಸುವಂತೆ ಒಂದು ಮುಹೂರ್ತದಲ್ಲಿ ರಣರಂಗದಲ್ಲಿ ಆ ಬಾಣಗಳು ಎಲ್ಲ ದಿಕ್ಕುಗಳನ್ನೂ, ಅಂತರಿಕ್ಷವನ್ನೂ ಮತ್ತು ಸೈನ್ಯಗಳನ್ನೂ ವ್ಯಾಪಿಸಿದವು.

ತಥಾಪರೇ ದ್ಯೋತಮಾನಾ ಜ್ಯೋತೀಂಷೀವಾಂಬರೇಽಮಲೇ ।
ಪ್ರಾದುರಾಸನ್ ಮಹೀಪಾಲ ಕಾರ್ಷ್ಣಾಯಸಮಯಾ ಗುಡಾಃ ॥ ೧೮ ॥

ಎಲೈ ರಾಜನೇ, ಆಗ ಇನ್ನು ಕೆಲವು ಕಬ್ಬಿಣದ ಗುಡಗಳು (ಆಯುಧವಿಶೇಷಗಳು) ನಿರ್ಮಲವಾದ ಆಕಾಶದಲ್ಲಿ ಜ್ಯೋತಿಸ್ಸುಗಳಂತೆ ಪ್ರಕಾಶಮಾನವಾಗಿ ಪ್ರಾದುರ್ಭವಿಸಿದವು.

ಚತುರ್ದಿಶಂ ವಿಚಿತ್ರಾಶ್ಚ ಶತಘ್ನ್ಯೋಽಥ ಹುತಾಶಭಾಃ ।
ಚಕ್ರಾಣಿ ಚ ಕ್ಷುರಾಂತಾನಿ ಮಂಡಲಾನೀವ ಭಾಸ್ವತಃ ॥ ೧೯ ॥

ಶಸ್ತ್ರಾಕೃತಿಭಿರಾಕೀರ್ಣಮತೀವ ಭರತರ್ಷಭ ।
ದೃಷ್ಟ್ವಾಽಂತರಿಕ್ಷಮಾವಿಗ್ನಾಃ ಪಾಂಡುಪಾಂಚಾಲಸೃಂಜಯಾಃ ॥ ೨೦ ॥

ಎಲೈ ಭರತರ್ಷಭನೇ, ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯನ್ನು ಹೋಲುವ ವಿಚಿತ್ರವಾದ ಶತಘ್ನಿಗಳು, ಸೂರ್ಯಮಂಡಲದಂತಿರುವ ಕತ್ತಿಯ ಧಾರೆಯಂತಹ ಅಲುಗುಳ್ಳ ಚಕ್ರಗಳು ಕಾಣಿಸಿಕೊಂಡವು. ಅಂತರಿಕ್ಷವು ಶಸ್ತ್ರಾಕೃತಿಗಳಿಂದ ಬಹಳ ನಿಬಿಡವಾಗಿ ತುಂಬಿರುವುದನ್ನು ನೋಡಿ ಪಾಂಡು-ಪಾಂಚಾಲ-ಸೃಂಜಯರು ಭೀತರಾದರು.

ಯಥಾ ಯಥಾ ಹ್ಯಯುದ್ಧ್ಯಂತ ಪಾಂಡವಾನಾಂ ಮಹಾರಥಾಃ ।
ತಥಾ ತಥಾ ತದಸ್ತ್ರಂ ವೈ ವ್ಯವರ್ಧತ ಜನಾಧಿಪ ॥ ೨೧ ॥

ಎಲೈ ರಾಜನೇ, ಪಾಂಡವ ಮಹಾರಥರು ಯುದ್ಧ ಮಾಡಿದಂತೆ ಮಾಡಿದಂತೆ ಆ ಅಸ್ತ್ರವು ಅಭಿವೃದ್ಧಿಯನ್ನು ಹೊಂದಿತು.

ವಧ್ಯಮಾನಾಸ್ತಥಾಸ್ತ್ರೇಣ ತೇನ ನಾರಾಯಣೇನ ವೈ ।
ದಹ್ಯಮಾನಾನಲೇನೇವ ಸರ್ವತೋಽಭ್ಯರ್ದಿತಾ ರಣೇ ॥ ೨೨ ॥

ನಾರಾಯಣಾಸ್ತ್ರದಿಂದ ಹೊಡೆಯಲ್ಪಡುತ್ತಿದ್ದ ಆ ಯೋಧರು ಹಬ್ಬುವ ಅಗ್ನಿಯಿಂದಲೋ ಎಂಬಂತೆ ಎಲ್ಲಕಡೆಯಲ್ಲಿಯೂ ರಣರಂಗದಲ್ಲಿ ಪೀಡಿಸಲ್ಪಟ್ಟರು.

ಯಥಾ ಹಿ ಶಿಶಿರಾಪಾಯೇ ದಹೇತ್ ಕಕ್ಷಂ ಹುತಾಶನಃ ।
ತಥಾ ತದಸ್ತ್ರಂ ಪಾಂಡೂನಾಂ ದದಾಹ ಧ್ವಜಿನೀಂ ಪ್ರಭೋ ॥ ೨೩ ॥

ಎಲೈ ಪ್ರಭುವೇ, ಹಿಮಕಾಲವು ಕಳೆದ ಮೇಲೆ ಅಗ್ನಿಯು ಹುಲ್ಲಿನ ಹೊಲವನ್ನು ಸುಡುವಂತೆ ಆ ಅಸ್ತ್ರವು ಪಾಂಡವರ ಸೇನೆಯನ್ನು ದಹಿಸಿತು.

ಆಪೂರ್ಯಮಾಣೇನಾಸ್ತ್ರೇಣ ಸೈನ್ಯೇ ಕ್ಷೀಯತಿ ಚಾಭಿಭೋ ।
ಜಗಾಮ ಪರಮಂ ತ್ರಾಸಂ ಧರ್ಮಪುತ್ರೋ ಯುಧಿಷ್ಠಿರಃ ॥ ೨೪ ॥

ಎಲೈ ಶತ್ರುಪರಿಭಾವಕನೇ, ಅಭಿವೃದ್ಧಿಯನ್ನು ಹೊಂದುತ್ತಿದ್ದ ಅಸ್ತ್ರದಿಂದ ತನ್ನ ಸೈನ್ಯವು ಕ್ಷೀಣಿಸುತ್ತಿರಲು ಧರ್ಮಪುತ್ರನಾದ ಯುಧಿಷ್ಠಿರನು ಬಹಳ ತ್ರಾಸವನ್ನು ಹೊಂದಿದನು.

ದ್ರವಮಾಣಂ ತು ತತ್ ಸೈನ್ಯಂ ದೃಷ್ಟ್ವಾ ವಿಗತಚೇತನಮ್ ।
ಮಧ್ಯಸ್ಥಾಂ ಚ ಪಾರ್ಥಸ್ಯ ಧರ್ಮಪುತ್ರೋಽಬ್ರವೀದಿದಮ್ ॥ ೨೫ ॥

ವಿವೇಕವನ್ನು ಕಳೆದುಕೊಂಡು ಓಡುತ್ತಿದ್ದ ಆ ಸೈನ್ಯವನ್ನೂ ಅರ್ಜುನನು ಸುಮ್ಮನಿರುವುದನ್ನೂ ನೋಡಿ ಧರ್ಮಪುತ್ರನು ಹೀಗೆ ಮಾತನಾಡಿದನು.

ಧೃಷ್ಟದ್ಯುಮ್ನ ಪಲಾಯಸ್ವ ಸಹ ಪಾಂಚಾಲಸೇನಯಾ ।
ಸಾತ್ಯಕೇ ತ್ವಂ ಚ ಗಚ್ಛಸ್ವ ವೃಷ್ಣ್ಯಂಧಕವೃತೋ ಗೃಹಾನ್ ॥ ೨೬ ॥

ಎಲೈ ಧೃಷ್ಟದ್ಯುಮ್ನನೇ, ಪಾಂಚಾಲ ಸೇನೆಯ ಜೊತೆಯಲ್ಲಿ ಓಡಿಹೋಗು. ಎಲೈ ಸಾತ್ಯಕಿಯೇ, ವೃಷ್ಣ್ಯಂಧಕನಿಂದ ಪರಿವೃತನಾಗಿ ನೀನೂ ಮನೆಗೆ ಹೋಗು.

ವಾಸುದೇವೋಽಪಿ ಧರ್ಮಾತ್ಮಾ ಕರಿಷ್ಯತ್ಯಾತ್ಮನಃ ಕ್ಷಮಮ್ ।
ಉಪದೇಷ್ಟುಂ ಸಮರ್ಥೋಽಯಂ ಲೋಕಸ್ಯ ಕಿಮುತಾತ್ಮನಃ ॥ ೨೭ ॥

ಧರ್ಮಾತ್ಮನಾದ ಕೃಷ್ಣನೂ ಸಹ ತನಗೆ ಯೋಗ್ಯವಾದುದನ್ನು ಮಾಡುವನು. ಜಗತ್ತಿಗೇ ಉಪದೇಶ ಮಾಡುವ ಅವನು ತನ್ನನ್ನು ರಕ್ಷಿಸಿಕೊಳ್ಳಲಾರನೆ?

ಸಂಗ್ರಾಮಸ್ತು ನ ಕರ್ತವ್ಯಃ ಸರ್ವಸೈನ್ಯಾನ್ ಬ್ರವೀಮಿ ವಃ ।
ಅಹಂ ಹಿ ಸಹ ಸೋದರ್ಯೈಃ ಪ್ರವೇಕ್ಷ್ಯೇ ಹವ್ಯವಾಹನಮ್ ॥ ೨೮ ॥

ಎಲ್ಲ ಸೈನ್ಯಗಳಿಗೂ ಹೇಳುತ್ತಿದ್ದೇನೆ. ಯುದ್ಧವನ್ನು ಮಾಡಬೇಡಿ. ನಾನು ನನ್ನ ಎಲ್ಲ ಸಹೋದರರ ಜೊತೆಯಲ್ಲಿ ಅಗ್ನಿಯನ್ನು ಪ್ರವೇಶಿಸುವೆನು.

ಭೀಷ್ಮದ್ರೋಣಾರ್ಣವಂ ತೀರ್ತ್ವಾ ಸಂಗ್ರಾಮಂ ಘೋರುದುಸ್ತರಮ್ ।
ಅವಸೇತ್ಸ್ಯಾಮ್ಯಸಲಿಲೇ ಸಗರೋ ದ್ರೌಣಿಗೋಷ್ಪದೇ ॥ ೨೯ ॥

ಭೀರುಗಳಿಂದ ದಾಟಲು ದುಸ್ತರವಾದ ಯುದ್ಧರೂಪವಾದ ಭೀಷ್ಮ-ದ್ರೋಣರೆಂಬ ಸಮುದ್ರವನ್ನು ದಾಟಿ, ಅಶ್ವತ್ಥಾಮರೆಂಬ ಗೋಷ್ಪದಜಲದಲ್ಲಿ ನಾನು ಪರಿವಾರ ಸಹಿತನಾಗಿ ಮುಳುಗುವೆನು.

ಕಾಮಃ ಸಂಪದ್ಯತಾಮಸ್ಯ ಬೀಭತ್ಸೋರಾಶು ಮಾಂ ಪ್ರತಿ ।
ಕಲ್ಯಾಣವೃತ್ತ ಆಚಾರ್ಯೋ ಮಯಾ ಯುಧಿ ನಿಪಾತಿತಃ ॥ ೩೦ ॥

ಶುಭವಾದ ನಡತೆಯುಳ್ಳ ಆಚಾರ್ಯರು ನನ್ನಿಂದ ಯುದ್ಧದಲ್ಲಿ ಕೊಲ್ಲಲ್ಪಟ್ಟುದರಿಂದ ಅರ್ಜುನನ ಆಸೆಯು ನನ್ನ ವಿಷಯದಲ್ಲಿ ಶೀಘ್ರವಾಗಿ ನೆರವೇರಲಿ.

ಯೇನ ಬಾಲಃ ಸ ಸೌಭದ್ರೋ ಯುದ್ಧಾನಾಮವಿಶಾರದಃ ।
ಸಮರ್ಥೈರ್ಬಹುಭಿಃ ಕ್ರೂರೈರ್ಹಾತಿತೋ ನಾಭಿಪಾಲಿತಃ ॥ ೩೧ ॥

ಯೇನಾವಿಬ್ರುವತಾ ಪ್ರಶ್ನಂ ತಥಾ ಕೃಷ್ಣಾ ಸಭಾಂ ಗತಾ ।
ಉಪೇಕ್ಷಿತಾ ಸಪುತ್ರೇಣ ದಾಸಭಾವಂ ನಿಯಚ್ಛತೀ ॥ ೩೨ ॥

ಜಿಘಾಂಸುರ್ಧಾರ್ತರಾಷ್ಟ್ರಶ್ಚ ಶ್ರಾಂತೇಷ್ವಶ್ವೇಷು ಫಲ್ಗುನಮ್ ।
ಕವಚೇನ ತಥಾ ಯುಕ್ತೋ ರಕ್ಷಾರ್ಥಂ ಸೈಂಧವಸ್ಯ ಚ ॥ ೩೩ ॥

ಯೇನ ಬ್ರಹ್ಮಾಸ್ತ್ರವಿದುಷಾ ಪಾಂಚಾಲಾಃ ಸತ್ಯಜಿನ್ಮುಖಾಃ ।
ಕುರ್ವಾಣಾ ಮಜ್ಜಯೇ ಯತ್ನಂ ಸಮೂಲಾ ವಿನಿಪಾತಿತಾಃ ॥ ೩೪ ॥

ಯೇನ ಪ್ರವ್ರಾಜ್ಯಮಾನಾಶ್ಚ ರಾಜ್ಯಾದ್ ವಯಮಧರ್ಮತಃ ।
ನಿವಾರ್ಯಮಾಣೇನಾಸ್ಮಾಭಿರನುಗಂತುಂ ತದೇಷಿತಾಃ ॥ ೩೫ ॥

ಯೋಽಸಾವತ್ಯಂತಮಸ್ಮಾಸು ಕುರ್ವಾಣಃ ಸೌಹೃದಂ ಪರಮ್ ।
ಹತಸ್ತದರ್ಥೇ ಮರಣಂ ಗಮಿಷ್ಯಾಮಿ ಸಬಾಂಧವಃ ॥ ೩೬ ॥

ಯಾವ ಕಾರಣದಿಂದ ಯುದ್ಧವಿಶಾರದನಲ್ಲದ ಬಾಲಕನಾದ ಅಭಿಮನ್ಯುವು ಸಮರ್ಥರಾದ ಕೌರವರಾದ ಅನೇಕರಿಂದ ಕೊಲ್ಲಲ್ಪಟ್ಟಾಗ ನಾನು ರಕ್ಷಿಸಲಿಲ್ಲವೋ, ಯಾವ ಪುತ್ರಸಹಿತರಾದ ದ್ರೋಣರು ಸಭೆಗೆ ಬಂದ ದ್ರೌಪದಿಯು ದಾಸಭಾವವನ್ನು ವಿರೋಧಿಸಿ ಪ್ರಶ್ನೆಯನ್ನು ಮಾಡಿದಾಗ ಉತ್ತರವನ್ನು ಕೊಡದೆ ಸುಮ್ಮನಿದ್ದರೋ, ಯಾವ

ದ್ರೋಣರು ಅಶ್ವಗಳು ದಣಿದಿರಲು ಅರ್ಜುನನು ಕೊಲ್ಲಲು ಬಯಸಿದ ದುರ್ಯೋಧನನಿಗೆ ಸೈಂಧವನನ್ನು ರಕ್ಷಣೆ ಮಾಡುವುದಕ್ಕಾಗಿ ದಿವ್ಯಕವಚವನ್ನು ತೊಡಿಸಿದರೋ, ಬ್ರಹ್ಮಾಸ್ತ್ರವನ್ನು ತಿಳಿದ ಯಾವ ದ್ರೋಣರಿಂದ ನನ್ನ ಜಯದಲ್ಲಿ ಪ್ರಯತ್ನಿಸುವ ಸತ್ಯಜಿತನೇ ಮೊದಲಾದ ಪಾಂಚಾಲರು ಯುದ್ಧದಲ್ಲಿ ಮೂಲ ಸಹಿತವಾಗಿ ವಿನಾಶಗೊಳಿಸಲ್ಪಟ್ಟರೋ, ಯಾವ ದ್ರೋಣರು ನಾವು ಅಧರ್ಮದಿಂದ ರಾಜ್ಯಭ್ರಷ್ಟರಾಗಿ ಕಾಡಿಗೆ ಹೋಗುವಾಗ ನಿವಾರಿಸಿದರೂ ನಮ್ಮ ಜೊತೆಯಲ್ಲಿ ಬರುವುದಕ್ಕೆ ಬಯಸಿದರೋ, ಯಾವ ದ್ರೋಣರು ನಮ್ಮಲ್ಲಿ ಪರಮ ಸೌಹಾರ್ದವನ್ನು ಮಾಡಿದರೋ ಅಂತಹ ಅವರ ವಧೆಯ ಕಾರಣದಿಂದಾಗಿ ನಾನು ಬಂಧುಗಳೊಡನೆ ಮರಣವನ್ನು ಹೊಂದುವೆನು.

ಏವಂ ಬ್ರುವತಿ ಕೌಂತೇಯೇ ದಾಶಾರ್ಹಸ್ತ್ವರಿತಸ್ತತಃ ।
ನಿವಾರ್ಯ ಸೈನ್ಯಂ ಬಾಹುಭ್ಯಾಮಿದಂ ವಚನಮಬ್ರವೀತ್ ॥ ೩೭ ॥

ಕೌಂತೇಯನಾದ ಯುಧಿಷ್ಠಿರನು ಹೀಗೆ ಹೇಳುತ್ತಿರಲು ದಾಶಾರ್ಹನಾದ ಕೃಷ್ಣನು ತನ್ನ ಬಾಹುಗಳಿಂದ ಸೈನ್ಯವನ್ನು ತಡೆದು ಈ ಮಾತನ್ನು ಆಡಿದನು.

ಶೀಘ್ರಂ ನ್ಯಸ್ಯತ ಶಸ್ತ್ರಾಣಿ ವಾಹೇಭ್ಯಶ್ಚಾವರೋಹತ ।
ಏಷ ಯೋಗೋऽತ್ರ ವಿಹಿತಃ ಪ್ರತಿಘಾತೋ ಮಹಾತ್ಮನಾ ॥ ೩೮ ॥

ಶೀಘ್ರವಾಗಿ ಅಸ್ತ್ರಗಳನ್ನು ಕೆಳಗಿಡಿ. ವಾಹನದಿಂದ ಕೆಳಗೆ ಇಳಿಯಿರಿ. ಈ ಅಸ್ತ್ರಕ್ಕೆ ಇದು ಪ್ರತಿಘಾತ ಮಾಡುವ ಉಪಾಯವೆಂದು ಮಹಾತ್ಮನಾದ ನಾರಾಯಣನು ವಿಧಿಸಿದ್ದಾನೆ.

ದ್ವಿಪಾಶ್ವಸ್ಯಂದನೇಭ್ಯಶ್ಚ ಕ್ಷಿತಿಂ ಸರ್ವೇऽವರೋಹತ ।
ಏವಮೇತನ್ನ ವೋ ಹನ್ಯಾದಸ್ತ್ರಂ ಭೂಮೌ ನಿರಾಯುಧಾನ್ ॥ ೩೯ ॥

ಎಲ್ಲರೂ ಗಜಗಳಿಂದಲೂ, ಅಶ್ವಗಳಿಂದಲೂ, ರಥಗಳಿಂದಲೂ ಭೂಮಿಯ ಮೇಲೆ ಇಳಿಯಿರಿ. ಹಾಗೆ ಮಾಡಿದರೆ ಭೂಮಿಯಲ್ಲಿ ನಿರಾಯುಧರಾಗಿ ನಿಂತ ನಿಮ್ಮನ್ನು ಅಸ್ತ್ರವು ಕೊಲ್ಲುವುದಿಲ್ಲ.

ಯಥಾ ಯಥಾ ಹಿ ಯುದ್ಧ್ಯಂತೇ ಯೋಧಾ ಹ್ಯಸ್ತ್ರಬಲಂ ಪ್ರತಿ ।
ತಥಾ ತಥಾ ಭವಂತ್ಯೇತೇ ಕೌರವಾ ಬಲವತ್ತರಾಃ ॥ ೪೦ ॥

ಸೈನಿಕರು ಅಸ್ತ್ರದ ವಿರುದ್ಧವಾಗಿ ಯುದ್ಧವನ್ನು ಮಾಡಿದಂತೆ ಮಾಡಿದಂತೆ ಅಸ್ತ್ರದ ಬಲವು ಹೆಚ್ಚಿ ಈ ಕೌರವರು ಹೆಚ್ಚು ಬಲಿಷ್ಠರಾಗುತ್ತಾರೆ.

ನಿಕ್ಷೇಪ್ಸ್ಯಂತಿ ಚ ಶಸ್ತ್ರಾಣಿ ವಾಹನೇಭ್ಯೋಽವರುಹ್ಯ ಯೇ ।
ತಾನ್ ನೈತದಸ್ತ್ರಂ ಸಂಗ್ರಾಮೇ ನಿಹನಿಷ್ಯತಿ ಮಾನವಾನ್ ॥ ೪೧ ॥

ಯಾರು ವಾಹನದಿಂದ ಇಳಿದು ಶಸ್ತ್ರವನ್ನು ತ್ಯಜಿಸುವರೋ ಅಂತಹ ಯೋಧರನ್ನು ಯುದ್ಧದಲ್ಲಿ ಈ ಅಸ್ತ್ರವು ಕೊಲ್ಲುವುದಿಲ್ಲ.

ಯೇ ತ್ವೇತತ್ ಪ್ರತಿಯೋತ್ಸ್ಯಂತಿ ಮನಸಾಪೀಹ ಕೇಚನ ।
ನಿಹನಿಷ್ಯತಿ ತಾನ್ ಸರ್ವಾನ್ ರಸಾತಳಗತಾನಪಿ ॥ ೪೨ ॥

ಯಾರು ಮನಸ್ಸಿನಿಂದಾದರೂ ಈ ಅಸ್ತ್ರದ ಜೊತೆಯಲ್ಲಿ ಯುದ್ಧವನ್ನು ಮಾಡುವರೋ ಅವರು ರಸಾತಳಲೋಕದಲ್ಲಿದ್ದರೂ ಈ ಅಸ್ತ್ರವು ಅವರನ್ನು ಕೊಲ್ಲುವುದು (ಎಂದು ಹೇಳಿದನು).

ತೇ ವಚಸ್ತಸ್ಯ ತಚ್ಛ್ರುತ್ವಾ ವಾಸುದೇವಸ್ಯ ಭಾರತ ।
ಈಷುಃ ಸರ್ವೇಽಸ್ತ್ರಮುತ್ಸ್ರಷ್ಟುಂ ಮನೋಭಿಃ ಕರಣೈಃ ಚ ॥ ೪೩ ॥

ಎಲೈ ಭಾರತನೇ, ಕೃಷ್ಣನ ಆ ಮಾತುಗಳನ್ನು ಕೇಳಿ ಎಲ್ಲರೂ ಮನಸ್ಸಿನಿಂದಲೂ ಮತ್ತು ದೇಹದಿಂದಲೂ ಆ ಅಸ್ತ್ರವನ್ನು ತ್ಯಜಿಸಲು ಬಯಸಿದರು.

ತತ ಉತ್ಸ್ರಷ್ಟುಕಾಮಾಂಸ್ತಾನಸ್ತ್ರಾಣ್ಯಾಲಕ್ಷ್ಯ ಪಾಂಡವಃ ।
ಭೀಮಸೇನೋಽಬ್ರವೀದ್ ರಾಜನ್ನಿದಂ ಸಂಹರ್ಷಯನ್ ವಚಃ॥ ೪೪ ॥

ಎಲೈ ರಾಜನೇ, ಆಗ ಪಾಂಡುಪುತ್ರನಾದ ಭೀಮಸೇನನು ಯೋಧರು ಅಸ್ತ್ರಗಳನ್ನು ತ್ಯಜಿಸಲು ಉದ್ಯುಕ್ತರಾಗಿರುವುದನ್ನು ನೋಡಿ ಅವರಿಗೆ ಸಂತೋಷವನ್ನುಂಟು ಮಾಡುತ್ತಾ ಈ ಮಾತನ್ನು ಹೇಳಿದನು.

ನ ಕಥಂಚನ ಶಸ್ತ್ರಾಣಿ ಮೋಕ್ತವ್ಯಾನೀಹ ಕೇನಚಿತ್ ।
ಅಹಮಾವಾರಯಿಷ್ಯಾಮಿ ದ್ರೋಣಪುತ್ರಾಸ್ತ್ರಮಾಶುಗೈಃ ॥ ೪೫ ॥

ಯಾರೂ ಶಸ್ತ್ರವನ್ನು ತ್ಯಜಿಸಬೇಡಿ, ಅಶ್ವತ್ಥಾಮರ ಅಸ್ತ್ರವನ್ನು ಶೀಘ್ರವಾದ ಬಾಣಗಳಿಂದ ನಾನು ತಡೆಯುವೆನು.

ಅಥ ವಾಪ್ಯನಯಾ ಗುರ್ವ್ಯಾ ಹೇಮವಿಗ್ರಹಯಾ ರಣೇ ।
ಕಾಲವದ್ ವಿಚರಿಷ್ಯಾಮಿ ದ್ರೌಣೇರಸ್ತ್ರಂ ವಿಶಾತಯನ್ ॥ ೪೬ ॥

ಅಥವಾ ಸುವರ್ಣಾಲಂಕೃತವಾದ ಭಾರವಾದ ಈ ಗದೆಯನ್ನು ಧರಿಸಿ ರಣರಂಗದಲ್ಲಿ ಅಶ್ವತ್ಥಾಮರ ಅಸ್ತ್ರವನ್ನು ನಾಶಗೊಳಿಸುತ್ತಾ ಯಮನಂತೆ ಸಂಚರಿಸುವೆನು.

ನ ಹಿ ಮೇ ವಿಕ್ರಮೇ ತುಲ್ಯಃ ಕಶ್ಚಿದಸ್ತಿ ಪುಮಾನಿಹ ।
ಯಥೈವ ಸವಿತುಸ್ತುಲ್ಯಂ ಜ್ಯೋತಿರನ್ಯನ್ನ ವಿದ್ಯತೇ ॥ ೪೭ ॥

ಸೂರ್ಯನಿಗೆ ಸದೃಶವಾದ ಇನ್ನೊಂದು ಪ್ರಕಾಶವು ಇಲ್ಲದಿರುವಂತೆ ನನ್ನ ಪರಾಕ್ರಮಕ್ಕೆ ಸದೃಶವಾದ ಪರಾಕ್ರಮವುಳ್ಳ ಬೇರೆ ಯಾವ ಪುರುಷನೂ ಇಲ್ಲ.

ಪಶ್ಯಧ್ವಂ ಮೇ ದೃಢೌ ಬಾಹೂ ನಾಗರಾಜಕರೋಪಮೌ ।
ಸಮರ್ಥೌ ಪರ್ವತಸ್ಯಾಪಿ ಶೈಶಿರಸ್ಯ ನಿವಾರಣೇ ॥ ೪೮ ॥

ಆನೆಯ ಸೊಂಡಿಲಿನಂತಿರುವ ನನ್ನ ದೃಢವಾದ ಬಾಹುಗಳನ್ನು ನೋಡಿ. ಇವು ಹಿಮಾಲಯ ಪರ್ವತವನ್ನು ತಡೆಯಲೂ ಸಹ ಸಮರ್ಥವಾದವು.

ನಾಗಾಯುತಸಮಪ್ರಾಣೋ ಹ್ಯಹಮೇಕೋ ನರೇಷ್ವಿಹ ।
ಶಕ್ರೋ ಯಥಾऽಪ್ರತಿದ್ವಂದ್ವೋ ದಿವಿ ದೇವೇಷು ವಿಶ್ರುತಃ ॥ ೪೯ ॥

ಮನುಷ್ಯರಲ್ಲಿ ನಾನೊಬ್ಬನೇ ಹತ್ತು ಸಾವಿರ ಆನೆಗಳ ಬಲವುಳ್ಳವನು. ಇಂದ್ರನು ದೇವತೆಗಳಲ್ಲಿ ಸ್ವರ್ಗಲೋಕದಲ್ಲಿ ಅಪ್ರತಿದ್ವಂದ್ವನೆಂದು ಪ್ರಸಿದ್ಧನಾದಂತೆ ನಾನೂ ಸಹ ಅಪ್ರತಿದ್ವಂದ್ವನಾಗಿದ್ದೇನೆ.

ಅದ್ಯ ಪಶ್ಯತ ಮೇ ವೀರ್ಯಂ ಬಾಹ್ವೋಃ ಪೀನಾಂಸಯೋರ್ಯುಧಿ ।
ಜ್ವಲಮಾನಸ್ಯ ದೀಪ್ತಸ್ಯ ದ್ರೌಣೇರಸ್ತ್ರಸ್ಯ ವಾರಣೇ ॥ ೫೦ ॥

ಈ ದಿನ ಜ್ವಲಿಸುತ್ತಿರುವ ಅಶ್ವತ್ಥಾಮರ ಅಸ್ತ್ರಗಳ ನಿವಾರಣೆಯ ವಿಷಯದಲ್ಲಿ ನನ್ನ ಬಾಹುಗಳ ಮತ್ತು ಪೀನವಾದ ವಕ್ಷಃಸ್ಥಲದ ಪರಾಕ್ರಮವನ್ನು ರಣರಂಗದಲ್ಲಿ ನೋಡಿ.

ಯದಿ ನಾರಾಯಣಾಸ್ತ್ರಸ್ಯ ಪ್ರತಿಯೋದ್ಧಾ ನ ವಿದ್ಯತೇ ।
ಅದ್ಯೈನಂ ಪ್ರತಿಯೋತ್ಸ್ಯಾಮಿ ಪಶ್ಯತ್ಸು ಕುರುಪಾಂಡುಷು ॥ ೫೧ ॥

ನಾರಾಯಣಾಸ್ತ್ರಕ್ಕೆ ಪ್ರತಿಯಾಗಿ ಯುದ್ಧಮಾಡುವವನು ಇನ್ನೊಬ್ಬನು ಇಲ್ಲದಿದ್ದರೆ ಈ ದಿನ ಕೌರವರು ಮತ್ತು ಪಾಂಡವರು ನೋಡುತ್ತಿರುವಂತೆಯೇ ನಾನು ಪ್ರತಿಯಾಗಿ ಯುದ್ಧವನ್ನು ಮಾಡುವೆನು.

ಸಂಜಯಃ

ಏವಮುಕ್ತ್ವಾ ತತೋ ಭೀಮೋ ದ್ರೋಣಪುತ್ರಮರಿಂದಮಃ ।
ಅಭ್ಯಯಾನ್ಮೇಘಘೋಷೇಣ ರಥೇನಾದಿತ್ಯವರ್ಚಸಾ ॥ ೫೨ ॥

ಸಂಜಯ– ಹೀಗೆ ಹೇಳಿ ಅರಿಂದಮನಾದ ಭೀಮನು ಮೇಘಘೋಷವುಳ್ಳ ಆದಿತ್ಯಕಾಂತಿಯುಳ್ಳ ತನ್ನ ರಥದಿಂದ ಶೀಘ್ರವಾಗಿ ಅಶ್ವತ್ಥಾಮರ ಮೇಲೆ ನುಗ್ಗಿದನು.

ಸ ಏನಮಿಷುಜಾಲೇನ ಲಘುತ್ವಾಚ್ಛೀಘ್ರವಿಕ್ರಮಃ ।
ನಿಮೇಷಮಾತ್ರೇಣಾಸಾದ್ಯ ಕುಂತೀಪುತ್ರೋಽಭ್ಯವಾಕಿರತ್ ॥ ೫೩ ॥

ಶೀಘ್ರವಿಕ್ರಮನೂ, ಮಹಾವೇಗವುಳ್ಳವನೂ ಆದ ಕುಂತೀಪುತ್ರನಾದ ಭೀಮಸೇನನು ಒಂದು ನಿಮಿಷದಲ್ಲಿ ಅಶ್ವತ್ಥಾಮರನ್ನು ತಲುಪಿ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತತೋ ದ್ರೌಣಿಃ ಪ್ರಹಸ್ಯೈನಂ ಮುದಾ ಸಮಭಿಭಾಷ್ಯ ಚ ।
ಅವಾಕಿರತ್ ಪ್ರದೀಪ್ತಾಗ್ನೈಃ ಶರೈಸ್ತೈರಭಿಮಂತ್ರಿತೈಃ ॥ ೫೪ ॥

ಆಗ ಅಶ್ವತ್ಥಾಮರು ನಕ್ಕು ಸಂತೋಷದಿಂದ ಅವನ ಜೊತೆಗೆ ಮಾತನಾಡಿ, ಜ್ವಲಿಸುವ ತುದಿಯುಳ್ಳ ಅಭಿಮಂತ್ರಿತವಾದ ಬಾಣಗಳಿಂದ ಅವನನ್ನು ಪೀಡಿಸಿದರು.

ಪನ್ನಗೈರಿವ ದೀಪ್ತಾಸ್ಯೈರ್ವಮದ್ಭಿರನಲಂ ರಣೇ ।
ಅವಕೀರ್ಣೋಽಭವತ್ ಪಾರ್ಥಃ ಸ್ಫುಲಿಂಗೈರಿವ ಕಾಂಚನೈಃ ॥ ೫೫ ॥

ದೀಪ್ತವಾದ ಮುಖವುಳ್ಳ ಅಗ್ನಿಯನ್ನು ಹೋಲುವ ಸರ್ಪಗಳಿಂದಲೋ ಎಂಬಂತೆ, ಕಾಂಚನಮಯವಾದ ಕಿಡಿಗಳಿಂದಲೋ ಎಂಬಂತೆ ರಣರಂಗದಲ್ಲಿ ಆ ಬಾಣಗಳಿಂದ ಭೀಮಸೇನನು ತುಂಬಿಹೋದನು.

ತಸ್ಯ ರೂಪಮಭೂದ್ ರಾಜನ್ ಭೀಮಸೇನಸ್ಯ ಸಂಯುಗೇ ।
ಖದ್ಯೋತೈರಾವೃತಸ್ಯೇವ ಪರ್ವತಸ್ಯ ದಿನಕ್ಷಯೇ ॥ ೫೬ ॥

ಎಲೈ ರಾಜನೇ, ರಣರಂಗದಲ್ಲಿ ಭೀಮಸೇನನ ಆ ರೂಪವು ರಾತ್ರಿಯಲ್ಲಿ ಮಿಣುಕು ಹುಳುಗಳಿಂದ ಆವೃತವಾದ ಪರ್ವತದಂತೆ ಇದ್ದಿತು.

ತದಸ್ತ್ರಂ ದ್ರೋಣಪುತ್ರಸ್ಯ ತಸ್ಮಿನ್ ಪ್ರತಿಸಮಸ್ಯತಿ ।
ಅವರ್ಧತ ಮಹಾರಾಜ ಯಥಾಗ್ನಿರನಿಲೋದ್ಧತಃ ॥ ೫೭ ॥

ಭೀಮಸೇನನು ಪ್ರತಿಯಾಗಿ ಬಾಣವನ್ನು ಬಿಡುತ್ತಿರಲು ಎಲೈ ಮಹಾರಾಜನೇ, ದ್ರೋಣಪುತ್ರರ ಆ ಅಸ್ತ್ರವು ವಾಯುವಿನಿಂದ ಉದ್ಧತವಾದ ಅಗ್ನಿಯಂತೆ ವೃದ್ಧಿಯನ್ನು ಹೊಂದಿತು.

ವಿವರ್ಧಮಾನಮಾಲಕ್ಷ್ಯ ತದಸ್ತ್ರಂ ಭೀಮವಿಕ್ರಮಮ್ ।
ಪಾಂಡುಸೈನ್ಯಮೃತೇ ಭೀಮಂ ಸುಮಹದ್ ಭಯಮಾವಿಶತ್ ॥ ೫೮ ॥

ಭಯಂಕರವಾದ ಸಾಮರ್ಥ್ಯವುಳ್ಳ ಆ ಅಸ್ತ್ರವು ಅಭಿವೃದ್ಧಿಯನ್ನು ಹೊಂದುತ್ತಿರುವುದನ್ನು ನೋಡಿ ಭೀಮನನ್ನು ಬಿಟ್ಟು ಉಳಿದ ಪಾಂಡವ ಸೈನ್ಯವು ಬಹಳ ಭಯದಿಂದ ಕೂಡಿದುದಾಯಿತು.

ತತಃ ಶಸ್ತ್ರಾಣಿ ತೇ ಸರ್ವೇ ಸಮುತ್ಸೃಜ್ಯ ಮಹೀತಲೇ ।
ಅವಾರೋಹನ್ ರಥೇಭ್ಯಶ್ಚ ಹಯೇಭ್ಯಶ್ಚ ಸರ್ವಶಃ ॥ ೫೯ ॥

ಆಗ ಅವರೆಲ್ಲರೂ ಭೂಮಿಯಲ್ಲಿ ಶಸ್ತ್ರಗಳನ್ನಿಟ್ಟು ರಥಗಳಿಂದಲೂ, ಗಜಾಶ್ವಗಳಿಂದಲೂ ಎಲ್ಲ ಕಡೆಗಳಲ್ಲಿಯೂ ಕೆಳಗೆ ಇಳಿದರು.

ತೇಷು ನಿಕ್ಷಿಪ್ತಶಸ್ತ್ರೇಷು ವಾಹನೇಭ್ಯಶ್ಚ್ಯುತೇಷು ಚ ।
ತದಸ್ತ್ರವೀರ್ಯಂ ವಿಪುಲಂ ಭೀಮಮೂರ್ಧನ್ಯಥಾಪತತ್ ॥ ೬೦ ॥

ಅವರು ಶಸ್ತ್ರಗಳನ್ನು ಕೆಳಗಿಟ್ಟು, ವಾಹನಗಳಿಂದ ಇಳಿಯುತ್ತಿರಲು ಆ ಅಸ್ತ್ರದ ವಿಪುಲವಾದ ಪರಾಕ್ರಮವು ಭೀಮಸೇನನ ತಲೆಯ ಮೇಲೆ ಬಿದ್ದಿತು.

ಹಾಹಾಕೃತಾನಿ ಭೂತಾನಿ ಪಾಂಡವಾಶ್ಚ ವಿಶೇಷತಃ ।
ಭೀಮಸೇನಮಪಶ್ಯಂತ ತೇಜಸಾ ಸಂವೃತಂ ತದಾ ॥ ೬೧ ॥

ಜ್ವಲಿಸುವ ಅಗ್ನಿಯಿಂದ ಸಂವೃತನಾದ ಭೀಮಸೇನನನ್ನು ನೋಡಿ ಪಾಂಡವರೂ, ಎಲ್ಲ ಪ್ರಾಣಿಗಳೂ ವಿಶೇಷವಾಗಿ ಹಾಹಾಕಾರವನ್ನು ಮಾಡಿದವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಏಕಾಶೀತ್ಯಧಿಕಶತತಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆರಡನೆಯ ಅಧ್ಯಾಯ

ಕೃಷ್ಣಾರ್ಜುನರು ಭೀಮನ ಶಿರಸ್ಸಿನಿಂದ ಅಸ್ತ್ರವನ್ನು ಕಿತ್ತು, ಅವನನ್ನು ಕೆಳಗಿಳಿಸಿದ ಮೇಲೆ ಅಸ್ತ್ರದ ಪ್ರಶಮನ. ಅನಂತರ ಪುನಃ ಯುದ್ಧ.

ಸಂಜಯಃ

ಭೀಮಸೇನಂ ಸಮಾಕೀರ್ಣಂ ದೃಷ್ಟ್ವಾऽಸ್ತ್ರೇಣ ಧನಂಜಯಃ ।
ತೇಜಸಃ ಪ್ರತಿಘಾತಾರ್ಥಂ ವಾರುಣೇನ ಸಮಾವೃಣೋತ್ ॥ ೧ ॥

ಸಂಜಯ– ಅರ್ಜುನನು ಭೀಮಸೇನನು ನಾರಾಯಣಾಸ್ತ್ರದಿಂದ ಕೂಡಿರುವುದನ್ನು ನೋಡಿ ತೇಜಸ್ಸನ್ನು ಪ್ರತಿಘಾತ ಮಾಡಲು ವಾರುಣಾಸ್ತ್ರವನ್ನು ಪ್ರಯೋಗಿಸಿ ಅವನನ್ನು ಮುಚ್ಚಿದನು.

ನಾಲಕ್ಷಯತ ತಂ ಕಶ್ಚಿದ್ ವಾರುಣಾಸ್ತ್ರೇಣ ಸಂವೃತಮ್ ।
ಅರ್ಜುನಸ್ಯ ಲಘುತ್ವಾಚ್ಚ ಸಂವೃತತ್ವಾಚ್ಚ ತೇಜಸಃ ॥ ೨ ॥

ಅರ್ಜುನನು ಬಹಳ ಕ್ಷಿಪ್ರವಾಗಿ ಆ ಕಾರ್ಯವನ್ನು ಮಾಡಿದುದರಿಂದ ಒಳಗಿನ ತೇಜಸ್ಸಿನಿಂದಲೂ, ಹೊರಗಿನ ವಾರುಣಾಸ್ತ್ರದಿಂದಲೂ ಆವೃತನಾದ ಭೀಮಸೇನನನ್ನು ಯಾರೂ ಗಮನಿಸಲಿಲ್ಲ.

ಸಾಶ್ವಸೂತರಥೋ ಭೀಮೋ ದ್ರೋಣಪುತ್ರಾಸ್ತ್ರಸಂವೃತಃ ।
ಅಗ್ನಾವಗ್ನಿರಿವ ನ್ಯಸ್ತೋ ಜ್ವಾಲಾಮಾಲೀ ಸುದುರ್ದೃಶಃ ॥ ೩ ॥

ಅಶ್ವ-ಸೂತ-ರಥದಿಂದ ಸಹಿತನಾದ ಭೀಮನು ದ್ರೋಣರ ಅಸ್ತ್ರದಿಂದ ಆವೃತನಾಗಿ ಅಗ್ನಿಯಲ್ಲಿ ಇಟ್ಟ ಅಗ್ನಿಯಂತೆ ಜ್ವಾಲೆಯ ಮಾಲೆಗಳಿಂದ ಕೂಡಿ ನೋಡಲು ಅಸಾಧ್ಯನಾದನು.

ಯಥಾ ರಾತ್ರಿಕ್ಷಯೇ ರಾಜನ್ ಜ್ಯೋತೀಂಷ್ಯಸ್ತಗಿರಿಂ ಪ್ರತಿ ।
ಸಮಾಪೇತುಸ್ತಥಾ ಬಾಣಾ ಭೀಮಸೇನರಥಂ ಪ್ರತಿ ॥ ೪ ॥

ಎಲೈ ರಾಜನೇ, ರಾತ್ರಿಯ ಅವಸಾನದಲ್ಲಿ ಆಕಾಶದಲ್ಲಿ ಜ್ಯೋತಿಸ್ಸುಗಳು ಅಸ್ತಗಿರಿಯ ಕಡೆಗೆ ಹೋದಂತೆ ಬಾಣಗಳು ಭೀಮಸೇನನ ರಥದ ಕಡೆಗೆ ಶೀಘ್ರವಾಗಿ ಬಂದವು.

ಸ ಹಿ ಭೀಮೋ ರಥಶ್ಚಾಸ್ಯ ಹಯಾಃ ಸೂತಶ್ಚ ಮಾರಿಷ ।
ಸಂವೃತಾ ದ್ರೋಣಪುತ್ರೇಣ ಪಾವಕಾಂತರ್ಗತಾಭವನ್ ॥ ೫ ॥

ಎಲೈ ಶ್ರೇಷ್ಠನೇ, ಭೀಮಸೇನನೂ, ಅವನ ರಥವೂ, ಅಶ್ವಗಳೂ ಮತ್ತು ಸೂತನೂ ಅಶ್ವತ್ಥಾಮರ ರಥದಿಂದ ಸಂವೃತರಾಗಿ ಅಗ್ನಿಯೊಳಗೆ ಸೇರಿದರು.

ಯಥಾ ದಗ್ಧ್ವಾ ಜಗತ್ ಕೃತ್ಸ್ನಂ ಸಮಯೇ ಸಚರಾಚರಮ್ ।
ಗಚ್ಛೇದಗ್ನಿರ್ವಿಭೋರಾಸ್ಯಂ ತಥಾಸ್ತ್ರಂ ಭೀಮಮಾವೃಣೋತ್ ॥ ೬ ॥

ಹೇಗೆ ಜಗತ್ತಿನ ವಿನಾಶದ ಸಮಯದಲ್ಲಿ ಅಗ್ನಿಯು ಚರಾಚರಸಹಿತವಾದ ಸಮಗ್ರವಾದ ಜಗತ್ತನ್ನು ದಹಿಸಿ, ವಿಭುವಾದ ನಾರಾಯಣನ ಮುಖವನ್ನು ಪ್ರವೇಶಿಸುವುದೋ ಹಾಗೆ ಅಸ್ತ್ರವು ಭೀಮನನ್ನು ಆವರಿಸಿತು.

ಸೂರ್ಯಮಗ್ನಿಃ ಪ್ರವಿಷ್ಟಃ ಸ್ಯಾದ್ ಯಥಾ ಚಾಗ್ನಿಂ ದಿವಾಕರಃ ।
ತಥಾ ಪ್ರವಿಷ್ಟಂ ತತ್ ತೇಜೋ ನ ಪ್ರಾಜ್ಞಾಯತ ಕಿಂಚನ ॥ ೭ ॥

ಸೂರ್ಯನು ಅಗ್ನಿಯನ್ನು ಪ್ರವೇಶಿಸಿದಂತೆ, ಅಗ್ನಿಯು ಸೂರ್ಯನನ್ನು ಪ್ರವೇಶಿಸಿದಂತೆ ತೇಜಸ್ಸು ಭೀಮಸೇನನ ತೇಜಸ್ಸನ್ನು ಪ್ರವೇಶಿಸಿತು. ಯಾವುದೂ ತಿಳಿಯಲಿಲ್ಲ.

ವಿಕೀರ್ಣಮಸ್ತ್ರಂ ತದ್ ದೃಷ್ಟ್ವಾ ತಥಾ ಭೀಮರಥಂ ಪ್ರತಿ ।
ಉದೀರ್ಯಮಾಣಂ ದ್ರೌಣಿಂ ಚ ನಿಷ್ಪ್ರತಿದ್ವಂದ್ವಮಾಹವೇ ॥ ೮ ॥

ಸರ್ವಸೈನ್ಯಾನಿ ಪಾಂಡೂನಾಂ ನ್ಯಸ್ತಶಸ್ತ್ರಾಣ್ಯಚೇತಸಃ ।
ಯುಧಿಷ್ಠಿರಪುರೋಗಾಂಶ್ಚ ವಿಮುಖಾಂಸ್ತಾನ್ ಮಹಾರಥಾನ್ ॥ ೯ ॥

ಅರ್ಜುನೋ ವಾಸುದೇವಶ್ಚ ತ್ವರಮಾಣೌ ಮಹಾದ್ಯುತೀ ।
ಅವಪ್ಲುತ್ಯ ರಥಾದ್ ವೀರೌ ಭೀಮಮಾದ್ರವತಾಂ ತತಃ ॥ ೧೦ ॥

ಭೀಮಸೇನನ ರಥದ ಬಳಿ ಅಸ್ತ್ರವು ಹಾಗೆ ಸುತ್ತುವರಿದಿರುವುದನ್ನೂ, ಯುದ್ಧದಲ್ಲಿ ಅಶ್ವತ್ಥಾಮರು ಅಪ್ರತಿದ್ವಂದ್ವರಾಗಿ ವರ್ಧಿಸುತ್ತಿರುವುದನ್ನೂ, ಪಾಂಡವರ ಎಲ್ಲ ಸೈನ್ಯಗಳು ಶಸ್ತ್ರಗಳನ್ನು ಕೆಳಗಿಟ್ಟು ವಿವೇಕಹೀನರಾಗಿರುವುದನ್ನೂ, ಯುಧಿಷ್ಠಿರ ಮೊದಲಾದ ಮಹಾರಥರು ಯುದ್ಧವಿಮುಖರಾಗಿರುವುದನ್ನೂ ನೋಡಿದ ಮಹಾಕಾಂತಿಯುಕ್ತರಾದ ವೀರರಾದ ಕೃಷ್ಣಾರ್ಜುನರು ತ್ವರೆಯಿಂದ ತಮ್ಮ ರಥದಿಂದ ಕೆಳಗೆ ಹಾರಿ ಭೀಮನ ಕಡೆಗೆ ಓಡಿದರು.

ತತಸ್ತದ್ ದ್ರೌಣಪುತ್ರಸ್ಯ ತೇಜೋಽಸ್ತ್ರಬಲಸಂಭವಮ್ ।
ವಿಗಾಹ್ಯ ತೌ ಸುಬಲಿನೌ ಮಾಯಯಾಽವಿಶತಾಂ ತದಾ ॥ ೧೧ ॥

ಅತ್ಯಂತ ಬಲಿಷ್ಠರಾದ ಅವರಿಬ್ಬರೂ ದ್ರೌಣಪುತ್ರರ ತೇಜಸ್ಸಿನಿಂದಲೂ, ಅಸ್ತ್ರ-ಬಲದಿಂದಲೂ ಉಂಟಾದ ಆ ಅಗ್ನಿಯನ್ನು ತಮ್ಮ ಸಾಮರ್ಥ್ಯದಿಂದ ಪ್ರವೇಶಿಸಿ ಭೀಮನ ರಥದ ಕಡೆಗೆ ಹೋದರು.

ನ್ಯಸ್ತಶಸ್ತ್ರೌ ತತಸ್ತೌ ತು ನಾದಹದಸ್ತ್ರಜೋಽನಲಃ ।
ವಾರುಣಾಸ್ತ್ರಪ್ರಯೋಗಾಚ್ಚ ವೀರ್ಯವತ್ತ್ವಾಚ್ಚ ಕೃಷ್ಣಯೋಃ ॥ ೧೨ ॥

ಅವರಿಬ್ಬರೂ ಶಸ್ತ್ರಗಳನ್ನು ಕೆಳಗಿಟ್ಟುದುದರಿಂದಲೂ, ವಾರುಣಾಸ್ತ್ರವನ್ನು ಪ್ರಯೋಗ ಮಾಡಿದುದರಿಂದಲೂ ಮತ್ತು ಪರಾಕ್ರಮಶಾಲಿಗಳಾದುದರಿಂದಲೂ ಅಸ್ತ್ರದಿಂದ ಉಂಟಾದ ಅಗ್ನಿಯು ಕೃಷ್ಣಾರ್ಜುನರನ್ನು ದಹಿಸಲಿಲ್ಲ.

ತತಶ್ಚಕೃಷತುರ್ಭೀಮಂ ತಸ್ಯ ಸರ್ವಾಯುಧಾನಿ ಚ ।
ನಾರಾಯಣಾಸ್ತ್ರಶಾಂತ್ಯರ್ಥಂ ನರನಾರಾಯಣೌ ಬಲಾತ್ ॥ ೧೩ ॥

ಆಗ ನರನಾರಾಯಣರಾದ ಅವರು ನಾರಾಯಣಾಸ್ತ್ರದ ಶಮನವನ್ನು ಮಾಡಲು ತಮ್ಮ ಬಲದಿಂದ ಭೀಮನನ್ನೂ ಮತ್ತು ಅವನ ಎಲ್ಲ ಆಯುಧಗಳನ್ನೂ ಕೆಳಗೆ ಎಳೆದರು.

ಅಪಕೃಷ್ಯಮಾಣಃ ಕೌಂತೇಯೋ ನದತ್ಯೇವ ಮಹಾರಥಃ ।
ವರ್ಧತೇ ಚೈವ ತದ್ ಘೋರಂ ದ್ರೌಣೇರಸ್ತ್ರಂ ಸುದುರ್ಜಯಮ್ ॥

ಕೆಳಗೆ ಎಳೆಯಲ್ಪಡುತ್ತಿದ್ದರೂ ಮಹಾರಥನಾದ ಕುಂತೀಪುತ್ರನಾದ ಭೀಮಸೇನನು ಗರ್ಜಿಸುತ್ತಲೇ ಇದ್ದನು. ದುರ್ಜಯವಾದ ಅಶ್ವತ್ಥಾಮರ ಆ ಘೋರವಾದ ಅಸ್ತ್ರವೂ ಗರ್ಜಿಸುತ್ತಲೇ ಇದ್ದಿತು.

ತಮಬ್ರವೀದ್ ವಾಸುದೇವಃ ಕಿಮಿದಂ ಪಾಂಡುನಂದನ ।
ವಾರ್ಯಮಾಣೋಽಪಿ ಕೌಂತೇಯ ಯದ್ ಯುದ್ಧಾನ್ನ ನಿವರ್ತಸೇ ॥

ಕೃಷ್ಣನು ಆಗ ಭೀಮನನ್ನು ಕುರಿತು- 'ಕೌಂತೇಯನೇ, ಪಾಂಡುನಂದನನೇ, ಇದೇನು? ನಾವು ನಿಷೇಧ ಮಾಡುತ್ತಿದ್ದರೂ ನೀನು ಯುದ್ಧವನ್ನು ನಿಲ್ಲಿಸುತ್ತಿಲ್ಲ?

ಯದಿ ಯುದ್ಧೇನ ಜೇಯಾಃ ಸ್ಯುರಿಮೇ ಕೌರವನಂದನಾಃ ।
ವಯಮಪ್ಯತ್ರ ಯುದ್ಧ್ಯೇಮ ತಥಾ ಚೇಮೇ ನರರ್ಷಭಾಃ ॥ ೧೬ ॥

ಯುದ್ಧದಿಂದ ಈ ಕೌರವನಂದನರನ್ನು ಗೆಲ್ಲಬಹುದಾದರೆ ನಾವೂ ಯುದ್ಧವನ್ನು ಮಾಡುತ್ತೇವೆ, ಈ ರಾಜರೂ ಯುದ್ಧವನ್ನು ಮಾಡುವರು.

ರಥೇಭ್ಯಸ್ತ್ವವತೀರ್ಣಾಸ್ತು ಸರ್ವ ಏವ ಸ್ಮ ತಾವಕಾಃ ।
ತಸ್ಮಾತ್ ತ್ವಮಪಿ ಕೌಂತೇಯ ರಥಾತ್ ತೂರ್ಣಮಪಾಕ್ರಮ ॥ ೧೭ ॥

ಎಲೈ ಕೌಂತೇಯನೇ, ನಿನ್ನವರೆಲ್ಲರೂ ರಥದಿಂದ ಇಳಿದಿದ್ದಾರೆ. ಆದ್ದರಿಂದ ನೀನೂ ಸಹ ಶೀಘ್ರವಾಗಿ ರಥದಿಂದ ಇಳಿ.

ಏವಮುಕ್ತ್ವಾ ತತಃ ಕೃಷ್ಣೋ ರಥಾದ್ ಭೂಮಿಮಪಾತಯತ್ ।
ನಿಃಶ್ವಸಂತಂ ಯಥಾ ನಾಗಂ ಕ್ರೋಧಸಂರಕ್ತಲೋಚನಮ್ ॥ ೧೮ ॥

ಹೀಗೆ ಹೇಳಿ ಕೃಷ್ಣಾರ್ಜುನರು ಸರ್ಪದಂತೆ ಶ್ವಾಸವನ್ನು ಬಿಡುತ್ತಿದ್ದ, ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಭೀಮಸೇನನನ್ನು ರಥದಿಂದ ಭೂಮಿಯ ಮೇಲೆ ಕೆಡವಿದರು.

ಯದಾऽಪಕೃಷ್ಟಃ ಸ ರಥಾನ್ನ್ಯಸಿತಶ್ಚಾಯುಧಂ ಭುವಿ ।
ತತೋ ನಾರಾಯಣಾಸ್ತ್ರಂ ತತ್ ಪ್ರಶಾಂತಂ ಶತ್ರುತಾಪನಮ್ ॥ ೧೯ ॥

ಭೀಮಸೇನನನ್ನು ರಥದಿಂದ ಎಳೆದು ಅವನ ಶಸ್ತ್ರವನ್ನು ಭೂಮಿಯಲ್ಲಿ ಕಿತ್ತು ಇಟ್ಟಾಗ ಶತ್ರುತಾಪನನಾದ ಆ ನಾರಾಯಣಾಸ್ತ್ರವು ಶಾಂತವಾಯಿತು.

ತಸ್ಮಿನ್ ಪ್ರಶಾಂತೇ ವಿಧಿನಾ ತದಾ ತೇಜಸಿ ದುಃಸಹೇ ।
ಬಭೂವುರ್ವಿಮಲಾಃ ಸರ್ವಾ ದಿಶಃ ಪ್ರದಿಶ ಏವ ಚ ॥ ೨೦ ॥

ಶಾಸ್ತ್ರೋಕ್ತ ರೀತಿಯಲ್ಲಿ ದುಃಸಹವಾದ ಆ ತೇಜಸ್ಸು ಪ್ರಶಾಂತವಾಗುತ್ತಿರಲು ಎಲ್ಲ ದಿಕ್ಕು-ವಿದಿಕ್ಕುಗಳೂ ವಿಮಲವಾದವು.

ಪ್ರವವುಶ್ಚ ಶಿವಾ ವಾತಾಃ ಪ್ರಶಾಂತಾ ಮೃಗಪಕ್ಷಿಣಃ ।
ವಾಹನಾನಿ ಚ ಹೃಷ್ಟಾನಿ ಯೋಧಾಶ್ಚ ಮನುಜೇಶ್ವರ ॥ ೨೧ ॥

ಮಂಗಳಕರವಾದ ವಾಯುವು ಬೀಸಿತು. ಮೃಗ-ಪಕ್ಷಿಗಳು ಶಾಂತವಾದವು. ವಾಹನಗಳು ಮತ್ತು ಯೋಧರು ಸಂತುಷ್ಟರಾದರು.

ವ್ಯಪೋಢೇ ಚ ತತೋ ಘೋರೇ ತಸ್ಮಿಂಸ್ತೇಜಸಿ ಭಾರತ ।
ಬಭೌ ಭೀಮೋ ನಿಶಾಪಾಯೇ ಧೀಮಾನ್ ಸೂರ್ಯ ಇವೋದಿತಃ ॥

ಎಲೈ ಭಾರತನೇ, ಆ ಘೋರವಾದ ತೇಜಸ್ಸನ್ನು ಭೀಮನಿಂದ ತೆಗೆಯುತ್ತಿರಲು ಮೇಧಾವಿಯಾದ ಭೀಮನು ರಾತ್ರಿಯು ಕಳೆದು ಉದಯಿಸಿದ ಸೂರ್ಯನಂತೆ ಶೋಭಿಸಿದನು.

ಹತಶೇಷಂ ಬಲಂ ತತ್ರ ಪಾಂಡವಾನಾಮತಿಷ್ಠತ ।
ಅಸ್ತ್ರವ್ಯುಪರಮಾದ್ ಧೃಷ್ಟಂ ತವ ಪುತ್ರಜಿಘಾಂಸಯಾ ॥ ೨೩ ॥

ಅಸ್ತ್ರವು ಶಾಂತವಾದ ಕಾರಣದಿಂದ ಪಾಂಡವರ ಅಳಿದುಳಿದ ಸೇನೆಯು ಧೈರ್ಯವನ್ನು ಹೊಂದಿ ನಿನ್ನ ಪುತ್ರನನ್ನು ಕೊಲ್ಲಲು ಬಯಸಿ ನಿಂತಿತು.

ವ್ಯವಸ್ಥಿತೇ ಬಲೇ ತಸ್ಮಿನ್ನಸ್ತ್ರೇ ಪ್ರತಿಹತೇ ತಥಾ ।
ದುರ್ಯೋಧನೋ ಮಹಾರಾಜ ದ್ರೋಣಪುತ್ರಮಥಾಬ್ರವೀತ್ ॥ ೨೪ ॥

ಅಶ್ವತ್ಥಾಮನ್ ಪುನಃ ಶೀಘ್ರಮಸ್ತ್ರಮೇತತ್ ಪ್ರಯೋಜಯ ।
ವ್ಯವಸ್ಥಿತಾ ಹಿ ಪಾಂಚಾಲಾಃ ಪುನರೇವ ಜಯೈಷಿಣಃ ॥ ೨೫ ॥

ಅಸ್ತ್ರವು ಪ್ರತಿಹತವಾಗಿ ಪಾಂಡವರ ಸೇನೆಯು ಉದ್ಯುಕ್ತವಾಗಿ ನಿಂತಿರಲು, ಎಲೈ ಮಹಾರಾಜನೇ, ದುರ್ಯೋಧನನು ಅಶ್ವತ್ಥಾಮರನ್ನು ಕುರಿತು- 'ಅಶ್ವತ್ಥಾಮರೇ, ಪುನಃ ಶೀಘ್ರವಾಗಿ ಆ ಅಸ್ತ್ರವನ್ನು ಪ್ರಯೋಗಿಸಿ. ಪಾಂಚಾಲರು ಜಯವನ್ನು ಬಯಸಿ ಪುನಃ ಯುದ್ಧಕ್ಕೆ ಸನ್ನದ್ಧರಾಗಿದ್ದಾರೆ' ಎಂದು ಹೇಳಿದನು.

ಅಶ್ವತ್ಥಾಮಾ ತಥೋಕ್ತಸ್ತು ತವ ಪುತ್ರೇಣ ಮಾರಿಷ ।
ಸುದೀನಮಭಿನಿಃಶ್ವಸ್ಯ ರಾಜಾನಮಿದಮಬ್ರವೀತ್ ॥ ೨೬ ॥

ನೈತದಾವರ್ತತೇ ರಾಜನ್ನಸ್ತ್ರಂ ದ್ವಿರ್ನೋಪಪದ್ಯತೇ ।
ಆವರ್ತಯನ್ನಿಹಂತ್ಯೇತತ್ ಪ್ರಯೋಕ್ತಾರಂ ನ ಸಂಶಯಃ ॥ ೨೭ ॥

ಏಷ ಚಾಸ್ತ್ರಪ್ರತೀಘಾತಂ ವಾಸುದೇವಃ ಪ್ರಯುಕ್ತವಾನ್ ।
ಅನ್ಯಥಾ ವಿಹಿತಃ ಸಂಖೇ ವಧಃ ಶತ್ರೋರ್ಜನಾಧಿಪ ॥ ೨೮ ॥

ಪರಾಜಯೋ ವಾ ಮೃತ್ಯುರ್ವಾ ಶ್ರೇಯೋ ಮೃತ್ಯುರ್ನ ನಿರ್ಜಯಃ ।
ನಿರ್ಜಿತಾಶ್ಚಾರಯೋ ಹ್ಯೇತೇ ಶಸ್ತ್ರೋತ್ಸರ್ಗಾನ್ಮೃತೋಪಮಾಃ ॥ ೨೯ ॥

ಎಲೈ ಶ್ರೇಷ್ಠನೇ, ನಿನ್ನ ಪುತ್ರನಿಂದ ಹೀಗೆ ಹೇಳಲ್ಪಟ್ಟ ಅಶ್ವತ್ಥಾಮರು ಧೈರ್ಯದಿಂದ ನಿಃಶ್ವಾಸವನ್ನು ಮಾಡಿ ರಾಜನನ್ನು ಕುರಿತು- 'ಎಲೈ ರಾಜನೇ, ಈ ಅಸ್ತ್ರವು ಹಿಂದಿರುಗಿ ಬರುವುದಿಲ್ಲ. ಇದನ್ನು ಎರಡು ಬಾರಿ ಪ್ರಯೋಗಿಸಲು ಸಾಧ್ಯವಿಲ್ಲ. ಹಾಗೆ ಪ್ರಯೋಗಿಸಿದರೆ ಇದು ನಿಸ್ಸಂಶಯವಾಗಿ ಪ್ರಯೋಗಿಸುವವನನ್ನೇ ಕೊಲ್ಲುತ್ತದೆ. ವಾಸುದೇವನು ತಿಳಿದು ಈ ಅಶಸ್ತ್ರದ ಪ್ರತಿಘಾತವನ್ನು ಪ್ರಯೋಗಿಸಿದನು. ಎಲೈ ರಾಜನೇ, ಇಲ್ಲದಿದ್ದರೆ ಈ ಅಸ್ತ್ರವು ನಿಸ್ಸಂಶಯವಾಗಿ ಶತ್ರುಗಳ ವಧೆಯನ್ನು ಮಾಡುವುದೆಂದು ನಿಯತವಾಗಿದೆ. ಪರಾಜಯ ಮತ್ತು ಮರಣದಲ್ಲಿ, ಮರಣವು ಶ್ರೇಷ್ಠವಾಗಿದೆ, ಪರಾಜಯವಲ್ಲ. ಶಸ್ತ್ರಪರಿತ್ಯಾಗದಿಂದ ಪರಾಜಿತರಾದ ಈ ಶತ್ರುಗಳು ಮೃತರಂತೆ ಆಗಿದ್ದಾರೆ' ಎಂದು ಹೇಳಿದರು.

ದುರ್ಯೋಧನಃ

ಆಚಾರ್ಯಪುತ್ರ ಯದ್ಯೇತದ್ ದ್ವಿರಸ್ತ್ರಂ ನ ಪ್ರಯುಜ್ಯತೇ ।
ಅನ್ಯೈರ್ಗುರುಘ್ನಾ ವಧ್ಯಂತಾಮಸ್ತ್ರೈರಸ್ತ್ರವಿದಾಂ ವರ ॥ ೩೦ ॥

ದುರ್ಯೋಧನ– ಎಲೈ ಆಚಾರ್ಯಪುತ್ರರೇ, ಅಸ್ತ್ರಜ್ಞರಲ್ಲಿ ಶ್ರೇಷ್ಠರಾದವರೇ, ಈ ಅಸ್ತ್ರವನ್ನು ಎರಡು ಬಾರಿ ಪ್ರಯೋಗಿಸಲು ಸಾಧ್ಯವಿಲ್ಲದಿದ್ದರೆ ಬೇರೆ ಅಸ್ತ್ರಗಳಿಂದ ಗುರುಗಳನ್ನು ವಧೆ ಮಾಡಿದ ಈ ಪಾಂಡವರು ಕೊಲ್ಲಲ್ಪಡಲಿ.

ತ್ವಯಿ ಹ್ಯಸ್ತ್ರಾಣಿ ದಿವ್ಯಾನಿ ಯಥಾ ಸ್ಯುಸ್ತ್ರ್ಯಂಬಕೇ ತಥಾ ।
ಇಚ್ಛತೋ ನ ಹಿ ತೇ ಮುಚ್ಯೇತ್ ಕ್ರುದ್ಧಸ್ಯಾಪಿ ಪುರಂದರಃ ॥ ೩೧ ॥

ರುದ್ರನಲ್ಲಿ ಇದ್ದಂತೆ ನಿಮ್ಮಲ್ಲಿ ದಿವ್ಯಾಸ್ತ್ರಗಳಿವೆ. ನೀವು ಕ್ರುದ್ಧರಾಗಿ ಬಯಸಿದರೆ ಇಂದ್ರನೂ ನಿಮ್ಮಿಂದ ತಪ್ಪಿಸಿಕೊಳ್ಳಲಾರ.

ಧೃತರಾಷ್ಟ್ರಃ

ತಸ್ಮಿನ್ನಸ್ತ್ರೇ ಪ್ರತಿಹತೇ ದ್ರೋಣೇ ಚೋಪಧಿನಾ ಹತೇ ।
ತಥಾ ದುರ್ಯೋಧನೇನೋಕ್ತೋ ದ್ರೌಣಿಃ ಕಿಮಕರೋತ್ ಪುನಃ ॥೩೨॥

ದೃಷ್ಟ್ವಾ ಪಾರ್ಥಾಂಶ್ಚ ಸಂಗ್ರಾಮೇ ಯುದ್ಧಾಯ ಸಮವಸ್ಥಿತಾನ್ ।
ನಾರಾಯಣಾಸ್ತ್ರನಿರ್ಮುಕ್ತಾಂಶ್ಚರತಃ ಪೃತನಾಮುಖೇ ॥ ೩೩ ॥

ಧೃತರಾಷ್ಟ್ರ– ದ್ರೋಣರು ಮೋಸದಿಂದ ಹತರಾಗಿ ನಾರಾಯಣಾಸ್ತ್ರವು ಪ್ರತಿಹತವಾಗಿ ದುರ್ಯೋಧನನು ಹಾಗೆ ಹೇಳಿದಾಗ, ಯುದ್ಧಕ್ಕೆ ಸನ್ನದ್ಧರಾದ ಪಾಂಡವರು ನಾರಾಯಣಾಸ್ತ್ರದಿಂದ ಮುಕ್ತರಾಗಿ ಸೇನಾಮುಖದಲ್ಲಿ ನಿಂತಿರುವುದನ್ನು ನೋಡಿ ಅಶ್ವತ್ಥಾಮರು ಪುನಃ ಏನು ಮಾಡಿದರು?

ಸಂಜಯಃ

ಜಾನನ್ ಪಿತುಃ ಸ ನಿಧನಂ ಸಿಂಹಲಾಂಗೂಲಕೇತನಃ ।
ಸಕ್ರೋಧೋ ಭಯಮುತ್ಸೃಜ್ಯ ಅಭಿದುದ್ರಾವ ಪಾರ್ಷತಮ್ ॥ ೩೪ ॥

ಸಂಜಯ– ತಂದೆಯ ಮರಣವನ್ನು ತಿಳಿದ ಸಿಂಹಲಾಂಗೂಲಧ್ವಜರಾದ ಅಶ್ವತ್ಥಾಮರು ಕ್ರೋಧವನ್ನು ಹೊಂದಿ ಭಯವನ್ನು ತ್ಯಜಿಸಿ ಧೃಷ್ಟದ್ಯುಮ್ನನ ಮೇಲೆ ಎರಗಿದರು.

ಅಭಿದ್ರುತ್ಯ ಚ ವಿಂಶತ್ಯಾ ಕ್ಷುದ್ರಕಾಣಾಂ ನರರ್ಷಭಃ ।
ಪಂಚಭಿಶ್ಚಾತಿವೇಗೇನ ವಿವ್ಯಾಧ ಪುರುಷರ್ಷಭಮ್ ॥ ೩೫ ॥

ನರರ್ಷಭರಾದ ಅವರು ಪುರುಷಶ್ರೇಷ್ಠನಾದ ಧೃಷ್ಟದ್ಯುಮ್ನನ ಕಡೆಗೆ ಶೀಘ್ರವಾಗಿ ಸಾಗಿ ಅತಿವೇಗವುಳ್ಳ ಇಪ್ಪತ್ತು ಮತ್ತು ಐದು ಕ್ಷುದ್ರಬಾಣಗಳಿಂದ ಅವನನ್ನು ಹೊಡೆದರು.

ಧೃಷ್ಟದ್ಯುಮ್ನಸ್ತತೋ ರಾಜನ್ ಜ್ವಲಂತಮಿವ ಪಾವಕಮ್ ।
ದ್ರೋಣಪುತ್ರಂ ತ್ರಿಷಷ್ಟ್ಯಾ ತು ರಾಜನ್ ವಿವ್ಯಾಧ ಪತ್ರಿಣಾಮ್ ॥೩೬॥

ಎಲೈ ರಾಜನೇ, ಆಗ ಧೃಷ್ಟದ್ಯುಮ್ನನು ಜ್ವಲಿಸುವ ಅಗ್ನಿಯಂತಿರುವ ದ್ರೋಣ ಪುತ್ರರನ್ನು ಪತ್ರವನ್ನು ಹೊಂದಿದ ಅರವತ್ಮೂರು ಬಾಣಗಳಿಂದ ಹೊಡೆದನು.

ಸಾರಥಿಂ ಚಾಸ್ಯ ವಿಂಶತ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ ।
ಹಯಾಂಶ್ಚ ಚತುರೋಽವಿಧ್ಯಚ್ಚತುರ್ಭಿರ್ನಿಶಿತೈಃ ಶರೈಃ ॥ ೩೭ ॥

ಸ್ವರ್ಣಪುಂಖಗಳನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಇಪ್ಪತ್ತು ಬಾಣಗಳಿಂದ ಅವರ ಸಾರಥಿಯನ್ನೂ, ನಾಲ್ಕು ತೀಕ್ಷ್ಣವಾದ ಬಾಣಗಳಿಂದ ಅವರ ರಥದ ನಾಲ್ಕು ಅಶ್ವಗಳನ್ನೂ ಹೊಡೆದನು.

ವಿಧ್ವಾ ವಿಧ್ವಾಽನದದ್ ದ್ರೌಣಿಃ ಕಂಪಯನ್ನಿವ ಮೇದಿನೀಮ್ ।
ಆದದತ್ ಸರ್ವಲೋಕಸ್ಯ ಪ್ರಾಣಾನಿವ ಮಹಾರಣೇ ॥ ೩೮ ॥

ಅಶ್ವತ್ಥಾಮರು ಅವನನ್ನು ಬಾಣಗಳಿಂದ ಹೊಡೆದು ಹೊಡೆದು ಭೂಮಿಯನ್ನು ನಡುಗಿಸುವವರಂತೆ, ಮಹಾಯುದ್ಧದಲ್ಲಿ ಎಲ್ಲ ಜೀವರ ಪ್ರಾಣಗಳನ್ನು ಭಕ್ಷಿಸುವವರಂತೆ ನಾದವನ್ನು ಮಾಡಿದರು.

ಪಾರ್ಷತಸ್ತು ಬಲೀ ರಾಜನ್ ಕೃತಾಸ್ತ್ರಃ ಕೃತನಿಶ್ರಮಃ ।
ದ್ರೌಣಿಮೇವಾಭಿದುದ್ರಾವ ಕೃತ್ವಾ ಮೃತ್ಯುಂ ನಿವರ್ತನಮ್ ॥ ೩೯ ॥

ಎಲೈ ರಾಜನೇ, ಬಲಿಷ್ಠನಾದ ಧೃಷ್ಟದ್ಯುಮ್ನನಾದರೋ ಅಸ್ತ್ರವಿದ್ಯೆಯಿಂದಲೂ ಅಭ್ಯಾಸ ಬಲದಿಂದಲೂ, ಮೃತ್ಯುವನ್ನು ಕಡೆಗಣಿಸಿ ಅಶ್ವತ್ಥಾಮರ ಅಭಿಮುಖವಾಗಿಯೇ ಓಡಿದನು.

ತತೋ ಬಾಣಮಯಂ ವರ್ಷಂ ದ್ರೋಣಪುತ್ರಸ್ಯ ಮೂರ್ಧನಿ ।
ಅವಾಸೃಜದಮೇಯಾತ್ಮಾ ಪಾಂಚಾಲ್ಯೋ ರಥಿನಾಂ ವರಃ ॥ ೪೦ ॥

ಅನಂತರ ರಥಿಗಳಲ್ಲಿ ಶ್ರೇಷ್ಠನಾದ, ಅಚಿಂತ್ಯಸಾಮರ್ಥ್ಯವುಳ್ಳ, ಪಾಂಚಾಲನಾದ ಧೃಷ್ಟದ್ಯುಮ್ನನು ಅಶ್ವತ್ಥಾಮರ ಶಿರಸ್ಸಿನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಂ ದ್ರೌಣಿಃ ಸಮರೇ ಕ್ರುದ್ಧಶ್ಛಾದಯಾಮಾಸ ಪತ್ರಿಭಿಃ ।
ವಿವ್ಯಾಧ ಚೈನಂ ದಶಭಿಃ ಪಿತುರ್ವಧಮನುಸ್ಮರನ್ ॥ ೪೧ ॥

ಅಶ್ವತ್ಥಾಮರು ಕ್ರೋಧಗೊಂಡು ತಮ್ಮ ತಂದೆಯ ವಧೆಯನ್ನು ಸ್ಮರಿಸುತ್ತಾ ರಣರಂಗದಲ್ಲಿ ಅವನನ್ನು ಹತ್ತು ಬಾಣಗಳಿಂದ ಹೊಡೆದರು.

ದ್ವಾಭ್ಯಾಂ ಚ ಸುವಿಕೃಷ್ಟಾಭ್ಯಾಂ ಕ್ಷುರಾಭ್ಯಾಂ ಧ್ವಜಕಾರ್ಮುಕೇ ।
ಛಿತ್ತ್ವಾ ಪಾಂಚಾಲರಾಜಸ್ಯ ದ್ರೌಣಿರನ್ಯೈಃ ಸಮಾರ್ದಯತ್ ॥ ೪೨ ॥

ಅವರು ಚೆನ್ನಾಗಿ ಎಳೆದು ಪ್ರಯೋಗಿಸಿದ ಎರಡು ಕ್ಷುರಗಳಿಂದ ಧೃಷ್ಟದ್ಯುಮ್ನನ ಧ್ವಜ ಮತ್ತು ಧನುಸ್ಸುಗಳನ್ನು ಕತ್ತರಿಸಿ, ಬೇರೆ ಬಾಣಗಳಿಂದ ಅವನನ್ನು ಪೀಡಿಸಿದರು.

ವ್ಯಶ್ವಸೂತರಥಂ ಚೈನಂ ದ್ರೌಣಿಶ್ಚಕ್ರೇ ಮಹಾಹವೇ ।
ತಸ್ಯ ಚಾನುಚರಾನ್ ಸರ್ವಾನ್ ಕ್ರುದ್ಧಃ ಪ್ರಾಚ್ಛಾದಯಚ್ಛರೈಃ ॥ ೪೩ ॥

ಅಶ್ವತ್ಥಾಮರು ದೊಡ್ಡ ಯುದ್ಧದಲ್ಲಿ ಅವನನ್ನು ಅಶ್ವ-ಸೂತ-ರಥ ಹೀನನನ್ನಾಗಿ ಮಾಡಿ ಕ್ರುದ್ಧರಾಗಿ ಅವನ ಅನುಚರರೆಲ್ಲರನ್ನೂ ಬಾಣಗಳಿಂದ ಮುಚ್ಚಿಹಾಕಿದರು.

ಪ್ರದ್ರುದ್ರಾವ ತತಃ ಸೈನ್ಯಂ ಪಾಂಚಾಲಾನಾಂ ವಿಶಾಂಪತೇ ।
ಸಂಭ್ರಾಂತರೂಪಮಾರ್ತಂ ಚ ಶರವರ್ಷಪರಿಕ್ಷತಮ್ ॥ ೪೪ ॥

ಎಲೈ ರಾಜನೇ, ಆಗ ಪಾಂಚಾಲರ ಸೈನ್ಯವು ಬಾಣಗಳ ಮಳೆಯಿಂದ ಗಾಯಗೊಂಡು ದಿಗ್ಭ್ರಾಂತವಾಗಿ ದುಃಖದಿಂದ ಕೂಡಿ ಅಲ್ಲಿಂದ ಓಡಿಹೋಯಿತು.

ದೃಷ್ಟ್ವಾ ಚ ವಿಮುಖಾನ್ ಯೋಧಾನ್ ಧೃಷ್ಟದ್ಯುಮ್ನಂ ಚ ಪೀಡಿತಮ್ ।
ಶೈನೇಯೋಽಚೋದಯತ್ ತೂರ್ಣಂ ರಥಂ ದ್ರೌಣಿರಥಂ ಪ್ರತಿ ॥

ಯೋಧರು ಯುದ್ಧವಿಮುಖರಾಗಿರುವುದನ್ನೂ, ಧೃಷ್ಟದ್ಯುಮ್ನನು ಪೀಡಿತನಾಗಿರುವುದನ್ನೂ ನೋಡಿದ ಸಾತ್ಯಕಿಯು ತನ್ನ ರಥದ ಅಶ್ವಗಳನ್ನು ಅಶ್ವತ್ಥಾಮರ ರಥದ ಕಡೆಗೆ ಪ್ರಚೋದಿಸಿದನು.

ಅಷ್ಟಭಿರ್ನಿಶಿತೈಶ್ಚೈವ ಸೋಽಶ್ವತ್ಥಾಮಾನಮಾರ್ದಯತ್ ।
ವಿಂಶತ್ಯಾ ಪುನರಾಹತ್ಯ ನಾನಾರೂಪೈರಮರ್ಷಣಮ್ ।
ವಿವ್ಯಾಧ ಚ ತಥಾ ಸೂತಂ ಚತುರ್ಭಿಶ್ಚತುರೋ ಹಯಾನ್ ॥ ೪೬ ॥

ತೀಕ್ಷ್ಣವಾದ ಎಂಟು ಬಾಣಗಳಿಂದ ಅವನು ಅಶ್ವತ್ಥಾಮರನ್ನು ಪೀಡಿಸಿದನು. ಪುನಃ ನಾನಾ ರೂಪದ ಇಪ್ಪತ್ತು ಬಾಣಗಳನ್ನು ಪ್ರಯೋಗಿಸಿ ರೋಷಗೊಂಡಿದ್ದ ಅವರನ್ನು ಹೊಡೆದು ಅವರ ಸಾರಥಿಯನ್ನು ಮತ್ತು ನಾಲ್ಕು ಬಾಣಗಳಿಂದ ಅವರ ರಥದ ಅಶ್ವಗಳನ್ನು ಹೊಡೆದನು.

ಸೋಽತಿವಿದ್ಧೋ ಮಹೇಷ್ವಾಸೋ ನಾನಾಲಿಂಗೈರಮರ್ಷಣಃ ।
ಯುಯುಧಾನೇನ ವೈ ದ್ರೌಣಿಃ ಪ್ರಹಸನ್ ವಾಕ್ಯಮಬ್ರವೀತ್ ॥ ೪೭ ॥

ಶೈನೇಯಾಭ್ಯವಪತ್ತಿಂ ತೇ ಜಾನಾಮ್ಯಾಚಾರ್ಯಘಾತಿನಃ ।
ನ ತ್ವೇನಂ ತ್ರಾಸ್ಯಸಿ ಮಯಾ ಗ್ರಸ್ತಮಾತ್ಮಾನಮೇವ ಚ ॥ ೪೮ ॥

ನಾನಾ ವಿಧವಾದ ಬಾಣಗಳಿಂದ ಸಾತ್ಯಕಿಯಿಂದ ಅತ್ಯಂತವಾಗಿ ಹೊಡೆಯಲ್ಪಟ್ಟ ಅಶ್ವತ್ಥಾಮರು ಅವನನ್ನು ಕುರಿತು- 'ಎಲೈ ಸಾತ್ಯಕಿಯೇ, ಆಚಾರ್ಯರನ್ನು ಕೊಂದ ಧೃಷ್ಟದ್ಯುಮ್ನನನ್ನು ರಕ್ಷಿಸುವ ನಿನ್ನ ಅಭಿಪ್ರಾಯವನ್ನು ನಾನು ತಿಳಿದಿದ್ದೇನೆ. ನಾನು ನುಂಗುತ್ತಿರುವ ಈ ಧೃಷ್ಟದ್ಯುಮ್ನನನ್ನಾಗಲೀ ಅಥವಾ ನಿನ್ನನ್ನೇ ಆಗಲೀ ನೀನು ರಕ್ಷಿಸಿಕೊಳ್ಳಲಾರೆ' ಎಂದು ಹೇಳಿದರು.

ಏವಮುಕ್ತ್ವಾ ರ್ಕರಶ್ಮ್ಯಾಭಂ ಸುಪರ್ವಾಣಂ ಶರೋತ್ತಮಮ್ ।
ವ್ಯಸೃಜತ್ ಸಾತ್ವತೇ ದ್ರೌಣಿರ್ವಜ್ರಂ ವೃತ್ರೇ ಯಥಾ ಹರಿಃ ॥ ೪೯ ॥

ಹೀಗೆ ಹೇಳಿ ಅಶ್ವತ್ಥಾಮರು ಒಳ್ಳೆಯ ಅಲುಗುಳ್ಳ ಸೂರ್ಯರಶ್ಮಿಯಂತಿದ್ದ ಶ್ರೇಷ್ಠವಾದ ಬಾಣವನ್ನು ಇಂದ್ರನು ವೃತ್ರಾಸುರನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದಂತೆ ಸಾತ್ಯಕಿಯ ಮೇಲೆ ಪ್ರಯೋಗಿಸಿದರು.

ಸ ತಂ ನಿರ್ಭಿದ್ಯ ತೇನಾಸ್ತಃ ಸಾಯಕಃ ಸಶರಾವರಮ್ ।
ವಿವೇಶ ವಸುಧಾಂ ಭಿತ್ತ್ವಾ ಶ್ವಸನ್ ಬಿಲಮಿವೋರಗಃ ॥ ೫೦ ॥

ಅಶ್ವತ್ಥಾಮರು ಪ್ರಯೋಗಿಸಿದ ಆ ಬಾಣವು ಸಾತ್ಯಕಿಯ ಕವಚವನ್ನೂ, ಅವನ ದೇಹವನ್ನೂ ಭೇದಿಸಿ, ಭುಸುಗುಟ್ಟುವ ಸರ್ಪವು ಬಿಲವನ್ನು ಸೇರುವಂತೆ ಭೂಮಿಯನ್ನು ಪ್ರವೇಶಿಸಿತು.

ಸ ಭಿನ್ನಕವಚಃ ಶೂರಸ್ತೋತ್ತ್ರಾರ್ದಿತ ಇವ ದ್ವಿಪಃ ।
ವಿಮುಚ್ಯ ಸಶರಂ ಚಾಪಂ ಭೂರಿವ್ರಣಪರಿಸ್ರವಃ ॥ ೫೧ ॥

ಸೀದನ್ ರುಧಿರಸಿಕ್ತಶ್ಚ ರಥೋಪಸ್ಥ ಉಪಾವಿಶತ್ ।
ಸೂತೇನಾಪಹೃತಸ್ತೂರ್ಣಂ ದ್ರೋಣಪುತ್ರಾದ್ ರಥಾಂತರಮ್ ॥ ೫೨ ॥

ತನ್ನ ಕವಚವು ಭೇದಿಸಲ್ಪಟ್ಟ ಶೂರನಾದ ಅವನು ಅಂಕುಶದಿಂದ ಪೀಡಿಸಲ್ಪಟ್ಟ ಗಜದಂತೆ ತನ್ನ ಬಿಲ್ಲು-ಬಾಣಗಳನ್ನು ಬಿಟ್ಟು ಉಂಟಾದ ಗಾಯಗಳಿಂದ ಬಹಳ ರಕ್ತವನ್ನು ಸುರಿಸುತ್ತಾ, ರಕ್ತಲಿಪ್ತವಾದ ದೇಹವುಳ್ಳವನಾಗಿ ರಥಪೀಠದಲ್ಲಿ ಕುಸಿದು ಕುಳಿತನು. ಅವನ ಸೂತನು ಅವನನ್ನು ಅಶ್ವತ್ಥಾಮರಿಂದ ದೂರ ಕರೆದುಕೊಂಡು ಹೋಗಿ ಇನ್ನೊಂದು ರಥಕ್ಕೆ ಸೇರಿಸಿದನು.

ಅಥಾನ್ಯೇನ ಸುಪುಂಖೇನ ಶರೇಣ ನತಪರ್ವಣಾ ।
ಆಜಘಾನ ಭ್ರುವೋರ್ಮಧ್ಯೇ ಧೃಷ್ಟದ್ಯುಮ್ನಂ ಪರಂತಪಃ ॥ ೫೩ ॥

ಅನಂತರ ಪರಂತಪರಾದ ಅಶ್ವತ್ಥಾಮರು ಒಳ್ಳೆಯ ಪುಂಖವನ್ನು ಹೊಂದಿ ಬಾಗಿದ ತುದಿಯುಳ್ಳ ಒಂದು ಬಾಣದಿಂದ ಧೃಷ್ಟದ್ಯುಮ್ನನನ್ನು ಅವನ ಭ್ರೂಮಧ್ಯದಲ್ಲಿ ಹೊಡೆದರು.

ಸ ಪೂರ್ವಮತಿವಿದ್ಧಶ್ಚ ಭೃಶಂ ಪಶ್ಚಾಚ್ಚ ಪೀಡಿತಃ ।
ಸಸಾದ ಯುಧಿ ಪಾಂಚಾಲ್ಯೋ ವ್ಯಪಾಶ್ರಯತ ಚ ಧ್ವಜಮ್ ॥ ೫೪ ॥

ಧೃಷ್ಟದ್ಯುಮ್ನನು ಮೊದಲೇ ಬಹಳವಾಗಿ ಹೊಡೆಯಲ್ಪಟ್ಟು, ಅನಂತರವೂ ಈ ಬಾಣದಿಂದ ಪೀಡಿತನಾಗಿ ರಣರಂಗದಲ್ಲಿ ಕುಸಿದು ರಥದ ಧ್ವಜವನ್ನು ಆಶ್ರಯಿಸಿದನು.

ತಂ ಮತ್ತಮಿವ ಸಿಂಹೇನ ರಾಜನ್ ಕುಂಜರಮರ್ದಿತಮ್ ।
ಜವೇನಾಭ್ಯದ್ರವನ್ ಶೂರಾಃ ಪಂಚ ಪಾಂಡವತೋ ರಥಾಃ ॥ ೫೫ ॥

ಎಲೈ ರಾಜನೇ, ಮದಗಜವು ಸಿಂಹದಿಂದ ಪೀಡಿತವಾದಂತೆ ಪೀಡಿತನಾದ ಅವನನ್ನು ನೋಡಿ ಶೂರರಾದ ಪಂಚಪಾಂಡವರ ರಥಗಳು ವೇಗದಿಂದ ಅವನ ಬಳಿಗೆ ಬಂದವು.

ಕಿರೀಟೀ ಭೀಮಸೇನಶ್ಚ ವೃದ್ಧಕ್ಷತ್ರಶ್ಚ ಪೌರವಃ ।
ಯುವರಾಜಶ್ಚ ಚೇದೀನಾಂ ಮಾಲವಶ್ಚ ಸುದರ್ಶನಃ ।
ಪಂಚಭಿಃಪಂಚಭಿರ್ಬಾಣೈರಭ್ಯಘ್ನನ್ ಸರ್ವತಃ ಸಮಮ್ ॥ ೫೬ ॥

ಅರ್ಜುನ, ಭೀಮಸೇನ, ಪೌರವನಾದ ವೃದ್ಧಕ್ಷತ್ರ, ಚೇದಿರಾಜ್ಯದ ಯುವರಾಜ, ಮಾಲವನಾದ ಸುದರ್ಶನ - ಇವರೆಲ್ಲರೂ ಒಂದೇ ಕಾಲದಲ್ಲಿ ಐದೈದು ಬಾಣಗಳಿಂದ ಎಲ್ಲ ಕಡೆಗಳಿಂದಲೂ ಅಶ್ವತ್ಥಾಮರನ್ನು ಹೊಡೆದರು.

ಆಶೀವಿಷಾಭೈರ್ವಿಂಶದ್ಭಿಃ ಪಂಚಭಿಶ್ಚಾಪಿ ತಾನ್ ಶರೈಃ ।
ಚಿಚ್ಛೇದ ಯುಗಪದ್ ದ್ರೌಣಿಃ ಪಂಚವಿಂಶತಿಸಾಯಕಾನ್ ॥ ೫೭ ॥

ಅಶ್ವತ್ಥಾಮರು ಸರ್ಪದಂತಿದ್ದ ಇಪ್ಪತ್ತೈದು ಬಾಣಗಳಿಂದ ಅವರು ಪ್ರಯೋಗಿಸಿದ ಇಪ್ಪತ್ತೈದು ಬಾಣಗಳನ್ನು ಒಂದೇ ಕಾಲದಲ್ಲಿ ಕತ್ತರಿಸಿದರು.

ಸಪ್ತಭಿಶ್ಚ ಶಿತೈರ್ಬಾಣೈಃ ಪೌರವಂ ದ್ರೌಣಿರಾರ್ದಯತ್ ।
ಮಾಲವಂ ತ್ರಿಭಿರೇಕೇನ ಪಾರ್ಥಂ ಷಡ್ಭಿರ್ವೃಕೋದರಮ್ ॥ ೫೮ ॥

ಅಶ್ವತ್ಥಾಮರು ತೀಕ್ಷ್ಣವಾದ ಏಳು ಬಾಣಗಳಿಂದ ಪೌರವನನ್ನು ಪೀಡಿಸಿದರು. ಮಾಲವನನ್ನು ಮೂರು ಬಾಣಗಳಿಂದಲೂ, ಅರ್ಜುನನನ್ನು ಒಂದು ಬಾಣದಿಂದಲೂ, ವೃಕೋದರನನ್ನು ಆರು ಬಾಣಗಳಿಂದಲೂ ಪೀಡಿಸಿದರು.

ತತಸ್ತೇ ವಿವ್ಯಧುಃ ಸರ್ವೇ ದ್ರೌಣಿಂ ರಾಜನ್ ಮಹಾರಥಾಃ ।
ಯುಗಪಚ್ಚ ಪೃಥಕ್ಚೈವ ರುಗ್ಮಪುಂಖೈಃ ಶಿಲಾಶಿತೈಃ ॥ ೫೯ ॥

ಎಲೈ ರಾಜನೇ, ಆಗ ಆ ಮಹಾರಥರೆಲ್ಲರೂ ಒಟ್ಟಿಗೆ ಮತ್ತು ಬೇರೆ ಬೇರೆಯಾಗಿಯೂ ರುಗ್ಮಪುಂಖವನ್ನು ಹೊಂದಿದ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳಿಂದ ಅಶ್ವತ್ಥಾಮರನ್ನು ಹೊಡೆದರು.

ಯುವರಾಜಸ್ತು ವಿಂಶತ್ಯಾ ದ್ರೌಣಿಂ ವಿವ್ಯಾಧ ಪತ್ರಿಣಾಮ್ ।
ಪಾರ್ಥಶ್ಚ ಪುನರಷ್ಟಾಭಿಸ್ತಥಾ ಸರ್ವೇ ತ್ರಿಭಿಸ್ತ್ರಿಭಿಃ ॥ ೬೦ ॥

ಚೇದಿದೇಶದ ಯುವರಾಜನು ಇಪ್ಪತ್ತು ಬಾಣಗಳಿಂದ ಅಶ್ವತ್ಥಾಮರನ್ನು ಹೊಡೆದನು. ಅರ್ಜುನನು ಎಂಟು ಬಾಣಗಳಿಂದಲೂ, ಉಳಿದೆಲ್ಲರೂ ಮೂರು-ಮೂರು ಬಾಣಗಳಿಂದಲೂ ಹೊಡೆದರು.

ತತೋಽರ್ಜುನಂ ಷಡ್ಭಿರಥಾಜಘಾನ
ದ್ರೌಣಾಯನಿರ್ದಶಭಿರ್ವಾಸುದೇವಮ್ ।
ಭೀಮಂ ದಶಾರ್ಧೈರ್ಯುವರಾಜಂ ಚತುರ್ಭಿ-
ರ್ದ್ವಾಭ್ಯಾಂ ಛಿತ್ತ್ವಾ ಕಾರ್ಮುಕಂ ಚ ಧ್ವಜಂ ಚ ॥
ಪುನಃ ಪಾರ್ಥಂ ಶರವರ್ಷೇಣ ವಿದ್ಧ್ವಾ
ದ್ರೌಣಿರ್ಘೋರಂ ಸಿಂಹನಾದಂ ನನಾದ ॥ ೬೧ ॥

ಆಗ ದ್ರೋಣಪುತ್ರರಾದ ಅಶ್ವತ್ಥಾಮರು ಅರ್ಜುನನನ್ನು ಆರು ಬಾಣಗಳಿಂದಲೂ, ಕೃಷ್ಣನನ್ನು ಹತ್ತು ಬಾಣಗಳಿಂದಲೂ, ಭೀಮನನ್ನು ಐದು ಬಾಣಗಳಿಂದಲೂ, ಯುವರಾಜನನ್ನು ಎರಡು ಬಾಣಗಳಿಂದ ಅವನ ಧನುಸ್ಸನ್ನೂ ಮತ್ತು ಧ್ವಜವನ್ನೂ ಕತ್ತರಿಸಿ, ನಾಲ್ಕು ಬಾಣಗಳಿಂದಲೂ ಹೊಡೆದರು. ಅಶ್ವತ್ಥಾಮರು ಪುನಃ ಅರ್ಜುನನಿಗೆ ಬಾಣಗಳ ಮಳೆಯಿಂದ ಹೊಡೆದು ಘೋರವಾದ ಸಿಂಹನಾದವನ್ನು ಮಾಡಿದರು.

ತಸ್ಯಾಸ್ಯತಃ ಸುನಿಶಿತಾನ್ ಪೀತಧಾರಾನ್
ದ್ರೌಣೇಃ ಶರಾನ್ ಪೃಷ್ಠತಶ್ಚಾಗ್ರತಶ್ಚ ।
ಧರಾ ವಿಯದ್ದ್ಯೌಃ ಪ್ರದಿಶೋ ದಿಶಶ್ಚ
ಧನ್ಯಾ ಬಾಣೈರಭವನ್ ಘೋರರೂಪೈಃ ॥ ೬೨ ॥

ಅತ್ಯಂತ ತೀಕ್ಷ್ಣವಾದ ಜಲಪಾನ ಮಾಡಿದ ಅಲುಗುಳ್ಳ ಬಾಣಗಳನ್ನು ಅಶ್ವತ್ಥಾಮರು ಹಿಂಭಾಗದಲ್ಲಿಯೂ, ಮುಂಭಾಗದಲ್ಲಿಯೂ ಪ್ರಯೋಗಿಸುವಾಗ ಭೂಮಿಯೂ,

ಅಂತರಿಕ್ಷವೂ, ಆಕಾಶವೂ, ದಿಕ್ಕು-ವಿದಿಕ್ಕುಗಳೂ ಘೋರರೂಪವನ್ನು ಹೊಂದಿದ ಆ ಬಾಣಗಳಿಂದ ಮುಚ್ಚಲ್ಪಟ್ಟವು.

ಆಸೀನಸ್ಯ ಸ್ವರಥಂ ತೂಗ್ರತೇಜಾಃ
ಸುದರ್ಶನಸ್ಯೇಂದ್ರಕೇತುಪ್ರಕಾಶೌ ।
ಭುಜೌ ಶಿರಶ್ಚೇಂದ್ರಸಮಾನವೀರ್ಯ-
ಸ್ತ್ರಿಭಿಃ ಶರೈರ್ಯುಗಪತ್ ಸಂಚಕರ್ತ ॥ ೬೩ ॥

ತನ್ನ ರಥದಲ್ಲಿಯೇ ನಿಂತು ಯುದ್ಧ ಮಾಡುತ್ತಿದ್ದ ಮಾಲವ ದೇಶದ ಸುದರ್ಶನನ ಇಂದ್ರಧ್ವಜ ಸದೃಶವಾದ ಎರಡು ಭುಜವನ್ನು ಮತ್ತು ಶಿರಸ್ಸನ್ನು ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಉಗ್ರವಾದ ತೇಜಸ್ಸನ್ನು ಹೊಂದಿದ ಅಶ್ವತ್ಥಾಮರು ಮೂರು ಬಾಣಗಳಿಂದ ಒಂದೇ ಕಾಲದಲ್ಲಿ ಕತ್ತರಿಸಿದರು.

ಸ ಪೌರವಂ ರಥಶಕ್ತ್ಯಾ ನಿಹತ್ಯ
ಛಿತ್ತ್ವಾ ರಥಂ ತಿಲಶಶ್ಚಾಪಿ ಬಾಣೈಃ ।
ಛಿತ್ತ್ವಾಽಸ್ಯ ಬಾಹೂ ವರಚಂದನಾಕ್ತೌ
ಭಲ್ಲೇನ ಕಾಯಾಚ್ಛಿರ ಉಚ್ಚಕರ್ತ ॥ ೬೪ ॥

ಅವರು ಪೌರವನನ್ನು ರಥಶಕ್ತಿಯಿಂದ ಹೊಡೆದು, ತಮ್ಮ ಬಾಣಗಳಿಂದ ಅವನ ರಥವನ್ನು ಎಳ್ಳುಕಾಳುಗಳಷ್ಟು ಸಣ್ಣ ಭಾಗವಾಗಿ ಕತ್ತರಿಸಿ, ಚಂದನಲೇಪಿತವಾದ ಅವನ ಬಾಹುಗಳನ್ನು ಕತ್ತರಿಸಿ, ಭಲ್ಲದಿಂದ ಅವನ ದೇಹದಿಂದ ಅವನ ಶಿರಸ್ಸನ್ನು ಕತ್ತರಿಸಿದರು.

ಯುವಾನಮಿಂದೀವರದಾಮವರ್ಣಂ
ಚೇದಿಪ್ರಿಯಂ ಯುವರಾಜಂ ಪ್ರಹಸ್ಯ ।
ಬಾಣೈಸ್ತ್ವರಾವಾನ್ ಜ್ವಲಿತಾಗ್ನಿಕಲ್ಪೈ-
ರ್ವಿದ್ವಾಪ್ರಾದಾನ್ಮೃತ್ಯವೇ ಸಾಶ್ವಸೂತಮ್ ॥ ೬೫ ॥

ಯುವಕನೂ, ಇಂದೀವರಮಾಲೆಯನ್ನು ಹೊಂದಿದವನೂ ಚೇದಿಪ್ರಿಯನಾದ ಯುವರಾಜನನ್ನು ನೋಡಿ ನಕ್ಕು, ತ್ವರೆಯಿಂದ ಕೂಡಿ ಜ್ವಲಿಸುವ ಅಗ್ನಿಯಂತಿದ್ದ ಬಾಣಗಳಿಂದ ಅವನನ್ನು ಹೊಡೆದು ಅಶ್ವ-ಸೂತರ ಜೊತೆಯಲ್ಲಿ ಅವನನ್ನು ಮೃತ್ಯುವಿಗೆ ಕೊಟ್ಟರು.

ತಾನ್ ನಿಹತ್ಯ ರಣೇ ವೀರೋ ದ್ರೋಣಪುತ್ರೋ ಯುಧಾಂಪತಿಃ ।
ದಧ್ಮೌ ಪ್ರಮುದಿತಃ ಶಂಖಂ ಬೃಹಂತಮಪರಾಜಿತಃ ॥ ೬೬ ॥

ಯುದ್ಧಪತಿಗಳಾದ ವೀರರಾದ ದ್ರೋಣಪುತ್ರರು ಯುದ್ಧದಲ್ಲಿ ಅವರನ್ನು ಕೊಂದು ಸಂತೋಷದಿಂದ ಕೂಡಿದವರಾಗಿ, ಅಪರಾಜಿತರಾಗಿ ದೊಡ್ಡ ಶಂಖವನ್ನು ಊದಿದರು.

ತತಃ ಸರ್ವೇ ಚ ಪಾಂಚಾಲಾ ಭೀಮಸೇನಶ್ಚ ಪಾಂಡವಃ ।
ಧೃಷ್ಟದ್ಯುಮ್ನರಥಂ ಭೀತಾಸ್ತ್ಯಕ್ತ್ವಾ ಸಂಪ್ರಾದ್ರವನ್ ದಿಶಃ ॥ ೬೭ ॥

ಆಗ ಎಲ್ಲ ಪಾಂಚಾಲರೂ, ಪಾಂಡವನಾದ ಭೀಮಸೇನನೂ ಭೀತರಾಗಿ ಧೃಷ್ಟದ್ಯುಮ್ನನ ರಥವನ್ನು ಬಿಟ್ಟು ಬೇರೆ ದಿಕ್ಕುಗಳಿಗೆ ಓಡಿಹೋದರು.

ತಾನ್ ಪ್ರಭಗ್ನಾಂಸ್ತಥಾ ದ್ರೌಣಿಃ ಪೃಷ್ಠತೋ ವಿಕಿರನ್ ಶರೈಃ ।
ಅಭ್ಯವರ್ತತ ವೇಗೇನ ಕಾಲವತ್ ಪಾಂಡುವಾಹಿನೀಮ್ ॥ ೬೮ ॥

ಅಶ್ವತ್ಥಾಮರು ಹಾಗೆ ಭಗ್ನಗೊಂಡು ಓಡುತ್ತಿದ್ದ ಅವರನ್ನು ಹಿಂದಿನಿಂದ ಬಾಣಗಳನ್ನು ಪ್ರಯೋಗಿಸುತ್ತಾ, ವೇಗದಿಂದ ಯಮನಂತೆ ಪಾಂಡವಸೇನೆಯನ್ನು ಹಿಂಬಾಲಿಸಿದರು.

ತೇ ವಧ್ಯಮಾನಾಃ ಸಮರೇ ದ್ರೋಣಪುತ್ರೇಣ ಕ್ಷತ್ರಿಯಾಃ ।
ದ್ರೋಣಪುತ್ರಂ ಭಯಾದ್ ರಾಜನ್ ದಿಕ್ಷು ಸರ್ವಾಸು ಮೇನಿರೇ ॥೬೯॥

ಎಲೈ ರಾಜನೇ, ದ್ರೋಣಪುತ್ರರಾದ ಅಶ್ವತ್ಥಾಮರಿಂದ ಹಾಗೆ ಹೊಡೆಯಲ್ಪಡುತ್ತಿದ್ದ ಕ್ಷತ್ರಿಯರು ಭಯದಿಂದ ಅಶ್ವತ್ಥಾಮರು ಎಲ್ಲ ದಿಕ್ಕುಗಳಲ್ಲಿಯೂ ಇದ್ದಾರೆಂದು ಭಾವಿಸಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ದ್ವ್ಯಶೀತ್ಯಧಿಕಶತತಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಬತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೂರನೆಯ ಅಧ್ಯಾಯ

ಭೀಮ ಮತ್ತು ಅಶ್ವತ್ಥಾಮರ ಯುದ್ಧ.
ಅಶ್ವತ್ಥಾಮರಿಂದ ಪಾಂಡವಸೇನೆಯ ಪರಾಜಯ.

ಸಂಜಯಃ

ಮಾಲವಂ ಪೌರವಂ ಚೈವ ಯುವರಾಜಂ ಚ ಚೇದಿಪಮ್ ।
ದೃಷ್ಟ್ವಾ ಸಮಕ್ಷಂ ನಿಹತಂ ದ್ರೋಣಪುತ್ರೇಣ ಪಾಂಡವಃ ॥ ೧ ॥

ಭೀಮಸೇನೋ ಮಹಾಬಾಹುಃ ಕ್ರೋಧಮಾಹಾರಯತ್ ಪರಮ್ ।
ತತಃ ಶರಶತೈಸ್ತೀಕ್ಷ್ಣೈಃ ಸಂಕ್ರುದ್ಧಾಶೀವಿಷೋಪಮೈಃ ।
ಛಾದಯಾಮಾಸ ಸಮರೇ ದ್ರೋಣಪುತ್ರಂ ಪರಂತಪಃ ॥ ೨ ॥

ಸಂಜಯ– ಮಾಲವನನ್ನೂ, ಪೌರವನನ್ನೂ, ಯುವರಾಜನನ್ನೂ ಮತ್ತು ಚೇದಿ ರಾಜನನ್ನೂ ದ್ರೋಣಪುತ್ರರು ತಮ್ಮ ಎದುರಿಗೇ ವಧೆ ಮಾಡಿದುದನ್ನು ನೋಡಿ, ಮಹಾಬಾಹುವಾದ ಪಾಂಡವನಾದ ಭೀಮಸೇನನು ಬಹಳ ಕ್ರೋಧವನ್ನು ತಂದುಕೊಂಡನು. ಆಗ ಕೋಪಗೊಂಡ ಸರ್ಪದಂತಿರುವ ಇನ್ನೂ ತೀಕ್ಷ್ಣವಾದ ಬಾಣಗಳಿಂದ ಪರಂತಪನಾದ ಭೀಮನು ಯುದ್ಧದಲ್ಲಿ ದ್ರೋಣಪುತ್ರರನ್ನು ಆಚ್ಛಾದಿಸಿದನು.

ತತೋ ದ್ರೌಣಿರ್ಮಹಾತೇಜಾಃ ಶರವರ್ಷಂ ನಿಹತ್ಯ ತಮ್ ।
ವಿವ್ಯಾಧ ನಿಶಿತೈರ್ಬಾಣೈರ್ಭೀಮಸೇನಮಮರ್ಷಣಃ ॥ ೩ ॥

ಆಗ ಮಹಾತೇಜಸ್ವಿಗಳಾದ ಅಶ್ವತ್ಥಾಮರು ಆ ಬಾಣಗಳ ಮಳೆಯನ್ನು ನಾಶಪಡಿಸಿ ರೋಷಗೊಂಡು ತೀಕ್ಷ್ಣವಾದ ಬಾಣಗಳಿಂದ ಭೀಮಸೇನನನ್ನು ಹೊಡೆದರು.

ತತೋ ಭೀಮೋ ಮಹಾಬಾಹುರ್ದ್ರೌಣೇರ್ಯುಧಿ ಮಹಾಬಲಃ ।
ಕ್ಷುರಪ್ರೇಣ ಧನುಶ್ಚಿತ್ತ್ವಾ ದ್ರೌಣಿಂ ವಿವ್ಯಾಧ ಪತ್ರಿಣಾ ॥ ೪ ॥

ಅನಂತರ ಮಹಾಬಾಹುವೂ ಮತ್ತು ಮಹಾಬಲನೂ ಆದ ಭೀಮನು ಯುದ್ಧದಲ್ಲಿ ಕ್ಷುರಪ್ರದಿಂದ ಅಶ್ವತ್ಥಾಮರ ಧನುಸ್ಸನ್ನು ಕತ್ತರಿಸಿ ಅವರನ್ನು ಬಾಣಗಳಿಂದ ಹೊಡೆದನು.

ತದಪಾಸ್ಯ ಧನುಶ್ಚಿನ್ನಂ ದ್ರೋಣಪುತ್ರೋ ಮಹಾಮನಾಃ ।
ಅನ್ಯತ್ ಕಾರ್ಮುಕಮಾದಾಯ ಭೀಮಂ ವಿವ್ಯಾಧ ಪತ್ರಿಭಿಃ ॥ ೫ ॥

ಧೈರ್ಯಶಾಲಿಗಳಾದ ಅಶ್ವತ್ಥಾಮರು ಕತ್ತರಿಸಲ್ಪಟ್ಟ ಧನುಸ್ಸನ್ನು ಬಿಟ್ಟು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಭೀಮನನ್ನು ಬಾಣಗಳಿಂದ ಹೊಡೆದರು.

ತೌ ದ್ರೌಣಿಭೀಮೌ ಸಮರೇ ಪರಾಕ್ರಾಂತೌ ಮಹಾಬಲೌ ।
ಅವರ್ಷತಾಂ ಶರವರ್ಷಂ ವೃಷ್ಟಿಮಂತಾವಿವಾಂಬುದೌ ॥ ೬ ॥

ಮಹಾಬಲರೂ, ಪರಾಕ್ರಮಶಾಲಿಗಳೂ ಆದ ಭೀಮ ಮತ್ತು ಅಶ್ವತ್ಥಾಮರು ಮಳೆಯಿಂದ ಕೂಡಿದ ಮೋಡಗಳಂತೆ ಬಾಣಗಳ ಮಳೆಯನ್ನು ಸುರಿಸಿದರು.

ಭೀಮನಾಮಾಂಕಿತಾ ಬಾಣಾಃ ಸ್ವರ್ಣಪುಂಖಾಃ ಶಿಲಾಶಿತಾಃ ।
ದ್ರೌಣಿಂ ಸಂಛಾದಯಾಮಾಸುರ್ಘನೌಘಾ ಇವ ಭಾಸ್ಕರಮ್ ॥ ೭ ॥

ಭೀಮನ ಹೆಸರಿನಿಂದ ಅಂಕಿತವಾದ ಸುವರ್ಣಪುಂಖವುಳ್ಳ, ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ಬಾಣಗಳು ಮೋಡದ ಸಮೂಹಗಳು ಸೂರ್ಯನನ್ನು ಆಚ್ಛಾದಿಸಿದಂತೆ ಅಶ್ವತ್ಥಾಮರನ್ನು ಆಚ್ಛಾದಿಸಿದವು.

ತಥೈವ ದ್ರೌಣಿನಿರ್ಮುಕ್ತೈರ್ಭೀಮಃ ಸನ್ನತಪರ್ವಭಿಃ ।
ಅವಾಕೀರ್ಯತ ಸ ಕ್ಷಿಪ್ರಂ ಶರೈಃ ಶತಸಹಸ್ರಶಃ ॥ ೮ ॥

ಹಾಗೆಯೇ ಭೀಮನೂ ಸಹ ಅಶ್ವತ್ಥಾಮರು ಪ್ರಯೋಗಿಸಿದ, ಸೂರ್ಯನ ಪ್ರಭೆಯುಳ್ಳ ಶತ-ಸಹಸ್ರಾರು ಬಾಣಗಳಿಂದ ಶೀಘ್ರವಾಗಿ ಮುಚ್ಚಲ್ಪಟ್ಟನು.

ಸ ಛಾದ್ಯಮಾನಃ ಸಮರೇ ದ್ರೌಣಿನಾ ರಣಶಾಲಿನಾ ।
ನ ವಿವ್ಯಥೇ ಮಹಾರಾಜ ತದದ್ಭುತಮಿವಾಭವತ್ ॥ ೯ ॥

ಎಲೈ ಮಹಾರಾಜನೇ, ಯುದ್ಧಶಾಲಿಗಳಾದ ಅಶ್ವತ್ಥಾಮರಿಂದ ಯುದ್ಧದಲ್ಲಿ ಆಚ್ಛಾದಿಸಲ್ಪಟ್ಟ ಭೀಮನು ವ್ಯಥೆಯನ್ನು ಹೊಂದಲಿಲ್ಲ. ಅದು ಅದ್ಭುತವಾಗಿದ್ದಿತು.

ತತೋ ಭೀಮೋ ಮಹಾಬಾಹುಃ ಕಾರ್ತಸ್ವರವಿಭೂಷಿತಾನ್ ।
ನಾರಾಚಾನ್ ದಶ ಸಂಪ್ರೈಷೀದ್ ಯಮದಂಡನಿಭಾನ್ ಶಿತಾನ್ ॥೧೦॥

ಅನಂತರ ಮಹಾಬಾಹುವಾದ ಭೀಮನು ಸ್ವರ್ಣಭೂಷಿತವಾದ, ಯಮದಂಡವನ್ನು ಹೋಲುವ ತೀಕ್ಷ್ಣವಾದ ಹತ್ತು ನಾರಾಚಗಳನ್ನು ಪ್ರಯೋಗಿಸಿದನು.

ತೇ ಜತ್ರುದೇಶಮಾಸಾದ್ಯ ದ್ರೋಣಪುತ್ರಸ್ಯ ಮಾರಿಷ ।
ನಿರ್ಭಿದ್ಯ ವಿವಿಶುಸ್ತೂರ್ಣಂ ವಲ್ಮೀಕಮಿವ ಪನ್ನಗಾಃ ॥ ೧೧ ॥

ಎಲೈ ಶ್ರೇಷ್ಠನೇ, ಅವು ಅಶ್ವತ್ಥಾಮರ ಭುಜಸಂಧಿ ದೇಶವನ್ನು ಸಮೀಪಿಸಿ, ಭೇದಿಸಿ ಶೀಘ್ರವಾಗಿ ಸರ್ಪಗಳು ಹುತ್ತದೊಳಗೆ ಹೋದಂತೆ ಭೂಮಿಯನ್ನು ಪ್ರವೇಶಿಸಿದವು.

ಸೋಽತಿವಿದ್ಧೋ ಭೃಶಂ ದ್ರೌಣಿಃ ಪಾಂಡವೇನ ಮಹಾತ್ಮನಾ ।
ಧ್ವಜಯಷ್ಟಿಂ ಸಮಾಶ್ರಿತ್ಯ ನ್ಯಮೀಲಯತ ಲೋಚನೇ ॥ ೧೨ ॥

ಮಹಾತ್ಮನಾದ ಪಾಂಡವನಾದ ಭೀಮಸೇನನಿಂದ ದೃಢವಾಗಿ ಹೊಡೆಯಲ್ಪಟ್ಟ ಅಶ್ವತ್ಥಾಮರು ಧ್ವಜಯಷ್ಟಿಯನ್ನು ಆಶ್ರಯಿಸಿ ಕಣ್ಣುಗಳನ್ನು ಮುಚ್ಚಿದರು.

ಸ ಮುಹೂರ್ತಾತ್ ಪುನಃ ಸಂಜ್ಞಾಂ ಲಬ್ಧ್ವಾ ದ್ರೌಣಿರ್ನರಾಧಿಪ ।
ಕ್ರೋಧಂ ಪರಮಮಾತಸ್ಥೌ ಸಮರೇ ರುಧಿರೋಕ್ಷಿತಃ ॥ ೧೩ ॥

ಎಲೈ ನರಾಧಿಪನೇ, ಒಂದು ಮುಹೂರ್ತದ ನಂತರ ಅವರು ಪುನಃ ಸಂಜ್ಞೆಯನ್ನು ಪಡೆದು ರಕ್ತದಿಂದ ತೊಯ್ದವರಾಗಿ ರಣರಂಗದಲ್ಲಿ ಬಹಳ ಕ್ರೋಧವನ್ನು ಹೊಂದಿದರು.

ದೃಢಂ ಸೋಽಭಿಹತಸ್ತೇನ ಪಾಂಡವೇನ ಮಹಾತ್ಮನಾ ।
ವೇಗಂ ಚಕ್ರೇ ಮಹಾಬಾಹುರ್ಭೀಮಸೇನರಥಂ ಪ್ರತಿ ॥ ೧೪ ॥

ಮಹಾತ್ಮನಾದ ಪಾಂಡವನಿಂದ ದೃಢವಾಗಿ ಹೊಡೆಯಲ್ಪಟ್ಟ ಮಹಾಬಾಹುವಾದ ಅವರು ಭೀಮಸೇನನ ರಥದ ಬಳಿಯಲ್ಲಿ ವೇಗವನ್ನು ಮಾಡಿದರು.

ತತ ಆಕರ್ಣಪೂರ್ಣಾನಾಂ ಶರಾಣಾಂ ತಿಗ್ಮತೇಜಸಾಮ್ ।
ಶತಮಾಶೀವಿಷಾಭಾನಾಂ ಪ್ರೇಷಯಾಮಾಸ ಭಾರತ ॥ ೧೫ ॥

ಎಲೈ ಭಾರತನೇ, ಆಗ ತೀಕ್ಷ್ಣವಾದ ಸಾಮರ್ಥ್ಯವುಳ್ಳ, ಸರ್ಪಗಳನ್ನು ಹೋಲುವ ನೂರು ಬಾಣಗಳನ್ನು ಹೆದೆಯನ್ನು ಕಿವಿಯವರೆಗೂ ಎಳೆದು ಭೀಮಸೇನನ ರಥದ ಮೇಲೆ ಪ್ರಯೋಗಿಸಿದರು.

ಭೀಮೋಽಪಿ ಸಮರಶ್ಲಾಘೀ ತಸ್ಯ ವೀರ್ಯಮಚಿಂತಯನ್ ।
ತೂರ್ಣಂ ಪ್ರಾಸೃಜದುಗ್ರಾಣಿ ಶರವರ್ಷಾಣಿ ಪಾಂಡವಃ ॥ ೧೬ ॥

ಸಮರಶ್ಲಾಘಿಯಾದ ಭೀಮನೂ ಅಶ್ವತ್ಥಾಮರ ಪರಾಕ್ರಮವನ್ನು ಚಿಂತಿಸದೆ ಶೀಘ್ರವಾಗಿ ಉಗ್ರವಾದ ಬಾಣಗಳ ಮಳೆಯನ್ನು ಸೃಷ್ಟಿಸಿದನು.

ತತೋ ದ್ರೌಣಿರ್ಮಹಾರಾಜ ಛಿತ್ತ್ವಾಽಸ್ಯ ವಿಶಿಖೈರ್ಧನುಃ ।
ಆಜಘಾನೋರಸಿ ಕ್ರುದ್ಧಃ ಪಾಂಡವಂ ನಿಶಿತೈಃ ಶರೈಃ ॥ ೧೭ ॥

ಎಲೈ ಮಹಾರಾಜನೇ, ಅನಂತರ ಅಶ್ವತ್ಥಾಮರು ತಮ್ಮ ಬಾಣಗಳಿಂದ ಪಾಂಡವನ ಧನುಸ್ಸನ್ನು ಕತ್ತರಿಸಿ ಕ್ರುದ್ಧರಾಗಿ ತೀಕ್ಷ್ಣವಾದ ಬಾಣಗಳಿಂದ ಅವನನ್ನು ಎದೆಯಲ್ಲಿ ಹೊಡೆದರು.

ತತೋಽನ್ಯದ್ಧನುರಾದಾಯ ಭೀಮಸೇನೋಽತ್ಯಮರ್ಷಣಃ ।
ವಿವ್ಯಾಧ ನಿಶಿತೈರ್ಬಾಣೈರ್ದ್ರೌಣಿಂ ಪಂಚಭಿರಾಹವೇ ॥ ೧೮ ॥

ಆಗ ಬಹಳ ರೋಷವನ್ನು ಹೊಂದಿದ ಭೀಮಸೇನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಐದು ತೀಕ್ಷ್ಣವಾದ ಬಾಣಗಳಿಂದ ಯುದ್ಧದಲ್ಲಿ ಅಶ್ವತ್ಥಾಮರನ್ನು ಹೊಡೆದನು.

ಜೀಮೂತಾವಿವ ಘರ್ಮಾಂತೇ ತೌ ಶರೌಘಪ್ರವರ್ಷಿಣೌ ।
ಅನ್ಯೋನ್ಯಕ್ರೋಧತಾಮ್ರಾಕ್ಷೌ ಛಾದಯಾಮಾಸತುರ್ಯುಧಿ ॥ ೧೯ ॥

ಬೇಸಿಗೆಯ ಕಾಲದ ಕೊನೆಯಲ್ಲಿ ಮಳೆಗಾಲವು ಪ್ರಾರಂಭವಾದಾಗ ಇರುವ ಎರಡು ಮೋಡಗಳಂತೆ ಅವರು ಪರಸ್ಪರವಾಗಿ ಕ್ರೋಧದಿಂದ ಕೆಂಪಾದ ಕಣ್ಣುಳ್ಳವರಾಗಿ ರಣರಂಗದಲ್ಲಿ ಬಾಣಗಳ ಮಳೆಯನ್ನು ಸುರಿಸಿ ಪರಸ್ಪರವಾಗಿ ಆಚ್ಛಾದಿಸಿದರು.

ತಲಶಬ್ದೈಸ್ತತೋ ಘೋರೈಸ್ತ್ರಾಸಯಂತೌ ಪರಸ್ಪರಮ್ ।
ಅಯುದ್ಧ್ಯೇತಾಂ ಸುಸಂರಬ್ಧೌ ಕೃತಪ್ರತಿಕೃತೈಷಿಣೌ ॥ ೨೦ ॥

ಅನಂತರ ಘೋರವಾದ ತಳಶಬ್ದಗಳಿಂದ ಪರಸ್ಪರವಾಗಿ ಹೆದರಿಸುತ್ತಾ, ಒಬ್ಬರು ಮಾಡಿದುದಕ್ಕೆ ಇನ್ನೊಬ್ಬರು ಪ್ರತಿಯಾಗಿ ಮಾಡುತ್ತಾ ಬಹಳ ಕೋಪವನ್ನು ಹೊಂದಿದವರಾಗಿ ಯುದ್ಧವನ್ನು ಮಾಡಿದರು.

ತತೋ ವಿಸ್ಫಾರ್ಯ ಸುಮಹಚ್ಚಾಪಂ ರುಗ್ಮವಿಭೂಷಿತಮ್ ।
ಭೀಮಂ ಪ್ರೇಕ್ಷತ ಸ ದ್ರೌಣಿಃ ಶರಾನಸ್ಯಂತಮಂತಿಕಾತ್ ।
ಶರದ್ಯಹರ್ಮಧ್ಯಗತೋ ದೀಪ್ತಾರ್ಚಿರಿವ ಭಾಸ್ಕರಃ ॥ ೨೧ ॥

ಅನಂತರ ಶರತ್ಕಾಲದಲ್ಲಿ ಪ್ರಕಾಶಮಾನವಾದ ಕಿರಣಗಳಿಂದ ಕೂಡಿದ ಮಧ್ಯಂದಿನದ ಸೂರ್ಯನಂತಿದ್ದ ಅಶ್ವತ್ಥಾಮರು ಸುವರ್ಣಾಲಂಕೃತವಾದ ತಮ್ಮ ದೊಡ್ಡ ಧನುಸ್ಸನ್ನು ಎಳೆದು ಸಮೀಪದಿಂದಲೇ ಬಾಣಗಳನ್ನು ಪ್ರಯೋಗಿಸುತ್ತಿದ್ದ ಭೀಮಸೇನನನ್ನು ನೋಡಿದರು.

ಆದದಾನಸ್ಯ ವಿಶಿಖಾನ್ ಸಂದಧಾನಸ್ಯ ಚಾಶುಗಾನ್ ।
ವಿಕರ್ಷತೋ ಮುಂಚತಶ್ಚ ನಾಂತರಂ ದದೃಶುರ್ಜನಾಃ ॥ ೨೨ ॥

ಬಾಣಗಳನ್ನು ಬತ್ತಳಿಕೆಯಿಂದ ತೆಗೆದುಕೊಂಡು ಶೀಘ್ರಗಾಮಿಗಳಾದ ಅವುಗಳನ್ನು ಧನುಸ್ಸಿನಲ್ಲಿ ಹೂಡಿ ಹೆದೆಯನ್ನು ಎಳೆದು ಅಶ್ವತ್ಥಾಮರು ಪ್ರಯೋಗಿಸುವಾಗ ಜನರಿಗೆ ಅವುಗಳ ಮಧ್ಯದಲ್ಲಿ ಕಾಲದ ವ್ಯತ್ಯಾಸವೇ ತಿಳಿಯಲಿಲ್ಲ.

ಅಲಾತಚಕ್ರಪ್ರತಿಮಂ ತಸ್ಯ ಮಂಡಲಮಾಯುಧಮ್ ।
ದ್ರೌಣೇರಾಸೀನ್ಮಹಾರಾಜ ಬಾಣಾನ್ ವಿಸೃಜತಸ್ತದಾ ॥ ೨೩ ॥

ಎಲೈ ಮಹಾರಾಜನೇ, ಬಾಣಗಳನ್ನು ಪ್ರಯೋಗಿಸುವ ಅಶ್ವತ್ಥಾಮರ ಆಯುಧವಾದ ಧನುಸ್ಸು ಯಾವಾಗಲೂ ಅಲಾತಚಕ್ರದಂತೆಯೇ ಮಂಡಲಾಕಾರವಾಗಿದ್ದಿತು.

ಧನುಶ್ಚ್ಯುತಾಃ ಶರಾಸ್ತಸ್ಯ ಶತಶೋಽಥ ಸಹಸ್ರಶಃ ।
ಆಕಾಶೇ ಪ್ರತ್ಯದೃಶ್ಯಂತ ಶಲಭಾನಾಮಿವಾಯತೀಃ ॥ ೨೪ ॥

ಅವರ ಧನುಸ್ಸಿನಿಂದ ಹೊರಹೊಮ್ಮಿದ ನೂರಾರು ಸಾವಿರಾರು ಬಾಣಗಳು ಆಕಾಶದಲ್ಲಿ ಪತಂಗಗಳ ಪಂಕ್ತಿಯಂತೆ ಕಂಡವು.

ತೇ ತು ದ್ರೌಣಿಧನುರ್ಮುಕ್ತಾಃ ಶರಾ ಹೇಮವಿಭೂಷಿತಾಃ ।
ಅಜಸ್ರಮನ್ವಕೀರ್ಯಂತ ಘೋರಾ ಭೀಮರಥಂ ಪ್ರತಿ ॥ ೨೫ ॥

ಅಶ್ವತ್ಥಾಮರ ಧನುಸ್ಸಿನಿಂದ ಹೊರಹೊಮ್ಮಿದ ಸುವರ್ಣಭೂಷಿತವಾದ ಘೋರವಾದ ಬಾಣಗಳು ಭೀಮಸೇನನ ರಥದ ಸುತ್ತಲೂ ಸತತವಾಗಿ ಪ್ರಯೋಗಿಸಲ್ಪಟ್ಟವು.

ತತ್ರಾದ್ಭುತಮಪಶ್ಯಾಮ ಭೀಮಸೇನಸ್ಯ ವಿಕ್ರಮಮ್ ।
ಬಲಂ ವೀರ್ಯಂ ಪ್ರಭಾವಂ ಚ ವ್ಯವಸಾಯಂ ಚ ಭಾರತ ॥ ೨೬ ॥

ಎಲೈ ಭಾರತನೇ, ಆಗ ನಾವು ಭೀಮಸೇನನ ಅದ್ಭುತವಾದ ಪರಾಕ್ರಮವನ್ನೂ, ಬಲವನ್ನೂ, ವೀರ್ಯವನ್ನೂ, ಸಾಮರ್ಥ್ಯವನ್ನೂ ಮತ್ತು ನಿರ್ಧಾರವನ್ನೂ ನೋಡಿದೆವು.

ತಾಂ ಸ ಮೇಘಾದಿವೋದ್ಭೂತಾಂ ಬಾಣವೃಷ್ಟಿಂ ಸಮಂತತಃ ।
ಜಲವೃಷ್ಟಿಂ ಮಹಾಘೋರಾಂ ತಪಾಂತ ಇವ ಚಿಂತಯನ್ ॥ ೨೭ ॥

ದ್ರೋಣಪುತ್ರವಧಪ್ರೇಪ್ಸುರ್ಭೀಮೋ ಭೀಮಪರಾಕ್ರಮಃ ।
ಅಮುಂಚಚ್ಛರವರ್ಷಾಣಿ ಪ್ರಾವೃಷೀವ ಬಲಾಹಕಃ ॥ ೨೮ ॥

ಬೇಸಿಗೆಯ ನಂತರ ಮಳೆಗಾಲದಲ್ಲಿ ಮೋಡದಿಂದ ಉಂಟಾದ ಜಲವೃಷ್ಟಿಯಂತೆ ಮಹಾಘೋರವಾದ ಆ ಬಾಣವೃಷ್ಟಿಯನ್ನು ನೋಡಿ ಭಯಂಕರ ಪರಾಕ್ರಮವುಳ್ಳ ಭೀಮನು ಅಶ್ವತ್ಥಾಮರ ವಧೆಯನ್ನು ಬಯಸಿ ಮೋಡವು ಮಳೆಗಾಲದಲ್ಲಿ ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸಿದನು.

ತದ್ ರುಗ್ಮಪೃಷ್ಠಂ ಭೀಮಸ್ಯ ಧನುಘೋರಂ ಮಹದ್ ರಣೇ ।
ವಿಕೃಷ್ಯಮಾಣಂ ವಿಬಭೌ ಶಕ್ರಚಾಪಮಿವಾಪರಮ್ ॥ ೨೯ ॥

ಭೀಮಸೇನನ ಸುವರ್ಣಾಲಂಕೃತವಾದ, ಘೋರವಾದ ಮಹಾಧನುಸ್ಸು ರಣರಂಗದಲ್ಲಿ ಎಳೆಯಲ್ಪಟ್ಟು ಇನ್ನೊಂದು ಇಂದ್ರಧನುಸ್ಸಿನಂತೆ ಶೋಭಿಸಿತು.

ತಸ್ಮಾಚ್ಚರಾಃ ಪ್ರಾದುರಾಸನ್ ಶತಶೋಽಥ ಸಹಸ್ರಶಃ ।
ಸಂಛಾದಯಂತಃ ಸಮರೇ ದ್ರೌಣಿಮಾಹವಶೋಭಿನಮ್ ॥ ೩೦ ॥

ಅದರಿಂದ ಬಾಣಗಳು ನೂರಾರು, ಸಾವಿರಾರು ಸಂಖ್ಯೆಯಲ್ಲಿ ಹೊರಟು ರಣರಂಗದಲ್ಲಿ ಯುದ್ಧದಲ್ಲಿ ಶೋಭಿಸುವ ಅಶ್ವತ್ಥಾಮರನ್ನು ಆಚ್ಛಾದಿಸಿದವು.

ತಯೋರ್ವಿಸೃಜತೋರೇವಂ ಶರಜಾಲಾನಿ ಮಾರಿಷ ।
ವಾಯುರಪ್ಯಂತರಾ ರಾಜನ್ ನಾಶಕ್ನೋತ್ ಪ್ರತಿಸರ್ಪಿತುಮ್ ॥ ೩೧ ॥

ಎಲೈ ಶ್ರೇಷ್ಠನೇ, ರಾಜನೇ, ಅವರು ಹೀಗೆ ಬಾಣಗಳ ಸಮೂಹವನ್ನು ಸೃಷ್ಟಿಸುತ್ತಿರುವಾಗ ಬಾಣಗಳ ಮಧ್ಯದಲ್ಲಿ ಗಾಳಿಯೂ ನುಸುಳಲು ಸಾಧ್ಯವಿರಲಿಲ್ಲ.

ತಥಾ ದ್ರೌಣಿರ್ಮಹಾರಾಜ ಶರಾನ್ ಹೇಮವಿಭೂಷಿತಾನ್ ।
ತೈಲಧೌತಾನ್ ಪ್ರಸನ್ನಾಗ್ರಾನ್ ಪ್ರಾಹಿಣೋದ್ ವಧಕಾಂಕ್ಷಯಾ ॥ ೩೨ ॥

ಎಲೈ ಮಹಾರಾಜನೇ, ಆಗ ಅಶ್ವತ್ಥಾಮರು ಭೀಮಸೇನನ ವಧೆಯನ್ನು ಬಯಸಿ ಹೇಮವಿಭೂಷಿತವಾದ, ಎಣ್ಣೆಯಲ್ಲಿ ಸಾಣೆಯನ್ನು ಹಿಡಿದ, ತೀಕ್ಷ್ಣವಾದ ತುದಿಯುಳ್ಳ ಬಾಣಗಳನ್ನು ಭೀಮಸೇನನ ಮೇಲೆ ಪ್ರಯೋಗಿಸಿದರು.

ತಾನಂತರಿಕ್ಷೇ ವಿಶಿಖೈಸ್ತ್ರಿಧೈಕೈಕಮಶಾತಯತ್ ।
ವಿಶೇಷಯನ್ ದ್ರೋಣಸುತಂ ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೩೩ ॥

ಭೀಮಸೇನನು ಕೌಶಲದಲ್ಲಿ ಅಶ್ವತ್ಥಾಮರನ್ನು ಮೀರಿಸುತ್ತಾ ಅಂತರಿಕ್ಷದಲ್ಲಿಯೇ ಅವರ ಒಂದೊಂದು ಬಾಣವನ್ನೂ ಮೂರು-ಮೂರು ಭಾಗವಾಗಿ ಕತ್ತರಿಸಿ, 'ನಿಲ್ಲು-ನಿಲ್ಲು' ಎಂದು ಹೇಳಿದನು.

ಪುನಶ್ಚ ಶರವರ್ಷಾಣಿ ಘೋರಾಣ್ಯುಗ್ರಾಣಿ ಪಾಂಡವಃ ।
ವ್ಯಸೃಜದ್ ಬಲವಾನ್ ಕ್ರುದ್ಧೋ ದ್ರೋಣಪುತ್ರವಧೇಪ್ಸಯಾ ॥ ೩೪ ॥

ಪುನಃ ಪಾಂಡವನಾದ ಬಲಿಷ್ಠನಾದ ಭೀಮಸೇನನು ಕ್ರುದ್ಧನಾಗಿ ದ್ರೋಣ ಪುತ್ರರನ್ನು ಕೊಲ್ಲಲು ಬಯಸಿ ಘೋರವಾದ, ಉಗ್ರವಾದ ಬಾಣಗಳ ಮಳೆಯನ್ನು ಸೃಷ್ಟಿಸಿದನು.

ತತೋಽಸ್ತ್ರಮಾಯಯಾ ತೂರ್ಣಂ ಶರವೃಷ್ಟಿಂ ನಿವಾರ್ಯ ತಾಮ್ ।
ಧನುಶ್ಚಿಚ್ಛೇದ ಭೀಮಸ್ಯ ದ್ರೋಣಪುತ್ರೋ ಮಹಾಸ್ತ್ರವಿತ್ ।
ಶರೈಶ್ಚೈನಂ ಸುಬಹುಭಿಃ ಕ್ರುದ್ಧಃ ಸಂಖೇ ಪರಾಭಿನತ್ ॥ ೩೫ ॥

ಮಹಾಸ್ತ್ರವೇತ್ತರಾದ ದ್ರೋಣಪುತ್ರರಾದ ಅಶ್ವತ್ಥಾಮರು ತಮ್ಮ ಅಸ್ತ್ರ ಸಾಮರ್ಥ್ಯದಿಂದ ಶೀಘ್ರವಾಗಿ ಆ ಬಾಣವೃಷ್ಟಿಯನ್ನು ನಿವಾರಿಸಿ ಭೀಮಸೇನನ ಧನುಸ್ಸನ್ನು ಕತ್ತರಿಸಿದರು ಮತ್ತು ಕ್ರುದ್ಧರಾದ ಅವರು ಅನೇಕ ಬಾಣಗಳಿಂದ ರಣರಂಗದಲ್ಲಿ ಅವನನ್ನು ಬಹಳವಾಗಿ ಭೇದಿಸಿ, ಗಾಯಗೊಳಿಸಿದರು.

ಸ ಛಿನ್ನಧನ್ವಾ ಬಲವಾನ್ ರಥಶಕ್ತಿಂ ಸುದಾರುಣಾಮ್ ।
ವೇಗೇನಾವಿಧ್ಯ ಚಿಕ್ಷೇಪ ದ್ರೋಣಪುತ್ರರಥಂ ಪ್ರತಿ ॥ ೩೬ ॥

ತನ್ನ ಧನುಸ್ಸು ಕತ್ತರಿಸಲ್ಪಟ್ಟ ಬಲಿಷ್ಠನಾದ ಭೀಮಸೇನನು ಘೋರವಾದ ರಥಶಕ್ತಿಯನ್ನು ತೆಗೆದುಕೊಂಡು ವೇಗದಿಂದ ತಿರಿಗಿಸಿ ಅದನ್ನು ಅಶ್ವತ್ಥಾಮರ ರಥದ ಮೇಲೆ ಎಸೆದನು.

ತಾಮಾಪತಂತೀಂ ಸಹಸಾ ಮಹೋಲ್ಕಾಭಾಂ ಶಿತೈಃ ಶರೈಃ ।
ಚಿಚ್ಛೇದ ಸಮರೇ ದ್ರೌಣಿರ್ದರ್ಶಯನ್ ಪಾಣಿಲಾಘವಮ್ ॥ ೩೭ ॥

ದೊಡ್ಡ ಉಲ್ಕೆಯಂತೆ ತಮ್ಮೆಡೆಗೆ ಶೀಘ್ರವಾಗಿ ಬರುತ್ತಿದ್ದ ಆ ರಥಶಕ್ತಿಯನ್ನು ನೋಡಿ ಅಶ್ವತ್ಥಾಮರು ತಮ್ಮ ಹಸ್ತಲಾಘವವನ್ನು ತೋರಿಸುತ್ತಾ ತೀಕ್ಷ್ಣವಾದ ಬಾಣಗಳಿಂದ ರಣರಂಗದಲ್ಲಿ ಅದನ್ನು ಕತ್ತರಿಸಿದರು.

ಏತಸ್ಮಿನ್ನಂತರೇ ಭೀಮೋ ದೃಢಮಾದಾಯ ಕಾರ್ಮುಕಮ್ ।
ದ್ರೌಣಿಂ ವಿವ್ಯಾಧ ವಿಶಿಖೈಃ ಸ್ಮಯಮಾನೋ ವೃಕೋದರಃ ॥ ೩೮ ॥

ಈ ಮಧ್ಯದಲ್ಲಿ ಭೀಮನು ದೃಢವಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ನಗುತ್ತಾ ಅಶ್ವತ್ಥಾಮರನ್ನು ಬಾಣಗಳಿಂದ ಹೊಡೆದನು.

ತತೋ ದ್ರೌಣಿರ್ಮಹಾರಾಜ ಭೀಮಸೇನಸ್ಯ ಸಾರಥಿಮ್ ।
ಲಲಾಟೇ ದಾರಯಾಮಾಸ ಶರೇಣಾನತಪರ್ವಣಾ ॥ ೩೯ ॥

ಎಲೈ ಮಹಾರಾಜನೇ, ಆಗ ಅಶ್ವತ್ಥಾಮರು ಬಾಗಿದ ತುದಿಯುಳ್ಳ ಒಂದು ಬಾಣದಿಂದ ಭೀಮಸೇನನ ಸಾರಥಿಯ ಹಣೆಯನ್ನು ಸೀಳಿಹಾಕಿದರು.

ಸೋಽತಿವಿದ್ಧೋ ಬಲವತಾ ದ್ರೋಣಪುತ್ರೇಣ ಸಾರಥಿಃ ।
ವ್ಯಾಮೋಹಮಗಮದ್ ರಾಜನ್ ರಶ್ಮೀನುತ್ಸೃಜ್ಯ ವಾಜಿನಾಮ್ ॥೪೦॥

ಎಲೈ ರಾಜನೇ, ಬಲಿಷ್ಠರಾದ ದ್ರೋಣಪುತ್ರರಿಂದ ಅತಿಯಾಗಿ ಹೊಡೆಯಲ್ಪಟ್ಟ ಆ ಸಾರಥಿಯು ಕುದುರೆಗಳ ಕಡಿವಾಣವನ್ನು ಬಿಟ್ಟು ಮೂರ್ಛೆಯನ್ನು ಹೊಂದಿದನು.

ತತೋಽಶ್ವಾಃ ಪ್ರಾದ್ರವಂಸ್ತೂರ್ಣಂ ಮೋಹಿತೇ ರಥಸಾರಥೌ ।
ಭೀಮಸೇನಸ್ಯ ರಾಜೇಂದ್ರ ಪಶ್ಯತಾಂ ಸರ್ವಧನ್ವಿನಾಮ್ ॥ ೪೧ ॥

ಎಲೈ ರಾಜೇಂದ್ರನೇ, ಆಗ ಭೀಮಸೇನನ ಸಾರಥಿಯು ಮೂರ್ಛೆಯನ್ನು ಹೊಂದುತ್ತಿರಲು ಎಲ್ಲ ಧನುರ್ಧಾರಿಗಳೂ ನೋಡುತ್ತಿರುವಂತೆಯೇ ಭೀಮಸೇನನ ರಥದ ಅಶ್ವಗಳು ಶೀಘ್ರವಾಗಿ ಓಡಿಹೋದವು.

ತಂ ದೃಷ್ಟ್ವಾ ಪ್ರದ್ರುತೈರಶ್ವೈರಪಕೃಷ್ಟಂ ರಣಾಜಿರಾತ್ ।
ದಧ್ಮೌ ಪ್ರಮುದಿತಃ ಶಂಖಂ ಬೃಹಂತಮಪರಾಜಿತಃ ॥ ೪೨ ॥

ಓಡುವ ಅಶ್ವಗಳಿಂದ ಭೀಮಸೇನನು ರಣಾಂಗಣದಿಂದ ದೂರ ಎಳೆಯಲ್ಪಟ್ಟುದನ್ನು ನೋಡಿ ಸಂತೋಷಗೊಂಡ ಅಶ್ವತ್ಥಾಮರು ಅಪರಾಜಿತರಾಗಿ ತಮ್ಮ ದೊಡ್ಡ ಶಂಖವನ್ನು ಊದಿದರು.

ತತಃ ಸರ್ವೇ ಚ ಪಾಂಚಾಲಾ ಭೀಮಸೇನಶ್ಚ ಪಾಂಡವಃ ।
ಧೃಷ್ಟದ್ಯುಮ್ನರಥಂ ತ್ಯಕ್ತ್ವಾ ಭೀತಾಃ ಸಂಪ್ರಾದ್ರವನ್ ದಿಶಃ ॥ ೪೩ ॥

ಆಗ ಎಲ್ಲ ಪಾಂಚಾಲರೂ, ಪಾಂಡವನಾದ ಭೀಮಸೇನನೂ ಧೃಷ್ಟದ್ಯುಮ್ನನ ರಥವನ್ನು ಬಿಟ್ಟು ಭೀತರಾಗಿ ದಿಕ್ಕು-ದಿಕ್ಕುಗಳಿಗೆ ಓಡಿಹೋದರು.

ತಾನ್ ಪ್ರಭಗ್ನಾಂಸ್ತತೋ ದ್ರೋಣಃ ಪೃಷ್ಠತೋ ವಿಕಿರನ್ ಶರಾನ್ ।
ಅಭ್ಯವರ್ತತ ವೇಗೇನ ಕಾಲಯನ್ ಪಾಂಡುವಾಹಿನೀಮ್ ॥ ೪೪ ॥

ಅಶ್ವತ್ಥಾಮರು ಹಾಗೆ ಓಡುತ್ತಿದ್ದ ಪಾಂಡವಸೇನೆಯನ್ನು ಹಿಂದಿನಿಂದ ಬಾಣಗಳನ್ನು ಪ್ರಯೋಗಿಸುತ್ತಾ ಹಿಂಬಾಲಿಸಿ ಶೀಘ್ರವಾಗಿ ಚದುರಿಸಿದರು.

ತೇ ವಧ್ಯಮಾನಾಃ ಸಮರೇ ದ್ರೋಣಪುತ್ರೇಣ ಪಾರ್ಥಿವಾಃ ।
ದ್ರೋಣಪುತ್ರಭಯಾದ್ ರಾಜನ್ ದಿಶಃ ಸರ್ವಾಶ್ಚ ಭೇಜಿರೇ ॥ ೪೫ ॥

ಎಲೈ ರಾಜನೇ, ಯುದ್ಧದಲ್ಲಿ ದ್ರೋಣಪುತ್ರರಿಂದ ಹೊಡೆಯಲ್ಪಟ್ಟ ಆ ರಾಜರು ಅವರ ಭಯದಿಂದ ಎಲ್ಲ ದಿಕ್ಕುಗಳಿಗೂ ಓಡಿಹೋದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ತ್ರ್ಯಶೀತ್ಯಧಿಕಶತತಮೋಽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ನಾಲ್ಕನೆಯ ಅಧ್ಯಾಯ

ಅಶ್ವತ್ಥಾಮರಿಂದ ಆಗ್ನೇಯಾಸ್ತ್ರಪ್ರಯೋಗ. ಅದರ ನಿಷ್ಫಲತೆ.
ವ್ಯಾಸರಲ್ಲಿ ಕಾರಣಪ್ರಶ್ನೆ. ವ್ಯಾಸರಿಂದ ಉತ್ತರದಾನ.
ಅಶ್ವತ್ಥಾಮರಿಂದ ಸೈನ್ಯಾವಹಾರ.

ಸಂಜಯಃ

ತತ್ ಪ್ರಭಗ್ನಂ ಬಲಂ ದೃಷ್ಟ್ವಾ ಕುಂತೀಪುತ್ರೋ ಧನಂಜಯಃ ।
ನ್ಯವಾರಯದಮೇಯಾತ್ಮಾ ದ್ರೋಣಪುತ್ರವಧೇಪ್ಸಯಾ ॥ ೧ ॥

ಸಂಜಯ– ಕುಂತೀಪುತ್ರನಾದ ಧನಂಜಯನು ತನ್ನ ಸೈನ್ಯವು ಭಗ್ನವಾದುದನ್ನು ನೋಡಿ, ಅಚಿಂತ್ಯಸಾಮರ್ಥ್ಯವುಳ್ಳ ಅವನು ಅಶ್ವತ್ಥಾಮರ ವಧೆಯನ್ನು ಬಯಸಿ ತನ್ನ ಸೈನ್ಯವನ್ನು ತಡೆದನು.

ತತಸ್ತೇ ಸೈನಿಕಾ ರಾಜನ್ನೈವ ತತ್ರಾವತಸ್ಥಿರೇ ।
ಸಂಸ್ಥಾಪ್ಯಮಾನಾ ಯತ್ನೇನ ಗೋವಿಂದೇನಾರ್ಜುನೇನ ಚ ॥ ೨ ॥

ಎಲೈ ರಾಜನೇ, ಪ್ರಯತ್ನಪೂರ್ವಕವಾಗಿ ಕೃಷ್ಣಾರ್ಜುನರಿಂದ ತಡೆಯಲ್ಪಟ್ಟರೂ ಸೈನಿಕರು ಆಗ ಅಲ್ಲಿ ನಿಲ್ಲಲಿಲ್ಲ.

ಏಕ ಏವ ತು ಬೀಭತ್ಸುಃ ಸೋಮಕಾವಯವೈಃ ಸಹ ।
ಮತ್ಸ್ಯೈರನ್ಯೈಶ್ಚ ಸಂಧಾಯ ಕೌರವಾನ್ ಸಂನ್ಯವರ್ತತ ॥ ೩ ॥

ಅರ್ಜುನನೊಬ್ಬನೇ ಉಳಿದ ಸೋಮಕರಿಂದಲೂ, ಮತ್ಸ್ಯರಿಂದಲೂ ಮತ್ತು ಉಳಿದವರಿಂದಲೂ ಸಹಿತನಾಗಿ ಕೌರವರ ಮೇಲೆ ಹಿಂದಿರುಗಿ ಯುದ್ಧಕ್ಕೆ ನಿಂತನು.

ತತೋ ದ್ರುತಮತಿಕ್ರಮ್ಯ ಸಿಂಹಲಾಂಗೂಲಕೇತನಮ್ ।
ಸವ್ಯಸಾಚೀ ಮಹೇಷ್ವಾಸಮಶ್ವತ್ಥಾಮಾನಮಬ್ರವೀತ್ ॥ ೪ ॥

ಯಾ ಶಕ್ತಿರ್ಯಚ್ಚ ತೇ ವೀರ್ಯಂ ಯಜ್ಞಾನಂ ಯಚ್ಚ ಪೌರುಷಮ್ ।
ಧಾರ್ತರಾಷ್ಟ್ರೇಷು ಯಾ ಪ್ರೀತಿಃ ಪ್ರದ್ವೇಷೋಽಸ್ಮಾಸು ಯಶ್ಚ ತೇ ।
ಯಚ್ಚ ಭೂಯೋಽಸ್ತಿ ತೇಜಸ್ತತ್ ಪರಮಂ ಮಮ ದರ್ಶಯ ॥ ೫ ॥

ಸ ಏವ ದ್ರೋಣಹಂತಾ ತೇ ದರ್ಪಂ ಭೇತ್ಸ್ಯತಿ ಪಾರ್ಷತಃ ।
ಕಾಲಾನಲಸಮಪ್ರಖ್ಯೋ ದ್ವಿಷತಾಮಂತಕೋ ಯುಧಿ ।
ಸಮಾಸಾದಯ ಪಾಂಚಾಲ್ಯಂ ಮಾಂ ಚಾಪಿ ಸಹಕೇಶವಮ್ ॥ ೬ ॥

ಆಗ ಅರ್ಜುನನು ಶೀಘ್ರವಾಗಿ ಸಿಂಹಲಾಂಗೂಲ ಧ್ವಜವುಳ್ಳ, ಮಹಾಧನುರ್ಧಾರಿಗಳಾದ ಅಶ್ವತ್ಥಾಮರ ಬಳಿಗೆ ಧಾವಿಸಿ ಅವರನ್ನು ಕುರಿತು- 'ನಿಮ್ಮ ಶಕ್ತಿ ಏನಿದೆಯೋ, ನಿಮ್ಮ ಪರಾಕ್ರಮ, ಜ್ಞಾನ ಮತ್ತು ಪೌರುಷಗಳು ಏನಿವೆಯೋ, ದುರ್ಯೋಧನನಲ್ಲಿ ಯಾವ ಪ್ರೀತಿಯಿದೆಯೋ ಮತ್ತು ನಮ್ಮಲ್ಲಿ ಎಂತಹ ದ್ವೇಷವಿದೆಯೋ ಮತ್ತು ನಿಮ್ಮ ಯಾವ ಶ್ರೇಷ್ಠವಾದ ಸಾಮರ್ಥ್ಯವಿದೆಯೋ ಅದನ್ನು ನನಗೆ ತೋರಿಸಿ. ಕಾಲಾನಲಕ್ಕೆ ಸಮನಾದ, ಯುದ್ಧದಲ್ಲಿ ಶತ್ರುಸಂಹಾರಕನಾದ, ದ್ರೋಣರನ್ನು ಸಂಹಾರ ಮಾಡಿದ ಧೃಷ್ಟದ್ಯುಮ್ನನೇ ನಿಮ್ಮ ಅಹಂಕಾರವನ್ನು ಭೇದಿಸುವನು. ಧೃಷ್ಟದ್ಯುಮ್ನನನ್ನು ಮತ್ತು ಕೃಷ್ಣನಿಂದ ಕೂಡಿದ ನನ್ನನ್ನು ಯುದ್ಧದಲ್ಲಿ ಎದುರಿಸಿ' ಎಂದು ಹೇಳಿದನು.

ಧೃತರಾಷ್ಟ್ರಃ

ಆಚಾರ್ಯಪುತ್ರೋ ಮಾನಾರ್ಹೋ ಬಲವಾಂಶ್ಚಾಪಿ ಸಂಜಯ ।
ಪ್ರೀತಿರ್ಧನಂಜಯೇ ಚಾಸ್ಯ ಪ್ರಿಯಶ್ಚಾಪಿ ಸ ವಾಸವೇಃ ॥ ೭ ॥

ನ ಭೂತಪೂರ್ವಂ ಬೀಭತ್ಸೋರ್ವಾಕ್ಯಂ ಪರುಷಮೀದೃಶಮ್ ।
ಅಥ ಕಸ್ಮಾತ್ ಸ ಕೌಂತೇಯಃ ಸಖಾಯಂ ರೂಕ್ಷಮಬ್ರವೀತ್ ॥ ೮ ॥

ಧೃತರಾಷ್ಟ್ರ– ಎಲೈ ಸಂಜಯನೇ, ಆಚಾರ್ಯಪುತ್ರರಾದ ಅಶ್ವತ್ಥಾಮರು ಗೌರವಕ್ಕೆ ಅರ್ಹರಾದವರು ಮತ್ತು ಬಲಿಷ್ಠರಾದವರು. ಅವರಿಗೆ ಅರ್ಜುನನಲ್ಲಿ ಪ್ರೀತಿಯಿದೆ, ಅರ್ಜುನನಿಗೂ ಅವರಲ್ಲಿ ಪ್ರೀತಿಯಿದೆ. ಅರ್ಜುನನು ಇಂತಹ ಉಗ್ರವಾದ ಮಾತುಗಳನ್ನು ಹಿಂದೆ ಎಂದೂ ಆಡಿದವನಲ್ಲ. ಆದ್ದರಿಂದ ಯಾವ ಕಾರಣದಿಂದ ಅರ್ಜುನನು ತನ್ನ ಸ್ನೇಹಿತರಾದ ಅಶ್ವತ್ಥಾಮರನ್ನು ಕುರಿತು ಉಗ್ರವಾಗಿ ಮಾತನಾಡಿದನು?

ಸಂಜಯಃ

ಯುವರಾಜೇ ಹತೇ ಚೈವ ವೃದ್ಧಕ್ಷತ್ರೇ ಚ ಪೌರವೇ ।
ಇಷ್ವಸ್ತ್ರವಿಧಿಸಂಪನ್ನೇ ಮಾಲವೇ ಚ ಸುದರ್ಶನೇ ॥ ೯ ॥

ಧೃಷ್ಟದ್ಯುಮ್ನೇ ಸಾತ್ಯಕೌ ಚ ಭೀಮೇ ಚಾಪಿ ಪರಾಜಿತೇ ।
ಯುಧಿಷ್ಠಿರಸ್ಯ ತೈರ್ವಾಕ್ಯೈರ್ಮರ್ಮಣ್ಯಪಿ ಚ ಘಟ್ಟಿತೇ ॥ ೧೦ ॥

ಅಂತರ್ಭೇದೇ ಚ ಸಂಜಾತೇ ದುಃಖಂ ಸಂಸ್ಮೃತ್ಯ ಚ ಪ್ರಭೋ ।
ಅಭೂತಪೂರ್ವೋ ಬೀಭತ್ಸೋರ್ದುಃಖಾನ್ಮನ್ಯುರಜಾಯತ ॥ ೧೧ ॥

ಸಂಜಯ– ಯುವರಾಜನೂ, ಪೌರವನಾದ ವೃದ್ಧಕ್ಷತ್ರನೂ, ಇಷ್ವಸ್ತ್ರವಿಧಿಯನ್ನು ತಿಳಿದ ಮಾಲವದೇಶದ ಸುದರ್ಶನನೂ ಹತರಾಗುತ್ತಿರಲು ಧೃಷ್ಟದ್ಯುಮ್ನನೂ, ಸಾತ್ಯಕಿಯೂ ಮತ್ತು ಭೀಮಸೇನನು ಪರಾಜಿತರಾಗುತ್ತಿರಲು ಯುಧಿಷ್ಠಿರನ ಆ ವಾಕ್ಯಗಳಿಂದ ಅರ್ಜುನನು ಮರ್ಮಗಳಲ್ಲಿ ಭೇದಿಸಲ್ಪಟ್ಟು ಪಾಂಡವರೊಳಗೆ ಅಭಿಪ್ರಾಯಭೇದವುಂಟಾಗಿರಲು, ಎಲೈ ಪ್ರಭುವೇ, ಹಿಂದೆ ಅನುಭವಿಸಿದ ದುಃಖಗಳನ್ನು ಸ್ಮರಿಸಿ, ಅರ್ಜುನನಿಗೆ ಹಿಂದೆಂದೂ ಬರದಿದ್ದ ದುಃಖವೂ ಮತ್ತು ಅದರಿಂದ ಕೋಪವೂ ಉಂಟಾಯಿತು.

ತಸ್ಮಾದನರ್ಹಮಶ್ಲೀಲಮಪ್ರಿಯಂ ದ್ರೌಣಿಮುಕ್ತವಾನ್ ।
ಮಾನ್ಯಮಾಚಾರ್ಯತನಯಂ ರೂಕ್ಷಂ ಕಾಪುರುಷೋ ಯಥಾ ॥ ೧೨ ॥

ಆದ್ದರಿಂದ ಗೌರವಕ್ಕೆ ಯೋಗ್ಯರಾದ ಆಚಾರ್ಯಪುತ್ರರಾದ ಅಶ್ವತ್ಥಾಮರನ್ನು ಕುರಿತು ಕೆಟ್ಟ ಮನುಷ್ಯನಂತೆ, ಅಯೋಗ್ಯವಾದ, ಅಶ್ಲೀಲವಾದ, ಅಪ್ರಿಯವಾದ, ಉಗ್ರವಾದ ಮಾತುಗಳನ್ನು ಆಡಿದನು.

ಏವಮುಕ್ತಃ ಶ್ವಸನ್ ಕ್ರೋಧಾನ್ಮಹೇಷ್ವಾಸತಮೋ ನೃಪ ।
ಪಾರ್ಥೇನ ಪರುಷಂ ವಾಕ್ಯಂ ಸರ್ವಮರ್ಮಘ್ನಯಾ ಗಿರಾ ।
ದ್ರೌಣಿಶ್ಚುಕೋಪ ಪಾರ್ಥಾಯ ಕೃಷ್ಣಾಯ ಚ ವಿಶೇಷತಃ ॥ ೧೩ ॥

ಎಲೈ ರಾಜನೇ, ಅರ್ಜುನನಿಂದ ಹೀಗೆ ಸರ್ವಮರ್ಮಭೇದಕವಾದ ಮಾತುಗಳಿಂದ ಉಗ್ರವಾಗಿ ಹೇಳಲ್ಪಟ್ಟ (ಚುಚ್ಚಲ್ಪಟ್ಟ), ಮಹಾಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಅಶ್ವತ್ಥಾಮರು ಬಹಳ ಕ್ರೋಧವನ್ನು ಹೊಂದಿ, ಕೃಷ್ಣಾರ್ಜುನರ ಮೇಲೆ ವಿಶೇಷವಾದ ಕ್ರೋಧವನ್ನು ಹೊಂದಿದರು.

ಸ ತು ಯತ್ತೋ ರಥೇ ಸ್ಥಿತ್ವಾ ವಾರ್ಯುಪಸ್ಪೃಶ್ಯ ವೀರ್ಯವಾನ್ ।
ದೇವೈರಪಿ ಸುದುರ್ಧರ್ಷಮಸ್ತ್ರಮಾಗ್ನೇಯಮಾದದೇ ।
ದೃಶ್ಯಾದೃಶ್ಯಾನರಿಗಣಾನುದ್ದಿಶ್ಯಾಚಾರ್ಯನಂದನಃ ॥ ೧೪ ॥

ಪರಾಕ್ರಮಶಾಲಿಗಳಾದ ಆಚಾರ್ಯಪುತ್ರರಾದ ಅಶ್ವತ್ಥಾಮರು ಅವಧಾನವನ್ನು ಹೊಂದಿ, ರಥದಲ್ಲಿಯೇ ಇದ್ದು, ಜಲಸ್ಪರ್ಶ ಮಾಡಿ ಶುದ್ಧರಾಗಿ, ದೇವತೆಗಳೂ ತಡೆಯಲು ಅಸಾಧ್ಯವಾದ ಆಗ್ನೇಯಾಸ್ತ್ರವನ್ನು ತೆಗೆದುಕೊಂಡು, ದೃಶ್ಯರಾದ ಮತ್ತು ಅದೃಶ್ಯರಾದ ಶತ್ರುಸಮೂಹವನ್ನು ಉದ್ದೇಶಿಸಿ ಅದನ್ನು ಪ್ರಯೋಗಿಸಿದರು.

ಸೋಽಭಿಮಂತ್ರ್ಯ ಶರಂ ದೀಪ್ತಂ ವಿಧೂಮಮಿವ ಪಾವಕಮ್ ।
ಸರ್ವತಃ ಕ್ರೋಧಮಾವಿಶ್ಯ ಚಿಕ್ಷೇಪ ಪರವೀರಹಾ ॥ ೧೫ ॥

ಪರವೀರಘಾತಕರಾದ ಅವರು ಧೂಮರಹಿತವಾದ ಅಗ್ನಿಯಂತಿದ್ದ ಪ್ರಕಾಶಮಾನವಾದ ಒಂದು ಬಾಣವನ್ನು ತೆಗೆದುಕೊಂಡು ಅಭಿಮಂತ್ರಿಸಿ ಎಲ್ಲ ಕಡೆಯಲ್ಲಿಯೂ ಕ್ರೋಧವನ್ನು ತೆಗೆದುಕೊಂಡು ಅದನ್ನು ಪ್ರಯೋಗಿಸಿದರು.

ತತಸ್ತುಮುಲಮಾಕಾಶೇ ಶರವರ್ಷಮಜಾಯತ ।
ವವುಶ್ಚ ಪರುಷಾ ವಾತಾಃ ಸೂರ್ಯೋ ನೈವ ತತಾಪ ಚ ॥ ೧೬ ॥

ಆಗ ಆಕಾಶದಲ್ಲಿ ತೀವ್ರವಾದ ಬಾಣಗಳ ಮಳೆಯುಂಟಾಯಿತು. ವಾಯುಗಳು ಉಗ್ರವಾಗಿ ಬೀಸಿದವು. ಸೂರ್ಯನು ತಾಪರಹಿತನಾದನು.

ಚುಕ್ರುಶುರ್ದಾನವಾಶ್ಚಾಪಿ ದಿಕ್ಷು ಸರ್ವಾಸು ಭೈರವಮ್ ।
ರುಧಿರಂ ಚಾಪಿ ವರ್ಷಂತೋ ವಿನೇದುಸ್ತೋಯದಾಂಬರೇ ॥ ೧೭ ॥

ದಾನವರು ಎಲ್ಲ ದಿಕ್ಕುಗಳಲ್ಲಿಯೂ ಭೈರವನಾದವನ್ನು ಮಾಡಿದರು. ಮೋಡಗಳು ರಕ್ತದ ಮಳೆಯನ್ನು ಸುರಿಸುತ್ತಾ ಆಕಾಶದಲ್ಲಿ ಗುಡುಗಿದವು.

ಪಕ್ಷಿಣಃ ಪಶವೋ ಗಾವೋ ಮುನಯಶ್ಚಾಪಿ ಸುವ್ರತಾಃ ।
ಪರಮಂ ಪ್ರಯತಾತ್ಮಾನೋ ನ ಶಾಂತಿಮುಪಲೇಭಿರೇ ॥ ೧೮ ॥

ಪಕ್ಷಿಗಳು, ಪಶುಗಳು, ಗೋವುಗಳು, ಒಳ್ಳೆಯ ವ್ರತಧಾರಿಗಳಾದ ಪರಮ ಮನಸ್ಸಾಮ್ಯವನ್ನು ಹೊಂದಿದ ಮುನಿಗಳೂ ಸಹ ಶಾಂತಿಯನ್ನು ಹೊಂದಲಿಲ್ಲ.

ಭ್ರಾಂತಸರ್ವಮಹಾಭೂತಮಾವರ್ಜಿತದಿವಾಕರಮ್ ।
ತ್ರೈಲೋಕ್ಯಮಭಿಸಂತಪ್ತಂ ಜ್ವರಾವಿಷ್ಟಮಿವಾತುರಮ್ ॥ ೧೯ ॥

ಎಲ್ಲ ಮಹಾಭೂತಗಳು ಭ್ರಾಂತರಾಗಿ ಸೂರ್ಯನನ್ನು ಕಾಣದೆ ಮೂರುಲೋಕಗಳು ಜ್ವರದಿಂದ ಪೀಡಿತವಾದ ರೋಗಿಯಂತೆ ಸಂತಪ್ತವಾದವು.

ಶರತೇಜೋಽಭಿಸಂತಪ್ತಾ ನಾಗಾ ಭೂಮಿಶಯಾಸ್ತಥಾ ।
ನಿಃಶ್ವಸಂತಃ ಸಮುತ್ಪೇತುಸ್ತೇಜೋ ಘೋರಂ ಮುಮುಕ್ಷವಃ ॥ ೨೦ ॥

ಬಾಣದ ತೇಜಸ್ಸಿನಿಂದ ತಪ್ತವಾದ ಭೂಮಿಯಲ್ಲಿ ಮಲಗಿದ ಸರ್ಪಗಳು ನಿಟ್ಟುಸಿರನ್ನು ಬಿಡುತ್ತಾ ಘೋರವಾದ ತೇಜಸ್ಸನ್ನು ಉಗುಳುತ್ತಾ ಮೇಲೆ ಹಾರಿದವು.

ಜಲಜಾನಿ ಚ ಸತ್ತ್ವಾನಿ ದಹ್ಯಮಾನಾನಿ ಭಾರತ ।
ನ ಶಾಂತಿಮುಪಜಗ್ಮುರ್ಹಿ ತಪ್ಯಮಾನೈರ್ಜಲಾಶಯೈಃ ॥ ೨೧ ॥

ಎಲೈ ಭಾರತನೇ, ಜಲಾಶಯಗಳು ತಪ್ತವಾಗುತ್ತಿರಲು ನೀರಿನಲ್ಲಿ ಬೆಳೆಯುವ ಸಸ್ಯಗಳು ದಹಿಸಲ್ಪಟ್ಟು ಶಾಂತಿಯನ್ನು ಹೊಂದಲಿಲ್ಲ.

ದಿಶಃ ಖಂ ಪ್ರದಿಶಶ್ಚೈವ ಭುವಂ ಚ ಶರವೃಷ್ಟಯಃ ।
ಉಚ್ಚಾವಚಾ ನಿಪೇತುರ್ವೈ ಗರುಡಾನಿಲರಂಹಸಃ ॥ ೨೨ ॥

ಎಲ್ಲ ದಿಕ್ಕುಗಳಲ್ಲಿಯೂ, ಭೂಮಿ-ಆಕಾಶಗಳಲ್ಲಿಯೂ, ಗರುಡಾನಿಲ ಮೇಘಗಳುಳ್ಳ ಶ್ರೇಷ್ಠವಾದ ಮತ್ತು ಕನಿಷ್ಠವಾದ ಬಾಣಗಳ ಮಳೆಗಳು ಉಂಟಾದವು.

ತೈಃ ಶರೈರ್ದ್ರೋಣಪುತ್ರಸ್ಯ ವಜ್ರವೇಗಸಮಾಹಿತೈಃ ।
ಪ್ರದಗ್ಧಾಃ ಶತ್ರವಃ ಪೇತುರಗ್ನಿದಗ್ಧಾ ಇವ ದ್ರುಮಾಃ ॥ ೨೩ ॥

ದ್ರೋಣಪುತ್ರರ ವಜ್ರವೇಗಕ್ಕೆ ಸಮವಾದ ಅಹಿತವಾದ ಆ ಬಾಣಗಳಿಂದ ದಹಿಸಲ್ಪಟ್ಟ ಶತ್ರುಗಳು ಅಗ್ನಿದಗ್ಧವಾದ ವೃಕ್ಷಗಳಂತೆ ಬಿದ್ದರು.

ದಹ್ಯಮಾನಾ ಮಹಾನಾಗಾಃ ಪೇತುರುರ್ವ್ಯಾಂ ಸಮಂತತಃ ।
ನದಂತೋ ಭೈರವಾನ್ ನಾದಾನ್ ಜಲದೋಪಮನಿಸ್ವನಾನ್ ॥ ೨೪ ॥

ಮಹಾಗಜಗಳು ದಹಿಸಲ್ಪಟ್ಟು ಮೇಘಘೋಷದಂತೆ ಭೈರವವಾದ ನಾದಗಳನ್ನು ಮಾಡುತ್ತಾ ಭೂಮಿಯಲ್ಲಿ ಎಲ್ಲ ಕಡೆಗಳಲ್ಲಿಯೂ ಬಿದ್ದವು.

ಅಪರೇ ಪ್ರದ್ರುತಾಸ್ತತ್ರ ದಹ್ಯಮಾನಾ ಮಹಾಗಜಾಃ ।
ತ್ರೇಸುಸ್ತಥಾಪರೇ ಘೋರೇ ವನೇ ದಾವಾಗ್ನಿಸಂವೃತಾಃ ॥ ೨೫ ॥

ಇನ್ನು ಕೆಲವು ಮಹಾಗಜಗಳು ದಾಹಕ್ಕೆ ಒಳಗಾಗಿ ಅಲ್ಲಿಂದ ಓಡಿಹೋದವು. ಘೋರವಾದ ವನವು ದಾವಾಗ್ನಿಯಿಂದ ಸಂವೃತವಾದಾಗ ಇನ್ನು ಕೆಲವು ಗಜಗಳು ಹೆದರಿದವು.

ದ್ರುಮಾಣಾಂ ಶಿಖಿರಾಣೀವ ದಾವದಗ್ಧಾನಿ ಮಾರಿಷ ।
ಅಶ್ವವೃಂದಾನ್ಯದೃಶ್ಯಂತ ರಥವೃಂದಾನಿ ಚಾಭಿಭೋ ।
ಅಪತಂತ ರಥೌಘಾಶ್ಚ ತತ್ರ ತತ್ರ ಸಹಸ್ರಶಃ ॥ ೨೬ ॥

ಎಲೈ ಶ್ರೇಷ್ಠನೇ, ಎಲೈ ಶತ್ರುಪರಿಭಾವಕನೇ, ದಾವದಗ್ಧವಾದ ವೃಕ್ಷದ ಶಿಖರದಂತೆ ಅಲ್ಲಲ್ಲಿ ಬಿದ್ದ ಅಶ್ವವೃಂದಗಳು, ರಥವೃಂದಗಳು ಕಂಡುಬಂದವು. ರಥಸಮೂಹಗಳೂ ಸಹ ಅಲ್ಲಲ್ಲಿ ಸಹಸ್ರಸಂಖ್ಯೆಯಲ್ಲಿ ಬಿದ್ದವು.

ತತ್ ಸೈನ್ಯಂ ಭಗವಾನಗ್ನಿರ್ದದಾಹ ಯುಧಿ ಭಾರತ ।
ಯುಗಾಂತೇ ಸರ್ವಭೂತಾನಿ ಸಂವರ್ತಕ ಇವಾನಲಃ ॥ ೨೭ ॥

ಎಲೈ ಭಾರತನೇ, ಯುಗಾಂತದಲ್ಲಿ ಸಂವರ್ತಕಾಗ್ನಿಯು ಎಲ್ಲ ಭೂತಗಳನ್ನೂ ಸುಡುವಂತೆ ಕ್ರುದ್ಧನಾದ ಅಗ್ನಿಯು ಯುದ್ಧದಲ್ಲಿ ಪಾಂಡವ ಸೈನ್ಯವನ್ನು ದಹಿಸಿದನು.

ದೃಷ್ಟ್ವಾ ತು ಪಾಂಡವೀಂ ಸೇನಾಂ ದಹ್ಯಮಾನಾಂ ಮಹಾಹವೇ ।
ಪ್ರಹೃಷ್ಟಾಸ್ತಾವಕಾ ರಾಜನ್ ಸಿಂಹನಾದಾನ್ ವಿನೇದಿರೇ ॥ ೨೮ ॥

ಎಲೈ ರಾಜನೇ, ಆ ಮಹಾಯುದ್ಧದಲ್ಲಿ ಪಾಂಡವಸೇನೆಯು ದಹಿಸಲ್ಪಡುತ್ತಿರುವುದನ್ನು ನೋಡಿ ನಿನ್ನವರು ಸಂತೋಷಗೊಂಡು ಸಿಂಹನಾದಗಳನ್ನು ಮಾಡಿದರು.

ತತಸ್ತೂರ್ಯಸಹಸ್ರಾಣಿ ನಾನಾಲಿಂಗಾನಿ ಭಾರತ ।
ತೂರ್ಣಮಾಜಘ್ನಿರೇ ಹೃಷ್ಟಾಸ್ತಾವಕಾ ಜಿತಕಾಶಿನಃ ॥ ೨೯ ॥

ಆಗ ಜಯವನ್ನು ಪಡೆದ ನಿನ್ನವರು ಸಂತುಷ್ಟರಾಗಿ, ಎಲೈ ಭಾರತನೇ, ನಾನಾ ವಿಧವಾದ ಸಹಸ್ರಾರು ತೂರ್ಯಗಳನ್ನು ಶೀಘ್ರವಾಗಿ ಬಾರಿಸಿದರು.

ಕೃತ್ತಾ ಹ್ಯಕ್ಷೌಹಿಣೀ ರಾಜನ್ ಸವ್ಯಸಾಚೀ ಚ ಪಾಂಡವಃ ।
ತಮಸಾ ಸಂವೃತೇ ಲೋಕೇ ನಾದೃಶ್ಯತ ಮಹಾಹವೇ ॥ ೩೦ ॥

ಎಲೈ ರಾಜನೇ, ಲೋಕವೆಲ್ಲವೂ ಕತ್ತಲಿನಿಂದ ಆವೃತವಾಗಿರಲು ಆ ದೊಡ್ಡ ಯುದ್ಧದಲ್ಲಿ ಸಮಗ್ರವಾದ ಅಕ್ಷೌಹಿಣೀ ಸೈನ್ಯವೂ ಪಾಂಡವನಾದ ಸವ್ಯಸಾಚಿಯೂ ಕಾಣಲಿಲ್ಲ.

ನೈವ ನಸ್ತಾದೃಶಂ ರಾಜನ್ ದೃಷ್ಟಪೂರ್ವಂ ನ ಚ ಶ್ರುತಮ್ ।
ಯಾದೃಶಂ ದ್ರೋಣಪುತ್ರೇಣ ಸೃಷ್ಟಮಸ್ತ್ರಮಮರ್ಷಿಣಾ ॥ ೩೧ ॥

ಎಲೈ ರಾಜನೇ, ದ್ರೋಣಪುತ್ರರಾದ ಅಶ್ವತ್ಥಾಮರು ಕೋಪದಿಂದ ಎಂತಹ ಅಸ್ತ್ರವನ್ನು ಸೃಷ್ಟಿಮಾಡಿದರೋ ಅಂತಹ ಅಸ್ತ್ರವನ್ನು ನಾವು ಹಿಂದೆ ನೋಡಿಯೂ ಇರಲಿಲ್ಲ, ಕೇಳಿಯೂ ಇರಲಿಲ್ಲ.

ಅರ್ಜುನಸ್ತು ಮಹಾರಾಜ ಬ್ರಾಹ್ಮಮಸ್ತ್ರಮುದ್ಧೆರಯತ್ ।
ಸರ್ವಾಸ್ತ್ರಪ್ರತಿಘಾತಾಯ ವಿಹಿತಂ ಪದ್ಮಯೋನಿನಾ ॥ ೩೨ ॥

ಎಲೈ ಮಹಾರಾಜನೇ, ಅರ್ಜುನನಾದರೋ ಸರ್ವಾಸ್ತ್ರಗಳನ್ನು ಪ್ರತಿಘಾತ ಮಾಡಲು ಬ್ರಹ್ಮದೇವರು ವಿಧಿಸಿದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು.

ತತೋ ಮುಹೂರ್ತಾದಿವ ತತ್ ತಮೋ ವ್ಯಪಶಶಾಮ ಹ ।
ಪ್ರವವೌ ಚಾನಿಲಃ ಶೀತೋ ದಿಶಶ್ಚ ವಿಮಲಾಽಭವನ್ ॥ ೩೩ ॥

ಆಗ ಒಂದುಮುಹೂರ್ತದಲ್ಲಿ ಆ ಕತ್ತಲೆಯು ನಾಶವನ್ನು ಹೊಂದಿತು, ತಂಪಾದ ಗಾಳಿಯು ಬೀಸಿತು, ದಿಕ್ಕುಗಳು ಪ್ರಸನ್ನವಾದವು.

ತತ್ರಾದ್ಭುತಮಪಶ್ಯಾಮ ಕೃತ್ಸ್ನಮಕ್ಷೌಹಿಣೀಂ ಹತಾಮ್ ।
ಅನಭಿಜ್ಞೇಯರೂಪಾಂ ಚ ಪ್ರದಗ್ಧಾಮಸ್ತ್ರಮಾಯಯಾ ॥ ೩೪ ॥

ಒಂದು ಅಕ್ಷೌಹಿಣೀ ಸೈನ್ಯವು ಗುರುತಿಲ್ಲದಂತೆ ಅಶ್ವತ್ಥಾಮರ ಅಸ್ತ್ರತೇಜಸ್ಸಿನಿಂದ ದಹಿಸಲ್ಪಟ್ಟ ಆ ಅದ್ಭುತವನ್ನು ನೋಡಿದೆವು.

ತತೋ ವೀರೌ ಮಹೇಷ್ವಾಸೌ ವಿಮುಕ್ತೌ ಕೇಶವಾರ್ಜುನೌ ।
ಸಹಿತೌ ಸಂಪ್ರದೃಶ್ಯೇತಾಂ ನಭಸೀವ ತಮೋನುದೌ ॥ ೩೫ ॥

ಆಗ ಆಗ್ನೇಯಾಸ್ತ್ರದಿಂದ ವಿಮುಕ್ತರಾದ ವೀರರಾದ ಮಹಾಧನುರ್ಧಾರಿಗಳಾದ ಕೃಷ್ಣಾರ್ಜುನರು ಆಕಾಶದಲ್ಲಿ ತಮಸ್ಸನ್ನು ವಿನಾಶಮಾಡುವ ಸೂರ್ಯ-ಚಂದ್ರರಂತೆ ಜೊತೆಯಲ್ಲಿ ಕಂಡುಬಂದರು.

ಸಪತಾಕಧ್ವಜಹಯಃ ಸಾನುಕರ್ಷವರಾಯುಧಃ ।
ಪ್ರಬಭೌ ಸ ರಥೋ ಮುಕ್ತಸ್ತಾವಕಾನಾಂ ಭಯಂಕರಃ ॥ ೩೬ ॥

ಪತಾಕೆ-ಹಯ-ಧ್ವಜಗಳಿಂದ ಕೂಡಿದ, ಅನುಕರ್ಷ ಮತ್ತು ಶ್ರೇಷ್ಠವಾದ ಆಯುಧವನ್ನು ಹೊಂದಿದ ನಿನ್ನವರಿಗೆ ಭಯವನ್ನುಂಟು ಮಾಡುವ ಆ ಅರ್ಜುನನ ರಥವು ಆಗ್ನೇಯಾಸ್ತ್ರದಿಂದ ಮುಕ್ತವಾಗಿ ಶೋಭಿಸಿತು.

ತತಃ ಕಿಲಕಿಲಾಶಬ್ದಃ ಶಂಖಭೇರೀರವೈಃ ಸಹ ।
ಪಾಂಡವಾನಾಂ ಪ್ರಹೃಷ್ಟಾನಾಂ ಕ್ಷಣೇನ ಸಮಜಾಯತ ॥ ೩೭ ॥

ಅನಂತರ ಶಂಖ-ಭೇರಿ ನಾದಗಳಿಂದ ಮಿಶ್ರಿತವಾದ ಕಿಲಕಿಲ ಶಬ್ದವು ಸಂತೋಷಗೊಂಡ ಪಾಂಡವರ ಸೇನೆಯಲ್ಲಿ ಒಂದುಕ್ಷಣದಲ್ಲಿ ಉಂಟಾಯಿತು.

ಹತಾವಿತಿ ತಯೋರಾಸೀತ್ ಸೇನಯೋರುಭಯೋರ್ಮತಿಃ ।
ತರಸಾऽಭ್ಯಾಗತೌ ದೃಷ್ಟ್ವಾ ವಿಶ್ರಾಂತೌ ಕೇಶವಾರ್ಜುನೌ ॥ ೩೮ ॥

ಎರಡು ಸೇನೆಗಳಿಗೂ ಕೃಷ್ಣಾರ್ಜುನರು ಹತರಾದರು ಎಂದೇ ಅಭಿಪ್ರಾಯವಿದ್ದಿತು. ಶೀಘ್ರವಾಗಿ ಎದುರಿಗೆ ಬಂದ ವಿಶ್ರಾಂತರಾದ ಕೃಷ್ಣಾರ್ಜುನರನ್ನು ನೋಡಿ (ಪಾಂಡವರ ಸೇನೆಯು ಹರ್ಷಗೊಂಡಿತು).

ತಾವಕ್ಷತೌ ಪ್ರಮುದಿತೌ ದಧ್ಮತುರ್ವಾರಿಜೋತ್ತಮೌ ।
ದೃಷ್ಟ್ವಾ ಪ್ರಮುದಿತಾನ್ ಪಾರ್ಥಾಂಸ್ತ್ವದೀಯಾ ವ್ಯಥಿತಾऽಭವನ್ ॥

ಅವರಿಬ್ಬರೂ (ಕೃಷ್ಣಾರ್ಜುನರು) ಗಾಯಗೊಳ್ಳದೆ ಸಂತೋಷದಿಂದ ಕೂಡಿದವರಾಗಿ ತಮ್ಮ ಶ್ರೇಷ್ಠವಾದ ಶಂಖವನ್ನು ಊದಿದರು. ಪಾಂಡವರು ಸಂತೋಷದಿಂದ ಕೂಡಿರುವುದನ್ನು ನೋಡಿ ನಿನ್ನವರು ವ್ಯಥೆಪಟ್ಟರು.

ವಿಮುಕ್ತೌ ಚ ಮಹಾತ್ಮಾನೌ ದೃಷ್ಟ್ವಾ ದ್ರೌಣಿಃ ಸುದುಃಖಿತಃ ।
ಮುಹೂರ್ತಂ ಚಿಂತಯಾಮಾಸ ಕಿಂ ತ್ವೇತದಿತಿ ಮಾರಿಷ ॥ ೪೦ ॥

ಎಲೈ ಶ್ರೇಷ್ಠನೇ, ಆಗ್ನೇಯಾಸ್ತ್ರದಿಂದ ವಿಮುಕ್ತರಾದ, ಮಹಾತ್ಮರಾದ ಕೃಷ್ಣಾರ್ಜುನರನ್ನು ನೋಡಿ ಅಶ್ವತ್ಥಾಮರು ಬಹಳ ದುಃಖಗೊಂಡು ಇದೇನು ಎಂದು ಒಂದು ಮುಹೂರ್ತದ ಕಾಲ ಚಿಂತಿಸಿದರು.

ಚಿಂತಯಿತ್ವಾ ತು ರಾಜೇಂದ್ರ ಧ್ಯಾನಶೋಕಪರಾಯಣಃ ।
ನಿಃಶ್ವಸನ್ ದೀರ್ಘಮುಷ್ಣಂ ಚ ವಿಮನಾಶ್ಚಾಭವತ್ ತದಾ ॥ ೪೧ ॥

ಎಲೈ ರಾಜೇಂದ್ರನೇ, ಧ್ಯಾನ-ಶೋಕಪರಾಯಣರಾದ ಅವರು ಒಂದು ಮುಹೂರ್ತದ ಕಾಲ ಚಿಂತಿಸಿ, ದೀರ್ಘವಾದ ಉಷ್ಣವಾದ ನಿಟ್ಟುಸಿರನ್ನು ಬಿಡುತ್ತಾ ಬೇಸರಗೊಂಡರು.

ತತೋ ದ್ರೌಣಿರ್ಧನುರ್ಮ್ಯಸ್ಯ ರಥಾತ್ ಪ್ರಸ್ಕಂದ್ಯ ವೇಗಿತಃ ।
ಧಿಗ್ಧಿಕ್ಪರ್ವಮಿದಂ ಮಿಥ್ಯೇತ್ಯುಕ್ತ್ವಾ ಸಂಪ್ರಾದ್ರವದ್ ರಣಾತ್ ॥ ೪೨ ॥

ಆಗ ಅಶ್ವತ್ಥಾಮರು ಧನುಸ್ಸನ್ನು ಬಿಟ್ಟು ಶೀಘ್ರವಾಗಿ ರಥದಿಂದ ಕೆಳಗೆ ಹಾರಿ 'ಧಿಕ್ಕಾರ, ಧಿಕ್ಕಾರ, ಇವೆಲ್ಲವೂ ಮಿಥ್ಯಾ' ಎಂದು ಹೇಳುತ್ತಾ ರಣರಂಗದಿಂದ ಓಡಿದರು.

ತತಃ ಸ್ನಿಗ್ಧಾಂಬುಧಾಭಾಸಂ ವೇದವ್ಯಾಸಮಕಲ್ಮಷಮ್ ।
ಆವಾಸಂ ಚ ಸರಸ್ವತ್ಯಾಃ ಸ ವೈ ವ್ಯಾಸಂ ದದರ್ಶ ಹ ॥ ೪೩ ॥

ಆಗ ಅವರು ಸ್ನಿಗ್ಧಾಂಬುಧಕಾಂತಿಯುಳ್ಳವರೂ, ದೋಷರಹಿತರೂ, ಸರಸ್ವತೀ ನದಿಯ ತೀರದಲ್ಲಿ ವಾಸಿಸುವವರೂ ಆದ ವೇದವ್ಯಾಸರನ್ನು ನೋಡಿದರು.

ತಂ ದ್ರೌಣಿರಗ್ರತೋ ದೃಷ್ಟ್ವಾ ಸ್ಥಿತಂ ಕುರುಕುಲೋದ್ವಹ ।
ಸನ್ನಕಂಠೋಽಬ್ರವೀದ್ ವಾಕ್ಯಮಭಿವಾದ್ಯ ಸುದೀನವತ್ ॥ ೪೪ ॥

ಎಲೈ ಕುರುಕುಲೋದ್ವಹನೇ, ಅಶ್ವತ್ಥಾಮರು ತಮ್ಮ ಎದುರಿನಲ್ಲಿ ನಿಂತ ವ್ಯಾಸರನ್ನು ನೋಡಿ ನಮಸ್ಕರಿಸಿ, ದೈನ್ಯದಿಂದ ಕೂಡಿದವರಾಗಿ ಉಡುಗಿಹೋದ ಕಂಠದಿಂದ ಮಾತನಾಡಿದರು.

ಭೋ ಭೋ ಮಾಯಾ ಯದೃಚ್ಛಾ ವಾ ನ ವಿದ್ಮಃ ಕಿಮಿದಂ ಭವೇತ್ ।
ಅಸ್ತ್ರಂ ತ್ವಿದಂ ಕಥಂ ಮಿಥ್ಯಾ ಮಮ ಕಶ್ಚ ವ್ಯತಿಕ್ರಮಃ ॥ ೪೫ ॥

ಪ್ರಭುವೇ, ಇದೇನು ಮಾಯೆಯೋ, ಭಗವದಿಚ್ಛೆಯೋ, ಏನೆಂದು ನಾನು ತಿಳಿಯುತ್ತಿಲ್ಲ. ಈ ನನ್ನ ಅಸ್ತ್ರವು ಹೇಗೆ ಸುಳ್ಳಾಯಿತು? ನಾನು ಯಾವ ಅಪಚಾರವನ್ನು ಮಾಡಿದೆ?

ಅಧರೋತ್ತರಮೇತದ್ವಾ ಲೋಕಾನಾಂ ವಾ ಪರಾಭವಃ ।
ಯದಿಮೌ ಜೀವತಃ ಕೃಷ್ಣೌ ಕಾಲೋ ಹಿ ದುರತಿಕ್ರಮಃ ॥ ೪೬ ॥

ಇದೇನು ಎಲ್ಲವೂ ತಲೆಕೆಳಗಾಗಿದೆ? ಲೋಕಗಳ ಪರಾಭವವಾಗಲೀ, ಬದುಕಿ ಉಳಿದಿರುವ ಕೃಷ್ಣಾರ್ಜುನರಾಗಲೀ (ಎಲ್ಲವೂ ತಲೆಕೆಳಗಾಗಿದೆ). ಕಾಲವನ್ನು ಯಾರೂ ಮೀರಲಾರರಷ್ಟೆ?

ನಾಸುರಾಮರಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ನ ಸರ್ಪಯಕ್ಷಪತಗಾ ನ ಮನುಷ್ಯಾಃ ಕಥಂಚನ ॥ ೪೭ ॥

ಉತ್ಸಹಂತೇಽನ್ಯಥಾಕರ್ತುಮೇತದಸ್ತ್ರಂ ಮಯೇರಿತಮ್ ।
ತದಿದಂ ಕೇವಲಂ ಹತ್ವಾ ಯುಕ್ತಾಮಕ್ಷೌಹಿಣೀಂ ಜ್ವಲತ್ ॥ ೪೮ ॥

ಕೇನೇಮೌ ಮರ್ತ್ಯಧರ್ಮಾಣೌ ನಾವಧೀತ್ ಕೇಶವಾರ್ಜುನೌ ।
ಏತತ್ ಪ್ರಬ್ರೂಹಿ ಭಗವನ್ ಮಯಾ ಪೃಷ್ಟೋ ಯಥಾತಥಮ್ ॥೪೯॥

ನಾನು ಪ್ರಯೋಗಿಸಿದ ಈ ಅಸ್ತ್ರವನ್ನು ಅಸುರರಾಗಲೀ, ದೇವತೆಗಳಾಗಲೀ, ಗಂಧರ್ವರಾಗಲೀ, ಪಿಶಾಚರಾಗಲೀ, ರಾಕ್ಷಸರಾಗಲೀ, ಸರ್ಪ-ಯಕ್ಷ-ಪತಗಗಳಾಗಲೀ, ಮನುಷ್ಯರಾಗಲೀ ಯಾವ ರೀತಿಯಿಂದಲೂ ವಿಫಲಗೊಳಿಸಲಾರರು. ಅಂತಹ ಈ ಅಸ್ತ್ರವು ಜ್ವಲಿಸುತ್ತಾ ಕೇವಲ ಒಂದು ಅಕ್ಷೌಹಿಣಿಯನ್ನು ಕೊಂದು ಮರ್ತ್ಯಧರ್ಮವನ್ನು ಹೊಂದಿದ ಕೇಶವಾರ್ಜುನರನ್ನು ಏತಕ್ಕೆ ಕೊಲ್ಲಲಿಲ್ಲ? ಎಲೈ ಭಗವಂತನೇ, ಸತ್ಯಾಂಶವನ್ನು ಕೇಳುತ್ತಿರುವ ನನಗೆ ಈ ಪ್ರಶ್ನೆಗೆ ಉತ್ತರವನ್ನು ಹೇಳಿ (ಎಂದು ಕೇಳಿದರು).

ವ್ಯಾಸಃ

ಮಹಾಂತಮೇತಮರ್ಥಂ ಮಾಂ ಯಂ ತ್ವಂ ಪೃಚ್ಛಸಿ ವಿಸ್ಮಯಾತ್ ।
ತತ್ ಪ್ರವಕ್ಷ್ಯಾಮಿ ತೇ ಸರ್ವಂ ಸಮಾಧಾಯ ಮನಃ ಶೃಣು ॥ ೫೦ ॥

ವ್ಯಾಸರು– ನೀನು ಆಶ್ಚರ್ಯಚಕಿತನಾಗಿ ಈ ದೊಡ್ಡ ವಿಷಯವನ್ನು ಕುರಿತು ಕೇಳುತ್ತಿದ್ದೀಯಷ್ಟೆ? ನಾನದೆಲ್ಲವನ್ನೂ ಹೇಳುವೆನು. ಮನಸ್ಸಮಾಧಾನದಿಂದ ಕೇಳು.

ಯೋಽಸೌ ನಾರಾಯಣೋ ನಾಮ ಪೂರ್ವೇಷಾಮಪಿ ಪೂರ್ವಜಃ ।
ಅಜಾಯತ ಚ ಕಾರ್ಯಾರ್ಥಂ ಪುತ್ರೋ ಧರ್ಮಸ್ಯ ವಿಶ್ವಕೃತ್ ॥ ೫೧ ॥

ಪೂರ್ವಜರಿಗೂ ಪೂರ್ವಜನಾದ ವಿಶ್ವಕರ್ತೃವಾದ ಈ ನಾರಾಯಣನು ದೇವತಾ ಕಾರ್ಯವನ್ನು ಉದ್ದೇಶಿಸಿ ಯಮದೇವನ ಪುತ್ರನಾಗಿ ಅವತರಿಸಿದನು.

ಸ ತಪಸ್ತೀವ್ರಮಾತಸ್ಥೇ ಮೈನಾಕಂ ಗಿರಿಮಾಸ್ಥಿತಃ ।
ಊರ್ಧ್ವಬಾಹುರ್ಮಹಾತೇಜಾ ಜ್ವಲನಾದಿತ್ಯಸನ್ನಿಭಃ ॥ ೫೨ ॥

ಮಹಾತೇಜಸ್ವಿಯಾದ, ಜ್ವಲಿಸುವ ಸೂರ್ಯನ ಕಾಂತಿಯನ್ನು ಹೊಂದಿದ ಅವನು ಮೈನಾಕಪರ್ವತಕ್ಕೆ ಹೋಗಿ ಊರ್ಧ್ವಬಾಹುವಾಗಿ ತೀವ್ರವಾದ ತಪಸ್ಸನ್ನು ಮಾಡಿದನು.

ಷಷ್ಟಿಂ ವರ್ಷಸಹಸ್ರಾಣಿ ತಾವಂತ್ಯೇವ ಶತಾನಿ ಚ ।
ಅಶೋಷಯತ್ ತದಾತ್ಮಾನಂ ವಾಯುಭಕ್ಷೋಽಂಬುಜೇಕ್ಷಣಃ ॥ ೫೩ ॥

ಅಂಬುಜೇಕ್ಷಣನಾದ ಅವನು ವಾಯುಭಕ್ಷನಾಗಿ ಅರವತ್ತುಸಾವಿರ ಮತ್ತು ಅರವತ್ತು ನೂರು ವರ್ಷಗಳ ಕಾಲ ದೇಹವನ್ನು ಶೋಷಿಸಿದನು.

ಅಥಾಪರಂ ತಪಸ್ತಪ್ತ್ವಾ ದ್ವಿಸ್ತತೋಽನ್ಯತ್ ಪುನರ್ಮಹತ್ ।
ದ್ಯಾವಾಪೃಥಿವ್ಯೋರ್ವಿವರಂ ತೇಜಸಾ ಸಮಪೂರಯತ್ ॥ ೫೪ ॥

ಅನಂತರ ಪುನಃ ಅದರ ಎರಡರಷ್ಟು ಕಾಲದವರೆಗೆ ತಪಸ್ಸನ್ನು ಮಾಡಿ ತನ್ನ ತೇಜಸ್ಸಿನಿಂದ ಭೂಮಿ ಮತ್ತು ಅಂತರಿಕ್ಷದ ಮಧ್ಯಪ್ರದೇಶವನ್ನು ತುಂಬಿದನು.

ಸ ತೇನ ತಪಸಾ ತಾತ ಬ್ರಹ್ಮಭೂತೋ ಯದಾಭವತ್ ।
ತತೋ ವಿಶ್ವೇಶ್ವರಂ ಯೋನಿಂ ವಿಶ್ವಸ್ಯ ಜಗತಃ ಪತಿಮ್ ॥ ೫೫ ॥

ದದರ್ಶ ಭೃಶದುರ್ದರ್ಶಂ ಸರ್ವದೇವೈರಪೀಶ್ವರಮ್ ।
ಅಣೀಯಸಾಮಣೀಯಾಂಸಂ ಬೃಹದ್ಭ್ಯಶ್ಚ ಬೃಹತ್ತರಮ್ ॥ ೫೬ ॥

ಎಲೈ ಪ್ರೀತಿಪಾತ್ರನೇ, ಆ ತಪಸ್ಸನ್ನು ಅವನು ಪೂರ್ಣಗೊಳಿಸುತ್ತಿರಲು ವಿಶ್ವೇಶ್ವರನೂ, ಜಗದ್ಯೋನಿಯೂ, ಜಗತ್ಪತಿಯೂ, ನೋಡಲು ಕಷ್ಟಸಾಧ್ಯನಾದವನೂ, ಸರ್ವಪ್ರಾಣಿಗಳಿಂದಲೂ ಅಭೀಪ್ಸಿತನಾದವನೂ, ಅಣುಗಳಿಗಿಂತಲೂ ಅಣುವಾದವನೂ, ಮಹತ್ತಿಗಿಂತಲೂ ಮಹತ್ತಾದವನೂ ಆದ ವಿಶ್ವೇಶ್ವರನನ್ನು ನೋಡಿದನು.

ರುದ್ರಮೀಶಾನಮೃಷಭಂ ಚೇತಿತಾನಮಜಂ ಪರಮ್ ।
ಗಚ್ಛತಸ್ತಿಷ್ಠತೋ ವಾಪಿ ಸರ್ವಭೂತಹೃದಿ ಸ್ಥಿತಮ್ ॥ ೫೭ ॥

ದುರ್ವಾರಣಂ ದುರ್ದೃಶಂ ತಿಗ್ಮಮನ್ಯುಂ
ಮಹಾತ್ಮಾನಂ ಸರ್ವಹರಂ ಪ್ರಚೇತಸಮ್ ।

ದಿವ್ಯಂ ಚಾಪಮಿಷುಧೀ ಚಾದದಾನಂ
ಪಿರಣ್ಯವರ್ಮಾಣಮನಂತವೀರ್ಯಮ್ ॥ ೫೮ ॥

ಈಶಾನನೂ, ಶ್ರೇಷ್ಠನೂ, ಧ್ಯಾನರೂಪಿಯೂ, ಅಜನೂ, ಉತ್ತಮನೂ, ನಡೆದರೂ ಅಥವಾ ನಿಂತರೂ ಎಲ್ಲರ ಹೃದಯದಲ್ಲಿಯೂ ಇರುವವನೂ, ನಿವಾರಿಸಲು ಅಸಾಧ್ಯನಾದವನೂ, ತೀಕ್ಷ್ಣವಾದ ಕೋಪವುಳ್ಳವನೂ, ಮಹಾತ್ಮನೂ, ಸರ್ವಸಂಹಾರಕನೂ, ದಿವ್ಯಜ್ಞಾನವನ್ನು ಹೊಂದಿದವನೂ, ದಿವ್ಯವಾದ ಧನುಸ್ಸು ಮತ್ತು ಬತ್ತಳಿಕೆಯನ್ನು ಧರಿಸಿದವನೂ, ಸುವರ್ಣಕವಚವನ್ನು ಧರಿಸಿದವನೂ, ಅನಂತ ಪರಾಕ್ರಮಿಯೂ ಆದ (ರುದ್ರನನ್ನು ನೋಡಿದನು).

ಪಿನಾಕಿನಂ ವಜ್ರಿಣಂ ದೀಪ್ತಶೂಲಂ
ಪರಶ್ವಧಿಂ ಗದಿನಂ ಸ್ವಾಯತಾಸಿಮ್ ।
ಸುಭ್ರುಂ ಜಟಾಮಂಡಲಚಂದ್ರಮೌಳಿಂ
ವ್ಯಾಘ್ರಾಜಿನಂ ಪರಿಘಂ ದಂಡಪಾಣಿಮ್ ॥ ೫೯ ॥

ಶುಭಾಂಗದಂ ನಾಗಯಜ್ಞೋಪವೀತಿಂ
ವಿಶ್ವೈರ್ಗಣೈಃ ಶೋಭಿತಂ ಭೂತಸಂಘೈಃ ।
ಏಕೀಭೂತಂ ತಪಸಾಂ ಸನ್ನಿಧಾನಂ
ವಯೋತಿಗೈಃ ಸುಷ್ಟುತಮಿಷ್ಟವಾಗ್ಭಿಃ ॥ ೬೦ ॥

ಪಿನಾಕವನ್ನೂ, ವಜ್ರವನ್ನೂ, ಜ್ವಲಿಸುವ ಶೂಲವನ್ನೂ, ಪರಶ್ವಧವನ್ನೂ, ಗದೆಯನ್ನೂ, ವಿಪುಲವಾದ ಖಡ್ಗವನ್ನೂ ಹಿಡಿದು, ಒಳ್ಳೆಯ ಹುಬ್ಬುಗಳನ್ನು ಹೊಂದಿ, ಜಟಾಮಂಡಲದಲ್ಲಿ ಚಂದ್ರನನ್ನು ಧರಿಸಿ, ವ್ಯಾಘ್ರಾಜಿನವನ್ನು ಧರಿಸಿ, ಪರಿಘವನ್ನೂ ಮತ್ತು ದಂಡವನ್ನೂ ಹಿಡಿದು, ಶುಭವಾದ ಧ್ವಜಕೀರ್ತಿಯನ್ನೂ, ಸರ್ಪ ಯಜ್ಞೋಪವೀತವನ್ನೂ ಧರಿಸಿ, ಎಲ್ಲ ಭೂತಗಣಗಳಿಂದಲೂ ಶೋಭಿತನಾಗಿ ಒಂದುಗೂಡಿ ಮಹಾವ್ಯದ್ಧರಿಂದ ಇಷ್ಟವಾದ ವೇದವಾಕ್ಯಗಳಿಂದ ಸ್ತೋತ್ರ ಮಾಡಲ್ಪಟ್ಟು ತಪಸ್ಸಿನ ನಿಧಿಯಾಗಿದ್ದ (ರುದ್ರನನ್ನು ನೋಡಿದನು).

ಜಲಂ ದಿವಂ ಖಂ ಕ್ಷಿತಿಂ ಚಂದ್ರಸೂರ್ಯೌ
ತಥಾ ವಾಯ್ವಗ್ನೀ ಪ್ರತಿಮಾನಂ ಜಗಚ್ಚ ।

ನಾಲಂ ದ್ರಷ್ಟುಂ ಯಮಜಂ ಭಿನ್ನವೃತ್ತಾ
ಬ್ರಹ್ಮದ್ವಿಷಶ್ನಮಮೃತಸ್ಯ ಯೋನಿಮ್ ॥ ೬೧ ॥

ಜಲ, ದ್ಯುಲೋಕ, ಆಕಾಶ, ಭೂಮಿ, ಚಂದ್ರ-ಸೂರ್ಯರು ಹಾಗೆ ವಾಯ್ವಗ್ನಿಗಳು ಮತ್ತು ಜಗತ್ತು ಅವನ ಪ್ರತಿಮೆ. ಅಜನಾದ ಬ್ರಹ್ಮದೇವರ ಶಿರಸ್ಸನ್ನು ಕತ್ತರಿಸಿದ, ಮೋಕ್ಷಕಾರಣನಾದ ಅವನನ್ನು ಭಿನ್ನನಡತೆಯುಳ್ಳವರು ನೋಡಲಾರರು.

ಯಂ ಪಶ್ಯಂತಿ ಬ್ರಾಹ್ಮಣಾಃ ಸಾಧುವೃತ್ತಾಃ
ಕ್ಷೀಣೇ ಪಾಪೇ ಮನಸಾ ಯೇ ವಿಶೋಕಾಃ ।
ಸ ತನ್ನಿಷ್ಠಸ್ತಪಸಾ ಧರ್ಮಮೀಡ್ಯಂ
ತದ್ಭಕ್ತ್ಯಾ ವೈ ವಿಶ್ವರೂಪಂ ದದರ್ಶ ॥
ದೃಷ್ಟ್ವಾ ಚೈನಂ ವಾಙ್ಮನೋಬುದ್ಧಿದೇಹೈಃ
ಸಂಹೃಷ್ಟಾತ್ಮಾ ಮುಮುದೇ ದೇವದೇವಮ್ ॥ ೬೨ ॥

ಸಾಧು ನಡತೆಯುಳ್ಳ ಬ್ರಾಹ್ಮಣರು ಪಾಪವು ನಾಶವಾದ ನಂತರ ಶೋಕರಹಿತರಾಗಿ ಯಾವನನ್ನು ನೋಡುತ್ತಾರೆಯೋ, ಅಂತಹ ಜಗದ್ಧಾರಕನಾದ, ಸ್ತುತ್ಯನಾದ, ವಿಶ್ವರೂಪನಾದ ಶಿವನನ್ನು, ಅವನಲ್ಲಿರುವ ಭಕ್ತಿಯಿಂದ ಮತ್ತು ಅವನಲ್ಲಿ ನಿಷ್ಠೆಯುಳ್ಳ ತಪಸ್ಸಿನಿಂದ ನಾರಾಯಣನು ನೋಡಿದನು. ದೇವದೇವನಾದ ಅವನನ್ನು ನೋಡಿ ವಾಙ್ಮನೋಬುದ್ಧಿಗಳಲ್ಲಿ ಸಂತೋಷಗೊಂಡು ಬಹಳ ಸುಖಪಟ್ಟನು.

ಅಕ್ಷಮಾಲಾಪರಿಷ್ಕಿಪ್ತಂ ಜ್ಯೋತಿಷಾಂ ಪರಮಂ ನಿಧಿಮ್ ।
ತತೋ ನಾರಾಯಣೋ ದೃಷ್ಟ್ವಾ ವವಂದೇ ವಿಶ್ವಸಂಭವಮ್ ॥ ೬೩ ॥

ಅನಂತರ ನಾರಾಯಣನು ಅಕ್ಷಮಾಲೆಯನ್ನು ಧರಿಸಿದ, ಜ್ಯೋತಿಸ್ಸುಗಳಿಗೆ ಪರಮನಿಧಿಯಾದ, ವಿಶ್ವಕಾರಣನಾದ ಅವನಿಗೆ ನಮಸ್ಕರಿಸಿದನು.

ವರದಂ ಪೃಥುಚಾರ್ವಂಗ್ಯಾ ಪಾರ್ವತ್ಯಾ ಸಹಿತಂ ಪ್ರಭುಮ್ ।
ಅಜಮೀಶಾನಮವ್ಯಗ್ರಂ ಕಾರಣಾತ್ಮಾನಮಚ್ಯುತಮ್ ॥ ೬೪ ॥

ಅಭಿವಾದ್ಯಾಥ ರುದ್ರಾಯ ಸದ್ಯೋಽಂಧಕನಿಪಾತಿನೇ ।
ಪದ್ಮಾಕ್ಷಸ್ತಂ ವಿರೂಪಾಕ್ಷಮಭಿತುಷ್ಟಾವ ಭಕ್ತಿಮಾನ್ ॥ ೬೫ ॥

ವರದನಾದ, ಸೌಂದರ್ಯಾದಿ ಯುಕ್ತಳಾದ ಪಾರ್ವತಿಯಿಂದ ಸಹಿತನಾದ, ಪ್ರಭುವಾದ, ಅಜನಾದ, ಈಶಾನನಾದ, ಅವ್ಯಗ್ರನಾದ, ಅಚ್ಯುತನಾದ, ಜಗತ್ತಿಗೆ ಕಾರಣನಾದ, ಅಂಧಕಾಸುರ ಸಂಹಾರಕನಾದ, ರುದ್ರನಿಗೆ ನಮಸ್ಕಾರವನ್ನು ಮಾಡಿ, ಪದ್ಮಾಕ್ಷನಾದ ನಾರಾಯಣನು ಭಕ್ತಿಯಿಂದ ವಿರೂಪಾಕ್ಷನನ್ನು ಸ್ತೋತ್ರ ಮಾಡಿದನು.

'ಪ್ರತ್ಯುದ್ಗಮ-ಪ್ರಶ್ರಯಣಾಭಿವಾದನಂ ವಿಧೀಯತೇ ಸಾಧು ಮಿಥಃ ಸುಮಧ್ಯಮೇ ।
ಪ್ರಾಜ್ಞಃ ಪರಸ್ಮೈ ಪುರುಷಾಯ ಚೇತಸಾ ಗುಹಾಶಯಾಯೈವ ನ ದೇಹಮಾನಿನೇ ॥'

ಎಂದು ಶ್ರೀಮದ್ಭಾಗವತದಲ್ಲಿ ಶಿವನೇ ಪಾರ್ವತಿಯನ್ನು ಕುರಿತು ಹೇಳಿರುವುದರಿಂದ, ಇಲ್ಲಿ ಮಹಾಪ್ರಾಜ್ಞನಾದ ನಾರಾಯಣನು ಮಾಡಿರುವ ಸ್ತುತಿಯು ಶಿವಾಂತರ್ಯಾಮಿಯಾದ ತನ್ನದೇ ಸ್ತುತಿ. ಋಷಿರೂಪನಾಗಿ ಅವತಾರ ಮಾಡಿರುವುದರಿಂದಲೂ, ಋಷಿಗಳಂತೆ ನಡೆದುಕೊಳ್ಳಬೇಕಾಗಿರುವುದರಿಂದ ಇಂತಹ ಸ್ತುತಿಯು ಉಂಟಾಗಿದೆ. ಅಲ್ಲದೆ, ಮುಂದಿನ ಶ್ಲೋಕಗಳಲ್ಲಿ ಆದಿಸೃಷ್ಟಿಯು ವರ್ಣಿಸಲ್ಪಡುತ್ತದೆ. ಆದ್ದರಿಂದಲೂ ಇದು ರುದ್ರಾಂತರ್ಗತನಾದ ನಾರಾಯಣನ ಸ್ತುತಿಯೇ. ರುದನು ಸಂಹಾರಕರ್ತೃ ಹೊರತು ಸ್ಥಿತಿಕರ್ತನಲ್ಲ ಎಂಬುದು ಎಲ್ಲರೂ ನಿರ್ವಿವಾದವಾಗಿ ಒಪ್ಪಿಕೊಂಡಿರುವ ವಿಷಯ (ಲಕ್ಷಾಲಂಕಾರ).

ತತ್ತ್ವಂಭೂತಾ ಭೂತಕೃತೋ ವರೇಣ್ಯ
ಗೋಪ್ತಾರೋಽದ್ಯ ಭುವನಂ ಪೂರ್ವದೇವಾಃ ।
ಆವಿಶ್ಯೇಮಾಂ ಧರಣೀಂ ಯೇಽಭ್ಯರಕ್ಷನ್
ಪುರಾ ಪುರಾಣಾಂ ತವ ದೇವ ಸೃಷ್ಟಿಮ್ ॥ ೬೬ ॥

ಎಲೈ ಭಜನೀಯನಾದವನೇ, ಈ ಭೂಮಿಯನ್ನು ರಕ್ಷಿಸುವ ಮೊದಲಿನ ದೇವತೆಗಳು ನಿನ್ನಿಂದ ಜನ್ಮವನ್ನು ಪಡೆದು, ನಿನ್ನಿಂದ ಸೃಷ್ಟವಾದ ಈ ಪ್ರಾಚೀನವಾದ, ಪುರಾತನವಾದ ಭೂಮಿಯನ್ನು ಪ್ರವೇಶಿಸಿ ರಕ್ಷಿಸಿದರು.

ಸುರಾಸುರಾನ್ನಾಗರಕ್ಷಃಪಿಶಾಚಾನ್
ನರಾನ್ ಸುಪರ್ಣಾನಥ ಗಂಧರ್ವಯಕ್ಷಾನ್ ।
ಪೃಥಗ್ವಿಧಾನ್ ಭೂತಸಂಘಾಂಶ್ಚ ಏಶ್ವಾಂ-
ಸ್ತ್ವತ್ತ್ವಂಭೂತಾನ್ ವಿದ್ಮ ಸರ್ವಾಂಸ್ತಥೈವ ॥

ಐಂದ್ರಂ ಯಾಮ್ಯಂ ವಾರುಣಂ ವೈತ್ತಪಾಲ್ಯಂ
ಮೈತ್ರಂ ತಾಷ್ಟ್ರಂ ಕರ್ಮ ಸೌಮ್ಯಂ ಚ ತುಭ್ಯಮ್ ॥ ೬೭ ॥

ದೇವತೆಗಳು, ಅಸುರರು, ನಾಗಗಳು, ರಾಕ್ಷಸರು, ಪಿಶಾಚಿಗಳು, ಮನುಷ್ಯರು, ಪಕ್ಷಿಗಳು, ಗಂಧರ್ವರು, ಯಕ್ಷರು, ವಿಧವಿಧವಾದ ಭೂತಸಂಘಗಳು ಎಲ್ಲವೂ ನಿನ್ನಿಂದಲೇ ಜನಿಸಿವೆ ಎಂದು ನಾವು ತಿಳಿದಿದ್ದೇವೆ. ಇಂದ್ರನ, ಯಮನ, ವರುಣನ, ಕುಬೇರನ, ಮಿತ್ರನ, ತ್ವಷ್ಟ್ರನ, ಚಂದ್ರನ ಎಲ್ಲ ಕರ್ಮಗಳೂ ನಿನ್ನದೇ ಆಗಿವೆ.

ರೂಪಂ ಜ್ಯೋತಿಃ ಶಬ್ದ ಆಕಾಶವಾಯುಃ
ಸ್ಪರ್ಶಃ ಸ್ವಾದ್ಯಂ ಸಲಿಲಂ ಗಂಧ ಉರ್ವೀ ।
ಕಾಮೋ ಬ್ರಹ್ಮಾ ಬ್ರಹ್ಮ ಚ ಬ್ರಾಹ್ಮಣಾಶ್ಚ
ತ್ವತ್ಸಂಭೂತಂ ಸ್ಥಾಸ್ನು ಚರಿಷ್ಣು ಚೇದಮ್ ॥ ೬೮ ॥

ರೂಪ, ಜ್ಯೋತಿಸ್ಸು, ಶಬ್ದ, ಆಕಾಶ, ವಾಯು, ಸ್ಪರ್ಶ, ರಸ, ಜಲ, ಗಂಧ, ಭೂಮಿ, ಮನ್ಮಥ, ಬ್ರಹ್ಮದೇವರು, ವೇದಗಳು, ಬ್ರಾಹ್ಮಣರು ಮತ್ತು ಸ್ಥಾವರ-ಜಂಗಮಾತ್ಮಕವಾದ ಈ ಎಲ ಜಗತ್ತೂ ನಿನ್ನಿಂದ ಜನಿಸಿದೆ.

ಅದ್ಭ್ಯಃ ಸ್ತೋಕಾ ಯಾಂತಿ ಯಥಾ ಪೃಥಕ್ತ್ವಂ
ತಾಭಿಶ್ಚೈಕ್ಯಂ ಸಂಕ್ಷಯೇ ಯಾಂತಿ ಭೂಯಃ ।
ಏವಂ ವಿದ್ವಾನ್ ಪ್ರಭವಂ ಚಾಪ್ಯಯಂ ಚ
ಹಿತ್ವಾ ಭೂತಾನಾಂ ತತ್ರ ಸಾಯುಜ್ಯಮೇತಿ ॥ ೬೯ ॥

ನೀರಿನ ಹನಿಗಳು ನೀರಿನಿಂದ ಬೇರೆಯಾಗಿ ಹೋಗಿ ಪುನಃ ಒಂದಾಗುವಂತೆ ಯಾವ ಜ್ಞಾನಿಯು ನೀನು ಜಗತ್ತಿನ ಉತ್ಪತ್ತಿಗೆ ಮತ್ತು ಸಂಹಾರಕ್ಕೆ ಕಾರಣನೆಂದು ತಿಳಿಯುವನೋ ಅವನು ಭೂತಗಳ ಸಂಬಂಧದಿಂದ ಬಿಡುಗಡೆಯನ್ನು ಹೊಂದಿ, ನಿನ್ನ ಸಾಯುಜ್ಯವನ್ನು ಪಡೆಯುವನು.

ದಿವ್ಯಾವೃತೌ ಮಾನಸೌ ದ್ವೌ ಸುಪರ್ಣಾ-
ವವಾಕ್ಖಾಖಃ ಪಿಪ್ಪಲಃ ಸಪ್ತ ಗೋಪಾಃ ।
ದಶಾಪ್ಯನ್ಯೇ ಯೇ ಪುರಂ ಧಾರಯಂತಿ
ತ್ವಯಾ ಸೃಷ್ಟಾಸ್ತೇ ಹಿ ತೇಭ್ಯಃ ಪರಸ್ತ್ವಮ್ ।

ಭೂತಂ ಭವ್ಯಂ ಭವಿತಾ ಚಾಪ್ಯಧೃಷ್ಯಂ
ತ್ವತ್ಸಂಭೂತಾ ಭುವನಾನೀಹ ವಿಶ್ವಾ ॥ ೭೦ ॥

ಜ್ಞಾನರೂಪವಾದ ಆಕಾಶದಲ್ಲಿ ಸಂಚರಿಸುವ ಜೀವ-ಪರಮಾತ್ಮರೆಂಬಆ ಎರಡು ಪಕ್ಷಿಗಳು, ಮಹದಹಂಕಾರ ಮತ್ತು ಪಂಚಭೂತಗಳೆಂಬ ಮೂಲಕಾರಣಗಳಿಂದ ಕೆಳಮುಖವಾಗಿ ಹಬ್ಬಿದ ಈ ಸಂಸಾರವೆಂಬ ಅಶ್ವತ್ಥವೃಕ್ಷ ಮತ್ತು ಪಂಚತನ್ಮಾತ್ರಗಳು ಮತ್ತು ಅವುಗಳ ಅಭಿಮಾನಿದೇವತೆಗಳು ಇವರೆಲ್ಲರೂ ಈ ಅಶ್ವತ್ಥವನ್ನು ಧರಿಸಿರುವವರು. ಇವರೆಲ್ಲರೂ ನಿನ್ನಿಂದಲೇ ಸೃಷ್ಟರಾದವರು, ನೀನು ಅವರೆಲ್ಲರಿಗಿಂತಲೂ ಉತ್ತಮನಾದವನು. ಭೂತ-ಭವಿಷ್ಯತ್-ವರ್ತಮಾನ ಕಾಲೀನವಾದ, ನಾಶಗೊಳಿಸಲು ಅಸಾಧ್ಯವಾದ (ಪ್ರವಾಹರೂಪದಿಂದ ನಿತ್ಯವಾದ) ಎಲ್ಲ ಪ್ರಪಂಚಗಳೂ ನಿನ್ನಿಂದ ಜನಿಸಿದವು.

ಭಕ್ತಂ ಚ ಮಾಂ ಭಜಮಾನಂ ಭಜಸ್ವ
ಮಾ ರೀರಿಷೋ ಮಾಮಹಿತಾಹಿತೇನ ।
ಆತ್ಮಾನಂ ತ್ವಾಮಾತ್ಮನೋಽನನ್ಯಭಾವೋ
ವಿದ್ವಾನೇವಂ ಗಚ್ಛತಿ ಬ್ರಹ್ಮ ಶುಕ್ರಮ್ ॥ ೭೧ ॥

ನಿನ್ನ ಭಕ್ತನಾಗಿ ನಿನ್ನನ್ನು ಭಜಿಸುವ ನನ್ನನ್ನು ಅನುಗ್ರಹಿಸು. ಅಹಿತವನ್ನುಂಟು ಮಾಡಿ ನನ್ನನ್ನು ನಾಶಮಾಡಬೇಡ. ನಿನ್ನನ್ನು ಈ ರೀತಿಯಾಗಿ ಆತ್ಮನಿಂದ ಅನನ್ಯನಾದವನು (ಶಿವಾಂತರ್ಯಾಮಿಯಾದ ರೂಪಕ್ಕೂ ಮತ್ತು ಮೂಲರೂಪಕ್ಕೂ ಅಭೇದವನ್ನು ತಿಳಿಯುವವನು) ಶೋಕರಹಿತನಾದ ಬ್ರಹ್ಮನನ್ನು ಹೊಂದುವನು.

ಅಸ್ತೌಷಂ ತ್ವಾಂ ತವ ಸಮ್ಮಾನಮಿಚ್ಛನ್
ವಿಚಿನ್ವನ್ ವೈ ಸವೃಷಂ ದೇವವರ್ಯ ।
ಸುದುರ್ಲಭಾನ್ ದೇಹಿ ವರಾನ್ ಮಮೇಷ್ಟಾ-
ನಭಿಷ್ಟುತಃ ಪ್ರತಿಕಾರ್ಷೀಶ್ಚ ಮಾ ಮಾಮ್ ॥ ೭೨ ॥

ಎಲೈ ದೇವವರ್ಯನೇ, ವೃಷಭಸಹಿತನಾದ ನಿನ್ನನ್ನು ಹುಡುಕುತ್ತಾ, ನಿನ್ನನ್ನು ನೋಡಿ, ನಿನ್ನನ್ನು ಗೌರವಿಸಲು ಈ ಸ್ತೋತ್ರವನ್ನು ಮಾಡಿದೆನು. ಹೀಗೆ ಸ್ತೋತ್ರ ಮಾಡಲ್ಪಟ್ಟ

ನೀನು ನನಗೆ ಇಷ್ಟವಾದ, ಅತ್ಯಂತ ದುರ್ಲಭವಾದ ವರಗಳನ್ನು ಕೊಡು. ನನ್ನನ್ನು ನಿರಾಕರಿಸಬೇಡ.

ತಸ್ಮೈ ವರಾನಚಿಂತ್ಯಾತ್ಮಾ ನೀಲಕಂಠಃ ಪಿನಾಕಧೃಕ್ ।
ಅರ್ಹತೇ ದೇವಮುಖ್ಯಾಯ ಪ್ರಾಯಚ್ಛದ್ಯಪಿಸಂಸ್ತುತಃ ॥ ೭೩ ॥

ಋಷಿಯಾದ ನಾರಾಯಣನಿಂದ ಸ್ತೋತ್ರಮಾಡಲ್ಪಟ್ಟ ಪಿನಾಕಧಾರಿಯೂ, ನೀಲಕಂಠನೂ, ಅಚಿಂತ್ಯಮಹಿಮೆಯುಳ್ಳವನೂ ಆದ ಶಿವನು ವರಗಳಿಗೆ ಯೋಗ್ಯನಾದ ದೇವಶ್ರೇಷ್ಠನಾದ ಅವನಿಗೆ ವರಗಳನ್ನು ಕೊಟ್ಟನು.

ನೀಲಕಂಠಃ

ಮತ್ಪ್ರಸಾದಾನ್ಮನುಷ್ಯೇಷು ದೇವಗಂಧರ್ವಯೋನಿಷು ।
ಅಪ್ರಮೇಯಬಲಾತ್ಮಾ ತ್ವಂ ನಾರಾಯಣ ಭವಿಷ್ಯಸಿ ॥ ೭೪ ॥

ನೀಲಕಂಠ– ಎಲೈ ನಾರಾಯಣನೇ, ನನ್ನ ಅನುಗ್ರಹದಿಂದ ನೀನು ಮನುಷ್ಯರಲ್ಲಿಯೂ, ದೇವ-ಗಂಧರ್ವಜಾತಿಗಳಲ್ಲಿಯೂ ಅಚಿಂತ್ಯವಾದ ಮಹಿಮೆಯುಳ್ಳವನೂ ಮತ್ತು ಬಲವುಳ್ಳವನೂ ಆಗುವಿ.

ನ ಚ ತ್ವಾ ಪ್ರಸಹಿಷ್ಯಂತಿ ದೇವಾಸುರಮಹೋರಗಾಃ ।
ನ ಪಿಶಾಚಾ ನ ಗಂಧರ್ವಾ ನ ನರಾ ನ ಚ ರಾಕ್ಷಸಾಃ ॥ ೭೫ ॥

ನ ಸುಪರ್ಣಾಸ್ತಥಾ ನಾಗಾ ನ ಚ ವಿಶ್ವೇ ವಿಯೋನಿಜಾಃ ।
ನ ಕಶ್ಚಿತ್ತ್ವಾಂ ಚ ದೇವೋಽಪಿ ಸಮರೇಷು ವಿಜೇಷ್ಯತಿ ॥ ೭೬ ॥

ದೇವಾಸುರ-ಮಹಾಸರ್ಪಗಳಾಗಲೀ, ಪಿಶಾಚಿಗಳಾಗಲೀ, ಗಂಧರ್ವರಾಗಲೀ, ರಾಕ್ಷಸರಾಗಲೀ, ಪಕ್ಷಿಗಳಾಗಲೀ, ನಾಗಗಳಾಗಲೀ ಅಥವಾ ಅಯೋನಿಜಗಳಾದ ಯಾವುದೇ ಪ್ರಾಣಿಯಾಗಲೀ ಯಾರೂ ನಿನ್ನನ್ನು ಸಹಿಸಲಾರರು. ಯುದ್ಧಗಳಲ್ಲಿ ನೀನು ಎಲ್ಲರನ್ನೂ ಗೆಲ್ಲುವಿ.

ನ ಶಸ್ತ್ರೇಣ ನ ವಜ್ರೇಣ ನಾಗ್ನಿನಾ ನ ಚ ವಾಯುನಾ ।
ನಾರ್ದ್ರೇಣ ನ ಚ ಶುಷ್ಕೇಣ ತ್ರಸೇನ ಸ್ಥಾವರೇಣ ವಾ ॥ ೭೭ ॥

ಕಶ್ಚಿತ್ ತವ ರುಜಂ ಕರ್ತಾ ಮತ್ಪ್ರಸಾದಾತ್ ಕಥಂಚನ ।
ಅಪಿ ಚೇತ್ ಸಮರಂ ಗತ್ವಾ ಭವಿಷ್ಯಸಿ ಮಮಾಧಿಕಃ ॥ ೭೮ ॥

ನನ್ನ ಅನುಗ್ರಹದಿಂದ ಶಸ್ತ್ರದಿಂದಾಗಲೀ, ವಜ್ರದಿಂದಾಗಲೀ, ಅಗ್ನಿ-ವಾಯುವಿನಿಂದಾಗಲೀ, ಹಸಿಯ ಅಥವಾ ಒಣಗಿದ ವಸ್ತುವಿನಿಂದಾಗಲೀ, ಚಲಿಸುವ ಅಥವಾ ಚಲಿಸದ ವಸ್ತುಗಳಿಂದಾಗಲೀ ಯಾರೂ ನಿನಗೆ ವ್ರಣವನ್ನು ಉಂಟು ಮಾಡಲಾರರು. ನೀನು ಯುದ್ಧಕ್ಕೆ ಹೋದರೂ ನನಗಿಂತಲೂ ಶ್ರೇಷ್ಠನಾಗುವಿ.

ವ್ಯಾಸಃ

ಏವಮೇತೇ ವರಾ ಲಬ್ಧಾಃ ಪುರಸ್ತಾದ್ ವಿದ್ಧಿ ಶೌರಿಣಾ ।
ಸ ಏಷ ದೇವಶ್ಚರತಿ ಮಾಯಯಾ ಮೋಹಯನ್ ಜಗತ್ ॥ ೭೯ ॥

ವ್ಯಾಸ– ಹೀಗೆ ಶೌರಿಯಾದ ಕೃಷ್ಣನು ಹಿಂದೆ ಇಂತಹ ವರವನ್ನು ಪಡೆದಿದ್ದಾನೆಂದು ತಿಳಿ. ದೇವನಾದ ಅವನು ತನ್ನ ಸಾಮರ್ಥ್ಯದಿಂದ ಜಗತ್ತನ್ನು ಮೋಹಿಸುತ್ತಾ ಜಗತ್ತಿನಲ್ಲಿ ತಿರುಗುತ್ತಿದ್ದಾನೆ.

ತಸ್ಯೈವ ತಪಸಾ ಜಾತಂ ನರಂ ನಾಮ ಮಹಾಮುನಿಮ್ ।
ತುಲ್ಯಮೇತೇನ ದೇವೇನ ತಂ ಜಾನೀಹ್ಯರ್ಜುನಂ ಸದಾ ॥ ೮೦ ॥

ಅವನ ತಪಸ್ಸಿನಿಂದಲೇ ಆ ದೇವನಿಗೆ ಸಮಾನವಾದ ನರನು ಜನಿಸಿದನು. ಅವನನ್ನೇ ಅರ್ಜುನನೆಂದು ತಿಳಿ.

ತಾವೇತೌ ಪೂರ್ವದೇವಾನಾಂ ಪರಮೋಪಚಿತಾವೃಷೀ ।
ಲೋಕಯಾತ್ರಾವಿಧಾನಾರ್ಥಂ ಸಂಜಾಯೇತೇ ಯುಗೇ ಯುಗೇ ॥೮೧॥

ಇವರಿಬ್ಬರೂ ಪ್ರಾಚೀನರಾದ ದೇವತೆಗಳಿಂದಲೂ ಬಹಳವಾಗಿ ಪೂಜಿಸಲ್ಪಟ್ಟ ಋಷಿಗಳು. ಲೋಕಯಾತ್ರೆಯನ್ನು ಸುಗಮವಾಗಿ ನಡೆಸಲು ಯುಗಯುಗಗಳಲ್ಲಿ ಅವತರಿಸುತ್ತಾರೆ.

ತಥೈವ ಕರ್ಮಣಃ ಕೃತ್ಸ್ನಂ ಮಹತಸ್ತಪಸೋಽಪಿ ಚ ।
ತೇಜೋಮನ್ಯುಶ್ಚ ವಿದ್ವಂಸ್ತ್ವಂ ಜಾತೋ ರೌದ್ರೋ ಮಹಾಮತೇ ॥೮೨॥

ಹಾಗೆಯೇ ನೀನೂ ಸಹ ಎಲೈ ಮಹಾಮತಿಯೇ, ಸಕಲ ಕರ್ಮಗಳ ಮತ್ತು ದೊಡ್ಡ ತಪಸ್ಸುಗಳ ತೇಜಸ್ಸನ್ನು ತಿಳಿದು ಮನ್ಯುನಾಮಕನಾಗಿ ರುದ್ರನಿಂದ ಜನಿಸಿದ್ದೀಯೆ.

ಸ ಭವಾನ್ ದೇವವತ್ ಪ್ರಾಜ್ಞೋ ಜ್ಞಾತ್ವಾ ಭವಮಯಂ ಜಗತ್ ।
ಅವಾಕರ್ಷಸ್ತ್ವಮಾತ್ಮಾನಂ ನಿಯಮೈಸ್ತತ್ತ್ವಯೇಪ್ಸಯಾ ॥ ೮೩ ॥

ಅಂತಹ ದೇವತೆಯಂತೆ ಪ್ರಾಜ್ಞನಾದ ನೀನು ಜಗತ್ತೆಲ್ಲವನ್ನೂ ರುದ್ರಮಯವನ್ನಾಗಿ ತಿಳಿದು, ರುದ್ರನನ್ನು ಸಂತೋಷಪಡಿಸಲು ನಿಯಮಗಳಿಂದ ದೇಹವನ್ನು ಶೋಷಿಸಿದೆ.

ಶುಭಮೌರ್ವಂ ನವಂ ಕೃತ್ವಾ ಮಹಾಪುರುಷವಿಗ್ರಹಮ್ ।
ಈಜಿವಾಂಸ್ತ್ವಂ ಜಪೈರ್ಹೋಮೈರುಪಹಾರೈಶ್ಚ ಮಾನದ ॥ ೮೪ ॥

ಭೂಮಿಯಲ್ಲಿ ಶುಭವಾದ ಹೊಸದಾದ ಇನ್ನೊಂದು ಪುರುಷವಿಗ್ರಹವನ್ನು ಧರಿಸಿ ಎಲೈ ಮಾನದನೇ, ನೀನು ಜಪ-ಹೋಮಗಳಿಂದಲೂ, ಪೂಜೆಗಳಿಂದಲೂ ಈಶ್ವರನನ್ನು ಪೂಜಿಸಿದೆ.

ಸ ತಥಾ ಪೂಜ್ಯಮಾನಸ್ತೇ ಪೂರ್ವದೇವೋಽಪ್ಯತೂತುಷತ್ ।
ಪುಷ್ಕಳಾಂಶ್ಚ ವರಾನ್ ಪ್ರಾದಾತ್ತವ ವಿದ್ವನ್ ಹೃದಿ ಸ್ಥಿತಾನ್ ॥ ೮೫ ॥

ನಿನ್ನಿಂದ ಹೀಗೆ ಪೂಜಿಸಲ್ಪಟ್ಟ ಪೂರ್ವದೇವನಾದ ಅವನು ಎಲೈ ವಿದ್ವಾಂಸನೇ, ಸಂತೋಷಗೊಂಡು, ನಿನ್ನ ಹೃದಯದಲ್ಲಿದ್ದ ನಿನಗೆ ಅಪೇಕ್ಷಿತವಾದ ಪುಷ್ಕಳವಾದ ವರಗಳನ್ನು ನಿನಗೆ ಕೊಟ್ಟನು.

ಜನ್ಮಕರ್ಮತಪೋಯೋಗಾಸ್ತಯೋಸ್ತವ ಚ ಪುಷ್ಕಳಾಃ ।
ತಾಭ್ಯಾಂ ಲಿಂಗೇರ್ಚಿತೋ ದೇವಸ್ತ್ವಯಾರ್ಚ್ಯಾಯಾಂ ಯುಗೇ ಯುಗೇ ॥

ಜನ್ಮಕರ್ಮ-ತಪೋಯೋನಿಗಳು ಆ ನರ-ನಾರಾಯಣರಿಗೂ ಮತ್ತು ನಿನಗೂ ಪುಷ್ಕಳವಾಗಿವೆ. ಅವರಿಂದಲೂ ಮತ್ತು ನಿನ್ನಿಂದಲೂ ಯುಗಯುಗಗಳಲ್ಲಿ ಮಹಾದೇವನು ನಿಮ್ಮಿಂದಲೇ ಅರ್ಚಿಸಲ್ಪಡುತ್ತಾನೆ.

ಸರ್ವರೂಪಂ ಭವಂ ಜ್ಞಾತ್ವಾ ಲಿಂಗೇ ಯೋಽರ್ಚಯತಿ ಪ್ರಭುಮ್ ।
ಆತ್ಮಯೋಗಾಶ್ಚ ತಸ್ಮಿನ್ ವೈ ಶಾಸ್ತ್ರಯೋಗಾಶ್ಚ ಶಾಶ್ವತಾಃ ॥ ೮೭ ॥

ಕಶ್ಚಿತ್ ತವ ರುಜಂ ಕರ್ತಾ ಮತ್ಪ್ರಸಾದಾತ್ ಕಥಂಚನ ।
ಅಪಿ ಚೇತ್ ಸಮರಂ ಗತ್ವಾ ಭವಿಷ್ಯಸಿ ಮಮಾಧಿಕಃ ॥ ೭೮ ॥

ನನ್ನ ಅನುಗ್ರಹದಿಂದ ಶಸ್ತ್ರದಿಂದಾಗಲೀ, ವಜ್ರದಿಂದಾಗಲೀ, ಅಗ್ನಿ-ವಾಯುವಿನಿಂದಾಗಲೀ, ಹಸಿಯ ಅಥವಾ ಒಣಗಿದ ವಸ್ತುವಿನಿಂದಾಗಲೀ, ಚಲಿಸುವ ಅಥವಾ ಚಲಿಸದ ವಸ್ತುಗಳಿಂದಾಗಲೀ ಯಾರೂ ನಿನಗೆ ವ್ರಣವನ್ನು ಉಂಟು ಮಾಡಲಾರರು. ನೀನು ಯುದ್ಧಕ್ಕೆ ಹೋದರೂ ನನಗಿಂತಲೂ ಶ್ರೇಷ್ಠನಾಗುವಿ.

ವ್ಯಾಸಃ

ಏವಮೇತೇ ವರಾ ಲಬ್ಧಾಃ ಪುರಸ್ತಾದ್ ವಿದ್ಧಿ ಶೌರಿಣಾ ।
ಸ ಏಷ ದೇವಶ್ಚರತಿ ಮಾಯಯಾ ಮೋಹಯನ್ ಜಗತ್ ॥ ೭೯ ॥

ವ್ಯಾಸ– ಹೀಗೆ ಶೌರಿಯಾದ ಕೃಷ್ಣನು ಹಿಂದೆ ಇಂತಹ ವರವನ್ನು ಪಡೆದಿದ್ದಾನೆಂದು ತಿಳಿ. ದೇವನಾದ ಅವನು ತನ್ನ ಸಾಮರ್ಥ್ಯದಿಂದ ಜಗತ್ತನ್ನು ಮೋಹಿಸುತ್ತಾ ಜಗತ್ತಿನಲ್ಲಿ ತಿರುಗುತ್ತಿದ್ದಾನೆ.

ತಸ್ಯೈವ ತಪಸಾ ಜಾತಂ ನರಂ ನಾಮ ಮಹಾಮುನಿಮ್ ।
ತುಲ್ಯಮೇತೇನ ದೇವೇನ ತಂ ಜಾನೀಹ್ಯರ್ಜುನಂ ಸದಾ ॥ ೮೦ ॥

ಅವನ ತಪಸ್ಸಿನಿಂದಲೇ ಆ ದೇವನಿಗೆ ಸಮಾನವಾದ ನರನು ಜನಿಸಿದನು. ಅವನನ್ನೇ ಅರ್ಜುನನೆಂದು ತಿಳಿ.

ತಾವೇತೌ ಪೂರ್ವದೇವಾನಾಂ ಪರಮೋಪಚಿತಾವೃಷೀ ।
ಲೋಕಯಾತ್ರಾವಿಧಾನಾರ್ಥಂ ಸಂಜಾಯೇತೇ ಯುಗೇ ಯುಗೇ ॥೮೧॥

ಇವರಿಬ್ಬರೂ ಪ್ರಾಚೀನರಾದ ದೇವತೆಗಳಿಂದಲೂ ಬಹಳವಾಗಿ ಪೂಜಿಸಲ್ಪಟ್ಟ ಋಷಿಗಳು. ಲೋಕಯಾತ್ರೆಯನ್ನು ಸುಗಮವಾಗಿ ನಡೆಸಲು ಯುಗಯುಗಗಳಲ್ಲಿ ಅವತರಿಸುತ್ತಾರೆ.

ತಥೈವ ಕರ್ಮಣಃ ಕೃತ್ಸ್ನಂ ಮಹತಸ್ತಪಸೋಽಪಿ ಚ ।
ತೇಜೋಮನ್ಯುಶ್ಚ ವಿದ್ವಂಸ್ತ್ವಂ ಜಾತೋ ರೌದ್ರೋ ಮಹಾಮತೇ ॥೮೨॥

ಹಾಗೆಯೇ ನೀನೂ ಸಹ ಎಲೈ ಮಹಾಮತಿಯೇ, ಸಕಲ ಕರ್ಮಗಳ ಮತ್ತು ದೊಡ್ಡ ತಪಸ್ಸುಗಳ ತೇಜಸ್ಸನ್ನು ತಿಳಿದು ಮನ್ಯುನಾಮಕನಾಗಿ ರುದ್ರನಿಂದ ಜನಿಸಿದ್ದೀಯೆ.

ಸ ಭವಾನ್ ದೇವವತ್ಪ್ರಾಜ್ಞೋ ಜ್ಞಾತ್ವಾ ಭವಮಯಂ ಜಗತ್ ।
ಅವಾಕರ್ಷಸ್ತ್ವಮಾತ್ಮಾನಂ ನಿಯಮೈಸ್ತತ್ಪ್ರಿಯೇಪ್ಸಯಾ ॥ ೮೩ ॥

ಅಂತಹ ದೇವತೆಯಂತೆ ಪ್ರಾಜ್ಞನಾದ ನೀನು ಜಗತ್ತೆಲ್ಲವನ್ನೂ ರುದ್ರಮಯವನ್ನಾಗಿ ತಿಳಿದು, ರುದ್ರನನ್ನು ಸಂತೋಷಪಡಿಸಲು ನಿಯಮಗಳಿಂದ ದೇಹವನ್ನು ಶೋಷಿಸಿದೆ.

ಶುಭಮೌರ್ವಂ ನವಂ ಕೃತ್ವಾ ಮಹಾಪುರುಷವಿಗ್ರಹಮ್ ।
ಈಜಿವಾಂಸ್ತ್ವಂ ಜಪೈರ್ಹೋಮೈರುಪಹಾರೈಶ್ಚ ಮಾನದ ॥ ೮೪ ॥

ಭೂಮಿಯಲ್ಲಿ ಶುಭವಾದ ಹೊಸದಾದ ಇನ್ನೊಂದು ಪುರುಷವಿಗ್ರಹವನ್ನು ಧರಿಸಿ ಎಲೈ ಮಾನದನೇ, ನೀನು ಜಪ-ಹೋಮಗಳಿಂದಲೂ, ಪೂಜೆಗಳಿಂದಲೂ ಈಶ್ವರನನ್ನು ಪೂಜಿಸಿದೆ.

ಸ ತಥಾ ಪೂಜ್ಯಮಾನಸ್ತೇ ಪೂರ್ವದೇವೋಽಪ್ಯತೂತುಷತ್ ।
ಪುಷ್ಕಳಾಂಶ್ಚ ವರಾನ್ ಪ್ರಾದಾತ್ತವ ವಿದ್ವನ್ ಹೃದಿ ಸ್ಥಿತಾನ್ ॥ ೮೫ ॥

ನಿನ್ನಿಂದ ಹೀಗೆ ಪೂಜಿಸಲ್ಪಟ್ಟ ಪೂರ್ವದೇವನಾದ ಅವನು ಎಲೈ ವಿದ್ವಾಂಸನೇ, ಸಂತೋಷಗೊಂಡು, ನಿನ್ನ ಹೃದಯದಲ್ಲಿದ್ದ ನಿನಗೆ ಅಪೇಕ್ಷಿತವಾದ ಪುಷ್ಕಳವಾದ ವರಗಳನ್ನು ನಿನಗೆ ಕೊಟ್ಟನು.

ಜನ್ಮಕರ್ಮತಪೋಯೋಗಾಸ್ತಯೋಸ್ತವ ಚ ಪುಷ್ಕಳಾಃ ।
ತಾಭ್ಯಾಂ ಲಿಂಗೇರ್ಚಿತೋ ದೇವಸ್ತ್ವಯಾರ್ಚ್ಯಾಯಾಂ ಯುಗೇ ಯುಗೇ ॥

ಜನ್ಮಕರ್ಮ-ತಪೋಯೋನಿಗಳು ಆ ನರ-ನಾರಾಯಣರಿಗೂ ಮತ್ತು ನಿನಗೂ ಪುಷ್ಕಳವಾಗಿವೆ. ಅವರಿಂದಲೂ ಮತ್ತು ನಿನ್ನಿಂದಲೂ ಯುಗಯುಗಗಳಲ್ಲಿ ಮಹಾದೇವನು ನಿಮ್ಮಿಂದಲೇ ಅರ್ಚಿಸಲ್ಪಡುತ್ತಾನೆ.

ಸರ್ವರೂಪಂ ಭವಂ ಜ್ಞಾತ್ವಾ ಲಿಂಗೇ ಯೋಽರ್ಚಯತಿ ಪ್ರಭುಮ್ ।
ಆತ್ಮಯೋಗಾಶ್ಚ ತಸ್ಮಿನ್ ವೈ ಶಾಸ್ತ್ರಯೋಗಾಶ್ಚ ಶಾಶ್ವತಾಃ ॥ ೮೭ ॥

ಈಶ್ವರನು ಸರ್ವರೂಪನೆಂದು ತಿಳಿದು ಪ್ರಭುವಾದ ಅವನನ್ನು ಯಾವನು ಲಿಂಗದಲ್ಲಿ ಪೂಜಿಸುತ್ತಾನೆಯೋ ಅವನು ಶಾಶ್ವತವಾದ ಎಲ್ಲ ಅಧ್ಯಾತ್ಮ ಯೋಗಗಳನ್ನೂ ಮತ್ತು ಶಾಸ್ತ್ರಯೋಗಗಳನ್ನೂ ಹೊಂದುವನು.

ಏವಂ ದೇವಾ ಯಜಂತೋ ಹಿ ಸಿದ್ಧಾಶ್ಚ ಪರಮರ್ಷಯಃ ।
ಪ್ರಾರ್ಥಯಂತಿ ಪರಂ ಲೋಕೇ ಸ್ಥಾನಮೇವ ಚ ಶಾಶ್ವತಮ್ ॥ ೮೮ ॥

ದೇವತೆಗಳು ಮತ್ತು ಪರಮರ್ಷಿಗಳು ಹೀಗೆ ಅವನನ್ನು ಪೂಜಿಸುತ್ತಾ ಸಿದ್ಧಿಯನ್ನು ಪಡೆದು ಪರಲೋಕದಲ್ಲಿ ಶಾಶ್ವತವಾದ, ಶ್ರೇಷ್ಠವಾದ ಸ್ಥಾನವನ್ನು ಬೇಡುತ್ತಾರೆ.

ಸ ಏಷ ರುದ್ರಭಕ್ತಶ್ಚ ಕೇಶವೋ ರುದ್ರಸಂಭವಃ ।
ಕೃಷ್ಣ ಏವ ಹಿ ಯಷ್ಟವ್ಯೋ ಯಜ್ಞೈಶ್ಚೈಷ ಸನಾತನಃ ॥ ೮೯ ॥

ರುದ್ರಭಕ್ತನೂ, ರುದ್ರನಿಂದ ಜನಿಸಿದವನೂ ಆದ ಕೇಶವನಾದ, ಸನಾತನನಾದ ಈ ಕೃಷ್ಣನೇ ಯಜ್ಞಗಳಿಂದ ಪೂಜಿಸಲ್ಪಡಬೇಕಾದವನು.

ಸರ್ವಭೂತಭವಂ ಜ್ಞಾತ್ವಾ ಲಿಂಗೇऽರ್ಚಯತಿ ಯಃ ಪ್ರಭುಮ್ ।
ತಸ್ಮಿನ್ನಭ್ಯಧಿಕಾಂ ಪ್ರೀತಿಂ ಕರೋತಿ ವೃಷಭಧ್ವಜಃ ॥ ೯೦ ॥

ಸರ್ವಭೂತಗಳಿಗೆ ಆಶ್ರಯನಾದ ಕೃಷ್ಣನನ್ನು ತಿಳಿದು ಯಾವನು ಲಿಂಗದಲ್ಲಿ ಪ್ರಭುವಾದ ಅವನನ್ನು ತನ್ನ ಅಂತರ್ಯಾಮಿಯಾಗಿ ಪೂಜಿಸುತ್ತಾನೆಯೋ ಅವನಲ್ಲಿ ವೃಷಭಧ್ವಜನಾದ ಶಿವನು ಬಹಳ ಪ್ರೀತಿಯನ್ನು ಮಾಡುತ್ತಾನೆ.

ಸನಾತನನಾದ ಈ ಕೃಷ್ಣನೇ ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞಗಳಿಂದ ಅವರವರ ಅಂತರ್ಯಾಮಿಯಾಗಿ ಪೂಜಿಸಲ್ಪಡಬೇಕಾದವನು. ಕೇವಲ ದೇವಾದಿಗಳನ್ನೇ ಪೂಜಿಸುವುದಲ್ಲ. ಆದ್ದರಿಂದ ಪೃಥಿವ್ಯಾದಿ ಸರ್ವಭೂತಗಳಲ್ಲಿರುವ (ಶಿಲಾಮಯವಾದ ಸುವರ್ಣಮಯವಾದ ಪೃಥಿವೀಭೂತದ ಲಿಂಗಗಳಲ್ಲಿ ವಿಷ್ಣುವಿನ ಸನ್ನಿಧಾನವನ್ನು ಇರುವುದನ್ನು ತಿಳಿಸಲು 'ಸರ್ವಭೂತಭವಃ' ಎಂದು ತಿಳಿಸಿದ್ದಾರೆ) ಆ ಕೃಷ್ಣನನ್ನು ಲಿಂಗಗಳಲ್ಲಿ ಯಾವನು ಅರ್ಚಿಸುತ್ತಾನೆಯೋ ಅವನಿಗೆ ಶಿವನು ಬಹಳ ಪ್ರೀತಿಯನ್ನು ಮಾಡುತ್ತಾನೆ. ಲಿಂಗದಲ್ಲಿ ಕೇವಲ ಶಿವನನ್ನು ಪೂಜಿಸುವವನ ಮೇಲೆ ಪ್ರಸನ್ನನಾಗುವುದಿಲ್ಲ. ಲಿಂಗದಲ್ಲಿಯೂ ವಿಷ್ಣುವಿನ ಸನ್ನಿಧಾನವನ್ನೇ ಹೇಳಿರುವುದರಿಂದ ಅಲ್ಲಲ್ಲಿ ಮಾಡುವ ಸ್ತೋತ್ರ ಮತ್ತು ಪೂಜೆಗಳು ಶಿವಾಂತರ್ಯಾಮಿಯಾದ ವಿಷ್ಣುವಿಗೇ ಸಲ್ಲುವವು ಎಂದು ತಿಳಿಸುತ್ತದೆ - **ಲಕ್ಷಾಲಂಕಾರ.**

ಸಂಜಯಃ

ತಸ್ಯ ತದ್ವಚನಂ ಶ್ರುತ್ವಾ ದ್ರೋಣಪುತ್ರೋ ಮಹಾರಥಃ ।
ನಮಶ್ಚಕಾರ ರುದ್ರಾಯ ಬಹು ಮೇನೇ ಚ ಕೇಶವಮ್ ॥ ೯೧ ॥

ಸಂಜಯ– ಅವರ ಆ ಮಾತುಗಳನ್ನು ಕೇಳಿದ ಮಹಾರಥರಾದ ಅಶ್ವತ್ಥಾಮರು ರುದ್ರನಿಗೆ ನಮಸ್ಕಾರ ಮಾಡಿ ಕೃಷ್ಣನಲ್ಲಿ ಬಹಳ ಗೌರವವನ್ನು ಹೊಂದಿದನು.

ಹೃಷ್ಟಲೋಮಾ ಚ ವಶ್ಯಾತ್ಮಾ ನಮಸ್ಕೃತ್ಯ ಮಹರ್ಷಯೇ ।
ವರೂಥಿನೀಮಭಿಪ್ರೇತ್ಯ ಅವಹಾರಮಕಾರಯತ್ ॥ ೯೨ ॥

ಜಿತಮನಸ್ಕರಾದ ಅವರು ರೋಮಾಂಚಗೊಂಡು ಮಹರ್ಷಿಗಳಾದ ವ್ಯಾಸರಿಗೆ ನಮಸ್ಕಾರ ಮಾಡಿ ತಮ್ಮ ಸೈನ್ಯವನ್ನು ಹಿಂತೆಗೆದುಕೊಂಡರು.

ತತಃ ಪ್ರತ್ಯವಹಾರೋಽಭೂತ್ ಪಾಂಡವಾನಾಂ ವಿಶಾಂಪತೇ ।
ಕೌರವಾಣಾಂ ಚ ದೀನಾನಾಂ ದ್ರೋಣೇ ಯುಧಿ ನಿಪಾತಿತೇ ॥ ೯೩ ॥

ಎಲೈ ರಾಜನೇ, ಆಗ ದೀನರಾದ ಕೌರವರ ಪಕ್ಷದ ರಥದಲ್ಲಿ ದ್ರೋಣರು ಯುದ್ಧದಲ್ಲಿ ಹತರಾಗುತ್ತಿರಲು ಪಾಂಡವರೂ ತಮ್ಮ ಸೈನ್ಯವನ್ನು ಅವಹಾರ ಮಾಡಿದರು.

ಯುದ್ಧಂ ಕೃತ್ವಾ ದಿನಾನ್ ಪಂಚ ದ್ರೋಣೋ ಹತ್ವಾ ವರೂಥಿನೀಮ್ ।
ಬ್ರಹ್ಮಲೋಕಂ ಗತೋ ರಾಜನ್ ಬ್ರಾಹ್ಮಣೋ ವೇದಪಾರಗಃ ॥ ೯೪ ॥

ಎಲೈ ರಾಜನೇ, ವೇದಪಾರಂಗತರೂ, ಬ್ರಾಹ್ಮಣರೂ ಆದ ದ್ರೋಣರು ಐದು ದಿವಸಗಳ ಕಾಲ ಯುದ್ಧವನ್ನು ಮಾಡಿ ಪಾಂಡವರ ಸೇನೆಯನ್ನು ಸಂಹರಿಸಿ ಬ್ರಹ್ಮಲೋಕವನ್ನು ಸೇರಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಚತುರಶೀತ್ಯಧಿಕಶತತಮೋಽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ದ್ರೋಣಪರ್ವದಲ್ಲಿ ನೂರ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೈದನೆಯ ಅಧ್ಯಾಯ

ಇತರರಿಗೆ ಕಾಣದಂತೆ ತನ್ನ ಮುಂದೆ ತನಗೆ ಅನುಕೂಲವಾಗಿ ಯುದ್ಧವನ್ನು ಮಾಡುವ ಶೂಲಪಾಣಿಯನ್ನು ನೋಡಿ ಅರ್ಜುನನ ಪ್ರಶ್ನೆ. ವ್ಯಾಸರು ಅವನು ಶಿವನೆಂದು ಉತ್ತರವನ್ನು ಹೇಳಿ, ಶತರುದ್ರೀಯ ಉಪದೇಶ.

ಧೃತರಾಷ್ಟ್ರಃ

ತಸ್ಮಿನ್ನತಿರಥೇ ದ್ರೋಣೇ ನಿಹತೇ ತತ್ರ ಸಂಜಯ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವನ್ನತಃ ಪರಮ್ ॥ ೧ ॥

ಧೃತರಾಷ್ಟ್ರ– ಎಲೈ ಸಂಜಯನೇ, ಅತಿರಥರಾದ ಆ ದ್ರೋಣರು ಹತರಾಗುತ್ತಿರಲು ನನ್ನವರು ಮತ್ತು ಪಾಂಡವರು ಮುಂದೆ ಏನು ಮಾಡಿದರು?

ಸಂಜಯಃ

ತಸ್ಮಿನ್ನತಿರಥೇ ದ್ರೋಣೇ ನಿಹತೇ ಪಾರ್ಷತೇನ ವೈ ।
ಕೌರವೇಷು ಚ ಭಗ್ನೇಷು ಕುಂತೀಪುತ್ರೋ ಧನಂಜಯಃ ॥ ೨ ॥

ದೃಷ್ಟ್ವಾ ಸುಮಹದಾಶ್ಚರ್ಯಮಾತ್ಮನೋ ವಿಜಯಾವಹಮ್ ।
ಯದೃಚ್ಛಯಾऽऽಗತಂ ವ್ಯಾಸಂ ಪಪ್ರಚ್ಛ ಭರತರ್ಷಭ ॥ ೩ ॥

ಸಂಜಯ– ಎಲೈ ಭರತರ್ಷಭನೇ, ಧೃಷ್ಟದ್ಯುಮ್ನನಿಂದ ಅತಿರಥರಾದ ಆ ದ್ರೋಣರು ಹತರಾಗಿ, ಕೌರವರೆಲ್ಲರೂ ಭಗ್ನರಾಗುತ್ತಿರಲು ಕುಂತೀಪುತ್ರನಾದ ಧನಂಜಯನು ತನಗೆ ವಿಜಯವನ್ನು ಉಂಟುಮಾಡುವ ಆಶ್ಚರ್ಯಕರವಾದ ಘಟನೆಯನ್ನು ನೋಡಿ ಅಕಸ್ಮಾತ್ತಾಗಿ ಅಲ್ಲಿ ಬಂದ ವ್ಯಾಸರನ್ನು ಕುರಿತು ಪ್ರಶ್ನೆಯನ್ನು ಮಾಡಿದನು.

ಸಂಗ್ರಾಮೇ ನಿಘ್ನತಃ ಶತ್ರೂನ್ ಶರೌಘೈರ್ವಿಮಲೈರಹಮ್ ।
ಅಗ್ರತೋ ಲಕ್ಷಯೇ ಯಾಂತಂ ಪುರುಷಂ ಪಾವಕಪ್ರಭಮ್ ॥ ೪ ॥

ಶುದ್ಧವಾದ ಶಸ್ತ್ರಸಮೂಹದಿಂದ ಯುದ್ಧದಲ್ಲಿ ನಾನು ಶತ್ರುಸಮೂಹವನ್ನು ಕೊಲ್ಲುವಾಗ ನನ್ನ ಎದುರಿನಲ್ಲಿ ಅಗ್ನಿಗೆ ಸಮಾನವಾದ ಕಾಂತಿಯುಳ್ಳ ಒಬ್ಬ ಪುರುಷನು ಹೋಗುವುದನ್ನು ಗಮನಿಸುತ್ತೇನೆ.

ಜ್ವಲಂತಂ ಶೂಲಮುದ್ಯಮ್ಯ ಯಾಂ ದಿಶಂ ಪ್ರತಿಪದ್ಯತೇ ।
ತಸ್ಯಾಂ ದಿಶಿ ವಿಶೀರ್ಯಂತೇ ಶತ್ರವೋ ಮೇ ಮಹಾಮುನೇ ॥ ೫ ॥

ಜ್ವಲಿಸುವ ಶೂಲವನ್ನು ಎತ್ತಿಹಿಡಿದು ಅವನು ಯಾವ ದಿಕ್ಕಿಗೆ ಹೋಗುತ್ತಾನೆಯೋ, ಎಲೈ ಮಹಾಮುನಿಯೇ, ಆ ದಿಕ್ಕಿನಲ್ಲಿನನ್ನಿಂದ ಶತ್ರುಗಳು ವಿನಾಶವನ್ನು ಹೊಂದುತ್ತಾರೆ.

ನ ಪದ್ಭ್ಯಾಂ ಸ್ಪೃಶತೇ ಭೂಮಿಂ ನ ಚ ಶೂಲಂ ವಿಮುಂಚತಿ ।
ಶೂಲಾಚ್ಛೂಲಸಹಸ್ರಾಣಿ ನಿಷ್ಪೇತುಸ್ತಸ್ಯ ತೇಜಸಾ ॥ ೬ ॥

ಅವನು ಪಾದದಿಂದ ಭೂಮಿಯನ್ನು ಮುಟ್ಟುವುದಿಲ್ಲ ಮತ್ತು ಹಸ್ತದಲ್ಲಿದ್ದ ಶೂಲವನ್ನೂ ಬಿಡುವುದಿಲ್ಲ. ಅವನ ಸಾಮರ್ಥ್ಯದಿಂದ ಹಸ್ತದಲ್ಲಿರುವ ಆ ಶೂಲದಿಂದ ಸಹಸ್ರಾರು ಶೂಲಗಳು ಹೊರಬರುತ್ತವೆ.

ತೇನ ಭಗ್ನಾನರೀನ್ ಸರ್ವಾನ್ ಮದ್ಭಗ್ನಾನ್ ಮನ್ಯತೇ ಜನಃ ।
ತೇನ ದಗ್ಧಾನಿ ಸೈನ್ಯಾನಿ ಪೃಷ್ಠತೋಽನುದಹಾಮ್ಯಹಮ್ ॥ ೭ ॥

ಅವನು ನಾಶಪಡಿಸಿದ ಎಲ್ಲ ಶತ್ರುಗಳನ್ನೂ ಜನರು ನನ್ನಿಂದ ನಾಶಗೊಂಡಿದ್ದಾರೆ ಎಂದು ತಿಳಿಯುತ್ತಾರೆ. ಅವನು ದಹಿಸಿದ ಸೈನ್ಯವನ್ನು, ಅವನನ್ನು ಹಿಂಬಾಲಿಸಿ ಅನಂತರ ನಾನು ದಹಿಸುತ್ತೇನೆ.

ಭಗವಂಸ್ತನ್ಮಮಾಚಕ್ಷ್ವ ಕೋ ವೈ ಸ ಪುರುಷೋತ್ತಮಃ ।
ಶೂಲಪಾಣಿರ್ಮಹಾನ್ ಕೃಷ್ಣ ತೇಜಸಾ ಸೂರ್ಯಸನ್ನಿಭಃ ॥ ೮ ॥

ಪೂಜ್ಯನೇ, ಕೃಷ್ಣನೇ, ತೇಜಸ್ಸಿನಿಂದ ಸೂರ್ಯನಿಗೆ ಸಮಾನವಾಗಿರುವ, ಕೈಯಲ್ಲಿ ಶೂಲವನ್ನು ಹಿಡಿದಿರುವ ಆ ಮಹಾತ್ಮನಾದ ಪುರುಷೋತ್ತಮನು ಯಾರೆಂದು ನನಗೆ ಹೇಳು.

ವ್ಯಾಸಃ

ಪ್ರಜಾಪತೀನಾಂ ಪ್ರಥಮಂ ತೈಜಸಂ ಪುರುಷಂ ವಿಭುಮ್ ।
ಭುವನಂ ಭೂರ್ಭುವಂ ದೇವಂ ಸರ್ವಲೋಕೇಶ್ವರಂ ಪ್ರಭುಮ್ ॥ ೯ ॥

ಈಶಾನಂ ವರದಂ ಪಾರ್ಥ ದೃಷ್ಟವಾನಸಿ ಶಂಕರಮ್ ।
ತಂ ಗಚ್ಛ ಶರಣಂ ದೇವಂ ಸರ್ವಾದಿಂ ಭುವನೇಶ್ವರಮ್ ॥ ೧೦ ॥

ವ್ಯಾಸ– ಎಲೈ ಅರ್ಜುನನೇ, ನೀನು ಪ್ರಜಾಪತಿಯಲ್ಲಿ ಮೊದಲನೆಯವನೂ, ತೈಜಸಾಹಂಕಾರಕ್ಕೆ ಅಧಿಪತಿಯಾದವನೂ, ವಿಭುವೂ, ಭೂಮಿ- ಅಂತರಿಕ್ಷಗಳಿಗೆ ಒಡೆಯನಾದವನೂ, ದೇವನೂ, ಸರ್ವಲೋಕೇಶ್ವರನೂ, ಪ್ರಭುವೂ, ಈಶಾನನೂ, ವರದನೂ ಆದ ಶಂಕರನನ್ನು ನೋಡಿದ್ದೀಯೆ. ಭುವನೇಶ್ವರನಾದ ಸರ್ವಕಾರಣನಾದ ಆ ದೇವನಿಗೆ ಶರಣಾಗತನಾಗು.

ಮಹಾದೇವಂ ಮಹಾತ್ಮಾನಮೀಶಾನಂ ಜಟಿಲಂ ಶಿವಮ್ ।
ತ್ರ್ಯಕ್ಷಂ ಮಹಾಭುಜಂ ರುದ್ರಂ ಶಿಖಿನಂ ಚೀರವಾಸಸಮ್ ।
ದಾತಾರಂ ಚೈವ ಭಕ್ತಾನಾಂ ಪ್ರಸಾದವಿಹಿತಾನ್ ವರಾನ್ ॥ ೧೧ ॥

ಮಹಾದೇವನೂ, ಮಹಾತ್ಮನೂ, ಈಶಾನನೂ, ಜಟಿಲನೂ, ಮಂಗಳ ಸ್ವರೂಪನೂ, ತ್ರಿನೇತ್ರನೂ, ಮಹಾಭುಜನೂ, ಚೀರಗಳನ್ನು ಧರಿಸಿದವನೂ, ಅನುಗ್ರಹವನ್ನು ಮಾಡಿ ಭಕ್ತರಿಗೆ ಶ್ರೇಷ್ಠವಾದ ವರಗಳನ್ನು ಕೊಡುವವನೂ (ಆದ ಶಿವನನ್ನು ನೋಡಿದ್ದೀಯೆ).

ತಸ್ಯ ತೇ ಪಾರ್ಷದಾ ದಿವ್ಯಾ ರೂಪೈರ್ನಾನಾವಿಧೈರ್ವಿಭೋಃ ।
ವಾಮನಾ ಜಟಿಲಾ ಮುಂಡಾ ಹ್ರಸ್ವಗ್ರೀವಾ ಮಹೋದರಾಃ ॥ ೧೨ ॥

ಮಹಾಕಾಯಾ ಮಹೋತ್ಸಾಹಾ ಮಹಾಕರ್ಣಾಸ್ತಥಾಪರೇ ।
ಆನನೈರ್ವಿಕೃತೈಃ ಪಾದೈಃ ಪಾರ್ಥ ವೇಷೈಶ್ಚ ವೈಕೃತೈಃ ॥ ೧೩ ॥

ಎಲೈ ಪಾರ್ಥನೇ, ವಿಭುವಾದ ಅವನ ಪಾರ್ಷದರು ದಿವ್ಯವಾದ, ನಾನಾವಿಧವಾದ ರೂಪಗಳನ್ನು ಧರಿಸಿರುತ್ತಾರೆ. ಅವರು ವಾಮನರೂ, ಜಟಿಲರೂ, ಮುಂಡರೂ (ತಲೆಯ ಮೇಲೆ ಕೇಶವಿಲ್ಲದವರು), ಸಣ್ಣಕತ್ತುಳ್ಳವರೂ, ದೊಡ್ಡ ಹೊಟ್ಟೆಯುಳ್ಳವರೂ, ದೊಡ್ಡ ಶರೀರವುಳ್ಳವರೂ, ದೊಡ್ಡ ಕಿವಿಯುಳ್ಳವರೂ, ದೊಡ್ಡ ನಾಸಿಕವುಳ್ಳವರೂ, ವಿಕೃತವಾದ ಮುಖಗಳಿಂದಲೂ, ಪಾದಗಳಿಂದಲೂ, ವಿಕೃತವಾದ ವೇಷದಿಂದಲೂ ಕೂಡಿದವರೂ ಆಗಿರುತ್ತಾರೆ.

ಈದೃಶೈಃ ಸ ಮಹಾದೇವಃ ಪೂಜ್ಯಮಾನೋ ಮಹೇಶ್ವರಃ ।
ಸ ಶಿವಸ್ತಾತ ತೇಜಸ್ವೀ ಪ್ರಸಾದಾದ್ ಯಾತಿ ತೇऽಗ್ರತಃ ।
ತಸ್ಮಿನ್ ಘೋರೇ ತದಾ ಪಾರ್ಥ ಸಂಗ್ರಾಮೇ ಲೋಮಹರ್ಷಣೇ ॥೧೪॥

ಎಲೈ ಪಾರ್ಥನೇ, ಆ ಮಹೇಶ್ವರನೂ, ಮಹಾದೇವನೂ ಆದ ಶಿವನು ಇಂತಹವರಿಂದ ಪೂಜಿಸಲ್ಪಡುತ್ತಾನೆ. ಎಲೈ ಪ್ರೀತಿಪಾತ್ರನೇ, ಆ ತೇಜಸ್ವಿಯಾದ ಶಿವನು ನಿನಗೆ ಅನುಗ್ರಹವನ್ನು ಮಾಡಿ ನಿನ್ನ ಮುಂದೆ ಘೋರವೂ, ರೋಮಾಂಚಕಾರಿಯೂ ಆದ ಆ ಸಂಗ್ರಾಮದಲ್ಲಿ ಹೋಗುತ್ತಿರುತ್ತಾನೆ.

ದ್ರೋಣಕರ್ಣಕೃಪೈರ್ಗುಪ್ತಾಂ ಮಹೇಷ್ವಾಸೈಃ ಪ್ರಹಾರಿಭಿಃ ।
ಕಸ್ತಾಂ ಸೇನಾಂ ತದಾ ಪಾರ್ಥ ಮನಸಾऽಪಿ ಪ್ರಧರ್ಷಯೇತ್ ।
ಋತೇ ದೇವಾನ್ ಮಹೇಷ್ವಾಸಾದ್ ಬಹುರೂಪಾನ್ ಮಹೇಶ್ವರಾತ್ ॥

ಎಲೈ ಪಾರ್ಥನೇ, ಮಹಾಧನುರ್ಧಾರಿಯಾದ, ಬಹುರೂಪಿಯಾದ ಮಹೇಶ್ವರನನ್ನು ಬಿಟ್ಟು ಮಹಾಧನುರ್ಧಾರಿಗಳೂ, ಪ್ರಹಾರಶೀಲರೂ ಆದ ದ್ರೋಣ-ಕರ್ಣ-ಕೃಪರಿಂದ ರಕ್ಷಿತವಾದ ಆ ಸೈನ್ಯವನ್ನು ಸೋಲಿಸಲು ಯಾವನು ತಾನೇ ಮನಸ್ಸಿನಲ್ಲಾದರೂ ಯೋಚಿಸಿಯಾನು?

ಸ್ಥಾತುಮುತ್ಸಹತೇ ಕಶ್ಚಿನ್ನ ತಸ್ಮಿನ್ನಗ್ರತಃ ಸ್ಥಿತೇ ।
ನ ಹಿ ಭೂತಂ ಸಮಂ ತೇನ ತ್ರಿಷು ಲೋಕೇಷು ವಿದ್ಯತೇ ॥ ೧೬ ॥

ಅವನು ಮುಂದಿರುವಾಗ ಯಾವನೂ ಅವನ ಎದುರಿಗೆ ನಿಲ್ಲಲಾರ. ಅವನಿಗೆ ಸಮವಾದ ಒಂದು ಪ್ರಾಣಿಯು ಮೂರುಲೋಕಗಳಲ್ಲಿಯೂ ಇರುವುದಿಲ್ಲ.

ಗಂಧೇನಾಪಿ ಹಿ ಸಂಗ್ರಾಮೇ ತಸ್ಯ ಕ್ರುದ್ಧಸ್ಯ ಶತ್ರವಃ ।
ವಿಸಂಜ್ಞಾ ಹತಭೂಯಿಷ್ಠಾ ವೇಪಂತಿ ಚ ಪತಂತಿ ಚ ॥ ೧೭ ॥

ಕೋಪಗೊಂಡ ಅವನ ದೇಹದಿಂದ ಉಂಟಾದ ಗಂಧದಿಂದಲೂ ಸಹ ಶತ್ರುಗಳು ಮೃತರಾದಂತೆ ಸಂಜ್ಞಾಹೀನರಾಗಿ ನಡುಗಿ ಬೀಳುತ್ತಾರೆ.

ತಸ್ಮೈ ನಮಸ್ತು ಕುರ್ವಂತೋ ದೇವಾಸ್ತಿಷ್ಠಂತಿ ವೈ ದಿವಿ ।
ಯೇ ಚಾನ್ಯೇ ಮಾನವಾ ಲೋಕೇ ಯೇ ಚ ಸ್ವರ್ಗಜಿತೋ ನರಾಃ ॥೧೮॥

ಯೇ ಭಕ್ತಾ ವರದಂ ದೇವಂ ಶಿವಂ ರುದ್ರಮುಮಾಪತಿಮ್ ।
ಇಹ ಲೋಕೇ ಸುಖಂ ಪ್ರಾಪ್ಯ ತೇ ಯಾಂತಿ ಪರಮಾಂ ಗತಿಮ್ ॥೧೯॥

ದೇವತೆಗಳು ಅವನಿಗೆ ನಮಸ್ಕಾರವನ್ನು ಮಾಡುತ್ತಾ ಸ್ವರ್ಗದಲ್ಲಿ ನೆಲೆಸಿರುತ್ತಾರೆ. ಲೋಕದ ಮಾನವರು ಮತ್ತು ಸ್ವರ್ಗವನ್ನು ಸಂಪಾದಿಸಿದ ಮಾನವರು (ಅವನನ್ನು ನಮಸ್ಕರಿಸಿ ಸ್ವರ್ಗದಲ್ಲಿ ಇರುತ್ತಾರೆ). ಯಾವ ಭಕ್ತರು ಅನನ್ಯವಾದ ಮನಸ್ಸಿನಿಂದ ಸರ್ವೇಶ್ವರನೂ, ಶಿವನೂ, ರುದ್ರನೂ, ಉಮಾಪತಿಯೂ, ವರದನೂ ಆದ ಅವನನ್ನು ಭಕ್ತಿಯಿಂದ ಉಪಾಸನೆ ಮಾಡುತ್ತಾರೆಯೋ ಅವರು ಈ ಲೋಕದಲ್ಲಿ ಸುಖವನ್ನು ಪಡೆದು ಪರಲೋಕದಲ್ಲಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾರೆ.

ನಮಸ್ಕುರುಷ್ವ ಕೌಂತೇಯ ತಸ್ಮೈ ಶಾಂತಾಯ ವೈ ಸದಾ ।
ರುದ್ರಾಯ ಶಿತಿಕಂಠಾಯ ಕನಿಷ್ಠಾಯ ಸುವರ್ಚಸೇ ॥ ೨೦ ॥

ಎಲೈ ಕೌಂತೇಯನೇ, (ಭಕ್ತರಿಗೆ) ಶಾಂತನಾದ (ಶತ್ರುಗಳಿಗೆ) ಘೋರನಾದ, ನೀಲಕಂಠನಾದ ಕನಿಷ್ಠರಲ್ಲಿಯೂ ಇರುವ, ಒಳ್ಳೆಯ ಕಾಂತಿಯುಕ್ತನಾದ ಅವನಿಗೆ ನಮಸ್ಕಾರವನ್ನು ಮಾಡು.

ಕಪರ್ದಿನೇ ಕರಾಳಾಯ ಹರ್ಯಕ್ಷ್ಣೇ ವರದಾಯ ಚ ।
ಯಾಮ್ಯಾಯಾವ್ಯಕ್ತರೂಪಾಯ ಸದ್ವೃತ್ತಾಯ ಕಪರ್ದಿನೇ ॥ ೨೧ ॥

ಜಟಾಮಂಡಲವನ್ನು ಧರಿಸಿದ, ಕರಾಳರೂಪವನ್ನು ಧರಿಸಿದ, ಕುಬೇರನಿಗೆ ವರಪ್ರದಾಯಕನಾದ, ಯಮನಿಗೆ ಅನುಗ್ರಹವನ್ನು ಮಾಡುವ, ಅವ್ಯಕ್ತವಾದ ಕೇಶಗಳನ್ನು ಹೊಂದಿರುವ, ಒಳ್ಳೆಯ ನಡತೆಯನ್ನು ಹೊಂದಿರುವ ಶಂಕರನಾದ ಅವನಿಗೆ (ನಮಸ್ಕಾರವನ್ನು ಮಾಡು).

ಕಾಮ್ಯಾಯ ಹರಿನೇತ್ರಾಯ ಸ್ಥಾಣವೇ ಪುರುಷಾಯ ಚ ।
ಹರಿಕೇಶಾಯ ಮುಂಡಾಯ ಕೃಶಾಯೋತ್ತರಣಾಯ ಚ ॥ ೨೨ ॥

ಭಕ್ತರಿಂದ ಪ್ರೀತಿಸಲ್ಪಡುವ, ಹರಿನೇತ್ರನಾದ, ಸ್ಥಾಣುವಾದ, ಪುರುಷನಾದ, ಹರಿಕೇಶನಾದ, ಮುಂಡನಾದ, ಕೃಶನಾದ, ಕಷ್ಟಗಳನ್ನು ದಾಟಿಸುವ ಅವನಿಗೆ (ನಮಸ್ಕಾರವನ್ನು ಮಾಡು).

ಭಾಸ್ಕರಾಯ ಸುತೀರ್ಥಾಯ ದೇವದೇವಾಯ ರಂಹಸೇ ।
ಬಹುರೂಪಾಯ ಶರ್ವಾಯ ಪ್ರಿಯಾಯ ಪ್ರಿಯವಾಸಸೇ ॥ ೨೩ ॥

ಉಷ್ಣೀಷಿಣೇ ಸುವಕ್ತ್ರಾಯ ಸಹಸ್ರಾಕ್ಷಾಯ ಮೀಢುಷೇ ।
ಗಿರೀಶಾಯ ಪ್ರಶಾಂತಾಯ ಪತಯೇ ಚೀರವಾಸಸೇ ॥ ೨೪ ॥

ಪ್ರಭೆಯನ್ನುಂಟು ಮಾಡುವ, ಬಹಳ ಪವಿತ್ರನಾದ, ದೇವದೇವನಾದ, ವೇಗಶಾಲಿಯಾದ, ಅನೇಕ ರೂಪಗಳನ್ನು ಧರಿಸಿದ, ಶರ್ವನಾದ, ಪ್ರಿಯನಾದ, ಪ್ರಿಯವಾದ ವಸ್ತ್ರವನ್ನು ಧರಿಸಿದ, ರುಮಾಲನ್ನು ಧರಿಸಿದ, ಒಳ್ಳೆಯ ಮುಖವುಳ್ಳ, ಸಹಸ್ರನೇತ್ರನಾದ, ಭಕ್ತಾಭೀಷ್ಟವರಪ್ರದನಾದ, ಗಿರೀಶನಾದ, ಪ್ರಶಾಂತನಾದ, ಸ್ವಾಮಿಯಾದ, ಪೀನವಸ್ತ್ರವನ್ನು ಧರಿಸಿದ (ಅವನಿಗೆ ನಮಸ್ಕಾರವನ್ನು ಮಾಡು).

ಹಿರಣ್ಯಬಾಹವೇ ಚೈವ ಉಗ್ರಾಯ ಪತಯೇ ದಿಶಾಮ್ ।
ಪರ್ಜನ್ಯಪತಯೇ ಚೈವ ಭೂತಾನಾಂ ಪತಯೇ ನಮಃ ॥ ೨೫ ॥

ವೃಕ್ಷಾಣಾಂ ಪತಯೇ ಚೈವ ಅಪಾಂ ಚ ಪತಯೇ ತಥಾ ।
ವೃಕ್ಷೈರಾವೃತಕಾಯಾಯ ಸೇನಾನ್ಯೇ ಮಧ್ಯಮಾಯ ಚ ॥ ೨೬ ॥

ಹಿರಣ್ಯಬಾಹುಗಳನ್ನುಳ್ಳ, ಉಗ್ರನಾದ, ದಿಕ್ಕುಗಳಿಗೆ ಪತಿಯಾದ, ಪರ್ಜನ್ಯನಿಗೆ ಪತಿಯಾದ, ಭೂತಳಗಳಿಗೆ ಪತಿಯಾದ, ವೃಕ್ಷಗಳಿಗೆ ಪತಿಯಾದ, ಜಲಗಳಿಗೆ ಪತಿಯಾದ, ವೃಕ್ಷಗಳಿಂದ ಆವೃತವಾದ ಶರೀರವುಳ್ಳ, ಸೇನಾನಾಯಕನಾದ, ಸೇನಾ ಮಧ್ಯದಲ್ಲಿರುವ (ಅವನಿಗೆ ನಮಸ್ಕಾರವನ್ನು ಮಾಡು).

ಸ್ರುವಹಸ್ತಾಯ ದೇವಾಯ ಧನ್ವಿನೇ ಭಾರ್ಗವಾಯ ಚ ।
ಬಹುರೂಪಾಯ ವಿಶ್ವಸ್ಯ ಪತಯೇ ಚೀರವಾಸಸೇ ॥ ೨೭ ॥

ಹಸ್ತದಲ್ಲಿ ಸ್ರುವವನ್ನು ಹಿಡಿದಿರುವ, ದೇವನಾದ, ಧನುರ್ಧಾರಿಯಾದ, ಭಕ್ತರ ಪಾಪವನ್ನು ಭಂಜಿಸುವ, ಬಹುರೂಪನಾದ, ವಿಶ್ವಪತಿಯಾದ, ಮೌಂಜವಸ್ತ್ರವನ್ನು ಧರಿಸಿದ (ಅವನಿಗೆ ನಮಸ್ಕಾರ).

ಸಹಸ್ರಶಿರಸೇ ಚೈವ ಸಹಸ್ರನಯನಾಯ ಚ ।
ಸಹಸ್ರಬಾಹವೇ ಚೈವ ಸಹಸ್ರಚರಣಾಯ ಚ ॥ ೨೮ ॥

ಸಹಸ್ರಶಿರಸ್ಸುಗಳುಳ್ಳ, ಸಹಸ್ರಪಾದಗಳುಳ್ಳ, ಸಹಸ್ರನೇತ್ರಗಳುಳ್ಳ, ಸಹಸ್ರ ಬಾಹುಗಳುಳ್ಳ, ಸಹಸ್ರ ಮುಖಗಳನ್ನುಳ್ಳ (ಅವನಿಗೆ ನಮಸ್ಕಾರ).

ಶರಣಂ ಗಚ್ಛ ಕೌಂತೇಯ ವರದಂ ಭುವನೇಶ್ವರಮ್ ।
ಉಮಾಪತಿಂ ವಿರೂಪಾಕ್ಷಂ ದಕ್ಷಯಜ್ಞನಿಬರ್ಹಣಮ್ ।
ಪ್ರಜಾನಾಂ ಪತಿಮವ್ಯಗ್ರಂ ಭೂತಾನಾಂ ಪತಿಮವ್ಯಯಮ್ ॥ ೨೯ ॥

ಎಲೈ ಕೌಂತೇಯನೇ, ಭುವನೇಶ್ವರನೂ, ವರಪ್ರದನೂ, ವಿರೂಪಾಕ್ಷನೂ, ದಕ್ಷಯಜ್ಞನಾಶಕನೂ, ಪ್ರಜಾಪತಿಯೂ, ಅವ್ಯಕ್ತನಾದವನೂ, ಭೂತಪತಿಯೂ, ಶಾಶ್ವತನೂ ಆದ ಉಮಾಪತಿಯನ್ನು ಶರಣುಹೊಂದು.

ಕಪರ್ದಿನಂ ವೃಷಾವರ್ತಂ ವೃಷನಾಭಂ ವೃಷಧ್ವಜಮ್ ।
ವೃಷದರ್ಪಂ ವೃಷಪತಿಂ ವೃಷಶೃಂಗಂ ವೃಷರ್ಷಭಮ್ ॥ ೩೦ ॥

ವೃಷಾಂಕಂ ವೃಷಭೋದಾರಂ ವೃಷಭಂ ವೃಷಭೇಕ್ಷಣಮ್ ।
ವೃಷಾಯುಧಂ ವೃಷಶರಂ ವೃಷಭೂತಂ ಮಹೇಶ್ವರಮ್ ॥ ೩೧ ॥

ಜಟೆಗಳನ್ನು ಧರಿಸಿದ, ಶ್ರೇಷ್ಠವಾದ ಸುಳಿಗಳನ್ನು ಹೊಂದಿದ, ಶ್ರೇಷ್ಠವಾದ ನಾಭಿಯನ್ನು ಹೊಂದಿದ, ವೃಷಧ್ವಜನಾದ, ವೃಷಭದ ದರ್ಪವನ್ನು ಹೊಂದಿರುವ, ಶ್ರೇಷ್ಠಪತಿಯಾದ, ವೃಷಶೃಂಗವನ್ನು ಹೊಂದಿರುವ, ವೃಷರ್ಷಭನಾದ, ವೃಷಾಂಕನಾದ, ವೃಷಭದಂತೆ ಉದಾರನಾದ, ಶ್ರೇಷ್ಠನಾದ, ವೃಷಭನೇತ್ರನಾದ, ಶ್ರೇಷ್ಠವಾದ ಆಯುಧವನ್ನೂ, ಶ್ರೇಷ್ಠವಾದ ಶರವನ್ನೂ ಹೊಂದಿದ, ಶ್ರೇಷ್ಠಪತಿಯಾದ ಅವನಿಗೆ ಶರಣಾಗತನಾಗು.

ಮಹೋದರಂ ಮಹಾಕಾಯಂ ದ್ವೀಪಿಚರ್ಮನಿವಾಸಿನಮ್ ।
ಲೋಕೇಶಂ ವರದಂ ಪುಣ್ಯಂ ಬ್ರಹ್ಮಣ್ಯಂ ಬ್ರಾಹ್ಮಣಪ್ರಿಯಮ್ ॥ ೩೨ ॥

ತ್ರಿಶೂಲಪಾಣಿಂ ವರದಂ ಖಡ್ಗಚರ್ಮಧರಂ ಪ್ರಭುಮ್ ।
ಪಿನಾಕಿನಂ ಖಂಡಪರಶುಂ ಲೋಕಾನಾಂ ಪತಿಮೀಶ್ವರಮ್ ।
ಪ್ರಪದ್ಯೇ ಶರಣಂ ದೇವಂ ಶರಣ್ಯಂ ಚೀರವಾಸಸಮ್ ॥ ೩೩ ॥

ಮಹೋದರನೂ, ಮಹಾಕಾಯನೂ, ವ್ಯಾಘ್ರಚರ್ಮವನ್ನು ಧರಿಸಿದವನೂ, ಲೋಕೇಶನೂ, ವರಪ್ರದನೂ, ಪವಿತ್ರನೂ, ಬ್ರಾಹ್ಮಣವತ್ಸಲನೂ, ಬ್ರಾಹ್ಮಣಪ್ರಿಯನೂ, ತ್ರಿಶೂಲಪಾಣಿಯೂ, ಖಡ್ಗಚರ್ಮಧರನೂ, ಪ್ರಭುವೂ, ಪಿನಾಕವನ್ನೂ ಖಂಡ

ಪರಶುವನ್ನೂ ಧರಿಸಿದವನೂ, ಲೋಕಗಳಿಗೆ ಪತಿಯೂ, ಚೀರವಸ್ತ್ರವನ್ನು ಧರಿಸಿದವನೂ, ಶರಣು ಹೊಂದಲು ಯೋಗ್ಯನೂ ಆದ ಈಶ್ವರನನ್ನು ನಾನು ಶರಣು ಹೊಂದುತ್ತೇನೆ.

ನಮಸ್ತಸ್ಮೈ ಸುರೇಶಾಯ ಯಸ್ಯ ವೈಶ್ರವಣಃ ಸಖಾ ।
ಸುವಾಸಸೇ ನಮೋ ನಿತ್ಯಂ ಸುವ್ರತಾಯ ಸುಧನ್ವಿನೇ ॥ ೩೪ ॥

ಕುಬೇರನನ್ನು ಸ್ನೇಹಿತನನ್ನಾಗಿ ಹೊಂದಿದ ಸುರೇಶ್ವರನಾದ ಅವನಿಗೆ ನಮಸ್ಕಾರ. ಒಳ್ಳೆಯ ವ್ರತವನ್ನು ಧರಿಸಿದವನೂ, ಒಳ್ಳೆಯ ಧನುರ್ಧಾರಿಯೂ, ಒಳ್ಳೆಯ ವಸ್ತ್ರವನ್ನು ಧರಿಸಿದವನೂ ಆದ ಅವನಿಗೆ ನಿತ್ಯದಲ್ಲಿಯೂ ನಮಸ್ಕಾರ.

ಸ್ರುವಹಸ್ತಾಯ ದೇವಾಯ ಸುಖಿಧನ್ವಾಯ ಧನ್ವಿನೇ ।
ಧನ್ವಂತರಾಯ ಧನುಷೇ ಧನ್ವಾಚಾರ್ಯಾಯ ಧನ್ವಿನೇ ॥ ೩೫ ॥

ಹಸ್ತದಲ್ಲಿ ಸ್ರುವವನ್ನು ಹಿಡಿದ ದೇವನಾದ, ಸುಖವಾದ ಧನುಸ್ಸನ್ನು ಹೊಂದಿದ, ಧನುರ್ಧಾರಿಯಾದ, ಕಷ್ಟಗಳನ್ನು ದಾಟಿಸುವ, ಧನುಸ್ಸಿಗೆ ನಿಯಾಮಕನಾದ, ಧನುರಾಚಾರ್ಯನಾದ ನಿನಗೆ ನಮಸ್ಕಾರ.

ಉಗ್ರಾಯುಧಾಯ ದೇವಾಯ ನಮಃ ಸುರವರಾಯ ಚ ।
ನಮೋಽಸ್ತು ಬಹುರೂಪಾಯ ನಮಶ್ಚ ಬಹುಧನ್ವಿನೇ ॥ ೩೬ ॥

ಉಗ್ರಾಯುಧನಾದ, ದೇವನಾದ, ದೇವಶ್ರೇಷ್ಠನಾದ ನಿನಗೆ ನಮಸ್ಕಾರ. ಬಹುರೂಪನಾದ ನಿನಗೆ ನಮಸ್ಕಾರ. ಅನೇಕ ಧನುಸ್ಸುಗಳನ್ನು ಧರಿಸಿದ ನಿನಗೆ ನಮಸ್ಕಾರ.

ನಮೋಽಸ್ತು ಸ್ಥಾಣವೇ ನಿತ್ಯಂ ಸುವ್ರತಾಯ ಸುಧನ್ವಿನೇ ।
ನಮೋಽಸ್ತು ತ್ರಿಪುರಘ್ನಾಯ ಭಗಘ್ನಾಯ ಚ ವೈ ನಮಃ ॥ ೩೭ ॥

ಸ್ಥಾಣುವಾದ (ಅಚಲನಾದ) ನಿನಗೆ ಯಾವಾಗಲೂ ನಮಸ್ಕಾರ. ತಪಶ್ಶೀಲನಾದ ನಿನಗೆ ನಮಸ್ಕಾರ. ತ್ರಿಪುರಘ್ನನಾದ ನಿನಗೆ ನಮಸ್ಕಾರ. ಭಗನ ನೇತ್ರಗಳನ್ನು ಸಂಹರಿಸಿದ ನಿನಗೆ ನಮಸ್ಕಾರ.

ವನಸ್ಪತೀನಾಂ ಪತಯೇ ನರಾಣಾಂ ಪತಯೇ ನಮಃ ।
ಅಪಾಂ ಚ ಪತಯೇ ನಿತ್ಯಂ ಯಜ್ಞಾನಾಂ ಪತಯೇ ನಮಃ ॥ ೩೮ ॥

ವನಸ್ಪತಿಗಳ ಪತಿಯಾದ ನಿನಗೆ, ನರಪತಿಯಾದ ನಿನಗೆ ನಮಸ್ಕಾರ. ಜಲಪತಿಯಾದ ನಿನಗೆ, ಯಜ್ಞಪತಿಯಾದ ನಿನಗೆ ಯಾವಾಗಲೂ ನಮಸ್ಕಾರ.

ಪೂಷ್ಣೋ ದಂತವಿನಾಶಾಯ ತ್ರ್ಯಕ್ಷಾಯ ವರದಾಯ ಚ ।
ನೀಲಕಂಠಾಯ ಪಿಂಗಾಯ ಸ್ವರ್ಣಕೇಶಾಯ ವೈ ನಮಃ ॥ ೩೯ ॥

ಪೂಷ್ಣದೇವತೆಯ ದಂತವನ್ನು ವಿನಾಶಮಾಡಿದ, ತ್ರಿನೇತ್ರನಾದ, ವರಪ್ರದನಾದ, ನೀಲಕಂಠನಾದ, ಪಿಂಗಲವರ್ಣದಿಂದ ಕೂಡಿದ, ಸ್ವರ್ಣಕೇಶನಾದ ನಿನಗೆ ನಮಸ್ಕಾರ.

ಕರ್ಮಾಣಿ ಚೈವ ದಿವ್ಯಾನಿ ಮಹಾದೇವಸ್ಯ ಧೀಮತಃ ।
ತಾನಿ ತೇ ಕೀರ್ತಯಿಷ್ಯಾಮಿ ಯಥಾಪ್ರಜ್ಞಂ ಯಥಾಶ್ರುತಮ್ ॥ ೪೦ ॥

ಮೇಧಾವಿಯಾದ ಮಹಾದೇವನ ದಿವ್ಯಕರ್ಮಗಳು ಏನಿವೆಯೋ ಅವುಗಳನ್ನು ನಾನು ತಿಳಿದಷ್ಟು ಮತ್ತು ನಾನು ಕೇಳಿದಷ್ಟು ನಿನಗೆ ಹೇಳುವೆನು.

ನ ಸುರಾ ನಾಸುರಾ ಲೋಕೇ ನ ಗಂಧರ್ವಾ ನ ರಾಕ್ಷಸಾಃ ।
ಸುಖಮೇಧಂತಿ ಕುಪಿತೇ ತಸ್ಮಿನ್ನಪಿ ಗುಹಾಗತಾಃ ॥ ೪೧ ॥

ದೇವತೆಗಳಾಗಲೀ, ಅಸುರರಾಗಲೀ, ಗಂಧರ್ವರಾಗಲೀ, ರಾಕ್ಷಸರಾಗಲೀ, ಶಿವನು ಕುಪಿತನಾದರೆ ಅವರು ಪಾತಾಳ ಗುಹೆಯಲ್ಲಿದ್ದರೂ ಸುಖವನ್ನು ಹೊಂದುವುದಿಲ್ಲ.

ವಿವ್ಯಾಧ ಕುಪಿತೋ ಯಜ್ಞಂ ನಿರ್ದಯಸ್ತು ಭವಸ್ತದಾ ।
ಧನುಷಾ ಬಾಣಮುತ್ಸೃಜ್ಯ ಸಘೋಷಂ ವಿನನಾದ ಚ ॥ ೪೨ ॥

ಹಿಂದೆ ಯಜಮಾನನಾದ ದಕ್ಷನು ವಿಧಿಪೂರ್ವಕವಾಗಿ ಸಂಪಾದಿಸಿದ ಯಜ್ಞವನ್ನು ಕುಪಿತನಾದ ಶಿವನು ನಿರ್ದಯನಾಗಿ ವಿನಾಶಗೊಳಿಸಿದನು. ತನ್ನ ಧನುಸ್ಸಿನಿಂದ ಬಾಣವನ್ನು ಪ್ರಯೋಗಿಸಿ ಒಳ್ಳೆಯ ನಾದದಿಂದ ಗರ್ಜಿಸಿದನು.

ತೇ ನ ಶರ್ಮ ಕುತಃ ಶಾಂತಿಂ ಲೇಭಿರೇ ಸ್ಮ ಸುರಾಸ್ತದಾ ।
ವಿದ್ರುತೇ ಸಹಸಾ ಯಜ್ಞೇ ಕುಪಿತೇ ಚ ಮಹೇಶ್ವರೇ ॥ ೪೩ ॥

ಯಜ್ಞವು ನಾಶಗೊಂಡು ಮಹೇಶ್ವರನು ಕೋಪಗೊಳ್ಳುತ್ತಿರಲು ಆಗ ದೇವತೆಗಳು ಸುಖವನ್ನಾಗಲೀ, ಶಾಂತಿಯನ್ನಾಗಲೀ ಹೊಂದಲಿಲ್ಲ.

ತೇನ ಜ್ಯಾತಳಘೋಷೇಣ ಸರ್ವೇ ಲೋಕಾಃ ಸಮಾಕುಲಾಃ ।
ಬಭೂವುರ್ವಶಗಾಃ ಪಾರ್ಥ ನಿಪೇತುಶ್ಚ ಸುರಾಸುರಾಃ ॥ ೪೪ ॥

ಎಲೈ ಪಾರ್ಥನೇ, ಶಿವನ ಜ್ಯಾತಳ ಘೋಷದಿಂದ ಎಲ್ಲ ಲೋಕಗಳೂ ಭಯಗ್ರಸ್ತವಾಗಿ ಅವನಿಗೆ ವಶವಾದವು. ದೇವತೆಗಳು ಮತ್ತು ಅಸುರರು ಬಿದ್ದರು.

ಆಪಶ್ಚುಕ್ಷುಭಿರೇ ಸರ್ವಾಶ್ಚಕಂಪೇ ಚ ವಸುಂಧರಾ ।
ಪರ್ವತಾಶ್ಚ ವ್ಯಶೀರ್ಯಂತ ದಿಶೋ ನಾಗಾಶ್ಚ ಮೋಹಿತಾಃ ॥ ೪೫ ॥

ಎಲ್ಲಸಮುದ್ರಗಳು ಕ್ಷೋಭೆಗೊಂಡವು. ಭೂಮಿಯು ನಡುಗಿತು. ಪರ್ವತಗಳು ಬಿರಿದವು. ದಿಗ್ಗಜಗಳು ಭ್ರಾಂತಿಗೊಂಡವು.

ಅಂಧಾಶ್ಚ ತಮಸಾ ಲೋಕಾ ನ ಪ್ರಕಾಶಂತ ಸಂವೃತಾಃ ।
ಜಘ್ನಿವಾನ್ ಸಹ ಸೂರ್ಯೇಣ ಸರ್ವೇಷಾಂ ಜ್ಯೋತಿಷಾಂ ಪ್ರಭಾಃ ॥

ಲೋಕವೆಲ್ಲವೂ ಕುರುಡುತನವನ್ನುಂಟು ಮಾಡುವಂತಹ ಕತ್ತಲೆಯಿಂದ ಕವಿದು ಯಾವುದೂ ಪ್ರಕಾಶಿಸಲಿಲ್ಲ. ಶಿವನು ಸೂರ್ಯನಿಂದ ಹಿಡಿದು ಎಲ್ಲ ಜ್ಯೋತಿಸ್ಸುಗಳ ಪ್ರಭೆಯನ್ನು ವಿನಾಶಗೊಳಿಸಿದನು.

ಚುಕ್ರುಶುರ್ಭಯಭೀತಾಶ್ಚ ಶಾಂತಿಂ ಚಕ್ರುಸ್ತಥೈವ ಚ ।
ಋಷಯಃ ಸರ್ವಭೂತಾನಾಮಾತ್ಮನಶ್ಚ ಸುಖೈಷಿಣಃ ॥ ೪೭ ॥

ಎಲ್ಲಪ್ರಾಣಿಗಳು ಭಯಭೀತವಾಗಿ ಕಿರುಚಿಕೊಂಡವು. ಋಷಿಗಳು ಎಲ್ಲಪ್ರಾಣಿಗಳ ಮತ್ತು ತಮ್ಮ ಹಿತವನ್ನೂ, ಸುಖವನ್ನೂ ಬಯಸಿ ಶಾಂತಿಯನ್ನು ಮಾಡಿದರು.

ಪೂಷಾಣಮಭ್ಯದ್ರವತ ಶಂಕರಃ ಪ್ರಹಸನ್ನಿವ ।
ಪುರೋಡಾಶಂ ಭಕ್ಷಯತೋ ದಶನಾನ್ ವೈ ವ್ಯಶಾತಯತ್ ॥ ೪೮ ॥

ಶಂಕರನು ನಗುತ್ತಾ ಪುರೋಡಾಶವನ್ನು ಭಕ್ಷಿಸುತ್ತಿದ್ದ ಪೂಷಾದೇವತೆಯ ಸಮೀಪಕ್ಕೆ ಹೋಗಿ ಅವನ ದಂತಗಳನ್ನು ಕೆಡವಿದನು.

ತತೋ ನಿಶ್ಚಕ್ರಮುರ್ದೇವಾ ವೇಪಮಾನಾ ನತಾಃ ಸ್ಮ ತಮ್ ।
ಪುನಶ್ಚ ಸಂದಧೇ ದೀಪ್ತಂ ದೇವಾನಾಂ ನಿಶಿತಂ ಶರಮ್ ॥ ೪೯ ॥

ಆಗ ದೇವತೆಗಳು ಭಯಪೀಡಿತರಾಗಿ ನಡುಗುತ್ತಾ ಅವನಿಗೆ ನಮಸ್ಕರಿಸಿ, ಓಡಿಹೋದರು. ಶಿವನು ಪುನಃ ದೇವತೆಗಳ ಮೇಲೆ ಜ್ವಲಿಸುತ್ತಿದ್ದ ತೀಕ್ಷ್ಣವಾದ ಒಂದು ಬಾಣವನ್ನು ಪ್ರಯೋಗಿಸಲು ಅದನ್ನು ಬಿಲ್ಲಿನಲ್ಲಿ ಹೂಡಿದನು.

ರುದ್ರಸ್ಯ ಯಜ್ಞಭಾಗಂ ಚ ವಿಶಿಷ್ಟಂ ಸಮಕಲ್ಪಯನ್ ।
ಭಯೇನ ತ್ರಿದಶಾ ರಾಜನ್ ಶರಣಂ ಚ ಪ್ರಪೇದಿರೇ ॥ ೫೦ ॥

ಅದನ್ನು ನೋಡಿದ ಎಲ್ಲ ದೇವತೆಗಳು ಮಹೇಶ್ವರನಿಗೆ ನಮಸ್ಕಾರವನ್ನು ಮಾಡಿ, ಯಜ್ಞದ ಅವಶಿಷ್ಟ ಭಾಗವನ್ನು ರುದ್ರನ ಭಾಗವಾಗಿ ಕಲ್ಪಿಸಿದರು. ಎಲೈ ರಾಜನೇ, ದೇವತೆಗಳು ಭಯದಿಂದ ರುದ್ರನಿಗೆ ಶರಣಾಗತರಾದರು.

ತೇನ ಚೈವಾತಿಕೋಪೇನ ಸ ಯಜ್ಞಃ ಸಂಧಿತಸ್ತದಾ ।
ಯತ್ತಾಶ್ಚಾಪಿ ಸುರಾ ಆಸನ್ ಯತ್ತಾಶ್ಚಾದ್ಯಾಪಿ ತಂ ಪ್ರತಿ ॥ ೫೧ ॥

ಬಹಳ ಕೋಪಗೊಂಡಿದ್ದ ರುದ್ರನು ಶಾಂತನಾಗಿ ಆ ಯಜ್ಞವನ್ನು ಪೂರ್ಣಗೊಳಿಸಿದನು. ಆಗ ಅವನಿಂದ ಭಗ್ನರಾದ ದೇವತೆಗಳು ಈಗಲೂ ಎಚ್ಚರಿಕೆಯಿಂದ ಅವನಿಗೆ ಶರಣಾಗತರಾಗಿದ್ದಾರೆ.

ಅಸುರಾಣಾಂ ಪುರಾಣ್ಯಾಸಂಸ್ತ್ರೀಣಿ ವೀರ್ಯವತಾಂ ದಿವಿ ।
ಆಯಸಂ ರಾಜತಂ ಚೈವ ಸೌವರ್ಣಮಪರಂ ಮಹತ್ ॥ ೫೨ ॥

ಪರಾಕ್ರಮಶಾಲಿಗಳಾದ ಅಸುರರ ಬಳಿ ಸುವರ್ಣದ, ರಜತದ ಮತ್ತು ಕಬ್ಬಿಣದ ಮೂರು ದೊಡ್ಡ ಪುರಗಳಿದ್ದವು.

ಆಯಸಂ ತಾರಕಾಕ್ಷಸ್ಯ ಕಮಲಾಕ್ಷಸ್ಯ ರಾಜತಮ್ ।
ಸೌವರ್ಣಂ ಪರಮಂ ಹ್ಯಾಸೀದ್ವಿದ್ಯುನ್ಮಾಲಿನ ಏವ ಚ ॥ ೫೩ ॥

ಆಯಸದ (ಕಬ್ಬಿಣದ) ಪಟ್ಟಣವು ತಾರಕಾಕ್ಷನಿಗೂ, ರಜತಮಯವಾದ ಪುರವು ಕಮಲಾಕ್ಷನಿಗೂ, ಸುವರ್ಣಮಯವಾದ ಶ್ರೇಷ್ಠವಾದ ಪುರವು ವಿದ್ಯುನ್ಮಾಲಿನಿಗೂ ಸೇರಿದ್ದಿತು.

ನ ಶಕ್ತಸ್ತಾನಿ ಮಘವಾನ್ ಭೇತ್ತುಂ ಸರ್ವಾಯುಧೈರಪಿ ।
ಅಥ ಸರ್ವೇऽಮರಾ ರುದ್ರಂ ಜಗ್ಮುಃ ಶರಣಮರ್ದಿತಾಃ ॥ ೫೪ ॥

ಇಂದ್ರನು ತನ್ನ ಸರ್ವಾಯುಧಗಳಿಂದಲೂ ಆ ಪುರಗಳನ್ನು ಭೇದಿಸಲು ಸಮರ್ಥನಾಗಲಿಲ್ಲ. ತ್ರಿಪುರರಿಂದ ಪೀಡಿತರಾದ ಎಲ್ಲ ದೇವತೆಗಳೂ ಆಗ ರುದ್ರನಿಗೆ ಶರಣಾಗತರಾದರು.

ತೇ ತಮೂಚುರ್ಮಹಾತ್ಮಾನಂ ಸರ್ವೇ ದೇವಾಃ ಸವಾಸವಾಃ ।
ರುದ್ರ ರೌದ್ರಾ ಭವಿಷ್ಯಂತಿ ಪಶವಃ ಸರ್ವಕರ್ಮಸು ।
ನಿಪಾತಯಿಷ್ಯಸೇ ಚೈನಾನಸುರಾನ್ ಭುವನೇಶ್ವರ ॥ ೫೫ ॥

ಸ ತಥೋಕ್ತಸ್ತಥೇತ್ಯುಕ್ತ್ವಾ ದೇವಾನಾಂ ಹಿತಕಾಮ್ಯಯಾ ।
ಅತಿಷ್ಠತ್ ಸ್ಥಾಣುಭೂತಃ ಸ ಸಹಸ್ರಂ ಪರಿವತ್ಸರಾನ್ ॥ ೫೬ ॥

ಯದಾ ತ್ರೀಣಿ ಸಮೇತಾನಿ ಅಂತರಿಕ್ಷೇ ಪುರಾಣಿ ವೈ ।
ತ್ರಿಪರ್ವಣಾ ತ್ರಿಶಲ್ಯೇನ ತೇನ ತಾನಿ ಬಿಭೇದ ಸಃ ॥ ೫೭ ॥

ಇಂದ್ರನಿಂದ ಸಹಿತರಾದ ಎಲ್ಲ ದೇವತೆಗಳು ಮಹಾತ್ಮನಾದ ಅವನನ್ನು ಕುರಿತು- 'ಈ ತ್ರಿಪುರವಾಸಿಗಳು ಬ್ರಹ್ಮದೇವರು ಕೊಟ್ಟ ವರಗಳಿಂದ ಘೋರರಾಗಿದ್ದಾರೆ. ವರದಿಂದ ದರ್ಪವನ್ನು ಹೊಂದಿದ ಕಾರಣ ಅವರು ಲೋಕಗಳನ್ನು ಪೀಡಿಸುತ್ತಿದ್ದಾರೆ. ಎಲೈ ದೇವದೇವೇಶನೆ, ನಿನ್ನನ್ನು ಬಿಟ್ಟು ಬೇರೆ ಯಾವನೂ ಈ ದೈತ್ಯರನ್ನು ಕೊಲ್ಲಲು ಸಮರ್ಥನಲ್ಲ. ಎಲೈ ಮಹಾದೇವನೇ, ಈ ದೇವಶತ್ರುಗಳನ್ನು ನೀನು ಕೊಲ್ಲುವವನಾಗು. ಇವರು ಎಲ್ಲ ಕರ್ಮಗಳನ್ನು ಮಾಡುವಾಗಲೂ ಪಶುಗಳಂತೆ ಭಯಂಕರರಾಗುತ್ತಾರೆ. ಎಲೈ ಭುವನೇಶ್ವರನೇ, ನೀನು ಈ ಅಸುರರನ್ನು ಸಂಹರಿಸುವಿ ಎಂದು ಹೇಳಿದರು. ದೇವತೆಗಳಿಗೆ ಹಿತವನ್ನು ಮಾಡುವ ಇಚ್ಛೆಯಿಂದ ಶಿವನು ಹಾಗೆಯೇ ಆಗಲಿ ಎಂದು ಹೇಳಿ ಸ್ಥಾಣುವಿನಂತೆ (ಮರದ ಬುಡದಂತೆ) ಅಚಲನಾಗಿ ನಿಂತು, ಒಂದು ಸಹಸ್ರವರ್ಷಗಳ ಕಾಲ ತಪಸ್ಸನ್ನು ಆಚರಿಸಿದನು. ಅಂತರಿಕ್ಷದಲ್ಲಿ ಆ ಮೂರು ಪುರಗಳು ಒಟ್ಟಿಗೆ ಸೇರಿದಾಗ ಮೂರು ಅಲುಗುಗಳನ್ನು ಮೂರು ಶಿಲ್ಯಗಳನ್ನು ಹೊಂದಿದ್ದ ಆ ಬಾಣದಿಂದ ಅವನು ಅವುಗಳನ್ನು ಭೇದಿಸಿದನು.

ಪುರಾಣಿ ನ ಚ ತಂ ಶೇಕುರ್ದಾನವಾಃ ಪ್ರತಿವೀಕ್ಷಿತುಮ್ ।
ಶರಂ ಕಾಲಾಗ್ನಿಸಂಯುಕ್ತಂ ವಿಷ್ಣುಸೋಮಸಮಾಯುತಮ್ ॥ ೫೮ ॥

ಕಾಲಾಗ್ನಿ ಸನ್ನಿಧಾನಯುಕ್ತವಾದ, ವಿಷ್ಣು ಮತ್ತು ಚಂದ್ರನ ಸನ್ನಿಧಾನಯುಕ್ತವಾದ ಆ ಬಾಣವನ್ನು ನೋಡಲು ದಾನವರು ಶಕ್ತರಾಗಲಿಲ್ಲ.

ಬಾಲಮಂಕಗತಂ ಕೃತ್ವಾ ಸ್ವಯಂ ಪಂಚಶಿಖಂ ಪುನಃ ।
ಉಮಾ ಜಿಜ್ಞಾಸಮಾನಾ ವೈ ಕೋಽಯಮಿತ್ಯಬ್ರವೀತ್ ಸುರಾನ್ ॥೫೯॥

ಶಿವನು ತ್ರಿಪುರಗಳನ್ನು ಧರಿಸಿದಾಗ ಪಾರ್ವತಿದೇವಿಯು ಅವನನ್ನು ನೋಡಲು ಬಾಲರೂಪವನ್ನು ಧರಿಸಿದ ಪಂಚಶಿರವುಳ್ಳ ಅವನ ಇನ್ನೊಂದು ರೂಪವನ್ನು ತನ್ನ ತೊಡೆಯ ಮೇಲೆ ಧರಿಸಿ, ಅಲ್ಲಿಗೆ ಬಂದು ದೇವತೆಗಳ ಜ್ಞಾನವನ್ನು ಪರೀಕ್ಷಿಸುವ ದೃಷ್ಟಿಯಿಂದ ದೇವತೆಗಳನ್ನು ಕುರಿತು- 'ಇವನು ಯಾರು?' ಎಂದು ಕೇಳಿದಳು.

ಅಸೂಯತಶ್ಚ ಶಕ್ರಸ್ಯ ವಜ್ರೇಣ ಪ್ರಹರಿಷ್ಯತಃ ।
ಬಾಹುಂ ಸವಜ್ರಂ ಶಕ್ರಸ್ಯ ಕ್ರುದ್ಧಸ್ಯಾಸ್ತಂಭಯತ್ ಪ್ರಭುಃ ।
ಸ ಏಷ ಭಗವಾನ್ ದೇವಃ ಸರ್ವಲೋಕೇಶ್ವರಃ ಪ್ರಭುಃ ॥ ೬೦ ॥

ತ್ರಿಪುರಾಸುರರ ಸಂಹಾರವನ್ನು ಮಾಡಿದಾಗ ಅಸೂಯೆಯನ್ನು ಹೊಂದಿದ ಇಂದ್ರನು ವಜ್ರದಿಂದ ಶಿವನಿಗೆ ಪ್ರಹಾರವನ್ನು ಮಾಡಲು ಉದ್ಯುಕ್ತನಾದಾಗ, ಕ್ರುದ್ಧನೂ, ಪ್ರಭುವೂ ಆದ ಶಿವನು ಇಂದ್ರನ ವಜ್ರಸಹಿತವಾದ ಬಾಹುವನ್ನು ಸ್ತಂಭನಗೊಳಿಸಿದನು. ಅಂತಹ ಇವನು ಸುರಲೋಕೇಶ್ವರನೂ, ಪ್ರಭುವೂ ಆದ ಪೂಜ್ಯನಾದ ದೇವನು.

ನ ಸಂಬುಬುಧಿರೇ ಚೈನಂ ದೇವಾಸ್ತಂ ಭುವನೇಶ್ವರಮ್ ।
ಸಪ್ರಜಾಪತಯಃ ಸರ್ವೇ ಬಾಲಾರ್ಕಸದೃಶಪ್ರಭಮ್ ॥ ೬೧ ॥

ಪ್ರಜಾಪತಿಗಳಿಂದ ಸಹಿತರಾದ ಎಲ್ಲ ದೇವತೆಗಳು ಬಾಲಸೂರ್ಯನ ಕಾಂತಿಯನ್ನು ಹೊಂದಿದ ಭುವನೇಶ್ವರನಾದ ಅವನನ್ನು ನೋಡಿ ಅವನು ಯಾರೆಂದು ತಿಳಿಯಲಿಲ್ಲ.

ಅಥಾಭ್ಯೇತ್ಯ ತತೋ ಬ್ರಹ್ಮಾ ದೃಷ್ಟ್ವಾ ಚ ಸ ಮಹೇಶ್ವರಮ್ ।
ಅಯಂ ಶ್ರೇಷ್ಠ ಇತಿ ಜ್ಞಾತ್ವಾ ವವಂದೇ ತಂ ಪಿತಾಮಹಃ ॥ ೬೨ ॥

ಆಗ ಬ್ರಹ್ಮದೇವನು ಬಂದು ಮಹೇಶ್ವರನನ್ನು ನೋಡಿ, ಇವನು ಶ್ರೇಷ್ಠನಾದವನು ಎಂದು ತಿಳಿದು ಅವನಿಗೆ ನಮಸ್ಕಾರವನ್ನು ಮಾಡಿದನು.

ತ್ವಂ ಯಜ್ಞೋ ಭುವನಸ್ಯಾಸ್ಯತ್ವಂ ಗತಿಸ್ತ್ವಂ ಪರಾಯಣಮ್ ।
ತ್ವಂ ಭವಸ್ತ್ವಂ ಮಹಾದೇವಸ್ತ್ವಂ ಧಾಮ ಪರಮಂ ಪದಮ್ ॥ ೬೩ ॥

ಬ್ರಹ್ಮಾ– ನೀನೇ ಯಜ್ಞನಾಮಕನಾದವನು, ಈ ಲೋಕಕ್ಕೆ ನೀನೇ ಗತಿಯಾದವನು ಮತ್ತು ಶ್ರೇಷ್ಠವಾದ ಆಶ್ರಯನಾದವನು. ನೀನು ಭವ, ಮಹಾದೇವ, ಆಶ್ರಯನಾದವನು, ಪರಮಪ್ರಾಪ್ಯನಾದವನು. ನೀನು ಸ್ಥಾವರ-ಜಂಗಮಾತ್ಮಕವಾದ ಈ ಜಗತ್ತೆಲ್ಲವನ್ನೂ ವ್ಯಾಪಿಸಿದ್ದೀಯೆ. ಪೂಜ್ಯನೇ, ಭೂತಭವ್ಯಪ್ರಭುವೇ, ಲೋಕನಾಥನೇ, ಜಗತ್ಪತಿಯೇ, ನಿನ್ನ ಕ್ರೋಧದಿಂದ ಪೀಡಿತನಾದ ಇಂದ್ರನ ಮೇಲೆ ಅನುಗ್ರಹವನ್ನು ಮಾಡು.

ವ್ಯಾಸಃ

ಪದ್ಮಯೋನಿವಚಃ ಶ್ರುತ್ವಾತತಃ ಪ್ರೀತೋ ಮಹೇಶ್ವರಃ ।
ಪ್ರಸಾದಾಭಿಮುಖೋ ಭೂತ್ವಾ ಮಂದಹಾಸಮಥಾಕರೋತ್ ॥ ೬೪ ॥

ವ್ಯಾಸ– ಬ್ರಹ್ಮದೇವರ ಈ ಮಾತುಗಳನ್ನು ಕೇಳಿ ಸಂತೋಷದಿಂದ ಮಹೇಶ್ವರನು ಪ್ರಸಾದಾಭಿಮುಖನಾಗಿ ಮಂದಹಾಸವನ್ನು ಬೀರಿದನು.

ತತಃ ಪ್ರಸಾದಯಾಮಾಸುರುಮಾಂ ರುದ್ರಂ ಚ ತೇ ಸುರಾಃ ।
ಅಭವಚ್ಚ ಪುನರ್ಬಾಹುರ್ಯಥಾಪ್ರಕೃತಿ ವಜ್ರಿಣಃ ॥ ೬೫ ॥

ಆಗ ದೇವತೆಗಳು ಪಾರ್ವತಿಯನ್ನು ಮತ್ತು ರುದ್ರನನ್ನು ಪ್ರಸನ್ನಗೊಳಿಸಿದರು. ಇಂದ್ರನ ಬಾಹುವು ಮೊದಲಿನಂತೆಯೇ ಆಯಿತು.

ತೇಷಾಂ ಪ್ರಸನ್ನೋ ಭಗವಾನ್ ಸಪತ್ನೀಕೋ ವೃಷಧ್ವಜಃ ।
ದೇವಾನಾಂ ತ್ರಿದಶಶ್ರೇಷ್ಠೋ ದಕ್ಷಯಜ್ಞವಿನಾಶನಃ ॥ ೬೬ ॥

ತ್ರಿದಶಶ್ರೇಷ್ಠನೂ, ದಕ್ಷಯಜ್ಞವಿನಾಶಕನೂ, ವೃಷಧ್ವಜನೂ ಆದ ಶಿವನು ಪತ್ನೀ ಸಹಿತನಾಗಿ ಅವರಿಗೆ ಪ್ರಸನ್ನನಾದನು.

ಸ ವೈ ರುದ್ರಃ ಸ ಚ ಶಿವಃ ಸೋಽಗ್ನಿಃ ಶರ್ವಃ ಸ ಸರ್ವವಿತ್ ।
ಸ ಚೇಂದ್ರಶ್ಚೈವ ವಾಯುಶ್ಚ ಸೋಽಶ್ವಿನೌ ಸ ಚ ವಿದ್ಯುತಃ ॥ ೬೭ ॥

ಅವನೇ ರುದ್ರ, ಅವನೇ ಶಿವ, ಅವನೇ ಅಗ್ನಿ, ಅವನೇ ಶರ್ವ, ಅವನೇ ಇಂದ್ರ, ಅವನೇ ವಾಯು, ಅವನೇ ಅಶ್ವಿನಿಗಳು, ಅವನೇ ವಿದ್ಯುತ್ತುಗಳು.

ಸ ಭವಃ ಸ ಚ ಪರ್ಜನ್ಯೋ ಮಹಾದೇವಃ ಸ ಚಾನಘಃ ।
ಸ ಚಂದ್ರಮಾಃ ಸ ಚೇಶಾನಃ ಸ ಸೂರ್ಯೋ ವರುಣಶ್ಚ ಸಃ ॥ ೬೮ ॥

ಅವನು ಭವ, ಅವನು ಪರ್ಜನ್ಯ, ಮಹಾದೇವ, ಅವನು ಅನಘ, ಅವನು ಚಂದ್ರ, ಅವನು ಈಶಾನ, ಅವನು ಸೂರ್ಯ, ಅವನು ವರುಣ.

ಸ ಕಾಲಃ ಸೋಽಂತಕೋ ಮೃತ್ಯುಃ ಸ ಯಮೋ ರಾತ್ರ್ಯಹಾನಿ ಚ ।
ಮಾಸಾರ್ಧಮಾಸಾ ಋತವಃ ಸಂಧ್ಯೇ ಸಂವತ್ಸರಶ್ಚ ಸಃ ॥ ೬೯ ॥

ಅವನು ಕಾಲ, ಅವನು ಅಂತಕ, ಅವನು ಮೃತ್ಯು, ಅವನು ಹಗಲು-ರಾತ್ರಿಗಳು, ಮಾಸಾರ್ಧಮಾಸಗಳು, ಋತುಗಳು, ಸಂಧ್ಯಾಕಾಲಗಳು ಮತ್ತು ಸಂವತ್ಸರ.

ಸ ಚ ಧಾತಾ ವಿಧಾತಾ ಚ ವಿಶ್ವಾತ್ಮಾ ವಿಶ್ವಕರ್ಮಕೃತ್ ।
ಸರ್ವಾಸಾಂ ದೇವತಾನಾಂ ಚ ಧಾರಯತ್ಯವಪೂರ್ವವಪುಃ ॥ ೭೦ ॥

ಅವನು ಧಾತ, ಅವನೇ ವಿಧಾತ, ಅವನು ವಿಶ್ವಾತ್ಮ, ಅವನು ಎಲ್ಲ ಕರ್ಮಗಳನ್ನು ಮಾಡುವವನು, ಪ್ರಾಕೃತಶರೀರ ರಹಿತನಾಗಿ ಎಲ್ಲ ದೇವತೆಗಳ ಶರೀರವನ್ನು ಧರಿಸಿದ್ದಾನೆ (ಪ್ರಾಕೃತ ಶರೀರ ರಹಿತನಾಗಿ ಎಲ್ಲ ದೇವತೆಗಳಂತಹ ಅಪ್ರಾಕೃತ ಶರೀರವನ್ನು ಧರಿಸಿದ್ದಾನೆ).

ಇಲ್ಲಿ ರುದ್ರ, ಶಿವ ಮೊದಲಾದ ಎಲ್ಲ ನಾಮಗಳಿಂದ ಹಿಂದೆ ತಿಳಿಸಿದಂತೆ ರುದ್ರಾಂತರ್ಯಾಮಿಯಾದ ನಾರಾಯಣನೇ ವಾಚ್ಯನಾದವನು ಎಂದು ಅರ್ಥ. ಇದು ಕೇವಲ ರುದ್ರಸ್ತೋತ್ರವಲ್ಲದೆ ರುದ್ರಾಂತರ್ಯಾಮಿಯಾದ ನಾರಾಯಣನ ಸ್ತೋತ್ರವೂ ಆಗಿದೆ (ಲಕ್ಷಾಲಂಕಾರ).

ಸರ್ವೈರ್ದೇವೈಃ ಸ್ತುತೋ ದೇವಃ ಸೈಕಧಾ ಬಹುಧಾ ಚ ಸಃ ।
ಶತಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ॥ ೭೧ ॥

ದೇವನಾದ ಅವನು ಎಲ್ಲ ದೇವತೆಗಳಿಂದಲೂ ಸ್ತುತನಾದವನು. ಅವನು ಒಂದು ರೀತಿಯಲ್ಲಿ, ಅನೇಕ ರೀತಿಯಲ್ಲಿ, ನೂರು ರೀತಿಯಲ್ಲಿ, ಸಹಸ್ರ ರೀತಿಯಲ್ಲಿ, ಲಕ್ಷ ರೀತಿಯಲ್ಲಿ ಇರುವವನು (ಅಂತಹ ಅನೇಕ ರೂಪಗಳನ್ನು ಧರಿಸಿದವನು).

ಈದೃಶಃ ಸ ಮಹಾದೇವೋ ಭೂಯಶ್ಚ ಭಗವಾನಜಃ ।
ನ ಹಿ ಸರ್ವೇ ಮಯಾ ಶಕ್ಯಾ ವಕ್ತುಂ ಭಗವತೋ ಗುಣಾಃ ॥ ೭೨ ॥

ಮಹಾದೇವನೂ ಭಗವಂತನೂ ಆದ ಅಜನು ಇಂತಹವನು ಮತ್ತು ಇದಕ್ಕಿಂತಲೂ ಹೆಚ್ಚಿನ ಗುಣವುಳ್ಳವನು. ಎಲೈ ಪಾಂಡುನಂದನನೇ, ನಾನು ಸಹಸ್ರವರ್ಷಗಳ ಕಾಲ ಸತತವಾಗಿ ಹೇಳಿದರೂ ಅವನ ಎಲ್ಲ ಗುಣಗಳನ್ನೂ ಹೇಳಲು ಸಾಧ್ಯವಿಲ್ಲ.

ಸರ್ವೈರ್ಗ್ರಹೈರ್ಗೃಹೀತಾನ್ ವೈ ಸರ್ವಪಾಪ ಪ್ರತಾಪಿತಾನ್ ।
ಸ ಮೋಚಯತಿ ಸುಪ್ರೀತಃ ಶರಣ್ಯಃ ಶರಣಾಗತಾನ್ ॥ ೭೩ ॥

ಸರ್ವಗ್ರಹಗಳಿಂದಲೂ ಪೀಡಿತರಾಗಿ, ಸರ್ವಪಾಪಗಳಿಂದ ತಪ್ತರಾಗಿ ಶರಣಾಗತರಾದ ಭಕ್ತರಿಗೆ ಅವನು ಸುಪ್ರೀತನಾಗಿ ಅವರನ್ನು ಎಲ್ಲ ದುಃಖಗಳಿಂದಲೂ ಮತ್ತು ಪಾಪಗಳಿಂದಲೂ ವಿಮೋಚನೆಗೊಳಿಸುತ್ತಾನೆ.

ಆಯುರಾರೋಗ್ಯಮೈಶ್ವರ್ಯಂ ವಿತ್ತಂ ಕಾಮಾಂಶ್ಚ ಪುಷ್ಕಳಾನ್ ।
ಸ ದದಾತಿ ಮನುಷ್ಯೇಭ್ಯಃ ಸ ಚೈವಾಕ್ಷಿಪತೇ ಪುನಃ ॥ ೭೪ ॥

ಮನುಷ್ಯರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನೂ, ಧನವನ್ನೂ, ಪುಷ್ಕಳವಾದ ಬಯಸಿದ ವಸ್ತುವನ್ನೂ ಅವನೇ ಕೊಡುತ್ತಾನೆ ಪುನಃ ಅವನೇ ನಾಶಗೊಳಿಸುತ್ತಾನೆ.

ಸೇಂದ್ರಾದಿಷು ಚ ದೇವೇಷು ತಸ್ಯ ಚೈಶ್ವರ್ಯಮುಚ್ಯತೇ ।
ಸ ಚೈವ ವ್ಯಾಪೃತೋ ಲೋಕೇ ಮನುಷ್ಯಾಣಾಂ ಶುಭಾಶುಭೇ ॥ ೭೫ ॥

ಇಂದ್ರಾದಿ ದೇವತೆಗಳಲ್ಲಿರುವ ಐಶ್ವರ್ಯವೆಲ್ಲವೂ ಅವನದೇ. ಅವನು ಮನುಷ್ಯರು ಮಾಡಿದ ಕರ್ಮಗಳಿಗೆ ಶುಭಾಶುಭ ಫಲಗಳನ್ನು ಕೊಡುವುದರಲ್ಲಿ ಉದ್ಯುಕ್ತನಾಗಿರುತ್ತಾನೆ.

ಐಶ್ವರ್ಯಾಚ್ಚೈವ ಕಾಮಾನಾಮೀಶ್ವರಃ ಪುನರುಚ್ಯತೇ ।
ಮಹೇಶ್ವರಶ್ಚ ಭೂತಾನಾಂ ಮಹತಾಮೀಶ್ವರಶ್ಚ ಸಃ ॥ ೭೬ ॥

ಎಲ್ಲ ಕಾಮಗಳನ್ನು ಕೊಡಲು ಸಮರ್ಥನಾದ್ದರಿಂದ ಅವನನ್ನು ಈಶ್ವರನೆಂದು ಕರೆಯುತ್ತಾರೆ. ಮಹಾತ್ಮರಾದ ಪುರುಷರಿಗೆ ಒಡೆಯನಾದ ಕಾರಣನಿಂದ ಮಹೇಶ್ವರನೆಂದು ಕರೆಯುತ್ತಾರೆ.

ಬಹುಭಿರ್ಬಹುಧಾ ರೂಪೈರ್ವಿಶ್ವಂ ವ್ಯಾಪ್ನೋತಿ ವೈ ಜಗತ್ ।
ಅಸ್ಯ ದೇವಸ್ಯ ಯದ್ ವಕ್ತ್ರಂ ಸಮುದ್ರೇ ತದತಿಷ್ಠತ ॥ ೭೭ ॥

ತಸ್ಯ ದೇವಸ್ಯ ಯದ್‌ವಕ್ತ್ರಂ ಸಮುದ್ರೇ ತದಧಿಷ್ಠಿತಮ್ ।
ವಡವಾಮುಖೇತಿ ವಿಖ್ಯಾತಂ ಪಿಬತ್ತೋಯಮಯ ಹವಿಃ ॥ ೭೮॥

ಅನೇಕ ಪ್ರಕಾರದಿಂದ ತಿಳಿದ, ಅನೇಕ ರೂಪಗಳಿಂದ ಅವನು ಈ ಸಮಸ್ತ ಜಗತ್ತನ್ನು ವ್ಯಾಪಿಸುತ್ತಾನೆ. ಈ ದೇವನ ಒಂದು ಮುಖವು ಸಮುದ್ರದಲ್ಲಿದೆ. ಅದು ವಡವಾಮುಖವೆಂದು ಪ್ರಸಿದ್ಧವಾಗಿದೆ. ಅದು ಜಲಮಯವಾದ ಹವಿಸ್ಸನ್ನು ಯಾವಾಗಲೂ ಪಾನ ಮಾಡುತ್ತಿರುತ್ತದೆ.

ಏಷ ಚೈವ ಶ್ಮಶಾನೇಷು ದೇವೋ ವಸತಿ ನಿತ್ಯಶಃ ।
ಯಜಂತ್ಯೇನಂ ಜನಾಸ್ತತ್ರ ವೀರಸ್ಥಾನ ಇತೀಶ್ವರಮ್ ॥ ೭೯ ॥

ಈ ದೇವನೇ ಯಾವಾಗಲೂ ಸ್ಮಶಾನದಲ್ಲಿ ವಾಸಿಸುತ್ತಾನೆ. ಆ ವೀರಸ್ಥಾನದಲ್ಲಿ ಈಶ್ವರನಾದ ಇವನನ್ನು ಜನರು ಪೂಜಿಸುತ್ತಾರೆ.

ಅಸ್ಯ ದೀಪ್ತಾನಿ ರೂಪಾಣಿ ಘೋರಾಣಿ ಚ ಬಹೂನಿ ಚ ।
ಲೋಕೇ ಯಾನ್ಯಸ್ಯ ಕುರ್ವಂತಿ ಮನುಷ್ಯಾಃ ಪ್ರವದಂತಿ ಚ ॥ ೮೦ ॥

ಲೋಕದಲ್ಲಿ ಅವನ ಪ್ರಕಾಶಮಾನವಾದ, ಘೋರವಾದ ಅನೇಕ ರೂಪಗಳಿವೆ. ಅವನ್ನು ಮನುಷ್ಯರು ಪೂಜಿಸುತ್ತಾರೆ ಮತ್ತು ಪ್ರವಚನವನ್ನು ಮಾಡಿ ಅವುಗಳ ಮಹಿಮೆಯನ್ನು ಹೇಳುತ್ತಾರೆ.

ನಾಮಧೇಯಾನಿ ಲೋಕೇಷು ಬಹೂನ್ಯತ್ರ ಯಥಾರ್ಥವತ್ ।
ನಿರುಚ್ಯಂತೇ ಮಹತ್ತಾ ಚ್ಚ ವಿಭುತ್ವಾತ್ ಕರ್ಮಭಿಸ್ತಥಾ ॥ ೮೧ ॥

ಅವನಿಗೆ ಲೋಕಗಳಲ್ಲಿ ಅನೇಕ ನಾಮಗಳಿವೆ. ಎಲ್ಲವೂ ಅನರ್ಥಕವಾದವು. ಅವನು ಮಹಾತ್ಮನಾದುದರಿಂದಲೂ, ವಿಭುವಾದುದರಿಂದಲೂ, ಎಲ್ಲ ಕರ್ಮಗಳನ್ನು ಮಾಡುವುದರಿಂದಲೂ ಎಲ್ಲ ಶಬ್ದಗಳೂ ಅವನಲ್ಲಿಯೇ ನಿರ್ವಚನ ಮಾಡಲ್ಪಡುತ್ತವೆ.

ವೇದೇ ಚಾಸ್ಯ ಸಮಾಮ್ನಾತಂ ಶತರುದ್ರೀಯಮುತ್ತಮಮ್ ।
ನಾಮ್ನಾ ಚಾನಂತರುದ್ರೇತಿ ಉಪಸ್ಥಾನಂ ಮಹಾತ್ಮನಃ ॥ ೮೨ ॥

ವೇದದಲ್ಲಿಯೂ, ಶತರುದ್ರೀಯ ಮತ್ತು ಅನಂತರುದ್ರ ಎಂಬ ಈ ಮಹಾತ್ಮನ ಶ್ರೇಷ್ಠವಾದ ಸ್ತೋತ್ರವು ಹೇಳಲ್ಪಟ್ಟಿದೆ.

ಸ ಕಾಮಾನಾಂ ಪ್ರಭುರ್ದೇವೋ ಯೇ ದಿವ್ಯಾ ಯೇ ಚ ಮಾನುಷಾಃ ।
ಸ ವಿಭುಃ ಸ ಪ್ರಭುರ್ದೇವೋ ವಿಶ್ವಂ ವ್ಯಾಪ್ನುವತೇ ಮಹತ್ ॥ ೮೩ ॥

ದೇವಲೋಕದಲ್ಲಿ ಮತ್ತು ಮನುಷ್ಯಲೋಕದಲ್ಲಿ ಯಾವ ಶ್ರೇಷ್ಠವಾಗಿ ಕಾಣುವ ವಸ್ತುಗಳಿವೆಯೋ ಅವೆಲ್ಲದಕ್ಕೂ ದೇವನಾದ ಅವನು ಒಡೆಯನು. ಅವನು ವ್ಯಾಪ್ತನಾದವನು, ಸಮರ್ಥನಾದವನು, ಶ್ರೇಷ್ಠನಾದವನು, ವಿಶ್ವವ್ಯಾಪಿಯಾದವನು.

ಜ್ಯೇಷ್ಠಂ ಭೂತಂ ವದಂತ್ಯೇನಂ ಬ್ರಾಹ್ಮಣಾ ಮುನಯಸ್ತಥಾ ।
ಪ್ರಥಮೋ ಹ್ಯೇಷ ದೇವಾನಾಂ ಮುಖಾದಸ್ಯಾನಲೋಭವತ್ ॥ ೮೪ ॥

ಬ್ರಾಹ್ಮಣರು ಮತ್ತು ಮುನಿಗಳು ಅವನನ್ನು ಜ್ಯೇಷ್ಠನಾದ ಚೇತನನೆಂದು (ಅನಾದಿ ಕಾಲದಿಂದಿರುವ ಚೇತನನೆಂದು) ಹೇಳುತ್ತಾರೆ. ಅವನು ದೇವತೆಗಳಲ್ಲಿ ಪ್ರಥಮನಾದವನು (ಶ್ರೇಷ್ಠನಾದವನು). ಅವನ ಮುಖದಿಂದ ಅಗ್ನಿಯುಂಟಾಯಿತು (ಇವೆಲ್ಲ ಪುರುಷಸೂಕ್ತದಲ್ಲಿ ಹೇಳಿದ ವಿಷ್ಣುಮಹಿಮೆಯಾದ್ದರಿಂದ ಈ ಶತರುದ್ರಿಯವೂ ಸಹ ವಿಷ್ಣು ಮಹಿಮೆ ಎಂದು ತಿಳಿಯಬೇಕು).

ಸರ್ವಥಾ ಯತ್ ಪಶೂನ್ ಪಾತಿ ತೈಶ್ಚ ಯದ್ ರಮತೇ ಪುನಃ ।
ತೇಷಾಮಧಿಪತಿರ್ಯಚ್ಚ ತಸ್ಮಾತ್ ಪಶುಪತಿಃ ಸ್ಮೃತಃ ॥ ೮೫ ॥

ಎಲ್ಲ ಪಶುಗಳನ್ನೂ (ಪ್ರಜೆಗಳನ್ನೂ) ಸರ್ವಥಾ ರಕ್ಷಣೆ ಮಾಡುವುದರಿಂದ, ಅವರ ಜೊತೆಯಲ್ಲಿ ಸಂತೋಷಪಡುವುದರಿಂದ ಮತ್ತು ಅವರಿಗೆ ಅಧಿಪತಿಯಾದುದರಿಂದಲೂ ಅವನನ್ನು ಪಶುಪತಿ ಎಂದು ಕರೆಯುತ್ತಾರೆ.

ನಿತ್ಯೇನ ಬ್ರಹ್ಮಚರ್ಯೇಣ ಲಿಂಗಮಸ್ಯ ಯದಾಸ್ಥಿತಮ್ ।
ಮಹಯಂತಿ ಚ ಲೋಕಾಶ್ಚ ಮಹೇಶ್ವರ ಇತಿ ಸ್ಮೃತಃ ॥ ೮೬ ॥

ನಿತ್ಯವಾದ ಬ್ರಹ್ಮಚರ್ಯದಿಂದ ಅವನ ಲಿಂಗವು ಯಾವಾಗಲೂ ಸ್ಥಿತವಾಗಿದೆ. ಅದನ್ನು ಜನರು ಪೂಜಿಸುತ್ತಾರೆ. ಆದ್ದರಿಂದ ಅವನಿಗೆ ಮಹೇಶ್ವರ ಎಂದು ಹೆಸರು.

ಋಷಯಶ್ಚೈವ ದೇವಾಶ್ಚ ಗಂಧರ್ವಾಪ್ಸರಸಸ್ತಥಾ ।
ಲಿಂಗಮಸ್ಯಾರ್ಚಯಂತಿ ಸ್ಮ ತಚ್ಚಾಪ್ಯೂರ್ಧ್ವಂ ಸಮಾಸ್ಥಿತಮ್ ॥ ೮೭ ॥

ಋಷಿಗಳೂ, ದೇವತೆಗಳೂ, ಗಂಧರ್ವರೂ ಮತ್ತು ಅಪ್ಸರೆಯರು ಅವನ ಲಿಂಗವನ್ನು ಪೂಜಿಸುತ್ತಾರೆ. ಅದಾದರೂ ಊರ್ಧ್ವಮುಖವಾಗಿ ಸ್ಥಿತವಾಗಿ ಉತ್ಥಿತವಾಗಿದೆ.

ಪೂಜ್ಯಮಾನೇ ತತಸ್ತಸ್ಮಿನ್ ಮೋದತೇ ಸ ಮಹೇಶ್ವರಃ ।
ಸುಖೀ ಪ್ರೀತಶ್ಚ ಭವತಿ ಪ್ರಹೃಷ್ಟಶ್ಚೈವ ಶಂಕರಃ ॥ ೮೮ ॥

ತನ್ನ ಲಿಂಗವನ್ನು ಪೂಜಿಸಿದರೆ ಮಹೇಶ್ವರನು ಸಂತೋಷಪಡುತ್ತಾನೆ. ಶಂಕರನಾದ ಅವನು ಸುಖವನ್ನು ಹೊಂದಿ ಸಂತುಷ್ಟನಾಗುತ್ತಾನೆ.

ಯದಸ್ಯ ಬಹುಧಾ ರೂಪಂ ಭೂತಭವ್ಯಭವತ್ಸ್ಥಿತಮ್ ।
ಸ್ಥಾವರಂ ಜಂಗಮಂ ಚೈವ ಬಹುರೂಪಸ್ತತಃ ಸ್ಮೃತಃ ॥ ೮೯ ॥

ಭೂತ-ಭವ್ಯ-ಭವಿಷ್ಯತ್ಕಾಲಗಳಲ್ಲಿ, ಸ್ಥಾವರ-ಜಂಗಮಗಳಲ್ಲಿ ಅವನು ಬಹು ವಿಧವಾದ ರೂಪಗಳಲ್ಲಿ ಇರುವುದರಿಂದ ಅವನನ್ನು ಬಹುರೂಪನೆಂದು ಕರೆಯುತ್ತಾರೆ.

ಏಕಾಕ್ಷೋ ಜಾಜ್ವಲನಾಸ್ತೇ ಸರ್ವತೋಕ್ಷಿಮಯೋಽಪಿ ವಾ ।
ಕ್ರೋಧಾದ್ಯಶ್ಚಾವಿಶಲ್ಲೋಕಾಂಸ್ತಸ್ಮಾಚ್ಚರ್ವ ಇತಿ ಸ್ಮೃತಃ ॥ ೯೦ ॥

ಅವನು ಎಲ್ಲ ಕಡೆಗಳಲ್ಲೂ ಚಕ್ಷುಸ್ಸನ್ನು ಹೊಂದಿದ್ದರೂ ಅವನ ಒಂದು ಚಕ್ಷುಸ್ಸು ಬಹಳ ಪ್ರಕಾಶವನ್ನು ಹೊಂದಿದೆ. ಅವನು ಕೋಪದಿಂದ ಜಗತ್ತನ್ನು ಪ್ರವೇಶಿಸುವುದರಿಂದ ಅವನನ್ನು ಶರ್ವನೆಂದು ಕರೆಯುತ್ತಾರೆ.

ಧೂಮ್ರಂ ರೂಪಂ ಚ ಯತ್ ತಸ್ಯ ಧೂರ್ಜಟಿಸ್ತೇನ ಉಚ್ಯತೇ ।
ವಿಶ್ವೇ ದೇವಾಶ್ಚ ಯತ್ ತಸ್ಮಿನ್ ವಿಶ್ವರೂಪಸ್ತತಃ ಸ್ಮೃತಃ ॥ ೯೧ ॥

ಅವನ ರೂಪವು ಹೊಗೆಯಿಂದ ಯುಕ್ತವಾದಂತೆ ಕಂಡುಬರುವುದರಿಂದ ಅವನನ್ನು ಧೂರ್ಜಟಿ ಎಂದು ಕರೆಯುತ್ತಾರೆ. ಎಲ್ಲ ದೇವತೆಗಳೂ ಅವನನ್ನು ಆಶ್ರಯಿಸಿರುವುದರಿಂದ ಅವನನ್ನು ವಿಶ್ವರೂಪ ಎಂದು ಕರೆಯುತ್ತಾರೆ.

ತಿಸ್ರೋ ದೇವೀರ್ಯದಾ ಚೈವ ಭಜತೇ ಭುವನೇಶ್ವರಃ ।
ದ್ಯಾಮಪಃ ಪೃಥಿವೀಂ ಚೈವ ತ್ರ್ಯಂಬಕಶ್ಚ ತತಃ ಸ್ಮೃತಃ ॥ ೯೨ ॥

ದ್ಯುಲೋಕ, ಜಲ ಮತ್ತು ಪೃಥಿವಿ ಇವುಗಳಿಗೆ ಅಭಿಮಾನಿಗಳಾದ ಮೂರು ದೇವಿಯರನ್ನು ಅವನು ಪ್ರೀತಿಯಿಂದ ನೋಡುವುದರಿಂದ ಅವನಿಗೆ ತ್ರ್ಯಂಬಕ ಎಂದು ಹೆಸರು.

ಸಮೇಧಯತಿ ಯನ್ನಿತ್ಯಂ ಸರ್ವಾರ್ಥಾನ್ ಸರ್ವಕರ್ಮಸು ।
ಶಿವಮಿಚ್ಛನ್ ಮನುಷ್ಯಾಣಾಂ ತಸ್ಮಾದೇಷ ಶಿವಃ ಸ್ಮೃತಃ ॥ ೯೩ ॥

ಎಲ್ಲ ಕರ್ಮಗಳನ್ನು ಅಭಿವೃದ್ಧಿಗೊಳಿಸಿ, ಯಾವಾಗಲೂ ಮನುಷ್ಯರಿಗೆ ಹಿತವನ್ನು ಬಯಸಿ, ಸರ್ವಾರ್ಥಗಳನ್ನು ಕೊಡುವುದರಿಂದ ಅವನಿಗೆ ಶಿವ ಎಂದು ಹೆಸರು.

ಸಹಸ್ರಾಕ್ಷೋऽಯುತಾಕ್ಷೋ ವಾ ಸರ್ವತೋऽಕ್ಷಿಮಯೋऽಪಿ ವಾ ।
ಯಚ್ಚ ವಿಶ್ವಂ ಮಹತ್ಯಾತಿ ಮಹಾದೇವಸ್ತತಃ ಸ್ಮೃತಃ ॥ ೯೪ ॥

ಅವನು ಸಹಸ್ರಾಕ್ಷನಾಗಲೀ ಅಥವಾ ಹತ್ತುಸಹಸ್ರ ನೇತ್ರನಾಗಲೀ ಅಥವಾ ಸರ್ವತ್ರ ಅಕ್ಷಿಮಯನಾಗಲೀ ಅವನು ವಿಶ್ವವನ್ನು ರಕ್ಷಣೆ ಮಾಡುವುದರಿಂದ ಅವನಿಗೆ ಮಹಾದೇವನೆಂದು ಹೆಸರು.

ದಹತ್ಯೂರ್ಧ್ವಂ ಸ್ಥಿತೋ ಯಚ್ಚ ಪ್ರಾಣೋತ್ಪತ್ತಿಸ್ಥಿತಶ್ಚ ಯತ್ ।
ಸ್ಥಿತಲಿಂಗಶ್ಚ ಯನ್ನಿತ್ಯಂ ತಸ್ಮಾತ್ ಸ್ಥಾಣುರಿತಿ ಸ್ಮೃತಃ ॥ ೯೫ ॥

ಊರ್ಧ್ವಮುಖವಾಗಿ ದಹಿಸುವುದರಿಂದ, ಪ್ರಾಣೋತ್ಪತ್ತಿಸ್ಥಿತಿಯಲ್ಲಿ ಪ್ರಸನ್ನನಾಗುವುದರಿಂದ ಅವನ ಲಿಂಗವು ನಿತ್ಯವೂ ಉತ್ಥಿತವಾಗಿರುವುದರಿಂದ ಅವನನ್ನು ಸ್ಥಾಣುವೆಂದು ಕರೆಯುತ್ತಾರೆ.

ವಿಷಮಸ್ಥಃ ಶರೀರೇಷು ಸಮೇಷ್ವ ಪ್ರಾಣೇನಾಮಿಹ ।
ಸ ವಾಯುರ್ವಿಷಮಸ್ಥೇಷು ಪ್ರಾಣಾಪಾನಶರೀರಿಷು ॥ ೯೬ ॥

ಅವನು ಪ್ರಾಣಿಗಳ ವಿಷಮವಾದ ಶರೀರದಲ್ಲಿಯೂ, ಸಮವಾದ ಶರೀರದಲ್ಲಿಯೂ ಇರುತ್ತಾನೆ. ಅವನು ವಿಷಮವಾದ ಶರೀರದಲ್ಲಿ ಪ್ರಾಣಾಪಾನ ಎಂಬ ವಾಯುರೂಪದಿಂದ ಇರುತ್ತಾನೆ.

ಪೂಜಯೇದ್ ವಿಗ್ರಹಂ ಯಸ್ತು ಲಿಂಗಂ ವಾऽಪಿ ಸಮರ್ಚಯೇತ್ ।
ಲಿಂಗಂ ಪೂಜಯತಾ ನಿತ್ಯಂ ಮಹತೀಂ ಶ್ರಿಯಮಶ್ನುತೇ ॥ ೯೭ ॥

ಅವನ ಮೂರ್ತಿಯನ್ನಾದರೂ, ಲಿಂಗವನ್ನಾದರೂ ಪೂಜಿಸಬೇಕು. ದೇಹವನ್ನು ಪೂಜಿಸುವವನು ಮಹಾಸಂಪತ್ತನ್ನು ಹೊಂದುತ್ತಾನೆ.

ಊರುಭ್ಯಾಮರ್ಧಮಾಗ್ನೇಯಂ ಸೋಮಾರ್ಧಂ ಚ ಶಿವಾ ತನುಃ ।
ಆತ್ಮನೋऽರ್ಧಂ ಚ ತಸ್ಯಾಗ್ನಿಃ ಸೋಮೋऽರ್ಧಂ ಪುನರುಚ್ಯತೇ ॥೯೮॥

ಅವನ ತೊಡೆಗಳಿಂದ ಕೆಳಗಿನ ಭಾಗವು ಅಗ್ನಿಸನ್ನಿಹಿತವಾಗಿದೆ. ಮೇಲಿನ ಭಾಗವು ಚಂದ್ರನಿಂದ ಸನ್ನಿಹಿತವಾಗಿದೆ. ಅವನ ದೇಹವು ಮಂಗಳಕರವಾದುದು. ಅವನ ದೇಹದ ಅರ್ಧಭಾಗವನ್ನು ಅಗ್ನಿ ಎಂದೂ, ಇನ್ನು ಅರ್ಧಭಾಗವನ್ನು ಚಂದ್ರನೆಂದೂ ಕರೆಯುತ್ತಾರೆ.

ತೈಜಸೀ ಮಹತೀ ದೀಪ್ತಾ ದೇವೇಭ್ಯಶ್ಚ ಶಿವಾ ತನುಃ ।
ಭಾಸ್ವತೀ ಮಾನುಷೇಷ್ವಸ್ಯ ತನುರ್ಘೋರಾಗ್ನಿರುಚ್ಯತೇ ॥ ೯೯ ॥

ಅವನ ದೀಪ್ತವಾದ ದೊಡ್ಡ ತೇಜಸ್ಸನ್ನು ಹೊಂದಿದ ಶರೀರವು ದೇವತೆಗಳಿಗೆ ಮಂಗಳಪ್ರದವಾಗುತ್ತದೆ. ಶಿವ ಎಂದು ಕರೆಯಲ್ಪಡುತ್ತದೆ. ಮನುಷ್ಯರ ವಿಷಯದಲ್ಲಿ ಪ್ರಕಾಶಮಾನವಾದ ಅವನ ಘೋರವಾದ ಶರೀರವು ಅಗ್ನಿ ಎಂದು ಕರೆಯಲ್ಪಡುತ್ತದೆ.

ಬ್ರಹ್ಮಚರ್ಯಂ ಚರತ್ಯೇಷ ಶಿವಾ ಯಾಸ್ಯ ತನುಸ್ತಯಾ ।
ಯಾಸ್ಯ ಘೋರತರಾ ಮೂರ್ತಿಃ ಸರ್ವಾನತ್ತಿ ತಯೇಶ್ವರಃ ॥೧೦೦॥

ಯನ್ನಿರ್ದಹತಿ ಯತ್ತೀಕ್ಷ್ಣೋ ಯದುಗ್ರೋ ಯತ್ ಪ್ರತಾಪವಾನ್ ।
ಮಾಂಸಶೋಣಿತಮಜ್ಜಾದೋ ಯತ್ ತತೋ ರುದ್ರ ಉಚ್ಯತೇ ॥೧೦೧॥

ಅವನ ಶಿವ ಎಂಬ ಶರೀರವು ಬ್ರಹ್ಮಚರ್ಯವನ್ನು ಆಚರಿಸುತ್ತದೆ. ಅವನ ಘೋರತರವಾದ ಶರೀರವು ಎಲ್ಲರನ್ನೂ ಸಂಹಾರ ಮಾಡುತ್ತದೆ. ಅವನು ಎಲ್ಲರನ್ನೂ ದಹಿಸುವುದರಿಂದ, ತೀಕ್ಷ್ಣನಾಗಿರುವುದರಿಂದ, ಉಗ್ರನಾಗಿರುವುದರಿಂದ, ಪ್ರತಾಪಶಾಲಿಯಾಗಿರುವುದರಿಂದ, ಮಾಂಸ-ಶೋಣಿತ-ಮಜ್ಜಗಳನ್ನು ಭಕ್ಷಿಸುವುದರಿಂದ ಅವನನ್ನು ರುದ್ರನೆಂದು ಕರೆಯುತ್ತಾರೆ.

ಏಷ ದೇವೋ ಮಹಾದೇವೋ ಯೋಽಸೌ ಪಾರ್ಥ ತವಾಗ್ರತಃ ।
ಸಂಗ್ರಾಮೇ ಶಾತ್ರವಾನ್ ನಿಘ್ನಂಸ್ತ್ವಯಾ ದೃಷ್ಟಃ ಪಿನಾಕಧೃಕ್ ॥ ೧೦೨ ॥

ಎಲೈ ಅರ್ಜುನನೇ, ನಿನ್ನ ಮುಂದೆ ಹೋಗುವ ಆ ಪುರುಷನು ದೇವನಾದ ಮಹಾದೇವ. ಅವನು ಪಿನಾಕಪಾಣಿಯಾಗಿ ಯುದ್ಧದಲ್ಲಿ ಶತ್ರುಗಳನ್ನು ಸಂಹಾರ ಮಾಡುವುದನ್ನು ನೀನು ನೋಡಿದ್ದೀಯೆ.

ಸಿಂಧುರಾಜವಧಾರ್ಥಾಯ ಪ್ರತಿಜ್ಞಾತೇ ತ್ವಯಾಽನಘ ।
ಕೃಷ್ಣೇನ ದರ್ಶಿತಃ ಸ್ವಪ್ನೇ ಯಸ್ತು ಶೈಲೇಂದ್ರ ಮೂರ್ಧನಿ ॥ ೧೦೩ ॥

ಎಲೈ ಅನಘನೇ, ನೀನು ಸೈಂಧವನ ವಧೆಯನ್ನು ಪ್ರತಿಜ್ಞೆ ಮಾಡಿದಾಗ ಕೃಷ್ಣನು ಸ್ವಪ್ನದಲ್ಲಿ ನಿನ್ನನ್ನು ಕರೆದುಕೊಂಡು ಹೋಗಿ ಪರ್ವತದ ಶಿಖರದಲ್ಲಿ ತೋರಿಸಿದ ವ್ಯಕ್ತಿಯು ಈತನೇ.

ಏಷ ವೈ ಭಗವಾನ್ ದೇವಃ ಸಂಗ್ರಾಮೇ ಯಾತಿ ತೇಽಗ್ರತಃ ।
ಯೇನ ದತ್ತಾನಿ ತೇಽಸ್ತ್ರಾಣಿ ಯೈಸ್ತ್ವಯಾ ದಾನವಾ ಹತಾಃ ॥ ೧೦೪ ॥

ಭಗವಂತನಾದ ಈ ದೇವನು ರಣರಂಗದಲ್ಲಿ ನಿನ್ನ ಮುಂಭಾಗದಲ್ಲಿ ನಡೆಯುತ್ತಾನೆ. ಅವನು ಕೊಟ್ಟ ಅಸ್ತ್ರಗಳಿಂದಲೇ ನೀನು ದಾನವರನ್ನು ಸಂಹರಿಸಿದೆ.

ಧನ್ಯಂ ಯಶಸ್ಯಮಾಯುಷ್ಯಂ ಪುಣ್ಯಂ ವೇದೈಶ್ಚ ಸಂಮಿತಮ್ ।
ದೇವದೇವಸ್ಯ ತೇ ಪಾರ್ಥ ವ್ಯಾಖ್ಯಾತಂ ಶತರುದ್ರಿಯಮ್ ॥ ೧೦೫ ॥

ಎಲೈ ಪಾರ್ಥನೇ, ವೇದಗಳಲ್ಲಿಯೂ ಹೊಗಳಲ್ಪಟ್ಟ ದೇವದೇವನಾದ ಮಹದೇವನಿಗೆ ಸಂಬಂಧಿಸಿದ ಈ ಶತರುದ್ರೀಯ ಸ್ತೋತ್ರವು ಧನಪ್ರದವಾದುದು, ಕೀರ್ತಿಪ್ರದವಾದುದು, ಪುಣ್ಯಪ್ರದವಾದುದು.

ಸರ್ವಾರ್ಥಸಾಧಕಂ ಪುಣ್ಯಂ ಸರ್ವಕಿಲ್ಬಿಷನಾಶನಮ್ ।
ಸರ್ವಪಾಪಪ್ರಶಮನಂ ಸರ್ವದುಃಖಭಯಾಪಹಮ್ ॥ ೧೦೬ ॥

ಸರ್ವಾರ್ಥಸಾಧಕವಾದುದು, ಪವಿತ್ರವಾದುದು, ಸರ್ವದೋಷವಿನಾಶಕವಾದುದು. ಸರ್ವದುಃಖ, ಭಯಪರಿಹಾರಕವಾದುದು, ಸರ್ವಪಾಪಪ್ರಶಮನ ರೂಪವಾದುದು.

ಚತುರ್ವಿಧಮಿದಂ ಸ್ತೋತ್ರಂ ಯಃ ಶೃಣೋತಿ ನರಃ ಸದಾ ।
ವಿಜಿತ್ಯ ಸರ್ವಾನ್ ಶತ್ರೂನ್ ಸ ರುದ್ರಲೋಕೇ ಮಹೀಯತೇ ॥೧೦೭॥

ಚತುರ್ವಿಧವಾದ ಈ ಸ್ತೋತ್ರವನ್ನು ಯಾವನು ಕೇಳುತ್ತಾನೆಯೋ ಅಂತಹ ಮನುಷ್ಯನು ಎಲ್ಲ ಶತ್ರುವನ್ನೂ ಜಯಿಸಿ ರುದ್ರಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ಚರಿತಂ ಮಹಾತ್ಮನೋ ದಿವ್ಯಂ ಸಾಂಗ್ರಾಮಿಕಮಿದಂ ಶುಭಮ್ ।
ಪಠನ್ ವೈ ಶತರುದ್ರೀಯಂ ಶೃಣ್ವಂಶ್ಚ ಸತತೋತ್ಥಿತಃ ॥ ೧೦೮ ॥

ಭಕ್ತೋ ವಿಶ್ವೇಶ್ವರಂ ದೇವಂ ಮಾನುಷೇಷು ತು ಯಃ ಸದಾ ।
ವರಾನ್ ಸ ಕಾಮಾಂಲ್ಲಭತೇ ಪ್ರಸನ್ನೇ ತ್ರ್ಯಂಬಕೇ ನರಃ ॥ ೧೦೯ ॥

ಮಹಾತ್ಮನಾದ ಶಿವನ ದಿವ್ಯವಾದ, ಸಂಗ್ರಾಮಸಂಬಂಧಿಯಾದ ಈ ಶತರುದ್ರೀಯವನ್ನು ನಿತ್ಯವೂ ಶ್ರದ್ಧೆಯಿಂದ ಪಾರಾಯಣ ಮಾಡುವ ಮತ್ತು ಕೇಳುವ ಮನುಷ್ಯನು ವಿಶ್ವೇಶ್ವರನಾದ ಶಿವನ ಭಕ್ತನಾಗಿ, ಅವನ ಅನುಗ್ರಹದಿಂದ ಪ್ರಸನ್ನನಾದ ಅವನಿಂದ ಎಲ್ಲ ಇಷ್ಟಾರ್ಥಗಳನ್ನೂ ಪಡೆಯುತ್ತಾನೆ.

ಗಚ್ಛ ಯುದ್ಧ್ಯಸ್ವ ಕೌಂತೇಯ ನ ತವಾಸ್ತಿ ಪರಾಜಯಃ ।
ಯಸ್ಯ ಮಂತ್ರೀ ಚ ಗೋಪ್ತಾ ಚ ಪಾರ್ಶ್ವತಸ್ತೇ ಜನಾರ್ದನಃ ॥ ೧೧೦ ॥

ಎಲೈ ಕೌಂತೇಯನೇ, ಹೋಗಿ ಯುದ್ಧವನ್ನು ಮಾಡು. ಯಾವ ನಿನಗೆ ಜನಾರ್ದನನು ಮಂತ್ರಿಯೂ, ರಕ್ಷಕನಾಗಿಯೂ ಪಾರ್ಶ್ವದಲ್ಲಿದ್ದಾನೆಯೋ ಅಂತಹ ನಿನಗೆ ಪರಾಜಯವಿಲ್ಲ.

ಸಂಜಯಃ

ಏವಮುಕ್ತ್ವಾರ್ಜುನಂ ಸಂಖೇ ಪರಾಶರಸುತಸ್ತದಾ ।
ಜಗಾಮ ಭರತಶ್ರೇಷ್ಠ ಯಥಾಗತಮರಿಂದಮ ॥ ೧೧೧ ॥

ಸಂಜಯ– ಎಲೈ ಅರಿಂದಮನೇ, ಭರತಶ್ರೇಷ್ಠನೇ, ಪರಾಶರಸುತರಾದ ವ್ಯಾಸರು ರಣರಂಗದಲ್ಲಿ ಹೀಗೆ ಹೇಳಿ ಬಂದಂತೆಯೇ ಹೊರಟು ಹೋದರು.

ವೈಶಂಪಾಯನಃ

ಏತದಾಖ್ಯಾಯ ವೈ ಸೂತೋ ರಾಜ್ಞಃ ಸರ್ವಂ ತು ಸಂಜಯಃ ।
ಪ್ರಯಾತಃ ಶಿಬಿರಾಯೈವ ದ್ರಷ್ಟುಂ ಕರ್ಣಸ್ಯ ವೈಶಸಮ್ ॥ ೧೧೨ ॥

ವೈಶಂಪಾಯನ– ಸೂತನಾದ ಸಂಜಯನು ಇವೆಲ್ಲವನ್ನೂ ಧೃತರಾಷ್ಟ್ರನಿಗೆ ಹೇಳಿ ಕರ್ಣನ ಯುದ್ಧವನ್ನು ನೋಡಲು (ಶರೀರದಲ್ಲಿ ಉಂಟಾದ ವ್ರಣಗಳನ್ನು ನೋಡಲು) ಶಿಬಿರಕ್ಕೇ ಹೋದನು.

ಯುದ್ಧಂ ಕೃತ್ವಾ ಮಹಾಘೋರಂ ಪಂಚಾಹಾನಿ ಮಹಾಬಲಃ ।
ಬ್ರಾಹ್ಮಣೋ ನಿಹತೋ ರಾಜನ್ ಬ್ರಹ್ಮಲೋಕಮವಾಪ್ತವಾನ್ ॥೧೧೩॥

ಎಲೈ ರಾಜನೇ, ಮಹಾಬಲರಾದ, ಬ್ರಾಹ್ಮಣರಾದ ದ್ರೋಣರು ಹದಿನೈದು ದಿನಗಳ ಕಾಲ ಅತ್ಯಂತ ಘೋರವಾದ ಯುದ್ಧವನ್ನು ಮಾಡಿ ಬ್ರಹ್ಮಲೋಕವನ್ನು ಹೊಂದಿದರು.

ಸ್ವಧೀತೇ ಯತ್ ಫಲಂ ವೇದೇ ತದಸ್ಮಿನ್ನಪಿ ಪರ್ವಣಿ ।
ಕ್ಷತ್ರಿಯಾಣಾಮಭೀರೂಣಾಂ ಯುಕ್ತಮತ್ರ ಮಹದ್ ಯಶಃ ॥ ೧೧೪ ॥

ವೇದವನ್ನು ಅಧ್ಯಯನ ಮಾಡಿದರೆ ಯಾವ ಫಲವಿದೆಯೋ, ಈ ದ್ರೋಣರ ಪರ್ವವನ್ನು ಅಧ್ಯಯನ ಮಾಡಿದರೂ ಅದೇ ಫಲವಿದೆ. ಹೇಡಿಗಳಲ್ಲದ ಕ್ಷತ್ರಿಯರಿಗೆ ಇದರಿಂದ ದೊಡ್ಡ ಕೀರ್ತಿಯು ಪ್ರಾಪ್ತವಾಗುತ್ತದೆ.

ಯ ಇದಂ ಪಠತೇ ಸರ್ವಂ ಶೃಣುಯಾದ್ ವಾಽಪಿ ನಿತ್ಯಶಃ ।
ಸ ಮುಚ್ಯತೇ ಮಹಾಪಾಪೈಃ ಕೃತೈರ್ಘೋರೈಶ್ಚ ಕರ್ಮಭಿಃ ॥ ೧೧೫ ॥

ಯಾವನು ನಿತ್ಯದಲ್ಲಿಯೂ ಈ ಪರ್ವವನ್ನು ಶ್ರವಣ ಮಾಡುತ್ತಾನೆಯೋ ಅವನು ಮಾಡಿದ ಘೋರಕರ್ಮದಿಂದ ಉಂಟಾದ ಮಹಾಪಾಪಗಳೂ ನಾಶವನ್ನು ಹೊಂದುತ್ತವೆ.

ಯಜ್ಞಾವಾಪ್ತಿರ್ಬ್ರಾಹ್ಮಣಸ್ಯೇಹ ನಿತ್ಯಂ
ಘೋರೇ ಯುದ್ಧೇ ಕ್ಷತ್ರಿಯಾಣಾಂ ಯಶಶ್ಚ ।
ಶೇಷೌ ವರ್ಣೌ ಕಮನಿಷ್ಟಂ ಲಭೇತೇ
ಪುತ್ರಾನ್ ಪೌತ್ರಾನ್ ನಿತ್ಯಮಿಷ್ಟಾಂಸ್ತಥೈವ ॥ ೧೧೬ ॥

ಬ್ರಾಹ್ಮಣನು ಕೇಳಿದರೆ ಅವನಿಗೆ ಯಜ್ಞಪ್ರಾಪ್ತಿಯುಂಟಾಗುತ್ತದೆ. ಕ್ಷತ್ರಿಯರಿಗೆ ಘೋರವಾದ ಯುದ್ಧದಲ್ಲಿ ನಿಯಮೇನ ಜಯವೂ ಮತ್ತು ಕೀರ್ತಿಯೂ ಉಂಟಾಗುತ್ತದೆ. ಉಳಿದ ಎರಡು ವರ್ಣಗಳಿಗೆ ಯಾವ ಅನಿಷ್ಟವುಂಟಾದೀತು? ಪುತ್ರರನ್ನೂ, ಪೌತ್ರರನ್ನೂ, ಇಷ್ಟವಾದ ಎಲ್ಲ ವಸ್ತುಗಳನ್ನೂ ಯಾವಾಗಲೂ ಪಡೆಯುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದ್ರೋಣಪರ್ವಣಿ ಪಂಚಾಶೀತ್ಯಧಿಕಶತತಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವಣಿ ನವಮೋऽಧ್ಯಾಯಃ ॥

॥ ನಾರಾಯಣಾಸ್ತ್ರಮೋಕ್ಷಪರ್ವವು ಮುಗಿಯಿತು ॥

॥ ಸಮಾಪ್ತಂ ದ್ರೋಣಪರ್ವ ॥

★ ★ ★ ★ ★